# ಮಕ್ಕಳ ರಂಗಭೂಮಿ



ಕರ್ನಾಟಕ ನಾಟಕ ಅಕಾಡೆಮಿ
ಬೆಂಗಳೂರು - 560 002

ಚಿನ್ನದ ಹಬ್ಬದ ಪ್ರಕಟಣೆ

# ಮಕ್ಕಳ ರಂಗಭೂಮಿ


ಪ್ರಧಾನ ಸಂಪಾದಕರು :

ಡಾ॥ ಬಿ.ವಿ. ರಾಜಾರಾಂ

ಸಂಪಾದಕರು :

ಡಾ॥ ಗಜಾನನ ಶರ್ಮ

ಡಾ॥ ಎಸ್.ವಿ. ಕಶ್ಯಪ್



ಕರ್ನಾಟಕ ನಾಟಕ ಅಕಾಡೆಮಿ

ಬೆಂಗಳೂರು – 560 002

**MAKKALA RANGABHUMI** ; Chief Editor Dr. B.V. Rajaram; Editors - Dr. Gajanana Sharma and Dr. S.V. Kashyap.

Pages : viii+332
First Edition : 2011

© : Authors

1/8 Demy
70 GSM N.S. Maplitho

Published by :
T.G. Narasimhamoorthy,
Registrar, Karnataka Nataka Academy,
Kannada Bhavana, J.C. Road,
Bangalore - 560 002.

Price : **Rs. 100/-**

Cover Design : Monappa

D.T.P. by : **CHANDANA JAIKUMARA, DATA SOLUTIONS,** Bangalore - 19.
Cell : 98865 33972 Ph. : 2650 0945.

Printed at : **Ila Mudrana,**
No. 36, Raghavanagara, New Timberyard Layout, Bangalore-26.
Ph.: 26757159

# ಮೊದಲ ಮಾತು

ಮಕ್ಕಳ ರಂಗಭೂಮಿ–ಈ ಕೃತಿ ಕರ್ನಾಟಕ ನಾಟಕ ಅಕಾಡೆಮಿ ನಡೆಸಿದ ಮಕ್ಕಳ ರಂಗ ವಿಚಾರಸಂಕಿರಣಗಳ ಫಲಶೃತಿ. ಈ ಕ್ಷೇತ್ರದಲ್ಲಿ ತೊಡಗಿರುವವರ ಅನಿಸಿಕೆ, ಅನುಭವ ಮತ್ತು ಮಕ್ಕಳ ನಾಟಕ ಪ್ರದರ್ಶನಗಳ ವಿವರಗಳು, ಈ ದಿಕ್ಕಿನಲ್ಲಿ ಆಗಿರುವ ಪ್ರಗತಿಯ ಮಾಹಿತಿಯನ್ನು ಒಳಗೊಂಡಿದೆ. ಸುಮಾರು 50 ರಂಗಕರ್ಮಿಗಳಿಗೆ ಲೇಖನ ಬರೆದುಕೊಡಲು ವಿನಂತಿಸಿದ್ದರೂ, ಕೆಲವು ಲೇಖನಗಳು ಬಂದಿಲ್ಲವಾಗಿ, ಸ್ವೀಕೃತವಾದ ಲೇಖನಗಳಿಂದ ಈ ಕೃತಿ ಸಿದ್ಧವಾಗಿದೆ. ಇದು ಆರಂಭ. ಆಗಬೇಕಿರುವ ಕೆಲಸ ತುಂಬಾ ಇದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಕಾರ್ಯಸಾಧನೆಯಾಗಲಿ.

ಮಕ್ಕಳ ರಂಗಭೂಮಿ ಬಗೆಬಗೆಯ ವಿನ್ಯಾಸಗಳಲ್ಲಿ ಚಿಂತನೆಗಳಲ್ಲಿ ಬೆಳೆಯುತ್ತಿದೆ. ನಾಟಕ ರಚನೆ, ನಿರ್ದೇಶನ, ಸಂಗೀತ, ಉಡುಪು, ಬೆಳಕು ರಂಗಸಜ್ಜಿಕೆ ಮುಂತಾದ ದಿಕ್ಕುಗಳಲ್ಲಿ ವಿನೂತನತೆ ಮೂಡುತ್ತಿದೆ. ಕಲ್ಪನೆ, ಬಣ್ಣ, ಮಕ್ಕಳ ಅಭಿನಯ, ಮುಖವಾಡ ಮತ್ತು ನೇಪಥ್ಯದಲ್ಲಿನ ತಾಂತ್ರಿಕ ಪರಿಣತಿ ನಾಟಕ ಪ್ರದರ್ಶನವನ್ನು ಮತ್ತಷ್ಟು ಮಕ್ಕಳ ಮನಮುಟ್ಟುವಂತೆ ಮಾಡುತ್ತಿದೆ. ಶಾಲೆಗಳಲ್ಲಿ ರಂಗಚಟುವಟಿಕೆ, ಶಿಕ್ಷಣದಲ್ಲಿ ರಂಗಭೂಮಿಯ ಪಾತ್ರ, ಶನಿವಾರದ ರಂಗಶಾಲೆ, ಆರು ತಿಂಗಳ ಮಕ್ಕಳ ರಂಗಶಾಲೆ, ಬೇಸಿಗೆ ರಂಗಶಿಬಿರಗಳು, ಪತ್ರನಾಟಕ–ಈ ಎಲ್ಲವೂ ಮಕ್ಕಳು ರಂಗಭೂಮಿಯಲ್ಲಿ ಭಾಗವಹಿಸುವಿಕೆಯನ್ನು ಹೆಚ್ಚಿಸಿದೆ. ಹಾಗೆಯೇ ಬೇರೆಯ ಮಕ್ಕಳು ನಾಟಕ ನೋಡುವುದನ್ನು ಮತ್ತು ಅದರಿಂದಾಗಿ ರಂಗಭೂಮಿಯ ತೆಕ್ಕೆಗೆ ಒಗ್ಗಿಕೊಳ್ಳುವುದನ್ನು ಸಾಧಿಸುತ್ತಿದೆ. ಮಕ್ಕಳು ರಂಗಭೂಮಿಯಿಂದ ಪಡೆದುಕೊಳ್ಳಬೇಕಾದುದ್ದು ಬಹಳಷ್ಟಿದೆ. ಅವರ ಮುಂದಿನ ಜೀವನ ರೂಪುಗೊಳ್ಳಲು, ಎಲ್ಲರ ಜೊತೆಯಲ್ಲಿ ತೊಡಗಿಕೊಳ್ಳುವಿಕೆ ರಂಗಭೂಮಿ ನೀಡುವ ಆಲೋಚನಾ ದಿಕ್ಕು, ಸಂಘಟನಾ ಕ್ರಿಯೆ, ಇವು ಮಕ್ಕಳ ನಾಳೆಗಳನ್ನು ರೂಪಿಸುತ್ತವೆ.

ಈ ಕೃತಿ ಸಿದ್ಧಪಡಿಸುವಲ್ಲಿ ಲೇಖನಗಳನ್ನು ನೀಡಿದ ಲೇಖಕರಿಗೂ, ಸಂಪಾದಕರಾದ ಡಾ.ಗಜಾನನಶರ್ಮ ಮತ್ತು ಡಾ.ಎಸ್.ವಿ.ಕಶ್ಯಪ್ ಅವರಿಗೂ, ಕರಡು ನೋಡಿದ ಶ್ರೀ ಬಸವರಾಜು ಮತ್ತು ನಂಜುಂಡಪ್ಪ ಅವರಿಗೂ, ಮುಖಪುಟ ವಿನ್ಯಾಸ ಮಾಡಿದ ಶ್ರೀ ಮೋನಪ್ಪ, ಡಿಟಿಪಿ ಮಾಡಿದ ಶ್ರೀ ಜೈಕುಮಾರ್ ಮತ್ತು ಮುದ್ರಿಸಿದ ಇಳಾ ಮುದ್ರಣದವರಿಗೂ ಹಾಗೂ ಸಹಕರಿಸಿದ ಎಲ್ಲರಿಗೂ ಅಕಾಡೆಮಿಯ ವತಿಯಿಂದ ಧನ್ಯವಾದಗಳು.

ಡಾ.ಬಿ.ವಿ.ರಾಜಾರಾಂ

6 ಸೆಪ್ಟಂಬರ್ 2011

ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ

# ಮನದ ಮಾತು

1959-60 ರಿಂದ 2009-10 - ಈ 50 ವರ್ಷಗಳ ನಾಟಕ ಅಕಾಡೆಮಿಯ ಕಾರ್ಯಚಟುವಟಿಕೆಗಳು ಕನ್ನಡ ರಂಗಭೂಮಿಯ ಮಹತ್ವಪೂರ್ಣ ಹೆಜ್ಜೆಗಳು..

ನೂರಾರು ಬಗೆಯ ಚಿಂತನೆಗಳು, ರಾಜ್ಯದಾದ್ಯಂತ ಮತ್ತು ದೇಶದ ಅನೇಕ ಕೇಂದ್ರಗಳಲ್ಲಿ ನಾಟಕ ಪ್ರದರ್ಶನ, ಶಿಬಿರ, ಸಂವಾದ, ಪ್ರಶಸ್ತಿ, ಪ್ರಕಟಣೆ, ಅನುದಾನ, ಧನಸಹಾಯ, ಮಾಸಾಶನ, ನಾಟಕರಚನೆ, ಸಮಾವೇಶ, ವಿಶ್ವರಂಗದಿನಾಚರಣೆ ಮುಂತಾದವು ರೂಪತಳೆದವು. ಈ ಎಲ್ಲಾ ಚಟುವಟಿಕೆಗಳಿಗೆ ಕರ್ನಾಟಕ ಸರ್ಕಾರದಿಂದ ಅಕಾಡೆಮಿಗೆ ಸಂದ ಅನುದಾನ ಕಾರಣ.

ವಿಶೇಷವಾಗಿ 2009-10-11ರ ಸಾಲಿಗೆ ಅಕಾಡೆಮಿಗೆ ಅನುದಾನ ಹೆಚ್ಚಿಸಿದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರಿಗೆ ನಮ್ಮ ಧನ್ಯವಾದಗಳು.

ಅಂತೆಯೇ, ಈ ಸುವರ್ಣಸಂಭ್ರಮದ ಸಂದರ್ಭದಲ್ಲಿ - ಚಿನ್ನದ ಹಬ್ಬದ ಚಟುವಟಿಕೆಗಳನ್ನು ಆಗುಮಾಡಲು ಹೆಚ್ಚಿನ ಧನಸಹಾಯ ನೀಡಿದ ಶ್ರೀ ಗೋವಿಂದ ಎಂ. ಕಾರಜೋಳ, ಸನ್ಮಾನ್ಯ ಮಂತ್ರಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರಿಗೂ, ಶ್ರೀ ರಮೇಶ್.ಬಿ.ಝಳಕಿ, ಭಾ.ಆ.ಸೇ., ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರಿಗೂ ಮತ್ತು ಶ್ರೀ ಮನು ಬಳಿಗಾರ್, ಕ.ಆ.ಸೇ., ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಅವರಿಗೂ ನಮ್ಮ ಕೃತಜ್ಞತೆಗಳು.

27 ಜುಲೈ 2011

ಅಧ್ಯಕ್ಷರು ಮತ್ತು ಸದಸ್ಯರು
ಕರ್ನಾಟಕ ನಾಟಕ ಅಕಾಡೆಮಿ

# ಸಂಪಾದಕರ ಮಾತು

ಕನ್ನಡ ರಂಗಭೂಮಿಯ ಒಟ್ಟೂ ಇತಿಹಾಸವನ್ನು ಗಮನಿಸಿದರೆ, ಕನ್ನಡ ಮಕ್ಕಳ ರಂಗಭೂಮಿ ಇತಿಹಾಸ ಬಹಳ ದೀರ್ಘವಾದುದೇನೂ ಅಲ್ಲ. ಸುಮಾರು ನೂರು ವರ್ಷಗಳ ಹಿಂದೆ ಶಾಲೆಗಳಲ್ಲಿ ತನ್ನ ಹುಟ್ಟನ್ನು ಕಂಡುಕೊಂಡ ಕನ್ನಡ ಮಕ್ಕಳ ನಾಟಕ ಪರಂಪರೆ ನಂತರದಲ್ಲಿ ಎಂ.ಎನ್. ಕಾಮತ್, ಶಿವರಾಮ ಕಾರಂತರು, ಕುವೆಂಪುರಂತಹ ಹಿರಿಯರ ಪ್ರವೇಶದಿಂದ ಬೆಳೆದರೂ ತಾನು ತಲುಪಬೇಕಾದ ಎತ್ತರವನ್ನು ಏರಲಿಲ್ಲ; ಮುಟ್ಟಬೇಕಾದ ದೂರವನ್ನು ತಲುಪಲಿಲ್ಲ. ನಂತರದ ದಿನಗಳಲ್ಲಿಯೂ ಶಾಲಾ ಕಾಲೇಜುಗಳಲ್ಲೇ ಬೆಳೆದ ಮಕ್ಕಳ ರಂಗಭೂಮಿ, 1970ರ ದಶಕದಲ್ಲಿ ಬಿ.ವಿ. ಕಾರಂತ, ಎನ್.ಎಸ್. ವೆಂಕಟರಾಮ್ ರವರ ಪ್ರವೇಶದಿಂದ ಹೊಸ ಹುರುಪನ್ನು ಪಡೆಯಿತು. ನಂತರದ ದಿನಗಳಲ್ಲಿ ರಂಗಭೂಮಿಯ ಕುರಿತು ಅಧ್ಯಯನ ಪಡೆದ ಅನೇಕರ ಪ್ರವೇಶದಿಂದ ಕನ್ನಡ ಮಕ್ಕಳ ರಂಗಭೂಮಿ ಸಮೃದ್ಧವಾಗುತ್ತಾ ಸಾಗಿತು. ಆನಂತರವೇ ಮಕ್ಕಳಿಗಾಗಿಯೇ ಹೊಸ ಹೊಸ ತರಬೇತಿ ಶಿಬಿರಗಳು, ಬೇಸಿಗೆ ಶಿಬಿರಗಳು, ಕಾರ್ಯಾಗಾರ, ಕಮ್ಮಟ ವಿಚಾರಸಂಕಿರಣ ನಡೆದವು. ಹತ್ತು ಹಲವು ಹವ್ಯಾಸಿ ಆಸಕ್ತರು ಮಕ್ಕಳ ನಾಟಕ ಕ್ಷೇತ್ರದ ಕುರಿತು ವಿಶೇಷ ಆಸಕ್ತಿ ತೋರಿಸಿದರು. ಹೀಗಾಗಿ ಮಕ್ಕಳ ರಂಗಭೂಮಿ ಹಲವು ದಿಕ್ಕಿನಲ್ಲಿ ತನ್ನ ಕುಡಿ ಚಾಚಿತು.

ಈ ನಡುವೆ ಕರ್ನಾಟಕ ನಾಟಕ ಅಕಾಡೆಮಿ ಮಕ್ಕಳ ನಾಟಕ ರಂಗದ ಕುರಿತು ಕೃತಿಯೊಂದನ್ನು ತರುವ ದಿಕ್ಕಿನಲ್ಲಿ ಮನಸ್ಸು ಮಾಡಿ, ಈ ಪ್ರಯತ್ನಕ್ಕೆ ಕೈಹಾಕಿತು. ನಾವು ಈ ಕೃತಿಗೊಂದು ಸಮಗ್ರತೆಯನ್ನು ತರುವ ಕಾರಣಕ್ಕಾಗಿ ಹಲವು ಹಿರಿಯರ ಹಳೆಯ ಲೇಖನಗಳನ್ನು ಆರಿಸಿಕೊಂಡಿದ್ದೇವೆ. ಪ್ರಸ್ತುತ ರಂಗಭೂಮಿಯಲ್ಲಿ ಆಸಕ್ತಿಯಿಂದ ತೊಡಗಿಕೊಂಡ ಹಲವು ರಂಗಕರ್ಮಿಗಳ ಲೇಖನಗಳನ್ನು ಬಳಸಿಕೊಂಡಿದ್ದೇವೆ.

ಒಟ್ಟಿನಲ್ಲಿ ಕನ್ನಡ ಮಕ್ಕಳ ರಂಗಭೂಮಿಯ ಕುರಿತು ಆಸಕ್ತಿ ಹೊಂದಿದವರಿಗೆ ಈ ಕೃತಿ ಉಪಯುಕ್ತವಾಗಲಿ ಎಂಬುದು ಅಕಾಡೆಮಿಯ ಆಶಯ; ನಮ್ಮ ಆಶಯ. ಇಲ್ಲಿ ಆಯ್ದುಕೊಂಡ ಎಲ್ಲ ಹಿರಿಯ ಲೇಖಕರಿಗೂ ಪ್ರಸ್ತುತ ರಂಗಭೂಮಿಯಲ್ಲಿ ತೊಡಗಿಕೊಂಡ ಆಸಕ್ತರಿಗೂ ನಮ್ಮ ಕೃತಜ್ಞತೆಗಳು.

– ಡಾ. ಗಜಾನನ ಶರ್ಮ

– ಡಾ. ಎಸ್.ವಿ. ಕಶ್ಯಪ

# ಪರಿವಿಡಿ


1. ಮಕ್ಕಳ ನಾಟಕಗಳ ವೈಶಿಷ್ಟ್ಯ
   – ಡಾ. ಗಜಾನನ ಶರ್ಮ 1
2. ಕನ್ನಡ ಮಕ್ಕಳ ನಾಟಕ ನಡೆದು ಬಂದ ದಾರಿ
   – ಡಾ. ಗಜಾನನ ಶರ್ಮ 39
3. ರಾಜ್ಯದಲ್ಲಿ ಮಕ್ಕಳ ರಂಗಚಟುವಟಿಕೆಗಳು : ಕೆಲವು ಉದಾಹರಣೆಗಳು
   – ಡಾ. ಗಜಾನನ ಶರ್ಮ 95
4. ಆಟ, ನಾಟಕ, ರಂಗಭೂಮಿ
   – ಪ್ರೇಮಾ ಕಾರಂತ 130
5. ಧ್ವನಿ ಮತ್ತು ಭಾಷೆ
   – ಬಿ.ವಿ. ಕಾರಂತ್ 132
6. ಮಕ್ಕಳ ಶಿಕ್ಷಣದಲ್ಲಿ ದೃಶ್ಯ-ಶ್ರಾವ್ಯ ಮಾಧ್ಯಮಗಳ ಬಳಕೆಯ ಅಗತ್ಯ
   – ಕೆ.ವಿ. ಸುಬ್ಬಣ್ಣ 143
7. ಮಕ್ಕಳು ಮತ್ತು ನಾಟಕ ರಂಗಭೂಮಿ
   – ಎನ್.ಎಸ್. ವೆಂಕಟರಾಂ 148
8. ಮಕ್ಕಳ ನಾಟಕಗಳ ತಂತ್ರ
   – ಎನ್.ಎಸ್. ವೆಂಕಟರಾಂ 154
9. SERVICE ABOVE SELF
   **- Vimala Rangachar** 161
10. ಹಂಬೆಯ ಗೊಂಬೆಗೆ ಜೀವ ಬಂದಾಗ
    – ವೈದೇಹಿ 164
11. ಮಕ್ಕಳಿಗಾಗಿ ನಾಟಕಶಾಲೆ, ಶಾಲೆಗಾಗಿ ಮಕ್ಕಳ ನಾಟಕಗಳು
    – ಎಸ್.ಕೆ. ಮಾಧವರಾವ್ 169
12. ಮಕ್ಕಳ ರಂಗಭೂಮಿ ಮತ್ತು ಶಿಕ್ಷಣ
    – ಜಿ. ಸೀತಾರಾಮಶೆಟ್ಟಿ ಕೂರಾಡಿ 176

13. ಕನ್ನಡದಲ್ಲಿ ಮಕ್ಕಳ ನಾಟಕ
– ಡಾ. ಶ್ರೀಪಾದ ಭಟ್ 178

14. ಮಕ್ಕಳ ರಂಗಭೂಮಿ ಶಿಕ್ಷಣ
– ಶಶಿಧರ ಭಾರಿಘಾಟ್ 186

15. ಮಕ್ಕಳ ರಂಗಭೂಮಿ–ಪ್ರಯೋಗ ಮತ್ತು ಸಾಧ್ಯತೆಗಳು
– ಕೆ.ಜಿ. ಕೃಷ್ಣಮೂರ್ತಿ 190

16. ಮಕ್ಕಳ ರಂಗಭೂಮಿ : ಇಂದು ನಾಳೆ
– ಮಂಡ್ಯ ರಮೇಶ್ 196

17. ಮಕ್ಕಳ ರಂಗಭೂಮಿ ಕುರಿತು
– ಐ.ಕೆ. ಬೋಳುವಾರು 206

18. ಮಕ್ಕಳ ರಂಗತರಬೇತಿ ಕಾರ್ಯಾಗಾರ, ಮಕ್ಕಳ ಶಿಬಿರ–ಒಂದು ಪರಿಚಯ
– ಎಸ್.ವಿ. ಕಶ್ಯಪ್ 212

19. ಮಕ್ಕಳ ರಂಗಭೂಮಿ
– ಎಸ್.ವಿ. ಕಶ್ಯಪ್ 217

20. ಸಂಸ್ಕೃತ ನಾಟಕಗಳಲ್ಲಿ ಮಕ್ಕಳ ಪಾತ್ರಗಳು–ಒಂದು ಪ್ರವೇಶಿಕೆ
– ಡಾ. ಹೆಚ್.ವಿ. ವೇಣುಗೋಪಾಲ್ 223

21. 'ರಂಗಕಿಶೋರ' ಮಕ್ಕಳ ರಂಗಭೂಮಿ
– ಅರಸೀಕೆರೆ ಯೋಗಾನಂದ 226

22. ಮಕ್ಕಳ ರಂಗಭೂಮಿ ನಡೆದುಬಂದ ಬಗೆ
– ಕಿರಣ್ ಭಟ್ 235

23. ಮಕ್ಕಳ ಮನೋವಿಕಾಸಕ್ಕಾಗಿ ಹನುಮಂತನಗರ ಬಿಂಬ
– ಎ.ಎಂ. ಪ್ರಕಾಶ್ 240

24. ಪ್ರಸ್ತುತ ಮಕ್ಕಳ ರಂಗಭೂಮಿಯ ಅವಶ್ಯಕತೆ
– ಸಿ.ಟಿ. ಬ್ರಹ್ಮಾಚಾರ್ 252

25. ಮಕ್ಕಳ ರಂಗಭೂಮಿಯಲ್ಲಿ ನಿರ್ದೇಶಕರು ಎದುರಿಸುವ ಸವಾಲುಗಳು
– ಎಸ್.ಕೆ. ಮಾಧವರಾವ್ 255

26. ಸಮಕಾಲೀನ ರಂಗಭೂಮಿ ಪ್ರಯೋಗಗಳು ಮತ್ತು ಸಾಧ್ಯತೆಗಳು
– ವಿನಯ್ ಕೆ. ಸುವರ್ಣ 264

27. ಮಕ್ಕಳ ರಂಗದ ಮೇರುಶಿಖರ
– ಜಿ.ಎಸ್. ಮೋಹನ್ 275

28. ಮಕ್ಕಳ ರಂಗತರಬೇತಿ ಚಟುವಟಿಕೆಗಳು
– ಕೆ. ಜಗುಚಂದ್ರ 280

29. ಮಕ್ಕಳ ರಂಗಭೂಮಿ ಕುರಿತು....
– ಮೂರ್ತಿ ದೇರಾಜೆ 284

30. ಮಕ್ಕಳ ರಂಗಭೂಮಿ
– ಸುಷ್ಮ ಎಸ್.ವಿ. 296

31. ಮಕ್ಕಳ ರಂಗಭೂಮಿ : ನಾ ಕಂಡಂತೆ
– ದಾಕ್ಷಾಯಿಣಿ ಭಟ್ 302

32. ರಂಗಮುಖೇನ ಶಿಕ್ಷಣ ವ್ಯಕ್ತಿತ್ವ ವಿಕಸನಗೊಳಿಸುವ ಮಕ್ಕಳ ರಂಗಭೂಮಿ
– ಸಿ. ಲಕ್ಷ್ಮಣ 315

33. ಮಕ್ಕಳ ರಂಗತರಬೇತಿ ಶಿಬಿರಗಳು
– ಪ್ರತಿಭಾ ಎಂ.ವಿ. 317

34. ಮಕ್ಕಳ ನಾಟಕಗಳ ಯಾದಿ 320

# ಮಕ್ಕಳ ನಾಟಕಗಳ ವೈಶಿಷ್ಟ್ಯ

–ಡಾ.ಗಜಾನನ ಶರ್ಮ

## ಮಗು ಕಾಯುವುದಿಲ್ಲ...!

ಹದಿನೆಂಟನೆಯ ಶತಮಾನದಲ್ಲಿ ಜೇಮ್ಸ್‌ವಾಟ್ ಉಗಿಯಂತ್ರ ಕಂಡುಹಿಡಿದು ಕೈಗಾರಿಕಾ ಕ್ರಾಂತಿಗೆ ಎಡೆಮಾಡಿಕೊಟ್ಟ ತರುವಾಯ ಕೂಡಿ ಬದುಕುವ ಕೌಟುಂಬಿಕ ವ್ಯವಸ್ಥೆ ಕುಸಿಯತೊಡಗಿತು. ಬದುಕನ್ನು ಸಮಗ್ರವಾಗಿ ಗಮನಿಸುವ ಮನಸ್ಥಿತಿಯೂ ಮಾಯವಾಗಿ, ಭಿನ್ನ ಭಿನ್ನ ಕಾರಣಗಳನ್ನೊಡ್ಡಿ ಪ್ರತಿಯೊಂದರ ನಡುವೆ ಗೆರೆಕೊರೆದು ಜರಡಿ ಹಿಡಿಯುವ ಪ್ರವೃತ್ತಿ ಬೆಳೆಯತೊಡಗಿತು. ಮುಂದೆ, ವಿಕಾಸ ಮನೋವಿಜ್ಞಾನ ಬಳಕೆಗೆ ಬಂದ ಮೇಲಂತೂ ವಯೋಮಾನವನ್ನನುಸರಿಸಿ ಮನುಷ್ಯ ಸಂವೇದನೆಗಳು ಬದಲಾಗುತ್ತವೆ ಎಂಬ ಸತ್ಯ ಸಾರ್ವಜನಿಕವಾಯಿತು. ಹೀಗಾಗಿ ಕಲೆ, ಸಾಹಿತ್ಯ, ರಂಗಭೂಮಿ.... ಇತ್ಯಾದಿ ಕಲಾಪ್ರಕಾರಗಳೂ ತಮ್ಮ ಸಮಗ್ರತೆಯನ್ನು ನೀಗಿಕೊಂಡು ಭಿನ್ನ ಭಿನ್ನ ಒಳಪ್ರಕಾರಗಳಾಗಿ ಸಿಡಿಯತೊಡಗಿದವು. ಭಾರತವೂ ಇಂತಹ ವಿಘಟನೆಗಳಿಗೆ ಹೊರತಾಗದೇ, ತನ್ನ ಪರಂಪರಾಗತ ಸಮಗ್ರತೆಯ ದೃಷ್ಟಿಕೋನದಿಂದ ಹೊರಬಂದಿತು. ಇದೆಲ್ಲದರ ಪರಿಣಾಮವೇ ನಾವಿಂದು ಮಕ್ಕಳ ರಂಗಭೂಮಿಯನ್ನು ದೊಡ್ಡವರ ರಂಗಭೂಮಿಗಿಂತ ಭಿನ್ನವಾಗಿ ಗಮನಿಸುತ್ತಿರುವುದು; ಗಮನಿಸಬೇಕಾಗಿರುವುದು.

ಕನ್ನಡದ ಸಂದರ್ಭದಲ್ಲಿ ಇಂದಿನ ಅಗತ್ಯಗಳಿಗೆ ತಕ್ಕ ಪ್ರಮಾಣದಲ್ಲಿ ಮಕ್ಕಳ ನಾಟಕ ಕ್ಷೇತ್ರ ಬೆಳೆದಿಲ್ಲವೆಂಬ ಅಭಿಪ್ರಾಯವನ್ನು ಮನ್ನಿಸುತ್ತಲೇ, ಅದೊಂದು ಪ್ರತ್ಯೇಕ ಘಟಕವಾಗಿ ಅಸ್ತಿತ್ವದಲ್ಲಿರುವ ಸತ್ಯವನ್ನೂ ಒಪ್ಪಿಕೊಳ್ಳಬೇಕಾಗಿದೆ. ಮಕ್ಕಳ ನಾಟಕಗಳನ್ನು ದೊಡ್ಡವರ ನಾಟಕಗಳಿಂದ ಭಿನ್ನವಾಗಿಸುವ ಅಂಶಗಳಾವುವು; ಮಕ್ಕಳ ನಾಟಕ ಹೇಗೆ ತನ್ನ ಪ್ರತ್ಯೇಕ ಅಸ್ತಿತ್ವವನ್ನು ಸಾಧಿಸಿಕೊಳ್ಳುತ್ತಿದೆ, ಅಂತಹುದೊಂದು ಪ್ರತ್ಯೇಕತೆ ಕೇವಲ ಪರಿಗಣನೆಯೋ ಅಥವಾ ವಾಸ್ತವವೋ ಎಂಬ ಪ್ರಶ್ನೆಗಳನ್ನು ಎತ್ತಿಕೊಂಡು ನಾವು ಮಕ್ಕಳ ನಾಟಕಗಳ ಗುಣಲಕ್ಷಣಗಳತ್ತ ಗಮನಹರಿಸೋಣ.

ಈ ಸಂದರ್ಭದಲ್ಲಿ ನಾವು ನೋಬೆಲ್ ಪಾರಿತೋಷಕ ವಿಜೇತೆ ಚಿಲಿ ದೇಶದ

ಧೀಮಂತ ಮಹಿಳೆ ಗಾಬ್ರಿಯೆಲಾ ಮಿಸ್ತ್ರಾಲ್, ಪ್ರಪಂಚದ ಹಿರಿಯರಿಗೆ ನೀಡಿದ ಎಚ್ಚರಿಕೆಯ ಮಾತುಗಳನ್ನು ಗಮನಿಸೋಣ.

"We are guilty of many errors and many faults, but our worst crime to abandoning the children, neglecting the fountain of life. Many of the things we need can wait. The child cannot; right now is the time his bones are being formed, his blood is being made and his senses also being developed. To him we can not answer 'Tomorrow. His name is today'..."

"ನಾವು ಅನೇಕ ತಪ್ಪುಗಳನ್ನು ಮಾಡಿದ ದೋಷಿಗಳಾಗಿದ್ದೇವೆ. ಅದರಲ್ಲೂ ನಮ್ಮ ಘೋರ ಅಪಕೃತ್ಯವೆಂದರೆ ನಮ್ಮ ಜೀವಸೆಲೆಯಾದ ಮಕ್ಕಳನ್ನು ನಿರ್ಲಕ್ಷಿಸಿ, ಕೈಬಿಟ್ಟದ್ದು. ನಮ್ಮ ಅನೇಕ ಬೇಕುಗಳು ಕಾಯಬಲ್ಲವು. ಆದರೆ ಮಗುವು ಕಾಯಲಾರದು. ತತ್‌ಕ್ಷಣದಲ್ಲಿ ಅದರ ಎಲುಬು ರೂಪುಗೊಳ್ಳುತ್ತಿದೆ. ರಕ್ತ ಉತ್ಪತ್ತಿಯಾಗುತ್ತಿದೆ. ಅದರ ಚೇತನವು ಜಾಗೃತಗೊಂಡು, ಅಭಿವೃದ್ಧಿ ಹೊಂದುತ್ತಿದೆ. ಅದಕ್ಕೆ ನಾವು ನಾಳೆ ಎಂದು ಉತ್ತರಿಸಲಾಗುವುದಿಲ್ಲ. ಅದರ ಹೆಸರೇ 'ಇಂದು'"!

ಅಂದರೆ ಮಗುವಿನ ಬೇಕುಗಳನ್ನು ತತ್‌ಕ್ಷಣದಲ್ಲಿಯೇ ಈಡೇರಿಸದೆ ಕಾಯುತ್ತಿದ್ದರೆ, ಮಗು ಮಗುವಾಗಿ ಉಳಿದಿರುವುದಿಲ್ಲ. ಅದರ ಬೇಡಿಕೆ ಪ್ರಸ್ತುತತೆಯನ್ನೇ ಕಳೆದುಕೊಳ್ಳುತ್ತದೆ. ಜೊತೆಗೇ ಒಂದು ಇಡಿಯ ತಲೆಮಾರು ಸಾಂಸ್ಕೃತಿಕ ಸಾರದಿಂದ ವಂಚಿತವಾಗಿ ಬರಡಾಗುತ್ತದೆ. ಮಗುವು ವರ್ತಮಾನದಲ್ಲಿ ಬದುಕುತ್ತದೆ. ಅದರ ಬದುಕು ವರ್ತಮಾನದಲ್ಲಿ ಅರಳುತ್ತದೆ.

ಯಾವುದೇ ದೇಶ ತನ್ನ ಭವಿಷ್ಯದ ಪ್ರಗತಿಗೆ ಅಗತ್ಯವಾದ ಭೌತಿಕ ಅಭಿವೃದ್ಧಿ ಯೋಜನೆಯೊಂದನ್ನು ಮುಂದೂಡಬಹುದು. ಒಂದು ಅಣೆಕಟ್ಟೆ ಕಟ್ಟುವುದನ್ನು ಆರ್ಥಿಕ, ಸಾಮಾಜಿಕ ಕಾರಣಗಳಿಗಾಗಿ ಕೆಲವು ಕಾಲಕ್ಕೆ ಮುಂದೂಡಬಹುದು. ಒಂದು ವಿದ್ಯುತ್ ಯೋಜನೆಯನ್ನು ತಾತ್ಕಾಲಿಕವಾಗಿ ಮುಂದೂಡಬಹುದು. ಒಂದು ಕೈಗಾರಿಕಾ ಘಟಕದ ಸ್ಥಾಪನೆಯನ್ನು ಮುಂದೂಡಬಹುದು. ಆದರೆ ಅದು ತಾನು ತನ್ನ ದೇಶದ ಮಕ್ಕಳ ಅಭಿವೃದ್ಧಿಗೆ ಹಮ್ಮಿಕೊಳ್ಳಬೇಕಾದ ಯೋಜನೆಯನ್ನು ಮುಂದೂಡಲಾರದು– ಮುಂದೂಡಬಾರದು. ಒಂದು ತಲೆಮಾರು ತನ್ನ ಸಾಂಸ್ಕೃತಿಕ ಬೇರುಗಳನ್ನು ಕಳಚಿಕೊಂಡರೆ, ಅದು ಇಡಿಯ ಭವಿಷ್ಯವನ್ನೇ ಡೋಲಾಯಮಾನವನ್ನಾಗಿ ಮಾಡಿಬಿಡಬಹುದು. ತಲೆಮಾರಿಗೊಬ್ಬ ಗಾಂಧಿ ಬರದಿದ್ದರೆ ಬೇಡ, ನೂರಾರು ತಲೆಮಾರಿಗೊಬ್ಬ ಹಿಟ್ಲರ್, ಒಬ್ಬ ಲಾಡೆನ್ ಬರುವುದು ಬೇಡ. ಹಾಗಾಗಬೇಕೆಂದರೆ ಮಕ್ಕಳ ನೈತಿಕ ತಳಹದಿಯನ್ನು ನಿರಂತರವಾಗಿ ನಿರ್ಮಿಸುತ್ತಲೇ ಹೋಗಬೇಕು. ಒಬ್ಬ

ಮಗು ಸಾಂಸ್ಕೃತಿಕ ಖಾಲಿತನಕ್ಕೆ ಈಡಾದರೆ, ಅವನೊಬ್ಬನಿಂದ ಇಡಿಯ ಸಮಾಜ ತೊಂದರೆಗೀಡಾಗಬಹುದು. ಪ್ರಾಯಶಃ ಈ ಅಭಿಪ್ರಾಯದಿಂದಲೇ ಗಾಬ್ರಿಯಲ್ ಮಿಸ್ತ್ರಾಲೆ ಮಗು ಕಾಯುವುದಿಲ್ಲ ಎಂದು ಹೇಳಿರುವುದು. ಸಮಾಜವನ್ನು ಪರಿಪೂರ್ಣವಾಗಿ ಉದ್ಧರಿಸಲು ಒಬ್ಬ ಮಹಾತ್ಮನಿಗೆ ಸಾಧ್ಯವಾಗದಿರಬಹುದು. ಆದರೆ ಇಡೀ ಸಮಾಜವನ್ನು ಒಬ್ಬ ತಲೆಕೆಡುಕ ನೈತಿಕವಾಗಿ ಘಾಸಿಗೊಳಿಸಿಬಿಡಬಹುದು.

ಹಾಗಾಗಿ ಮಕ್ಕಳ ನೈತಿಕ ತಳಹದಿಯನ್ನು ನಿರ್ಮಿಸುವ ಅವರ ಬಾಲ್ಯವನ್ನು ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸುವ ಏಕೈಕ ಮಾರ್ಗವೆಂದರೆ ಅದು ನೈತಿಕ ಶಿಕ್ಷಣದ ಸಾರ್ವತ್ರೀಕರಣ. ಬಾಲ್ಯದಲ್ಲಿ ಎಲ್ಲ ಮಕ್ಕಳಿಗೂ ಸಮರ್ಥ ಶಿಕ್ಷಣವನ್ನು ನೀಡುತ್ತಾ, ಆ ಶಿಕ್ಷಣದ ಮೂಲಕ ಸತ್ಪ್ರಜೆಗಳನ್ನು ಸೃಷ್ಟಿಸುತ್ತಾ ಸಾಗಿದರೆ ಭವಿಷ್ಯತ್ತಿನ ಸಾಂಸ್ಕೃತಿಕ ದುರಂತವನ್ನು ತಪ್ಪಿಸಬಹುದು.

ನೈತಿಕ ಶಿಕ್ಷಣವನ್ನು ನೀಡಲು ನಾಟಕದಂತಹ ಕಲಾಮಾಧ್ಯಮಗಳು ಬಹಳ ಸಹಕಾರಿ. ಶಾಲೆಯಲ್ಲಿ ನಾಲ್ಕು ಗೋಡೆಗಳ ನಡುವೆ ಕುಳಿತು ಕಲಿಯುವ ಶಿಕ್ಷಣ ಒಂದು ಬಗೆಯದಾದರೆ, ಬಯಲಲ್ಲಿ ನಾಟಕದ ಮೂಲಕ ಕಲಿಯುವ ಶಿಕ್ಷಣ ಇನ್ನೊಂದು ಬಗೆ; ಆದರೆ ಸಮುದಾಯದೊಂದಿಗೆ ಒಂದಾಗಿ ಕಲಿಯುವ ರಂಗಶಿಕ್ಷಣ ಹೆಚ್ಚು ಪರಿಣಾಮಕಾರಿ.

## ಮಕ್ಕಳಿಗೇಕೆ ನಾಟಕ?

ಈ ಪ್ರಶ್ನೆಗೆ ಉತ್ತರಿಸಲು ನಮಗೆ ಗಾಂಧೀಜಿಯವರ ಬಾಲ್ಯದ ಘಟನೆಗಳನ್ನು ಬಿಟ್ಟರೆ, ಅಂತಹ ಉದಾಹರಣೆ ಇನ್ನೊಂದು ಸಿಗಲಿಕ್ಕಿಲ್ಲ. ತಮ್ಮ ಆತ್ಮಕತೆಯಲ್ಲಿ ಗಾಂಧೀಜಿಯವರು, ಸುಳ್ಳು ಹೇಳುತ್ತಿದ್ದ ತಾವು 'ಸತ್ಯ ಹರಿಶ್ಚಂದ್ರ', 'ಶ್ರವಣಕುಮಾರ' ಮುಂತಾದ ನಾಟಕಗಳನ್ನು ನೋಡಿ ಸತ್ಯದ ಹಾದಿಯನ್ನು ಆಯ್ದುಕೊಂಡಿದ್ದಾಗಿ ಹೇಳಿದ್ದಾರೆ. ಅಂದರೆ ಮೋಹನದಾಸನಂತಹ ಒಬ್ಬ ಸಾಧಾರಣ ಬಾಲಕನನ್ನು 'ಮಹಾತ್ಮಾ ಗಾಂಧೀಜಿ'ಯಾಗಿ ಪರಿವರ್ತಿಸುವಲ್ಲಿ ನಾಟಕಗಳು ವಹಿಸಿದ ಪಾತ್ರವನ್ನು ನಾವು ಗಮನಿಸಬಹುದು. ಯಾಕೆಂದರೆ ಮನೋವಿಜ್ಞಾನಿಗಳ ಪ್ರಕಾರ 'ಜನನವಾದಾಗ ಶಿಶುವಿನಲ್ಲಿ ಮನೋಧರ್ಮ (Temperament) ಬಿಟ್ಟರೆ ಯಾವ ವ್ಯಕ್ತಿತ್ವವೂ ಇರುವುದಿಲ್ಲ.'[2]

"ಮಗುವು ಜನ್ಮತಃ ನೀತಿವಂತನೂ ಅಲ್ಲ, ಅನೀತಿವಂತನೂ ಅಲ್ಲ. ಅದರ ವರ್ತನೆಗಳಲ್ಲಿ ನೀತಿ ನಿಯಮಗಳಾವುವೂ ಇಲ್ಲ. ಕ್ರಮೇಣ ತಂದೆ ತಾಯಿ, ಗುರುಹಿರಿಯರು, ಒಡನಾಡಿಗಳು, ಸಹಪಾಠಿಗಳು ಮತ್ತಿತರರ ಪ್ರಭಾವಕ್ಕೊಳಗಾಗಿ

ತನ್ನ ಸಮಾಜದ ನೀತಿ ನಿಯಮಗಳನ್ನು ಕಲಿತುಕೊಂಡು ಆಚರಿಸಲು ಉದ್ಯುಕ್ತವಾಗುತ್ತದೆ."[1] ಯಾಕೆಂದರೆ ನವಜಾತ ಶಿಶುವು ಪೂರ್ಣ ಸ್ವಾರ್ಥಿ. ಅದು ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಇತರರೊಡನೆ ಇರುತ್ತದೆ. ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳುವುದೊಂದೇ ಅದರ ಗುರಿ. ಅದನ್ನು ಯಾರು ಪೂರೈಸಿದರೂ ಸರಿ. ಅದಕ್ಕೆ ತನ್ನ ಸುಖವೇ ಮುಖ್ಯ.

ಇಂತಹ ಸ್ವಕೇಂದ್ರೀಕೃತ ಮನೋಭಾವದ, ಪರಾವಲಂಬಿಯಾದ, ಯಾವ ನೀತಿ ನಿಯಮಗಳೂ ಇಲ್ಲದ ಅನಾಗರಿಕ ಜೀವವನ್ನು ಸಮಾಜದಲ್ಲಿ ಜವಾಬ್ದಾರಿಯುಳ್ಳ ಸುಸಂಸ್ಕೃತ ಸತ್ಪ್ರಜೆಯನ್ನಾಗಿ ರೂಪಿಸಬೇಕಾದ ಜವಾಬ್ದಾರಿ ಸಮಾಜದ್ದು. ಈ ಕ್ರಿಯೆಯಲ್ಲಿ ಮಗುವಿನ ಪೋಷಕರು, ಗುರುಹಿರಿಯರು, ಸಹಪಾಠಿಗಳು, ಸಮಾಜದ ಹಿತಚಿಂತಕರು, ಶೈಕ್ಷಣಿಕ ತಜ್ಞರು, ನಾಡಿನ ಸಾಂಸ್ಕೃತಿಕ ರಂಗದ ಧುರೀಣರು.... ಮುಂತಾಗಿ ಎಲ್ಲರ ಮೇಲೆ ಗುರುತರವಾದ ಜವಾಬ್ದಾರಿ ಇರುವುದನ್ನು ಸಮಾಜ ವಿಜ್ಞಾನಿಗಳು ಗುರುತಿಸಿದ್ದಾರೆ. ಒಂದು ಮಾಂಸದ ಮುದ್ದೆಯಾಗಿ ಜನ್ಮತಾಳಿದ, ಭಾವನೆಗಳಿಲ್ಲದ, ನೀತಿ ನಿಯಮಗಳಿಲ್ಲದ, ಸ್ವಾರ್ಥಿ, ಅನಾಗರಿಕ ಮಾನವ ಶಿಶುವು ಬೆಳೆದು, ಸಮಾಜದಲ್ಲಿ ಸುಸಂಸ್ಕೃತ ವ್ಯಕ್ತಿಯಾಗಿ ಸಂಸ್ಕರಣಗೊಳ್ಳಬೇಕಾದರೆ, ಅದನ್ನೊಂದು ಸಭ್ಯ ಸಮಾಜದ ಸಾತ್ವಿಕ ಸದಸ್ಯನನ್ನಾಗಿಸಬೇಕಾದರೆ, ಅದಕ್ಕೆ ಸೂಕ್ತ ಶಿಕ್ಷಣ ನೀಡಬೇಕು. ಬೆಳೆದು ದೊಡ್ಡವರಾಗಿ, ಇಡೀ ದೇಶದ ಆಸ್ತಿಗಳಾಗಿ ಅರಳಬೇಕಾದ ಮಕ್ಕಳ ವ್ಯಕ್ತಿತ್ವ ವಿಕಸನದಲ್ಲಿ, ಅವರ ಚಾರಿತ್ರ್ಯ ನಿರ್ಮಾಣದಲ್ಲಿ ನಾಟಕದಂತಹ ಕಲೆಗಳು ನಿರ್ವಹಿಸುವ ಪಾತ್ರಗಳ ಕುರಿತು ನಮಗೆ ನೂರಾರು ಉದಾಹರಣೆಗಳು ದೊರೆಯುತ್ತವೆ. ಒಬ್ಬ ಮೋಹನದಾಸ ನಾಟಕಗಳನ್ನು ನೋಡಿ ಪರಿಷ್ಕೃತಗೊಂಡು 'ಮಹಾತ್ಮಾ ಗಾಂಧೀಜಿ' ಆಗುವುದಾದರೆ, ಒಬ್ಬ ಕಾರಂತ ಬಾಲ್ಯದಲ್ಲಿ ತಾನು ಕಂಡ ಯಕ್ಷಗಾನದಂತಹ ಪ್ರದರ್ಶನ ಕಲೆಗಳಿಂದ ಪ್ರಭಾವಿತಗೊಂಡು 'ಡಾ। ಶಿವರಾಮ ಕಾರಂತ'ರಾಗಿ ಬೆಳೆಯಬಹುದಾದರೆ, ಬಾಬುಕೋಡಿಯ ಸಾಧಾರಣ ಬಾಲಕ ವೆಂಕಟರಮಣ, ನಾಟಕ ನೋಡಲು ಹತ್ತಿಪ್ಪತ್ತು ಮೈಲು ಬಾಡಿಗೆ ಸೈಕಲ್ ತುಳಿದ ನೆನಪಿನೊಡನೆ ಇಡಿಯ ಭಾರತ ಮೆಚ್ಚಿದ ನಾಟಕ ನಿರ್ದೇಶಕ 'ಬಿ.ವಿ. ಕಾರಂತ್' ಆಗುವುದಾದರೆ, ನಾಟಕಗಳು ವ್ಯಕ್ತಿತ್ವ ನಿರ್ಮಾಣದಲ್ಲಿ ವಹಿಸುವ ಪಾತ್ರದ ಕುರಿತು ಇನ್ನೆಂತಹ ಉದಾಹರಣೆ ಬೇಕಾಗುತ್ತದೆ?

ಗಿಡದ ತುದಿಗೆ ಸಾರ – ಸತ್ವಗಳು ತಲುಪುವುದೇ ಬೇರಿನಿಂದ ಎಂಬ ಸತ್ಯವನ್ನು ಕಂಡೇ ಪ್ರಾಜ್ಞರು 'Child is the father of man' ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ಮನೋವಿಜ್ಞಾನಿಗಳು ಶಿಕ್ಷಣ ತಜ್ಞರು, ಎಲ್ಲರ ಅಭಿಮತವೂ ಒಂದೇ. ಮನುಷ್ಯನಿಗೆ ವ್ಯಕ್ತಿತ್ವ ನಿರ್ಮಾಣದ ಎಲ್ಲ ಸಂಸ್ಕಾರಗಳೂ ಬಾಲ್ಯದಲ್ಲೇ ದೊರೆಯಬೇಕು. ಬಾಲ್ಯದಲ್ಲೇ ವ್ಯಕ್ತಿತ್ವ ನಿರ್ಮಾಣದ ಬುನಾದಿ ಭದ್ರಗೊಳ್ಳಬೇಕು. ಈ ಕಾರಣದಿಂದಲೇ ಮಕ್ಕಳ

ರಂಗಭೂಮಿ, ದೊಡ್ಡವರ ರಂಗಭೂಮಿಗಿಂತ ಹೆಚ್ಚು ಮಹತ್ವದ್ದು. ಇಲ್ಲಿ ಪ್ರಸಿದ್ಧ ರಂಗತಜ್ಞ ಸ್ಟ್ಯಾನಿಸ್ಲಾವಸ್ಕಿಯ ಮಾತನ್ನು ಗಮನಿಸಬೇಕಾಗುತ್ತದೆ.

"When Stanislavsky was asked to make the distinctions between theatre for adults and theatre for children, he replied the only important difference is that for children theatre should be better"

"ದೊಡ್ಡವರ ಮತ್ತು ಮಕ್ಕಳ ರಂಗಭೂಮಿಯ ವೈಶಿಷ್ಟ್ಯ ಕುರಿತು ಕೇಳಿದಾಗ, ಸ್ಟ್ಯಾನಿಸ್ಲಾವಸ್ಕಿಯವರು, ಹಿರಿಯರ ರಂಗಭೂಮಿಗಿಂತ ಉತ್ತಮವಾಗಿರಬೇಕಾದುದೇ ಮಕ್ಕಳ ರಂಗಭೂಮಿಯ ವೈಶಿಷ್ಟ್ಯ ಎಂದರಂತೆ."[4]

ಅಂದ ಮೇಲೆ ಮಕ್ಕಳ ರಂಗಭೂಮಿ ದೊಡ್ಡವರ ರಂಗಭೂಮಿಗಿಂತಲೂ ಹೆಚ್ಚಿನ ಜವಾಬ್ದಾರಿ ಉಳ್ಳದ್ದು ಎಂದಾಯಿತು. ಈ ಸಂದರ್ಭದಲ್ಲಿ ನಾವು ಇನ್ನೊಂದು ಅಂಶವನ್ನು ಗಮನಿಸಬೇಕು. ಮಕ್ಕಳ ರಂಗಭೂಮಿಯು ಸೂಕ್ಷ್ಮ ಮನಸ್ಸಿನ ಮಕ್ಕಳನ್ನು ಒಳಗೊಳ್ಳುವುದರಿಂದ ಅದರ ವಿಚಾರದಲ್ಲಿ ನಿಶ್ಚಿತ ನಿರ್ಧಾರ ಕೈಗೊಳ್ಳುವಲ್ಲಿ ಕೆಲವೊಂದು ದ್ವಂದ್ವಗಳೂ ಇವೆ. ಇದನ್ನು ಬಿ.ವಿ. ಕಾರಂತರ ಮಾತಿನಲ್ಲಿ ಹೇಳುವುದಾದರೆ "ಮಕ್ಕಳ ನಾಟಕ ಮಾಡುವಾಗ ಯಾವುದು ಮಾಡಿದರೆ ಸರಿ, ಯಾವುದು ಮಾಡಿದರೆ ತಪ್ಪು ಎಂಬ ದ್ವಂದ್ವ ಇಂದೂ ಇದೆ. ಇದು ಸೂಕ್ಷ್ಮ ಮನಸ್ಸಿನ ಮಕ್ಕಳ ವ್ಯವಹಾರವಾದುದರಿಂದ ಸಹಜವೂ ಕೂಡ. ಸಂದರ್ಭಕ್ಕೆ ತಕ್ಕುದಾಗಿ ಮಕ್ಕಳ ಸಮೂದಾಯದ ಒಟ್ಟೂ ಹಿತದೃಷ್ಟಿಯಿಂದ ನಾವು ಅಂಥಾ ಸಂದರ್ಭಕ್ಕೆ ಉಚಿತವಾಗಿ ನಿರ್ಣಯಿಸಿಕೊಳ್ಳಬೇಕಾಗುತ್ತದೆ. ಒಟ್ಟಿನಲ್ಲಿ ಮಕ್ಕಳ ಹಿತ ಮುಖ್ಯ"[5]

ಈ ಎಲ್ಲಾ ದೃಷ್ಟಿಕೋನಗಳನ್ನಿಟ್ಟುಕೊಂಡು, ನಾವು ಮಕ್ಕಳ ನಾಟಕಗಳನ್ನು ಸೃಷ್ಟಿ ಮತ್ತು ಸ್ವೀಕಾರಗಳೆಂಬ ಎರಡು ದೃಷ್ಟಿಯಿಂದ ಗಮನಿಸಬಹುದಾಗಿದೆ.

ಯಾವುದೇ ಕಲೆ ತನ್ನ ಪೂರ್ಣತೆಯನ್ನು ಸಾಧಿಸುವುದು ಸೃಷ್ಟಿ ಮತ್ತು ಸ್ವೀಕಾರಗಳೆರಡೂ ಅರ್ಥ ಪೂರ್ಣವಾಗಿ ಸಂಭವಿಸಿದಾಗ. ಮಕ್ಕಳ ನಾಟಕಗಳ ಸೃಷ್ಟಿಕ್ರಿಯೆ ಹೇಗೆ ದೊಡ್ಡವರಿಂದ ಅಥವಾ ದೊಡ್ಡವರ ಸಹಕಾರದಿಂದ ಪೂರ್ಣಗೊಳ್ಳುವುದೋ, ಹಾಗೆಯೇ ಸ್ವೀಕಾರ ಕೂಡ ಕೇವಲ ಮಕ್ಕಳಿಂದ ಮಾತ್ರ ಸಾಗುವುದಿಲ್ಲ. ದೊಡ್ಡವರು, ಮಕ್ಕಳು ಜತೆಗಿದ್ದಾಗಲೇ ಅರ್ಥಪೂರ್ಣ ಸ್ವೀಕಾರ ಸಾಧ್ಯ. ಹಾಗಾಗಿ ನಾವು ಮಕ್ಕಳ ನಾಟಕಗಳ ಸೃಷ್ಟಿ ಮತ್ತು ಸ್ವೀಕಾರಗಳೆರಡನ್ನೂ ಜತೆಜತೆಯಾಗಿ ಗಮನಿಸೋಣ. ಅಂತ್ಯದಲ್ಲಿ ಸೃಷ್ಟಿ, ಸ್ವೀಕಾರಗಳೆರಡರ ಒಟ್ಟೂ ಪರಿಣಾಮವನ್ನು ಗುರುತಿಸಲು ಪ್ರಯತ್ನಿಸೋಣ.

## ಮಕ್ಕಳ ನಾಟಕಗಳ ಕೆಲವು ಗುಣಲಕ್ಷಣಗಳು :

### 1. ಉತ್ಪ್ರೇಕ್ಷಿತ ದೃಶ್ಯ ನಿರ್ಮಾಣ, ಅಭಿನಯ, ವೇಷಭೂಷಣ

ಮಕ್ಕಳ ನಾಟಕಗಳ ವಿಚಾರ ಬಂದಾಗ ನಾವು ಮಕ್ಕಳ ರಂಜನೆಯ ವಿಚಾರವನ್ನು ಬದಿಗೊತ್ತಿ ಅದರಿಂದ ಮಕ್ಕಳು ಕಲಿಯಬಹುದಾದ, ಕಲಿಯಬೇಕಾದ ವಿಚಾರಗಳ ಬಗ್ಗೆಯೇ ಹೆಚ್ಚು ಮಾತನಾಡುತ್ತೇವೆ. ಆದರೆ ಎಲ್ಲ ಪ್ರದರ್ಶನ ಕಲೆಗಳ ಬಹುಮುಖ್ಯ ಆಶಯದಂತೆ ಮಕ್ಕಳ ನಾಟಕಗಳ ಪ್ರಥಮ ಉದ್ದೇಶವೂ ಮನಸ್ಸಿಗೆ ರಂಜನೆ ಒದಗಿಸುವುದು. ಮೊದಲು ಮಕ್ಕಳನ್ನು ನಲಿಸಬೇಕು. ಬಿ.ವಿ. ವೈಕುಂಠರಾಜುರವರು ಹೇಳುವಂತೆ,

"ನಾಟಕ ಮಕ್ಕಳಿಗೆ ಹಿಡಿಸಬೇಕಾದರೆ ಮೊದಲು ಅವರ ಕಣ್ಣುಗಳನ್ನು ಒಲಿಸಿಕೊಳ್ಳಬೇಕು. ಅದಕ್ಕೆ ಅಗತ್ಯವಾದ ಎಲ್ಲ ಅಂಶಗಳನ್ನು ಉಪಯೋಗಿಸಿಕೊಳ್ಳಬಹುದು. ಮಕ್ಕಳ ಮನಸ್ಸು ರಂಗದ ಮೇಲೆ ಕೇಂದ್ರೀಕೃತವಾಗುವಂತೆ ಮಾಡಿದ ಮೇಲೆ ನಾಟಕಕಾರ ನಾಟಕದಲ್ಲಿ ಹೇಳಲು ಪ್ರಯತ್ನಿಸಿರುವುದನ್ನು ಅವರಿಗೆ ಮುಟ್ಟಿಸಲು ಪ್ರಯತ್ನಿಸಬಹುದು"

ಮಕ್ಕಳ ಕಣ್ಣುಗಳನ್ನು ಒಲಿಸಿಕೊಳ್ಳುವುದು ಸುಲಭವೇನಲ್ಲ. ಸದಾ ಚಂಚಲವಾದ ಅವರ ಕಣ್ಣುಗಳನ್ನು ರಂಗದಲ್ಲಿ ನಡೆಯುತ್ತಿರುವ ನಾಟಕದ ಮೇಲೆ ಕೇಂದ್ರೀಕರಿಸಲು, ಅಗತ್ಯ ಬಣ್ಣ, ಬೆಡಗು, ಸಂಗೀತ, ನೃತ್ಯಗಳು ಉತ್ಪ್ರೇಕ್ಷಿತಗೊಂಡು ಪ್ರದರ್ಶಿತವಾಗಬೇಕಾಗುತ್ತದೆ. ಮಕ್ಕಳ ಮನಸ್ಸು ಮುದಗೊಳ್ಳಬೇಕು. ಮಕ್ಕಳ ನಾಟಕಗಳ ಮೊದಲ ಆದ್ಯತೆ ಮಕ್ಕಳಿಗೆ ಆನಂದ ಉಕ್ಕಿಸಿ, ಅವರ ಮನಸ್ಸನ್ನು ಮುದಗೊಳಿಸುವುದಾಗಬೇಕು.

ದೊಡ್ಡದಾದ ರಂಗಮಂದಿರದಲ್ಲಿ ಚಿಕ್ಕಮಕ್ಕಳು ಪಾತ್ರವಹಿಸುವ ಸಂದರ್ಭದಲ್ಲಿ ಅವರ ಪಾತ್ರ, ವೇಷಭೂಷಣಗಳನ್ನು ಉತ್ಪ್ರೇಕ್ಷಿಸದಿದ್ದರೆ, ಮಕ್ಕಳಿಗೆ ಅವು 'ಎಲ್ಲೋ ನಡೆಯುವ' ಘಟನೆಗಳಾಗಿ ಆಪ್ತವಾಗದೆ ಹೋಗಿಬಿಡಬಹುದು. ಅದೇ ರೀತಿ ಪಾತ್ರ ವಹಿಸುವ ಮಕ್ಕಳಿಗೂ ಕೂಡ ನಾವು ಪಿಸುಮಾತಿನ, ಹಗುರ ನಡೆಯ ಚಲನೆಗಳನ್ನೇ ಹೆಚ್ಚಾಗಿ ಹೇಳಿಕೊಟ್ಟರೆ ಅವು ಮಕ್ಕಳ ಗಮನ ಸೆಳೆಯುವಲ್ಲಿ ಸಫಲವಾಗುವುದಿಲ್ಲ. ಮಾಡುವವರಿಗೆ ಇಷ್ಟವಾಗದೆ, ನೋಡುವವರಿಗೆ ತಲುಪದೆ ನಾಟಕ ಯಶಸ್ವಿಯಾಗುವುದಿಲ್ಲ, ಹಾಗಾಗಿಯೇ ಈ 'ಉತ್ಪ್ರೇಕ್ಷಿತ' ಶಬ್ದವನ್ನು ಇಲ್ಲಿ 'ಉತ್ಪ್ರೇಕ್ಷೆ'ಯಿಂದ ಬಳಸಿರುವುದು.

ಚಂಚಲವಾದ, ಮಕ್ಕಳ ಕಣ್ಣುಗಳನ್ನು ಸೆಳೆಯುವುದು ಸುಲಭದ ಮಾತಲ್ಲ. ಮೊದಲು ಮಕ್ಕಳ ಕಣ್ಣುಗಳನ್ನು, ಆ ಮೂಲಕ ಮನಸನ್ನು, ನಾಟಕದತ್ತ ಸೆಳೆಯಲು,

ನಾಟಕ ಅವರೆದುರು ರಂಗಿನ ಲೋಕವನ್ನು ತೆರೆದಿಡಬೇಕು. ಬಣ್ಣ ಬೆಡಗುಗಳಿಂದ ಉತ್ಪ್ರೇಕ್ಷಿತಗೊಂಡ ದೃಶ್ಯ ಚಮತ್ಕಾರ, ಅದ್ಭುತವೆನಿಸುವ ವೇಷಭೂಷಣಗಳು, ಉತ್ಪ್ರೇಕ್ಷಿತ ಅಭಿನಯ ಇವುಗಳು ಮಕ್ಕಳನ್ನು ಆಕರ್ಷಿಸುತ್ತವೆ.

'ಪಂಜರ ಶಾಲೆ'ಯ ಪ್ರಥಮ ಪ್ರದರ್ಶನದ ಪ್ರಾರಂಭದಲ್ಲಿ, ಬಣ್ಣದ ಲೋಕದಲ್ಲಿ ಕಂಗೊಳಿಸಿದ ಹಕ್ಕಿಯ ಹಿಂಡನ್ನು, ಅಂದು (1971) ಮಕ್ಕಳಾಗಿದ್ದವರು ಇಂದೂ ನೆನಪಿಸಿಕೊಳ್ಳುತ್ತಾರೆ. ಕೆ.ಜಿ. ಕೃಷ್ಣಮೂರ್ತಿಯವರ ಕಿನ್ನರಮೇಳ ತಂಡದ ನಾಟಕ 'ಸೂರ್ಯಬಂದ'ದಲ್ಲಿ ಬರುವ ದೃಶ್ಯ, ಸೂರ್ಯನ ಕುದುರೆಗಳ ಬಣ್ಣಬಣ್ಣದ ಲೋಕ ಮಕ್ಕಳನ್ನು ಮಂತ್ರ ಮುಗ್ಧಗೊಳಿಸುವುದನ್ನು ನಾವು ಕಂಡವರೇ ಆಗಿದ್ದೇವೆ. ಅಷ್ಟೇ ಏಕೆ, ನನ್ನದೇ ನಾಟಕ 'ನಾಣಿ ಭಟ್ಟನ ಸ್ವರ್ಗದ ಕನಸಿ'ನಲ್ಲಿ ನಾಣಿಭಟ್ಟ ಸ್ವರ್ಗಕ್ಕೆ ಹೋದಾಗ ಬಿಚ್ಚಿಕೊಳ್ಳುವ ಬೆರಗಿನ ಸ್ವರ್ಗ ಮಕ್ಕಳನ್ನು ಮೂಕವಿಸ್ಮಿತರನ್ನಾಗಿಸಿದ ಬಿಸಿಬಿಸಿ ಅನುಭವ ನನಗಿನ್ನೂ ದಟ್ಟವಾಗಿದೆ. ಶಿವರಾಮ ಕಾರಂತರು ತಮ್ಮ ಬಾಲ್ಯದಲ್ಲಿ ನೋಡಿದ ಯಕ್ಷಗಾನದ ರಾಕ್ಷಸ ಪಾತ್ರಗಳ ಕುರಿತು ಅದರಲ್ಲೂ ವಿಶೇಷವಾಗಿ 'ಮಹಂಕಾಳಿ'ಯ ಪಾತ್ರ ಕುರಿತು ತಮ್ಮ 'ಹುಚ್ಚು ಮನಸ್ಸಿನ ಹತ್ತು ಮುಖ'ದಲ್ಲಿ ವಿಸ್ತಾರವಾಗಿ ಹೇಳಿದ್ದಾರೆ. ಮಕ್ಕಳ ನಾಟಕಗಳಲ್ಲಿ ಉತ್ಪ್ರೇಕ್ಷಿತ ದೃಶ್ಯ, ಅಭಿನಯ, ವೇಷಭೂಷಣಗಳು ಅಪೇಕ್ಷಣೀಯ ಎನ್ನುವುದಕ್ಕೆ ನಮಗೆ ಇಂತಹ ಹಲವು ಉದಾಹರಣೆಗಳು ದೊರೆಯುತ್ತವೆ.

## 2. ಮಕ್ಕಳ ಬೌದ್ಧಿಕವಲಯಕ್ಕೆ ನಿಲುಕುವ ಕಥೆಗಳು

ಮಕ್ಕಳ ನಾಟಕದ ಮೊದಲ ಆದ್ಯತೆ ಪ್ರದರ್ಶಕ ಗುಣವಾದರೆ, ಎರಡನೆಯ ಆದ್ಯತೆ ಉತ್ತಮ ಕಥಾಹಂದರ. ಮಕ್ಕಳ ನಾಟಕಕ್ಕೆ ಆಯ್ದುಕೊಳ್ಳುವ ಕತೆಯು ಮಕ್ಕಳ ಬೌದ್ಧಿಕ ಮಟ್ಟಕ್ಕೆ ನಿಲುಕುವಂತಿರಬೇಕು. ಮಕ್ಕಳ ಯೋಚನಾಲಹರಿ ಹರಿದಂತೆ ನಾಟಕದ ಕತೆ ಓಡುತ್ತಿದ್ದರೆ ಮಕ್ಕಳು ಅದನ್ನು ತೀವ್ರವಾಗಿ ಅನುಭವಿಸುತ್ತವೆ. ಮಕ್ಕಳ ಸೃಜನಶೀಲತೆಗೆ, ಕಲ್ಪನೆಯ ಕುದುರುವಿಕೆಗೆ ಆಸ್ಪದ ಕೊಡಬಲ್ಲ ರಮ್ಯಲೋಕದ ಕತೆಗಳು ಮನೋರಂಜನೆಯ ದೃಷ್ಟಿಯಿಂದ ಕ್ಷೇಮ. ಮಕ್ಕಳ ನಾಟಕದ ಕತೆಗಳು ಸಂಕೀರ್ಣತೆಯಿಂದ ಕೂಡಿರುವ ಬದಲು ಸರಳವಾಗಿ, ನೇರವಾಗಿ ಇದ್ದರೆ ಚೆನ್ನ. ಹಾಗೆಂದು ಅಂತಹ ಕತೆಗಳು ಕಲಾತ್ಮಕತೆಯನ್ನು ಕಳೆದುಕೊಂಡು ನಾಟಕೀಯ ಗುಣಗಳ ಸ್ಪರ್ಶವಿಲ್ಲದೆ, ಕೇವಲ ಕಥಾನಕವಾದರೆ ಅದನ್ನು ನಾಟಕವೆನ್ನಲು ಬರುವುದಿಲ್ಲ. ನಾಟಕದ ಕತೆಯಿಂದ ಮಕ್ಕಳ ಕಲ್ಪನಾಶಕ್ತಿ ಗರಿಗೆದರಿ, ಅವರ ಮನಸ್ಸು ಪ್ರಫುಲ್ಲಿತವಾಗಬೇಕು. ಮಕ್ಕಳ ಜ್ಞಾನದ ಮಟ್ಟ, ಕಲ್ಪನಾ ಶಕ್ತಿ, ಶಾಬ್ದಿಕ ಸಂಪತ್ತು ಇತ್ಯಾದಿಗಳನ್ನೊಳಗೊಂಡು ಆಯಾ ವಯಸ್ಸಿನ ಮಕ್ಕಳಿಗೆ ಸೂಕ್ತವಾಗುವ (ಅವಕಾಶವಿದ್ದರೆ) ನಾಟಕವನ್ನು ಆಯ್ಕೆ ಮಾಡಿಕೊಳ್ಳುವುದು, ಮಕ್ಕಳ ನಾಟಕಗಳ ಯಶಸ್ಸಿಗೆ ಕಾರಣವಾಗುತ್ತದೆ.

ಪ್ರೇಕ್ಷಕರಾಗಿ ಪಾಲ್ಗೊಳ್ಳುವ ಮಕ್ಕಳು ಮತ್ತು ಪಾತ್ರಧಾರಿಗಳಾಗಿ ಪಾಲ್ಗೊಳ್ಳುವ ಮಕ್ಕಳು, ಇಬ್ಬರ ದೃಷ್ಟಿಕೋನದಿಂದಲೂ ನಾಟಕದ ಕಥೆ ಸರಳವಾಗಿರಬೇಕು. ಭಾಗವಹಿಸುವ ಮಕ್ಕಳಿಗೆ ಮೊದಲು ಅದು ಅರ್ಥವಾಗಬೇಕು. 'ಮಕ್ಕಳಿಗೆ ಅರ್ಥವಾಗುವುದು' ಎನ್ನುವುದನ್ನು ಕೆಲವು ಸಂದರ್ಭದಲ್ಲಿ ಮಾನದಂಡವಿಲ್ಲದೆ ಬಳಸಲಾಗುತ್ತದೆ. ಯಾವುದೋ ಒಂದು ಕತೆ ಮಕ್ಕಳಿಗೆ ಅರ್ಥವಾಗುವುದೆಂದರೆ ಆ ಕತೆಯ ಪ್ರತಿ ಸಾಲೂ ಮಕ್ಕಳಿಗೆ ಅರ್ಥವಾಗಬೇಕಿಲ್ಲ. ಅದರ ಒಟ್ಟೂ ಪರಿಣಾಮ ಮಕ್ಕಳ ಮನಸ್ಸಿಗೆ ತಟ್ಟುವಂತಿದ್ದರೆ ಸಾಕು. ಯಾಕೆಂದರೆ ಮಕ್ಕಳ ನಾಟಕಗಳನ್ನು ಮಕ್ಕಳು ಮಾತ್ರ ನೋಡುವುದಿಲ್ಲ. ಅದರಲ್ಲಿ ಬರುವ ಕೆಲವು ಸಾಲುಗಳನ್ನೋ, ಕೆಲವು ಘಟನೆಗಳನ್ನೋ ಅವರು ಹಿರಿಯರಿಂದ, ಗುರುಗಳಿಂದ ಅಥವಾ ದೊಡ್ಡ ಮಕ್ಕಳಿಂದ ಕೇಳಿ ತಿಳಿಯಬಹುದು. ಆದರೆ ಅದನ್ನು ಹೇಳುವಾಗ ಹಿರಿಯರಿಗೆ ಮುಜುಗರ ಹುಟ್ಟಿಸುವ ಘಟನೆಗಳು ಅದರಲ್ಲಿ ಇರಬಾರದು. ಉದಾಹರಣೆಗೆ 'ಪಂಜರಶಾಲೆ' ನಾಟಕದ ಎಲ್ಲ ಅಂಶಗಳೂ ಮಕ್ಕಳ ಹಿಡಿತಕ್ಕೆ ದಕ್ಕುವಂತಿಲ್ಲ. ಅದರೊಳಗಿನ ವಿಡಂಬನೆ ಪುಟ್ಟ ಮಕ್ಕಳಿಗೆ ನಿಲುಕಬೇಕಿಲ್ಲ, ಆದರೆ ನಾಟಕ ನೋಡುವಾಗ ಹಿರಿಯರೊಬ್ಬರು ಅದನ್ನು ಮಕ್ಕಳಿಗೆ ಅರ್ಥವಾಗುವಂತೆ ಬಿಡಿಸಿ ಹೇಳಬಹುದು. ಆದರೆ ಅದೇ ಮಾತನ್ನು 'ಇಸ್ಪೀಟು ರಾಜ್ಯ'ದ ಕುರಿತು ಹೇಳುವಂತಿಲ್ಲ. ಬಿ.ವಿ. ಕಾರಂತರು 1976ರ ಡಿಸೆಂಬರ್ ಐದರಿಂದ ಹತ್ತರವರೆಗೆ ಬೆಂಗಳೂರಿನ ಬಾಲಭವನದಲ್ಲಿ ನಡೆದ ನಾಟಕೋತ್ಸವದಲ್ಲಿ ಪ್ರದರ್ಶಿಸಿದ 'ಇಸ್ಪೀಟ್ ರಾಜ್ಯ' ದೃಶ್ಯ ಪರಿಣಾಮದ ದೃಷ್ಟಿಯಿಂದ, ಉತ್ಸವದಲ್ಲೇ ಯಶಸ್ವಿಯಾದ ನಾಟಕವೆನ್ನಿಸಿತು; ಆದರೆ ಕಥಾದೃಷ್ಟಿಯಿಂದ ಅದು ಮಕ್ಕಳನ್ನು ತಲುಪಿತು ಎಂದು ಹೇಳಲಾಗುವುದಿಲ್ಲ ಎಂಬ ಅಭಿಪ್ರಾಯವಿದೆ. ಬಿ.ವಿ. ವೈಕುಂಠರಾಜುರವರು ಈ ನಾಟಕದ ಕುರಿತು ತಮ್ಮ 'ಕನ್ನಡ ರಂಗಭೂಮಿ' ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ.

"ಈಗಾಗಲೇ ಅನೇಕ ಬಾರಿ ಪ್ರದರ್ಶಿತವಾಗಿರುವ 'ಇಸ್ಪೀಟ್ ರಾಜ್ಯ' ಪ್ರದರ್ಶನ ಗುಣದಿಂದ ಉತ್ಸವದಲ್ಲೇ ಯಶಸ್ವಿಯಾದ ನಾಟಕ. ಮಕ್ಕಳ ಮನಸ್ಸನ್ನು ಸೆರೆ ಹಿಡಿಯುವಂತಹ ದೃಶ್ಯಸಂಯೋಜನೆಯನ್ನು ಕಾರಂತರು ಈ ನಾಟಕದಲ್ಲಿಯೂ ಅಳವಡಿಸಿದ್ದಾರೆ. ಆದರೆ ಇದನ್ನು ಮಕ್ಕಳ ನಾಟಕವೆಂದು ಒಪ್ಪಿಕೊಳ್ಳುವುದು ಕಷ್ಟ. ಎಷ್ಟೋ ಜನ ದೊಡ್ಡವರಿಗೂ ಈ ನಾಟಕದಲ್ಲಿ ವಿವರಿಸಿರುವ ತತ್ವಗಳು ಅರ್ಥವಾಗುವುದೋ ಇಲ್ಲವೋ! ಮಕ್ಕಳೇ ಅಭಿನಯಿಸಿದ ಮಾತ್ರಕ್ಕೆ 'ಮಕ್ಕಳ ನಾಟಕ' ಎಂದಾಗುವುದಿಲ್ಲ"[6]

ಆದರೆ ಕಥೆಯ ಕೆಲವು ಭಾಗ ಅರ್ಥವಾಗದೇ ಹೋದರೂ ಇಡೀ ನಾಟಕ ಮಕ್ಕಳ ಬೌದ್ಧಿಕ ನೆಲೆಯಲ್ಲೇ ಹರಿಯುವ ಕಥಾವಸ್ತುವನ್ನು ಹೊಂದಿರುವ ನಾಟಕವೆಂದರೆ 'ನನ್ನ ಗೋಪಾಲ'. ಇದರಲ್ಲಿ ಗುರುವಿಗೆ ಕೃಷ್ಣ (ಬನದ ಗೋಪಾಲ) ಯಾಕೆ ಕಾಣಿಸಲಿಲ್ಲ

ಎಂಬ ತತ್ವ ಮಕ್ಕಳಿಗೆ ಅರ್ಥವಾಗುವುದಿಲ್ಲ. ಆದರೆ ಮಕ್ಕಳು ಅದನ್ನು ನಾಟಕದ ಮರುದಿನ ಹಿರಿಯರನ್ನು ಕೇಳಿ ತಿಳಿದುಕೊಳ್ಳಬಹುದು, ತಿಳಿದುಕೊಳ್ಳುತ್ತಾರೆ. ಮಕ್ಕಳ ಮನಸ್ಸಿನಂತೆಯೇ ಓಡಿ ಅವರಿಗೆ ಮುದ ನೀಡುವ ನಾಟಕಗಳಿಗೆ ಉದಾಹರಣೆ ಕೊಡಬಹುದಾದರೆ 'ನಾಯಿಮರಿ', 'ನೀಲಿ ಕುದುರೆ' ಇತ್ಯಾದಿ. ಹಾಗಾದರೆ ಮಕ್ಕಳ ನಾಟಕಗಳೆಂದರೆ ಮಕ್ಕಳಿಗೆ ಕಾಲ್ಪನಿಕತೆಯ ಸಂತೋಷ ತೆರೆಯಿಸುವಷ್ಟೇ ಸೀಮಿತ ಉದ್ದೇಶ ಹೊಂದಿರಬೇಕೆ ಎಂಬ ಅಂಶವನ್ನು ಕೆ.ವಿ. ಅಕ್ಷರರವರು ಹೀಗೆ ವಿಶ್ಲೇಷಿಸುತ್ತಾರೆ.

"ಈ ಕಾಲ್ಪನಿಕತೆಯನ್ನು ಮೀರಿ ಮಕ್ಕಳ ರಂಗಭೂಮಿ ಬೆಳೆಯಬಲ್ಲದೆ; ಒರಟಾಗಿ ಹೇಳುವುದಾದರೆ ಕಾಗಕ್ಕ-ಗುಬ್ಬಕ್ಕನ ಕಥೆಯನ್ನು ಬಿಟ್ಟು ಬೇರೆ ಬೇರೆ ವಯೋಮಾನದ ಮಕ್ಕಳ ಮನೋಧರ್ಮವನ್ನು ಅರ್ಥಮಾಡಿಕೊಳ್ಳುವ, ಅವರ ಸೂಕ್ಷ್ಮವಾದ ಸಮಸ್ಯೆಗಳಿಗೆ ಮನೋವೈಜ್ಞಾನಿಕವಾದ ಪರಿಹಾರ ಸೂಚಿಸಬಲ್ಲ ಹಾಗೂ ನಮ್ಮ ವಯಸ್ಕ ಸಮಾಜ ಮಕ್ಕಳ ಮನಸ್ಸಿನ ಮೇಲೆ ಏನನ್ನು ಹೇರುತ್ತಿದೆ ಎಂಬುದನ್ನು ಸೂಚಿಸಿ ಮಕ್ಕಳಿಗೆ ಹಾಗೂ ದೊಡ್ಡವರಿಗೆ ಎರಡೂ ವರ್ಗಕ್ಕೆ ಚಿಕಿತ್ಸಕವಾಗಬಲ್ಲಂತಹ ಮಕ್ಕಳ ರಂಗಭೂಮಿ ಬೆಳೆಯಲು ಸಾಧ್ಯವೇ ಎಂಬುದೂ ನಮಗೆ ಮುಖ್ಯವಾಗುತ್ತದೆ"[7]

ಪ್ರಾಯಶಃ ಮೇಲಿನ ಮಾತುಗಳನ್ನು ಕಾರ್ಯರೂಪಕ್ಕೆ ತರುವ ಮಟ್ಟಕ್ಕೆ ಕನ್ನಡ ಮಕ್ಕಳ ರಂಗಭೂಮಿ ಬೆಳೆದಿಲ್ಲ. ಯಾಕೆಂದರೆ ನಮ್ಮ ಕಾಗಕ್ಕ-ಗುಬ್ಬಕ್ಕನ ಕಥೆಗಳನ್ನೇ ಸಮರ್ಥವಾಗಿ ಪ್ರಯೋಗಿಸುವ ರಂಗತಂಡಗಳು ನಮ್ಮಲ್ಲಿನ್ನೂ ಬೆರಳೆಣಿಕೆಯಲ್ಲಿವೆ. ನಮ್ಮ ಶಾಲಾ-ಕಾಲೇಜುಗಳಲ್ಲಿರುವ ಸೌಲಭ್ಯಗಳಂತೂ ತೀರಾ ಕನಿಷ್ಠ. ಹೀಗಿರುವಾಗ ಹೊಸ ಹೊಸ ದೃಷ್ಟಿಕೋನಗಳುಳ್ಳ ಹೊಸ ದಿಕ್ಕುಗಳತ್ತ ನಮ್ಮ ರಂಗಭೂಮಿ ಹೆಜ್ಜೆಯಿಡುವುದು ಸದ್ಯಕ್ಕಂತೂ ದೂರದ ಮಾತು ಎಂಬ ಅಭಿಪ್ರಾಯಗಳೂ ಇವೆ.

ಆದರೆ ಅಕ್ಷರ ಅವರು ಹೇಳಿದಂತೆ, ನಮ್ಮ ನಾಟಕಗಳ ಕತೆ ತಮ್ಮ ರಮ್ಯಲೋಕದ ಕಾಲ್ಪನಿಕ ಹಂದರದಿಂದ ಈಚೆಗೆ ಬರಬಹುದು. ಇಂದಿನ ಸಮಸ್ಯೆಯೊಂದನ್ನು ಎತ್ತಿಕೊಂಡು, ಮಕ್ಕಳ ಮನಸ್ಸಿಗೆ ಮುಟ್ಟುವಂತೆ ನಾವು ಕತೆ ಹೇಳಬಹುದು. ಇದಕ್ಕೊಂದು ಉದಾಹರಣೆ ಕೊಡುವುದಾದರೆ ನಾನೇ ರಚಿಸಿ, ನಿರ್ದೇಶಿಸಿದ 'ನಾಣಿಭಟ್ಟನ ಸ್ವರ್ಗದ ಕನಸು'. 'ಈ ಪ್ರಪಂಚ ನಶ್ವರ, ಇಲ್ಲಿಯ ಬದುಕಿಗೆ ಅರ್ಥವಿಲ್ಲ, ನಮ್ಮ ಬದುಕಿನ ಉದ್ದೇಶ ಪರಲೌಕಿಕ ಸಾಧನೆ' ಎಂದು ನಮ್ಮ ಮಕ್ಕಳಿಗೆ ಲೌಕಿಕ ಬದುಕು ಅರ್ಥಹೀನವೆಂದು ಹೇಳುವುದು ಹೇಗೆ ಅವರ ಮೇಲೆ ಮಾನಸಿಕ ಪರಿಣಾಮ ಬೀರಬಹುದು ಎಂಬುದನ್ನು ಹೇಳುತ್ತಾ ಈ ನಾಟಕವು ಶ್ರಮದ ಹಿಂದಿನ ಸುಖ ಮತ್ತು ಪ್ರಯತ್ನದ ಮೂಲಕ ದೊರೆಯುವ ಗೆಲುವಿನ ಮಹತ್ವದೊಂದಿಗೆ ಲೌಕಿಕ ಬದುಕಿನ ಸಾರ್ಥಕತೆಯ ಕುರಿತು ಮಕ್ಕಳ ಬೌದ್ಧಿಕ ಮಟ್ಟಕ್ಕೆ ಅರ್ಥವಾಗುವಂತೆ ಹೇಳುತ್ತದೆ. ಈ ನಾಟಕ ಅತ್ಯಂತ ಯಶಸ್ವಿಯಾಗಿ ಪ್ರಯೋಗಗೊಂಡ ಉದಾಹರಣೆಯನ್ನು

ಆಧರಿಸಿ, ನಮ್ಮ ಮಕ್ಕಳು-ಹಿರಿಯರಿಬ್ಬರೂ ಹೊಸ ವಿಷಯಗಳಿಗೆ ಸ್ಪಂದಿಸಬಲ್ಲರು ಎಂದು ಹೇಳಬಹುದಾಗಿದೆ.

ಹಾಗಾಗಿ ಮಕ್ಕಳ ನಾಟಕಗಳಲ್ಲಿ 'ಕತೆ'ಗಳ ಪಾತ್ರದ ಕುರಿತು ಹೀಗೆ ಅರ್ಥೈಸಿಕೊಳ್ಳಬಹುದಾಗಿದೆ. 'ಮಕ್ಕಳ ನಾಟಕದ ಕಥೆ ಮಕ್ಕಳ ಬೌದ್ಧಿಕ ಮಟ್ಟಕ್ಕೆ ನಿಲುಕುವಂತಿದ್ದು, ಅದು ಮಕ್ಕಳ ಮೇಲೆ ಧನಾತ್ಮಕ ಪರಿಣಾಮ ಬೀರುವಂತಿರಬೇಕು. ನಾಟಕವು, ಪ್ರದರ್ಶನವು ಪರಿಣಾಮಕಾರಿಯಾಗುವಂತೆ ತನ್ನ ಕಥಾಹಂದರ, ಸಂವಿಧಾನ ತಂತ್ರಗಳನ್ನು ಹೊಂದಿರಬೇಕು ಅಷ್ಟೇ. ಕಥೆಗೊಂದು ಹೊಸ ವ್ಯಾಖ್ಯೆ ಕೊಡುವುದೇ ನಾಟಕ. ಹಾಗಾಗಿ ಎಲ್ಲ ಕಥೆಗಳೂ ನಾಟಕವಾಗುವುದಿಲ್ಲ. ಆದರೆ ಎಲ್ಲ ನಾಟಕದಲ್ಲೂ ಒಂದು ಕಥೆ ಇರುತ್ತದೆ. ನಾಟಕ ಆ ಕಥೆಗೊಂದು ಹೊಸ ಅರ್ಥ ಕಲ್ಪಿಸುತ್ತದೆ. ಹೊಸ ವಿನ್ಯಾಸ ನೀಡುತ್ತದೆ. ಹೊಸ ಹಂದರ ನೇಯುತ್ತದೆ. ಆ ಕಥೆಯನ್ನು, ನಾಟಕವನ್ನು ಕಂಡ ಪ್ರೇಕ್ಷಕರು ಪ್ರತ್ಯಕ್ಷ ಕಂಡಂತೆ ಅನುಭವಿಸುತ್ತಾರೆ. ಹಾಗಾಗಿ ಮಕ್ಕಳಿಗೆ ನೇರ, ಸರಳ, ಹೊಸ ಹೊಸ ವಿಷಯಗಳನ್ನು ತಿಳಿಸುವ ಕತೆಗಳನ್ನು ಹೊಂದಿರುವ ನಾಟಕಗಳು ಅಪೇಕ್ಷಣೀಯ.

## 3. ಮಕ್ಕಳ ನಾಟಕಗಳಲ್ಲಿ ನೀತಿ

ಮನೋವಿಜ್ಞಾನಿ ಗಸೆಲ್ "ನವಜಾತ ಶಿಶುವೊಂದು ಅನಾಗರಿಕ ವ್ಯಕ್ತಿ ಎಂದು ಹೇಳಿದ್ದಾನೆ".[8] ಇಂತಹ ಅನಾಗರಿಕ ಶಿಶುವು ಸಭ್ಯ ನಾಗರಿಕನಾಗಿ ಅರಳಲು ಅಗತ್ಯ ಸಂಸ್ಕಾರಗಳು ಅನೇಕ. ಅಂತಹ ಸಂಸ್ಕಾರಗಳಲ್ಲಿ ನೈತಿಕ ಸಂಸ್ಕಾರವೂ ಅತ್ಯಂತ ಪ್ರಮುಖ. ಮಗುವು ಸರಿತಪ್ಪುಗಳ ನಿಷ್ಕರ್ಷೆ ಮಾಡುವುದು ಸ್ವಕೇಂದ್ರೀಕೃತ ಮನಸ್ಸಿನಿಂದ. "ಯಾವುದು ತನಗೆ ಹಿತವನ್ನುಂಟು ಮಾಡುತ್ತದೆಯೋ ಅದು 'ಸರಿ' ಮತ್ತು ತನಗೆ ಅಹಿತಕರವಾದುದು 'ತಪ್ಪು'. ಅದು ಸಮುದಾಯಕ್ಕೆ ಅಥವಾ ಇತರರಿಗೆ ಒಳ್ಳೆಯದೇ ಅಥವಾ ಕೆಟ್ಟದ್ದೇ ಎಂಬುದು ಮಗುವಿಗೆ ಮುಖ್ಯವಲ್ಲ. 'ತನಗೇನಾಗುತ್ತದೆ' ಎಂಬುದೇ ಮುಖ್ಯ. ಅದರ ಬುದ್ಧಿಶಕ್ತಿ ಮತ್ತು ವಿವೇಚನೆ ಸಾಕಷ್ಟು ವಿಕಾಸಗೊಂಡಿರುವುದಿಲ್ಲವಾದ್ದರಿಂದ ತನ್ನ ವರ್ತನೆ ಇತರರ ಮೇಲೆ ಯಾವ ಪರಿಣಾಮವನ್ನುಂಟುಮಾಡುತ್ತದೆ ಎಂಬುದನ್ನು ಅದು ಗಮನಿಸುವುದಿಲ್ಲ. ಅದಕ್ಕೆ, ತನ್ನ ಮೇಲೆ ಉಂಟಾಗುವ ಪರಿಣಾಮ ಮಾತ್ರ ಮುಖ್ಯ. ಮಗುವಿನ ದೃಷ್ಟಿಯಲ್ಲಿ ತಾನು ತಪ್ಪು ಮಾಡಿದರೂ ಅದು ಅಪರಾಧವಲ್ಲ."[9]

"ಉದಾಹರಣೆಗೆ ಇತರರಿಗೆ ಸೇರಿದ ಆಟಿಕೆಯನ್ನು ತೆಗೆದುಕೊಳ್ಳುವುದು ಅಪರಾಧ ಎಂದು ಅದಕ್ಕೆ ಅನ್ನಿಸುವುದಿಲ್ಲ".[10]

ಇಂತಹ 'ನೀತಿರಹಿತ' ಮಗು ಸಮಾಜಸಮ್ಮತವಾಗಿ ಸಮಾಜೀಕರಣ ಹೊಂದಲು ನಿಖರವಾದ ನೈತಿಕ ತಳಹದಿ ಬೇಕಾಗುತ್ತದೆ.

"ಹಿಂದಿನ ಕಾಲದಲ್ಲಿ ಅಜ್ಜ, ಅಜ್ಜಿಯರು ತಮ್ಮ ಮೊಮ್ಮಕ್ಕಳಿಗೆ ದಿನನಿತ್ಯ ಕಥೆ ಹೇಳುವಂತಹ ಒಂದು ಪರಿಪಾಠವಿತ್ತು. ಇಂತಹ ಕಥೆಗಳನ್ನು ಕೇಳುತ್ತಿದ್ದಂತೆ ಮಕ್ಕಳ ಕಲ್ಪನಾ ಸಾಮ್ರಾಜ್ಯ ಗರಿಗೆದರಿ ಯಾವಯಾವುದೋ ಲೋಕದಲ್ಲಿ ವಿಹರಿಸುತ್ತಿತ್ತು. ಈ ಕಥೆಗಳನ್ನು ಕೇಳಿದಂತೆಲ್ಲಾ ಮಕ್ಕಳ ಮನಸ್ಸಿನಲ್ಲಿ ತಾವೂ ಒಳ್ಳೆಯವರಾಗಬೇಕು, ಕಥೆಯ ನಾಯಕರಂತಾಗಬೇಕು ಎಂಬ ಭಾವ ಅಂಕುರಿಸಿ, ಕ್ರಮೇಣ ಹೆಮ್ಮರವಾಗಿ ಬೆಳೆದು ಉತ್ಕೃಷ್ಟವ್ಯಕ್ತಿಗಳನ್ನಾಗಿ ಮಾಡಿದ್ದೂ ಉಂಟು. ಶಿವಾಜಿ ಮಹಾರಾಜ ಚಿಕ್ಕವನಿದ್ದಾಗ ತನ್ನ ತಾಯಿ ಹೇಳುತ್ತಿದ್ದಂತಹ ವೀರ ಧೀರರ ಕಥೆಗಳನ್ನು ಕೇಳಿದ್ದೇ ಅವನ ಮನಸ್ಸಿನ ಮೇಲೆ ಪ್ರಭಾವ ಬೀರಿ ಮುಂದೆ ಅವನನ್ನು ಒಬ್ಬ ಚಕ್ರಾಧಿಪತಿಯನ್ನಾಗಿ ಮಾಡಿದ್ದೂ, ಪಂಚತಂತ್ರ ಕಥೆಗಳು ರಾಜಕುಮಾರರನ್ನು ಪರಿವರ್ತಿಸಿ ಸದ್ಗುಣಿಗಳನ್ನಾಗಿ ಮಾಡಿದ್ದೂ ಎಲ್ಲರಿಗೂ ಗೊತ್ತಿರುವ ವಿಷಯ.

ಪ್ರಸ್ತುತ ಸ್ಥಿತಿಯಲ್ಲಿ ನಮ್ಮ ಮಕ್ಕಳಿಗೆ ಎಂತಹ ಕಥೆ ಬೇಕು ಎಂದು ಆಲೋಚಿಸುವಾಗ ಅವರ ಅರಿವನ್ನು ಹೆಚ್ಚಿಸುವ, ಅವರ ನೈತಿಕ ನೆಲಗಟ್ಟನ್ನು ಗಟ್ಟಿಯಾಗಿಸುವ, ಅವರ ವ್ಯಕ್ತಿತ್ವವನ್ನು ಕ್ರಿಯಾತ್ಮಕ ರೀತಿಯಲ್ಲಿ, ಸಮಾಜ ಕಲ್ಯಾಣಕಾರಕ ರೂಪದಲ್ಲಿ ವಿಕಾಸ ಹೊಂದುವಂತೆ ಮಾಡುವ, ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗುವಂತಹ ಕಥೆಗಳು ಸೃಷ್ಟಿಯಾಗಬೇಕಿದೆ.

ಮಕ್ಕಳಿಗೆ ಕಥೆ ಹೇಳುವ ಉದ್ದೇಶ ಏನೆಂದರೆ, ಮಕ್ಕಳ ಮನಸ್ಸು ವಿಕಾರಗೊಳ್ಳದೇ, ದುರ್ಮಾರ್ಗದಲ್ಲಿ ಹರಿದಾಡದೇ ಇರಲಿ ಎನ್ನುವುದಷ್ಟೇ ಅಲ್ಲ. ಅವರು ಸುಶೀಲರೂ, ಸದಾಚಾರಿಗಳೂ, ಸದ್ಗುಣ ಪ್ರವರ್ತಕರೂ ಆಗುವಂತೆ ಮಾಡುವುದು ಇದರ ನೈಜ ಉದ್ದೇಶ."[11]

ನಾವು ನೀತಿ, ನೀತಿಯೆಂದು ಅತಿಯಾಗಿ ಹೇಳಿದಾಗ ಮಗುವೊಂದು ನೀತಿ ಯಾಕೆ ಬೇಕು ಎಂದು ಪ್ರಶ್ನಿಸಬಹುದು. ಹಿಂದಿನ ಕಾಲದಲ್ಲಾದರೆ ಕೇವಲ ಧಾರ್ಮಿಕ ಕಾರಣಗಳನ್ನು ನೀಡಿ ಅಥವಾ ದೇವರ ಮೇಲೆ ಭಾರ ಹಾಕಿ ಅದನ್ನು ಒಪ್ಪಿಸಬಹುದಾಗಿತ್ತು. ಆದರೆ ಇಂದಿನ ಸಂದರ್ಭದಲ್ಲಿ ಪೋಷಕರು ಮತ್ತು ಶಿಕ್ಷಕರಿಗೆ ಉತ್ತರವನ್ನು ಹೇಳುವುದು ಅಷ್ಟು ಸುಲಭವಿಲ್ಲ.

ಇಂತಹ ಪ್ರಶ್ನೆಗೆ ನೀಡುವ ಉತ್ತರವು ಮಗುವಿನ ಕೌಟುಂಬಿಕ ಹಿನ್ನಲೆಯನ್ನು ಆಧರಿಸಿರಬೇಕಾಗುತ್ತದೆ. ಮಗುವು ಧಾರ್ಮಿಕ ವಾತಾವರಣದಿಂದ ಬಂದುದಾದರೆ ಅದಕ್ಕೆ ದೇವರು, ಧರ್ಮ ಎಂದು ಸಮರ್ಥನೆ ನೀಡಬಹುದು. ಆದರೆ ಮಕ್ಕಳ ಸಮುದಾಯದಲ್ಲಿ ಧರ್ಮ ವೈವಿಧ್ಯತೆಯಿರುವ ಸಂದರ್ಭದಲ್ಲಿ ಸಮಾಜ ಶಾಸ್ತ್ರವನ್ನು ಆಧರಿಸಿಯೇ ಆ ಮಗುವಿಗೆ ಉತ್ತರ ಹೇಳಬೇಕಾಗುತ್ತದೆ.

ಮನುಷ್ಯನ ಸಹಜ ಪ್ರವೃತ್ತಿ ಪ್ರಾಣಿಗಳಿಗೆ ಸರಿಸಮಾನವಾದುದು. ಆದರೂ ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ಅವನು ಪ್ರಾಣಿ ಸಹಜ ಪ್ರವೃತ್ತಿಯಿಂದ ಬದುಕದೇ ಮೌಲ್ಯಾಧಾರಿತ ಬದುಕನ್ನು ಬದುಕಬೇಕು ಎಂದು ವಿವರಿಸಬೇಕಾಗುತ್ತದೆ. ಮಗುವಿಗೆ ಅರ್ಥವಾಗುವಂತೆ ಕಾರ್ಯ–ಕಾರಣ ಸಂಬಂಧವನ್ನು ವಿವರಿಸಬೇಕು. ಉದಾಹರಣೆಗೆ 'ನಾವು ಕಳ್ಳತನ ಮಾಡಬಾರದು ಯಾಕೆ?' ಎಂಬ ಪ್ರಶ್ನೆ ಬಂದಾಗ, ಇನ್ನೊಬ್ಬ ನಮ್ಮ ವಸ್ತುವನ್ನು ಕಳ್ಳತನ ಮಾಡಿದರೆ ನಮಗೆ ನಷ್ಟ ದುಃಖ ಉಂಟಾಗುವುದಿಲ್ಲವೇ. ಹಾಗೆಯೇ ನಾವು ಕಳ್ಳತನ ಮಾಡಿದಾಗಲೂ. ಇನ್ನೊಬ್ಬರಿಗೆ ನಷ್ಟ ದುಃಖ ಉಂಟಾಗುತ್ತದೆ. ನಾವು ಸುಳ್ಳು ಹೇಳಿದಾಗ, ನಮ್ಮೊಂದಿಗೆ ಇತರರು ಸುಳ್ಳು ಹೇಳಿದರೆ ನಮಗೆ ಏನಾಗುತ್ತದೆಯೋ, ಅವರಿಗೂ ಹಾಗೆಯೇ ಆಗುತ್ತದೆ ಎಂಬ ಅರ್ಥ ವಿವರಿಸಿ ಹೇಳಿ, ಮಗುವಿನ ನೈತಿಕ ತಳಹದಿಯನ್ನು ಗಟ್ಟಿಗೊಳಿಸಬೇಕಾಗುತ್ತದೆ.

ಮಕ್ಕಳ ನಾಟಕಗಳು ಮಾಡಬೇಕಾದುದು ಇದನ್ನೇ. ನಾಟಕದಲ್ಲಿ ನೀತಿಯನ್ನು ವಾಚ್ಯವಾಗಿ ಹೇಳುವುದಕ್ಕಿಂತ, ಅದು ನಾಟಕದಲ್ಲೇ ಅಂತರ್ಗತವಾಗಿ ಬರುವಂತೆ ಮಾಡಬೇಕು. ಕೆಲವು ನಾಟಕಗಳು ತಮ್ಮ ಒಡಲಿನಲ್ಲಿ ಹೊಂದಿರುವ ಕತೆ ಹೇಗಿದ್ದರೂ, ಕಡೆಗೊಂದು ನೀತಿ ವಾಕ್ಯವನ್ನು ಉಪದೇಶಿಸಿ ಅದೊಂದು ನೈತಿಕ ನಾಟಕ ಎಂದು ಸ್ವಯಂ ಘೋಷಿಸಿಕೊಂಡುಬಿಡುತ್ತವೆ. ಆದರೆ ಇಂತಹ ಸಂದರ್ಭದಲ್ಲಿ ಸೂಕ್ಷ್ಮ ಸ್ವಭಾವದ ಮಕ್ಕಳ ಮನಸ್ಸು ದ್ವಂದ್ವಕ್ಕೆ ಒಳಗಾಗುತ್ತವೆ. ನಾಟಕದ ಮುಕ್ಕಾಲು ಭಾಗ ಅನೈತಿಕ ಕಥೆಯನ್ನೇ ಒಳಗೊಂಡು ಅಂತ್ಯದಲ್ಲಿ ಮಾತ್ರ ನೀತಿಬೋಧನೆ ಮಾಡಿದರೆ, ಮಕ್ಕಳು ಮುಗ್ಧವಾಗಿ ಅದನ್ನು ಒಪ್ಪಿಕೊಳ್ಳುವುದಿಲ್ಲ. ಪ್ರಪಂಚದ ಹೆಸರಾಂತ ನಾಟಕಗಳನ್ನು ಮಕ್ಕಳ ಬೌದ್ಧಿಕ ಮಟ್ಟಕ್ಕೆ ಎಳೆತಂದು ನಾವು 'ಕ್ಲಾಸಿಕ್'ಗಳನ್ನು ನೀಡುವ ಸಂದರ್ಭದಲ್ಲೂ ಇದನ್ನು ಗಮನಿಸಬೇಕಾಗುತ್ತದೆ. ಮಕ್ಕಳಿಗೆ ನಾಟಕ ಪ್ರದರ್ಶನ ಮಾಡುವ ರೀತಿ ಬಹಳ ಮುಖ್ಯ. ಅದೇ ವೇಳೆ ನಾಟಕದ ಅಂತರ್‌ಪ್ರವಾಹ ಏನು ಎಂಬುದೂ ಮುಖ್ಯ. ಕೆಲವು ಯಶಸ್ವೀ ಮಕ್ಕಳ ನಾಟಕಗಳೂ ಇಂತಹ ಕೊರತೆಯಿಂದ ಬಳಲುತ್ತಿವೆ ಎಂದೂ ಹೇಳಲಾಗಿದೆ.

ಹಾಗೆಂದು ಯಾವುದೋ ನಾಟಕದಲ್ಲಿ ಒಂದೆರೆಡು ಸಂಭಾಷಣೆ ಅಥವಾ ಒಂದು ಘಟನೆ ಮಕ್ಕಳ ಬೌದ್ಧಿಕ ನೆಲೆಯನ್ನು ಮೀರಿದ ಮಾತ್ರಕ್ಕೆ ಇಡೀ ನಾಟಕವನ್ನು ಕಡೆಗಣಿಸಲಾಗುವುದಿಲ್ಲ. ಆದರೆ ನಾಟಕದ ಒಟ್ಟೂ ಆಶಯ ಮಕ್ಕಳ ಬೆಳವಣಿಗೆಯ ಗುರಿಯನ್ನೂ, ಧನಾತ್ಮಕ ಚಿಂತನೆಯ ಹರಿವನ್ನೂ ಉಳಿಸಿಕೊಳ್ಳಬೇಕಾಗುತ್ತದೆ. ನಾಟಕದಲ್ಲಿ ಚಿಂತನೆಯ ಹರಿವು ಏಕಪ್ರಕಾರವಾಗಿ ಪ್ರವಹಿಸದಿದ್ದರೆ ಮಕ್ಕಳ ಮನಸ್ಸಿನಲ್ಲಿ ದ್ವಂದ್ವ ಉಂಟಾಗುವುದು. ಮಕ್ಕಳೆಂದರೆ ಕೇವಲ ಅವರ ಕಿವಿಯಲ್ಲ. ಆ ಕಿವಿಗಳು ಹಿರಿಯರ ಮಾತುಗಳನ್ನು ಕೇಳಲೆಂದೇ ಸೃಷ್ಟಿಯಾಗಿರುವಂತಹವುಗಳೂ ಅಲ್ಲ. ನಾಟಕದಲ್ಲಿ

ಕೊನೆಗೊಂದಿಷ್ಟು ಉಪದೇಶಾಮೃತವನ್ನು ಸೇರಿಸಿ, ಲೇಖಕರು ತಾವು ಮಕ್ಕಳ ನೈತಿಕಮಟ್ಟವನ್ನು ಸುಧಾರಿಸುವವರು ಎಂದು ಭಾವಿಸಬಹುದಾದರೂ, ಮಕ್ಕಳಿಗೆ ಬೇಕಾದುದು ನಾಟಕದ ಒಟ್ಟು ಪರಿಣಾಮ. ಇಡೀ ನಾಟಕದಲ್ಲಿ ಹರಿಯುವ ಕಥಾ ಪ್ರವಾಹ ಕೆಡುಕಿನ ವಿರುದ್ಧ ಒಳಿತನ್ನು ಗೆಲ್ಲಿಸುವ ಒಳ ಉದ್ದೇಶವನ್ನು ಅಥವಾ ಧನಾತ್ಮಕವಾಗಿ ಬದುಕನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಮಕ್ಕಳ ಮನಸ್ಸನ್ನು ಉತ್ತೇಜಿಸಿದರೆ ಸಾಕು. ನಾಟಕದ ಕೊನೆಯಲ್ಲಿ ಕಳ್ಳತನ ಮಾಡಬಾರದು ಎಂದು ಹೇಳಿಸುವ ಬದಲು ಇಡೀ ಕಥೆಯಲ್ಲಿ ಕಳ್ಳತನ ಮಾಡುವುದರಿಂದ ಎದುರಿಸಬೇಕಾದ ದುರಂತವನ್ನು ಹೇಳಬಹುದು. ಮಕ್ಕಳ ನಾಟಕದ ಮೂಲಕ ಉಪದೇಶ ನೀಡುವ ಕುರಿತು ಬಿ.ವಿ.ಕಾರಂತರು ಹೀಗೆ ಹೇಳುತ್ತಾರೆ. "ನೇರವಾದ ಉಪದೇಶವಿರಬಾರದು. ಉಪದೇಶವಿಲ್ಲದೆ ಉಪದೇಶವಿರಬೇಕು. ಉಪದೇಶ ಮಾಡಬೇಕಾಗಿರುವುದನ್ನು ನಾಟಕ ನೋಡಿದ ಮಕ್ಕಳ ಅನುಭವಕ್ಕೆ ಬರುವಂತೆ ಮಾಡಬೇಕು. ಇಡೀ ನಾಟಕ ನೈತಿಕ ಅನುಭವದ ಪರಿಣಾಮವನ್ನುಂಟುಮಾಡಬೇಕು."[12]

## 4. ಮಕ್ಕಳ ನಾಟಕದ ಭಾಷೆ

ಮಕ್ಕಳ ನಾಟಕಗಳೆಂದರೆ ಮಕ್ಕಳು ತಮ್ಮ ಎಳೆಯ ಬೆರಳುಗಳಿಂದ ಬರೆದ ನಾಟಕಗಳಲ್ಲ. ಮಕ್ಕಳ ಮನಸ್ಸನ್ನರಿತ ಹಿರಿಯ ಲೇಖಕರು ಮಕ್ಕಳ ಭಾವ ಲೋಕಕ್ಕಿಳಿದು ಮಕ್ಕಳ ಭಾವ, ಭಾಷೆ, ಆಸೆ, ಆಕಾಂಕ್ಷೆ, ಆಸಕ್ತಿಗಳನ್ನು ಮುಂದಿಟ್ಟುಕೊಂಡು ರಚಿಸಿದ ನಾಟಕ ಕೃತಿಗಳು. ಅದರಲ್ಲಿ ಕೆಲವು ಮಕ್ಕಳಿಂದ ಮಕ್ಕಳಿಗಾಗಿ ಅಭಿನಯಿಸಲ್ಪಡುವ ನಾಟಕಗಳಾದರೆ, ಇನ್ನು ಕೆಲವು ದೊಡ್ಡವರು ಮಕ್ಕಳಿಗಾಗಿ ಅಭಿನಯಿಸುವ ನಾಟಕಗಳು.

ಹೀಗೆ ದೊಡ್ಡವರು ಮಕ್ಕಳಿಗೆಂದು ರಚಿಸಿದ ನಾಟಕಗಳಲ್ಲಿ ಮಕ್ಕಳದ್ದೇ ಆದ ಭಾವ, ಭಾಷೆಗಳು ಎಷ್ಟರ ಮಟ್ಟಿಗೆ ಮೂಡಿಬಂದಾವು ಎಂಬ ಪ್ರಶ್ನೆ ಸಹಜ. ಆದರೆ ನಾಟಕ ರಚನೆ ಒಂದು ವೈಯುಕ್ತಿಕ ಕ್ರಿಯೆ. ನಾಟಕ ಪ್ರದರ್ಶನವೊಂದು ಸಾರ್ವಜನಿಕ ಕ್ರಿಯೆಯೇ ಹೌದಾದರೂ ನಾಟಕ ಹುಟ್ಟುವುದು ನಾಟಕಕಾರನ ವೈಯುಕ್ತಿಕ ನೆಲೆಯಲ್ಲಿ. ಅವನು ಪೂರ್ಣ ಧ್ಯಾನಸ್ಥನಾಗಿ, ತನ್ನ 'ವರ್ತಮಾನ'ವನ್ನು ಬಾಲ್ಯಕ್ಕೆ ಒಯ್ದು ಅಲ್ಲಿ ತನ್ನ ಬಾಲ್ಯದ ಅನುಭವದೊಂದಿಗೆ ತನ್ನಲ್ಲಿರುವ ಕಥೆಯನ್ನು ನೇಯ್ದಾಗ ಮಾತ್ರ ಅದು ಮಕ್ಕಳಿಗೆ ತಲುಪುವಲ್ಲಿ ಸಫಲವಾಗುತ್ತದೆ. ಅದಿಲ್ಲದೆ ಅವನು ದೊಡ್ಡವನಾಗಿಯೇ ತನ್ನ ವರ್ತಮಾನದ ಸ್ಥಿತಿ–ಗತಿಯಲ್ಲಿ ಕುಳಿತು ಬರೆದರೆ ಅದು ಮಕ್ಕಳ ಹೆಸರಿನಲ್ಲಿ ಬರೆದ ದೊಡ್ಡವರ ಕೃತಿಯಾಗಿ, ಅತ್ತ ದೊಡ್ಡವರಿಗೂ ಸಿಕ್ಕದೆ, ಇತ್ತ ಮಕ್ಕಳಿಗೂ ದಕ್ಕದೆ ಅತಂತ್ರ ಸಾಹಿತ್ಯವಾಗುತ್ತದೆ. ಇಂದಿನ ಪ್ರಮುಖ ಮಕ್ಕಳ ನಾಟಕಕಾರರಾದ ಶ್ರೀಮತಿ ವೈದೇಹಿ ಹೇಳುವಂತೆ "ಮಕ್ಕಳ ನಾಟಕಗಳು ನಾವು ಚಿಕ್ಕವರಿದ್ದಾಗಿನ ಮನಸ್ಥಿತಿಗೆ

ತಲುಪಿದಾಗ ಹುಟ್ಟುತ್ತದೆ. ಬಾಲ್ಯದಲ್ಲಿ ಸಮಸ್ತ ಪ್ರಕೃತಿಯನ್ನು ಆಹ್ವಾನಿಸಿಕೊಳ್ಳುವ, ಪುರಲೆ, ಕಾಗೆ, ಗುಬ್ಬಿಯಾಗಿ ಅಭಿನಯಿಸುವ ಮೂಲಕ ನಾವು ನಟರಾಗುವ, ಅಭಿನಯಿಸುವ ಕ್ರಿಯೆ ಆರಂಭವಾಗುತ್ತದೆ. ಈ ಪುರಲೆ, ಕಾಗೆ, ಗುಬ್ಬಿಗಳು ರಂಗದ ಪರಿವೆಯೇ ಇಲ್ಲದೆ, ರಂಗಭೂಮಿಯ ಯಾವ ಪ್ರಜ್ಞೆಯೂ ಇಲ್ಲದೆ ರೆಕ್ಕೆಪುಕ್ಕಗಳೊಂದಿಗೆ ಹಾರಾಡುತ್ತಿದ್ದವು. ಅಂತಹ ಬಾಲ್ಯ ನಮ್ಮ ಮಾನಸಿಕ ನೆಲೆಯಲ್ಲಿ ಮರುಹುಟ್ಟು ಪಡೆದಾಗ, ಮಕ್ಕಳ ನಾಟಕಗಳು ಹುಟ್ಟುತ್ತವೆ."[13]

ಹಾಗಾಗಿ ನಾಟಕಗಳನ್ನು ದೊಡ್ಡವರೇ ಬರೆದರೂ, ಬರೆಯುವಾಗ ಅವರ ಮನಸ್ಥಿತಿ 'ಬಾಲ್ಯ'ಕ್ಕೆ ತಲುಪಿರುತ್ತದೆ ಎಂದಾಯ್ತು. ಆದರೆ ಭಾಷೆ?

ಪ್ರೌಢಭಾಷೆಗೂ ಮಕ್ಕಳ ಭಾಷೆಗೂ ಇರುವ ಮಹತ್ವದ ಅಂತರ ಸರಳತೆ. ಮೂಲ ಭಾಷಾರಚನೆಗೆ ಒಳಪಟ್ಟಂತೆ ಚಿಕ್ಕ ಚಿಕ್ಕ ಶಬ್ದ, ಚಿಕ್ಕ ಚಿಕ್ಕ ವಾಕ್ಯ, ಚಿಕ್ಕ ಚಿಕ್ಕ ಪದಪುಂಜಗಳನ್ನು ಕ್ಲಿಷ್ಟತೆಯಿಲ್ಲದಂತೆ, ಸಂಕೀರ್ಣವಾಗದಂತೆ ಸಹಜವಾಗಿ ಬಳಸುವುದೇ ಸರಳಭಾಷೆಯ ಮುಖ್ಯ ಲಕ್ಷಣ. ಡಾ। ಸಂಗಮೇಶ ಸವದತ್ತಿಯವರು ಹೇಳುವಂತೆ "ಮಕ್ಕಳ ಸಾಹಿತ್ಯದ ಭಾಷೆ ಸರಳವಿದ್ದರೂ ಎಂತೆಲ್ಲ ವಿಶಿಷ್ಟವಾಗಿರುತ್ತದೆ ಎನ್ನುವುದೂ ಒಂದು ಪ್ರಮುಖ ಅಂಶವಾಗುತ್ತದೆ. ಪದಗಳ ಆಯ್ಕೆ, ಅವುಗಳ ಲಾಲಿತ್ಯ, ಪ್ರಾಸಬದ್ಧತೆ, ಚಿಕ್ಕದರಲ್ಲಿಯೇ ಚೊಕ್ಕವಾಗಿ, ಆಕರ್ಷಕವಾಗಿ, ಹಲವು ಅರ್ಥಗಳ ವಿವಿಧ ರೂಪಗಳ ಶಬ್ದಗಳನ್ನು ಚಮತ್ಕಾರಿಕವಾಗಿ ಬಳಸಿರುವಲ್ಲಿ ಅಂತಹ ವಿಶೇಷವನ್ನು ಕಾಣಬಹುದು. ಆದ್ದರಿಂದ ಒಂದು ರೀತಿಯಲ್ಲಿ ಮಕ್ಕಳ ಸಾಹಿತ್ಯದ ಭಾಷಿಕ ಅಧ್ಯಯನವು ವೈಜ್ಞಾನಿಕ ವ್ಯಾಕರಣ ಭಾಗಕ್ಕಿಂತ ಶೈಲಿ ವಿಜ್ಞಾನ, ಅರ್ಥ ವಿಜ್ಞಾನಗಳಿಗೆ ಹೆಚ್ಚು ಸಂಬಂಧ ಪಡುತ್ತದೆ. ಮಕ್ಕಳ ಸಾಹಿತ್ಯ ಭಾಷೆ ತೀರಾ ಸರಳ ವ್ಯಾಕರಣದ ಚೌಕಟ್ಟಿನಲ್ಲಿ ಅಳವಡುವುದರಿಂದಲೇ ಪ್ರಾಯಶಃ ಅದನ್ನು ಕಾಗಕ್ಕ–ಗುಬ್ಬಕ್ಕ ಸಾಹಿತ್ಯವೆಂದು ಹೀಗಳೆಯುತ್ತಾರೇನೋ"[14]

ಮಕ್ಕಳಿಗೆ 'ಮಾತು' ನಿಸರ್ಗದತ್ತವಾದರೂ, ಮಾತು ಕಲಿಯುವುದು ಮಾತನಾಡಿದಷ್ಟು ಸುಲಭವಲ್ಲ. ಅದು ಕಲಿಕೆಯಿಂದಲೇ ಬರುವುದು. ಮಗು ತುಂಬಾ ಶ್ರಮಪಟ್ಟು ಮಾತು ಕಲಿತಿರುತ್ತದೆ. ಮೊದಮೊದಲು ಮಕ್ಕಳು ಗಟ್ಟಿಯಾಗಿ ಮಾತಾನಾಡಿಕೊಂಡೇ ಆಲೋಚಿಸುತ್ತಾರೆ. ಉದಾಹರಣೆಗೆ ರೈಲುಬಂಡಿ ಆಟ ಆಡುವಾಗ ಇತರರಿಗೆ ಕೇಳುವಂತೆ ತನ್ನಷ್ಟಕ್ಕೆ ತಾನೇ " ನಾನು ರೈಲು ಬಂಡೀನಾ.... ಮತ್ತೆ... ನಾನೂ... ರೈಲೂ ಬಂಡೀನಾ.... ಅದು... ಅದ್ರ ಕಂಬಿ ಮೇಲೆ... ಮೇಲೇ... ಕಂಬೀ ಮೇಲೇ ಇದ್ದೀನೀ... ಅದು ಈಗ ಚುಕುಬುಕ್ ಅಂತ... ಹೋಗುತ್ತೆ...." ವೀಕ್ಷಕ ವಿವರಣೆ ನೀಡಿದಂತೆ ಮಾತನಾಡುತ್ತಿರುತ್ತದೆ.[15]

ಮಕ್ಕಳು ತಮ್ಮ ಮಾತುಗಳ ಮೂಲಕ ಯಾರನ್ನೋ ತೃಪ್ತಿಪಡಿಸಬೇಕೆಂಬ

ಇಚ್ಛೆಯನ್ನು ಹೊಂದಿರುವುದಿಲ್ಲ. ಅದಕ್ಕೆ ತಾನು ಕಲಿಯುವುದಷ್ಟೇ ಉದ್ದೇಶ. ಹಾಗಾಗಿ ಅದು ಹಿರಿಯರಿಂದ ದಕ್ಕಿದಷ್ಟನ್ನು ಸ್ವೀಕರಿಸಿ, ಉಳಿದಿದ್ದನ್ನು ಸ್ವಪ್ರಯತ್ನದಿಂದ ಕಲಿಯಲು ಮುಂದಾಗುತ್ತದೆ. ಆ ಕಾರಣದಿಂದಲೇ ಅದರ ಭಾಷೆಯಲ್ಲಿ ವ್ಯಾಕರಣಕ್ಕಿಂತ 'ಪದ'ಗಳಿಗೆ ಪ್ರಾಮುಖ್ಯತೆ ಹೆಚ್ಚು. ಮಕ್ಕಳ ಭಾಷೆಯ ಕುರಿತು ಡಾ॥ ಸಂಗಮೇಶ ಸವದತ್ತಿಯವರು ಮುಂದುವರೆದು ಹೀಗೆ ಹೇಳುತ್ತಾರೆ.

"ಭಾಷೆ ವ್ಯವಹಾರಕ್ಕೆ ಇರುವ ಒಂದು ಸಮರ್ಥ ಸಂವಹನ ಮಾಧ್ಯಮ. ಸಾಹಿತ್ಯದ ಮಟ್ಟಿಗಂತೂ ಅದು ಜೀವನಾಡಿ. ಭಾಷೆ ಪರಿಸರದ ಕೂಸು. ಕಲಿಕೆಯಿಂದ ಬರುವಂಥದು. ಭಾಷೆ ಏಕಕಾಲಕ್ಕೆ ವೈಯುಕ್ತಿಕವೂ. ಸಾಮಾಜಿಕವೂ ಆಗಿರುವ ಪ್ರಯೋಜನಕಾರಿ ಮಾಧ್ಯಮ. ಸಾಂಕೇತಿಕತೆ, ಧ್ವನಿ, ಸಾಮಗ್ರಿಯ ಸ್ವಚ್ಛಂದ ಬಳಕೆ, ವ್ಯವಸ್ಥೆ, ಉತ್ಪಾದಕತೆ ಮುಂತಾದವು ಇದರ ಪ್ರಮುಖ ಲಕ್ಷಣಗಳು. ಮಕ್ಕಳು ಸಾಮಾನ್ಯವಾಗಿ ದೊಡ್ಡವರ ಭಾಷೆಯನ್ನೇ ರೂಢಿಸಿಕೊಳ್ಳಲು ಯತ್ನಿಸುತ್ತಾರೆ. ಆದುದರಿಂದ ಹಂತಹಂತವಾಗಿ ಅವರು ತಮ್ಮದೇ ಆದ ಭಾಷೆಯಿಂದ ಪ್ರೌಢಭಾಷೆಯೆಡೆಗೆ ಸಾಗುತ್ತಾರೆ. ಇದೊಂದು ಪ್ರಕ್ರಿಯೆಯಾಗಿ ನಡೆಯುವಂತಹದು. ಬಾಲ್ಯವು ಹೇಗೆ ಒಂದು ಸ್ಥಿತಿಯಲ್ಲವೋ ಹಾಗೆ ಭಾಷೆಯೂ ಒಂದು ಸ್ಥಿತಿಯಲ್ಲ. ಬಾಲ್ಯ ಹೇಗೆ ಒಂದು ಕ್ರಿಯೆಯಲ್ಲವೋ ಹಾಗೆ ಭಾಷೆಯೂ ಒಂದು ಕ್ರಿಯೆಯಲ್ಲ. ಬಾಲ್ಯ ಒಂದು ಪ್ರಕ್ರಿಯೆ, ಅಂತೆಯೇ ಭಾಷೆಯೂ ಒಂದು ಪ್ರಕ್ರಿಯೆ. ಆದುದರಿಂದ ಮಕ್ಕಳ ಭಾಷೆ, ಸ್ಥಳ, ಕಾಲ, ಪರಿಸರ, ಸಂಸ್ಕೃತಿ, ಶಿಕ್ಷಣ, ನಾಗರಿಕತೆ, ವಯಸ್ಸು, ಮಾತೃಭಾಷೆ ಇತ್ಯಾದಿ ಅಂಶಗಳಿಗೆ ಅನುಗುಣವಾಗಿ ತನ್ನದೇ ಆದ ವೈಶಿಷ್ಟ್ಯಗಳನ್ನು ಹೊಂದಿರುತ್ತದೆ."[16]

ಮಕ್ಕಳ ಭಾಷೆಯನ್ನು ಅಧ್ಯಯನಕ್ಕೆ ಒಳಪಡಿಸಿ ಅದರ ವೈಶಿಷ್ಟ್ಯಗಳನ್ನು ಕಂಡುಕೊಳ್ಳುವ ಹಲವು ಪ್ರಯತ್ನಗಳನ್ನು ಭಾಷಾ ವಿಜ್ಞಾನಿಗಳು ಕೈಗೊಂಡಿದ್ದಾರೆ. ಕನ್ನಡದಲ್ಲಿ ಇಂತಹ ಪ್ರಯತ್ನಗಳು ಕಡಿಮೆ. ಮಕ್ಕಳ ಭಾಷೆಯಲ್ಲಿ ಧ್ವನಿ–ಏರಿಳಿತಗಳು, ಉಚ್ಚಾರದ ಅಸ್ತವ್ಯಸ್ತಗಳು, ಸಡಿಲ ಹೊಂದಾಣಿಕೆಗಳು, ಅನ್ಯ ಪ್ರಭಾವಗಳು, ತಪ್ಪು ಸಹಚರ್ಯಗಳು, ನಾವೀನ್ಯ, ಅನುಕರಣ, ಆತ್ಮಾರ್ಥಕತೆ.... ಮುಂತಾದ ಅನೇಕ ವೈವಿಧ್ಯಗಳು ಇರುವುದನ್ನು ಭಾಷಾ ವಿಜ್ಞಾನಿಗಳು ಗಮನಿಸಿದ್ದಾರೆ. ಒಂದು ಘಟನೆಯನ್ನು ಹಿರಿಯರು ಹ್ರಸ್ವವಾಗಿ ಕೆಲವು ಪದಗಳ ಒಂದು ವಾಕ್ಯದಲ್ಲಿ ಹೇಳಿ ಮುಗಿಸಿದರೆ, ಮಕ್ಕಳು ಅದನ್ನೇ ಅತಿ ವಿಸ್ತಾರವಾಗಿ ಹೇಳುವುದನ್ನು, ಅವರ ಭಾಷೆಯಲ್ಲಿ ಶಾಬ್ದಿಕ ಸಂಗ್ರಹ ಕಡಿಮೆ ಇರುವುದನ್ನು, ಮಾತಿನಲ್ಲಿ ಸ್ವಕೇಂದ್ರಿಯತೆ, ಸಾದೃಶ್ಯ ಸೃಷ್ಟಿ, ಸರಳತೆಗಳು ಇರುವುದನ್ನು ಗಮನಿಸಿದ್ದಾರೆ.

ಮಕ್ಕಳ ನಾಟಕಗಳಲ್ಲಿ ಭಾಷೆಯನ್ನು ಬಳಸುವಾಗ, ಯಾವ ವಯಸ್ಸಿನ ಮಕ್ಕಳನ್ನು ಗುರಿಯಾಗಿಟ್ಟುಕೊಂಡು ಬರೆಯಲಾಗುತ್ತಿದೆ ಎಂಬ ಅಂಶವನ್ನು ನಾಟಕಕಾರರು

ಗಮನಿಸಬೇಕಾಗುತ್ತದೆ. ಮಕ್ಕಳ ಮನಸ್ಸು ಹಸಿಗೋಡೆಯಂತೆ. ಅಲ್ಲಿ ಮೂಡಿದ ಗುರುತು ಹಾಗೆಯೇ ಉಳಿದುಬಿಡುತ್ತದೆ. ಅದರಲ್ಲೂ ಮಕ್ಕಳು ನಾಟಕವನ್ನೇ ನೋಡಲಿ, ಸಾಹಿತ್ಯವನ್ನೇ ಓದಲಿ ಅದರಲ್ಲಿ ತಾದಾತ್ಮ್ಯವನ್ನು ಅನುಭವಿಸುತ್ತಾರೆ. ಅಂದರೆ ಕಥೆಯ ಪಾತ್ರಗಳು ತಾವೇ ಎಂಬಂತೆ ಗ್ರಹಿಸುತ್ತಾ ಮುಂದುವರೆಯುತ್ತಾರೆ. ಅದರಿಂದ ಅಲ್ಲಿಯ ಪಾತ್ರಗಳ ಭಾಷೆ, ಆಸಕ್ತಿ ಮಕ್ಕಳ ಬದುಕಿಗೆ ಆದರ್ಶವಾಗಿರುವಂತೆ ರೂಪುಗೊಂಡಿರಬೇಕು. ಮುಖ್ಯವಾಗಿ ಧನಾತ್ಮಕ ಧೋರಣೆಯನ್ನು ಹೊಂದಿರಬೇಕು. ಮಕ್ಕಳ ಸಾಹಿತ್ಯದಲ್ಲಿ ನಾವು ಭಾಷೆಯನ್ನು ಎಷ್ಟು ಸಮರ್ಥವಾಗಿ ಬಳಸುತ್ತೇವೆಯೋ ಅಷ್ಟರ ಮಟ್ಟಿಗೆ ಅದು ಸತ್ವಪೂರ್ಣ ಎನಿಸಿಕೊಳ್ಳುತ್ತದೆ. ಮಕ್ಕಳಿಗೆ ಹಿಡಿಸುವ ಸುಲಭ ಪ್ರಾಸಬದ್ಧ ಜೋಡಣೆ, ವಾಕ್ಯರಚನೆಗಳ ಜೊತೆಗೆ ಗೇಯತೆ, ಸಂಕ್ಷಿಪ್ತತೆ, ಸಂಕೀರ್ಣವಲ್ಲದ ಭಾವ ನಿರೂಪಣೆ, ಕ್ಲಿಷ್ಟವಲ್ಲದ ಆದರೆ ಕುತೂಹಲ ಕೆರಳಿಸುವಂತಹ ಸನ್ನಿವೇಶಗಳಿರಬೇಕು. ಮಕ್ಕಳ ವಯೋಮಾನಕ್ಕೆ ಸರಿಯಾಗಿ ಅರ್ಥವೈಶಿಷ್ಟ್ಯ ದಕ್ಕುವಂತೆ ಅವುಗಳು ಸಂರಚನೆಗೊಂಡಿರಬೇಕು. ಮಕ್ಕಳ ನಾಟಕಗಳಲ್ಲಿ ಭಾಷೆಯು ಧ್ವನ್ಯಾರ್ಥವನ್ನು ಹೊಂದಿರಬೇಕೆಂದಿಲ್ಲ. ಹೊಂದಿದ್ದರೂ ಅದು ಮಕ್ಕಳಿಗಾಗಿ ಇರಬಾರದು. ಅದು ನಾಟಕ ನೋಡುವ ಹಿರಿಯರಿಗೆ ತಲುಪಿದರೆ ಸಾಕು. ಮಕ್ಕಳ ನಾಟಕ ರಚಿಸುವವರ ಮನಸ್ಸಿನಲ್ಲಿ ಮಕ್ಕಳ ಪೋಷಕರೂ ನಾಟಕ ನೋಡುತ್ತಾರೆಂಬ ಅರಿವಿರಬೇಕು.

ಮಕ್ಕಳ ನಾಟಕದ ಸರಳ ಭಾಷೆಗೆ 'ಜಯಂಟ್ ಮಾಮ'ದ ಕೆಲವು ಸಾಲು ನೋಡಿ.

'ಬೆಟ್ಟವ ಕಡಿವೆವು, ಕಟ್ಟೆಯ ಇಡುವೆವು
ನಾಲೆಯ ಸಿಗಿವೆವು, ಕಲ್ಲು ಹುಗಿವೆವು
ಕಂಬಾ ಹುಗೀತೇವೆ.... ತಂತಿ ಬಿಗೀತೇವೆ'

ಈ ತರಹದ ಗೇಯತೆ, ಸರಳತೆಗಳಿದ್ದರೆ ಮಕ್ಕಳಿಗೆ ಆಡಲೂ ಒಳ್ಳೆಯದು, ನೋಡುವ ಮಕ್ಕಳಿಗೆ ಅನುಭವಿಸಲೂ ಒಳ್ಳೆಯದು. ಒಟ್ಟಿನಲ್ಲಿ ನಾಟಕದಲ್ಲಿ ಬರುವ ಪದಗಳು ಮಕ್ಕಳ 'ಪದಕೋಶ'ದಲ್ಲಿರಬೇಕು. ಇಲ್ಲದಿದ್ದರೂ ಸನ್ನಿವೇಶ, ಸಂದರ್ಭಗಳ ಆಧಾರದಲ್ಲಿ ಅವರ ನಿಲುಕಿಗೆ ದಕ್ಕುವಂತಿರಬೇಕು. ಮಕ್ಕಳು ನಾಟಕಗಳನ್ನು ನೋಡುವುದು ತಂಡಗಳಲ್ಲಿ. ಹಾಗಾಗಿ ತಂಡಗಳನ್ನು ಪ್ರಚೋದಿಸುವಂತಹ, ತುಂಟತನಕ್ಕೆ ಆಹ್ವಾನವೀಯುವಂತಹ ಸಾಹಿತ್ಯ ಅಲ್ಲಿ ಇರದಿದ್ದರೆ ಒಳ್ಳೆಯದು. ಅಕಸ್ಮಾತ್ ಅಂತಹ ಶಬ್ದಗಳು ಅವರಿಗೆ ಮತ್ತೆ ಮತ್ತೆ ಕೇಳಿದರೆ ಅವರು ತುಂಟತನಕ್ಕಾಗಿಯಾದರೂ ಅದನ್ನು ಕಲಿತು, ತಮ್ಮ ಸಹಜ ಸ್ವಭಾವಕ್ಕೆ ಅನುಗುಣವಾಗಿ 'ನಾವು ದೊಡ್ಡವರಂತೆಯೇ' ಎಂದು ಪ್ರದರ್ಶಿಸಲು ತೊಡಗುತ್ತಾರೆ. ನಾಟಕದ ಮಾರನೇ ದಿನ ಅದನ್ನೇ ಆಡಿಕೊಂಡು 'ಖುಷಿಖುಷಿ' ಅನುಭವಿಸುತ್ತಾರೆ.

## 5. ಮಗುವಿನ ಸಮಾಜೀಕರಣ ಮತ್ತು ನಾಟಕ

ಮಕ್ಕಳಿಗೆ ನಾಟಕದಿಂದಾಗುವ ಅನುಕೂಲಗಳ ಪ್ರಶ್ನೆ ಬಂದಾಗ ನಾವು ಮೊಟ್ಟಮೊದಲು ಹೇಳುವುದು ನಾಟಕಗಳಿಂದ ಮಗುವಿನ ಸಮಾಜೀಕರಣ ಕಾರ್ಯ ಸುಲಭವಾಗುತ್ತದೆ ಎಂದು. ಆದರೆ ಹೇಗೆ?

ಸಾಧಾರಣವಾಗಿ ಮಗುವು ಶಾಲೆಗೆ ಹೋಗುವುದಕ್ಕಿಂತ ಮೊದಲು ತನ್ನ ಕುಟುಂಬದ ವಾತಾವರಣದಲ್ಲಿಯೇ ಬೆಳೆಯುತ್ತದೆ. ನಂತರ ಶಾಲೆಗೆ ಹೋಗಲು ಪ್ರಾರಂಭಿಸಿದಾಗ ಅದು ತನ್ನ ವಯಸ್ಸಿನ, ತನ್ನ ಗುಂಪಿನ ಹುಡುಗರೊಂದಿಗೆ ಹೊಂದಿಕೊಳ್ಳಲು ಕಲಿಯುತ್ತದೆ. ಕ್ರಮೇಣ ಅದು ಸಮಾಜದ ಇತರ ವರ್ಗಗಳೊಂದಿಗೆ ಬೆರೆಯಲು ಕಲಿಯುತ್ತದೆ. ಸಾಧಾರಣವಾಗಿ ಇಂದಿನ ಶಾಲೆಗಳು ವರ್ಗೀಕೃತಗೊಂಡಿವೆ. ಕೆಲವು ಶಾಲೆಗಳು (ಸರ್ಕಾರಿ) ಜನಸಾಮಾನ್ಯರಿಗೆ, ಕೆಲವು ಶಾಲೆಗಳು ಮಧ್ಯಮವರ್ಗದವರಿಗೆ, ಕೆಲವು ಶ್ರೀಮಂತ ಮಕ್ಕಳಿಗೆ ಹೀಗೆ.... ಈ ವರ್ಗೀಕರಣ ಸ್ಪಷ್ಟವಾಗಿ ಗೆರೆಕೊರೆದಂತೆ ಕಂಡುಬರುವುದಿಲ್ಲವಾದರೂ ಶಾಲೆಗಳು ವಿಧಿಸುವ ಡೊನೇಷನ್, ಶುಲ್ಕ ಮುಂತಾದವುಗಳ ಆಧಾರದಲ್ಲಿ ಶಾಲೆಗಳು ಮೇಲಿನಂತೆ ವಿಭಜನೆಗೊಳ್ಳುತ್ತಿವೆ. ಇನ್ನೂ ಕೆಲವು ವರ್ಗಗಳೆಂದರೆ ಇಂಗ್ಲೀಷ್ ಕಾನ್ವೆಂಟ್, ಹೆಣ್ಣುಮಕ್ಕಳ ಶಾಲೆ, ಕನ್ನಡ ಶಾಲೆ, ಉರ್ದು ಶಾಲೆ..... ಹೀಗೆ ಹತ್ತು ಹಲವು ಬಗೆಯಲ್ಲಿ ಅವು ವರ್ಗೀಕರಣ ಹೊಂದಿರುತ್ತವೆ. ಅಲ್ಲದೆ ಶಾಲೆಗಳು ಹಿಂದಿನಂತೆ ಏಕೋಪಾಧ್ಯಾಯ ಶಾಲೆಗಳಲ್ಲ. ಹಾಗಾಗಿ ಇಂತಹ ಶಾಲೆಗಳಲ್ಲಿ ಮಕ್ಕಳು ತಮ್ಮ ವಯಸ್ಸಿನ ಮಕ್ಕಳೊಂದಿಗೆ ಮಾತ್ರ ಬೆರೆಯುತ್ತವೆ. ಅವುಗಳಲ್ಲೂ ಮೇಲಿನ ಕಾರಣಗಳಿಂದ ತಮ್ಮ ಲಿಂಗದ, ತಮ್ಮ ವರ್ಗದ, ತಮ್ಮ ಸಮೂಹದ ಮಕ್ಕಳೊಂದಿಗೆ ಮಾತ್ರ ಅವುಗಳ ಒಡನಾಟ. ಹೀಗಾಗಿ ಅವುಗಳು ತಮ್ಮ ಗುಂಪಿನ ಹೊರಗಿನ ಪ್ರಪಂಚದ ಅನುಭವಗಳಿಗೆ ತೆರೆದುಕೊಳ್ಳುವುದೇ ಕಷ್ಟ.

ನಾಟಕದಂತಹ ಸಂದರ್ಭಗಳಲ್ಲಿ ಮಕ್ಕಳು ವಿವಿಧ ವಯಸ್ಸಿನ, ವರ್ಗದ, ಲಿಂಗದ ಮಕ್ಕಳೊಂದಿಗೆ ಬೆರೆಯುತ್ತಾರೆ. ಅವರಿಂದ ಕಲಿತು, ಅವರಿಗೆ ಕಲಿಸುತ್ತಾರೆ. ಈ ಕಾರಣದಿಂದ ನಾಟಕ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಬೆರೆಯುವ ಮಕ್ಕಳು ಹೆಚ್ಚು ಹೆಚ್ಚು ಸಮಾಜಸಮ್ಮತವಾಗಿ, ಹೊಂದಿಕೊಂಡು ಜೊತೆಯಾಗಿ ಬದುಕುವುದನ್ನು ಕಲಿಯುತ್ತಾರೆ. ಮಕ್ಕಳು ಪ್ರಾರಂಭದಲ್ಲಿ ಒಬ್ಬರೇ ಆಡುತ್ತಾರೆ. ಮಗುವಾಗಿದ್ದಾಗ ಅದರ ಆಟಕ್ಕೆ ಯಾವುದೇ ರೀತಿ–ನೀತಿ ಇರುವುದಿಲ್ಲ. ಅದಕ್ಕೆ ಜೊತೆಗಾರ ಬೇಕೆಂದೂ ಇರುವುದಿಲ್ಲ. ಅಲ್ಲಿ ಸೋಲು ಗೆಲುವು ಇರುವುದಿಲ್ಲ. ಕ್ರಮೇಣ ಮಗುವು ಕುಟುಂಬದ ಇತರರೊಂದಿಗೆ ಆಡಲು ಪ್ರಾರಂಭಿಸುತ್ತದೆ. ಆಗ ಅದಕ್ಕೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಒದಗುತ್ತವೆ. ಸಡಿಲ ಕಟ್ಟುಪಾಡುಗಳಿಗೆ ಒಳಪಡಬೇಕಾಗುತ್ತದೆ. ಮುಂದೆ

ತಂಡಗಳಲ್ಲಿ ಆಡತೊಡಗಿದಾಗ ಆಟದ ಶಿಸ್ತುಗಳು ಮುಖ್ಯವಾಗುತ್ತವೆ. ನಿಯಮಗಳಿಗೊಳಪಟ್ಟು ಅದು ಕ್ರಿಯೆಯನ್ನು ನಡೆಸಬೇಕಾಗುತ್ತದೆ. ನಾಟಕವೂ ಮಕ್ಕಳಿಗೆ ಇದನ್ನೇ ಕಲಿಸುತ್ತದೆ. ನಾಟಕವು ಒಂದು ಜೀವಂತ ಕ್ರಿಯೆಯಾದ್ದರಿಂದ, ಅದು ಅಲ್ಲಿಯೇ ಅನಾವರಣಗೊಳ್ಳಬೇಕಾದುದರಿಂದ, ನಾಟಕದಲ್ಲಿ ಪಾತ್ರ ವಹಿಸುವ ಮಗುವು ಹಲವಾರು ಮಿತಿಗಳ ನಡುವೆ ತನಗೊಪ್ಪಿಸಿದ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ. ಇದರಿಂದ ಮಗುವು ಪರಿಮಿತಿಗಳ ನಡುವೆ ಬದುಕುವ ಅನಿವಾರ್ಯವನ್ನು ಕಲಿಯುತ್ತದೆ.

ಇದಕ್ಕಿಂತಲೂ ಮುಖ್ಯವಾಗಿ ನಾಟಕವೊಂದು ಸಾಮೂಹಿಕ ಕ್ರಿಯೆ. ಇಲ್ಲಿ ಗೆಲ್ಲುವುದು ಒಬ್ಬರಲ್ಲ, ಸೋಲುವುದೂ ಒಬ್ಬರಲ್ಲ. ಗೆದ್ದರೆ ಎಲ್ಲರೂ ಒಟ್ಟಿಗೆ ಗೆಲ್ಲುವುದು, ಸೋತರೆ ಸಾಮೂಹಿಕ ಸೋಲು. ಬದುಕಿನಲ್ಲಿ ವೈಯುಕ್ತಿಕ ಮೆರೆದಾಟವೇ ಹೆಚ್ಚಾಗುತ್ತಿರುವ ಇಂದಿನ ಸಂದರ್ಭದಲ್ಲಿ ಮಕ್ಕಳಿಗೆ ಈ ತರಹದ ತಂಡದ ಮನೋಭಾವವನ್ನು ಬೆಳೆಸುವ ಅಗತ್ಯವಿದೆ. ಅದರಲ್ಲೂ ಪ್ರಜಾಪ್ರಭುತ್ವದಂತಹ ರಾಜಕೀಯ ವ್ಯವಸ್ಥೆ ಯಶಸ್ವಿಯಾಗಬೇಕಾದರೆ ಮಕ್ಕಳಿಗೆ ವೈಯುಕ್ತಿಕ ಗೆಲುವಿಗಿಂತ ಸಾಮೂಹಿಕ ಗೆಲುವು ಮುಖ್ಯ ಎಂಬುದನ್ನು ನಾವು ಕಲಿಸಬೇಕಾಗುತ್ತದೆ. All of us is powerful than any of us. 'ನಾವೆಲ್ಲರೂ ಸೇರಿದರೆ ನಮ್ಮಲ್ಲಿಯ ಪ್ರತಿಯೊಬ್ಬನಿಗಿಂತಲೂ ಬಲಶಾಲಿಗಳಾಗುತ್ತೇವೆ' ಎಂಬಂತಹ ಮಾತುಗಳು ಮಕ್ಕಳ ಅನುಭವಕ್ಕೆ ಬರುವಂತಾಗಲು ನಾಟಕಗಳಂತಹ ಸಮುದಾಯ ಚಟುವಟಿಕೆ ಬಹಳ ಮುಖ್ಯ.

ಇಂತಹ ತಂಡಗಳಲ್ಲಿ ಹೇಗೆ ಗೆಲುವಿಗೆ ಒಬ್ಬರ ಯಶಸ್ಸು ಕಾರಣವಾಗುವುದಿಲ್ಲವೋ, ಸೋಲಿಗೂ ಒಬ್ಬರ ವೈಫಲ್ಯ ಕಾರಣವಲ್ಲ. ತಂಡದ ಪ್ರತಿ ಮಗುವಿಗೂ, ತಂಡದಲ್ಲಿ ತಾನೊಬ್ಬ, ಬಹುಮುಖ್ಯ ಅಂಗ ಎಂಬ ಭಾವನೆ ಬೆಳೆಯುತ್ತದೆ. ಉದಾಹರಣೆಗೆ ಕಾಡಿನ ಸನ್ನಿವೇಶವನ್ನು ಮಕ್ಕಳನ್ನೇ ಬಳಸಿ ನಿರ್ಮಿಸಿದ್ದೇವೆ ಎಂದುಕೊಳ್ಳೋಣ. ಆಗ 'ಕೀಳರಿಮೆ' ಇರುವ ಒಬ್ಬ ಹುಡುಗನಿಗೆ "ನೋಡು, ಇಡೀ ಕಾಡಿನಲ್ಲಿ ನೀನೊಬ್ಬ ಎಡವಿದೆ ಎಂತಾದರೆ, ಇವರಷ್ಟೂ ಜನ ಮರವಾಗಿ ನಿಂತಿದ್ದೂ ವ್ಯರ್ಥವಾಗುತ್ತದೆ. ನಿನ್ನಿಂದ ನಾಟಕ ಹಾಳಾಗಿಬಿಡುತ್ತದೆ" ಎಂದರೆ ಅವನ ಕೀಳರಿಮೆ ಹೆಚ್ಚಾದೀತು. ಅದರ ಬದಲು, "ನೋಡು, ಇದೊಂದು ಪ್ರಮುಖವಾದ ಸನ್ನಿವೇಶ. ನಿಮ್ಮ ಪ್ರತಿಯೊಬ್ಬರ ಪಾತ್ರವೂ ಎಷ್ಟು ಮುಖ್ಯವೆಂದರೆ, ಯಾರು ಸ್ವಲ್ಪ ಓರೆಕೋರೆ ನಿಂತರೂ, ಇಡೀ ನಾಟಕ ಹಾಳಾಗಿಬಿಡಬಹುದು. ನೀನು ಇಡೀ ನಾಟಕದ ಬೆನ್ನೆಲುಬು. ನಾಟಕ ಚೆನ್ನಾಗಿ ನಡೆಯಲು ನೀನು ಬಹಳ ಮುಖ್ಯ. ಎಲ್ಲರಂತೆ ಇಡೀ ಗುಂಪಿನಲ್ಲಿ ನೀನೂ ಮುಖ್ಯ" ಎಂದರೆ ಅವನಿಗೆ ತನ್ನ ತಂಡದಲ್ಲಿ ತಾನೂ ಒಬ್ಬ ಪ್ರಮುಖ ಸದಸ್ಯ ಎಂಬ ಭಾವನೆ ಬೆಳೆದು ಕೀಳರಿಮೆ ಕಡಿಮೆಯಾಗುತ್ತಾ ಬರುತ್ತದೆ. ನಾಟಕ ಮಕ್ಕಳಿಗೆ ಕೊಡಬೇಕಾದ್ದು ಇಂತಹ ಗುಣಗಳನ್ನು.

ಇನ್ನು ಕೆಲವು ಮಕ್ಕಳಿಗೆ ಅವರ ಹಿರಿಯರಿಂದ ಅಥವಾ ಬೇರೆ ಬೇರೆ ಕಾರಣಗಳಿಂದ ತಾವೇ ಮೇಲೆಂಬ 'ಅಹಂಕಾರ' ಇರಬಹುದು. ಇಂತಹ ಮೇಲರಿಮೆ ಅಳಿಯಲೂ ನಾಟಕವೊಂದು ಮದ್ದು. ಹತ್ತು ಜನರ ನಡುವೆ ಒಂದಾಗಿ ನಿಲ್ಲಲೇಬೇಕಾಗುವ ನಾಟಕದಲ್ಲಿ, 'ಇವನು ರ್‍ಯಾಂಕ್ ಸ್ಟೂಡೆಂಟ್. ಇವನು ಎಸ್.ಪಿ. ಮಗ' ಎನ್ನುವ ತಾರತಮ್ಯ ಇರುವುದಿಲ್ಲ. ನಾಟಕದಲ್ಲಿ ಶಾಲೆಯ ಹೆಡ್‌ಮಿಸ್ ಮಗ ಕೆಲಸಗಾರ ನಾಗಬಹುದು, ಜವಾನನ ಮಗ ಯಜಮಾನನಾಗಬಹುದು. ಮಕ್ಕಳೊಳಗೆ ಉದ್ಭವಿಸುವ 'ತಾನು ಉತ್ತಮ' ಎಂಬ ಮೇಲರಿಮೆಯ ಭಾವನೆಗಳು ಅಳಿಯುವುದಕ್ಕೆ ನಾಟಕವೊಂದು ಸೂಕ್ತ ಮಾಧ್ಯಮ.

ನಾಟಕದಲ್ಲಿ ಭಾಗವಹಿಸುವ ಮಕ್ಕಳು ಎರಡು ರೀತಿಯಿಂದ ಸಮಾಜೀಕರಣಕ್ಕೆ ಒಳಗಾಗುತ್ತಾರೆ. ಪಾತ್ರವಹಿಸುವ ಮಕ್ಕಳು–ಮಕ್ಕಳ ನಡುವೆ, ಹಾಗೆಯೇ ಪಾತ್ರವಹಿಸುವ ಮಕ್ಕಳು ಮತ್ತು ಪ್ರೇಕ್ಷಕರ ನಡುವೆ.

ನಾಟಕದ ಸಂದರ್ಭದಲ್ಲಿ ಮಕ್ಕಳು ಮೊದಲು ತಮ್ಮನ್ನು ಅರ್ಥಮಾಡಿಕೊಳ್ಳುತ್ತಾರೆ. ಕಿತ್ತಾಡುತ್ತಾರೆ. ರಾಜಿಯಾಗುತ್ತಾರೆ, ಆಡುತ್ತಾರೆ, ಆಡಿಕೊಳ್ಳುತ್ತಾರೆ, ಒಂದಾಗುತ್ತಾರೆ. ಕೊನೆಗೊಂದು ತಂಡವಾಗಿ ನಾಟಕ ಪ್ರದರ್ಶಿಸುತ್ತಾರೆ. ತರಬೇತಿಯ ಪ್ರಾರಂಭದ ದಿನ, ಜಾಣನೆನ್ನಿಸಿಕೊಂಡ ಹುಡುಗ ದಡ್ಡನೆನ್ನಿಸಿಕೊಂಡವನನ್ನು ಮಾತನಾಡಿಸದೆ ಇರಬಹುದು. 'ಬಾಯ್ಸ್' 'ಗರ್ಲ್ಸ್'ನ್ನು ಮಾತನಾಡಿಸದೇ ಇರಬಹುದು. ಕ್ರಮೇಣ ನಾಟಕದ ತರಬೇತಿ ಮುಂದುವರಿದಂತೆ, ಥಿಯೇಟರ್ ಗೇಮ್ಸ್ ಪ್ರಾರಂಭವಾಗುತ್ತಿದ್ದಂತೆ, ಒಬ್ಬರಿಗೊಬ್ಬರು ಅನಿವಾರ್ಯ ಎಂದು ತಿಳಿದು, ಎಲ್ಲರೂ ಸೇರಿದರೇ ತಂಡವೆಂಬ ಭಾವನೆ ಬೆಳೆದು ಮಕ್ಕಳು ಒಂದಾಗುತ್ತಾರೆ. ಮುಂದೆ ನಾಟಕದ ದಿನ ಅವರು ತಮ್ಮೊಳಗಿನ 'ನಟ'ನನ್ನು, ತಮ್ಮ ಪಾತ್ರವನ್ನು, ಆ ಪಾತ್ರದ ಭಾವವನ್ನು ಪ್ರೇಕ್ಷಕರಿಗೆ ತಲುಪಿಸುತ್ತಾರೆ. ಹೀಗೆ ತಲುಪಿಸಲು ತಮಗಿರುವ ಎಲ್ಲ ಸಂವಹನ ಮಾಧ್ಯಮವನ್ನೂ ಬಳಸುತ್ತಾರೆ. ಅದು ಕೇವಲ ಅಭಿನಯವಾಗಿರಬಹುದು. ಮಾತುಗಳಾಗಿರಬಹುದು... ಹಾಡಾಗಿರಬಹುದು... ಕುಣಿತವಾಗಿರಬಹುದು. ಅದೆಲ್ಲವನ್ನೂ ಆಯಾ ಮಾಧ್ಯಮಕ್ಕೆ ಬೇಕಾದ ಶಿಸ್ತು–ಸಂಯಮಗಳೊಂದಿಗೆ, ಜಾಣ್ಮೆ ಜಾಗರೂಕತೆಗಳೊಂದಿಗೆ ಪ್ರೇಕ್ಷಕರಿಗೆ ತಲುಪಿಸುತ್ತಾರೆ. ಹೀಗೆ ತಲುಪಿಸುವಲ್ಲಿ ನಾಯಕ ನಾಯಕನಾಗಿರುವುದಿಲ್ಲ, ಅವನು ನಾಯಕನ ಪಾತ್ರಧಾರಿ ಮಾತ್ರವಾಗಿರುತ್ತಾನೆ.

ಹೀಗೆ ಮಕ್ಕಳು ತಾವು ಇನ್ನೊಂದಾಗುವ ಅಪೂರ್ವ ಅನುಭವ ಪಡೆಯುತ್ತಾರೆ. ತಾನೊಬ್ಬ ರಾಕ್ಷಸನಾಗಿ ಅವನ ಗತ್ತು ಗೈರತ್ತುಗಳನ್ನು ತೋರಿಸಿದ ಮಗು, ಏಕಕಾಲದಲ್ಲಿ 'ರಾಕ್ಷಸ'ನೊಳಗಿರುವ ಸುಳ್ಳನ್ನೂ, ತನ್ನೊಳಗಿರುವ 'ಸತ್ಯ'ವನ್ನೂ, ತನ್ನ ಮಟ್ಟಿಗೆ ತಾನು ಅನುಭವಿಸುತ್ತಾನೆ. ಪಾತ್ರವಾಗುವ, ಕತೆಯಾಗುವ, ಪ್ರೇಕ್ಷಕರ ಕಣ್ಣಲ್ಲಿ ಭಾವವಾಗುವ

ತನ್ನ ಸಾಮರ್ಥ್ಯವನ್ನು ಕಂಡುಕೊಂಡ ಮಗುವು ಪ್ರದರ್ಶನವನ್ನು ಸಂಭ್ರಮವನ್ನಾಗಿ ಸ್ವೀಕರಿಸುತ್ತದೆ. ನೂರಾರು ಜನ ಮೆಚ್ಚಿ ಚಪ್ಪಾಳೆ ತಟ್ಟಿದಾಗ ಮಾನವ ಸಹಜವಾದ ತನ್ನತನದ 'ಪ್ರದರ್ಶನ'ವನ್ನು ಮಾಡಿದ ಹೆಮ್ಮೆಯನ್ನು ಮಗು ಪಡೆಯುತ್ತದೆ. ಮತ್ತೆ ನೆನಪಿಸಿಕೊಳ್ಳೋಣ–ಇದು ಕೇವಲ ಒಬ್ಬನ ಗೆಲುವಲ್ಲ. ಇದು ಕೇವಲ ಒಬ್ಬನ ಅನುಭವವಲ್ಲ. ಇಡೀ ತಂಡದ್ದು. ಇಡೀ ತಂಡ ಒಂದಾಗಿ ಕುಣಿಯುತ್ತದೆ. ಇಡೀ ತಂಡ ಒಂದಾಗಿ ಸಂಭ್ರಮಿಸುತ್ತದೆ. ಬಾಲ್ಯದ ಇಂತಹ ಸಂಭ್ರಮಗಳ ನೆನಪುಗಳೇ ಮುಂದಿನ ಜೀವನಕ್ಕೆ ಬೇಕಾಗುವ ಬುತ್ತಿಗಳು. ಈ ಸಂದರ್ಭದಲ್ಲಿ ಮನಶಾಸ್ತ್ರಜ್ಞರ ಒಂದು ಮಾತನ್ನು ಗಮನಿಸೋಣ.

"ಮನೋರೋಗ ಚಿಕಿತ್ಸಾಲಯಗಳಲ್ಲಿರುವ ವಯಸ್ಕರ ಮೇಲೆ ನಡೆಸಿದ ಸಂಶೋಧನೆಗಳಿಂದ ಅವರು ಬಾಲ್ಯಾವಧಿಯಲ್ಲಿ ಯಾರೊಡನೆಯೂ ಸೇರುತ್ತಿರಲಿಲ್ಲ, ಲಜ್ಜೆ ಸ್ವಭಾವದವರಾಗಿದ್ದು, ಉತ್ಸಾಹಹೀನರಾಗಿದ್ದರು, ಅತಿಯಾಗಿ ಹಗಲುಗನಸು ಕಾಣುತ್ತಿದ್ದರು ಮತ್ತು ಏಕಾಂಗಿಯಾಗಿದ್ದರು ಎಂದು ತಿಳಿದುಬರುತ್ತದೆ. ಅವರಿಗೆ ಸ್ನೇಹ-ಸಹವಾಸ ಅತಿ ಕಡಿಮೆಯಾಗಿತ್ತು ಮತ್ತು ಅವರು ಯಾವ ಅಭಿರುಚಿಯನ್ನೂ ತೋರುತ್ತಿರಲಿಲ್ಲವೆಂದು ಕಂಡುಬಂದಿರುತ್ತದೆ."[17]

ಪ್ರಾಯಶಃ ಈ ಸಂಶೋಧನೆಯಲ್ಲಿ ಹೇಳಿದ ನ್ಯೂನತೆಗಳೆಲ್ಲವೂ ನಾಟಕಗಳಿಂದ ಅಳಿಯಲು ಸಾಧ್ಯ. ಲಜ್ಜೆ ಸ್ವಭಾವದ ಎಷ್ಟೋ ಮಕ್ಕಳು ಸಮೂಹದಲ್ಲಿ ಬಾಯಿ ಬಿಡಲೂ ನಾಚಿಕೊಳ್ಳುತ್ತಾರೆ. ಅಂತವರನ್ನು ನಾವು ನಾಟಕಗಳಿಗೂ ಮೊದಲು ಥಿಯೇಟರ್ ಗೇಮ್ಸ್‌ನಲ್ಲಿ, ಆಟ ಆಡಿಸುತ್ತಾ ಆಡಿಸುತ್ತಾ ಬಾಯಿ ಬಿಡಿಸಬೇಕು. ಅವರನ್ನು ಮೊದಮೊದಲು ಸಮೂಹ ಧ್ವನಿಗಳ ಬಳಕೆಗೆ ಬಳಸಬೇಕು. ಕ್ರಮೇಣ ಅವರಿಗೆ ಅವರ ಲಜ್ಜೆ ಸ್ವಭಾವ ಅಳಿಯುತ್ತಾ ಬರುತ್ತದೆ. ಲಜ್ಜೆ ಸ್ವಭಾವವನ್ನು ಅಳಿಸುವುದಕ್ಕೆ ನಾಟಕದಂತಹ ಸಮರ್ಥ ಮಾಧ್ಯಮ ಇನ್ನೊಂದಿಲ್ಲ. ಮಕ್ಕಳಲ್ಲಿ ಸ್ವಾಭಾವಿಕವಾಗಿ 'ಆತ್ಮ ಪ್ರದರ್ಶನ' ಪ್ರವೃತ್ತಿ ಇರಬೇಕು ; ಇರುತ್ತದೆ. ಆದರೆ ಕೆಲವು ಮಕ್ಕಳು ಇದರ ಕೊರತೆಯಿಂದ ಯಾವುದರಲ್ಲಿಯೂ ಉತ್ಸಾಹ ತೋರದೆ ಇದ್ದುಬಿಡುತ್ತಾರೆ. ಅಂತಹವರನ್ನು ಗುಂಪಿನ ನಡುವೆ ಸೇರಿಸಿಕೊಂಡು ಮುಂದುವರೆದರೆ ಕ್ರಮೇಣ ಅವರು ಸುಧಾರಿಸುತ್ತಾ ಬರುತ್ತಾರೆ. ಬಿ.ವಿ.ಕಾರಂತರು ಹೇಳುವಂತೆ ಅಂಥವರಲ್ಲಿ ಮೊದಲು 'ಆತ್ಮವಿಶ್ವಾಸ' ಬೆಳೆಸಬೇಕು. ನಂತರ ಮಗುವಿಗೆ ಸ್ವಾಭಾವಿಕವಾದ 'ಆತ್ಮ ಪ್ರದರ್ಶನ' ಗುಣ ಪ್ರಕಟವಾಗುತ್ತದೆ. ಮಗು ಗುಂಪಿನಲ್ಲಿ ತಾನು ಯಾರಿಗೂ ಕಡಿಮೆ ಇಲ್ಲ ಎನ್ನುವಂತೆ ಬೆರೆಯುತ್ತದೆ.

ನಾಟಕದ ಸಂದರ್ಭದಲ್ಲಿ ಗಮನಿಸಬೇಕಾದ ಇನ್ನೊಂದು ಬಹುಮುಖ್ಯ ಅಂಶವೆಂದರೆ ಮಕ್ಕಳ ಗುಂಪನ್ನು ಭೇದವಿಲ್ಲದಂತೆ, ಇಡೀ ತಂಡವನ್ನು ಒಂದು

ಸಮೂಹವಾಗಿ ನೋಡುವುದು, ಸಮತೋಲನವನ್ನು ಕಾಯ್ದುಕೊಳ್ಳುವುದು. ನಾಟಕದ ಪೂರ್ವ ತಯಾರಿಯಲ್ಲಿ ಬಳಸುವ ಧ್ವನಿ ವ್ಯಾಯಾಮಗಳಿಂದ, ಮಾತಿನ ಆಟಗಳಿಂದ ಸ್ಪಷ್ಟವಾಗಿ ಮಾತನಾಡಲಾರದವರು, ತೊದಲುವವರು, ಉಗ್ಗುವವರು ಕ್ರಮೇಣ ಸುಧಾರಿಸುತ್ತಾ ಬರುತ್ತಾರೆ. ಮಕ್ಕಳ ರಂಗಭೂಮಿಯಿಂದ ನಾವು ಅಂಗವಿಕಲರನ್ನು ಮುಖ್ಯವಾಹಿನಿಗೆ ಮುಜುಗರವಿಲ್ಲದಂತೆ ಸೇರಿಸುವುದಕ್ಕೆ ಸಾಧ್ಯವಾಗುತ್ತದೆ. ಈ ದಿಶೆಯಲ್ಲಿ ನಮ್ಮ ರಂಗಭೂಮಿ ಇನ್ನೂ ಹೆಚ್ಚಿಗೆ ಕಾರ್ಯ ಪ್ರವೃತ್ತವಾಗಬಹುದು. ಈ ಸಂದರ್ಭದಲ್ಲಿ ಹೊಸ್ತೋಟ ಮಂಜುನಾಥ ಭಾಗವತರು ಅಂಧಮಕ್ಕಳಿಗೆ ಯಕ್ಷಗಾನ ಹೇಳಿಕೊಟ್ಟ ಉದಾಹರಣೆಯನ್ನು ಗಮನಿಸಬಹುದಾಗಿದೆ. ನಾವು ನಮ್ಮ ಮಕ್ಕಳ ರಂಗಭೂಮಿಯನ್ನು ಅಂಗವಿಕಲ ಮಕ್ಕಳಿಗೆ, ಬುದ್ಧಿಮಾಂದ್ಯ ಮಕ್ಕಳಿಗೆ ವಿಸ್ತರಿಸುವ ಸಾಧ್ಯತೆ(ಮಾದರಿಗಾಗಿ ನಡೆಸಿದ ಒಂದೆರಡು ಪ್ರಯತ್ನಗಳನ್ನು ಬಿಟ್ಟು)ಗಳ ಕುರಿತು ಹೆಚ್ಚಿನ ಶ್ರದ್ಧೆ ವಹಿಸಬೇಕಾಗಿದೆ.

ಮಕ್ಕಳನ್ನು ನಾಟಕದಂತಹ ಚಟುವಟಿಕೆಗಳಿಗೆ ತೊಡಗಿಸಿ, ಅವುಗಳ ನಡುವೆ ನಾವು ನಿಂತಾಗ ನಾವೂ ಆ ಮಕ್ಕಳ ಮೂಲಕ ನಮ್ಮ ಬಾಲ್ಯಕ್ಕೆ ಮರಳುತ್ತೇವೆ. ಬಾಲ್ಯದ ಸುಂದರ ನೆನಪುಗಳಿಂದ, ಸಂಭ್ರಮದಿಂದ ನಮ್ಮ ಭಾವಪ್ರಪಂಚ ತುಂಬಿಹೋಗುತ್ತದೆ. ಮಕ್ಕಳು ದೊಡ್ಡವರಾಗಿ ಬೆಳೆದಾಗ ಬಾಲ್ಯದ ಇಂತಹ ಸಂಭ್ರಮಗಳ ನೆನಪುಗಳಿಲ್ಲದಿದ್ದರೆ, ಬದುಕಿನ ದುರ್ಭರ ಪ್ರಸಂಗಗಳಲ್ಲಿ ಅವರು ಖಿನ್ನರಾಗಿಬಿಡುತ್ತಾರೆ. ಬಾಲ್ಯದ ಸಂಭ್ರಮಗಳ ಶ್ರೀಮಂತ ನೆನಪುಗಳೇ ದೊಡ್ಡವರಾದಾಗ ಅವರ ಭಾವ ಪ್ರಪಂಚ ಖಾಲಿಯಾಗದಂತೆ, ಭಾವದಾರಿದ್ರ್ಯ ಉಂಟಾಗದಂತೆ ಕಾಪಾಡುವ ಭಾವ-ಬುತ್ತಿ. ಈ ಕಾರಣಕ್ಕಾಗಿಯಾದರೂ ನಾವು ನಮ್ಮ ಮಕ್ಕಳ ಬಾಲ್ಯವನ್ನು ಸಂಭ್ರಮಗಳಿಂದ ಶ್ರೀಮಂತಗೊಳಿಸಬೇಕು. ಮಕ್ಕಳ ಸಮಾಜೀಕರಣಕ್ಕೆ ಮುಖ್ಯವಾದ ಇನ್ನೊಂದು ಅಂಶವೆಂದರೆ ಮಕ್ಕಳು ಇನ್ನೊಬ್ಬರನ್ನು ಅರ್ಥಮಾಡಿಕೊಳ್ಳುವುದು. ಅಂದರೆ ಅವರ ಪಾತ್ರವನ್ನು, ಪರಿಸ್ಥಿತಿಯನ್ನು ಆದಷ್ಟೂ ತಿಳಿದುಕೊಳ್ಳುವುದು. ಸಮಾಜದ ಸುಖದುಃಖಗಳನ್ನು ನಿಧಾನವಾಗಿ ಅರ್ಥಮಾಡಿಕೊಳ್ಳುತ್ತಾ ಹೋಗುವುದೇ ವ್ಯಕ್ತಿತ್ವ ನಿರ್ಮಾಣ.

ಉದಾಹರಣೆಗೆ ನಾವು ಮಕ್ಕಳಿಗೆ ಬಡತನದ ಬಗ್ಗೆ ಭಾಷಣ ಮಾಡಿ, ಬಡತನವೆಂದರೇನು ಎಂದು ವಿವರಿಸಬಹುದು. ಕೆಳಮಧ್ಯಮವರ್ಗದ ಮಕ್ಕಳಿಗೆ ಅದು ಅರ್ಥವಾಗಲೂಬಹುದು. ಆದರೆ ಮೇಲ್ವರ್ಗದ, ಮೇಲುಮಧ್ಯಮವರ್ಗದ ಮಕ್ಕಳಿಗೆ ನಾವು ವಿವರಿಸುವ ಬಡತನದ ವಿವರಗಳು 'ಅರ್ಥವಾದಂತೆ' ಅನ್ನಿಸಿದರೂ ಅನುಭವಕ್ಕೆ ಬರುವುದಿಲ್ಲ. ಅವರಿಗೆ ಅಂತಹ 'ಅನುಭವ' ನಾಟಕಗಳಿಂದ ಆಗಲು ಸಾಧ್ಯ. ನಾಟಕಗಳಲ್ಲಿ ಬಡ ಹುಡುಗಿಯೊಂದು, ಮೂರು ದಿನಗಳಿಂದ ಉಪವಾಸವಿರುವ, ತಂದೆಯಿಲ್ಲದ... ತಾಯಿ ಕಾಣೆಯಾದ ... ವಿದ್ರಾವಕ ಘಟನೆಯನ್ನು ಎದುರೆದುರೇ ಹಸಿಹಸಿಯಾಗಿ

ಪ್ರದರ್ಶಿಸಿದಾಗ, ಇಲ್ಲವೇ ಅದೇ ಮಗು ಅಂತಹ ಪಾತ್ರದಲ್ಲಿ ತಲ್ಲೀನವಾಗಬೇಕಾದ ಪ್ರಸಂಗ ತಂದಾಗ ಅದಕ್ಕೆ ಬಡತನ/ಹಸಿವು ಮುಂತಾದ ಅರ್ಥವಾಗದ ಭಾವಗಳು ಅನುಭವವಾಗಲು ಸಾಧ್ಯ. ಹಾಗಾಗಿ ಮಕ್ಕಳಿಗೆ ತಾನು, ತಾನಲ್ಲದ ಇನ್ನೊಂದಾಗುವ ಅನುಭವ ಕೊಡುವ ನಾಟಕ ಸಮಾಜದ ಬಗ್ಗೆ ಹೆಚ್ಚಿನ ಅರಿವನ್ನು ಮೂಡಿಸುತ್ತದೆ; ಮೂಡಿಸುವಂತೆ ಮಕ್ಕಳ ನಾಟಕಗಳು ಇರಬೇಕು.

ಇನ್ನೊಂದು ಮುಖ್ಯವಾದ ಸಂಗತಿಯೆಂದರೆ ನಾವು ನಮ್ಮ ಆಧುನಿಕ ಬದುಕಿನಲ್ಲಿ ಮಕ್ಕಳಿಗೆ ನಿತ್ಯವೂ ಗೆಲ್ಲುವುದನ್ನೇ ಹೇಳಿಕೊಡುತ್ತಿದ್ದೇವೆ. ಅದರಲ್ಲೂ ಸಾಮೂಹಿಕ ನೆಲೆಯಿಂದ ಕಿತ್ತು 'ತಾನೊಂದು ಪ್ರತ್ಯೇಕ' ಎನ್ನುವ ಭಾವನೆಯನ್ನೂ, ಗೆಲ್ಲುವುದೇ ಜೀವನದ ಪರಮಗುರಿ ಎಂಬ ಭಾವನೆಯನ್ನೂ ಬಿತ್ತುತ್ತಿದ್ದೇವೆ. ಸೋಲು ಎಂಬುದು ಮುಂದೂಡಲ್ಪಟ್ಟಿರುವ ಗೆಲುವು ಎಂಬುದನ್ನು ಹೇಳಿಕೊಡದೆ, ನಿತ್ಯನಿರಂತರವಾಗಿ ಗೆಲ್ಲುತ್ತ ಸಾಗುವುದೇ ಬದುಕು ಎಂದು ಬಿಂಬಿಸುತ್ತಾ ಸಾಗುವ ನಾವು, ಮಗುವು ಕಾರಣಾಂತರಗಳಿಂದ ನಮ್ಮ ನಿರೀಕ್ಷೆಯನ್ನು ಈಡೇರಿಸದೆ ಇದ್ದಾಗ ಹತಾಶರಾಗುತ್ತೇವೆ. ನಾವು ಹತಾಶರಾಗುವುದೇ ಅಲ್ಲದೆ ಮಗುವಿನ ಎಳೆಯ ಮನಸ್ಸಿನ ಮೇಲೆ ಚೇತರಿಸಿಕೊಳ್ಳಲಾರದ ಪೆಟ್ಟು ನೀಡುತ್ತೇವೆ. ಕೆಳಹಂತದಲ್ಲಿ ನಮ್ಮ ಮಗುವು ಸೋತಾಗ ಅದಕ್ಕೆ ಸೋಲೊಪ್ಪಿಕೊಳ್ಳಲು ಬಿಡದೆ ವ್ಯವಸ್ಥೆಯ ದೋಷವನ್ನು ಎತ್ತಿ ಆಡುತ್ತೇವೆ. ಮಗುವೂ ಅದನ್ನು ನಂಬಿ, ತನ್ನ ಸೋಲಿಗೆ ತನಗಿಂತ ಉತ್ತಮವಾಗಿ ನಿರ್ವಹಿಸಿದ ಇನ್ನೊಬ್ಬ ಇರಬಹುದು ಎಂದು ನಂಬದೆ, 'ತನಗೆ ಇಂದು ಅನ್ಯಾಯವಾಯಿತು, ನಾಳೆ ನಾನು ಹೇಗೂ ಗೆದ್ದೇ ಗೆಲ್ಲುತ್ತೇನೆ' ಎಂಬ ಭಾವನೆಯೊಂದಿಗೆ ಬೆಳೆಯುತ್ತದೆ. ಮುಂದೊಂದು ದಿನ ಸ್ಪರ್ಧೆ ತೀವ್ರವಾದಾಗ ಅದರ ಟೊಳ್ಳುತನ ಪ್ರಕಟವಾಗಿ ಅದು ಅನಿವಾರ್ಯವಾಗಿ ಸೋಲೊಪ್ಪಬೇಕಾಗುತ್ತದೆ. ಆಗ ನಾವು ಅದುವರೆಗೂ ಸಾಧಿಸಿಕೊಂಡು ಬಂದ ನಮ್ಮ ಶ್ರೇಷ್ಠತೆಯ ವ್ಯಸನದಿಂದ ಹೊರಬರಲಾರದೆ ಮಗುವನ್ನು ಹಳಿಯುತ್ತೇವೆ. ಆದರೆ ಇದಾವುದನ್ನೂ ನಿರೀಕ್ಷಿಸದ ಮಗುವು ಸೋಲಿನಿಂದಾಗಿ ಕಂಗೆಟ್ಟು, ಅದರ ಆಘಾತದಿಂದ ಹೊರಬರಲಾರದೆ ಆತ್ಮಹತ್ಯೆಯಂಥ ಅಂತಿಮ ನಿರ್ಧಾರಕ್ಕೆ ಶರಣಾಗಿ ಬಿಡುತ್ತದೆ. ಇತ್ತೀಚೆಗೆ ಫಲಿತಾಂಶಗಳು ಬಂದ ನಂತರ, ಆತ್ಮಹತ್ಯೆಗಳು ಹೆಚ್ಚುತ್ತಿರುವುದಕ್ಕೆ ಹೆತ್ತವರ ಇಂತಹ ಅನುಚಿತ ವರ್ತನೆಗಳೇ ಕಾರಣ. ಹೆತ್ತವರ ಶ್ರೇಷ್ಠತೆಯ ವ್ಯಸನ ಮಕ್ಕಳ ಬದುಕಿನ ಪರ್ಯಾವಸಾನದೊಂದಿಗೆ ಪರಿಸಮಾಪ್ತಿಯಾಗುತ್ತಿರುವುದು ಇತ್ತೀಚೆಗೆ ಸರ್ವೇಸಾಮಾನ್ಯವಾಗುತ್ತಿದೆ.

ನಾವು ನಮ್ಮ ಮಕ್ಕಳಿಗೆ ಗೆಲ್ಲುವುದನ್ನು ಮಾತ್ರವಲ್ಲ, ಸೋಲುವುದನ್ನೂ ಕಲಿಸಬೇಕಾಗಿದೆ. ಅವರಿಗೆ ಬದುಕಿನ ಸಂಭ್ರಮಗಳ ನಡುವೆಯೇ ಬದುಕಿನ ವಿಷಾದವನ್ನೂ, ನಿರಾಶೆಗಳನ್ನೂ ಕಲಿಸಬೇಕಾಗಿದೆ. ಬದುಕಿನ ವಾಸ್ತವಗಳನ್ನು

ವಿವರಿಸುವುದೇ ಸರಿಯಾಗಿ ಸಮಾಯೋಜಿತಗೊಳಿಸುವ ರೀತಿ. ಗೆಲುವಾಗಲೀ ಸೋಲಾಗಲೀ ಏಕಮುಖವಾಗಿ ಹರಿಯುವುದಿಲ್ಲ, ಅದು ನಡುನಡುವೆ ದಿಕ್ಕು ಬದಲಾಯಿಸಬಹುದು ಎಂಬ ಕಟುಸತ್ಯವನ್ನು ನಾವು ಮಕ್ಕಳಿಗೆ ತಿಳಿಯಹೇಳಬೇಕು. ಬದುಕಿನ ಇಂತಹ ಕಟುವಾಸ್ತವಗಳನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತುವುದಕ್ಕೆ ನಾಟಕದಂತಹ ಪ್ರಭಾವಶಾಲಿ ಮಾಧ್ಯಮ ಇನ್ನೊಂದಿಲ್ಲ. ನಾಟಕ ಮಗುವಿನೆದುರಿಗೆ ನೈಜ ಬದುಕನ್ನು, ಅವರ ನಿಲುವಿಗೆ ಸಿಗುವಂತೆ ಬಿಚ್ಚಿಡಲು ಸಾಧ್ಯ. ಹಾಗಾಗಿ ಫಿಲಿಪ್ ಎ ಕಾಗಿನ್ ಹೀಗೆ ಹೇಳುತ್ತಾರೆ.

"The creative drama is ' the doing of life'. Real life experiment may be fatal, costly or beyond our reach. In drama the whole of life can be lived with all its excitement and none of its danger"

"ಸೃಜನಾತ್ಮಕ ನಾಟಕವು ನಿಜಜೀವನದ ಪಡಿಯಚ್ಚು. ನಿಜಜೀವನದಲ್ಲಿ ಪ್ರಯೋಗವೊಂದು ಸಾವನ್ನು ತರುವಷ್ಟು ಅಪಾಯಕಾರಿಯಾಗಿರಬಹುದು. ನಮ್ಮ ಕೈಗೆಟುಕದಷ್ಟು ಬೆಲೆಯುಳ್ಳದ್ದಾಗಿರಬಹುದು. ಆದರೆ ನಿಜಜೀವನದ ಯಾವ ಅಪಾಯವೂ ಇಲ್ಲದಂತೆ ಅದರ ಎಲ್ಲ ಭಾವೋದ್ರೇಕಗಳನ್ನೂ ನಾಟಕದಲ್ಲಿ ಅನುಭವಿಸಿಬಿಡಬಹುದು"[18]

ಇದನ್ನೇ ಬಿ.ವಿ ಕಾರಂತರು ತುಮರಿಯ ಕಿನ್ನರಮೇಳದ ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು. "ನಾಟಕದಲ್ಲಿ ಮಕ್ಕಳಿಗೆ ಅಳು ಎಂದ ತಕ್ಷಣ ಅಳಲು ಸಾಧ್ಯವಾಗದೆ ಇರಬಹುದು. ಆದರೆ ಅದಕ್ಕೆ ಅಗತ್ಯ ಸನ್ನಿವೇಶ, ಸಂದರ್ಭಗಳನ್ನು ವಿವರಿಸಿದರೆ ಅಳುವ ಭಾವ ಬರುವಂತೆ ಮಾಡಬಹುದು. ಅದರಿಂದ ಅದು ಅಳುವುದನ್ನು ನಿಧಾನವಾಗಿ ಪರಿಭಾವಿಸಿಕೊಂಡು, ಬೇಕಾದಾಗ ಅಳಲು ಕಲಿಯಬಹುದು. ಈಗ ಸಿಟ್ಟು ಮಾಡು ಎಂದರೆ ಅದಕ್ಕೆ ಸಿಟ್ಟು ಬರುವುದಿಲ್ಲ. ಸಿಟ್ಟು ಬರುವಂತೆ ಅದರ ಮನಸ್ಥಿತಿಯನ್ನು ಸಜ್ಜುಗೊಳಿಸಬೇಕು. ಆಗ ಅದು ಸಿಟ್ಟು ಮಾಡಲು ಶಕ್ತವಾಗುತ್ತದೆ. ಅಳುತ್ತಿರುವ ಮಗುವಿಗೆ 'ಅಳು ನಿಲ್ಲಿಸು' ಎಂದು ಮನೆಯಲ್ಲಿ ಹೇಳಿದರೆ ಅದು ನಿಲ್ಲಿಸುವುದಿಲ್ಲ. ನಿಲ್ಲಿಸಲಾರದು. ಅದೇ ನಾಟಕದಲ್ಲಿ ಅದು ಅನಿವಾರ್ಯವಾಗಿ ಬೇಕಷ್ಟು ಹೊತ್ತು ಅತ್ತು ಕೊನೆಗೆ ಬೇಡವಾದಲ್ಲಿ ಸುಮ್ಮನಾಗುವುದು. ಹೀಗೆ ಮಕ್ಕಳು ಭಾವೋದ್ರೇಕದಿಂದ ಮುಕ್ತರಾಗುವ ಕಲೆಯನ್ನು ಮೆಲ್ಲನೆ ಕಲಿಯುತ್ತಾ ಬರುತ್ತವೆ. ಇದನ್ನೇ ರಿಚರ್ಡ್ ಕರ್ಟಿನ್ನ ಹೀಗೆ ಹೇಳುತ್ತಾರೆ.

"In one sense drama is a doing of life. The child plays out his own view of the world as he sees it. To an extent he can learn emotional control, to observe, to tolerate and to consider others. Dramatic play is a safety valve. It offers continual opportunity for

playing out evil in a legal frame work. It helps to resolve child's emotional problems ; by playing them out he may learn to see them, to face them, to live with them. Drama therapy is now an accepted psychiatric method".

"ಒಂದರ್ಥದಲ್ಲಿ ನಾಟಕವೆನ್ನುವುದು ನಿಜಜೀವನವೇ. ಮಗುವು ತಾನು ನೋಡಿದ ಪ್ರಪಂಚವನ್ನು ಅಲ್ಲಿ ಅನುಕರಿಸುತ್ತದೆ. ಮಗು ಇತರರನ್ನು ಗ್ರಹಿಸಲು, ಸಹಿಸಲು ಮತ್ತು ತನ್ನ ಭಾವವನ್ನು ನಿಯಂತ್ರಿಸಲು ನಾಟಕದಿಂದ ಕಲಿಯುತ್ತದೆ. ನಾಟಕವು ಒಂದು ಸುರಕ್ಷಾ ಕವಾಟ(ಸೇಫ್ಟಿ ವಾಲ್ವ್) ಇದ್ದಂತೆ. ಅದು ಮನಸ್ಸಿನ ಕೆಡುಕನ್ನು ನೈತಿಕ ಚೌಕಟ್ಟಿನಡಿಯಲ್ಲಿ ಹೊರಹಾಕಲು ಕಲಿಸುತ್ತದೆ. ಮಗುವಿನ ಭಾವೋದ್ರೇಕದ ಸಮಸ್ಯೆಯನ್ನು ನೀಗಿಸುತ್ತದೆ. ಅಹಿತ ಭಾವಗಳನ್ನು ಹೊರತಳ್ಳಿ ಅವುಗಳನ್ನು ನಿಭಾಯಿಸಲು ಕಲಿಸುತ್ತದೆ. ಭಾವನಿಯಂತ್ರಣಕ್ಕೆ ಇದೊಂದು ರೀತಿಯ ಮನಶ್ಶಾಸ್ತ್ರೀಯ ವಿಧಾನವೆಂದು ಎಲ್ಲೆಡೆಯಲ್ಲೂ ಸ್ವೀಕೃತವಾಗಿದೆ"[19]

ಸಾಮಾನ್ಯ ಶಾಲಾ ಶಿಕ್ಷಣಕ್ಕೂ ನಾಟಕ ಕೊಡುವ ಅನುಭವದ ಶಿಕ್ಷಣಕ್ಕೂ ಇರುವ ಇನ್ನೊಂದು ವ್ಯತ್ಯಾಸವೆಂದರೆ ಶಾಲಾ ಶಿಕ್ಷಣದಲ್ಲಿ ಮಗುವು ಮಾಹಿತಿಗಳನ್ನು ಸಂಗ್ರಹಿಸಿ, ನಾಳೆಗಾಗಿ ನೆನಪಿಟ್ಟುಕೊಳ್ಳಬೇಕು. ಓದಿನ ಗ್ರಹಿಕೆಯನ್ನು ಮರುಚಿಂತನೆ ಮಾಡಿಕೊಳ್ಳಬಹುದು. ಅಲ್ಲಿ ಮತ್ತೆ ಯೋಚಿಸಿ ಮರುನಿರ್ಧಾರ ಕೈಗೊಳ್ಳಬಹುದು. ಆದರೆ ನಾಟಕಗಳಲ್ಲಿ ಹಾಗಿಲ್ಲ. ಅಲ್ಲಿ ಮರುನಿರ್ಧಾರಗಳ ಪ್ರಶ್ನೆಯಿಲ್ಲ. ತತ್‌ಕ್ಷಣದ ಪ್ರತಿಕ್ರಿಯೆ ಅಲ್ಲಿ ಮುಖ್ಯ. ನಾಟಕಗಳಲ್ಲಿ ಗ್ರಹಿಕೆ ತಕ್ಷಣ ಅನುಭವಕ್ಕೆ ಬಂದು ಅಲ್ಲಿಯೇ ಆಚರಣೆಗೆ ಬರಬೇಕಾಗುತ್ತದೆ. ಹಾಗಾಗಿ ಸನ್ನಿವೇಶಕ್ಕೆ ಪ್ರತಿಕ್ರಿಯಿಸುವ, ತತ್‌ಕ್ಷಣದಲ್ಲಿಯೇ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಅನಿವಾರ್ಯತೆ ನಾಟಕಗಳಿಂದ ಬರುತ್ತದೆ. ಹಾಗಾಗಿ ನಿರ್ಧಾರ ತೆಗೆದುಕೊಳ್ಳುವ ಕಲೆ ಕರಗತವಾಗುತ್ತಾ ಸಾಗುತ್ತದೆ. ಮಕ್ಕಳ ಸಮಾಜೀಕರಣದಲ್ಲಿ ಇದೊಂದು ಪ್ರಮುಖ ಹೆಜ್ಜೆ. ಯಾಕೆಂದರೆ ಸಂದಿಗ್ಧ ಸ್ಥಿತಿಯಲ್ಲಿ ನಿರ್ಧಾರ ತೆಗೆದುಕೊಳ್ಳುವ ಗುಣವೆಂದರೆ ಅದು ನಾಯಕತ್ವದ ಗುಣ. ಅಂತಹ ನಾಯಕತ್ವದ ಗುಣ ಬೆಳೆಸಿಕೊಳ್ಳುವುದು ವ್ಯಕ್ತಿತ್ವ ವಿಕಸನದಲ್ಲಿ ಬಹಳ ಮುಖ್ಯ.

ಹಾಗಾದರೆ ಮಕ್ಕಳ ಇಂತಹ ಸಮಾಜೀಕರಣಕ್ಕೆ ಅನುವು ಮಾಡಿಕೊಡಲು ಮಕ್ಕಳ ನಾಟಕಗಳು ಯಾವ ಲಕ್ಷಣಗಳನ್ನು ಹೊಂದಿರಬೇಕು?

ಮಕ್ಕಳ ನಾಟಕಗಳು ಏಕವ್ಯಕ್ತಿ ಅಥವಾ ಏಕಪಾತ್ರ ಪ್ರಾಮುಖ್ಯತೆಗೆ ಮಹತ್ವ ಕೊಡಬಾರದು. ಮಕ್ಕಳ ನಾಟಕಗಳಲ್ಲಿ ಆದಷ್ಟೂ ಗುಂಪುಗಳ ನಟನೆಗೆ, ಪ್ರತಿ ಪಾತ್ರಗಳು ತಾನಾಗಿ ಬೆಳೆಯುವ ಪ್ರಕ್ರಿಯೆಗೆ ಅವಕಾಶವಿರುವಂತೆ ಇರಬೇಕು. ಕೆಲವೇ ಪಾತ್ರಗಳಿರುವ ನಾಟಕಗಳಿಗಿಂತ ಹೆಚ್ಚು ಪಾತ್ರಗಳಿದ್ದರೆ ಮೇಲು. ಹಾಗಂತ ಕಥೆಯ ಸಂವಿಧಾನಕ್ಕೆ

ಬೇಕಿಲ್ಲದ ಪಾತ್ರಗಳನ್ನು ಸೃಷ್ಟಿಸಬೇಕೆಂದು ಅರ್ಥವಲ್ಲ ಅಥವಾ ಏಕಪಾತ್ರ ಪ್ರಮುಖವಾದ 'ನನ್ನ ಗೋಪಾಲ'ದಂತಹ ನಾಟಕಗಳು ಯಶಸ್ವಿಯಲ್ಲ ಎಂದೂ ಅಲ್ಲ. ಸನ್ನಿವೇಶ, ಸಂದರ್ಭಗಳ ಅಗತ್ಯದ ಮೇಲೆಯೇ ನಾಟಕ ಬೆಳೆಯಬೇಕು. ಆದರೂ ಮಕ್ಕಳಿಗೆಂದೇ ಗೆರೆಕೊರೆಯುವಾಗ, ಮಕ್ಕಳ ಸಮಾಜೀಕರಣದ ಉದ್ದೇಶದಿಂದಲೇ ಆಯ್ಕೆ ನಡೆದಾಗ, ಹೆಚ್ಚು ಪಾತ್ರಗಳಿರುವ, ಎಲ್ಲ ಪಾತ್ರಗಳಿಗೂ ಅವಕಾಶವಿರುವ ನಾಟಕಗಳು ಉತ್ತಮವೆಂಬುದು ಒಂದು ಅಭಿಪ್ರಾಯ; ಇದೇ ಅಂತಿಮ ನಿರ್ಣಯವಲ್ಲ.

ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನೂ ಗಮನಿಸಬಹುದು. ನಾಟಕವು ಇತ್ತೀಚಿನ ದಿನಗಳಲ್ಲಿ ನಿರ್ದೇಶಕರ ಮಾಧ್ಯಮವಾಗಿ ರೂಪುಗೊಂಡಿರುವುದರಿಂದ, ನಾಟಕವನ್ನು ಪ್ರೆಸೆಂಟ್ ಮಾಡುವಾಗ ಮತ್ತು ಅದನ್ನು ರಂಗಕ್ಕೆ ಸಿದ್ಧಪಡಿಸುವಾಗ ಇದನ್ನು ಪರಿಗಣಿಸಬಹುದು.

ಮಕ್ಕಳ ಸಮಾಜೀಕರಣವನ್ನೇ ಪರಿಗಣನೆಗೆ ತೆಗೆದುಕೊಳ್ಳುವುದಾದರೆ, ಮಕ್ಕಳೇ ನಾಟಕದ ಪಾತ್ರಧಾರಿಗಳಾಗಿದ್ದರೆ ಮೇಲು. ಸಮಾಜೀಕರಣದ ದೃಷ್ಟಿಯಿಂದ ನೋಡಿದಾಗ, ದೊಡ್ಡವರು ಮಕ್ಕಳ ನಾಟಕ ಅಭಿನಯಿಸುವುದರಿಂದ ಮಕ್ಕಳ ಸಮಾಜೀಕರಣಕ್ಕೆ ಹೆಚ್ಚಿನ ಒತ್ತು ಸಿಗುವುದಿಲ್ಲ. ಮಕ್ಕಳೇ ಒಂದು ತಂಡವಾಗಿ, ಪಾತ್ರಗಳ ಒಳಹೊಕ್ಕು ಅಭಿನಯಿಸಿದರೆ, ಮಕ್ಕಳು ಭಾವನಾತ್ಮಕವಾಗಿ ನಾಟಕದಲ್ಲಿ ಪಾಲ್ಗೊಳ್ಳುವ ಸಂದರ್ಭವೂ ಹೆಚ್ಚು. ನೋಡುವ ಮಕ್ಕಳ ಮೇಲೂ ಅದರ ಪ್ರಭಾವ ಹೆಚ್ಚು. ಮಕ್ಕಳು ಮಕ್ಕಳಿಂದ ಸ್ವೀಕರಿಸುವಷ್ಟು ಸುಲಭವಾಗಿ ದೊಡ್ಡವರಿಂದ ಸ್ವೀಕರಿಸುವುದಿಲ್ಲ. ನಾಟಕವನ್ನು ಆಡುವವರೂ ಮಕ್ಕಳೇ ಆದಾಗ ನೋಡುವ ಮಕ್ಕಳಿಗೂ ಆಸಕ್ತಿ ಹೆಚ್ಚುತ್ತದೆ.

## 6. ಮಕ್ಕಳ ನಾಟಕ ಮತ್ತು ಸೃಜನಶೀಲತೆ

ಸೃಜನಶೀಲತೆಯೆಂದರೆ ತನ್ನ ಕಲ್ಪನೆಯೊಂದನ್ನು ತನ್ನದೇ ಸಾಮರ್ಥ್ಯದ ಮೂಲಕ ಕೃತಿಗಿಳಿಸುವುದು. ಅದು ಸಾಹಿತ್ಯವಾಗಿರಬಹುದು, ಕಲೆಯಾಗಿರಬಹುದು ಅಥವಾ ಇನ್ನಾವುದೇ ಕ್ರಿಯಾಶೀಲ ಚಟುವಟಿಕೆಯಾಗಿರಬಹುದು. ವ್ಯಕ್ತಿಯ 'ಆತ್ಮ ಪ್ರದರ್ಶನ'ದ ಸುಪ್ತ ಬಯಕೆಯೇ ಸೃಜನಶೀಲತೆಯಾಗಿ ಹೊರಹೊಮ್ಮುವುದಾಗಿ ಮನೋವಿಜ್ಞಾನಿಗಳು ಹೇಳುತ್ತಾರೆ. ಅಭಿವ್ಯಕ್ತಿಯ ಅಭೀಪ್ಸೆಯೇ ಸೃಜನಶೀಲತೆಯ ಮೂಲದ್ರವ್ಯ.

ನಾಟಕಗಳು ಮೊದಲು ಹುಟ್ಟುವುದು ನಾಟಕಕಾರನ ಸೃಜನಶೀಲತೆಯಿಂದ. ಅದೊಂದು ಪ್ರದರ್ಶನವಾಗಿ ಅರಳುವುದು ನಿರ್ದೇಶಕನ ಸೃಜನಶೀಲತೆಯಿಂದ. ಪ್ರದರ್ಶನ ಯಶಸ್ವಿಯಾಗುವುದು ಅದರ ಪಾತ್ರಧಾರಿಗಳು ತಮ್ಮ ಸೃಜನಶೀಲತೆಯಿಂದಾಗಿ ತಾವೇ ಪಾತ್ರವಾಗುವುದರಿಂದ. ಇದು ನಾಟಕದ ಒಂದು ಮುಖವಾದರೆ ಅದರ

ಇನ್ನೊಂದು ಮುಖ ಅದು ಪ್ರೇಕ್ಷಕರಾಗಿ ನೋಡುವ ಮಕ್ಕಳ ಕಲ್ಪನೆಯನ್ನು ಅರಳಿಸುವುದರಿಂದ, ನಾಟಕವನ್ನು ಅನುಭವಿಸಿ ಅರ್ಥೈಸಿಕೊಂಡು ಆಚರಣೆಗೆ ಮನಸ್ಸು ಮಾಡುವುದರಿಂದ.

ನಾಟಕವು ಭಾಗವಹಿಸುವ ಮತ್ತು ನೋಡುವ ಮಕ್ಕಳಿಗೆ ಸ್ಫೂರ್ತಿ ನೀಡಬೇಕು. ಅದು, ಉಳಿದವರಲ್ಲಿ ಭಾಗವಹಿಸುವ ಅಭಿಪ್ರೇರಣೆಯನ್ನು ಉಂಟುಮಾಡಬೇಕು. ನಾಟಕ ಘಟನೆಯೊಂದನ್ನು ಮಗುವಿಗೆ ಅರ್ಥಮಾಡಿಸುವುದಷ್ಟೇ ಅಲ್ಲ, ಅದನ್ನು ಮೀರಿ ಅನುಭವಿಸುವಂತೆ ಮಾಡುವುದು. ಈ ಅನುಭವ ಅದಕ್ಕೆ ಹೊಸ ಅಭಿಪ್ರೇರಣೆ ನೀಡಬೇಕು. ರೂಪಕವನ್ನು ಪಡೆಯದ ಅಪಕ್ವ ಕಲ್ಪನೆಗಳಿಗೆ ಮೂರ್ತ ಸ್ವರೂಪವನ್ನು ಕೊಡಬೇಕು. ಅದಕ್ಕೊಂದು ಶರೀರವನ್ನು ಕೊಡಬೇಕು. ಮಕ್ಕಳು ಸಂಸ್ಕೃತಿಯ ಜೀವತಂತುಗಳು. ನಾವು ಕೊಡುವ ಅನುಭವಗಳು ಅವರ ಬದುಕಿಗೆ ಸೊಪ್ಪು, ಗೊಬ್ಬರಗಳಾಗಬೇಕು. ಅವರ ಕಲ್ಪನೆ ಬೆಳೆದು, ಸೃಜನಶೀಲತೆ ಅರಳಿ ಅದು ಕೃತಿಯಾಗಿ ಕಾಯಾಗಬೇಕು. ಮಕ್ಕಳು ಸೃಜನಶೀಲತೆಯ ಪ್ರತಿರೂಪಗಳು. ನಾವು ಹಿಂದೆಯೇ ಹೇಳಿದಂತೆ ಕಾಗದದ ದೋಣಿಯಲ್ಲಿ ಕುಳಿತು ಸಪ್ತಸಾಗರವನ್ನು ದಾಟಿ ಆಚೆಯ ದಡದಲ್ಲಿರುವ ಏಳು ಮಲ್ಲಿಗೆ ತೂಕದ ಸುಕುಮಾರಿ ರಾಜಕುಮಾರಿಯನ್ನು ಅದೇ ದೋಣಿಯಲ್ಲಿ ಕೂರಿಸಿಕೊಂಡು ಬರುವ ಮನಸ್ಥಿತಿಯವರು. ಅವರ ಕಲ್ಪನೆಗೆ ಸೀಮೆಯಿಲ್ಲ. ಸ್ವಾಭಾವಿಕವಾಗಿ ಮಕ್ಕಳು ಚಂಚಲ ಪ್ರವೃತ್ತಿಯವರು. ಹಾರುವುದು, ಕೂರುವುದು, ನಿಲ್ಲುವುದು, ಪಲ್ಟಿ ಹೊಡೆಯುವುದು, ಕುಣಿಯುವುದು ಹೀಗೆ ಏನಾದರೊಂದು ಮಾಡುತ್ತಲೇ ಇರಬೇಕು ಮಕ್ಕಳಿಗೆ. ಮಕ್ಕಳ ಇಂತಹ ಮನಸ್ಥಿತಿಯನ್ನು ನಾಟಕಕ್ಕೆ ಅಳವಡಿಸಬೇಕು.

ಹಾಗೆಂದ ಮಾತ್ರಕ್ಕೆ ಮಕ್ಕಳ ಗುಣಕ್ಕೆ ನಾಟಕವನ್ನು ಹೊಂದಿಸಬೇಕೆಂದಿಲ್ಲ. ಹಾಗೆಂದರೆ ಚಡ್ಡಿಯ ಅಳತೆಗೆ ತೊಡೆಯನ್ನು ಕೆತ್ತಬೇಕೆಂದಂತೆ. ಆದರೆ ಅವರವರ ಸ್ವಭಾವಸಿದ್ಧ ಪ್ರಕೃತಿಗೆ ನಾಟಕಗಳು ಹೊಂದುವಂತಿದ್ದರೆ ಒಳ್ಳೆಯದೆಂಬುದು ಒಂದು ಅಭಿಪ್ರಾಯ. ಇದನ್ನು ಪೂರ್ಣವಾಗಿ ಒಪ್ಪಲಾಗುವುದಿಲ್ಲವಾದರೂ, ಅನುಕೂಲವಾಗುವುದಿದ್ದರೆ ಅಂತಹ ನಾಟಕಗಳನ್ನು ಪ್ರದರ್ಶಿಸಬಹುದು. ಆದರೆ ಅದೊಂದು ವ್ಯಾಯಾಮ ಪ್ರದರ್ಶನವಾಗಬಾರದು ಅಷ್ಟೆ. ತಟ್ಟಿ, ತೀಡಿ, ಮುಟ್ಟಿ, ಮೂಸಿ, ಹಾರಿ, ಕುಣಿಯುವ ಮಕ್ಕಳ ಸಹಜ ಸ್ವಭಾವಕ್ಕೆ ವೇದಿಕೆ ನಿರ್ಮಿಸುತ್ತಲೇ ಶಿಸ್ತು, ಸಂಯಮ ಮತ್ತು ಸಾಮಾಜಿಕ ಪ್ರಜ್ಞೆಗಳನ್ನೂ ಜತೆಜತೆಯಲ್ಲಿಯೇ ತುಂಬಬೇಕು. ಬಿ.ವಿ.ಕಾರಂತರು ಹೇಳುವಂತೆ ಚಂಚಲವಾಗಿರುವ ಮಗುವಿನ ಸ್ವಭಾವವನ್ನು ನಾಟಕದ ಶಿಸ್ತಿನ ಹೆಸರಿನಲ್ಲಿ ಜಡವಾಗಿಸಬಾರದು. ಹಾಗೆಂದು ನಾಟಕವಿಡೀ ಮಕ್ಕಳ ಚಂಚಲತೆಗೆ ಅನುಕೂಲವಾಗಿ ಬೆಳೆಯಬೇಕೆಂದಿಲ್ಲ. ಆದರೆ ಎಲ್ಲ ಕಡೆ ಅವರ ಕಲ್ಪನೆಗಳು

ಅರಳುವಂತಿರಬೇಕು. ಯಾವ ನಾಟಕ ಮಕ್ಕಳಲ್ಲಿ ಹೊಸ ಹಸಿವನ್ನು ಹುಟ್ಟಿಸುವುದಿಲ್ಲವೋ ಆ ನಾಟಕ ಮಕ್ಕಳ ನಾಟಕವಲ್ಲ. ಮಕ್ಕಳ ಮನಸ್ಸು ಗರಿಗೆದರಿ ಹಾರುವಂತೆ ಮಾಡದ ನಾಟಕಗಳು ಮಕ್ಕಳಿಗಂತೂ ಅಲ್ಲವೇ ಅಲ್ಲ.

## 7. ಮಕ್ಕಳ ನಾಟಕ ಮತ್ತು ಸಂಗೀತ

ಮಕ್ಕಳ ನಾಟಕಗಳಲ್ಲಿ ಸಂಗೀತವೊಂದು ಅನಿವಾರ್ಯವೆ, ನೇರವಾದ ನಾಟಕಗಳಿಗಿಂತ ಸಂಗೀತ, ನೃತ್ಯಗಳಿರುವ ನಾಟಕಗಳನ್ನೇ ಮಕ್ಕಳು ಇಷ್ಟಪಡುತ್ತವೆಯೆ, ಸಂಗೀತವು ನಾಟಕದ ಆಂತರ್ಯದ ಅವಶ್ಯಕತೆಯೆ, ಅಥವಾ ಬಾಹ್ಯ ಹೇರಿಕೆಯೆ, ನಾಟಕವು ಕಳೆಕಟ್ಟದ ದೃಶ್ಯಗಳಲ್ಲಿ ಅದನ್ನು ವಿಜೃಂಭಿಸಲು ಸಂಗೀತ ಬಳಕೆಯಾಗಬೇಕೆ, ಅಥವಾ ಸ್ಥಾಯಿಯಾಗಿ ನಾಟಕದುದ್ದಕ್ಕೂ ಸಂಗೀತ ಬಳಕೆಯಾಗಬೇಕೆ, ರಂಗಸಂಗೀತಕ್ಕೆ ಪ್ರತ್ಯೇಕ ಅಸ್ತಿತ್ವ ಇದೆಯೆ ಹೀಗೆ ಹಲವು ಪ್ರಶ್ನೆಗಳನ್ನು ಎದುರಿಗಿಟ್ಟುಕೊಂಡು ನಮ್ಮ ಚರ್ಚೆಯನ್ನು ಮುಂದುವರೆಸಬಹುದು. ಬಿ.ವಿ.ಕಾರಂತರ ನಾಟಕಗಳಲ್ಲಿ ಸಂಗೀತ ಹೇಗೆ ಬಳಕೆಯಾಗುತ್ತಿತ್ತು ಎಂಬುದನ್ನು ಈಶ್ವರಯ್ಯ ಹೀಗೆ ವಿವರಿಸಿದ್ದಾರೆ.

"ನಾಟಕವನ್ನು ಒಂದು ಅವಿಚ್ಛಿನ್ನ ಘಟಕವಾಗಿ ನೋಡುವ ಕಾರಂತರು ನಾಟಕದಲ್ಲಿ ಸಂಗೀತಕ್ಕಿರುವ ಸ್ವತಂತ್ರ ಅಸ್ತಿತ್ವವನ್ನು ಕಿತ್ತುಹಾಕಿದರು. ಅವರ ದೃಷ್ಟಿಯಲ್ಲಿ ಸಂಗೀತ ನಾಟಕದ ಒಂದು ಅಂಗ. ಎಲ್ಲ ಸನ್ನಿವೇಶಗಳಲ್ಲೂ ಅದು ಸನ್ನಿವೇಶಕ್ಕೆ ಪೂರಕವಾಗಿರಬೇಕು. ನಾಟಕಕ್ಕಿಂತ ಹೊರಗಿನ ಒಂದು ಅನುಭವವನ್ನು ಸಂಗೀತ ನೀಡುವಂತಿಲ್ಲ. ಒಂದು ಅರೆಗಳಿಗೆಯಾದರೂ ಪ್ರೇಕ್ಷಕ ನಾಟಕವನ್ನು ಮರೆತು ಸಂಗೀತದತ್ತ ಆಕರ್ಷಿತನಾಗಬಾರದು. ನಾಟಕದ ಅನುಭವವನ್ನು ತೀವ್ರಗೊಳಿಸುವ ಕೆಲಸವನ್ನಷ್ಟೇ ಸಂಗೀತ ಮಾಡಬೇಕು. ಇದಕ್ಕಾಗಿ ರಂಗಸಂಗೀತದ ಸ್ಥಾಪಿತರೂಪವನ್ನು ಮುರಿಯುವುದು ಕಾರಂತರಿಗೆ ಅನಿವಾರ್ಯವಾಯಿತು. ಕಾರಂತರ ನಾಟಕಗಳಲ್ಲಿ ಸಂಗೀತ ಎರಡು ವಿಧದಲ್ಲಿ ಬಳಕೆಗೆ ಬರುತ್ತದೆ. ಒಂದು, ಕಥೆಯನ್ನು ಮುನ್ನಡೆಸುವ ಮಾಧ್ಯಮವಾಗಿ, ಇನ್ನೊಂದು, ಮಾತಿಗೆ ಪರ್ಯಾಯವಾಗಿ, ಕಥೆಯನ್ನು ಮುಂದುವರೆಸಲು. ಕಾರಂತರು ಸಾಮಾನ್ಯವಾಗಿ ಸೂತ್ರಧಾರ ಮತ್ತು ತಂಡವನ್ನು ಬಳಸಿಕೊಳ್ಳುತ್ತಾರೆ. ನಾಟಕವೆಂದರೆ ಕಾರಂತರಿಗೆ ಒಂದು ಸಂಭ್ರಮದ ಉತ್ಸವ ಅನ್ನುವ ವಿಮರ್ಶಕರ ಮಾತಿನಲ್ಲಿ ಸತ್ಯಾಂಶವಿದೆ. ಅವರ ನಾಟಕಗಳಲ್ಲಿ ಹಾಡು, ಕುಣಿತ ಎಲ್ಲವೂ ಇರುತ್ತದೆ. ಬಣ್ಣ, ಬೆಡಗು, ಚಲನೆಯಿಂದ ಕಣ್ತುಂಬುವ ಗುಂಪಿನಲ್ಲಿ ಸತ್ಯವೂ ಇರುತ್ತದೆ. ಮಾತಿಗೆ ಪರ್ಯಾಯವಾಗಿ ಸಂಗೀತವನ್ನೂ ಅವರು 'ಗೋಕುಲ ನಿರ್ಗಮನ', 'ಕುಸುಮಬಾಲೆ' ಮುಂತಾದ ನಾಟಕಗಳಲ್ಲಿ ಬಳಸಿದ್ದಾರೆ."[20]

ಮಕ್ಕಳ ನಾಟಕಗಳಲ್ಲಿ ಸಂಗೀತವೊಂದು ಅನಿವಾರ್ಯ ಅಂಗ ಎನ್ನುವ ಬದಲು ಅದೊಂದು ಪೂರಕ ಅಂಶವೆಂದು ಹೇಳಲಾಗಿದೆ. ಸ್ವಾಭಾವಿಕವಾಗಿ ಮಕ್ಕಳು ಹಾಡು, ಕುಣಿತಗಳನ್ನು ಇಷ್ಟಪಡುತ್ತಾರೆ. ಕಣ್ಣಿಗೆ, ಕಿವಿಗೆ ಹಿತವಾಗಿ ನಾಟಕ ಸಾಗುತ್ತಿದ್ದರೆ, ಮಕ್ಕಳು ತಮ್ಮ ಸಹಜ ಚಂಚಲತೆಯನ್ನು ತ್ಯಜಿಸಿ, ನಾದ ನಿರ್ಮಿಸುವ ಆವರಣದಲ್ಲಿ ಮೈಮರೆಯಲು ಸಾಧ್ಯ. ಹಾಗೆಂದು ಮಕ್ಕಳ ನಾಟಕಗಳನ್ನು, ಹಾಡು ಕುಣಿತಗಳಿಲ್ಲದೆ ಯಶಸ್ವಿಯಾಗಿ ಪ್ರದರ್ಶಿಸಲು ಸಾಧ್ಯವಿಲ್ಲವೆಂದೇನೂ ಅಲ್ಲ. ಅಲ್ಲಿ ಸಂಗೀತ, ಪಾಯಸಕ್ಕೆ ಏಲಕ್ಕಿ ಬೆರೆಸಿದಂತೆ ಎಂದು ವಿಮರ್ಶಕರೊಬ್ಬರು ಹೇಳಿದ್ದಾರೆ. ಕೆಲವು ಬಾರಿ ಏಕತಾನತೆಯನ್ನು ಮುರಿಯಲೂ ಸಂಗೀತವನ್ನು ಬಳಸಬೇಕಾಗುತ್ತದೆ. ಅದರಲ್ಲೂ ಮಕ್ಕಳ ನಾಟಕಗಳು, ಕೆಲವು ನಿಮಿಷ ಒಂದೇ ಗತಿಯಲ್ಲಿ ಸಾಗಿದರೆ ಸಾಕು, ಮಕ್ಕಳು ಚಡಪಡಿಸತೊಡಗುತ್ತಾರೆ. ಅವರಿಗೆ ಚಡಪಡಿಕೆ ಹುಟ್ಟುವ ಮೊದಲೇ ಬಣ್ಣ, ಬೆಡಗು, ಹಾಡು, ಕುಣಿತಗಳ ಮೂಲಕ ಅವರ ಗಮನವನ್ನು ಸೆಳೆದು, ಅವರನ್ನು ವಶೀಕರಿಸಿಕೊಳ್ಳಬೇಕಾಗುತ್ತದೆ. ಈ ಅರ್ಥದಲ್ಲಿ ನೋಡಿದರೆ ಮಕ್ಕಳ ನಾಟಕಕ್ಕೆ ಸಂಗೀತ ಅನಿವಾರ್ಯವೇ ಹೌದು.

ಮಕ್ಕಳ ನಾಟಕಗಳನ್ನು ದೀರ್ಘಕಾಲಕ್ಕೆ ಎಳೆಯುವಂತಿಲ್ಲ. ಅವುಗಳನ್ನು ಸಾಧ್ಯವಿದ್ದಷ್ಟು ಹ್ರಸ್ವಗೊಳಿಸಬೇಕು. ಇಂತಹ ಕೆಲಸಕ್ಕೂ ಮಕ್ಕಳ ನಾಟಕಗಳಲ್ಲಿ ಸಂಗೀತ ಬೇಕು. 1971ರಲ್ಲಿ ಕಾರಂತರು ಪ್ರದರ್ಶಿಸಿದ 'ಪಂಜರಶಾಲೆ'ಯಾಗಲೀ, ನಂತರದ ವರ್ಷದ 'ನೀಲಿಕುದುರೆ'ಯಾಗಲೀ ಇಂದು ಜನಮಾನಸದಲ್ಲಿ ನೆಲೆನಿಂತಿರುವುದು ಅದರಲ್ಲಿರುವ ದೃಶ್ಯ ಚಮತ್ಕಾರಗಳಿಂದ; ಸಂಗೀತ ನೃತ್ಯಗಳಿಂದ; ಎಲ್ಲಿಂದಲೋ ಹಾರಿಬಂದ ಹಕ್ಕಿಗಳ ಗುಂಪು ಹಾಡುತ್ತಾ ನರ್ತಿಸುತ್ತಾ ಒಂದು ಗಂಧರ್ವಲೋಕದ ಆವರಣ ನಿರ್ಮಿಸಿದ್ದನ್ನು ಇಂದಿಗೂ ಜನ ನೆನೆಯುತ್ತಾರೆ.

ಸಾಗರದಲ್ಲಿ 'ಉದಯ ಕಲಾವಿದರು' ನಡೆಸಿದ ಮಕ್ಕಳ ನಾಟಕೋತ್ಸವ ಸಂದರ್ಭದಲ್ಲಿ, ಪ್ರೇಕ್ಷಕರಾಗಿ ಭಾಗವಹಿಸುತ್ತಿದ್ದ ಮಕ್ಕಳಿಗೆ ಒಂದು ಪ್ರಶ್ನಾವಳಿ ಕೊಟ್ಟು, ನಾಟಕದ ಬಗ್ಗೆ ಅವರ ಅನಿಸಿಕೆಯನ್ನೂ, ಅವರು ನಾಟಕದಲ್ಲಿ ಏನನ್ನು ಬಯಸುತ್ತಾರೆ ಎಂಬ ಅಂಶವನ್ನೂ ತಿಳಿಯಲು ಪ್ರಯತ್ನಿಸಲಾಯಿತು. ಆಗ ಕಂಡುಬಂದ ಪ್ರತಿಕ್ರಿಯೆಯಲ್ಲಿ ಹೆಚ್ಚಿನ ಮಕ್ಕಳು ಬಯಸಿದ್ದು ಹಾಡು, ಕುಣಿತಗಳ, ದೃಶ್ಯವೈಭವದ ರಂಜಕತೆಯನ್ನು. ಇಡೀ ನಾಟಕೋತ್ಸವದಲ್ಲಿ ಹಾಡು, ಕುಣಿತ, ದೃಶ್ಯವೈಭವಗಳನ್ನು ಸೃಷ್ಟಿಸಿದ 'ಮೃಗ ಮತ್ತು ಸುಂದರಿ' ನಾಟಕವನ್ನೇ ಶೇಕಡ ತೊಂಬತ್ತರಷ್ಟು ಮಕ್ಕಳು ಇಷ್ಟಪಟ್ಟರು. ಈ ನಾಟಕದಲ್ಲಿ ಇದ್ದಕ್ಕಿದ್ದಂತೆ ಮೃಗರೂಪದ ಶಾಪಗ್ರಸ್ತ ಗಂಧರ್ವಕುಮಾರನ ಪ್ರವೇಶದಿಂದ 'ಭಯಾನಕ'ವೆನ್ನುವಂತಹ ಸನ್ನಿವೇಶವೊಂದು ನಿರ್ಮಾಣವಾಗುತ್ತಿತ್ತು. ಮಕ್ಕಳ ನಾಟಕಗಳಲ್ಲಿ ಇಂತಹ 'ಭಯಾನಕ' ಸನ್ನಿವೇಶ ಮೂಡಿಸುವುದು ಸರಿಯಲ್ಲವೆಂಬ

ಅಭಿಪ್ರಾಯಗಳೂ ಇವೆ. ಆದರೂ ಇಡೀ ನಾಟಕೋತ್ಸವದಲ್ಲಿ ಭಯಾನಕ ಸನ್ನಿವೇಶಗಳಿರುವ ಮೃಗ ಮತ್ತು ಸುಂದರಿ ನಾಟಕವೇ ಯಶಸ್ವಿಯಾಯಿತಲ್ಲದೆ, ಮಕ್ಕಳು ಅದನ್ನು ಸಮೀಕ್ಷೆಯಲ್ಲೂ ವ್ಯಕ್ತಪಡಿಸಿದರು. ಅದಕ್ಕೆ ಕಾರಣ ಇಡೀ ನಾಟಕ ತನ್ನ ಸಂಗೀತ, ನೃತ್ಯ, ಗುಂಪು ಚಲನೆಗಳಿಂದ ಮೂಡಿಸಿದ ರಮ್ಯ ಆವರಣ.

ಮಕ್ಕಳ ನಾಟಕಗಳಲ್ಲಿ ಸಂಗೀತ, ನೃತ್ಯ ಮತ್ತು ರಂಗಚಲನೆಗಳು ಮಕ್ಕಳಿಗೆ ಹೊಸತೊಂದು ಜಗತ್ತನ್ನು ನಿರ್ಮಿಸಿಕೊಡಬೇಕು. ಹಾಗೆಂದ ಮಾತ್ರಕ್ಕೆ ಇದಾವುದಕ್ಕೂ ಸ್ವತಂತ್ರ ಅಸ್ತಿತ್ವವಿಲ್ಲ. ನಾಟಕದ ಲಯಕ್ಕೆ, ನಾಟಕದ ಚಲನೆಗೆ ಇವು ಸೃಜನಾತ್ಮಕ ಸಾಹಚರ್ಯ ನೀಡಬೇಕು. ಸಂಗೀತದ ಮೂಲಕವೂ ನಾಟಕದಲ್ಲಿ ಹೊಸ ಸಾಧ್ಯತೆಗಳನ್ನು ಸಾಧಿಸುವುದರತ್ತ, ನಾಟಕದ ಎಲ್ಲೆಗಳನ್ನು ವಿಸ್ತರಿಸುವುದರತ್ತ ಗಮನಹರಿಸಬೇಕು. ಕೃತಿಯಲ್ಲಿ ಅಥವಾ ಪ್ರದರ್ಶನದಲ್ಲಿ ನುಸುಳಬಹುದಾದ ದೋಷಗಳನ್ನು ಹಾಡು, ನೃತ್ಯಗಳು ಮರೆಮಾಚಬೇಕು.ಅತಿಯಾದ ಹಾಡು-ಕುಣಿತಗಳನ್ನು ಬಳಸುವುದು ಒಂದು ರೀತಿಯ 'ದೊಂಬರಾಟ' ಎಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಸಂಗೀತಕ್ಕಾಗಿ ಸಂಗೀತವನ್ನು, ಕುಣಿತಕ್ಕಾಗಿ ಕುಣಿತವನ್ನು ಬಳಸಿದಾಗ ಇಂತಹ ಅಭಿಪ್ರಾಯಗಳು ಹುಟ್ಟಬಹುದು. ಆದರೆ ಆವರಣ ನಿರ್ಮಾಣಕ್ಕಾಗಿ, ನಾಟಕಕ್ಕೆ ಪೂರಕವಾಗಿ, ದೃಶ್ಯ ನಿರ್ಮಾಣಕ್ಕೆ ಸಹಾಯಕವಾಗಿ ಹಾಡು ಕುಣಿತಗಳನ್ನು ಬಳಸಿದರೆ ಒಟ್ಟೂ ನಾಟಕದ ಪರಿಣಾಮ ಹೆಚ್ಚುವುದೇ ಹೊರತು ಅದು ದೊಂಬರಾಟ ಆಗುವುದಿಲ್ಲ. ಅದರಲ್ಲೂ ಮಕ್ಕಳು ಸ್ವಗತದಲ್ಲಿಯೇ ಹಾಡಿಕೊಳ್ಳುವ ಸ್ವಭಾವದವರು. 'ಅಮ್ಮ, ಇನ್ನೂ ಯಾಕೆ ಹಾಲು ಕೊಟ್ಟಿಲ್ಲ' ಎಂದು ರಾಗವಾಗಿ ಕೇಳುವ ಮಕ್ಕಳನ್ನು ನಾವು ನೋಡುತ್ತೇವೆ. ತಾಳ, ಲಯಗಳಿಗೆ ಸ್ಪಂದಿಸದ ಮಗುವಿಲ್ಲ. ಹಾಗಾಗಿಯೇ ನಮ್ಮ ಜನಪದರಲ್ಲಿ ಜೋಗುಳದ ಪದ್ಯಗಳು ಅಷ್ಟೊಂದು ಜನಪ್ರಿಯವಾಗಿರುವುದು. ಜೋಗುಳಕ್ಕೆ ಸ್ಪಂದಿಸುತ್ತಲೇ ಬೆಳೆದ ನಮ್ಮ ಮಕ್ಕಳು ಸಹಜವಾಗಿ ಸಂಗೀತದಿಂದ ಆಕರ್ಷಿತರಾಗುತ್ತಾರೆ.

ರಂಗಸಂಗೀತಕ್ಕೆ ಶಾಸ್ತ್ರೀಯವಾದ ಚೌಕಟ್ಟಿಲ್ಲ. ಅದು ಮಾತಿನ ಹತ್ತಿರಕ್ಕೆ ಸರಿಯಬೇಕು. ನಾಟಕಕ್ಕೆ ಹಿಂದೂಸ್ಥಾನಿ ರಾಗ ಒಳ್ಳೆಯದೋ ಕರ್ನಾಟಕ ಒಳ್ಳೆಯದೋ, ಅಥವಾ ಜನಪದ ಒಳ್ಳೆಯದೋ ಎಂದು ಕೇಳಿದರೆ ಅದೊಂದು ಬಾಲಿಶ ಪ್ರಶ್ನೆ. ನಾಟಕದಲ್ಲಿ ಸಂಗೀತವು ಧ್ವನಿಯ ವಿನ್ಯಾಸವಾಗಿ ಬರಬೇಕು. ಕಾರಂತರು ಹೇಳುವಂತೆ 'ನಾಟಕದಲ್ಲಿ ಮಾಧುರ್ಯವನ್ನು ಮುರಿದು ಸಂಗೀತವನ್ನು ಮಾತಿನ ಹತ್ತಿರಕ್ಕೆ ತರಬೇಕಾಗುತ್ತದೆ'. ಹಾಗಾಗಿ ನಾಟಕಗಳಲ್ಲಿ ಸನ್ನಿವೇಶಕ್ಕೂ, ರಸಕ್ಕೂ, ಗಾಯಕನಿಗೂ ಸಂಬಂಧ ಕಲ್ಪಿಸುವಂತಿಲ್ಲ. ಅದು ಒಂದಕ್ಕೊಂದು ಪೂರಕ ಮಾತ್ರ. ಮಕ್ಕಳ ನಾಟಕಗಳಲ್ಲಿ ಕಾರಂತರು ಸಂಗೀತದ ಬೇರೆಬೇರೆ ಸಾಧ್ಯತೆಗಳನ್ನು ತೋರಿಸಿಕೊಟ್ಟರು. ಮಕ್ಕಳ ನಾಟಕಗಳಿಗೆ ಸಂಗೀತ ಸಂಯೋಜಿಸುವಾಗ ಅವರು ಮಕ್ಕಳ ಬದುಕಿನ ಆಟಿಕೆ, ವಸ್ತುಗಳಿಂದಲೇ ಸಂಗೀತ ನಿರ್ಮಿಸಿ ತೋರಿಸಿದರು. ಅವರ ನಾಟಕಗಳಲ್ಲಿನ

ನಾವೀನ್ಯವೆಂದರೆ ಸಂಗೀತ ವಿನ್ಯಾಸದ ನಾವೀನ್ಯ ಎಂಬಂತಾಯಿತು. ಈ ಸಂದರ್ಭದಲ್ಲಿ ಮಕ್ಕಳ ನಾಟಕಗಳ ಬಗ್ಗೆ ರಂಗಕರ್ಮಿ ಐ.ಕೆ.ಬೊಳುವಾರು ಹೇಳುವ ಮಾತುಗಳನ್ನು ಗಮನಿಸೋಣ.

"ಮಕ್ಕಳೊಂದಿಗೆ ಮಕ್ಕಳೇ ಆಗಿರುವ ನಿಲುವುಗಳು, ಸಹಜ ಕುತೂಹಲಗಳು ಸೃಷ್ಟಿಸುವ ರೋಮಾಂಚನ ಮಕ್ಕಳ ನಿಜ ಭೂಮಿಕೆಯಾಗುತ್ತದೆ. ಅದು ಮಕ್ಕಳ ರಂಗಭೂಮಿ. ಒಂದೇ ಒಂದು ಉದಾಹರಣೆಯೊಂದಿಗೆ ನಿಮಗದನ್ನು ಅರ್ಥೈಸುವ ಪ್ರಯತ್ನ ಮಾಡುತ್ತೇನೆ. ಬಿದಿರ ಬೊಂಬಿನಲ್ಲಿ ಫಿರಂಗಿಯ ಸದ್ದು, ಬಾಳೆದಿಂಡಿನಲ್ಲಿ ಚಟಪಟ ಸಿಡಿಕೆ, ತೆಂಗಿನ ಗರಿಯಲ್ಲಿ ಇರಂಟಿಯ ನಾದ ಹೊಮ್ಮಿಸುವ ಗ್ರಾಮೀಣ ಮಕ್ಕಳಾಟಗಳು ಸಿದ್ಧವಾದ್ಯಗಳಿಂದ ಅಸಾಧ್ಯ ಎಂಬುದನ್ನು ನಾವು ಮನಗಾಣಬೇಕಾದ ಸತ್ಯ ಇಂದು ನಮ್ಮ ಮುಂದಿದೆ."[21]

ಇದನ್ನು ಇಲ್ಲಿ ಪ್ರಸ್ತಾಪಿಸಿದ ಕಾರಣ, ನಾವು ಸಂಗೀತವನ್ನು ಸಿದ್ಧವಾದ್ಯಗಳಿಂದ, ಕೇವಲ ಗಾಯಕರ ಸುಮಧುರ ಕಂಠದಿಂದ ಬಳಸುವಲ್ಲಿಗೇ ಸೀಮಿತರಾಗಬಾರದು. ಸಾಧ್ಯತೆಗಳನ್ನು ಸೃಷ್ಟಿಸುವ ಪ್ರಯತ್ನ ಮಾಡಬೇಕು. ಗುಂಪು ಧ್ವನಿಯನ್ನು ಎತ್ತರಿಸಿ, ಇಳಿಸಿ ಹೊಸ ಶಬ್ದಲೋಕವನ್ನು ನಿರ್ಮಿಸುವುದು, ಗ್ರಾಮೀಣ ಆಟಿಕೆಗಳನ್ನು ಬಳಸಿ ಸಂಗೀತವನ್ನು ಸೃಷ್ಟಿಸುವುದು, ಹೀಗೆ ಪ್ರಯೋಗಗಳನ್ನು ನಡೆಸುತ್ತಾ ಹೋದರೆ ಭಾಗವಹಿಸುವ, ಪ್ರೇಕ್ಷಕರಾಗಿ ಪಾಲ್ಗೊಳ್ಳುವ ಮಕ್ಕಳ ಕಲ್ಪನಾಶಕ್ತಿ ಬೆಳೆಯುತ್ತದೆ. ಇದಕ್ಕೆ ಒಂದು ಮಾದರಿಯನ್ನು ಉಲ್ಲೇಖಿಸುತ್ತೇನೆ. 'ಮೃಗ ಮತ್ತು ಸುಂದರಿ' ನಾಟಕವನ್ನು ರಂಗಕರ್ಮಿ ಬೆಳೆಯೂರು ದೇವೇಂದ್ರರವರು ಕೆಳದಿಯ ಗ್ರಾಮೀಣ ಮಕ್ಕಳಿಂದ ಪ್ರದರ್ಶಿಸುವ ಸಂದರ್ಭದಲ್ಲಿ ಮೃಗ ಪ್ರವೇಶಿಸುವ ಸಂದರ್ಭದ ಭಯಾನಕತೆಯನ್ನು ಸೃಷ್ಟಿಸಲು, ಮಕ್ಕಳ ಧ್ವನಿಯನ್ನೇ ಬಳಸಿ ಯಶಸ್ವಿಯಾದರು. ಇಂತಹ ಹಲವು ಪ್ರಯೋಗ ಮಾಡುವ ಅವರು, ಕೇವಲ ಮಕ್ಕಳ ಅಭಿನಯ, ಧ್ವನಿಗಳಿಂದಲೇ ಸನ್ನಿವೇಶಗಳನ್ನು ನಿರ್ಮಿಸುವ ಕೌಶಲವನ್ನು ಹೊಂದಿದ್ದಾರೆ. ಇಂತಹ ಪ್ರಯತ್ನಗಳನ್ನು ಗಮನಿಸಿದಾಗ, ಮಕ್ಕಳ ರಂಗಭೂಮಿಯಲ್ಲೂ ಸಂಗೀತ, ನೃತ್ಯಗಳ ಪ್ರಯೋಗಕ್ಕೆ ಇನ್ನೂ ವಿಪುಲ ಅವಕಾಶವುಂಟೆಂಬ ಸತ್ಯ ನಮಗೆ ಮನವರಿಕೆಯಾಗುತ್ತದೆ.

## 8. ಪ್ರದರ್ಶನ ಶ್ರೇಷ್ಟತೆ ಮತ್ತು ಮಕ್ಕಳ ನಾಟಕ

ನಾವು ಮಕ್ಕಳಿಗೆ ಶಿಕ್ಷಣ ನೀಡುವಾಗ ಸಾಮಾನ್ಯವಾಗಿ ಒಂದು ಪ್ರಶ್ನೆಗೆ ಒಂದು ಉತ್ತರವನ್ನು ಹೇಳುತ್ತೇವೆ, ಕೇಳುತ್ತೇವೆ. ಒಂದು ಪ್ರಶ್ನೆಗೆ ಒಂದೇ ಉತ್ತರವೆಂಬ ಭಾವನೆ ಬಲಿಯುವಂತೆ ಮಾಡುತ್ತೇವೆ. ಆದರೆ ನಿಜಜೀವನದಲ್ಲಿ ಒಂದು ಪ್ರಶ್ನೆಗೆ ಅನೇಕ ಸಾರಿ ಹಲವು ಉತ್ತರಗಳಿರುತ್ತವೆ. ನಾಟಕ ಮಕ್ಕಳಿಗೆ ಕಲಿಸುವುದೂ ಇದನ್ನೇ. ಮಕ್ಕಳು

ಬೆಳೆಯುತ್ತಾ, ಅವರ ವ್ಯಕ್ತಿತ್ವ ವಿಕಸನಗೊಳ್ಳುತ್ತಾ ಹೋದಂತೆ, ಬದುಕಿನ ದ್ವಂದ್ವಗಳು ನಿಧಾನವಾಗಿ ಅರಿವಾಗುತ್ತಾ ಹೋಗುತ್ತವೆ. ಒಂದು ಪ್ರಶ್ನೆಗೆ ಒಂದೇ ಉತ್ತರ ನೀಡಲಾರದ ವಾಸ್ತವ ಅವರಿಗೆ ಅರಿವಾಗುತ್ತದೆ. ಮಕ್ಕಳ ನಾಟಕದ ಪ್ರದರ್ಶನ ಶ್ರೇಷ್ಠತೆಯೂ ಅಂತಹುದೇ ಒಂದು ದ್ವಂದ್ವ.

ಮಕ್ಕಳ ನಾಟಕಗಳಲ್ಲಿ ಪ್ರದರ್ಶನದ ಶ್ರೇಷ್ಠತೆ ಮುಖ್ಯವಲ್ಲ, ಪ್ರದರ್ಶನದ ಶ್ರೇಷ್ಠತೆಯ ಪರಿಕಲ್ಪನೆಗಾಗಿ ನಾಟಕದ ಕ್ರಿಯೆಯನ್ನು ಬಳಲಿಸಬಾರದು. ಮಕ್ಕಳ ನಾಟಕ ಒಂದು ಉತ್ಸವವೇ ಹೊರತು ಅದೊಂದು ಪ್ರದರ್ಶನವಲ್ಲ. ಅದೊಂದು celebration, ಒಂದು ಉತ್ಸವದ ಆಚರಣೆ ಎಂಬ ಅಭಿಪ್ರಾಯವಿದೆ. ವಿದೇಶಗಳಲ್ಲಂತೂ ಹದಿವಯಸ್ಸಿಗಿಂತ ಕಡಿಮೆ ವಯಸ್ಸಿನ ಮಕ್ಕಳು ರಂಗದ ಮೇಲೆ ಅಭಿನಯಿಸುವಂತೆಯೇ ಇಲ್ಲ. ರಂಗದ ಮೇಲೆ ಅಭಿನಯಿಸುವುದು ವಯಸ್ಕರ ಕೆಲಸ. ದೊಡ್ಡವರು ಬರೆದ ಸಾಹಿತ್ಯಕ ವಾಕ್ಯಗಳನ್ನು ಕಲಿತು, ಮಕ್ಕಳು ರಂಗದ ಮೇಲೆ ಪ್ರದರ್ಶಿಸುವುದು ಅವರ ಸಾಮರ್ಥ್ಯಕ್ಕೆ ನಿಲುಕದ ಅನುಚಿತ ಕೆಲಸ, ಅದು ಅವರ ವ್ಯಾಪ್ತಿಯನ್ನು ಮೀರಿದ್ದು ಎಂಬ ಅಭಿಪ್ರಾಯವಿದೆ. ನಮ್ಮ ದೇಶದಲ್ಲಿ ಬಹುತೇಕ ಎಲ್ಲ ಭಾಷೆಗಳಲ್ಲೂ ಮಕ್ಕಳೇ ಪಾತ್ರ ವಹಿಸುವ, ಮಕ್ಕಳ ನಾಟಕಗಳು ಪ್ರದರ್ಶನಗೊಳ್ಳುತ್ತಿವೆ. ಮಕ್ಕಳ ನಾಟಕಗಳನ್ನು ಪ್ರದರ್ಶಿಸುವ ಸಂದರ್ಭದಲ್ಲಿ ಪ್ರದರ್ಶನದ ಗುಣಮಟ್ಟ ಮಾನದಂಡವಾಗಬಾರದು, ಪ್ರದರ್ಶನದ ಶ್ರೇಷ್ಠತೆಯೇ ಮುಖ್ಯವಾದರೆ ಮಕ್ಕಳ ಭಾಗವಹಿಸುವಿಕೆ, ಮಕ್ಕಳ ಒಳಗೊಳ್ಳುವಿಕೆ ಮುಖ್ಯವಾಗದೆ, ಪ್ರದರ್ಶನದ ನಿಖರತೆಗೆ ಹೆಚ್ಚು ಗಮನ ನೀಡಲಾಗುತ್ತದೆ. ಅವರ ಸಾಮೂಹಿಕ ಪಾಲ್ಗೊಳ್ಳುವಿಕೆಗಿಂತ, ಅವರನ್ನು ಗುಣಮಟ್ಟದ ಆಧಾರದ ಮೇಲೆ ಆಯ್ಕೆಮಾಡಿ, ಪ್ರದರ್ಶನವನ್ನೇ ಗಮನದಲ್ಲಿಟ್ಟು ತರಬೇತಿ ನೀಡಲಾಗುತ್ತದೆ. ಇದರಿಂದ ಮಕ್ಕಳ ಕೀಳರಿಮೆ ನಾಶವಾಗುವ ಬದಲು ಹೆಚ್ಚುತ್ತದೆ ಎಂಬ ಅಭಿಪ್ರಾಯಗಳಿವೆ.

ಆದರೆ ಕನ್ನಡದ ಸಂದರ್ಭದಲ್ಲಿ, ಭಾರತೀಯ ರಂಗಭೂಮಿಯಲ್ಲಿ ಶ್ರೇಷ್ಠ ಮಕ್ಕಳ ನಾಟಕಗಳನ್ನು ಪ್ರದರ್ಶಿಸಿದ, ಅತ್ಯುತ್ತಮ ಪ್ರದರ್ಶನಗಳನ್ನು ನೀಡಿದ ಬಿ.ವಿ.ಕಾರಂತರು ಪ್ರದರ್ಶನದ ಗುಣಮಟ್ಟವನ್ನು ಕಾದುಕೊಂಡು ತರಬೇತಿಗೆ ಸಿಕ್ಕಿದ ಎಲ್ಲ ಮಕ್ಕಳನ್ನೂ, ಉತ್ಸವದಲ್ಲಿ ಪಾಲ್ಗೊಳ್ಳಲು ಬಂದ ಎಲ್ಲರನ್ನೂ ಸೇರಿಸಿಕೊಂಡು ಯಶಸ್ವಿಯಾದ ಉದಾಹರಣೆಗಳೂ ಇದೆ. ಕಾರಂತರು ಮಕ್ಕಳ ನಾಟಕಗಳನ್ನು ಆಡಿಸುವಾಗ ಭಾಗವಹಿಸಲು ಬಂದ ಮಕ್ಕಳಲ್ಲಿ ಕೆಲವರನ್ನು ಮಾತ್ರ ಆಯ್ಕೆ ಮಾಡುವುದನ್ನು ಖಡಾಖಂಡಿತವಾಗಿ ವಿರೋಧಿಸುತ್ತಾರೆ. ಅವರು ತಮ್ಮ ಭಾಷಣವೊಂದರಲ್ಲಿ, "ಮಕ್ಕಳ ನಾಟಕಗಳಲ್ಲಿ ಮಕ್ಕಳ ಆಯ್ಕೆಗಾಗಿ ಸಂದರ್ಶನ ಮಾಡೋದು ಮಕ್ಕಳ ಮೇಲೆ ಅತ್ಯಾಚಾರ ಮಾಡಿದಂತೆ."[22] ಎಂದು ಕಟುವಾಗಿ ಟೀಕಿಸಿದ್ದಾರೆ. ಕಾರಂತರು ಎಂದೂ ಮಕ್ಕಳನ್ನು ಆಯ್ಕೆ ಮಾಡಲಿಲ್ಲ. ಅವರು ಮೊದಲ ಬಾರಿಗೆ 'ಪಂಜರಶಾಲೆ'ಯನ್ನು ಹೆಗ್ಗೋಡಿನಲ್ಲಿ ಆಡಿಸಿದ ಬಗೆಯನ್ನು ಕೆ.ವಿ.ಸುಬ್ಬಣ್ಣ ಹೀಗೆ ವಿವರಿಸಿದ್ದಾರೆ.

"ಮಕ್ಕಳ ನಾಟಕ ಮಾಡಿಸಲಿಕ್ಕಾಗಿ ಆಗ ಕಾರಂತರು ಹೆಗ್ಗೋಡಿಗೆ ಬಂದಾಗ ಮೊದಲನೇ ದಿನ ನಾವು ಮಕ್ಕಳ ಆಯ್ಕೆಗಾಗಿ 'ಸಂದರ್ಶನ'ವನ್ನೇರ್ಪಡಿಸಿದ್ದೆವು. ಆಯ್ಕೆಗೆ ತಕ್ಕಷ್ಟು ಅವಕಾಶವಿರಲಿ ಅಂತ ಎಂಬತ್ತು ಹೆಣ್ಣು ಗಂಡು ಮಕ್ಕಳನ್ನು ಜಮಾಯಿಸಿದ್ದೆವು. ಕಾರಂತರು ಸಂದರ್ಶನ ನಡೆಸಲೇ ಇಲ್ಲ. ಇಷ್ಟೂ ಮಕ್ಕಳು ಇರಲಿ ಎಂದರು. ಉಮೇದಿರುವ ಮಕ್ಕಳು ಇನ್ನೂ ಇದ್ದರೆ ಬಂದು ಸೇರಿಕೊಳ್ಳಲಿ ಎಂದರು. ಪ್ರಾರಂಭದ ನಾಲ್ಕೆಂಟು ದಿನಗಳ ತಾಲೀಮುಗಳಲ್ಲಿ ಕಾರಂತರು ಮಕ್ಕಳಿಗೇ ಕೆಲವು ಸನ್ನಿವೇಶಗಳನ್ನು ನಿರ್ಮಿಸಲು ತಾಕೀತು ಕೊಟ್ಟರು. ನಾಟಕದ ಮಧ್ಯೆ ಮಧ್ಯೆ ಬರುವ ಸನ್ನಿವೇಶಗಳನ್ನು ಮಕ್ಕಳಿಗೆ ಹೇಳಿ ಅವರು ಗುಂಪುಗುಂಪಾಗಿ ಅದನ್ನು ನಿರ್ಮಿಸಲು ಪ್ರೋತ್ಸಾಹಿಸಿದರು. ಗಿಳಿಗಳ ಗುಂಪಾಗಿ, ಪ್ರಶಂಸಕ ನಿಂದಕ ಗುಂಪುಗಳಾಗಿ, ಕಾರ್ಮಿಕರ ಗುಂಪಾಗಿ, ಪಂಡಿತ ಆಸ್ಥಾನಿಕರುಗಳ ಗುಂಪಾಗಿ, ಉದ್ದಾನುದ್ದದ ಊರ ದಿಬ್ಬಣ ರಾಜ ಮೆರವಣಿಗೆಯಾಗಿ ಇತ್ಯಾದಿ... ಮುಂದೆ ಕ್ರಮೇಣ ಇವುಗಳನ್ನೆಲ್ಲ ಕುಣಿಕೆ ಸೇರಿಸಿ ಹೊಲಿದು ನಾಟಕದ ವಾಸ್ತುವನ್ನು ತಯಾರಿಸಿದರು. ಆಶು ವಿಸ್ತರಣೆಯ ಸಂದರ್ಭದಲ್ಲಿ ಕಾರಂತರು ನಿರ್ದೇಶಿಸುತ್ತಿರಲಿಲ್ಲ. ಬದಲಿಗೆ, ಗುಂಪಿನಲ್ಲಿ ತಾನೂ ಕೂಡಿಕೊಂಡು ಅದನ್ನು ಸೃಜನಶೀಲವಾಗಿಸುತ್ತಿದ್ದರು. ಇಡೀ ಗುಂಪು ಹೊತ್ತಿಕೊಳ್ಳುವಂತೆ ಮಾಡುತ್ತಿದ್ದರು.

ಕಾರಂತರು ತಯಾರಿಸಿಕೊಂಡು ತಂದಿದ್ದ ಸ್ಕ್ರಿಪ್ಟ್ ಅವರೇ ಹೇಳಿದಂತೆ ಕಚ್ಚಾ ಇತ್ತು. ತಿದ್ದಿಕೊಡಿ, ಪ್ರತಿ ಮಾಡಿಸೋಣ ಎಂದರೆ ಬೇಕಿಲ್ಲಪ್ಪ ಎಂದರು. ಮೂಲತಃ ಅದು ಅವರೇ ಹಿಂದೆ ಮಾಡಿಕೊಂಡಿದ್ದ ಹಿಂದಿ ಸ್ಕ್ರಿಪ್ಟ್, ಈಗ ಅದರ ಮೇಲೆ ಹಿಂದಿ ಸಾಲುಗಳ ಮಧ್ಯದ ಎಡೆಯಲ್ಲಿ ಕನ್ನಡ ಅನುವಾದವನ್ನು ಕುಚುಕಿ ಬರೆದುಕೊಂಡಿದ್ದರು. ಆ ಕಚ್ಚಾ ಪ್ರತಿಗಳಿಂದ ಮಾತುಗಳನ್ನು ಅವರೇ ಓದಿ ಹೇಳುತ್ತಿದ್ದರು. ಬೇರೆಯವರಿಗೆ ಅದು ಓದಲು ಬರುವಂತೆಯೂ ಇರಲಿಲ್ಲ. ಮಕ್ಕಳು ಕೇಳಿ ಕೇಳಿ ಕಲಿತುಕೊಳ್ಳಬೇಕಿತ್ತು. ಒಂದೆರಡು ದೊಡ್ಡ ಪಾತ್ರಗಳ ಮಾತುಗಳನ್ನು ಮಾತ್ರ ಮಕ್ಕಳೇ ಬಾಯಲ್ಲಿ ಕೇಳಿ ಬರೆದುಕೊಂಡು ಕಲಿತರು.

ತಾಲೀಮು ಬಿಟ್ಟು ಮನೆಗೆ ಬಂದರೆ ಅವರ 'ಹೋಮ್‌ವರ್ಕ್' ಶುರುವಾಗುತ್ತಿತ್ತು. ಹಾಗೆಂದರೆ, ನಾವು ತಿಳಿದಂತೆ ಸ್ಕ್ರಿಪ್ಟ್ ಮೇಲಿನ ಕೆಲಸವಲ್ಲ. ಅವರು ಸ್ಕ್ರಿಪ್ಟ್ ನೋಡುತ್ತಿದ್ದುದು ಎರಡು ಕಿ.ಮೀ. ನಡೆದು ಹೋಗುವಾಗ, ಬರುವಾಗ ದಾರಿಯ ಮೇಲೆ ನಡೆಯುತ್ತಲೇ. ಹಾರ್ಮೋನಿಯಮ್ ಇಟ್ಟುಕೊಂಡು ಗಂಟೆಗಳ ಕಾಲ ನುಡಿಸಿಕೊಳ್ಳುವುದು ಅವರ 'ಹೋಂವರ್ಕ್'. ಪ್ರಾರಂಭದ ದಿನಗಳಲ್ಲಿ ತುಂಬಾ ಚಡಪಡಿಸುತ್ತಿದ್ದರು. ಒಮ್ಮೆ ನಡುರಾತ್ರಿ ಇದ್ದಕ್ಕಿದ್ದಂತೆ ಎದ್ದು ಹಾರ್ಮೋನಿಯಮ್ ಜೊತೆ ಹಾಡಿಕೊಳ್ಳತೊಡಗಿದರು. ನಾನು ಸದ್ದು ಮಾಡದೆ ಕದ್ದು ಹೋಗಿ ಬಾಗಿಲ ಹೊರಗೆ ನಿಂತು ಕೇಳಿದ್ದೆ. ಇವತ್ತಿಗೂ ಅದು ನನ್ನಲ್ಲಿ ಮೀಸಲು ನೆನಪಾಗಿ ಉಳಿದಿದೆ. ಹೊರಗೆ ಅವತ್ತು ತೆಳು ಬೆಳದಿಂಗಳು ಹರಡಿಕೊಂಡಿತ್ತು.

ಹೀಗೆ, ನಾಟಕದಲ್ಲಿ ಶುರುವಿಗೆ, ತುದಿಗೆ ಮತ್ತು ಮಧ್ಯೆ ಕೂಡ ಮರುಕಳಿಸುವ 'ವಸ್ತು ಸಂಗೀತ'ವು ಸಿದ್ಧವಾದ ಮೇಲೆ ಮುಂದಿನ ತಾಲೀಮುಗಳಲ್ಲಿ ಅವರು ಹೆಚ್ಚು ಸ್ವಸ್ಥರಾಗಿದ್ದರು ಅಂತ ನನಗೆ ನೆನಪು ಅಥವಾ ಭ್ರಮೆ. ನಾಟಕವನ್ನು ಎಲ್ಲಿ ಮಾಡುವುದು ಅಂತ ಅವರು ನಮ್ಮ ಶಾಲೆಯಿರುವ ಗುಡ್ಡದ ಎಲ್ಲ ಮಗ್ಗಲುಗಳನ್ನು ಸರ್ವೆ ಮಾಡಿದರು. ಇಲ್ಲಿಯೇ ಮಾಡೋಣ, ಇಲ್ಲಿಯೇ ಮಾಡೋಣ ಎನ್ನುತ್ತಾ ಹತ್ತು ಕಡೆ ನಿಂತು ಅಲ್ಲಲ್ಲಿ ಗುರುತು ಹಾಕಿದರು. ದೀಪ ಮುಂತಾದ ವ್ಯವಸ್ಥೆಗಳ ಅನುಕೂಲಕ್ಕಾಗಿ ಕಡೆಗೆ, ನಮ್ಮಲ್ಲಿದ್ದ ತೆರೆದ ರಂಗವೇದಿಕೆಯನ್ನೇ ಬಳಸಿಕೊಳ್ಳುವುದಾಗಿ ನಿರ್ಧರಿಸಿದರು. ವೇದಿಕೆಯ ಜೊತೆಗೆ ಅಕ್ಕಪಕ್ಕ ಸುತ್ತಮುತ್ತಣ ಜಾಗವನ್ನು ರಂಗಸ್ಥಳವಾಗಿ ಕೂಡಿಸಿಕೊಂಡರು.

ನಾಟಕ ತಯಾರಾಗಿ ಪ್ರದರ್ಶನವಾದಾಗ ಅದೊಂದು ಹಾಡು ಕುಣಿತ ಚಟುವಟಿಕೆಗಳ ದೊಡ್ಡ ಹಬ್ಬವಾಗಿತ್ತು. ಬೆಂಗಳೂರಿನ ಕೆಲವು ರಂಗ ಮಿತ್ರರೂ, ನಮ್ಮ ಊರಿನವರೂ ಕೂಡಿಯೇ ನಾಟಕಕ್ಕೆ ಮರುಳಾಗಿ ಹೋದರು. 'ಅದೊಂದು ಜಾತ್ರೆ ಕಂಡಂಗಿತ್ತು' ಅನ್ನುವುದು ನಮ್ಮೂರಿನ ಸಾಮಾನ್ಯ ಪ್ರೇಕ್ಷಕನೊಬ್ಬನ ಪ್ರತಿಕ್ರಿಯೆಯಾಗಿತ್ತು. ಮುಂದೆ ಅವರು ಮಾಡಿದ 'ನೀಲಿಕುದುರೆ' 'ಇಸ್ಪೀಟ್ ರಾಜ್ಯ' ಮುಂತಾದ ಮಕ್ಕಳ ನಾಟಕಗಳೂ ಇದೇ ರೀತಿಯಲ್ಲಿ ಕನ್ನಡದಲ್ಲಿ ಮೈಲುಗಲ್ಲುಗಳಾಗಿ ನಿಂತವು."[23]

ಕೆ.ವಿ.ಸುಬ್ಬಣ್ಣನವರ ಲೇಖನವನ್ನು ಇಷ್ಟೊಂದು ದೀರ್ಘವಾಗಿ ಇಲ್ಲಿ ಉಲ್ಲೇಖಿಸಿರುವುದು, ಪ್ರಾಯಶಃ ಅದು ನೀಡುವ ನಾಟಕ ಕಟ್ಟುವ ಕ್ರಿಯೆಯ ವಿವರಣೆಗಾಗಿ. ಇಡೀ ಒಂದು ಮಕ್ಕಳ ನಾಟಕ ಹೇಗೆ, ಮಕ್ಕಳ ಸೃಜನಶೀಲತೆಯನ್ನು ಒಳಗೊಂಡೂ ಯಾವುದೇ ಒತ್ತಡ-ಒತ್ತಾಯಗಳಿಲ್ಲದೆ ಶ್ರೇಷ್ಠ ಪ್ರದರ್ಶನವಾಗಬಲ್ಲದು ಎಂಬುದನ್ನು ಸುಬ್ಬಣ್ಣನವರು ಇದರಲ್ಲಿ ವಿವರಿಸಿದ್ದಾರೆ. ನಾವು ಈ ಅಧ್ಯಾಯದಲ್ಲಿ ಎತ್ತಿಕೊಂಡ ಹಲವು ಪ್ರಶ್ನೆಗಳಿಗೆ ನಾಟಕದ ಸ್ಕ್ರಿಪ್ಟ್‌ನಿಂದ ಹಿಡಿದು ಸಂಗೀತದವರೆಗೆ ಈ ಲೇಖನಭಾಗ ನಮಗೆ ಉತ್ತರವಾಗಿ ನಿಲ್ಲುತ್ತದೆ.

ಹೀಗೆಂದ ಮಾತ್ರಕ್ಕೆ ಪ್ರದರ್ಶನ ಶ್ರೇಷ್ಠತೆಯ ಕಾರಣವನ್ನೇ ಮುಂದಿಟ್ಟುಕೊಂಡು ಮಕ್ಕಳ ಮೇಲೆ ಒತ್ತಡ-ಒತ್ತಾಯ ಹೇರುವ ಪ್ರಸಂಗವೂ ಸಾಧ್ಯ. ಸ್ಪರ್ಧೆಯೊಂದರಲ್ಲಿ ನಾಟಕವನ್ನು ಪ್ರದರ್ಶಿಸುವ ಸಂದರ್ಭದಲ್ಲಿ, ಅಥವಾ ಒಳ್ಳೆಯ ನಿರ್ದೇಶಕರೆಂಬ ಹಣೆಪಟ್ಟಿ ಕಟ್ಟಿಕೊಳ್ಳುವ ಸಂದರ್ಭದಲ್ಲಿ, ಅಥವಾ ಒಳ್ಳೆಯ ತಂಡ, ಒಳ್ಳೆಯ ಶಾಲೆ ಎನ್ನುವ ಬಿರುದಿಗೆ ಪಾತ್ರರಾಗಬೇಕೆಂಬ ಖಯಾಲಿಯಲ್ಲಿ ಮಕ್ಕಳ ಮೇಲೆ ಒತ್ತಡ ಹೇರುವ ಸಂದರ್ಭಗಳೂ ಇವೆ. ಇಂತಹ ಸಂದರ್ಭದಲ್ಲಿ ನಾಟಕದಲ್ಲಿ ಪಾತ್ರವಹಿಸುವ ಮಕ್ಕಳನ್ನೂ, ಬಾಲಕಾರ್ಮಿಕರೆಂದೇ ಪರಿಗಣಿಸಬೇಕಾಗುತ್ತದೆ.

ಆದರೆ ಇಲ್ಲಿ ನಾವೊಂದು ಮುಖ್ಯವಾದ ಮಾನವೀಯ ಅಂಶವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಯಾರೋ ಕೆಲವರು ಬಾಲಕಲಾವಿದರನ್ನು ಬಾಲ

ಕಾರ್ಮಿಕರಂತೆ ದುಡಿಸಿಕೊಳ್ಳಲು ಹವಣಿಸಬಹುದು ಎಂಬ ಕಾರಣಕ್ಕಾಗಿ ಮಕ್ಕಳ ನಾಟಕಗಳ ಪ್ರದರ್ಶನಕ್ಕೆ ಗುಣಮಟ್ಟದ ಮಾನದಂಡವಿರಬಾರದು ಎಂದು ನಿರೀಕ್ಷಿಸುವುದೂ ತಪ್ಪಾಗುತ್ತದೆ. ಮಕ್ಕಳು ಒಳಗೊಳ್ಳುವ ಕ್ರಿಯೆಯಲ್ಲಿ, ನಾಟಕದ ತರಬೇತಿಯ ಸಂದರ್ಭದಲ್ಲಿ ಅದನ್ನು ನಿರ್ವಹಿಸುವವರು ಯಾವ ರೀತಿ ಮಕ್ಕಳನ್ನು ಬಳಸಿಕೊಳ್ಳುತ್ತಾರೆ ಎಂಬುದಕ್ಕೂ, ಪ್ರದರ್ಶನಕ್ಕೂ ನೇರವಾಗಿ ಗಂಟುಹಾಕುವ ಬದಲು, ಮಕ್ಕಳಿಗೆ ಒತ್ತಡವಿಲ್ಲದೆ ವಾತ್ಸಲ್ಯಪೂರ್ಣವಾಗಿ ಹೇಳಿಕೊಟ್ಟು ಅವರಲ್ಲಿ ಒಂದು ರೀತಿಯ ಶಿಸ್ತು ಸಂಯಮವನ್ನು ಪ್ರಚೋದಿಸುವುದು ಮುಖ್ಯವಾಗುತ್ತದೆ. ಇಲ್ಲದಿದ್ದರೆ ನಾಟಕವೂ ಒಂದು ಸಾಮೂಹಿಕ ವ್ಯಾಯಾಮವಾಗಿ ಬಿಡುತ್ತದೆ. ಅದರ ಬದಲು ಮಕ್ಕಳಿಗೂ ತಮ್ಮೊಳಗಿನ 'ಆತ್ಮ ಪ್ರದರ್ಶನ' ಪ್ರವೃತ್ತಿಯನ್ನು ಹೊರಗೆ ಹಾಕಿಕೊಳ್ಳುವ ಅವಕಾಶವನ್ನು, ಅವರೊಳಗಿರುವ ಅಭಿವ್ಯಕ್ತಿಯ ತುಡಿತಕ್ಕೊಂದು ಅವಕಾಶವನ್ನು ನೀಡಬಹುದು. ಬಿ.ವಿ.ಕಾರಂತರು ಹೇಳುವಂತೆ, ಮಕ್ಕಳಿಗೆ ಮೊದಲು 'ಆತ್ಮವಿಶ್ವಾಸ' ಬರುವಂತೆ ಮಾಡಬೇಕು. ನಂತರ ' ಆತ್ಮಪ್ರದರ್ಶನ' ಪ್ರವೃತ್ತಿ ಜಾಗೃತವಾಗುತ್ತದೆ.

ಜೊತೆಗೆ ನಾಟಕವೆನ್ನುವುದು ಮಕ್ಕಳ ಒಂದು ಸಾಮುದಾಯಿಕ ಚಟುವಟಿಕೆಯಾಗಿರುವುದರಿಂದ ಮಕ್ಕಳು ನಿರ್ದೇಶಕರೊಂದಿಗೆ, ಇತರ ಮಕ್ಕಳೊಂದಿಗೆ ಒಂದು ರೀತಿಯ ಸೃಜನಶೀಲ ಸಹಕಾರಕ್ಕೆ ಭಾಗಿಯಾಗುತ್ತಾರೆ. ಪರಸ್ಪರ ಭಿನ್ನಾಭಿಪ್ರಾಯಗಳನ್ನು ಮನ್ನಿಸಲು ಕಲಿತುಕೊಳ್ಳುತ್ತಾರೆ. ಒಡನಾಟದ ಮೂಲಕ ಅರ್ಥೈಸಿಕೊಳ್ಳುತ್ತಾ ಹೋಗುತ್ತಾರೆ. ಕೊನೆಗೆ ಎಲ್ಲರೂ ಒಂದು ತಂಡವಾಗಿ, ಭಿನ್ನತೆಯನ್ನು ಮರೆತು ಒಂದಾಗುತ್ತಾರೆ. ಯಾರು ನಾಯಕ, ಯಾರು ಮರ, ಯಾರು ಗೋಡೆ ಎಂಬುದು ಮುಖ್ಯವಾಗದೇ ಇಡೀ ನಾಟಕ ಮುಖ್ಯವಾಗುತ್ತದೆ. ಹಲವು ದಿನಗಳಲ್ಲಿ ಕಲೆತು ಕಲಿತ ತಮ್ಮ ಕಲಿಕೆಯನ್ನು ಪರೀಕ್ಷೆಗೊಡ್ಡಿಕೊಳ್ಳಲು ಸ್ವಾಭಾವಿಕವಾಗಿ ತುಡಿಯುತ್ತಾರೆ. ಅವರೊಳಗಿನ 'ಆತ್ಮಪ್ರದರ್ಶಕ' ಗುಣ ಪ್ರದರ್ಶನಕ್ಕಾಗಿ ಕಾಯುತ್ತದೆ. ಇಲ್ಲಿ ವೈಯುಕ್ತಿಕ ಸೋಲು ಗೆಲುವಿನ ಸ್ಪರ್ಧೆ ಇರದ ಕಾರಣ, ಸಾಮೂಹಿಕ ಗೆಲುವು ಮುಖ್ಯವಾಗುವ ಕಾರಣ ಈ ಪ್ರದರ್ಶನ ಪ್ರಿಯತೆಯಿಂದ ಯಾವುದೇ ಹಾನಿ ಇದ್ದಂತನ್ನಿಸುವುದಿಲ್ಲ.

ಕೊನೆಗೊಂದು ದಿನ ನಾಟಕವನ್ನು ಪ್ರದರ್ಶಿಸಲಾಗುತ್ತದೆ. ಆ ಪ್ರದರ್ಶನದಿಂದ ಮಕ್ಕಳಿಗೆ ಸಾಧನೆಯ ಸಂತೃಪ್ತಿಯಿಂದ ದೊರೆಯುವ ಧನ್ಯತೆಯ ಭಾವ ದಕ್ಕುತ್ತದೆ. ಕಲಿಕೆಗೆ ಇದು ಕೂಡ ಮುಖ್ಯವಾಗುತ್ತದೆ. ನಾಟಕವೊಂದು ಮುಗಿದಾಗ, ಅದನ್ನು ಪ್ರೇಕ್ಷಕರು ಮೆಚ್ಚಿದಾಗ ಅದರಲ್ಲಿ ಪಾತ್ರವಹಿಸಿದ ಪ್ರತಿ ಮಗುವೂ ಸಾಧನೆಯ ಸಂತೃಪ್ತಿ ಪಡೆಯುತ್ತದೆ. ಅದಕ್ಕೆ ಆತ್ಮಗೌರವ ಹೆಚ್ಚುತ್ತದೆ. ಆತ್ಮವಿಶ್ವಾಸ ಮೂಡುತ್ತದೆ. ಇಂತಹ ಆತ್ಮವಿಶ್ವಾಸ ವ್ಯಕ್ತಿತ್ವ ವಿಕಸನಕ್ಕೆ ಕಾರಣವಾಗುತ್ತದೆ.

ಈ ಕಾರಣದಿಂದ ಮಕ್ಕಳ ನಾಟಕಗಳ ಪ್ರದರ್ಶನದ ಗುಣಮಟ್ಟದ ಆಧಾರದ

ಮೇಲೆ ಕಲಿಕೆಯ ಕ್ರಮವನ್ನು ನಿರ್ಧರಿಸಲಾಗುವುದಿಲ್ಲ. ಮಕ್ಕಳ ನಾಟಕಗಳನ್ನು ನಾವು ಪ್ರದರ್ಶನಕ್ಕಾಗಿಯೇ ಸಿದ್ಧಪಡಿಸುವುದು ಅಪರಾಧವಲ್ಲ. ಅಂತಹ ಸಿದ್ಧತೆಯಲ್ಲಿ ಒತ್ತಡ–ಒತ್ತಾಯಗಳಿರಬಾರದು. ಸಾಮೂಹಿಕ ಪಾಲ್ಗೊಳ್ಳುವಿಕೆ ಇರಬೇಕು. ಮಕ್ಕಳ ಸೃಜನಶೀಲತೆಗೆ ಅವಕಾಶವಿರಬೇಕು, ಅಷ್ಟೆ.

## 9. ಮಕ್ಕಳ ಸಾಮರ್ಥ್ಯ ಮತ್ತು ನಾಟಕ

ಪಾರಂಪರಿಕ ರಂಗಭೂಮಿಯಲ್ಲಿದ್ದ ಸಮಗ್ರತೆಯ ದೃಷ್ಟಿ ಮಾಯವಾಗಿ ದೊಡ್ಡವರ ನಾಟಕ, ಮಕ್ಕಳ ನಾಟಕ ಎಂದು ವಿಭಜನೆ ಅವತರಿಸಿದ ಮೇಲೂ, ವಿಘಟನೆಗಳು ನಿಲ್ಲಲಿಲ್ಲ. ಮಕ್ಕಳ ನಾಟಕಗಳಲ್ಲೇ ಇದು ಯಾವ ವಯಸ್ಸಿನ ಮಕ್ಕಳಿಗೆ ಸೂಕ್ತ, ಯಾವ ಪ್ರದೇಶದ ಮಕ್ಕಳಿಗೆ ಸೂಕ್ತ, ಯಾವ ವರ್ಗದ ಮಕ್ಕಳಿಗೆ ಸೂಕ್ತ, ಇದು ಹಳ್ಳಿಯ ಮಕ್ಕಳಿಗೂ ಸ್ವೀಕಾರಾರ್ಹ ನಾಟಕವೇ.... ಎಂಬಿತ್ಯಾದಿ ಪ್ರಶ್ನೆಗಳು ಕೆಲವು ವಲಯಗಳಲ್ಲಿ ಕೇಳಿ ಬಂದವು. ಆದರೆ ಈ ತರಹದ ಸೂಕ್ಷ್ಮಾತಿಸೂಕ್ಷ್ಮ ವಿಭಜನೆ ಕೇವಲ ಪರಿಗಣನೆಗೆ ಅಥವಾ ಅಧ್ಯಯನಕ್ಕೆ ಸೂಕ್ತವೇ ಹೊರತು, ವಾಸ್ತವದಲ್ಲಿ ಇಷ್ಟೊಂದು ಸೂಕ್ಷ್ಮವಾದ ವಿಘಟನೆ ಬೇಕಿಲ್ಲವೆನಿಸುತ್ತದೆ. ಸಮರ್ಥಶಾಲಿಯಾದ ನಾಟಕವೊಂದು ಹಳ್ಳಿಯ ಮಕ್ಕಳಿಂದ ಹಿಡಿದು ದಿಲ್ಲಿಯ ಮಕ್ಕಳವರೆಗೆ, ಕೂಲಿಕಾರ್ಮಿಕರಿಂದ ಹಿಡಿದು ಮೇಲುವರ್ಗದ ಮಕ್ಕಳವರೆಗೆ ಎಲ್ಲರಿಗೂ ಸ್ವೀಕಾರಾರ್ಹವಾಗಿರುತ್ತದೆ.

ಈ ವಿಚಾರದಲ್ಲಿ 1971ರಲ್ಲಿ ಹೆಗ್ಗೋಡಿನ ಮಕ್ಕಳಿಗೆ ಕಾರಂತರು ಮಾಡಿಸಿದ 'ಪಂಜರಶಾಲೆ' ನಾಟಕವು 1971ರ ಜನವರಿ 27ರಂದು ಸಾಗರದಲ್ಲಿ ನೀಡಿದ ಪ್ರದರ್ಶನದ ಕುರಿತು 30–1–1971ರ ಉದಯವಾಣಿ ದಿನಪತ್ರಿಕೆಯಲ್ಲಿ ಕು.ಶಿ. ಹರಿದಾಸಭಟ್ಟರು ಬರೆದ ವಿಮರ್ಶೆಯ ಕೆಲವು ಸಾಲುಗಳನ್ನು ಗಮನಿಸಬಹುದು.

"ಎಂಭತ್ತು ಪುಟ್ಟ ಬಾಲಕ ಬಾಲಕಿಯರು ಈ ನಾಟಕದಲ್ಲಿ ಪಾತ್ರವಹಿಸಿದರು. ಅವರ ಮಾತು, ನಡೆ, ನುಡಿ, ಗೀತೋಚ್ಚಾರಣೆ, ರಂಗ ವಿತರಣೆ, ದೀಪ ಸೌಂದರ್ಯ ಎಲ್ಲರದಲ್ಲಿಯೂ ಕಾರಂತರು ಸಮನ್ವಯ ಸಾಧಿಸಿ, ಒಂದು ಅದ್ಭುತ ಲೋಕವನ್ನು ಸೃಷ್ಟಿ ಮಾಡಿದರು. ಸುಮಾರು ನೂರು ನಿಮಿಷ ನಡೆದ ಈ ನಾಟಕವನ್ನು ನೋಡಿದ ನೂರಾರು ಮಕ್ಕಳು ನಾಟಕದ ಗಿಳಿಗಳಂತೆ ಕುಕಿಲುತ್ತಾ ಹೊರಗೆ ಹೊರಟಲ್ಲಿಗೆ ನಾಟಕ ಸಾರ್ಥಕ್ಯ ಪಡೆಯಿತು. ಮಕ್ಕಳ ನಾಟಕ ಹೇಗಿರಬೇಕೆಂಬುದನ್ನು ಕಾರಂತರು ರಂಗಭೂಮಿಯ ಮೇಲೆ ಪ್ರಯೋಗ ಮಾಡಿದರು. ನಮ್ಮ ಪ್ರಾಥಮಿಕ ಶಾಲೆ, ಹೈಸ್ಕೂಲುಗಳ ಶಿಕ್ಷಕರಿಗೆ ಕಂಪನಿ ನಾಟಕದ ಗೀಳನ್ನು ಬಿಡಿಸಬೇಕಾದರೆ ಇಂಥ ಕಾರಂತ ಪ್ರಯೋಗದ ನೂರಾರು. ನಾಡಿನ ಎಲ್ಲಡೆಯಲ್ಲಿಯೂ ನಡೆಯಬೇಕಾದದ್ದು ಅಗತ್ಯ. ರಾಜ್ಯದ ಸಂಗೀತ

ನಾಟಕ ಅಕಾಡೆಮಿ ಇಂಥ ನೂತನ ಪ್ರಯೋಗಗಳಿಗೆ ಉತ್ತೇಜನ ಕೊಡಬೇಕಾದ್ದು ಕರ್ತವ್ಯ. ಆದರೆ ಈ ಪ್ರಯೋಗ ನಡೆಸಲು ಕಾರಂತರು ರಾಜಧಾನಿಯಿಂದ ಇನ್ನೂರು ಮೈಲಿ ದೂರದ, ಸಾಗರದ ಬಳಿಯ ಹೆಗ್ಗೋಡೆಂಬ ಹಳ್ಳಿಗೆ ಚಿತ್ತಯಿಸಿದರು. ಅಲ್ಲಿಗೆ ಅವರನ್ನು ಬರಮಾಡಿಕೊಂಡವರು ಕನ್ನಡದ ವಿಮರ್ಶಕ, ರಸಿಕ, ಸಂಘಟಕರಾದ ಕೆ.ವಿ.ಸುಬ್ಬಣ್ಣರವರು. ನಾಟಕ ಆಡಿಸಿದ ಸುಬ್ಬಣ್ಣನವರಿಗೂ, ನೋಡಿದ ನಮಗೂ ಮಹದಾನಂದವಾಗುವ ಮಾತನ್ನೇ ಕಾರಂತರು ನುಡಿದರು. 'ನೋಡಿ, ಎಂಟೇ ದಿನದಲ್ಲಿ ನಿಮ್ಮ ಹುಡುಗರು ತಯಾರಾಗಬಲ್ಲರು. ಈ ವಿಷಯದಲ್ಲಿ, ಮಕ್ಕಳ ಶಕ್ತಿಯಲ್ಲಿ ದಿಲ್ಲಿಯೂ ಒಂದೇ, ಹಳ್ಳಿಯೂ ಒಂದೇ.' ನಮ್ಮ ಮಕ್ಕಳಲ್ಲಿ ಹಳ್ಳಿ ಪಟ್ಟಣವೆಂಬ ಭೇದವಿಲ್ಲದೆ ಸುಪ್ತವಾಗಿರುವ ಕಲಾಶಕ್ತಿಯನ್ನು, ರಸಪ್ರಜ್ಞೆಯನ್ನು ಬೆಳೆಸಿ, ಶಾಲೆಯನ್ನು ಪಂಜರದ ಬದಲು ಒಂದು ನಂದನವನವನ್ನಾಗಿ ಪರಿವರ್ತಿಸಬಲ್ಲ ಮಾಟಗಾರರು – ಕಾರಂತರಂತ ಲೋಕ ಗುರುಗಳು – ನಮಗಿಂದು ಬೇಕಾಗಿದ್ದಾರೆ. ನಮ್ಮ ತಜ್ಞರಿಗೆ, ರಾಜಧಾನಿಯ ಮಹಾಪ್ರವೀಣರಿಗೆ – ಕಾರಂತರ ವಿಳಾಸ ಗೊತ್ತಿದೆಯೇ?"[24]

"ಮಕ್ಕಳ ಸುಪ್ತಪ್ರತಿಭೆ ದಿಲ್ಲಿಯಲ್ಲಿಯೂ ಒಂದೇ, ಹಳ್ಳಿಯಲ್ಲಿಯೂ ಒಂದೇ" ಎನ್ನಲು ಕಾರಂತರಿಗಿಂತ ಸಮರ್ಥರು ಬೇರಾರೂ ಇಲ್ಲ. ಯಾಕೆಂದರೆ ದೆಹಲಿ, ಅಹಮದಾಬಾದ್, ಬೆಂಗಳೂರು ಮುಂತಾದ ಮಹಾನಗರಗಳಲ್ಲಿ ಮಕ್ಕಳ ಪ್ರತಿಭೆಯನ್ನು ಕಂಡವರು ಕಾರಂತರು. ಪ್ರಾಯಶಃ ಕಾರಂತರಂತೆ ಬೇರೆಬೇರೆ ಭಾಷೆಯ, ಬೇರೆಬೇರೆ ರಾಜ್ಯಗಳ ಹಳ್ಳಿಗಳಲ್ಲಿ, ನಗರಗಳಲ್ಲಿ, ವೈವಿಧ್ಯಪೂರ್ಣ ಸಂದರ್ಭಗಳಲ್ಲಿ ಮಕ್ಕಳಿಗಾಗಿ ನಾಟಕ ಮಾಡಿಸಿದ ನಿರ್ದೇಶಕ ಭಾರತದಲ್ಲಿಯಂತೂ ಬೇರೆ ಯಾರೂ ಇಲ್ಲ. ಇಂಥವರ ಅನುಭವದ ನುಡಿಯನ್ನು ಸಮರ್ಥಿಸಲು ಬಹುಶಃ ಬೇರಾವ ಆಧಾರವೂ ಬೇಕಿಲ್ಲ.

ಈ ಕಾರಣದಿಂದ ನಾವು ಎಲ್ಲ ಮಕ್ಕಳನ್ನೂ ಒಂದೇ ಮಟ್ಟದಲ್ಲಿ ತೂಗಿ ನಮ್ಮ ಈ ಅಧ್ಯಯನವನ್ನು ಮುಂದುವರೆಸಬಹುದಾಗಿದೆ. ಮತ್ತೆ ಮತ್ತೆ ಮಕ್ಕಳಲ್ಲಿ ವರ್ಗೀಕರಣ ಮಾಡಿ, ಅವರೆಲ್ಲರಿಗೂ ಪ್ರತ್ಯೇಕ ನಾಟಕಗಳ ಅಗತ್ಯದ ಸಮರ್ಥನೆ ಮಾಡಬೇಕಾಗಿಲ್ಲ. ಪ್ರಾಯಶಃ ಸಮರ್ಥವಾದ ನಾಟಕಗಳು ನಮ್ಮ ಎಲ್ಲ ಮಕ್ಕಳಿಗೂ ಸ್ವೀಕಾರಾರ್ಹವೆಂಬುದಾಗಿ ನಾವು ನಿರ್ಣಯಿಸಬಹುದಾಗಿದೆ.

## ಉಲ್ಲೇಖಗಳು :

1. ಪ್ರೊ. ಕೆ.ಎಸ್.ದೇಶಪಾಂಡೆ, ಕನ್ನಡದಲ್ಲಿ ಸಂದರ್ಭ ಗ್ರಂಥಗಳು, ಮಕ್ಕಳ ಸಾಹಿತ್ಯ ಚಿಂತನ, ಮಕ್ಕಳ ಮನೆ, ಧಾರವಾಡ. 1989 ಪುಟ–225

2. Allport G.W.Pattern and growth in personality Newyork Holt, Rinehart and Winaton 1961.

3. Havinghurts R.J. Human Development and Education Newyork. Longmans 1953

4. Neil Mc. Castlin, Theater few young audience

5. ಬಿ.ವಿ.ಕಾರಂತರ ಭಾಷಣ ಕಿನ್ನರ ಮೇಳ 7.5.02 ತುಮರಿ

6. ಬಿ.ವಿ.ವೈಕುಂಠರಾಜು ಕನ್ನಡ ರಂಗಭೂಮಿ, ಕನ್ನಡ ವಿಶ್ವವಿದ್ಯಾನಿಲಯ–1997

7. ಕೆ.ವಿ.ಅಕ್ಷರ 'ಮಕ್ಕಳ ರಂಗಭೂಮಿ–ಹೊಸ ದಿಕ್ಕುಗಳು' ಮಕ್ಕಳ ರಂಗಭೂಮಿ–ಸಂ.ಕಿರಣ್‌ಭಟ್ ಮಕ್ಕಳ ನಾಟಕೋತ್ಸವ ಸಮಿತಿ–ಹೊನ್ನಾವರ 2001

8. Geisel G.B.Discipline viewed as a developmental need of the child, Nerve child.....1951.

9. Allinsmith W.Conscience and Conflict: the moral force is personality. Child Development-1957

10. Ausabel D.P. : Relationship between shame and guilt in the socializations process psychol Rev. 1955

11. ವಿಜಯಲಕ್ಷ್ಮಿ ಅಮ್ಮಿನಭಾವಿ : ಲೇಖನ : ಮಕ್ಕಳ ವ್ಯಕ್ತಿತ್ವ ವಿಕಾಸ ಮತ್ತು ಸಾಹಿತ್ಯ ಪುಸ್ತಕ, ಮಕ್ಕಳ ಸಾಹಿತ್ಯ ಚಿಂತನ, ಮಕ್ಕಳ ಮನೆ, ಧಾರವಾಡ.

12. ಬಿ.ವಿ.ಕಾರಂತರ ಭಾಷಣ ಕಿನ್ನರ ಮೇಳ 7.5.02 ತುಮರಿ

13. ಶ್ರೀಮತಿ ವೈದೇಹಿ ಭಾಷಣ, ಕಿನ್ನರ ಮೇಳ ಶಿಬಿರ, ತುಮರಿ 2001

14. ಮಕ್ಕಳ ಸಾಹಿತ್ಯ ಭಾಷಿಕ ಅಧ್ಯಯನ–ಮಕ್ಕಳ ಸಾಹಿತ್ಯ ಚಿಂತನ, ಮಕ್ಕಳ ಮನೆ ಧಾರವಾಡ 1989

15. Angrilli A.F. The psychosexual Identification of pre-school days J. Genet pyschol-1960

16. ಮಕ್ಕಳ ಸಾಹಿತ್ಯ ಭಾಷಿಕ ಅಧ್ಯಯನ– ಮಕ್ಕಳ ಸಾಹಿತ್ಯ ಚಿಂತನ, ಮಕ್ಕಳ ಮನೆ ಧಾರವಾಡ 1989

17. Frazee H.E. Children who later become schizophrenic, Smith Coll Studies... soc.wk 1953

18. Philip A.Coggin : Drama and Education, Teaching of drama–Richard Courtney Cassel – London – 1965

19. Philip A.Coggin : Drama and Education, Teaching of drama– Richard Courtney Cassel – London – 1965

20. ಈಶ್ವರಯ್ಯ : ರಂಗಸಂಗೀತಕ್ಕೆ ಹೊಸ ಉಸಿರು, ಬಿ.ವಿ.ಕಾರಂತ, ಸಂ: ಮುರಳೀಧರ ಉಪಾಧ್ಯ, ಹಿರಿಯಡ್ಕ, ಕರ್ನಾಟಕ ಸಂಘ, ಪುತ್ತೂರು. 1996

21. ಐ.ಕೆ.ಬೊಳುವಾರು, ಭಾರತೀಯ ಸಂದರ್ಭದಲ್ಲಿ ಮಕ್ಕಳ ರಂಗಭೂಮಿ, ಮಕ್ಕಳ ರಂಗಭೂಮಿ, ಸಂ:ಕಿರಣ್‌ಭಟ್, ಮಕ್ಕಳ ನಾಟಕೋತ್ಸವ ಸಮಿತಿ, ಹೊನ್ನಾವರ: 2001

22. ಬಿ.ವಿ.ಕಾರಂತರ ಭಾಷಣ ಕಿನ್ನರ ಮೇಳ 7.5.02 ತುಮರಿ

23. ಕೆ.ವಿ.ಸುಬ್ಬಣ್ಣ: ಬಿ.ವಿ.ಕಾರಂತರ ರಂಗಕಾಯಕ, ಬಿ.ವಿ ಕಾರಂತ ಸಂ:ಮುರಳೀಧರ ಉಪಾಧ್ಯ, ಹಿರಿಯಡ್ಕ, ಕರ್ನಾಟಕ ಸಂಘ, ಪುತ್ತೂರು.

24. ಕು.ಶಿ.ಹರಿದಾಸಭಟ್ಟ, ಉದಯವಾಣಿ ದಿನಪತ್ರಿಕೆ, 30.1.1971

***

# ಕನ್ನಡ ಮಕ್ಕಳ ನಾಟಕ ನಡೆದು ಬಂದ ದಾರಿ

–ಡಾ. ಗಜಾನನ ಶರ್ಮ

## ಮಕ್ಕಳು ಮತ್ತು ಸಾಹಿತ್ಯ, ರಂಗಭೂಮಿ

ನೊಬೆಲ್ ಪ್ರಶಸ್ತಿ ವಿಜೇತ ಐಸಾಕ್ ಬಶೆವಿಸ್ ಸಿಂಗರ್, ತಾನೇಕೆ ಮಕ್ಕಳ ಸಾಹಿತ್ಯ ರಚಿಸುತ್ತೇನೆ ಎಂಬುದಕ್ಕೆ ಈ ಕೆಳಗಿನ ಹತ್ತು ಕಾರಣಗಳನ್ನು ನೀಡಿದ್ದಾನೆ.[1]

1. ಮಕ್ಕಳು ಸಾಹಿತ್ಯಕೃತಿಗಳನ್ನು ಮಾತ್ರ ಓದುತ್ತಾರೆ, ವಿಮರ್ಶೆಯನ್ನಲ್ಲ; ಅವರು ವಿಮರ್ಶೆಗಳಿಗೆ ಮಹತ್ವ ಕೊಡುವುದಿಲ್ಲ.

2. ಅವರು ತಮ್ಮನ್ನು ತಾವು ಕಂಡುಕೊಳ್ಳುವುದಕ್ಕಾಗಲೀ, ತಮ್ಮ ಐಡೆಂಟಿಟಿಯನ್ನು ಪ್ರತಿಷ್ಠಾಪಿಸುವುದಕ್ಕಾಗಲೀ ಓದುವುದಿಲ್ಲ.

3. ಅವರು ತಮ್ಮನ್ನು ಗೊಂದಲಗಳಿಂದ ಬಿಡಿಸಿಕೊಳ್ಳುವುದಕ್ಕಾಗಲೀ, ತಮ್ಮೊಳಗಿನ ಅಪರಾಧೀ ಪ್ರಜ್ಞೆಯಿಂದ ಹೊರಬರುವುದಕ್ಕಾಗಲೀ ಓದುವುದಿಲ್ಲ.

4. ಅವರು ತಮ್ಮ ಓದನ್ನು ಮನಃಶಾಸ್ತ್ರದ ಒರೆಗೆ ಹಚ್ಚುವುದಿಲ್ಲ

5. ಅವರು ಸಮಾಜಶಾಸ್ತ್ರವನ್ನು ಆಧರಿಸಿ ಅರ್ಥ ಹಚ್ಚಲು ಹೋಗುವುದಿಲ್ಲ.

6. ಅವರು ಬ್ರೆಕ್ಟ್, ಕಾಫ್ಕಾ ಮುಂತಾದ ಪ್ರಸಿದ್ಧರ ಮೂಲಕ ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದಿಲ್ಲ.

7. ಅವರಿನ್ನೂ ಮಕ್ಕಳಾಗಿರುವುದರಿಂದ ದೇವರನ್ನೂ, ಕುಟುಂಬವನ್ನೂ, ಕಿನ್ನರರನ್ನೂ, ದೇವತೆಗಳನ್ನೂ, ಭೂತ ಪ್ರೇತ ಪಿಶಾಚಿಗಳನ್ನೂ, ಮಾಂತ್ರಿಕರನ್ನೂ, ಸುಸಂಬದ್ಧತೆಯನ್ನೂ, ಆದರ್ಶಗಳನ್ನೂ, ತರ್ಕಗಳನ್ನೂ ನಂಬುತ್ತಾರೆ.

8. ಅವರು ತಮ್ಮ ಇಷ್ಟಕ್ಕಾಗಿ ಮತ್ತು ಕುತೂಹಲಕ್ಕಾಗಿ ಓದುತ್ತಾರೆ. ಅವರು ತಮ್ಮ ಆಸಕ್ತಿ ಕೆರಳಿಸುವ ಸಾಹಿತ್ಯ ಕೃತಿಗಳನ್ನು ಓದುತ್ತಾರೆಯೇ ವಿನಃ ಅಡಿಬರಹ, ಟೀಕೆ ಟಿಪ್ಪಣಿ ಮತ್ತು ಮಾರ್ಗದರ್ಶಿಕೆಗಳನ್ನಲ್ಲ.

9. ಅವರಿಗೆ ಪುಸ್ತಕವನ್ನು ಓದುವುದು ಬೇಸರ ತರಿಸಿದಾಗ ಯಾರ ಮುಲಾಜೂ ಅಥವಾ ಯಾವ ಮುಜುಗರವೂ ಇಲ್ಲದೆ ಮುಚ್ಚಿಟ್ಟು ಆಕಳಿಸುತ್ತಾರೆ.

10. ಅವರು ಲೇಖಕನು ಮಾನವತೆಯ ಉದ್ಧಾರಕನಾಗಿರಬೇಕೆಂದು ನಿರೀಕ್ಷಿಸುವುದಿಲ್ಲ. ಅವರಿನ್ನೂ ಚಿಕ್ಕವರಾಗಿರುವುದರಿಂದ, ಅದು ಲೇಖಕನ ಶಕ್ತಿ ಮೀರಿದ ವಿಚಾರವೆಂದು ನಂಬಿರುತ್ತಾರೆ. ದೊಡ್ಡವರು ಮಾತ್ರ ಇಂತಹ ಬಾಲಿಶ ಭ್ರಮೆಗಳಿಂದ ಬಳಲುತ್ತಾರೆ.

ಪ್ರಾಯಶಃ ಮಕ್ಕಳ ಮನೋಭಾವವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ ಪ್ರಯೋಗಶೀಲ ವ್ಯಕ್ತಿ ಮಾತ್ರ ಇಂತಹ ನಿರ್ಣಯಗಳನ್ನು ತೆಗೆದುಕೊಳ್ಳಬಲ್ಲ. ದೊಡ್ಡವರು ಹೇಗೆ ಬಾಲಿಶ ಭ್ರಮೆಗಳಲ್ಲಿ ತೊಳಲಾಡುತ್ತಾ ಪುರುಷ ಪ್ರಯತ್ನಕ್ಕೆ ಮೀರಿದ ಸಾಧ್ಯತೆಗಳನ್ನು ಕಲ್ಪಿಸಿಕೊಂಡು, ಹತಾಶರಾಗುತ್ತಾರೆ ಎಂಬ ಸೂಕ್ಷ್ಮಗಳನ್ನು ಸಿಂಗರ್, ಮಕ್ಕಳ ಮನೋಭೂಮಿಕೆಯನ್ನು ಆಧರಿಸಿ ಸ್ಪಷ್ಟಪಡಿಸುತ್ತಾರೆ. ಪ್ರಾಯಶಃ ಹಲವು ಬಾಲಿಶ ಭ್ರಮೆಗಳನ್ನು ಮಕ್ಕಳ ರಂಗಭೂಮಿಯಲ್ಲಿ ಕೆಲಸ ಮಾಡುವವರೂ ಇಟ್ಟುಕೊಂಡಿರುತ್ತಾರೆ. ಹಾಗಾಗಿ ಮೇಲ್ಕಂಡ ಅಂಶಗಳು ಕೇವಲ ಮಕ್ಕಳ ಸಾಹಿತ್ಯಕ್ಕಲ್ಲ, ಮಕ್ಕಳ ನಾಟಕ ಕ್ಷೇತ್ರಕ್ಕೂ ಅವು ನಿಖರವಾಗಿ ಅನ್ವಯವಾಗುತ್ತವೆ. ಅದನ್ನು ದಶ ಸೂತ್ರಗಳನ್ನಾಗಿ ಇಟ್ಟುಕೊಂಡು, ನಾವು ಕನ್ನಡದಲ್ಲಿ ಮಕ್ಕಳ ನಾಟಕ ಕ್ರಮಿಸುತ್ತಾ ಬಂದ ಹಾದಿಯನ್ನು ಗಮನಿಸೋಣ.

## ಕನ್ನಡದಲ್ಲಿ ಮಕ್ಕಳ ನಾಟಕಗಳ ಆರಂಭ :

ಹಿಂದೆಯೇ ಹೇಳಿದಂತೆ ಹತ್ತೊಂಬತ್ತನೇ ಶತಮಾನದಲ್ಲಿ ಆರಂಭವಾದ ಇಂಗ್ಲೀಷ್ ಶಿಕ್ಷಣ ಮಾದರಿ, ನಮ್ಮಲ್ಲಿ ಮಕ್ಕಳ ಸಾಹಿತ್ಯ ಸೃಷ್ಟಿಗೆ ನಾಂದಿ ಹಾಡಿತು. ಮಕ್ಕಳ ಸಾಹಿತ್ಯ ಆರಂಭದಲ್ಲಿ ಕತೆ, ನಂತರ ಕಾವ್ಯದ ಮೂಲಕ ಪ್ರಾರಂಭವಾಗಿ, ಕ್ರಮೇಣ ನಾಟಕಕ್ಕೂ ವ್ಯಾಪಿಸಿತು. ಆರಂಭದಲ್ಲಿ ಪೌರಾಣಿಕ, ಐತಿಹಾಸಿಕ ಘಟನೆಯೊಂದರ ಸುತ್ತ ಶಾಲೆಯ ಅಧ್ಯಾಪಕರೋ ಅಥವಾ ಶಾಲೆಗೆ ಸಮೀಪವಾಗಿದ್ದ ಸಾಹಿತಿ ಮಿತ್ರರೋ ನಾಟಕವೆನ್ನಬಹುದಾಗಿದ್ದ (?) ಕೆಲವು ಸಂಭಾಷಣೆಗಳನ್ನು ಬರೆದುಕೊಡುತ್ತಿದ್ದರು. ಅದು ಶಾಲಾ ಅಧ್ಯಾಪಕರೆದುರು, ಪೋಷಕರೆದುರು ಮಕ್ಕಳಿಂದ ಅಭಿನಯಿಸಲ್ಪಟ್ಟು, 'ನಾಟಕ' ಎನ್ನಿಸಿಕೊಳ್ಳುತ್ತಿದ್ದವು. ಇಲ್ಲಿ ಕಥೆಯ ಆಯ್ಕೆಯಾಗಲೀ, ಸನ್ನಿವೇಶಗಳ ಆಯ್ಕೆಯಾಗಲೀ ಮಕ್ಕಳ ಬುದ್ಧಿಭಾವಗಳನ್ನು ಆಧರಿಸಿ ನಡೆಯುತ್ತಿರಲಿಲ್ಲ. ಘಟನೆಯ ಮಹತ್ವದ ಆಧಾರದ ಮೇಲೆ, ಆದರ್ಶಗಳ ಆಧಾರದ ಮೇಲೆ ಅವು ಆಯ್ಕೆಗೊಳ್ಳುತ್ತಿದ್ದವು. ಭಾಷೆಯಾಗಲೀ, ಸಂದರ್ಭಗಳೇ ಆಗಲಿ ಬಹಳಷ್ಟು ವೇಳೆ ಮಕ್ಕಳ ಇತಿಮಿತಿಯನ್ನು ಮೀರಿರುತ್ತಿದ್ದವು. ಕೇವಲ ಉರುಹಚ್ಚಿ ಒಪ್ಪಿಸುವುದಷ್ಟೇ ಮಕ್ಕಳ ಕೆಲಸವಾಗಿರುತ್ತಿತ್ತು.

ಏಕೆಂದರೆ ಮಕ್ಕಳನ್ನು ಬಳಸಿ, ಮಕ್ಕಳ ಕಂಠಪಾಠ ಪ್ರತಿಭೆಯನ್ನು ಬಳಸಿ ಇವು ಪ್ರದರ್ಶಿಸಲ್ಪಡುತ್ತಿದ್ದವೇ ಹೊರತು ಮಕ್ಕಳ ಭಾವ-ಭಾಷೆಗಳನ್ನು ಆಧರಿಸಿಯಲ್ಲ.

ಹಾಗೆ ನೋಡಿದರೆ ಕನ್ನಡದಲ್ಲಿ ಮಕ್ಕಳ ನಾಟಕವೊಂದು ಪ್ರದರ್ಶನವಾದ ದಾಖಲೆ ನಮಗೆ ಲಭ್ಯವಾಗುವುದು 20ನೇ ಶತಮಾನದ ಮೊದಲ ದಶಕದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಆಗ ಮದ್ರಾಸ್ ಪ್ರಾಂತ್ಯಕ್ಕೆ ಸೇರಿ, ಇಂಗ್ಲೀಷರ ಆಡಳಿತಕ್ಕೆ ಒಳಪಟ್ಟಿದ್ದ ಮಂಗಳೂರಿನಲ್ಲಿ ಹಲವು ಆಂಗ್ಲ ಮಿಷನರಿಗಳು ಶಾಲೆಗಳನ್ನು ಆರಂಭಿಸತೊಡಗಿದ್ದವು. ಈ ಮೊದಲೇ ಹೇಳಿದಂತೆ ಇಂತಹ ಶಾಲಾ ಕಾಲೇಜುಗಳಲ್ಲಿ ಪಾಶ್ಚಾತ್ಯ ನಾಟಕದ ತುಣುಕುಗಳು ಪಾಠಗಳಾಗಿರುತ್ತಿದ್ದವು. ಅವುಗಳ ಅಭ್ಯಾಸದಿಂದ ಪ್ರಭಾವಿತರಾಗಿದ್ದ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳಿಂದ ಅವುಗಳನ್ನು ಅಭ್ಯಾಸ ಮಾಡಿಸುವ ಪರಿಪಾಠವನ್ನು ಆರಂಭಿಸಿದರು. 1907ರ 5ನೇ ನವೆಂಬರ್‌ನಲ್ಲಿ ಸಂತ ಆಲೋಷಿಯಸ್ ಕಾಲೇಜಿನ ವಿದ್ಯಾರ್ಥಿಗಳು ಮದ್ರಾಸ್ ಗವರ್ನರ್ ಸರ್ ಅರ್ಥರ್ ಲೋಲೆಯವರು ಭೇಟಿಯಿತ್ತಾಗ 'ಲೋಭಿ' ಎಂಬ ಇಂಗ್ಲೀಷ್ ವಿನೋದ ನಾಟಕವಾಡಿದ್ದಾಗಿ, 1907ರ 'ಸ್ವದೇಶಾಭಿಮಾನಿ' ಎಂಬ ದಿನಪತ್ರಿಕೆ ದಾಖಲಿಸಿದೆ.

1909ರಲ್ಲಿ ಪಡುಮಾಡಿ ಬೋರ್ಡ್ ಶಾಲೆಯ ಮಕ್ಕಳು ಉಪಾಧ್ಯಾಯರ ಸಮ್ಮೇಳನದಲ್ಲಿ 'ಮರವು ಸಾಕ್ಷಿಯಾದದ್ದು' ಎಂಬ ನಾಟಕವನ್ನು ಪ್ರದರ್ಶಿಸಿದರು. ಮಕ್ಕಳ ವಾಕ್ಚಾತುರ್ಯ, ಚಟುವಟಿಕೆಗಳನ್ನು ಹಾಗೂ ಶಾಲಾ ಉಪಾಧ್ಯಾಯರ ತರಬೇತಿಯನ್ನು, ಈ ನಾಟಕವು ತೋರಿಸಿತ್ತು ಎಂದು ಪತ್ರಿಕಾ ವರದಿ ತಿಳಿಸುತ್ತದೆ. 1910ರಲ್ಲಿ ಗುಡ್ಡೆ ಬಿ.ಜಿ.ಎಮ್. ಶಾಲೆಯಲ್ಲಿ 'ಸ್ನೇಹತ್ವದ ಮರ್ಮಗಳು' ಎಂಬ ನಾಟಕವನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು. ಅದೇ ವರ್ಷ ಪಣಂಬೂರು ಬೋರ್ಡ್ ಶಾಲೆಯ ವಾರ್ಷಿಕೋತ್ಸವ ಸಂದರ್ಭದಲ್ಲಿ ಶಾಲೆಯ ವಿದ್ಯಾರ್ಥಿಗಳು 'ಠಕ್ಕರು ಶಿಕ್ಕದಿರರು' ಎಂಬ ಕಥೆ ಅಭಿನಯಿಸಿದ್ದರು. 1912ರಲ್ಲಿ ಬಂಟವಾಳ ವೆಂಕಟರಮಣ ಸ್ವಾಮಿ ಹಿಂದೂ ಎಲಿಮೆಂಟರಿ ಶಾಲೆಯವರು 'ತಾಂಡವನ ಕಥೆ' ಎಂಬ ಪೌರಾಣಿಕ ನಾಟಕವನ್ನು ಪ್ರದರ್ಶಿಸಿದರು.

ಮುಂದೆ 1912ರಲ್ಲಿ ಮಂಗಳೂರಿನ ಕೆನರಾ ಹೈಸ್ಕೂಲ್ ವಿದ್ಯಾರ್ಥಿಗಳು ವಾರ್ಷಿಕೋತ್ಸವದ ಸಲುವಾಗಿ ಎಮ್.ಎನ್. ಕಾಮತ್ ರಚಿಸಿದ 'ಧ್ರುವ ವಿಜಯ'ದ ಎರಡು ಅಂಕಗಳನ್ನು ಅಭಿನಯಿಸಿದರು. 1913ರಲ್ಲಿ ಕೆನರಾ ಹಾಸ್ಟೆಲ್ ವಿದ್ಯಾರ್ಥಿಗಳು ಎಮ್.ಎನ್. ಕಾಮತ್‌ರ ಚಂದ್ರಹಾಸ್ಯಾಭ್ಯುದಯ ನಾಟಕವನ್ನು ಅಭಿನಯಿಸಿದರೆ, ಇದೇ ನಾಟಕ 1914ರಲ್ಲಿ ಕೆನರಾ ಹೈಸ್ಕೂಲಿನ ವಾರ್ಷಿಕೋತ್ಸವದಲ್ಲೂ ಪ್ರದರ್ಶಿತವಾಯಿತು.

1914ರಲ್ಲೇ ಗಣಪತಿ ಹೈಸ್ಕೂಲಿನ ವಿದ್ಯಾರ್ಥಿಗಳು ಶಾಲಾ ಅಧ್ಯಾಪಕ ಕೆ. ಬಿ.

ರಾಮಕೃಷ್ಣ ರಚಿಸಿದ 'ಭಾತೃಪ್ರೇಮ' ನಾಟಕವನ್ನು ಹಾಗೂ ಗಣಪತಿ ಸೆಕೆಂಡರಿ ಶಾಲಾ ಮಕ್ಕಳು 'ಸ್ವಾಮಿಭಕ್ತಿ' ನಾಟಕವನ್ನು ಪ್ರದರ್ಶಿಸಿದರು. ಮಂಗಳೂರಿನ ಸರಕಾರಿ ಹುಡುಗಿಯರ ಟ್ರೈನಿಂಗ್ ಶಾಲೆಯವರು 'ತಪ್ಪಿ ಹೋದ ಮಗನು' ಎಂಬ ನಾಟಕವನ್ನು 1915ರಲ್ಲಿ ಅಭಿನಯಿಸಿದರು. ಶಾಲಾ ಮುಖ್ಯೋಪಾಧ್ಯಾಯಿನಿ ಎ.ಜೆ. ಸಿಕ್ವೇರ ತರಬೇತಿ ನೀಡಿದ್ದ ಈ ನಾಟಕದ ಬಾಲಕಿಯರ ವಾಕ್ಚಾತುರ್ಯವೂ, ನರ್ತನವೂ, ಅಂಗವಿನ್ಯಾಸವೂ, ಅಭಿನಯಗಳೂ, ಆಯಾ ಸಂಗತಿಗನುಗುಣವಾದ ನಟನೆಗಳೂ ಸೊಗಸಾಗಿದ್ದವು ಎಂದು 1917ರ ಜುಲೈ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಬಂದ ವಿಮರ್ಶೆಯಲ್ಲಿ ಹೊಗಳಲಾಗಿದೆ. ಮಹಿಳೆಯೋರ್ವರು ನಿರ್ದೇಶಿಸಿದ, ಬಾಲಕಿಯರು ಅಭಿನಯಿಸಿದ ಕುರಿತಂತೆ ದೊರೆಯುವ ಮೊದಲ ದಾಖಲೆಯೂ ಇದಾಗಿದೆ.[2]

ಕನ್ನಡದಲ್ಲಿ ಮಕ್ಕಳ ನಾಟಕಗಳು ನಡೆದು ಬಂದ ಚರಿತ್ರೆಯನ್ನು ಅಭ್ಯಾಸ ಮಾಡಿದರೆ ಅದರಲ್ಲಿ ನಾವು ಎರಡು ಪ್ರಮುಖ ಹಂತಗಳನ್ನು ಕಾಣುತ್ತೇವೆ.

1. ಶಾಲೆಗಳಲ್ಲಿ ಐತಿಹಾಸಿಕ, ಪೌರಾಣಿಕ ಘಟನೆಗಳ ಸುತ್ತ ಸಂಭಾಷಣೆಯನ್ನು ಹೆಣೆದುಕೊಂಡು ಘಟನಾವಳಿಗಳ ತುಣುಕುಗಳನ್ನು ಅಭಿನಯಿಸುವ ಹಂತದಿಂದ ಇಪ್ಪತ್ತರ ದಶಕದಲ್ಲಿ ಅಧ್ಯಾಪಕರುಗಳು ರಚಿಸಿದ (ಕಂಪನಿ ನಾಟಕಗಳ ಪ್ರಭಾವವಿದ್ದರೂ ಕೂಡ) ಮಕ್ಕಳ ನಾಟಕಗಳನ್ನು ಆಡತೊಡಗಿದ ಪ್ರಥಮ ಹಂತ.

2. ಎಪ್ಪತ್ತರ ದಶಕದ ಸುಮಾರಿಗೆ ಕೇವಲ ಶಾಲಾ ವಾರ್ಷಿಕೋತ್ಸವ, ಶಾಲಾ ಸಭೆ ಸಮಾರಂಭಗಳಲ್ಲಿ ಮಾತ್ರಾ ನಾಟಕ ಆಡುವ ಹಂತದಿಂದ ಹೊರಬಂದು, ಬಿ.ವಿ. ಕಾರಂತರು ಮತ್ತು ಸಹಮನಸ್ಕರ ಪ್ರವೇಶದೊಂದಿಗೆ ವಿವಿಧ ಹವ್ಯಾಸಿ ಸಂಸ್ಥೆಗಳು, ಶಾಲೆಗಳ ಹೊರಗೂ ಮಕ್ಕಳ ನಾಟಕಗಳನ್ನು ಆಡಿಸಲು ಆರಂಭಿಸಿದ್ದು ಎರಡನೆಯ ಹಂತ.

ಆದರೆ ಈ ಎರಡೂ ಹಂತಗಳು ಕನ್ನಡದಲ್ಲಿ ಪ್ರಾರಂಭವಾಗಿದ್ದು ಒಂದೇ ಮೂಲದ, ಒಂದೇ ನಾಟಕದಿಂದ ಎಂದರೆ ನಮಗೆ ಆಶ್ಚರ್ಯವಾಗುತ್ತದೆ. ಈಗ ಲಭ್ಯವಿರುವ ಮಕ್ಕಳ ನಾಟಕಗಳಲ್ಲಿ ಪ್ರಥಮವಾಗಿ ಕನ್ನಡದಲ್ಲಿ ಪ್ರಕಟವಾದ ನಾಟಕ 'ಅಂಚೆಮನೆ' ಮತ್ತು 'ಚಂದ್ರಹಾಸ್ಯಾಬ್ಯುದಯ'ಗಳಾದರೂ ಅವು ಪ್ರಮುಖ ಮಕ್ಕಳ ನಾಟಕಗಳೆಂದು ದಾಖಲಾಗಿಲ್ಲ. ನಾವು ಪ್ರಥಮ ಪ್ರಮುಖ ಮಕ್ಕಳ ನಾಟಕವೆಂದು ಗಮನಿಸಬಹುದಾದ, ಎಮ್.ಎನ್. ಕಾಮತ್‌ರವರು ಮಕ್ಕಳಿಗಾಗಿ ಬರೆದ 'ಶುಕಶಿಕ್ಷಣ' ಮೊಟ್ಟಮೊದಲು ಪ್ರಕಟವಾದದ್ದು 1918ರಲ್ಲಿ. ಸದಾನಂದ ಸಹಕಾರಿ ಮುದ್ರಣ ಸಂಘ ಮಂಗಳೂರು ಇವರಿಂದ ಅದು ಪ್ರಕಟವಾಯಿತು.

"ಶುಕಶಿಕ್ಷಣ – ಠಾಗೋರರ ಕಥೆಯ ಅನುವಾದ. Parrots training ಎಂಬ ಕಥೆಯಲ್ಲಿ ಬಾಲಶಿಕ್ಷಣವನ್ನು ರವೀಂದ್ರರು ವಿಡಂಬನೆ ಮಾಡಿದ್ದಾರೆ. ಕೇವಲ ಕಂಠಪಾಠ

ಮಾಡಿಸುವ ಯಾಂತ್ರಿಕ ಶಿಕ್ಷಣ ಕ್ರಮದ ಬಗ್ಗೆ ಅದು ಅತ್ಯಂತ ಕಠೋರವಾದ ವಿಡಂಬನೆಯಾಗಿದೆ. ಈ ಕಥೆಯ ಮೂಲಕ, ಮಕ್ಕಳಲ್ಲಿ ವಿಚಾರ ಶಕ್ತಿಯನ್ನು ಬೆಳೆಯಿಸುವುದನ್ನು ಬಿಟ್ಟು ಬರೆದಿಟ್ಟ ವಿಷಯಗಳನ್ನು ಕೇವಲ ಮುಖಪಾಠ ಮಾಡಿಸುವುದರಿಂದ ಏನೂ ಪ್ರಯೋಜನವಿಲ್ಲವೆಂದೂ, ಸ್ವೇಚ್ಛೆಯಿಂದ ಹಾರಾಡುತ್ತಾ, ತನ್ನ ಮನೋಹರವಾದ ಕಂಠದಿಂದ ಹಾಡುತ್ತಿದ್ದ ಗಿಳಿಯನ್ನು ಬಂಗಾರದ ಪಂಜರದಲ್ಲಿ ಹಿಡಿದಿಟ್ಟು, ಅದರ ಪುಕ್ಕಗಳನ್ನು ಕತ್ತರಿಸಿ, ಅದರ ಪಕ್ಕೆಗಳಲ್ಲಿ (ನಾಟಕದಲ್ಲಿ– ಅದರ ಹೊಟ್ಟೆಯಲ್ಲಿ) ಪುಸ್ತಕದ ಹಾಳೆಗಳನ್ನು ತುರುಕಿ, ಅದನ್ನು ಕೊಂದುಹಾಕುವ ಶಿಕ್ಷಣವು ಅರ್ಥಹೀನವೆಂದೂ ರವೀಂದ್ರರು ಕಟುವಾಗಿ ಟೀಕಿಸಿದ್ದಾರೆ. ಇಂಥ ಶಿಕ್ಷಣ ಕ್ರಮಕ್ಕೆ ಭಾರತೀಯ ಶಿಶು ಬಲಿಯಾಗಿದೆಯೆಂದು ಅವರು ಹೇಳುತ್ತಿದ್ದರು. ಕಾಮತರ ಈ ನಾಟಕ ಪ್ರಚಲಿತ ಶಿಕ್ಷಣ ಕ್ರಮಕ್ಕೆ ಅತ್ಯಂತ ಸಮರ್ಪಕವಾದ ವಿಡಂಬನೆ. ಶಿಕ್ಷಕರೂ, ಶಿಕ್ಷಣ ತಜ್ಞರೂ, ಮಕ್ಕಳೂ, ಹೆತ್ತವರೂ ನೋಡಬೇಕಾದ ಮತ್ತು ಅದರಿಂದ ಬುದ್ಧಿ ಕಲಿಯಬೇಕಾದ ನಾಟಕ"[3] ಇದು ಎಂ.ಎನ್ ಕಾಮತರ ಶುಕ ಶಿಕ್ಷಣ ನಾಟಕದ ಕುರಿತಾಗಿ ಲೀಲಾಭಟ್‌ರ ವಿವರಣೆ.

ಎಮ್.ಎನ್. ಕಾಮತ್‌ರವರು ಮಕ್ಕಳ ರಂಗಭೂಮಿಗೆ ಮಹತ್ತರವಾದ ಕೊಡುಗೆ ನೀಡಿರುದನ್ನು ನಾವು ಗಮನಿಸಬಹುದು. ಎಮ್.ಎನ್. ಕಾಮತ್‌ರವರು 60ಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದರೆಂದು ಹೇಳಲಾಗಿದ್ದರೂ ಕೂಡ ಅವುಗಳಲ್ಲಿ ಈಗ ಲಭ್ಯವಿರುವುದು ಕೇವಲ 27 ನಾಟಕಗಳು ಎಂಬುದು ಖೇದದ ಸಂಗತಿ. ಎಮ್.ಎನ್. ಕಾಮತ್‌ರವರ ಮೊದಲೆರಡು ನಾಟಕಗಳು 1914ರಲ್ಲೇ ಪ್ರಕಟವಾಗಿದ್ದರೂ, ಅವರೇ ನೇರವಾಗಿ ರಂಗಚಟುವಟಿಕೆ ನಡೆಸಿದ್ದು 1918ರಿಂದ 1940ರವರೆಗೆ. ಈ ಅವಧಿಯಲ್ಲಿ ಅವರು ಮಂಗಳೂರಿನ ಕೆನರಾ ಹೈಸ್ಕೂಲನ್ನು ತಮ್ಮ ಕೇಂದ್ರ ಸ್ಥಾನವಾಗಿ ಇಟ್ಟುಕೊಂಡಿದ್ದರೂ, ಇಡೀ ದಕ್ಷಿಣಕನ್ನಡ ಜಿಲ್ಲೆಯ ಶಾಲಾ ವಾರ್ಷಿಕೋತ್ಸವಗಳಲ್ಲಿ ಅವರ ನಾಟಕಗಳು ನಡೆಯುತ್ತಿದ್ದವು ಎಂಬುದು ಗಮನಾರ್ಹ. ಈ ದೃಷ್ಟಿಯಿಂದ ಎಮ್.ಎನ್. ಕಾಮತ್‌ರವರು ಕನ್ನಡ ಮಕ್ಕಳ ನಾಟಕ ಕ್ಷೇತ್ರದಲ್ಲಿ ಪ್ರಥಮ ವಂದ್ಯರು.

ಈ ನಡುವೆ ಸ್ವದೇಶಾಭಿಮಾನ ಪತ್ರಿಕೆಯ 1918ರ ಜುಲೈ–ಆಗಸ್ಟ್ ಸಂಚಿಕೆಯಲ್ಲಿ ಚರ್ಚಿತವಾದ, ಚಿಕ್ಕ ವಿದ್ಯಾರ್ಥಿಗಳಿಗೆ ಅನುರೂಪವಾದ ನಾಟಕಗಳು ಯಾವುವು ಎಂಬ ವಿಚಾರ ಗಮನಾರ್ಹವಾಗಿದೆ. "ಚಿಕ್ಕ ಚಿಕ್ಕ ವಿದ್ಯಾರ್ಥಿಗಳ ಸ್ವಭಾವಕ್ಕೆ ಅಪರಿಚಿತವಾದ ರಸ ಮತ್ತು ಅರ್ಥಗಳ ಸನ್ನಿವೇಶಗಳನ್ನು ಅಭಿನಯಿಸುವುದಕ್ಕಿಂತ ಪರಿಚಿತವಾದ ರಸಾದಿಗಳನ್ನು ಅಭಿನಯಿಸುವಂತೆ ಯೋಚಿಸುವುದೇ ಶ್ರೇಯಸ್ಕರವು. ಇನ್ನೂ ವ್ಯವಹಾರ ಭೂಮಿಯಲ್ಲಿ ಬರದ ವಿದ್ಯಾರ್ಥಿಗಳಲ್ಲಿ ದೇಶಭಕ್ತಿಯಂತೆ ಗುರುಭಕ್ತಿಯೂ ಅವಶ್ಯಕ. ವಿದ್ಯಾರ್ಥಿಗಳಿಂದ ವಿದ್ಯಾಶ್ರದ್ಧೆ, ಗುರುಭಕ್ತಿ, ಬಂಧುಪ್ರೀತಿ

ಮುಂತಾದ ಆ ವಯಸ್ಸಿಗೂ ಜ್ಞಾನಪಾತ್ರತೆಗೂ ಅನುರೂಪವಾದ ಪ್ರಸಂಗಗಳನ್ನು ಅಭಿನಯಿಸಲು ಯತ್ನಿಸುವರೆಂತ ನಾವು ನಂಬುತ್ತೇವೆ"[1]

ಪ್ರಾಯಶಃ ಆಗಿನ ಕಾಲದಲ್ಲಿ ಶಾಲೆಗಳಲ್ಲಿ ನಡೆಯುತ್ತಿದ್ದ ಐತಿಹಾಸಿಕ, ಪೌರಾಣಿಕ ನಾಟಕ ಪ್ರದರ್ಶನಗಳನ್ನು ಗಮನದಲ್ಲಿಟ್ಟುಕೊಂಡು ಈ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲಾಗಿತ್ತು ಎನ್ನಿಸುತ್ತದೆ. ಅದೇ ಕಾಲದಲ್ಲಿ ಹಳೆಯ ಮೈಸೂರು ಪ್ರದೇಶ ಮತ್ತು ಮುಂಬೈ ಕರ್ನಾಟಕ ಪ್ರದೇಶಗಳಲ್ಲೂ ಶಾಲೆಗಳಲ್ಲಿ ಇಂತಹುದೇ ನಾಟಕಗಳ ಪ್ರದರ್ಶನ ನಡೆಯುತ್ತಿದ್ದ ಬಗ್ಗೆ ದಾಖಲೆಗಳು ದೊರೆಯುತ್ತವೆ.

## ಮಕ್ಕಳ ರಂಗಭೂಮಿಗೆ 'ಕಂಪನಿ'ಗಳ ಕೊಡುಗೆ

ಕನ್ನಡ ರಂಗಭೂಮಿಯಲ್ಲಿ ಕಂಪನಿ ನಾಟಕಗಳ ಇತಿಹಾಸ ಅತ್ಯಂತ ಮಹತ್ವಪೂರ್ಣ. ನಾಟಕ ಕಂಪನಿಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗಲೇ, ಅವು ಮಕ್ಕಳ ನಾಟಕಗಳ ಕುರಿತೂ ಗಮನ ಹರಿಸಿದ್ದು ವಿಶೇಷ.

"ಶ್ರೀಮಂತವಾಗಿ ನಡೆಯುತ್ತಿದ್ದ ಕಂಪನಿಯೊಂದು ತನ್ನ ಮಾಮೂಲಿ ಪ್ರದರ್ಶನಮೊಂದಿಗೆ ಮಕ್ಕಳ ನಾಟಕಗಳ ಪ್ರದರ್ಶನದ ಕುರಿತೂ ಚಿಂತಿಸಿದ ಉದಾಹರಣೆ ನಮಗೆ ದೊರೆಯುವುದು, ತುಮಕೂರು ಜಿಲ್ಲೆಯ ಗುಬ್ಬಿ ವೀರಣ್ಣನವರ ಚನ್ನಬಸವೇಶ್ವರ ನಾಟ್ಯ ಸಂಘದಿಂದ. ಮಕ್ಕಳಿಗಾಗಿ ಪ್ರತ್ಯೇಕ ನಾಟಕಗಳನ್ನು ಬರೆಸಿ, ಮಕ್ಕಳಿಂದಲೇ ಪ್ರದರ್ಶಿಸಬೇಕೆಂಬ ಆಸೆ ವೀರಣ್ಣನವರದ್ದಾಗಿತ್ತು. ಅದಕ್ಕಾಗಿ ಭೀಮರಾಜು ಅವರಿಂದ 'ಸಾವಿತ್ರಿ' ಎನ್ನುವ ನಾಟಕ ಬರೆಯಿಸಿ ಅಭ್ಯಾಸ ಮಾಡಿಸಿದ್ದರು. 1925ರಲ್ಲಿ ಮಕ್ಕಳಿಗಾಗಿಯೇ ಒಂದು ಪ್ರತ್ಯೇಕ ಸಂಸ್ಥೆಯನ್ನು ಕಟ್ಟಬಾರದೇಕೆಂದು ಯೋಚಿಸಿ, ಎಂಟರಿಂದ ಹದಿನಾಲ್ಕು ವರ್ಷದೊಳಗಿನ ಮಕ್ಕಳನ್ನು ಕಲೆಹಾಕಿ, 'ಬಾಲ ಕಲಾವರ್ಧಿನಿ' ಎನ್ನುವ ಸಂಸ್ಥೆಯನ್ನು ಪ್ರಾರಂಭಿಸಿದರು. 'ಸಾವಿತ್ರಿ'ಯನ್ನಲ್ಲದೆ ಭೀಮರಾಜು ಅವರಿಂದ 'ಕಬೀರ ಲೀಲೆ' ಎನ್ನುವ ನಾಟಕ ಬರೆಯಿಸಿ ಈ ಸಂಘದ ಬಾಲಕರಿಂದ ಪ್ರದರ್ಶಿಸಿದರು. ಜೊತೆಗೆ, ನರಹರಿ ಶಾಸ್ತ್ರಿಗಳ ಶ್ರೀ ಕೃಷ್ಣ ಪಾರಿಜಾತ, ಜಲಂಧರ, ಕೃಷ್ಣಗಾರುಡಿ, ಭಾಮಾ ಪರಿಣಯ ಮೊದಲಾದ ನಾಟಕಗಳನ್ನು ಈ ಹುಡುಗರು ಪ್ರದರ್ಶಿಸಿ ಕೀರ್ತಿ ಪಡೆದರು. ಮೈಸೂರಿನ ಮಹಾರಾಜರೂ ಈ ಹುಡುಗರ ನಾಟಕಗಳನ್ನು ನೋಡಿ ಸಂತೋಷಪಟ್ಟರು. ಈ ಸಂಸ್ಥೆಯು ಕರ್ನಾಟಕದಾದ್ಯಂತ ಪ್ರವಾಸ ಮಾಡಿತಲ್ಲದೆ ಮದರಾಸು ಪ್ರಾಂತ್ಯದಲ್ಲಿಯೂ ಯಶಸ್ಸು ಗಳಿಸಿತು. ಈ ಬಾಲ ಕಲಾವರ್ಧಿನಿಯ ಹೆಚ್ಚು ಮಕ್ಕಳು ಗುಬ್ಬಿ ಕಂಪನಿಯ ನಟ ನಟಿಯರ ಮಕ್ಕಳೇ ಆಗಿದ್ದರು. ಕೆಲವು ವರ್ಷಗಳ ನಂತರ ಬಾಲ ಕಲಾವರ್ಧಿನಿ ಮಾತೃಸಂಸ್ಥೆಯಲ್ಲಿ ಲೀನವಾಯಿತು."[2]

"ನಟ ಸಾರ್ವಭೌಮ ವರದಾಚಾರ್ಯರು 1904ರಿಂದ 1920ರ ವರೆಗೆ ಆಡಿದ ಪ್ರಯೋಗಗಳ ಸಂಖ್ಯೆ 1246. ಅದರಲ್ಲಿ ನಮಗೆ ಮುಖ್ಯವಾಗುವುದು ಅವರ 'ಬಾಲ ರತ್ನಾವಳಿ'. ಕಂಪನಿಯಲ್ಲಿದ್ದ ಮಕ್ಕಳನ್ನೇ ಸೇರಿಸಿ ಒಂದು ನಾಟಕವನ್ನು ಮಾಡಬಾರದೇಕೆಂದು ಯೋಚಿಸಿ ಅವರದನ್ನು ಕಾರ್ಯರೂಪಕ್ಕೆ ತಂದರು. ಬಾಲ ರತ್ನಾವಳಿ ಎಲ್ಲ ಕಡೆಗೂ ಯಶಸ್ವಿಯಾಯಿತು. ಗರೂಡ ಸದಾಶಿವರಾಯರ ದತ್ತಾತ್ರೇಯ ನಾಟಕ ಮಂಡಳಿ ಗದಗ (ಧಾರವಾಡ), ಇವರೂ ಕೂಡ ಘಟಸ್ಫೋಟ, ನಲ್ಲೆಯ ಗೆಳೆಯರು ಎಂಬ ನಾಟಕಗಳನ್ನು ಮರಾಠಿಯಿಂದ ಅನುವಾದಿಸಿ ಹದಿನೈದು, ಹದಿನಾರು ವರ್ಷದ ಮಕ್ಕಳಿಂದ ಪ್ರಯೋಗ ಮಾಡಿಸಿ, ಪ್ರವೇಶ ಧನವಿಟ್ಟು ಪ್ರದರ್ಶನ ಮಾಡಿದ್ದೂ ಒಂದು ಇತಿಹಾಸ. ಏಳಗಿ ಬಾಳಪ್ಪನವರ ಕಲಾವೈಭವ ನಾಟಕ ಕಂಪನಿಯವರು ಖ್ಯಾತ ನಾಟಕಕಾರ ಆರ್.ಡಿ. ಕಾಮತ್‌ರ 'ದೇವರಮಗು' ನಾಟಕವನ್ನು ಸಾಕಷ್ಟು ಯಶಸ್ವಿಯಾಗಿ ಪ್ರದರ್ಶಿಸುತ್ತಿದ್ದರು. ಈ ನಾಟಕವು ಸಂಪೂರ್ಣ ಮಕ್ಕಳ ನಾಟಕವಾಗಿರದಿದ್ದರೂ, ಒಂದು ಮಗುವನ್ನೇ ಕೇಂದ್ರವಾಗಿಟ್ಟುಕೊಂಡು ಆಡುತ್ತಿದ್ದ ನಾಟಕವಾಗಿತ್ತು. ಈ ನಾಟಕದಲ್ಲಿ ಬಾಳಪ್ಪನವರ ಮಗಳು ಭಾಗ್ಯ, ಮೂಲಾ ನಕ್ಷತ್ರದಲ್ಲಿ ಹುಟ್ಟಿದ ಹುಡುಗಿಯೆಂಬ ಕಾರಣಕ್ಕಾಗಿ ಮಡಿವಂತರಿಂದ ಅವಹೇಳನಪಟ್ಟು ಸಂಕಟ ಪಡುವ ಮಗುವಿನ ಪಾತ್ರವಲ್ಲಿ ನೀಡುತ್ತಿದ್ದ ಅಭಿನಯವನ್ನು ಪಲವರು ಬಹಳಕಾಲ ಸ್ಮರಿಸಿಕೊಳ್ಳುತ್ತಿದ್ದರು ಎನ್ನಲಾಗಿದೆ. ಈ ನಾಟಕಗಳಲ್ಲಿಯ ಸಂಭಾಷಣೆಯು ಗ್ರಾಂಥಿಕವೆನಿಸಿದ್ದು, ವೇಷ ಭೂಷಣ, ನಟನೆ ಮತ್ತು ಸಂಗೀತದಲ್ಲಿ ಕಂಪನಿಯ ನಾಟಕಗಳಂತೆಯೇ ಇದ್ದರೂ, ಮಕ್ಕಳ ರಂಗಭೂಮಿಯನ್ನು ಹುಟ್ಟುಹಾಕುವಲ್ಲಿ ವೃತ್ತಿನಿರತ ಕಂಪನಿಯವರ ಗಂಭೀರ ಪ್ರಯತ್ನವನ್ನಂತೂ ನಾವು ಮರೆಯುವಂತಿಲ್ಲ."[6]

## ಶಿವರಾಮ ಕಾರಂತರ ಪ್ರವೇಶ

ಮತ್ತೆ ಹಿಂತಿರುಗಿ ಮೂವತ್ತರ ದಶಕಕ್ಕೆ ಹೊರಳಿ ನೋಡಿದರೆ, ಆ ಹೊತ್ತಿಗೆ ಮಕ್ಕಳ ನಾಟಕ ಲೋಕಕ್ಕೆ ಶಿವರಾಮ ಕಾರಂತರ ಪ್ರವೇಶವಾಗಿದ್ದುದು ಕಂಡುಬರುತ್ತದೆ. ಅವರು ಹಲವು ನಾಟಕಗಳನ್ನು ಮಕ್ಕಳು ಮತ್ತು ಯುವಕರಿಗಾಗಿ ಬರೆದು ಪ್ರದರ್ಶಿಸಿದ ಮಾಹಿತಿಗಳು ಮಾಲಿನಿ ಮಲ್ಯರ 'ಕಿನ್ನರ ಲೋಕ' ಪುಸ್ತಕವಲ್ಲಿ ದೊರೆಯುತ್ತವೆ. ಕಾರಂತರ ಅಜ್ಜಿ ಮಾಣಿ, ಡೋಮಿಂಗೋ, ನರನೋ ವಾನರನೋ, ಪರಿವರ್ತನ ಭಾರತ, ಮದುವೆಗಿಂತ ಮಸಣ ವಾಸಿ, ಮಂಗನ ಮದುವೆ, ಲೀಗ್ ಆಫ್ ನೇಷನ್ಸ್, ಸೂರ್ಯ ಚಂದ್ರ, ಹಸನ್ ಪರ್ವೀನಾ ಮುಂತಾದವು ಪ್ರಮುಖ ಮಕ್ಕಳ ನಾಟಕಗಳು. ನಾವು ಈ ನಾಟಕಗಳನ್ನು ಗಮನಿಸಿದಾಗ ಹೆಚ್ಚಿನ ನಾಟಕಗಳು ಅಂದು ಸರ್ವೇ ಸಾಮಾನ್ಯವಾಗಿದ್ದ ಐತಿಹಾಸಿಕ, ಪೌರಾಣಿಕ ಘಟನೆಗಳಿಗಿಂತ ಭಿನ್ನವಾಗಿ ಸಾಮಾಜಿಕ

ಸಂದರ್ಭಗಳನ್ನು ಅಳವಡಿಸಿಕೊಂಡದ್ದು ವಿಶೇಷವಾಗಿದೆ. ಎಲ್ಲ ಕ್ಷೇತ್ರಗಳಲ್ಲೂ ಹೊಸತನ್ನೇ ಸೃಷ್ಟಿಸುತ್ತಿದ್ದ ಕಾರಂತರ ಪ್ರಯೋಗಶೀಲ ಮನಸ್ಸು, ಇಲ್ಲಿ ಕೂಡ ಮಾಮೂಲಿಗಿಂತ ಭಿನ್ನವಾಗಿ ನಿಂತು ಸಾಮಾಜಿಕ, ವೈಚಾರಿಕ ನಾಟಕಗಳನ್ನು ಮಕ್ಕಳಿಗಾಗಿ ಹೊಸೆದು, ಎಷ್ಟೋ ವೇಳೆ ತಾವೇ ತರಬೇತಿ ನೀಡಿ ಪ್ರದರ್ಶಿಸಿದರೆನ್ನುವ ಸಂಗತಿ ವಿಸ್ಮಯವೆನ್ನಿಸುತ್ತದೆ. ಇದಕ್ಕೂ ಸ್ವಲ್ಪ ಮೊದಲೇ, ಅಂದರೆ 1925ರಲ್ಲಿಯೇ ಪೃಥ್ವೀರಾಜ ಜಯಚಂದ, ಹುಲಿ ಶಿಕಾರಿ ಎಂಬ ನಾಟಕಗಳು ಪ್ರಕಟಗೊಂಡ ಮಾಹಿತಿ ಟಿ.ಎಸ್. ನಾಗರಾಜ ಶೆಟ್ಟಿಯವರ 'ಸ್ವಾತಂತ್ರ್ಯೋತ್ತರ ಮಕ್ಕಳ ನಾಟಕ – ಒಂದು ಸಮೀಕ್ಷೆ' ಎಂಬ ಲೇಖನದಲ್ಲಿ ದೊರೆಯುವುದಾದರೂ ಅವೆರಡೂ ಪುಸ್ತಕಗಳೂ ಲಭ್ಯವಾಗಲಿಲ್ಲ.[7] ಈ ನಡುವೆ ಮಕ್ಕಳ ನಾಟಕ ಕ್ಷೇತ್ರಕ್ಕೆ ಬಹುಮುಖ್ಯವಾದ ಕೊಡುಗೆಯೆಂದರೆ ಕುವೆಂಪುರವರ 'ಮೋಡಣ್ಣನ ತಮ್ಮ' (1926) ಮತ್ತು 'ನನ್ನ ಗೋಪಾಲ' (1930). ಕುವೆಂಪುರವರ 'ಅಮಲನ ಕಥೆ', 'ಬೊಮ್ಮನಹಳ್ಳಿ ಕಿಂದರಜೋಗಿ' ಕೂಡ ಮಕ್ಕಳ ಸಾಹಿತ್ಯದ ದೃಷ್ಟಿಯಿಂದ ಮಾತ್ರವಲ್ಲದೆ ರಂಗಪ್ರಯೋಗದ ದೃಷ್ಟಿಯಿಂದಲೂ ನಮಗೆ ಮುಖ್ಯವಾಗುತ್ತವೆ.

## ಶಾಲೆಗಳಲ್ಲಿ ಕೈಲಾಸಂ

ಇಲ್ಲಿ ಉಲ್ಲೇಖಿಸಬಹುದಾದ ಇನ್ನೊಂದು ಪ್ರಮುಖ ನಾಟಕವೆಂದರೆ ಟಿ.ಪಿ. ಕೈಲಾಸಂರವರ 'ಟೊಳ್ಳು-ಗಟ್ಟಿ' ಅಥವಾ 'ಮಕ್ಕಳ ಸ್ಕೂಲ್ ಮನೇಲಲ್ವೆ'. ಒಂದರ್ಥದಲ್ಲಿ ಹೇಳುವುದಾದರೆ ಮಕ್ಕಳ ಸಮಾಜೀಕರಣಕ್ಕೆ ಕುಟುಂಬವೇ ಅಡಿಪಾಯವೆಂಬ ಇಂದಿನ ಅಭಿಪ್ರಾಯವನ್ನು 85ವರ್ಷದ ಹಿಂದೆಯೇ ಕೈಲಾಸಂರವರು ತಮ್ಮ ಈ ನಾಟಕದ ಮೂಲಕ ಹೇಳಿದ್ದಾರೆ. ಅದಕ್ಕೆ ಶೀರ್ಷಿಕೆಯನ್ನೂ ಹಾಗೇ ಕೊಟ್ಟಿದ್ದಾರೆ. ಕುಟುಂಬದ ವಾತಾವರಣದ ಆಧಾರದ ಮೇಲೆ ಮಗುವಿನ ಮನಸ್ಸು ಗಟ್ಟಿಯಾದ ನೈತಿಕತೆಯನ್ನು ರೂಡಿಸಿಕೊಳ್ಳದೇ ಹೋದರೆ ಹೊರಗಿನ ವಿದ್ಯಾಭ್ಯಾಸವೆಲ್ಲವೂ ಟೊಳ್ಳು ಎಂಬುದು ಈ ನಾಟಕದ ತಿರುಳು. ಇದು ಮಕ್ಕಳ ಮನೋಲೋಕಕ್ಕೆ ಸಂಬಂಧಪಟ್ಟಿದ್ದರೂ, ಈ ನಾಟಕವನ್ನು ಮಕ್ಕಳ ನಾಟಕವೆನ್ನುವುದು ಎಷ್ಟು ಸಮಂಜಸ ಎನ್ನುವುದು ಸಂದಿಗ್ಧವೇ. ಕೈಲಾಸಂರವರಂತೂ ಎಲ್ಲಿಯೂ ಹಾಗೆ ಹೇಳಿಕೊಂಡಿಲ್ಲ. ಅದು ಹೇಗೂ ಇರಲಿ. ಟೊಳ್ಳು ಗಟ್ಟಿಯೇ ಅಲ್ಲದೆ ಕೈಲಾಸಂರವರ ಪೋಲಿಕಿಟ್ಟಿಯಿಂದ ಹಿಡಿದು ಇತರ ಅನೇಕ ನಾಟಕಗಳನ್ನು, ಅವು ಮಕ್ಕಳ ನಾಟಕಗಳೆಂದು ಹೇಳಿಕೊಂಡಿಲ್ಲವಾದರೂ ಅವುಗಳನ್ನು ಶಾಲಾ ವಾರ್ಷಿಕೋತ್ಸವಗಳಲ್ಲಿ ಆಡುವುದು ನಂತರದ ದಿನಗಳಲ್ಲಿ ಪರಿಪಾಠವಾಗಿ ಬೆಳೆದು ಬಂದಿತು.

ಈ ನಡುವೆ ಶ್ರೀರಂಗರ 'ಹನ್ನೊಂದು ವರಿ' ಇಲ್ಲವೇ 'ಪ್ರಾಯ ಮರಿ ಶಿಕ್ಷಣದ ಗುರಿ' ಎಂಬ ನಾಟಕವೂ, ಬೇಂದ್ರೆಯವರ 'ಮಕ್ಕಳು ಅಡಿಗೆ ಮನೆ ಹೊಕ್ಕರೆ' ಮುಂತಾದ

ನಾಟಕಗಳೂ ಪ್ರಕಟಗೊಂಡವು. ಉಪಾಧ್ಯಾಯರು ಮತ್ತು ಹಲವು ಬರಹಗಾರರು ಮಕ್ಕಳ ನಾಟಕಗಳನ್ನು ಬರೆದು ಆಡಿಸುತ್ತಾ ಬಂದರು. ಕೆಲವರು ನಾಟಕಗಳನ್ನು ಪ್ರಕಟಿಸುತ್ತಲೂ ಬಂದರು. ಮಕ್ಕಳ ಕೂಟ, ಮಕ್ಕಳ ಮಂಟಪ, ಪುಟಾಣಿ ಸಾಹಿತ್ಯ ಮಾಲೆ, ಮಕ್ಕಳ ಮಂದಿರ, ಸಮಾಜ ಪುಸ್ತಕಾಲಯ ಮುಂತಾದವು ಮಕ್ಕಳ ಸಾಹಿತ್ಯಗಳನ್ನು ಪ್ರಕಟಿಸುತ್ತಾ ಬಂದವು. ಶಾಲಾ ಕಾಲೇಜು ವಾರ್ಷಿಕೋತ್ಸವ, ಸಭೆ, ಸಮಾರಂಭಗಳಲ್ಲಿ ನಾಟಕಗಳು ನಡೆಯುತ್ತಲೇ ಸಾಗಿದವು. ಮುಂದೆ ಸ್ವಾತಂತ್ರ್ಯ ಹೋರಾಟ, ಸ್ವಾತಂತ್ರ ಗಳಿಕೆ, ಸ್ವತಂತ್ರ ಸರ್ಕಾರದ ಆಡಳಿತದ ಅವಧಿಯಲ್ಲಿ ಕೂಡ ಪರಿಸ್ಥಿತಿ ಹೀಗೇ ಮುಂದುವರೆಯಿತು.

1970ರಲ್ಲಿ ಬಿ.ವಿ. ಕಾರಂತರು ಕನ್ನಡ ನೆಲಕ್ಕೆ ಹಿಂತಿರುಗಿ ಪಂಜರಶಾಲೆಯಲ್ಲಿ ನಡೆದಿದ್ದ ಗಿಣಿಪಾಠಕ್ಕೆ ಹೊಸ ಬಿಡುಗಡೆಯನ್ನು ತಂದರು. ಏಕತಾನತೆಯಲ್ಲಿ ಮುಳುಗಿದ್ದ ಮಕ್ಕಳ ರಂಗಭೂಮಿಗೆ ನವಚೇತನವನ್ನು ತುಂಬಿದರು.

## ಬಿ.ವಿ. ಕಾರಂತರ ಪ್ರವೇಶ

'ಪಂಜರ ಶಾಲೆ – ಒಂದು ರಂಗ ಪ್ರಯೋಗ' ಎಂಬ ಲೇಖನದಲ್ಲಿ ಕೆ.ವಿ. ಸುಬ್ಬಣ್ಣನವರು ಹೀಗೆ ಹೇಳುತ್ತಾರೆ.

" ಕಾರಂತರ ಅಭಿರುಚಿ–ಆಸಕ್ತಿ– ಪರಿಶ್ರಮಗಳು ಮಕ್ಕಳ ನಾಟಕಗಳಲ್ಲೇ ಎಂದೇನೂ ಹೇಳುವ ಹಾಗಿಲ್ಲ. ಅವರ ಮುಖ್ಯ ಆಸಕ್ತಿ ಒಟ್ಟು ರಂಗಭೂಮಿಯಲ್ಲಿ. ಯಾವುದೇ ವಯಸ್ಸಿನ ಅಥವಾ ಯಾವುದೇ ಅಂತಸ್ತಿನ ಜನರನ್ನು ಕೂಡಿಸಿ, ಅವರಲ್ಲಿರುವ ರಂಗ ಕೌಶಲವನ್ನು ಹೊರಡಿಸಿ, ಯೋಜಿಸಿ, ಒಂದು ರಂಗಕೃತಿಯನ್ನು ನಿರ್ಮಿಸುವುದು ಅವರ ಆಸಕ್ತಿಯಾಗಿದೆ. ರಂಗಭೂಮಿಯ ಆಸಕ್ತಿಯೇ ಅವರನ್ನು ಸಹಜವಾಗಿ ಮಕ್ಕಳ ರಂಗಭೂಮಿಯ ಕಡೆಗೂ ಸೆಳೆದಿದೆ. ನಮ್ಮಲ್ಲಿ ರಂಗಭೂಮಿ ಬೆಳೆಯಬೇಕಿದ್ದರೆ ಮುಖ್ಯ ಮಕ್ಕಳಿಂದಲೇ ಆ ಆಸಕ್ತಿಯನ್ನು ರೂಢಿಸಬೇಕಾದ್ದು ಅಗತ್ಯ ಎಂಬ ಸತ್ಯ ಕೂಡ ಅವರ ಮನದಟ್ಟಿದೆ. ಯುರೋಪಿನ ಪ್ರವಾಸದಲ್ಲಿ ಕಂಡ ಅಲ್ಲಿನ ಮಕ್ಕಳ ರಂಗಭೂಮಿ ಅವರ ಕುತೂಹಲವನ್ನು ಕಲಕಿದೆ. ದೆಹಲಿಯಲ್ಲಿ ಪಟೇಲ್ ಸ್ಕೂಲ್‌ನಲ್ಲಿ ಉಪಾಧ್ಯಾಯರಾಗಿ ಕೆಲಸ ಮಾಡುತ್ತಿದ್ದುದರಿಂದ ಮಕ್ಕಳ ನಾಟಕಗಳಲ್ಲಿ ಸಾಕಷ್ಟು ಪ್ರಯೋಗಗಳನ್ನು ನಡೆಸುವುದಕ್ಕೂ ಅವರಿಗೆ ಅವಕಾಶ ಸಿಕ್ಕಿತು. ಬಹುಶಃ ಉಪಾಧ್ಯಾಯರಾಗಿದ್ದದ್ದೂ ಕಾರಣವಾಗಿ, ಮಕ್ಕಳೊಡನೆ ವ್ಯವಹರಿಸುವ ತಂತ್ರ ಅವರಿಗೆ ಕರಗತವಾಗಿದೆ. ಒಟ್ಟು ಕನ್ನಡ ರಂಗಭೂಮಿಗೆ ಹೇಗೋ ಹಾಗೆ ಮಕ್ಕಳ ರಂಗಭೂಮಿಗೂ ಕಾರಂತರಿಂದ ಸಲ್ಲಬಹುದಾದ್ದು ಬಹಳವಿದೆ."[8]

ಈ ಮಾತುಗಳು 1971ರಲ್ಲಿ ಹೆಗ್ಗೋಡಿನಲ್ಲಿ ಪಂಜರಶಾಲೆ ನಾಟಕ ಪ್ರದರ್ಶನವಾದ ನಂತರದ್ದು. ಅಂದರೆ ಬಿ.ವಿ. ಕಾರಂತರು ನಮ್ಮ ಮಕ್ಕಳ ರಂಗಭೂಮಿಯನ್ನು ಪ್ರವೇಶಿಸಿ ತಮ್ಮ ಪ್ರಥಮ ಪ್ರಯೋಗ ನಡೆಸಿದ ಸಂದರ್ಭದ್ದು. ಅವರು ದೆಹಲಿಯಲ್ಲಿ ಪಡೆದ ತಮ್ಮ ಅನುಭವಗಳ ಆಧಾರದ ಮೇಲೆ ಎಷ್ಟು ವಿಶಿಷ್ಟವಾಗಿ ಹೆಗ್ಗೋಡಿನಲ್ಲಿ 'ಪಂಜರಶಾಲೆ'ಯ ಪ್ರಯೋಗವನ್ನು ಅಣಿಗೊಳಿಸಿದರು ಎಂಬುವನ್ನು ಸುಬ್ಬಣ್ಣನವರು ಈ ಲೇಖನದಲ್ಲಿ ವಿವರಿಸುತ್ತಾರೆ.

"ಹೆಗ್ಗೋಡಿಗೆ ಬರುವ ಮೊದಲೇ ಕಾರಂತರು ದೆಹಲಿಯ ಪಟೇಲ್ ಸ್ಕೂಲಿನಲ್ಲಿ, ಮಕ್ಕಳಿಗಾಗಿ ಬಗೆ ಬಗೆಯ ನಾಟಕಗಳನ್ನು ಪ್ರಯೋಗ ಮಾಡಿ ಅನುಭವ ಹೊಂದಿದ್ದರು. ಮಕ್ಕಳ ಕಾಲ್ಪನಿಕ ಕಥೆಗಳು, ಜಾನಪದ ಕಥೆಗಳು, ನೀತಿಬೋಧಕಗಳು, ಐತಿಹಾಸಿಕ ಪ್ರಸಂಗಗಳು, ಸಮುದಾಯಿಕ ಸಂಗತಿಗಳು ಮೊದಲಾದವನ್ನೆಲ್ಲಾ ಬಳಸಿಕೊಂಡು ನಾಟಕ ಕಟ್ಟಿ ಆಡಿಸಿದ್ದರು. ಅಂಥವುಗಳಲ್ಲಿ ಪಂಜರಶಾಲೆಯೂ ಒಂದಾಗಿತ್ತು. ರವೀಂದ್ರನಾಥ ಠಾಗೋರರ ಚಿಕ್ಕ ಕಥೆಯೊಂದನ್ನು ಆಧರಿಸಿ ಕಾರಂತರೇ ಹಿಂದಿಯಲ್ಲಿಇದನ್ನು ಒಂದು ನಾಟಕವಾಗಿ ಬರೆದುಕೊಂಡಿದ್ದರು. ಪುನಃ ಅವರೇ ಅದನ್ನು ಗುಜರಾತಿಗೆ ಪರಿವರ್ತಿಸಿ ಅಹಮದಾಬಾದಿನಲ್ಲಿ ಆಡಿಸಿದ್ದರು.

1971ರಲ್ಲಿ ಹೆಗ್ಗೋಡಿಗೆ ಬಂದಾಗ ಅವರಲ್ಲಿದ್ದುದು ಅದೇ ಕರಡು ಪ್ರತಿ. ನಾಟಕದಲ್ಲಿ ಭಾಗವಹಿಸಲು ಒಪ್ಪಿ ಬಂದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸುಮಾರು ಎಂಬತ್ತು ಮಂದಿ. ಅವರಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳಿದ್ದರು. ಕಾರಂತರು ಎಲ್ಲ ಮಕ್ಕಳನ್ನು ಬಳಸಿ ನಾಟಕದ ಅಭ್ಯಾಸ ಪ್ರಾರಂಭಿಸಿದರು. ನಂತರ ಎಲ್ಲ ಮಕ್ಕಳನ್ನು ತರಬೇತುಗೊಳಿಸಿ ನಾಟಕವನ್ನು ಅತ್ಯದ್ಭುತ ರೀತಿಯಲ್ಲಿ ಪ್ರಯೋಗಿಸಿದರು. ಈ ಪಂಜರಶಾಲೆ ನಾಟಕ ಮಕ್ಕಳನ್ನೂ ದೊಡ್ಡವರನ್ನೂ ಅವರವರ ಸ್ತರಗಳಲ್ಲೇ ರಂಜಿಸಿ, ಇಬ್ಬರಿಗೂ ಕಲಾಕೃತಿಯ ಅನುಭವವನ್ನು ಉಂಟುಮಾಡಿಕೊಟ್ಟ ಅತ್ಯುತ್ತಮ ರಂಗಕೃತಿಯೆನಿಸಿಕೊಂಡು, ಕನ್ನಡ ಮಕ್ಕಳ ರಂಗಭೂಮಿಯ ಪುನರುತ್ಥಾನದ ಮೈಲುಗಲ್ಲಾಯಿತು."

ಸುಬ್ಬಣ್ಣನವರು ತಮ್ಮ ಲೇಖನದಲ್ಲಿ ಮುಂದುವರೆದು ಹೇಳುತ್ತಾರೆ.

"ನಾಟಕವೆಂದರೆ ಬರೆದಿಟ್ಟ ಮಾತುಗಳನ್ನು ಕಲಿತು ರಂಗದ ಮೇಲೆ ಸಾಭಿನಯ ಪ್ರದರ್ಶಿಸುವುದು... ಎಂಬ ನಿಶ್ಚಿತಿ ನಮ್ಮಲ್ಲಿ ಸಾಮಾನ್ಯ ಮೂಡಿಕೊಂಡುಬಿಟ್ಟಿದೆ. ಕಾರಂತರ ಮೊದಲ ತಾಲೀಮಿನಲ್ಲೇ ಈ ಸಣ್ಣ ಮಕ್ಕಳಿಗೂ ಆ ಭ್ರಮೆ ಬಿಟ್ಟುಹೋಯಿತು. ಈ ನಾಟಕದಲ್ಲಿ ಕಲಿತ ಮಾತು ತಾವು ಆಡುತ್ತೇವೆಂಬ ಪರಿವೆ ಮಕ್ಕಳಿಗೆ ಉಳಿಯಲೇ ಇಲ್ಲ. ಈ ಎಂಬತ್ತು ಮಕ್ಕಳು, ನಾಟಕದಲ್ಲಿ ಕುಶಲಕರ್ಮಿಗಳು. ಕಣ್ಣೆದುರೇ ಪಂಜರ ನಿರ್ಮಿಸುತ್ತಿದ್ದ ಹಾಗೆ, ತಾವೇ ರಂಗವನ್ನು ಬಳಸಿಕೊಂಡು ಒಬ್ಬರಿಗೊಬ್ಬರು ಕೂಡಿ

ಹೊಸ ಸೃಷ್ಟಿಯೊಂದನ್ನು ನಿರ್ಮಿಸುತ್ತಿದ್ದೇವೆ ಎಂಬ ಅನುಭವಕ್ಕೆ ಇಳಿದುಕೊಂಡುಬಿಟ್ಟಿದ್ದರು. ಪಂಜರಶಾಲೆಯ ನಿರ್ಮಾಣ ಹಲವು ರೀತಿಗಳಲ್ಲಿ ಒಂದು ಮುಖ್ಯ ಸಂಕೇತವಾಗಿತ್ತು. ರಂಗಕ್ರಿಯೆಗೂ ಇದೊಂದು ಸಂಕೇತ. ಮಕ್ಕಳಿಗೆ ನಾಟಕ ಎನ್ನುವುದು ಒಂದು ಅತ್ಯಂತ ಮೂರ್ತ ಸೃಷ್ಟಿಯೆನ್ನುವ ಹಾಗೆ ಯೋಜಿಸಿದ್ದು ಕಾರಂತರ ಕೌಶಲ್ಯಕ್ಕೆ ಸಾಕ್ಷಿ.

ಈ ಒಂದು ಪುಟ್ಟ ವರದಿ ಮಕ್ಕಳ ರಂಗಭೂಮಿಯ ಬಗ್ಗೆ, ಅಷ್ಟೇಕೆ ಇಡೀ ರಂಗಕ್ರಿಯೆಯ ಬಗ್ಗೆ, ಕಾರಂತರ ಕೌಶಲದ ಬಗ್ಗೆ, ಕೆಲವು ಮುಖ್ಯ ಸೂಚನೆಗಳನ್ನು ಕೊಟ್ಟೀತೆಂದು ನಂಬುತ್ತೇನೆ. ಮಕ್ಕಳನ್ನು ನಟರಾಗಿ ತಯಾರಿಸುವುದಷ್ಟೇ ಮುಖ್ಯವಲ್ಲ, ಅವರನ್ನು ಒಳ್ಳೆಯ ಪ್ರೇಕ್ಷಕರಾಗುವಂತೆ ತಯಾರಿಸುವುದು ಮತ್ತೂ ಮುಖ್ಯ. ಇವರಲ್ಲಿ ಮುಂದೆ ಹೆಚ್ಚು ಜನ ಪ್ರೇಕ್ಷಕರಾಗಿಯೇ ಒದಗಬೇಕು. ಮುಖ್ಯ ಮಕ್ಕಳಿಗೆ ರಂಗಭಾಷೆಯನ್ನು ಕಲಿಸಬೇಕು. ಅವರಲ್ಲಿ ರಂಗಭಾವವನ್ನು ಪ್ರಚೋದಿಸಿ ಸಂಸ್ಕರಿಸಬೇಕು. ಈ ಮರ್ಮ ಕಂಡುಕೊಂಡದ್ದು ಕಾರಂತರ ಕೆಲಸದಲ್ಲಿ ಸ್ಪಷ್ಟ ಕಾಣುತ್ತದೆ."[9]

ಈ ಲೇಖನವನ್ನು ಮತ್ತೆ ಮತ್ತೆ ಉದ್ಧರಿಸಲು ಕಾರಣ ಇದು ಒಂದು ಮಹತ್ವದ ನಿರ್ದೇಶಕರ ಮಹತ್ವಪೂರ್ಣ ಕೃತಿಯೊಂದರ ಕುರಿತು ಇನ್ನೊಬ್ಬ ಮಹತ್ವದ ನಿರ್ದೇಶಕ, ಬರಹಗಾರ ಬರೆದಿರುವ ಅಭಿಪ್ರಾಯವೆನ್ನುವುದರಿಂದ. ಪ್ರಾಯಶಃ ಕನ್ನಡ ಮಕ್ಕಳ ರಂಗಭೂಮಿಯು ಹೊಸದೊಂದು ಆಯಾಮಕ್ಕೆ ಸಿದ್ಧವಾದ ಸಂದರ್ಭದ ವಿವರಣೆಯಿದು.

"ಬಿ.ವಿ. ಕಾರಂತರ ಆಗಮನದ ನಂತರ ಮಕ್ಕಳ ನಾಟಕ ಪ್ರದರ್ಶನಗಳಿಗೆ ರಂಗೇರಿತು. ಕೆ.ವಿ.ಸುಬ್ಬಣ್ಣ, ಚಂದ್ರಶೇಖರ ಕಂಬಾರ, ಪ್ರಸನ್ನ ಮುಂತಾದವರು ಕೂಡ ಅದೇ ಅವಧಿಯಲ್ಲಿ ದುಡಿದರು. ಆಗಿನ ಪ್ರದರ್ಶನಗಳ ದೃಶ್ಯವೈಭವವನ್ನು ಗಮನದಲ್ಲಿಟ್ಟುಕೊಂಡು ಈ ಮಾತನ್ನು ಹೇಳುತ್ತಿದ್ದೇನೆ. ಮಕ್ಕಳ ನಾಟಕಕ್ಕೆ ದೃಶ್ಯಾತ್ಮಕತೆ ಅಗತ್ಯವಾದ ಆಕರ್ಷಣೆ. ಮಕ್ಕಳಿಗೆ ಆಕರ್ಷಕವಾಗಿ ಕಥೆ ಹೇಳುವುದೇ ಮುಖ್ಯವಲ್ಲ, ಅದನ್ನು ಪ್ರದರ್ಶಿಸುವ ರೀತಿಯೂ ಅಷ್ಟೇ ಮುಖ್ಯ" ಎನ್ನುವ ಬಿ.ವಿ. ವೈಕುಂಠರಾಜು ಅವರ ಮಾತು ಬಹಳ ಸಮಂಜಸವಾಗಿದೆ. " ಬಿ.ವಿ.ಕಾರಂತರ ನಿರ್ದೇಶನದಲ್ಲಿ ಹೆಚ್ಚು ಮಕ್ಕಳು ಪಾತ್ರ ವಹಿಸಿದ್ದರು. ಅಚ್ಚುಕಟ್ಟಾಗಿ ನಿರೂಪಿಸಿದ 'ಪಂಜರಶಾಲೆ' ಪ್ರದರ್ಶನ ಅವಿಸ್ಮರಣೀಯ. ಅದನ್ನು ನೋಡಿದ ಪ್ರೇಕ್ಷಕರೆಲ್ಲಾ ಎಂದಿಗೂ ಮರೆಯಲಾರರು. ಈ ಅವಧಿಯ ಎಲ್ಲಾ ನಾಟಕಗಳು ಮಕ್ಕಳ ಮೇಲೆ ಬೀರಿದ ಪರಿಣಾಮ ಹೇಳತೀರದು."[10]

ಕನ್ನಡ ಮಕ್ಕಳ ರಂಗಭೂಮಿಗೆ ಹೊಸ ಆಯಾಮ ದೊರೆತ ಈ ಸಂಧಿಕಾಲದಲ್ಲಿ, ಹಲವು ಮಕ್ಕಳ ನಾಟಕಗಳು ಅದ್ಭುತ, ರಮ್ಯವಾಗಿ ಪ್ರದರ್ಶನಗೊಂಡವು. ಅಂತಹ ಪರಿಣಾಮಕಾರಿಯಾದ ನಾಟಕಗಳೆಂದರೆ ಬಿ.ವಿ.ಕಾರಂತರ ನೀಲಿಕುದುರೆ, ಹೆಡ್ಡಾಯಣ,

ಪಂಜರಶಾಲೆ, ಕೆ.ವಿ.ಸುಬ್ಬಣ್ಣನವರ ಕಾಡಿನಲ್ಲಿ ಕಥೆ, ಬೆಟ್ಟಕ್ಕೆ ಚಳಿಯಾದರೆ, ಡಾ. ಚಂದ್ರಶೇಖರ ಕಂಬಾರರ ಅಲಿಬಾಬಾ ಮತ್ತು ನಲ್ವತ್ತು ಕಳ್ಳರು, ಕಿಟ್ಟಿಕತೆ, ಎನ್.ಎಸ್.ವೆಂಕಟರಾಂರವರ ಹಿಮಾನಿ ಮತ್ತು ಏಳುಜನ ಕುಳ್ಳರು, ಎ.ಎಸ್. ಪ್ರಸನ್ನರವರ ಒಂದಾನೊಂದು ಕಾಡಿನಲ್ಲಿ, ಪ್ರೊ ಬಿ. ಚಂದ್ರಶೇಖರ್‌ರವರ ಚಿರಂಜೀವಿ, ಅಪಕಾರಿಯ ಕತೆ ಮುಂತಾದವು. ಬಿ.ವಿ.ಕಾರಂತರಂತೆ ಅವರ ಶ್ರೀಮತಿ ಪ್ರೇಮಾಕಾರಂತ ಕೂಡ ನಕ್ಕಳಾ ರಾಜಕುಮಾರಿ, ಇಸ್ಪೀಟ್ ರಾಜ್ಯ ಮುಂತಾದ ಯಶಸ್ವೀ ನಾಟಕಗಳನ್ನು ಪ್ರದರ್ಶಿಸಿದರು. ಎನ್.ಎಸ್.ವೆಂಕಟರಾಂ ಅವರು ಮೇಲೆ ಹೇಳಿದ ನಾಟಕವಲ್ಲದೆ ಅಂಧೇರಿನಗರಿ ಚೌಪಟ್ರಾಜ, ಸಿಂದಾಬಾದ್ ಮುಂತಾದ ಹತ್ತು ನಾಟಕಗಳನ್ನು ಪ್ರದಶಿಸಿದರಲ್ಲದೆ ಪ್ರಕಟಿಸಿದರು. ಈ ಸಂದರ್ಭದಲ್ಲಿ ಮುಖ್ಯವಾದ ಘಟನೆಯೆಂದರೆ ಜವಹರ ಬಾಲಭವನ ಮಕ್ಕಳಿಗಾಗಿಯೇ ಪ್ರತ್ಯೇಕ ರಂಗಮಂದಿರವೊಂದನ್ನು ಬೆಂಗಳೂರಿನಲ್ಲಿ ಸ್ಥಾಪಿಸಿತು. ಇಲ್ಲಿ ಮಕ್ಕಳ ರಂಗಭೂಮಿಯ ಕುರಿತು ಬಿರುಸಿನ ಚಟುವಟಿಕೆಗಳು ನಡೆಯತೊಡಗಿದವು. ಇಷ್ಟು ಹೊತ್ತಿಗಾಗಲೇ ದೆಹಲಿಯ ನಾಟಕ ಶಾಲೆಯ ಪದವೀಧರರಾದ ಎನ್.ಎಸ್. ವೆಂಕಟರಾಂ ಬಾಲಭವನದ ಕಲಾವಿಭಾಗಕ್ಕೆ ಬಂದರು. ಮಕ್ಕಳಿಗಾಗಿ ನಾಟಕಗಳನ್ನು ಬರೆದು ಸ್ವತಃ ನಿರ್ದೇಶಿಸತೊಡಗಿದರು. ಕನ್ನಡ ಮಕ್ಕಳ ರಂಗಭೂಮಿಯಲ್ಲಿ ಇದೊಂದು ಅತ್ಯಂತ ಮಹತ್ವದ ಹೆಜ್ಜೆಯಾಯಿತು. ಬಾಲಭವನ ಕೇವಲ ಬೆಂಗಳೂರಿನಲ್ಲಲ್ಲದೆ ಕರ್ನಾಟಕದ ಹಲವು ಜಿಲ್ಲಾ ಕೇಂದ್ರಗಳಲ್ಲಿ ಕೂಡ ನಾಟಕಗಳನ್ನಾಡಿತು.

ಹೀಗೆ ಎಪ್ಪತ್ತರಿಂದ ಎಂಬತ್ತರ ದಶಕದಲ್ಲಿ ಹಲವು ನಾಟಕಗಳು ಹೊಸ ರೀತಿಯಲ್ಲಿ ಪ್ರದರ್ಶನಗೊಂಡವು. ಹೊಸ ಬಗೆಯ ರಚನೆಗಳು ಮೂಡಿಬಂದವು. ಹೊಸ ಹೊಸ ನಿರ್ದೇಶಕರು ಮಕ್ಕಳ ನಾಟಕಗಳಿಗೆ ಹೊಸ ಹೊಸ ವ್ಯಾಖ್ಯಾನ ನೀಡುತ್ತಾ ರಂಗಸಜ್ಜಿಕೆ, ಸಂಗೀತ ವೇಷ ಭೂಷಣಗಳಲ್ಲಿ ವೈವಿಧ್ಯತೆ ತರುವ ಪ್ರಯತ್ನ ಮಾಡತೊಡಗಿದರು. ಹಲವು ಜಿಲ್ಲಾ ಕೇಂದ್ರಗಳಲ್ಲಿ , ಹಲವು ಸ್ಥಳಗಳಲ್ಲಿ ಮಕ್ಕಳ ರಂಗಚಟುವಟಿಕೆಯನ್ನು ನಡೆಸುವ ಹವ್ಯಾಸಿ ತಂಡಗಳು ತಮ್ಮದೇ ಆದ ಕಾರ್ಯತಂತ್ರ ರೂಪಿಸಿಕೊಂಡು ಕಾರ್ಯೋನ್ಮುಖವಾದವು. ಅಲ್ಲಲ್ಲಿ ಮಕ್ಕಳ ನಾಟಕೋತ್ಸವಗಳು ಜರುಗತೊಡಗಿದವು.

80ರ ದಶಕದಲ್ಲಿ ಈ ನಾಟಕೋತ್ಸವದ ಪರಿಪಾಠ ಹಲವು ಸ್ಥಳಗಳಿಗೆ ವಿಸ್ತಾರಗೊಂಡು, ಮಕ್ಕಳ ಚಟುವಟಿಕೆಗಳು ಇನ್ನೂ ವಿಸ್ತಾರಗೊಂಡವು. ಕೆಲವು ಸ್ಥಳಗಳಲ್ಲಿ ಮಕ್ಕಳ ನಾಟಕ ಸ್ಪರ್ಧೆಗಳು ನಡೆಯತೊಡಗಿದವು. 80ರದಶಕದಲ್ಲಿ ಮುಖ್ಯವಾದ ಇನ್ನೊಂದು ಬೆಳವಣಿಗೆಯೆಂದರೆ ನೀನಾಸಂ ತಿರುಗಾಟದ್ದು. ನೀನಾಸಂ ತಿರುಗಾಟವನ್ನು ಪ್ರಾರಂಭಿಸಿದ ಆರಂಭದ ಕೆಲವು ವರ್ಷಗಳಲ್ಲಿ ಒಂದು ನಾಟಕವನ್ನು ಮಕ್ಕಳಿಗಾಗಿಯೇ ಮೀಸಲಾಗಿಡುತ್ತಿತ್ತು. 1985ರಲ್ಲಿ 'ನೀಲಿಕುದುರೆ'ಯೊಂದಿಗೆ ಪ್ರಾರಂಭವಾದ ತಿರುಗಾಟದ ಮಕ್ಕಳ ನಾಟಕ ಪರಂಪರೆ 86,87ರಲ್ಲಿ ಕಂಬಾರರ 'ಅಲಿಬಾಬ' 88ರಲ್ಲಿ ಕಂಬಾರರ

'ಬೆಪ್ಪುತಕ್ಕಡಿ ಬೋಳೇಶಂಕರ', 89ರಲ್ಲಿ ವೈದೇಹಿಯವರ 'ಧಾಂ ಧೂಂ ಸುಂಟರಗಾಳಿ', 90ರಲ್ಲಿ 'ಪಂಜರಶಾಲೆ' 1991ರಲ್ಲಿ ವೈದೇಹಿಯವರ 'ನಾಯಿಮರಿ'ಯವರೆಗೂ ನಡೆಯಿತು. ನಂತರ ತಿರುಗಾಟದಲ್ಲಿ ಮಕ್ಕಳಿಗಾಗಿಯೇ ನಾಟಕವೊಂದನ್ನು ಪ್ರದರ್ಶಿಸುವ ಪರಿಪಾಠವನ್ನು ನೀನಾಸಮ್ ಕಾರಣಾಂತರಗಳಿಂದ ಕೈಬಿಟ್ಟಿತು. ನೀನಾಸಂ ತಿರುಗಾಟ, ದೊಡ್ಡವರು ಮಕ್ಕಳಿಗಾಗಿ ನಾಟಕ ಪ್ರದರ್ಶನ ನೀಡುವ ಪರಿಪಾಠಕ್ಕೆ ಪುಷ್ಟಿಯನ್ನು ಕೊಟ್ಟಿತು ಎಂಬುದು ಐತಿಹಾಸಿಕ ಸತ್ಯ.

ಇನ್ನು 90ರ ದಶಕದಲ್ಲಿ ಮಕ್ಕಳ ನಾಟಕ ಚಟುವಟಿಕೆಗಳು ಬೇರೆ ಬೇರೆ ದಿಕ್ಕಿನಲ್ಲಿ ಜರುಗಿದವು. ಅದರಲ್ಲಿ ಮುಖ್ಯವಾದವು 'ರಂಗಾಯಣ' ಮಕ್ಕಳಿಗಾಗಿ ನಾಟಕಗಳನ್ನು ಪ್ರದರ್ಶಿಸಿದ್ದು, ಇಕ್ಬಾಲರ 'ಚಿಣ್ಣಬಣ್ಣ' ನಾಟಕ ತಂಡ ವಿವಿಧ ಸ್ಥಳಗಳಲ್ಲಿ ನಾಟಕ ಪ್ರದರ್ಶಿಸಿದ್ದು, ಕೆ.ಜಿ. ಕೃಷ್ಣಮೂರ್ತಿಯವರ 'ಕಿನ್ನರ ಮೇಳ' ಶಾಲಾ ಕಾಲೇಜುಗಳಿಗೆ ಭೇಟಿಯಿತ್ತು ನಾಟಕ ಪ್ರದರ್ಶಿಸುವ ಪರಿಪಾಠ ಆರಂಬಿಸಿದ್ದು. ಕರ್ನಾಟಕ ನಾಟಕ ರಂಗಾಯಣವು 'ಗೋವಿನ ಹಾಡು', 'ಕಿಂದರಿಜೋಗಿ', 'ಮೂಕನ ಮಕ್ಕಳು' ಮುಂತಾದ ಮಕ್ಕಳ ನಾಟಕಗಳನ್ನು ಹಲವು ಸ್ಥಳಗಳಲ್ಲಿ ಪ್ರದರ್ಶಿಸಿತು.

ಮೇಲಿನ ಸಂಚಾರಿ ತಂಡಗಳಲ್ಲದೆ ಹಲವು ತರಹದ ನಾಟಕ ರಚನೆ ಮತ್ತು ಪ್ರದರ್ಶನಗಳು ರಾಜ್ಯದ ಹತ್ತು ಹಲವು ಸ್ಥಳಗಳಲ್ಲಿ ಈ ದಶಕದಲ್ಲಿ ನಡೆದಿವೆ. ಇದೇ ಕಾಲದಲ್ಲಿ ಜಗತ್ತಿನ ಹಲವು ಪ್ರಮುಖ ನಾಟಕಕಾರರ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸುವ, ಮಕ್ಕಳ ನಾಟಕಗಳಾಗಿ ರೂಪಾಂತರಿಸುವ ಪ್ರಯತ್ನಗಳು ನಡೆದವು. ಅವುಗಳಲ್ಲಿ ಮುಖ್ಯವಾಗಿ ರವೀಂದ್ರನಾಥ ಠಾಗೋರರ 'ಡಾಕ್‌ಘರ್' ನಾಟಕವನ್ನು ಕೆ.ವಿ.ಸುಬ್ಬಣ್ಣನವರು 'ಅಂಚೆಮನೆ'ಯನ್ನಾಗಿ ಅನುವಾದಿಸಿದ್ದು( ಇದೇ ನಾಟಕವನ್ನು ಇದೇ ಹೆಸರಿನಲ್ಲಿ ಅಹೋಬಲ ಶಂಕರರವರೂ ಅನುವಾದಿಸಿದ್ದಾರೆ), ಲಕ್ಷ್ಮೀನಾರಾಯಣ ಭಟ್ಟರು 'ತಾಸೀರ ದೇಶ' ನಾಟಕವನ್ನು 'ಇಸ್ಪೀಟ್ ರಾಜ್ಯ' ಎಂದು ಅನುವಾದಿಸಿದ್ದು, ವೈದೇಹಿಯವರು ಶೇಕ್ಸ್‌ಪಿಯರ್‌ನ 'ಧಾಂ ಧೂಂ ಸುಂಟರಗಾಳಿ'(ದಿ ಟೆಂಪೆಸ್ಟ್), 'ಗೊಂಬೆ ಮ್ಯಾಕ್‌ಬೆತ್' (ಮ್ಯಾಕ್‌ಬೆತ್), ಹೆಚ್.ಜಿ. ಸೀತಾರಾಂರವರ 'ಕಾಬೂಲಿವಾಲಾ' ಮುಂತಾದವು ಮುಖ್ಯವಾಗಿವೆ.

ಇದೇ ಕಾಲದಲ್ಲಿ ಕಂಬಾರರ 'ಪುಷ್ಪರಾಣಿ' ಪ್ರಕಟಗೊಂಡು ಮಕ್ಕಳ ನಾಟಕ ಆಡಿಸುವವರಿಗೆ ಪ್ರಮುಖ ನಾಟಕವೊಂದು ದೊರೆತಂತಾಯಿತು. ಪಂಜೆ ಮಂಗೇಶರಾಯರ 'ಹೆಡ್ಡ ಧೂಮನ ಕತೆ'ಯ ನೆನಪಿನಿಂದ ಬಿ.ವಿ.ಕಾರಂತರು 'ಹೆಡ್ಡಾಯಣ'ರಚಿಸಿ ಅದೂ ಬಹಳ ಕಡೆ ಯಶಸ್ವಿಯಾಯಿತು. ಅದೇ ತರಹ ಚಂದ್ರಕಾಂತ ಕುಸನೂರ, ಪಳಕಳ ಸೀತಾರಾಮ ಭಟ್, ಪಿ.ಎಸ್.ರಾಮಪ್ಪ, ಡಾ. ಗಜಾನನ ಶರ್ಮ, ಡಾ.ಗುರುರಾವ್ ಭಾಪಟ್, ದುಂಡಿರಾಜ್, ಗೋನವಾರ ಕಿಷನ್ ರಾವ್, ಡಾ. ಪ್ರಕಾಶ್

ಗರೂಡ, ಆರ್.ವಿ. ಭಂಡಾರಿ ಮೊದಲಾದ ಸಾಹಿತಿಗಳು ರಚಿಸಿದ ಮನಿ, ಅಲ್ಲಾವುದ್ದೀನನ ಅದ್ಭುತ ದೀಪ, ಮೃಗ ಮತ್ತು ಸುಂದರಿ, ಗೊಂಬೆ ರಾವಣ, ನಾಣೀಭಟ್ಟನ ಸ್ವರ್ಗದ ಕನಸು, ಪ್ರಾಣಿ ಪ್ರಪಂಚ, ಅಜ್ಜಿ ಕತೆ, ಚುಕ್ ಚುಕ್ ಭೈಯ್ಯ, ತಾಲಂ ತಾರ, ಪಕ್ಕಮ್ಮನ ಬಾಲ, ಬೆಳಕಿನ ಹಬ್ಬ, ಬೆಳಕಿನೆಡೆಗೆ... ಮುಂತಾದವು ಪ್ರಕಟಗೊಂಡು ಹಲವು ಪ್ರದರ್ಶನ ಕಂಡವು. ಈ ನಡುವೆ ಎ.ಎಸ್. ಮೂರ್ತಿಯವರು ಹಲವು ನಾಟಕಗಳನ್ನು ರಚಿಸಿದ್ದಲ್ಲದೆ. ಬೆಂಗಳೂರಿನ 'ಬಿಂಬ' ತಂಡದ ಮೂಲಕ ಪ್ರಯೋಗಿಸಿದರು. ತುಮಕೂರು, ಬೆಂಗಳೂರು ಮುಂತಾದೆಡೆ ಮಕ್ಕಳ ನಾಟಕ ಸ್ಪರ್ಧೆಗಳು ನಡೆದರೆ, ಉತ್ತರ ಕರ್ನಾಟಕದಿಂದ ಹಿಡಿದು ಮೈಸೂರಿನ ರಂಗಾಯಣದವರೆಗೆ ಹತ್ತು ಹಲವು ಕಡೆ ಮಕ್ಕಳ ನಾಟಕೋತ್ಸವಗಳು ನಡೆದು ಮಕ್ಕಳ ನಾಟಕಗಳಿಗೆ ಹೆಚ್ಚಿನ ಉತ್ತೇಜನ ದೊರೆಯಿತು.

## ಕನ್ನಡದ ಪ್ರಮುಖ ಮಕ್ಕಳ ನಾಟಕಗಳು

### ಸಾಹಿತ್ಯ ಕೃತಿ ಮತ್ತು ರಂಗ ನಿರ್ಮಿತಿ

ನಾಟಕವೊಂದು ಯಶಸ್ವೀ ಎನ್ನಿಸಿಕೊಳ್ಳಲು ಅದು 'ಸಾಹಿತ್ಯಕೃತಿ'ಯಾಗಿ ಯಶಸ್ವಿಯಾಗಿರಬೇಕೇ ಅಥವಾ ಅದರ ಪ್ರದರ್ಶನ ಯಶಸ್ಸು ಕಂಡಿರಬೇಕೇ ಎಂಬುದು ದೀರ್ಘಕಾಲದಿಂದ ವ್ಯಾಪಕ ಚರ್ಚೆಗೊಳಗಾದ ವಿಚಾರ. ಸಾಹಿತ್ಯ ಕೃತಿಯ ಸೃಷ್ಟಿ ಮತ್ತು ಸ್ವೀಕಾರಗಳೆರಡೂ ಲೇಖಕನ ಮತ್ತು ಓದುಗನ ವೈಯುಕ್ತಿಕ ನೆಲೆಯಲ್ಲಿ ನಡೆಯುವಂತಹ ಕ್ರಿಯೆ. ಅದು ವ್ಯಕ್ತಿ ತನ್ನಲ್ಲಿ ತಾನು ತನಗೋಸ್ಕರ ಅನುಸಂಧಾನ ಮಾಡಿಕೊಳ್ಳುವ ಪ್ರಕ್ರಿಯೆ. ಅಲ್ಲಿ ಲೇಖಕ ತನ್ನ ನೆಲೆಯಲ್ಲಿ ತಾನು ಸೃಷ್ಟಿಸುತ್ತಾ ಹೋದರೆ, ಸ್ವೀಕರಿಸುವ ಓದುಗ ಕೂಡ ತಾನೊಬ್ಬನೇ ತನ್ನ ಏಕಾಂತದಲ್ಲಿ ಅದರ ಅನುಭವವನ್ನು ದಕ್ಕಿಸಿಕೊಳ್ಳುತ್ತಾ ಹೋಗುತ್ತಾನೆ. ಈ ಕ್ರಿಯೆ ಕೇವಲ ತನಗಲ್ಲದೆ ಬೇರೆಯವರಿಗಾಗಿ ನಡೆದಾಗ ಅದು ನಾಟಕದ ಹತ್ತಿರಕ್ಕೆ ಸರಿಯುತ್ತದೆ. ನಾಟಕದಲ್ಲಿ ಸೃಷ್ಟಿ ಮತ್ತು ಸ್ವೀಕಾರಗಳೆರಡೂ ವೈಯುಕ್ತಿಕ ನೆಲೆಯನ್ನು ಮೀರಿ, ಇನ್ನೊಬ್ಬರನ್ನು ಒಳಗೊಳ್ಳುತ್ತಾ ಸಾಗುತ್ತದೆ. ಪ್ರೇಕ್ಷಕನೊಬ್ಬನು ನಟರಿಲ್ಲದೆ ನಾಟಕವನ್ನು ತನ್ನ ಅನುಭವಕ್ಕೆ ದಕ್ಕಿಸಿಕೊಳ್ಳಲಾರನಾದರೆ ನಿರ್ದೇಶಕನು ನಟರನ್ನೂ, ಪ್ರೇಕ್ಷಕರನ್ನೂ ಒಳಗೊಂಡೇ ಪ್ರದರ್ಶನವನ್ನು ಏರ್ಪಡಿಸಬೇಕಾಗುತ್ತದೆ. ನಾಟಕವು 'ಸಾಹಿತ್ಯ ಕೃತಿ'ಯಾಗಿ ಅರಳುವುದು ಲೇಖಕ ಮತ್ತು ಓದುಗನ ವೈಯುಕ್ತಿಕ ನೆಲೆಯಲ್ಲಾದರೆ, 'ರಂಗಕೃತಿ'ಯಾಗುವುದು ನಿರ್ದೇಶಕ, ನಟ ಮತ್ತು ಪ್ರೇಕ್ಷಕರ ಸಮುದಾಯದಲ್ಲಿ. ನಾಟಕ ಕೃತಿಯ ಮಹತ್ವವನ್ನು ಸಾಹಿತ್ಯ ಕೃತಿಯಾಗಿ ಮತ್ತು ರಂಗನಿರ್ಮಿತಿಯಾಗಿ ಚರ್ಚಿಸುವ ಸಂದರ್ಭದಲ್ಲಿ ಇಬ್ಬರು ತಜ್ಞರ ಅಭಿಪ್ರಾಯಗಳನ್ನು ಗಮನಿಸೋಣ. ಮೊದಲನೆಯದು ನ. ರತ್ನರವರ ಅಭಿಪ್ರಾಯ.

" ನನ್ನ ಮನಸ್ಸಿಗೆ ಒಂದು ನಾಟಕ ಪ್ರಯೋಗವಾದಾಗ ನಾಟಕ ಕೃತಿ ಅತಿ ಮುಖ್ಯ. ನಾಟಕಕಾರನಲ್ಲ, ವಿಮರ್ಶಕನಲ್ಲ, ನಿರ್ದೇಶಕನಲ್ಲ. ನಾಟಕ ಬರೆದಾದ ಮೇಲೆ ಕೃತಿ ನಾಟಕಕಾರನನ್ನೂ ಮೀರಿ ನಿಲ್ಲುತ್ತದೆ. ನಾಟಕಕಾರನು ಬೇರೆಯಾಗಿ ವಿಮರ್ಶಕನಾಗಬಹುದು, ಸ್ವತಃ ನಿರ್ದೇಶಕನಾಗಬಹುದು, ನಟನಾಗಬಹುದು. ಯಾವುದೇ ನಿರ್ದೇಶಕ ತಾನು ನಾಟಕದಲ್ಲಿ ಕಂಡದ್ದನ್ನು ರಂಗದ ಮೇಲೆ ತರಬೇಕು. ಆದರೆ ನಾಟಕ ಕೃತಿಗೇ ಧಕ್ಕೆ ತರುವಂತಿಲ್ಲ. ಅದರ ಅರ್ಥವನ್ನು, ತೀಕ್ಷ್ಣತೆಯನ್ನು ಕುಗ್ಗಿಸುವಂತಿಲ್ಲ. ಯಾವುದೇ ಒಳ್ಳೆಯ ನಾಟಕ ಹಲವಾರು ದೃಷ್ಟಿ ಕೋನಗಳಿಗೆ ಒಗ್ಗುತ್ತದೆ. ನಿರ್ದೇಶಕ ಯಾವುದೇ ದೃಷ್ಟಿಕೋನವನ್ನೂ ಆರಿಸಿಕೊಳ್ಳಬಹುದು. ನಿರ್ದೇಶಕ ಕೃತಿಯಲ್ಲಿನ ಸಾಮಗ್ರಿಗಳನ್ನು ಉಪಯೋಗಿಸಬೇಕು. ಅಲ್ಲಿ, ಇಲ್ಲಿ ಸ್ವಲ್ಪ ಮಟ್ಟಿಗೆ ಬದಲಾಯಿಸುವ ಸ್ವಾತಂತ್ರ್ಯ ನಿರ್ದೇಶಕನಿಗಿದೆ. ಅದಕ್ಕೂ ಮಿತಿಯಿದೆ."[11]

ಇದೇ ವಿಷಯದಲ್ಲಿ ಬಿ.ವಿ.ಕಾರಂತರು, ಟಿ.ಪಿ. ಅಶೋಕರಿಗೆ ನೀಡಿದ ಸಂದರ್ಶನವೊಂದರಲ್ಲಿ ಹೀಗೆ ಹೇಳಿದ್ದಾರೆ.

"ರಂಗಭೂಮಿ ಒಂದು ಸಂಕೀರ್ಣ ಕಲೆ. ಇಲ್ಲಿ ಹಲವಾರು ರೀತಿಯ ಕೆಲಸ ಮಾಡುತ್ತಾರೆ. ನಾಟಕಕಾರ ಮುಖ್ಯ ಇರಬಹುದು. ಆದರೆ ರಂಗ ಪ್ರದರ್ಶನದ ವರ್ತಮಾನದಲ್ಲಿ ಪ್ರೇಕ್ಷಕರಿಗೆ ಮುಖಾಮುಖಿ ಆಗುವವರು ನಟರೇ. ನಟರ ಶರೀರ ಮತ್ತು ಶಾರೀರದಿಂದಲೇ ಎಲ್ಲವೂ ಸೃಷ್ಟಿಯಾಗಬೇಕು. ಬೇರೆ ಅಂಶಗಳು ಅವುಗಳಿಗೆ ಪೂರಕವಾಗಿರುತ್ತವೆ,ಅಷ್ಟೇ. ನಾಟಕ ನಿಮಗೆ ಬರೇ ಒಂದು ಡ್ರಾಫ್ಟ್, ಅದರಲ್ಲಿಯೇ ಕೆಲವು ಪದಗಳನ್ನು ಮಾತ್ರ ತಗೋಳ್ತೀವಿ. ಅದನ್ನೂ ಯಾಕೆ ತಗೋಳ್ತೀವಿ ಅಂದ್ರೆ ಅವು ಇರೋದೇ ನಮಗಾಗಿ. ನಮ್ಮ ಕೆಲವು ಸಾಹಿತಿಗಳು ಇದನ್ನ ಇಷ್ಟಪಡೋದಿಲ್ಲ. ಶ್ರೀರಂಗರಂತೂ ತಮ್ಮ ನಾಟಕದಲ್ಲಿ ಒಂದು ಪದವನ್ನೂ ಬದಲಾಯಿಸೋದಕ್ಕೆ ಬಿಡ್ತಾ ಇರಲಿಲ್ಲ. ಅಷ್ಟೇ ಅಲ್ಲ, ರಿಹರ್ಸಲ್ ನೋಡಿ, ತಾವು ಒಪ್ಪಿಗೆ ಕೊಟ್ಟರೆ ಮಾತ್ರ ನಾಟಕ ಆಡಬೇಕು ಅನ್ನೋ ಹಠ ಹಿಡೀತಾ ಇದ್ರು. ಕೆಲವು ಸಾರಿ ನಾಟಕಕಾರ ನಮ್ಮವನೇ. ಲಿಖಿತ ನಾಟಕ ರಂಗಭೂಮಿ ಚರಿತ್ರೆಯ ಸಾಹಿತ್ಯಕ ದಾಖಲೆ ಕೂಡ ಹೌದು. ಇದನ್ನು ಒಪ್ಪಿಕೊಂಡೇ ನಾವು ಲಿಖಿತ ನಾಟಕಗಳನ್ನು ನಮ್ಮ ಉದ್ದೇಶಕ್ಕೆ ತಕ್ಕಂತೆ ಬಳಸಿಕೊಳ್ಳೋದು. ಇದರ ಬಗ್ಗೆ ಗಿರೀಶ್ ಕಾರ್ನಾಡ್ ಒಬ್ರೇ ಅನ್ಸುತ್ತೆ ಸರಿಯಾದ Attitude ತೆಗೆದುಕೊಂಡಿರೋದು, ಅವರ ನಾಟಕಗಳನ್ನು ಹೇಗೆ ಬದಲಾಯಿಸಿಕೊಂಡರೂ ಅವರು ಚಕಾರ ಎತ್ತುವುದಿಲ್ಲ. ನನಗನ್ಸುತ್ತೆ, ನಮ್ಮ ರಂಗಭೂಮಿ ಸಾಕಷ್ಟು ಸುಪುಷ್ಟವಾಗಿ ಬೆಳೆದಾಗ ಅದು ನಾಟಕಕಾರನಿಗಾಗಿ ಕಾಯೋಲ್ಲ".[12]

ನಾಟಕವೊಂದನ್ನು ಗಮನಿಸುವಲ್ಲಿ ಹೀಗೆ ವಿವಿಧ ಅಭಿಪ್ರಾಯಗಳಿವೆ. ಮಕ್ಕಳ ನಾಟಕವೊಂದನ್ನು ಯಶಸ್ವೀ ಎಂದು ತೀರ್ಮಾನಿಸಲು ಅದರ ಒಟ್ಟೂ ಪರಿಣಾಮವನ್ನು

ಪರಿಗಣಿಸಬೇಕಾಗುತ್ತದೆ. ನಮ್ಮ ಅಧ್ಯಯನವು ನಾಟಕಗಳು ಮಕ್ಕಳ ಮನಸ್ಸಿನ ಮೇಲೆ ಬೀರುವ ಪರಿಣಾಮ ಪ್ರಭಾವಗಳ ಮೇಲೆ ಕೇಂದ್ರೀಕೃತವಾಗಿರುವುದರಿಂದ ಮತ್ತು ಇಲ್ಲಿ ನಾವು ನಾಟಕವೊಂದನ್ನು ಮಕ್ಕಳು ಓದುವ ದೃಷ್ಟಿಯಿಂದ ಗಮನಿಸುತ್ತಿಲ್ಲವಾದ್ದರಿಂದ, ನಾಟಕ ಪ್ರದರ್ಶನದ ಯಶಸ್ಸೇ ನಮಗೆ ಮುಖ್ಯವಾಗುತ್ತದೆ. ಹಾಗಾಗಿ ಮಕ್ಕಳ ನಾಟಕಗಳನ್ನು ಗಮನಿಸುವಾಗ ಅದು ಸಾಹಿತ್ಯ ಕೃತಿಯಾಗಿರುವ ಸಂದರ್ಭದಲ್ಲೇ ಪ್ರದರ್ಶನದ ಯಶಸ್ಸಿಗೂ ಕಾರಣವಾಗುವ ಅಂಶಗಳನ್ನು ಪರಿಗಣಿಸಬೇಕಾಗುತ್ತದೆ. ಕನ್ನಡದಲ್ಲಿ ಇದುವರೆಗೆ ಬಂದ ಲಭ್ಯ ನಾಟಕಗಳನ್ನು ಪ್ರಾತಿನಿಧಿಕವಾಗಿ ಗಮನಿಸೋಣ. ಇಲ್ಲಿ ನಾಟಕಗಳನ್ನು ವಿವಿಧ ವಿಷಯಗಳನ್ನು ಆಧರಿಸಿ ವರ್ಗೀಕರಿಸಿ ವಿವೇಚಿಸುವ ಬದಲಾಗಿ, ಅವು ಪ್ರಕಟವಾಗುತ್ತಾ ಬಂದ ಕಾಲಾನುಕ್ರಮದಲ್ಲಿ ಗಮನಿಸೋಣ. ಈ ನಮ್ಮ ಪರಿಗಣನೆಗೆ ಮೊದಲು ದೊರೆಯುವ ನಾಟಕಗಳೆಂದರೆ ಎಮ್.ಎನ್. ಕಾಮತ್‌ರ ನಾಟಕಗಳು.

## ಎಮ್.ಎನ್. ಕಾಮತ್‌ರ ನಾಟಕಗಳು

ಶಾಲೆಗಳಲ್ಲಿ ಆರಂಭವಾದ ಕನ್ನಡ ಮಕ್ಕಳ ನಾಟಕ ಪರಂಪರೆಯಲ್ಲಿ ಸೂಕ್ತ ದಾಖಲಾತಿ ಪಡೆದ ನಾಟಕಗಳೆಂದರೆ ಎಮ್.ಎನ್. ಕಾಮತ್‌ರ ನಾಟಕಗಳು. ಎಮ್.ಎನ್. ಕಾಮತ್‌ರು 60ಕ್ಕಿಂತ ಹೆಚ್ಚು ನಾಟಕಗಳನ್ನು ಬರೆದಿದ್ದುದಾಗಿ ತಿಳಿದುಬರುತ್ತದೆಯಾದರೂ ಕೇವಲ 27 ನಾಟಕಗಳು ಮಾತ್ರ, ಬಿ. ಲೀಲಾಭಟ್ ಅವರ ಅವಿರತ ಪರಿಶ್ರಮ ಮತ್ತು ಅನ್ವೇಷಣೆಯಿಂದ ಪುತ್ತೂರಿನ ಕರ್ನಾಟಕ ಸಂಘದಿಂದ ಇತ್ತೀಚೆಗೆ ಪ್ರಕಾಶಿಸಲ್ಪಟ್ಟಿವೆ. ಅವರ ಪ್ರಥಮ ನಾಟಕ 'ಅಂಚೆಮನೆ'. 1913ರಲ್ಲಿ ಬರೆದು, 1924ರಲ್ಲಿ ಪ್ರಕಟಗೊಂಡ ಇದು ಠಾಗೋರರ ಬಂಗಾಳಿ ನಾಟಕದ ನೇರ ಅನುವಾದ. ಮೂರು ದೃಶ್ಯಗಳ ಈ ನಾಟಕ ಎಳೆಯರಿಗೂ, ಹಿರಿಯರಿಗೂ ರೋಚಕ ಅನುಭವ ನೀಡುವುದೆಂಬುದು ಲೀಲಾ ಭಟ್‌ರ ಅಭಿಪ್ರಾಯ. ಮರಾಠಿ ಮತ್ತು ಕನ್ನಡ ವೃತ್ತಿ ರಂಗಭೂಮಿಗಳ ಪ್ರಭಾವವನ್ನು ಹೊಂದಿರುವ 'ಚಂದ್ರಹಾಸಾಭ್ಯುದಯ'ವು ಸುಮಾರು ಅರವತ್ತು ಪದ್ಯಗಳುಳ್ಳ ಸಂಗೀತ ನಾಟಕ. ವಿಶೇಷವಾಗಿ ಮರಾಠಿ ನಾಟಕಗಳ ಅನುಕರಣದಂತಿರುವ, ತನ್ನ ಹಾಡುಗಳಿಂದ ಕಂಪನಿ ನಾಟಕಗಳನ್ನು ನೆನಪಿಸುವ ಈ ನಾಟಕವನ್ನು 1913ರಲ್ಲಿ ಕೆನರಾ ಹೈಸ್ಕೂಲ್ ವಿದ್ಯಾರ್ಥಿಗಳು ಅಭಿನಯಿಸಿದ ದಾಖಲೆ ಇದೆ.

1918ರಲ್ಲಿ ಕೆನರಾ ಹೈಸ್ಕೂಲ್ ಉಪಾಧ್ಯಾಯರಾಗಿ ನೇಮಕಗೊಂಡ ಕಾಮತ್‌ರು ಮುಂದೆ ಹಲವಾರು ನಾಟಕಗಳನ್ನು ಬರೆದರು. " ಕಾಮತ್‌ರು ಮಕ್ಕಳ ಮನೋವೃತ್ತಿ, ಭಾಷಾ ಗೌರವ, ಶಾಲಾ ಗೌರವವನ್ನು ಗಣನೆಗೆ ತೆಗೆದುಕೊಂಡೇ ಅದಕ್ಕೆ ತಕ್ಕುದಾದ

ವಿಷಯಗಳನ್ನಾಯ್ದು, ಎಲ್ಲಿಯೂ ಘನತೆ ಗಾಂಭೀರ್ಯಕ್ಕೆ ಕುಂದು ಬಾರದಂತೆ ಎಚ್ಚರಿಕೆಯಿಂದ ನಾಟಕಗಳನ್ನು ರಚಿಸಿದರು. ಶಿಕ್ಷಣದ ಉದ್ದೇಶಕ್ಕನುಗುಣವಾಗಿ ಉತ್ಕೃಷ್ಟ ನೀತಿಪಾಠವನ್ನು ಮಕ್ಕಳು ತಾವಾಗಿ ತಿಳಿಯುವಂತಹ ಸನ್ನಿವೇಶ, ದೃಶ್ಯಗಳ ರಚನೆ ಮಾಡಿದರು. ಇವರ ನಾಟಕಗಳಲ್ಲಿ ಹಳೆಯ ಘಟನೆಗಳಿಗೆ ಆಧುನಿಕ ರೂಪ ಕೊಟ್ಟುದರಿಂದ ಸಮಕಾಲೀನ ಸಮಸ್ಯೆಗಳಿಗೆ ಕಾಲೋಚಿತವಾಗಿ ಅವು ಹೇಗೆ ಸ್ಪಂದಿಸುತ್ತವೆ ಎಂಬುದನ್ನು ಕಂಡುಕೊಳ್ಳಬಹುದು. ಅವರದು ಸಾಹಿತ್ಯದಲ್ಲಾಗಲೀ ನಾಟಕದಲ್ಲಾಗಲೀ ಪುರೋಗಾಮಿ ದೃಷ್ಟಿ. ಒಟ್ಟಿನ ಮೇಲೆ ಕಾಮತ್‌ರ ನಾಟಕಗಳು ಒಬ್ಬ ಶಿಕ್ಷಕನ ಅನುಭವದ ನವನೀತ. ನಾಟಕದಿಂದ ನಾಟಕಕ್ಕೆ ಸರಿದಂತೆ ಅವರ ಅನುಭವದ ವೈಶಾಲ್ಯ ಮತ್ತು ಅವರ ಮಾನಸಿಕ ಉತ್ಕರ್ಷವನ್ನು ಗುರುತಿಸಬಹುದು".[13] ಇದು ಕಾಮತರ ನಾಟಕವನ್ನು ಅಧ್ಯಯನ ಮಾಡಿದ ಜಿ.ಆರ್.ಶಣ್ಯೆರವರ ಅಭಿಪ್ರಾಯ.ಕನ್ನಡ ವಿಶ್ವಕೋಶದಲ್ಲಿ ಮಕ್ಕಳ ನಾಟಕಕಾರರೆಂದು ನಮೂದಿಸಲ್ಪಟ್ಟ ಕಾಮತರ ನಾಟಕಗಳನ್ನು ಹೀಗೆ ಪಟ್ಟಿ ಮಾಡಬಹುದು.

**ಪೌರಾಣಿಕ ನಾಟಕಗಳು** : ಚಂದ್ರಹಾಸ, ಸೀತಾ ಸ್ವಯಂವರ, ಕೃಷ್ಣ ಸಂಧಾನ, ಚಿತ್ರಾಂಗದ, ಅರ್ಜುನ ಚಾತುರ್ಮಾಸ, ಮಧ್ಯಮ ವ್ಯಾಯೋಗ, ಚಂಡ ಕೌಶಿಕ, ನಾಗಾನಂದ, ಸಾಧನೆ.

**ಐತಿಹಾಸಿಕ ನಾಟಕಗಳು** : ತುಕಾರಾಮ, ತೆನಾಲಿ ರಾಮ, ಮೌರ್ಯ ಸಿಂಹಾಸನ, ದಾಮಾಜಿ ಪಂಥ, ಪ್ರತಾಪ ಸಿಂಹ, ಚಂದ್ರರಾವ್ ಮೋರೆ, ವಜ್ರಮುಷ್ಟಿ, ವಿಠೂ ಮಹಾರ್, ಸತೀ.

**ಸಾಮಾಜಿಕ ನಾಟಕಗಳು** : ಮರ್ಜಿ, ವಂತಿಗೆ, ಮೆಂಬರು, ಮಾಲಿ, ಉದ್ಧಾರಾನಂದ, ಯೋಗಕ್ಷೇಮ.

**ಶೈಕ್ಷಣಿಕ ನಾಟಕಗಳು** : ಶಿಕ್ಷಣ ಪರೀಕ್ಷೆ, ಶುಕ ಶಿಕ್ಷಣ , ಪರೀಕ್ಷೆ, ಕತೆ ಹೇಳುವಿಕೆ, ಟ್ಯೂಷನ್ ಫೀ.

"ಮಕ್ಕಳ ಮನಸ್ಸನ್ನು ತಣಿಸಿ, ಕುಣಿಸಿದ ಇನ್ನೊಂದು ಹೆಸರು ಎಮ್.ಎನ್. ಕಾಮತ್ ಅವರದು. ಇವರೂ ಪಂಜೆಯವರಂತೆ ವೃತ್ತಿಯಲ್ಲಿ ಉಪಾಧ್ಯಾಯರು. ಮಕ್ಕಳ ಜೊತೆಗೆ ಬೆರೆಯುತ್ತಿದ್ದ ಇವರಿಗೆ ಮಕ್ಕಳ ಮನಸ್ಸು ತೆರೆದ ಕನ್ನಡಿ. ಪದ್ಯ, ಕಥೆಗಳಿಗಿಂತ ಇವರು ಬರೆದ ನಾಟಕಗಳು ಇವರ ವಿಶಿಷ್ಟವಾದ ಕೊಡುಗೆಯೆನಿಸಿದೆ"[14] ಎಂಬುದಾಗಿ ಕನ್ನಡ ವಿಶ್ವಕೋಶ ಕಾಮತರನ್ನು ಶ್ಲಾಘಿಸಿದೆ.

## ಶಿವರಾಮ ಕಾರಂತರ ಮಕ್ಕಳ ನಾಟಕಗಳು

ಮಕ್ಕಳಿಗಾಗಿ ಮತ್ತು ಯುವಕರಿಗಾಗಿ ನಾಟಕಗಳನ್ನು ಸ್ವತಃ ಆಡಿಸಿದ ಶಿವರಾಮ

ಕಾರಂತರ ನಾಟಕಗಳ ವೈಶಿಷ್ಟ್ಯವೆಂದರೆ, ಕೇವಲ ಐತಿಹಾಸಿಕ ಪೌರಾಣಿಕ ನಾಟಕಗಳಿಗೇ ಒತ್ತು ನೀಡುತ್ತಿದ್ದ ಆ ಕಾಲದಲ್ಲೇ ಸಾಮಾಜಿಕ ವಿಚಾರಗಳನ್ನು ನಾಟಕಕ್ಕೆ ಅಳವಡಿಸಿದ್ದು. ಅವರು ಆ ಕಾಲದಲ್ಲೇ ಮಕ್ಕಳ ನಾಟಕಗಳಲ್ಲಿ ಪ್ರಾಣಿಪಕ್ಷಿಗಳನ್ನು ಬಳಸಿದ್ದೇ ಅಲ್ಲದೆ ಅವುಗಳ ಮೂಲಕ ಅಂದಿನ ಸಾಮಾಜಿಕ ಪರಿಸ್ಥಿತಿಗೆ ಪ್ರಸ್ತುತವೆನ್ನಿಸಿದ ವಿಚಾರಗಳನ್ನು ನಾಟಕಗಳ ಮೂಲಕ ಹೇಳಲು ಪ್ರಯತ್ನಿಸಿದ್ದರು. ಕಾರಂತರ ಕೆಲವು ಪ್ರಮುಖ ಮಕ್ಕಳ ನಾಟಕಗಳು ಹೀಗಿವೆ;

**ಅಜ್ಜಿಮಾಣಿ :** ನಾಲ್ಕಂಕಗಳ ಹಾಸ್ಯಮಯ ಮಕ್ಕಳ ನಾಟಕ. 1984ರ 'ಯುಗಪುರುಷ' ದಸರಾ ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟವಾಗಿದೆ. ಪ್ರದರ್ಶನಗೊಂಡ ದಾಖಲೆ ದೊರೆಯುವುದಿಲ್ಲ.

ತಾಯಿಯನ್ನು ಬಾಲ್ಯದಲ್ಲೇ ಕಳೆದುಕೊಂಡು, ಅಜ್ಜಿಯ ಅತಿ ಮುದ್ದಿನಿಂದ ಬೆಳೆದ ಪುಟ್ಟು, ತಂದೆ ಮತ್ತು ಅಜ್ಜಿಯರ ಅತಿ ಪ್ರೀತಿಯ ಪರಿಣಾಮವಾಗಿ ಅಂಜುಬುರುಕನಾಗಿ, ಶಾಲೆಯಲ್ಲೂ ದಡ್ಡನೆನ್ನಿಸಿಕೊಳ್ಳುತ್ತಾನೆ. ಕೊನೆಗೆ ತನ್ನ ದಡ್ಡತನದ ಪರಿಣಾಮದಿಂದ ಖಿನ್ನನಾಗಿ ಆತ್ಮಹತ್ಯೆಗೆ ಪ್ರಯತ್ನಿಸುವ ಸಂದರ್ಭದಲ್ಲಿ, ಆತನ ಗೆಳೆಯರು ಅವನಿಗೆ ಬುದ್ಧಿ ಹೇಳಿ ಧೈರ್ಯಶಾಲಿಯಾಗಿ ಬದುಕಲು ಹುರಿದುಂಬಿಸುತ್ತಾರೆ. ಅವನು ಗೆಳೆಯರ ಜೊತೆಗೂಡಿ ತನಗೆ ಅಂಟಿದ್ದ ಅಜ್ಜಿಮಾಣಿ ಎಂಬ ಅಡ್ಡ ಹೆಸರಿನಿಂದ ಹೊರಬಂದು, ಬದುಕಲು ನಿಶ್ಚಯಿಸುತ್ತಾನೆ.

**ಕಾಕ ಪರಿಣಯ :** ಈ ನಾಟಕದ ಕುರಿತು ಹೆಚ್ಚಿನ ವಿವರಗಳು ಲಭ್ಯವಿರದಿದ್ದರೂ, ಪುತ್ತೂರಿನ ದಸರಾ ಮಹೋತ್ಸವ ಕಾರ್ಯಕ್ರಮ ಪಟ್ಟಿಯಲ್ಲಿ ಈ ನಾಟಕವನ್ನು ಕಾರಂತರು ಪ್ರದರ್ಶಿಸಿದ ಬಗ್ಗೆ 4/10/1940ರ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ವರದಿಯಿರುವುದಾಗಿ ಮಾಲಿನಿ ಮಲ್ಯ ತಿಳಿಸುತ್ತಾರೆ. " 28/9/40ರಂದು ರಾತ್ರಿ 7-15ಕ್ಕೆ, 'ಕಾಕ ಪರಿಣಯ' ಎಂಬ ನೃತ್ಯ ವಿನೋದವು ನಡೆಯಿತು" ಎಂದು ದಾಖಲಾಗಿರುವುದನ್ನು ಕಂಡರೆ ಇದೊಂದು ನೃತ್ಯ ನಾಟಕ ಎಂದು ಅಭಿಪ್ರಾಯ ಪಡಲಾಗಿದೆ.

**ಡುಮಿಂಗೋ :** ಈ ನಾಟಕವನ್ನು ಕಾರಂತರು ಬರೆದ ನಿಖರವಾದ ಕಾಲ ಲಭ್ಯವಿಲ್ಲದಿದ್ದರೂ, 1928ರ ಸುಮಾರಿಗೆ ಇದನ್ನು ಬರೆದಿರಬಹುದೆಂದು ಊಹಿಸಲಾಗಿದೆ. 30ರ ದಶಕದಲ್ಲಿ ಕಾರಂತರು ನಡೆಸುತ್ತಿದ್ದ ಶಾಂತಿ ಶಿಬಿರ ಗ್ರಾಮಸಂಚಾರದ ಅವಧಿಯಲ್ಲಿ ಇದನ್ನು ಪ್ರದರ್ಶಿಸಿದ ಬಗ್ಗೆ 16/5/1929ರ ವಸಂತ ಪತ್ರಿಕೆಯಲ್ಲಿ ವರದಿಯಿರುವುದಾಗಿ ಹೇಳಲಾಗಿದೆ. ಪುತ್ತೂರು ಮತ್ತು ಬೆಳ್ಳಾರೆ ಶಾಲಾ ಬಾಲಕರು 'ಡುಮಿಂಗೋ' ನಾಟಕವನ್ನಾಡಿ ಸಭಿಕರನ್ನು ಆನಂದಗೊಳಿಸಿದ ಬಗ್ಗೆ 31/5/1929ರ ಸ್ವದೇಶಾ ಭಿಮಾನಿಯಲ್ಲಿ ವರದಿಯಿದೆಯೆಂದು ಹೇಳಲಾಗಿದೆ.

**ನರನೋ ವಾನರನೋ** : ಶಾಂತಿಶಿಬಿರ ಗ್ರಾಮಸಂಚಾರ ಕಾಲದಲ್ಲಿ ಈ ನಾಟಕವನ್ನು ಪ್ರದರ್ಶಿಸಿದ ಬಗ್ಗೆ 16/5/1929ರ ವಸಂತ ಸಂಚಿಕೆಯಲ್ಲಿ ವರದಿಯಿರುವುದನ್ನು ಕಿನ್ನರಲೋಕದಲ್ಲಿ ಉಲ್ಲೇಖಿಸಲಾಗಿದೆ.

**ನಮ್ಮ ಓಟು ಯಾರಿಗೆ?** : 'ಸರಳ ವಿರಳ ನಾಟಕಗಳು' ಸಂಕಲನದಲ್ಲಿ 1991ರಲ್ಲಿ ಅಕ್ಷರ ಪ್ರಕಾಶನದ ವತಿಯಿಂದ ಪ್ರಕಟವಾದ ಮಕ್ಕಳ ನಾಟಕ. ಮೂವತ್ತರ ದಶಕದಲ್ಲಿ ಕಾರಂತರು ರಚಿಸಿ, ಪ್ರದರ್ಶಿಸಿದ ನಾಟಕ. ಈ ನಾಟಕದಲ್ಲಿ ಇಲಿ, ಬೆಕ್ಕು, ನಾಯಿ, ಹುಲಿ, ತೋಳಗಳು ಪಾತ್ರವರ್ಗ. ಇಲಿಗಳು ತಮ್ಮ ಸ್ವತಂತ್ರ ರಾಜ್ಯದಲ್ಲಿ ಸಮತಾವಾದವನ್ನು ಜಾರಿ ಮಾಡಿಕೊಂಡು, ಓಟಿನ ಹಕ್ಕನ್ನು ಜಾರಿ ಮಾಡಿಕೊಳ್ಳುತ್ತವೆ. ತಮ್ಮ ಅಭಿವೃದ್ಧಿಗೆ ತಮ್ಮ ಕುಲಕ್ಕೇ ಓಟು ಕೊಡಬೇಕೆಂದು ನಿಶ್ಚಯಿಸಿಕೊಂಡು, 'ಸರ್ವೇ ಮೂಷಿಕ ಸುಖಿನೋ ಭವಂತು' ಎಂದು ಸಾರುತ್ತವೆ. ಇಲಿಗಳ ಕಾಟಕ್ಕೆ ಎಲ್ಲ ಪ್ರಾಣಿಗಳೂ ಹೆದರುತ್ತವೆ. ಕೊನೆಯಲ್ಲಿ ಪ್ರಾಣಿಗಳು ಉಪಾಯದಿಂದ ಹುಲಿಯನ್ನು ಹುರಿದುಂಬಿಸಿ ಇಲಿಗಳನ್ನು ಹೆದರಿಸುವುದೇ ಈ ನಾಟಕದ ಅಂತ್ಯ. ಇಡೀ ನಾಟಕ 'ಮೈಟ್ ಈಸ್ ರೈಟ್' ಎಂಬುದನ್ನು ಗೇಲಿ ಮಾಡುವ ಅಣಕವಾಡು ಎನ್ನಬಹುದು.

**ಶೀಪಿಂಗ್ ಕುಯಿ** : ಚೀನಿ ಭಾಷೆಯ ನಾಟಕವನ್ನು 'ಶೀಪಿಂಗ್ ಕುಯಿ' ಎಂಬ ಹೆಸರಿನಲ್ಲಿ ಅನುವಾದಿಸಿ ಕಾರಂತರು ಮಕ್ಕಳಿಂದ ಆಡಿಸಿದ ನಾಟಕ. ಅದರ ಇಂಗ್ಲಿಷ್ ಅನುವಾದದ ಹೆಸರು 'ಲೇಡಿ ಪ್ರೀಷಿಯಸ್ ಸ್ಟ್ರೀಮ್'. ಈ ನಾಟಕದಲ್ಲಿ ಪಾತ್ರಗಳು ತಂತಮ್ಮ ಪರಿಚಯವನ್ನು ತಾವಾಗಿಯೇ ತಿಳಿಸುತ್ತವೆ. ಚೀನೀಯರ ಉಡುಗೆ ತೊಡುಗೆಗಳನ್ನು ತೊಡಿಸಿ, ಚಿಕ್ಕ ಮಕ್ಕಳಿಂದ ಈ ನಾಟಕವನ್ನು ಪ್ರದರ್ಶಿಸಲಾಗಿತ್ತು ಎನ್ನಲಾಗಿದೆ. ಪ್ರಾಯಶಃ ಈ ನಾಟಕದ ವಿಚಾರವನ್ನು ಗಮನಿಸಿದರೆ, ಕಾರಂತರ ಪ್ರಗತಿಪರ ದೃಷ್ಟಿಕೋನ ನಮಗೆ ಅರ್ಥವಾಗುತ್ತದೆ. ನಾಟಕದಲ್ಲಿ ಹೊಸತನವನ್ನು ತರುವ, ನಾಟಕದ ವೇಷ ಭೂಷಣಗಳಿಗೆ ಮಹತ್ವ ಕೊಡುವ (ಉರು ಹೊಡೆದ ಸಂಭಾಷಣೆ ಒಪ್ಪಿಸುವುದೇ ನಾಟಕವೆಂದುಕೊಳ್ಳುತ್ತಿದ್ದ ಕಾಲದಲ್ಲಿ!) ಕಾರಂತರ ನವ್ಯತೆ ನಿಜಕ್ಕೂ ವಿಸ್ಮಯಕಾರಿ.

**ಮದುವೆಗಿಂತ ಮಸಣ ವಾಸಿ** : ಹಾಸ್ಯಮಯ ಮಕ್ಕಳ ನಾಟಕ. ( ವಿವರಗಳು ಅಲಭ್ಯ)

**ಮಂಗನ ಮದುವೆ** : 1946ರಲ್ಲಿ ಈ ಕೃತಿ ಪುತ್ತೂರಿನ ಹರ್ಷ ಪ್ರಕಟಣಾಲಯದ ವತಿಯಿಂದ ಮರು ಮುದ್ರಣಗೊಂಡಿದೆ. ಈ ನಾಟಕದಲ್ಲಿ ಬರುವ ವಸಂತ, ಸುಮಂತ, ಚೆಲುವ, ಋಷಿ, ರಾಕ್ಷಸ, ಶೃಂಗಿ, ಅವನ ಹೆಂಡತಿ, ಅವರ ಮಗ, ಅಲ್ಲದೆ ಹುಲಿ, ಹರಿಣ, ನರಿ, ಗಿಳಿ ಮುಂತಾದ ಪಾತ್ರಗಳು ನಾಟಕವನ್ನು ವೈವಿಧ್ಯಪೂರ್ಣಗೊಳಿಸಿವೆ. ಈ ನಾಟಕ ಕಾರಂತರ ಒಂದು ಯಶಸ್ವೀ ನಾಟಕವೆನ್ನಲಾಗಿದೆ.

**ಲೀಗ್ ಆಫ್ ನೇಷನ್** : ಅಸಂಬದ್ಧ ಮಾತು, ಅಸಂಗತ ಪ್ರಾಸಗಳನ್ನು ಬಳಸಿ, ನರ್ಸರಿ ರೈಮ್ ಮಾದರಿಯ ಪದ್ಯಗಳನ್ನು ನಾಟಕಪಾತ್ರಗಳ ಭಾಷೆಯನ್ನಾಗಿ ಬಳಸಿ, ಸಹಜ ಸನ್ನಿವೇಶಗಳನ್ನು ಕಾಲ್ಪನಿಕ ಚಿತ್ರಗಳ ಮೂಲಕ ಚಿತ್ರಿಸುವ ಪ್ರಯತ್ನದ ಮಾದರಿಯ ನಾಟಕ. ಈ ನಾಟಕದ ವಸ್ತು ಲೀಗ್ ಆಫ್ ನೇಷನ್ಸ್ ಸಂಸ್ಥೆಯ ಜನನ. ಇದೊಂದು ಪ್ರಹಸನ. ವಿವಿಧ ರಾಷ್ಟ್ರಗಳನ್ನು ಪಶು, ಪಕ್ಷಿ ರೂಪದ ಸಾಂಕೇತಿಕ ಪಾತ್ರಗಳಿಂದ ತೋರಿಸಲಾಗಿದೆ. ಈ ನಾಟಕವನ್ನು ಮಂಗಳೂರಿನ ಬೆಸೆಂಟ್ ಶಾಲಾ ಬಾಲಕಿಯರಿಂದ ಕಾರಂತರು ಆಡಿಸಿದ್ದರೆಂದು ಮಾಲಿನಿ ಮಲ್ಯ ತಿಳಿಸುತ್ತಾರೆ.

## ಕುವೆಂಪುರವರ ಮಕ್ಕಳ ನಾಟಕಗಳು

ಮಕ್ಕಳ ರಂಗಭೂಮಿಯ ದೃಷ್ಟಿಯಿಂದ ಕಾಮತ್ ಮತ್ತು ಕಾರಂತರ ನಂತರ ನಮಗೆ ಪ್ರಸ್ತುತರೆನ್ನಿಸುವವರು ಕೆ.ವಿ. ಪುಟ್ಟಪ್ಪನವರು. ಮಕ್ಕಳ ನಾಟಕಗಳಿಗೆ ಗಣ್ಯ ಅಭಿರುಚಿ ಇಲ್ಲದ ಕಾಲದಲ್ಲಿ ಶ್ರೇಷ್ಠ ಸಾಹಿತಿಯೊಬ್ಬರು ಮಕ್ಕಳ ನಾಟಕ ರಚನೆಗೆ ಕೈಯಿಕ್ಕುವುದು ಸಾಹಸದ ಕೆಲಸವಾಗಿತ್ತು. ಕಾಮತರು ಉಪಾಧ್ಯಾಯರೇ ಆಗಿದ್ದುದರಿಂದ ಅವರಿಗೆ ನಾಟಕ ರಚನೆ ಒಂದರ್ಥದಲ್ಲಿ ಅನಿವಾರ್ಯವಾಗಿತ್ತು, ಸಹಜವಾಗಿತ್ತು. ಇನ್ನು ಶಿವರಾಮ ಕಾರಂತರು ಸಹಜವಾಗಿ ನಾಟಕಗಳತ್ತ ಆಕರ್ಷಿತರಾಗಿ, ಕಂಪನಿಗಳಿಗೆ ನಾಟಕ ಬರೆದುಕೊಟ್ಟಿದ್ದವರಾಗಿ ಮತ್ತು ಯುವ ಸಂಘಟಕರಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರಿಂದಾಗಿ ಸಾಹಿತ್ಯದ ಸೊಗಡಿದ್ದ ಅವರು ತಮ್ಮ ಚಟುವಟಿಕೆಯ ಅಗತ್ಯಗಳಿಗೆಂದು ನಾಟಕ ಬರೆದು ಪ್ರದರ್ಶಿಸಿದ್ದು ಕೂಡ ಅಂತಹ ವಿಶೇಷವಲ್ಲ. ಆದರೆ ಕುವೆಂಪುರವರು ಸಾಹಿತ್ಯ ಕೃತಿಯಾಗಿ ಮಕ್ಕಳ ನಾಟಕಗಳನ್ನು ಬರೆದದ್ದು ವಿಶೇಷ.

**ನನ್ನ ಗೋಪಾಲ** : ಈ ನಾಟಕ ಮಗುವಿನಲ್ಲಿ ಭಗವಂತನನ್ನು ಕಾಣುವ ಭಾರತೀಯ ಸಂಸ್ಕೃತಿಯ ಆದರ್ಶದ ನಿದರ್ಶಕವಾಗಿದೆ. ಸಾಹಿತ್ಯದ ದೃಷ್ಟಿಯಿಂದ ನನ್ನ ಗೋಪಾಲ ಒಂದು ಅತ್ಯುತ್ತಮ ಕೊಡುಗೆ. ಈ ನಾಟಕವನ್ನು ಓದಿ ಎ.ಆರ್. ಕೃಷ್ಣಶಾಸ್ತ್ರಿಗಳು ವ್ಯಕ್ತಪಡಿಸಿದ ಅಭಿಪ್ರಾಯವನ್ನು ನೇರವಾಗಿ ಅವರ ಪತ್ರವನ್ನೇ ಉಲ್ಲೇಖಿಸುವ ಮೂಲಕ ಗಮನಿಸಬಹುದಾಗಿದೆ.

13ನೇ ಮಾರ್ಚ್ 1930
ಬೆಂಗಳೂರು

ನನ್ನ ಪ್ರೀತಿಯ ಪುಟ್ಟಪ್ಪ,

ನಿಮ್ಮ 'ನನ್ನ ಗೋಪಾಲ' ಈ ದಿನ ಬೆಳಿಗ್ಗೆ ನನಗೆ ಮುಟ್ಟಿತು. ಒಡನೆಯೇ ಓದಿ ಮುಗಿಸಿಬಿಟ್ಟೆ. ಅದು ಭಗವದ್ಗೀತೆ ಮತ್ತು ಭಾಗವತ ಎರಡರ ಸಾರಸರ್ವಸ್ವವನ್ನೂ ತನ್ನಲ್ಲಿ ಒಳಗೊಂಡಿರುವ ಒಂದು ಪುಟ್ಟ ಅನರ್ಘ್ಯ ರತ್ನ. ಕಣ್ಣೀರು ತುಂಬಿ ಅದನ್ನು ಓದಿದ್ದೇನೆ. ಮಡಿ ಮಾಡಿದ ಹತ್ತಿಯ ಬಟ್ಟೆಯಂತಹ ಅಂತರ್ನೈರ್ಮಲ್ಯವನ್ನು ಅನುಭವಿಸುತ್ತಿದೆ ನನ್ನ ಚೇತನ; ಸಾಧಾರಣವಾಗಿ ಜನ ನನ್ನನ್ನು ಕಲ್ಲು ಮನಸ್ಸಿನ ಕಟುವ್ಯಕ್ತಿ ಎಂದು ಭಾವಿಸುತ್ತಾರೆ, ಆದರೆ ನಂಬುತ್ತೀರೋ ಇಲ್ಲವೋ, ಅದನ್ನು ಓದಿದ ಮೇಲೆ ನನ್ನ ಹೃದಯ ಒಂದು ಊರ್ಧ್ವಮುಖವಾದ ಸ್ವರ್ಗೀಯ ರಸಾನಂದ ಸ್ರೋತ್ರದಲ್ಲಿ ಮುಳುಗಿ ತೇಲಿ ಹೋಗುತ್ತಿರುವಂತಿದೆ. ಪರಿಣಾಮವಾಗಿ ಇವೊತ್ತು ಏನೊಂದೂ ನಿತ್ಯದ ನೀರಸ ಕರ್ತವ್ಯ ಕರ್ಮವನ್ನು ಮಾಡಲಾರದವನಾಗಿದ್ದೇನೆ. ಆಧ್ಯಾತ್ಮಕ್ಕೆ ಇಷ್ಟೊಂದು ಉಪಯುಕ್ತವಾಪಕವಾಗಿ ಸಾಹಿತ್ಯ ತಾನೆಂದೂ ಸೃಷ್ಟಿಯಾಗಿಲ್ಲ. ತಮ್ಮ ಈ ಸೇವೆಯ ಬದುಕಿನಲ್ಲಿ ವಾಗ್ದೇವಿಯು ಮತ್ತು ಭಗವಂತನ ಕೃಪೆ ನಿತ್ಯಸಂಗಿಯಾಗಿ ನಿಮ್ಮನ್ನು ನಡೆಸಲಿ ಎಂದು ಪ್ರಾರ್ಥಿಸುತ್ತೇನೆ.

–ಎ.ಆರ್. ಕೃಷ್ಣಶಾಸ್ತ್ರಿ [15]

ಇಲ್ಲಿ ಈ ಪತ್ರವನ್ನು ಉಲ್ಲೇಖಿಸುವುದರ ಮುಖ್ಯ ಉದ್ದೇಶ ನಮ್ಮ ಹಲವು ಸಾಹಿತಿಗಳಲ್ಲಿ ಮನೆ ಮಾಡಿರುವ 'ಮಕ್ಕಳ ಸಾಹಿತ್ಯ ರಚನೆ ಅಥವಾ ಓದು ಎರಡೂ ಗಣ್ಯ ಅಭಿರುಚಿಯಲ್ಲ' ಎಂಬ ಅಭಿಪ್ರಾಯ ಕುವೆಂಪು, ಕಾರಂತ, ಕೃಷ್ಣಶಾಸ್ತ್ರಿಗಳಂಥವರಿಗೆ ಇರಲಿಲ್ಲ ಎಂಬುದನ್ನು ಗಮನಿಸಲು. ನಾವು 2001ರಲ್ಲಿ ಶಿವಮೊಗ್ಗದಲ್ಲಿ ಮಕ್ಕಳಿಂದ ಈ 'ನನ್ನ ಗೋಪಾಲ' ನಾಟಕವನ್ನು ಪ್ರದರ್ಶಿಸಿದಾಗ, ಈ ನಾಟಕವನ್ನು ಮಕ್ಕಳು ಮನತುಂಬಿ ಅನುಭವಿಸಿದರು. ನಾವು ಏರ್ಪಡಿಸಿದ ಮೂರು ಪ್ರದರ್ಶನಗಳಿಗೂ ರಂಗಮಂದಿರ ತುಂಬಿ ತುಳುಕುವಷ್ಟು ಜನ ಸೇರಿದ್ದು, ಜನ ಅತ್ಯದ್ಭುತವಾಗಿ ಆನಂದಿಸಿದರು. ಅಂದರೆ ಒಂದು ಕೃತಿ ಉತ್ಕೃಷ್ಟವಾಗಿದ್ದರೆ ಹೇಗೆ ಕಾಲವನ್ನು ಮೀರಿ ನಿಲ್ಲಬಲ್ಲದು ಎಂಬುದಕ್ಕೆ ಇದೊಂದು ಉದಾಹರಣೆ. ಈ ನಾಟಕದ ವಿಶೇಷತೆಯೆಂದರೆ ಇದು ಒಂದು ಸಾಹಿತ್ಯಕೃತಿಯಾಗಿ ಕೂಡ ಗೆಲ್ಲುತ್ತದೆ. ರಂಗನಿರ್ಮಿತಿಯಾಗಿ ಕೂಡ ಗೆದ್ದಿದೆ. ಇದನ್ನು ಗಮನಿಸಿದಾಗ ಒಂದು ನಾಟಕ ಗೆಲ್ಲುವುದು ಯಾರಿಂದ ಎಂಬ ಪ್ರಶ್ನೆಯೇ ಅಪ್ರಸ್ತುತವೆನ್ನಿಸುತ್ತದೆ. ನಾಟಕವೊಂದು ನಾಟಕಕಾರನ, ನಿರ್ದೇಶಕನ, ನಟನ ಮತ್ತು ಪ್ರೇಕ್ಷಕನ ವಸ್ತು. ಇಲ್ಲಿ ನಾಟಕಕಾರ ಸಂಪೂರ್ಣ ಯಶಸ್ವಿಯಾದರೂ

ನಾಟಕವೊಂದು ಸಾಹಿತ್ಯಕೃತಿಯಾಗಿ ಓದುಗನನ್ನು ತಟ್ಟುತ್ತದೆ, ಕಲಾಕೃತಿಯಾಗಿ ನಿಲ್ಲುತ್ತದೆ. ನಿರ್ದೇಶಕ ಸಂಪೂರ್ಣ ಯಶಸ್ವಿಯಾದರೂ ಪ್ರದರ್ಶನಗೊಂಡ ನಾಟಕ ಕಲಾಕೃತಿಯಾಗಿ ಪ್ರೇಕ್ಷಕನ ಮನಸ್ಸಿನಲ್ಲಿ ಉಳಿಯುತ್ತದೆ. ನಟರು ಸಂಪೂರ್ಣ ತೊಡಗಿಸಿಕೊಂಡು ತಮ್ಮ ಪಾತ್ರ ನಿರ್ವಹಿಸಿದರೂ ಅದೊಂದು ಕಲಾಕೃತಿಯಾಗಿ ಪ್ರೇಕ್ಷಕನನ್ನು ತಟ್ಟುತ್ತದೆ. ಆದರೆ ಈ ಮೂರೂ ಆಯಾಮಗಳನ್ನು ಹೊತ್ತು ನಿಲ್ಲುವ ಸಾಮರ್ಥ್ಯ 'ನನ್ನ ಗೋಪಾಲ'ದಂತಹ ನಾಟಕಗಳಿಗೆ ಮಾತ್ರ ಸಾಧ್ಯ.

**ಮೋಡಣ್ಣನ ತಮ್ಮ** : ಇದೊಂದು ಗೀತರೂಪಕ. ಮಕ್ಕಳಲ್ಲಿ ಸಹಜವಾದ ನಿಸರ್ಗ ಪ್ರೀತಿಯನ್ನು ಇನ್ನಷ್ಟು ಉದ್ದೀಪನಗೊಳಿಸಬಲ್ಲ ಕೃತಿ. ಕುವೆಂಪುರವರಿಗೆ ತೀರ ಸಹಜವಾದ ನಿಸರ್ಗಪ್ರಿಯತೆ ಈ ನಾಟಕದಲ್ಲಿ ಕಾಣಿಸುತ್ತದೆ.

ಹುಟ್ಟಾ ನಿಸರ್ಗ ಕವಿಯಾದ ಕುವೆಂಪುರವರು ಮಕ್ಕಳ ಮನೋರಥವನ್ನು ಚೆನ್ನಾಗಿ ಬಲ್ಲವರು. ಅಂತೆಯೇ ಮಕ್ಕಳು ಮಾತನಾಡುವುದಕ್ಕಿಂತಲೂ ಅಭಿನಯಿಸಿ ಹಾಡುವುದರಲ್ಲಿ ಹೆಚ್ಚು ಉತ್ಸುಕರೆಂದು ತಿಳಿದಿದ್ದ ಕುವೆಂಪುರವರು 'ಮೋಡಣ್ಣನ ತಮ್ಮ' ಗೀತ ರೂಪಕವನ್ನು ಮಕ್ಕಳ ಮನಸ್ಸಿನ ಲಹರಿಯಂತೆ ಕೃತಿಗಿಳಿಸಿದ್ದಾರೆ. ಇಲ್ಲಿ ಹುಡುಗ, ಮೋಡ, ಗಿರಿ, ಕಾಡು, ತಾಯಿ ಪಾತ್ರಗಳು ತುಂಬಾ ರಮ್ಯವಾಗಿ ಕಾಣಿಸಿಕೊಳ್ಳುತ್ತವೆ. ಪಶ್ಚಿಮಘಟ್ಟ ಈ ಎಲ್ಲ ಪಾತ್ರಗಳಿಗೆ ಜೀವಕಳೆ ತಂದುಕೊಟ್ಟಿದೆ. ನೆಲ ಮುಗಿಲುಗಳನ್ನು ಒಂದಾಗಿಸಿದ ಈ ನಿಸರ್ಗ ಸಂಪತ್ತು ಮಗುವಿನ ಮಾತಿಗೆ ಮಾರ್ದನಿಗೊಡುತ್ತದೆ. ಸರಳ ಶೈಲಿಯ ಈ ಗೀತರೂಪಕವು ಮಕ್ಕಳು ಪ್ರದರ್ಶಿಸಲು ಅನುಕೂಲಕರವಾಗಿದೆ.

ಇದರ ಜೊತೆಗೆ ಕುವೆಂಪುರವರ 'ಬೊಮ್ಮನಹಳ್ಳಿ ಕಿಂದರಿಜೋಗಿ', 'ಅಮಲನ ಕಥೆಗಳು' ಕಥನಕಾವ್ಯಗಳಾದರೂ ತಮ್ಮ ನಾಟಕೀಯ ಗುಣಗಳಿಂದ ಅತ್ಯಂತ ಗಮನಾರ್ಹವಾಗಿದೆ. ಬೊಮ್ಮನಹಳ್ಳಿ ಕಿಂದರಿಜೋಗಿ ಮಕ್ಕಳ ನಾಟಕವೆಂದು ಹಣೆಪಟ್ಟಿ ಅಂಟಿಸಿಕೊಂಡ ಅನೇಕ ನಾಟಕಗಳಿಗಿಂತ ಹೆಚ್ಚು ಪ್ರದರ್ಶನಗೊಂಡಿದೆ. 'ರಂಗಾಯಣ'ದಂತಹ ಪ್ರತಿಷ್ಠಿತ ಸಂಸ್ಥೆಗಳಿಂದ ಕೂಡ ಅಭಿನಯಿಸಲ್ಪಟ್ಟ 'ಕಿಂದರಿಜೋಗಿ', ಇಂದಿಗೂ ಮಕ್ಕಳ ಮನಸ್ಸನ್ನು ಸೂರೆಗೊಳ್ಳುವ, ಸೂರೆಗೊಳ್ಳುತ್ತಿರುವ ನಾಟಕೀಯ ಗುಣವುಳ್ಳ ಕಥನಕಾವ್ಯ.

## ಕೈಲಾಸಂರವರ ನಾಟಕಗಳು

ನಾವಿಂದು ಮಕ್ಕಳ ನಾಟಕಗಳೆಂದು ಒಪ್ಪಲಿ ಬಿಡಲಿ, ಕನ್ನಡನಾಡಿನ ನೂರಾರು ಶಾಲಾಕಾಲೇಜುಗಳಲ್ಲಿ ನಾಲ್ಕಾರು ದಶಕಗಳ ಕಾಲ ವಾರ್ಷಿಕೋತ್ಸವಗಳಲ್ಲಿ ಆಡುತ್ತಲೇ ಬಂದ ಕೆಲವೇ ನಾಟಕಕಾರರ ನಾಟಕಗಳಲ್ಲಿ ಕೈಲಾಸಂರವರ ನಾಟಕಗಳೂ

ಪ್ರಮುಖವಾಗಿವೆ. ಅದರಲ್ಲಿ ನಮಗೆ ಪ್ರಮುಖವಾಗಿ ಮಕ್ಕಳ ನಾಟಕಗಳ ಗುಂಪಿಗೂ ಸೇರಬಹುದಾದ ನಾಟಕವೆಂದರೆ 'ಟೊಳ್ಳುಗಟ್ಟಿ'. ಮಕ್ಕಳಿಗೆ ಮನೆಯಲ್ಲಿ ಸೂಕ್ತ ವ್ಯಕ್ತಿತ್ವದ ನಿರ್ಮಾಣಕ್ಕೆ ಅವಕಾಶ ನೀಡದೆ ಹೊರಗೆ ಎಂತಹ ಶಿಕ್ಷಣ ನೀಡಿದರೂ ಅದು ಹೊಳೆಯಲ್ಲಿ ಹುಣಿಸೇಹಣ್ಣು ತೊಳೆದಂತೆ. ಅವರ ಗುಣಾವಗುಣಗಳು ನಿರ್ಧಾರವಾಗುವುದು, ಅವರ ವ್ಯಕ್ತಿತ್ವದ ಮೂಲರೂಪ ಸಂಘಟನೆಗೊಳ್ಳುವುದು, ಅವರ ನೈತಿಕ ತಳಹದಿ ನಿಶ್ಚಯವಾಗಿ ಬಲಗೊಳ್ಳುವುದು, ಅವರು ಕೌಟುಂಬಿಕ ವಾತಾವರಣದಲ್ಲಿ ಪಡೆಯುವ ಶಿಕ್ಷಣದಿಂದ. ಕೈಲಾಸಂರವರ ಮೊಟ್ಟಮೊದಲ ನಾಟಕವಾದ ಟೊಳ್ಳು-ಗಟ್ಟಿಯಲ್ಲಿ ಅವರು, ತಮ್ಮ ಕಾಲದ ಶೈಕ್ಷಣಿಕ ವ್ಯವಸ್ಥೆಯಲ್ಲಿ ಟೊಳ್ಳು ಯಾವುದು, ಗಟ್ಟಿ ಯಾವುದು ಎಂಬುದನ್ನು ನಾಟಕದ ಮೂಲಕ ಹೇಳಿದ್ದಾರೆ. ಈ ನಾಟಕ ಅಂದಿಗಲ್ಲದೆ ಇಂದಿಗೂ ಪ್ರಸ್ತುತವಾಗಿದೆ. ಕೈಲಾಸಂರವರ ವಿಶೇಷತೆಯೆಂದರೆ ಅವರು ಕೆಲವೊಂದು ಸಾರ್ವಕಾಲಿಕ ಸತ್ಯಗಳನ್ನು ಎತ್ತಿಕೊಂಡು, ನಾಟಕವನ್ನು ಜನರ ಬದುಕಿನ ಕನ್ನಡಿಯಾಗಿ ಬಿಂಬಿಸಿ, ಸಮಾಜದ ಸಮೀಪಕ್ಕೆ ಕರೆತಂದದ್ದು.

ಇನ್ನು 'ಪೋಲಿ ಕಿಟ್ಟಿ'ಯನ್ನು ಮಕ್ಕಳ ನಾಟಕಗಳ ವ್ಯಾಪ್ತಿಯಲ್ಲಿ ತರುವುದು (ಶಾಲಾ-ಕಾಲೇಜುಗಳಲ್ಲಿ ಆಡುತ್ತಿದ್ದುದು ನಿಜವಾದರೂ) ಅಷ್ಟು ಸಮಂಜಸವಲ್ಲ ಎಂದುಕೊಂಡರೂ, ಈ ನಾಟಕ ಮಕ್ಕಳ ಮನಸ್ಸನ್ನು ಗೆದ್ದಿರುವುದಂತೂ ಸತ್ಯ. ಜನಪ್ರಿಯತೆಯ ಆಧಾರದ ಮೇಲೆ ಗುಣಾತ್ಮಕ ವಿಶ್ಲೇಷಣೆ ಮಾಡಬಾರದೆಂಬುದನ್ನು ಒಪ್ಪಿಕೊಂಡರೂ, ಒಂದು ನಾಟಕವನ್ನು ಪ್ರೇಕ್ಷಕರಿಗೆ ನೀಡುವಾಗ ಅದರಲ್ಲಿರುವ ಗುಣಾತ್ಮಕ ಅಂಶಗಳೇ ಗಣನೆಗೆ ಬರುವಂತೆ ಮಾಡಬಹುದು ಎಂಬುದಕ್ಕೆ ಈ ನಾಟಕವನ್ನು ಇಕ್ಬಾಲ್ ಅಹಮದ್ 'ಚಿಣ್ಣ-ಬಣ್ಣ'ಕ್ಕಾಗಿ 1988ರಲ್ಲಿ ಪ್ರದರ್ಶನ ನೀಡಿದ್ದನ್ನು ಗಮನಿಸಿದಾಗ ತಿಳಿದುಬರುತ್ತದೆ. ಇಕ್ಬಾಲ್ ಅಹಮದ್‌ರು ಈ ನಾಟಕವನ್ನು ಅಚ್ಚುಕಟ್ಟಾಗಿ ಮಕ್ಕಳಿಗೆ ಮುದ ಕೊಡುವಂತೆ ಪ್ರದರ್ಶಿಸಿದ್ದರು ಎಂಬುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ 'ಪೋಲಿ ಕಿಟ್ಟಿ' ಮಕ್ಕಳ ನಾಟಕವೆಂದು ಕೈಲಾಸಂ ಎಲ್ಲಿಯೂ ಹೇಳಿಲ್ಲ. ಆ ನಾಟಕವನ್ನು ಪ್ರಾಯಶಃ ಕೈಲಾಸಂ ಅವರು ಬರೆದಿರುವುದೂ ಆ ಕಾಲದ ಉಚ್ಚ ವರ್ಗದ 'ಸ್ಕಾಲರ್'ಗಳನ್ನು ಚುಚ್ಚುವುದಕ್ಕಾಗಿ.

ಆಗಿನ ಕಾಲದಲ್ಲಿ ಶಾಲಾ ಕಾಲೇಜುಗಳಲ್ಲಿ ನಾಟಕಗಳು ನಡೆಯುತ್ತಿದ್ದ ಬಗೆಯನ್ನು ಬಿ.ವಿ. ವೈಕುಂಠರಾಜುರವರು ತಮ್ಮ ಬಾಲ್ಯವನ್ನು ನೆನೆಸಿಕೊಂಡು ಹೇಳಿದ ಮಾತುಗಳ ಮೂಲಕ ಗಮನಿಸಬಹುದಾಗಿದೆ.

"ಸಂಭಾಷಣೆಯೇ ನಾಟಕದ ಜೀವಾಳ ಎಂದು ಕೈಲಾಸಂ ಮತ್ತು ಶ್ರೀರಂಗರು ತಿಳಿದುಕೊಂಡಿದ್ದಂತೆ, ಈ ನಾಟಕಗಳನ್ನು ಪ್ರದರ್ಶಿಸುವವರೂ ತಿಳಿದುಕೊಂಡಿದ್ದರು. ಇಂಥ ಪ್ರದರ್ಶನಗಳಿಗೆ ಬರುತ್ತಿದ್ದುದು ಸಾಮಾನ್ಯವಾಗಿ ವಿದ್ಯಾವಂತ ಪ್ರೇಕ್ಷಕರು. ಅವರು

ಸಂಭಾಷಣೆಗಳ ಸವಿ ಸವಿಯುತ್ತಿದ್ದರು. ಸಾಮಾನ್ಯವಾಗಿ ಶಾಲಾಕಾಲೇಜುಗಳ ವಾರ್ಷಿಕೋತ್ಸವಗಳಲ್ಲಿ ಇಂತಹ ನಾಟಕಗಳನ್ನಾಡುತ್ತಿದ್ದುದರಿಂದ ಪ್ರವೇಶ ಶುಲ್ಕವಿರುತ್ತಿರಲಿಲ್ಲ. ಹೀಗಾಗಿ ಊರ ಜನರೆಲ್ಲ ನಾಟಕ ನೋಡಲು ಬರುತ್ತಿದ್ದರು. (ಯಾವುದೇ ಮನೋರಂಜನೆಗೆ ಅವಕಾಶವಿಲ್ಲದ ಕಡೆ ಹುಡುಗರ ನಾಟಕವೇ ಒಂದು ದೊಡ್ಡ ಮನೋರಂಜನೆ) ಶಾಲೆ ಅಥವಾ ಕಾಲೇಜಿನ ಒಬ್ಬ ಮೇಷ್ಟ್ರು ಇಂತಹ ನಾಟಕಗಳನ್ನು ನಿರ್ದೇಶಿಸುತ್ತಿದ್ದರು. ನಿರ್ದೇಶನವೆಂದರೆ ಸಂಭಾಷಣೆ ಹೇಳಿಕೊಡುವುದು ಎಂದೇ ಅವರು ತಿಳಿದುಕೊಂಡಿರುತ್ತಿದ್ದರು. ಇದಕ್ಕೆ ಉದಾಹರಣೆಯಾಗಿ ನನ್ನ ಅನುಭವವನ್ನೇ ಕೊಡಬಹುದು.

ಹೈಸ್ಕೂಲಿನಲ್ಲಿ ಮತ್ತು ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಓದುತ್ತಿದ್ದಾಗ ನಾನು ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದೆ. ಒಮ್ಮೆ ಕೈಲಾಸಂ ಅವರ 'ತಾಳಿ ಕಟ್ಟೋಕ್ಕೂಲೀನೇ' ನಾಟಕವನ್ನು ನಮ್ಮ ಮೇಷ್ಟ್ರು ಆಯ್ಕೆ ಮಾಡಿದ್ದರು. ತಪ್ಪಿಲ್ಲದೆ ಸಂಭಾಷಣೆ ಹೇಳುವವರಿಗೆ ನಿರ್ದೇಶಕರ ಶಹಭಾಸ್‌ಗಿರಿ ದೊರೆಯುತ್ತಿತ್ತು. ಸಂಭಾಷಣೆ ಹೇಳುವಾಗ ಸ್ವಲ್ಪ ಏರಿಳಿತ ಮಾಡುವುದು, ಸ್ವಲ್ಪ ಮಟ್ಟಿಗೆ ಚಲಿಸುವುದನ್ನು ಅವರು ಹೇಳಿಕೊಡುತ್ತಿದ್ದರು. ಈ ಚಲನೆ ಎರಡು ಮೂರು ಅಡಿಗಳಿಗಿಂತ ಹೆಚ್ಚಿರುತ್ತಿರಲಿಲ್ಲ. ಸಂಭಾಷಣೆ ಹೇಳಬೇಕಾದ ಪಾತ್ರಧಾರಿ ತಪ್ಪದೆ ಮೈಕ್ ಮುಂದೆ ಬಂದು ಹೇಳಬೇಕಾಗಿತ್ತು. ಇಲ್ಲದಿದ್ದರೆ ದೂರದಲ್ಲಿ ಕುಳಿತಿದ್ದವರು 'ಮೈಕ್' 'ಮೈಕ್' ಎಂದು ಅರಚುತ್ತಿದ್ದರಲ್ಲ! (ಇಷ್ಟಾದರೂ ನಾಟಕವೆಂದರೆ ಇದೇ ಎಂದು ಆ ಕಾಲದಲ್ಲಿ ತಿಳಿದುಕೊಂಡಿದ್ದರು)"[16]

ಮುಂದೆ ಕೂಡ ಶಾಲಾ ಕಾಲೇಜುಗಳಲ್ಲಿ ದಾಶರಥಿ ದೀಕ್ಷಿತ್, ಗುಂಡಣ್ಣ, ಬೇಲೂರು ಕೃಷ್ಣಮೂರ್ತಿಗಳ ನಾಟಕಗಳನ್ನು ಕೇವಲ ಸಂಭಾಷಣೆಗಳೇ ನಾಟಕವೆಂದು ನಂಬಿಕೊಂಡು ಆಡುತ್ತಾ ಬರುವ ಪರಿಪಾಠ ನಡೆಯಿತು. ಆದರೆ ಈ ಎಲ್ಲ ಸಂದರ್ಭಗಳಲ್ಲಿ ನಾಟಕಗಳು ಹೇಗಿದ್ದರೂ, ಪ್ರಯೋಗಗಳು ಹೇಗಿದ್ದರೂ, ಎಲ್ಲೋ ಅಂತರಂಗದಲ್ಲಿ ರಂಗಭೂಮಿಯ ಕುರಿತಾದ ಆಸ್ಥೆ, ಆಸಕ್ತಿಗಳು ಇದ್ದುದು ಸತ್ಯ. ರಂಗಾಸಕ್ತಿಯ ನಿರಂತತೆಯನ್ನು ಕಾಪಾಡಿಕೊಂಡು ಬಂದದ್ದಂತೂ ಸತ್ಯ.

## ಶ್ರೀರಂಗರ 'ಹನ್ನೊಂದು ವರಿ'

ಶ್ರೀರಂಗರು ಕನ್ನಡದ ಪ್ರಮುಖ ನಾಟಕಕಾರರು. ಅವರು ಮಕ್ಕಳಿಗಾಗಿಯೇ ಬರೆದ ನಾಟಕ 'ಹನ್ನೊಂದು ವರಿ' ಅಥವಾ 'ಪ್ರಾಯಮರಿ, ಶಿಕ್ಷಣದ ಗುರಿ' ಎಂಬುದು.

ಈ ನಾಟಕದಲ್ಲಿ, ಉಡಾಳ ಹುಡುಗರ ಟೋಳಿಯೊಂದು(ಪಡ್ಡೆ ಹುಡುಗರ ತಂಡವೊಂದು) ಹನ್ನೊಂದೂವರೆ ಘಂಟೆಯಾದರೂ ಶಾಲೆಗೆ ಹಾಜರಾಗದೆ, ಟೆಲಿಫೋನ್ ಕಂಬವೊಂದಕ್ಕೆ ಕಲ್ಲೆಸೆದು ಗುರಿಸಾಧನೆಯ ಸ್ಪರ್ಧೆಯಲ್ಲಿ ನಿರತರಾಗಿರುತ್ತಾರೆ. ಅವರಿಗೆ

ಹೀಗೆ ತಂತಿಗೆ, ತಂತಿ ಕಂಬಕ್ಕೆ ಕಲ್ಲೆಸೆಯುವುದೇ ಜೀವನದ ಗುರಿಯಾಗುವ, ಜೀವನದಲ್ಲಿ ಮಕ್ಕಳ ಚೈತನ್ಯವನ್ನು ಸರಿ ದಿಕ್ಕಿಗೆ ಹರಿಸದಿದ್ದರೆ ಅವರ ಬದುಕು ಹೇಗೆ ಅಡ್ಡದಾರಿ ಹಿಡಿಯಬಲ್ಲದೆಂಬುದನ್ನು ನಾಟಕ ಚಿತ್ರಿಸುತ್ತದೆ. ಈ ನಾಟಕದ ಪ್ರದರ್ಶನದ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ. ಶ್ರೀರಂಗರ ಇತರ ನಾಟಕಗಳಂತೆ ಇದೂ ಕೂಡ ಹಾಸ್ಯಲೇಪಿತ ಸಂಭಾಷಣೆಗಳನ್ನೇ ಜೀವಾಳವಾಗಿಸಿಕೊಂಡಿವೆ.

## ಬೇಂದ್ರೆಯವರ 'ಮಕ್ಕಳು ಅಡಿಗೆಮನೆ ಹೊಕ್ಕರೆ'

ಈ ನಾಟಕದಲ್ಲಿ ದ.ರಾ. ಬೇಂದ್ರೆಯವರು ಮಕ್ಕಳಲ್ಲಿ ಹಿರಿಯರ ನಡೆನುಡಿಗಳನ್ನು ಅನುಕರಿಸುವ ಪ್ರವೃತ್ತಿ ಬೆಳೆಯುವ ಪರಿಯನ್ನು ಚಿತ್ರಿಸಿದ್ದಾರೆ. ಮುಂದೆ ಈ ಪ್ರವೃತ್ತಿ ಹೇಗೆ ಹಿರಿಯರಿಗೆ ಎಚ್ಚರಿಕೆಯ ಗಂಟೆಯಾಗಬಲ್ಲದು ಎಂಬುದನ್ನೂ ಮೋಜಿನಿಂದ ಚಿತ್ರಿಸಿದ್ದಾರೆ. ನಾಟಕದಲ್ಲಿ ಉಷಾ, ವಿಶಾಲ ಮತ್ತು ವಿಜಯ ಕೂಡಿಕೊಂಡು, ತಂದೆ ತಾಯಿ ಮನೆಯಲ್ಲಿ ಇಲ್ಲದಾಗ ಕೆಲಸದವಳ ಮಗ ಭೀಮಶ್ಯಾನನ್ನು ಅಡುಗೆ ಮನೆಗೆ ಸೇರಿಸಿಕೊಂಡು ಆಟವಾಡುತ್ತಾರೆ. ಮಕ್ಕಳಲ್ಲಿ ತಂದೆತಾಯಿಗಳ ಆಜ್ಞೆ ಅಣತಿಗಳನ್ನು ಉಲ್ಲಂಘಿಸುವ ಪ್ರವೃತ್ತಿ ಬೆಳೆಯುವ ಬಗೆಯನ್ನು ನಾಟಕ ಅನಾವರಣಗೊಳಿಸುತ್ತದೆ. ಅಂತಿಮವಾಗಿ ತಮ್ಮ ಮಕ್ಕಳ ಪರಿಸ್ಥಿತಿ ವಿಕೃತವಾಗುತ್ತಾ ಸಾಗುವುದನ್ನು ಕಂಡು ಹಿರಿಯರು ಎಚ್ಚರಾಗುತ್ತಾರೆ. ಇದೇ ನಾಟಕದ ಆಶಯವೂ ಆಗಿದೆ.

ಬೇಂದ್ರೆಯವರ 'ಜಾತ್ರೆ', 'ತಿರುಕರ ಪಿಡುಗು' ನಾಟಕಗಳು, ಮಕ್ಕಳ ನಾಟಕಗಳಲ್ಲದಿದ್ದರೂ, ಮಕ್ಕಳ ಪಾತ್ರಗಳಿಂದ ಕೂಡಿರದಿದ್ದರೂ ಅವುಗಳಲ್ಲಿರುವ ಹಾಸ್ಯ ಮಕ್ಕಳಿಗೂ ಮುದ ಕೊಡಬಲ್ಲದಾಗಿದೆ. ಇದೇ ಗುಂಪಿಗೆ, ಅಂದರೆ ಮಕ್ಕಳ ನಾಟಕವೆಂಬ ಹಣೆಪಟ್ಟಿಯಿಲ್ಲದೆ ಮಕ್ಕಳಿಗೆ ಮುದ ಕೊಡಬಲ್ಲ ನಾಟಕಗಳಲ್ಲಿ ಬೀಚಿಯವರ 'ಸೈಕಾಲಜಿಸ್ಟ್ ಸಾರಂಗಪಾಣಿ' ನಾಟಕವೂ ಒಂದು. ನಾಲ್ಕಾರು ಹೈಸ್ಕೂಲ್ ವಿದ್ಯಾರ್ಥಿಗಳು ಶಾಲೆ ತಪ್ಪಿಸಲು ಸೂಕ್ತ ಮಾರ್ಗ ಕಂಡುಹಿಡಿಯಲು ಸಭೆ ಸೇರುವುದರೊಂದಿಗೆ ಪ್ರಾರಂಭವಾಗುವ ನಾಟಕ, ಸತ್ತ ಇಲಿಯನ್ನು ಕ್ಲಾಸಿನಲ್ಲಿ ಚೆಲ್ಲುವ ಹುಂಬ ಆಲೋಚನೆಗೆ ನಾಂದಿ ಹಾಡಿ, ಕೊನೆಗೆ ಅಧ್ವಾನದಲ್ಲಿ ಅಂತ್ಯವಾಗುವ ಪ್ರಹಸನ, ಈ ನಾಟಕ.

## ಕೀರ್ತಿನಾಥ ಕುರ್ತುಕೋಟಿಯವರ 'ಆ ಮನಿ'

ನಿರ್ದಿಷ್ಟವಾದ ಅರ್ಥದಲ್ಲಿ ಮಕ್ಕಳ ನಾಟಕವಲ್ಲ. ಸಾಂಪ್ರದಾಯಿಕ ಅರ್ಥದಲ್ಲಿ ಸಾಮಾಜಿಕ ನಾಟಕವೂ ಅಲ್ಲ. ಆದರೂ ಬದುಕಿನ ಅರ್ಥವನ್ನು ಸಮಕಾಲೀನ ನೆಲೆಯಿಂದಲೇ ಅನ್ವೇಷಿಸುವುದರಿಂದ, ಮಕ್ಕಳ ಆಟ, ವಿನೋದಗಳನ್ನು ಹೊಂದಿ

ರುವುದರಿಂದ ಈ ನಾಟಕದ ವ್ಯಾಪ್ತಿ ಮಕ್ಕಳವರೆಗೂ ಚಾಚಿದೆ. ವಾಸ್ತವ–ಭ್ರಮೆ ಎರಡೂ ನೆಲೆಯಲ್ಲಿ ನಡೆಯುವ ಈ ನಾಟಕದ ಸಾಂಕೇತಿಕತೆಯ ಅರ್ಥವ್ಯಾಪ್ತಿ ಮಕ್ಕಳನ್ನು ಮೀರಿದ್ದರೂ ನೇರವಾಗಿ ಬದುಕಿಗೆ ಅನ್ವಯಿಸುವಂತಿದೆ. 1968ರಲ್ಲಿ ಈ ನಾಟಕವನ್ನು ಹೆಗ್ಗೋಡಿನಲ್ಲಿ ನೀನಾಸಂನ ಕೆ.ವಿ.ಸುಬ್ಬಣ್ಣನವರು ಮಕ್ಕಳಿಗಾಗಿ ಆಡಿಸಿದ್ದರು.

"ಭೂತಕಾಲದ ರಹಸ್ಯಮಯ ಇತಿಹಾಸವನ್ನು ತನ್ನಲ್ಲಿ ಹುದುಗಿಸಿಟ್ಟು ಕೊಂಡಂತಿರುವ 'ಆ ಮನಿ'ಯ ಸುತ್ತಲೇ ವರ್ತಮಾನದ ಘಟನೆಗಳು ಜರುಗುತ್ತವೆ. 'ಆ ಮನಿ'ಯ ಕತೆಯನ್ನು ಐತಿಹ್ಯದಂತೆ ಹೇಳುವ ಮುದುಕ ಭೂತಕಾಲದ ಇತಿಹಾಸದಲ್ಲಿ ಬದುಕಿ, ಸಾವು ನೋವುಗಳ ದಾರಿಯಲ್ಲಿ ನಡೆದು ಬಂದವನು. ಕಾಲಪುರುಷನ ಸಾಕ್ಷಿಯಂತಿರುವ ಅವನ ಕಥನವನ್ನು ಜೀವಂತಗೊಳಿಸುವಂತೆ ಅಲ್ಲಿ ಮಕ್ಕಳ ಆಟ–ವಿನೋದಗಳು ನಡೆಯುತ್ತವೆ. ಜೀವನವೇ ಒಂದು ನಾಟಕ. ಜಗತ್ತೇ ಒಂದು ರಂಗಭೂಮಿ. ಒಬ್ಬೊಬ್ಬ ವ್ಯಕ್ತಿಯೂ ತನ್ನ ತನ್ನ ಪಾಲಿಗೆ ಬಂದ ಪಾತ್ರವನ್ನು ತನ್ಮಯನಾಗಿ ನಿರ್ವಹಿಸಿ, ನಿರ್ಗಮಿಸಬೇಕು ಎಂಬ ತತ್ವವನ್ನು ಸಾಂಕೇತಿಕವಾಗಿ ನಿರೂಪಿಸುವಂತೆ 'ಆ ಮನಿ'ಯ ಪ್ರದೇಶದಲ್ಲಿ ಶಾಲಾ ಮಕ್ಕಳು ಮದುವೆ, ಬದುಕು, ಸಾವಿನ ಆಟ ಆಡುತ್ತಾರೆ. ಆ ಪ್ರದೇಶದ ಇತಿಹಾಸದ ಪುಟದಲ್ಲಿ ಈ ಮಕ್ಕಳಾಟವು ಒಂದು ದಾಖಲೆಯಾಗಿ ಸೇರ್ಪಡೆಯಾಗುತ್ತದೆ. ಭೂತಕಾಲವು ವರ್ತಮಾನಕ್ಕೆ ಉರುಳಾಗಿ ಪರಿಣಮಿಸದೆ ಜೀವನವನ್ನು ಹರಸುತ್ತದೆ ಎಂಬುದನ್ನು ಸೂಚಿಸುವಂತೆ 'ಆ ಮನಿ'ಯಿಂದ ಹೊರಬಂದ ತಾಯಿಯ ದೆವ್ವವು ಮಲಗಿದ್ದ ಮಕ್ಕಳನ್ನು ಹರಸಿದೆ. ಕಾಲದೇಶಾತೀತವಾದ ಸಾವು ಬದುಕಿನ ಸಮಸ್ಯೆಯನ್ನು ಸಾಂಕೇತಿಕವಾಗಿ ನಿರೂಪಿಸುವ ಈ ನಾಟಕವು ಕೇವಲ ಮಕ್ಕಳ ನಾಟಕವಲ್ಲ". [17]

## ಕೆ.ವಿ.ಸುಬ್ಬಣ್ಣನವರ ಮಕ್ಕಳ ನಾಟಕಗಳು

**ಕಾಡಿನಲ್ಲಿ ಕಥೆ:–** ಈ ನಾಟಕದ ಮುನ್ನುಡಿಯಲ್ಲಿ ಸುಬ್ಬಣ್ಣನವರು ಹೀಗೆ ಹೇಳುತ್ತಾರೆ. "ನಮ್ಮ ಊರಿನ ಚಿಕ್ಕಮಕ್ಕಳಿಂದ ನಾಟಕ ಮಾಡಿಸುವ ಉಮೇದಿನಲ್ಲಿ 'ಪಂಚತಂತ್ರ' ಮುಂತಾದವನ್ನು ಮಾದರಿಯಾಗಿಟ್ಟುಕೊಂಡು 1967ರ ಮಾರ್ಚ್‌ನಲ್ಲಿ ಈ ನಾಟಕ ಬರೆದೆ. 1968ರ ಜೂನ್‌ನಲ್ಲಿ ಇದನ್ನು ಪ್ರದರ್ಶಿಸಿದೆವು. ನಾಟಕ ಆಡಿಸುವುದಲ್ಲಿ ನನಗಿಂತ ಹೆಚ್ಚಾಗಿ ದುಡಿದ ಪ್ರಿಯ ಡಿ. ಸುಬ್ಬರಾವ್ ಅವರನ್ನು ನಮ್ಮೂರಿನ ಮಕ್ಕಳು ನೆನೆಯುತ್ತಾರೆ.

ಈ ನಾಟಕದಲ್ಲಿ ಕೆಲವೊಂದು ಸೂಚನೆಗಳನ್ನು ಕೊಡಲಾಗಿದೆ.

1. ಸಾಮಾನ್ಯ 6 ರಿಂದ 8 ವರ್ಷ ವಯಸ್ಸಿನ ಮಕ್ಕಳಿಗಾಗಿ ಬರೆದ ನಾಟಕ,

ಸ್ಥಾಪಕ, ಸೂತ್ರಧಾರ, ದಾರಿಗ ಈ ಪಾತ್ರಗಳನ್ನು ಉಪಾಧ್ಯಾಯರೋ, ಸ್ವಲ್ಪ ದೊಡ್ಡವರೋ ವಹಿಸಬೇಕಾಗುತ್ತದೆ.

2. ನಾಟಕ ರಂಗದ ಮೇಲೆ ಪ್ರಯೋಗಿಸುತ್ತಿದ್ದರೆ ರಂಗ ಕೊಂಚ ವಿಶಾಲವಾಗಿ, ಎರಡು ಮೂರು ಮಟ್ಟದಲ್ಲಿರಬೇಕು. ಸೂಕ್ತ ದೃಶ್ಯ ಸಂಯೋಜನೆ ಇರಬೇಕು. ಅದಕ್ಕಿಂತ ಸುಲಭವಾಗಿ ಇದನ್ನು ಮರಗಿಡಗಳಿರುವ ಬಯಲಲ್ಲೋ, ಪಾರ್ಕಿನಲ್ಲೋ, ಶಾಲೆಯ ಅಂಗಳದಲ್ಲೋ ಪ್ರದರ್ಶಿಸಬಹುದು. ಅದೇ ಹೆಚ್ಚು ಪರಿಣಾಮಕಾರಿ. ಎಲ್ಲೇ ಆದರೂ ಬೆಳಕಿನ ಕುಶಲ ಬಳಕೆ ಅಗತ್ಯ.

3. ಉಡುಗೆ ತೊಡುಗೆ ಬಣ್ಣ, ಆಕಾರಗಳಲ್ಲಿ ಆಯಾ ಪ್ರಾಣಿಗಳನ್ನು ಸೂಚಿಸುವಂತಿರಬೇಕು. ಮುಖಕ್ಕೆ ವಿವಿಧ ಮಾದರಿಯ ಮುಖವಾಡ ಬಳಸಬಹುದು ಅಥವಾ ಕೊಕ್ಕು ಮುಂತಾದ ಸಾಂಕೇತಿಕಗಳನ್ನಷ್ಟೇ ಇಟ್ಟು ಮುಖಕ್ಕೆ ಸೂಕ್ತ ಬಣ್ಣ ಬಳಿಯಬಹುದು.

4. ಪಾತ್ರಗಳಿಗೆ ಆಯಾ ಪ್ರಾಣಿಗಳ ಧ್ವನಿಯ ಸ್ಥಾಯಿಗೆ ಹೊಂದುವ ಗಂಟಲಿನ ಮಕ್ಕಳನ್ನು ಆರಿಸಿಕೊಳ್ಳಬೇಕು. ಮಾತುಗಳನ್ನು ಆಯಾ ಪ್ರಾಣಿಗಳ ಕೂಗು ಮುಂತಾದ್ದಕ್ಕೆ ಹೊಂದುವ ಉಚ್ಚಾರಣೆಯಿಂದ ಪ್ರಾರಂಭಿಸಿ ಬೆಳೆಸಿಕೊಳ್ಳಬೇಕು. ಹಾಡು ಮತ್ತು ಕುಣಿತಗಳಲ್ಲಿಯೂ ಆಯಾ ಪ್ರಾಣಿಗಳಿಗೆ ತಕ್ಕ ಲಯ ಮತ್ತು ಅಂಗವಿನ್ಯಾಸಗಳನ್ನು ಅಳವಡಿಸಿಕೊಳ್ಳಬೇಕು. ಹಾಡುಗಳಿಗೆ ಮತ್ತು ಹಿನ್ನಲೆಗೆ ಉದ್ದಕ್ಕೂ ಸರಳವಾದ ಕೆಲವು ವಾದ್ಯಗಳಲ್ಲಿ ಕೂಡ ಆಯಾ ಪ್ರಾಣಿಗಳ ಕೂಗಿನ ಧ್ವನಿಯಿಂದಲೇ ಎತ್ತಿಕೊಂಡು ಅದಕ್ಕೆ ಸಹಜವಾದ ಸ್ಥಾಯಿಲಯಗಳಲ್ಲಿ ಮುಂದುವರೆಸಿಕೊಂಡು ಹೋಗಬೇಕು.

ಇವು ಸೂಚನೆಗಳಷ್ಟೇ. ಪ್ರದರ್ಶಕರ ಕೌಶಲವನ್ನು ನಾನು ಅನುಮಾನಿಸುತ್ತಿಲ್ಲ ಅಥವಾ ನಿಯಂತ್ರಿಸುತ್ತಿಲ್ಲ.

ಪ್ರಾಯಶಃ ಈ ಸೂಚನೆಗಳನ್ನು, ಶಾಲೆಗಳಲ್ಲಿ ನಾಟಕ ಆಡಿಸುವ ಉಪಾಧ್ಯಾಯರನ್ನು ಅಥವಾ ಹೊಸದಾಗಿ ನಾಟಕ ಆಡಿಸುವ ನಿರ್ದೇಶಕರನ್ನು ಗಮನದಲ್ಲಿಟ್ಟುಕೊಂಡು ನೀಡಲಾಗಿದೆ. ಇಂತಹ ಸೂಚನೆಗಳನ್ನು ನೀಡುವುದರ ಬಗ್ಗೆ ಏನೇ ಅಭಿಪ್ರಾಯವಿರಲಿ, ಇವುಗಳಿಂದ ಹೊಸದಾಗಿ ನಾಟಕ ಆಡಿಸುವವರಿಗೆ ಅನುಕೂಲವಾಗುವುದಂತೂ ನಿಶ್ಚಿತ. ಈ ಸೂಚನೆಗಳನ್ನು ಮೀರುವಂತಿಲ್ಲ ಎಂಬ ನಿಬಂಧನೆ ಇಲ್ಲದೆ ಇರುವುದರಿಂದ, ಇಂತಹ ಸೂಚನೆಗಳನ್ನು ನೀಡುವುದು ಪ್ರಾಯಶಃ ಪ್ರದರ್ಶನ ಏರ್ಪಡಿಸುವವರ ಅನುಕೂಲತೆಯ ದೃಷ್ಟಿಯಿಂದ ಉತ್ತಮ. ಸಾಮಾನ್ಯವಾಗಿ ನಾಟಕ ಪಠ್ಯಗಳ ಕುರಿತು ಚರ್ಚೆ ನಡೆದಾಗ, ನಾಟಕಕಾರನು 'ನಾಟಕ ಪಠ್ಯದಲ್ಲಿ, ಬ್ರಾಕೆಟ್ಟಿನಲ್ಲಿ ಹೆಚ್ಚಿನ ಸೂಚನೆ ಕೊಡುವುದು ಸರಿಯಲ್ಲ, ಅದು ನಿರ್ದೇಶಕನಗೆ ಬಿಟ್ಟಿದ್ದು' ಎಂಬ ವಾದವೂ ಇದೆ. ಇದರಿಂದ ನಾಟಕದ ವಿವಿಧ ರಂಗಸಾಧ್ಯತೆಗಳನ್ನು ನಿಯಂತ್ರಿಸಿದಂತೆ ಆಗುತ್ತದೆ;

ನಿರ್ದೇಶಕನ ಪಾತ್ರವನ್ನು ಇವು ಗೌಣವಾಗಿಸುತ್ತವೆ... ಮುಂತಾದ ದೃಷ್ಟಿಕೋನಗಳಿವೆ. ಆದರೆ ರಂಗದ ಅನುಭವವುಳ್ಳ ಒಬ್ಬ ನಾಟಕಕಾರ ತನ್ನ ಕಲ್ಪನೆಯ ಮಿತಿಯಲ್ಲಿ ತನ್ನ ಮನಸ್ಸಿನಲ್ಲಿ ಮೂಡಿದ ದೃಶ್ಯವನ್ನು ಹೇಳುವಾಗ ಇಂತಹ ಕೆಲವು ಸೂಚನೆಗಳನ್ನು ಕೊಡುವುದರಿಂದ ನಿರ್ದೇಶಕನೇನೂ ವಿಚಲಿತನಾಗಬೇಕಿಲ್ಲವೆನ್ನಿಸುತ್ತದೆ. ತನ್ನ ಸೂಚನೆಯನ್ನು ಮೀರಬಾರದೆಂಬ ಕಟ್ಟಪ್ಪಣೆ ವಿಧಿಸುವ ನಾಟಕಕಾರರನ್ನು ಬಿಟ್ಟರೆ, ಇಂತಹ ಸೂಚನೆ ನೀಡುವುದರಿಂದ ಓದುಗರಿಗಂತೂ (ನಾಟಕ ನಿರ್ದೇಶಕರಿಗಲ್ಲ) ಅನುಕೂಲವೇ ಆಗುತ್ತದೆ ಎಂದುಕೊಳ್ಳಬಹುದು. ಯಾಕೆಂದರೆ ನಾಟಕವು ತಲುಪುವುದು ಕೇವಲ ಪ್ರದರ್ಶನದಿಂದ ಮಾತ್ರವಲ್ಲ, ನಾಟಕವೊಂದಕ್ಕೆ ಬರಿಯ ಓದುಗರೂ ಇರುತ್ತಾರೆ ಎಂಬುದನ್ನು ನಾವು ಮರೆಯುವಂತಿಲ್ಲ. ಆದರೂ ಕೆಲವು ವಿಚಾರಸಂಕಿರಣಗಳಲ್ಲಿ, ಚರ್ಚೆಗಳಲ್ಲಿ ಇಂತಹ ಸೂಚನೆ ಕೊಡುವುದು 'ಅಪ್ರಬುದ್ಧತೆ' ಎಂಬ ಅಭಿಪ್ರಾಯಗಳು ಮೂಡಿರುವುದುಂಟು. ಆದರೆ ನಾಟಕಕಾರರ ಮಾತುಗಳಲ್ಲಿ ಬದಲಾವಣೆ ಮಾಡಿಕೊಳ್ಳುವ, ದೃಶ್ಯ ಕಲ್ಪನೆಯಲ್ಲಿ ಬದಲಾವಣೆ ಮಾಡಿಕೊಳ್ಳುವ, ರಂಗಪರಿಕರಗಳಲ್ಲಿ, ವೇಷಭೂಷಣಗಳಲ್ಲಿ ತಮ್ಮ ಕಲ್ಪನೆಯನ್ನು ಸಾಕಾರಗೊಳಿಸಿಕೊಳ್ಳುವ ನಿರ್ದೇಶಕರು, ಪಠ್ಯದಲ್ಲಿ ನಾಟಕಕಾರ ಸೂಚಿಸಿದ ಸೂಚನೆಯ ಬಗ್ಗೆ ಅತಿಯದ ಕಾಳಜಿ ತೋರಿಸುವುದರ ಅಗತ್ಯ ಕಾಣುವುದಿಲ್ಲ. ಜೊತೆಗೆ ರಂಗನಿರ್ಮಿತಿಯಲ್ಲಿ ನಿರ್ದೇಶಕನಿಗೆ ಸ್ವಾತಂತ್ರ್ಯವಿರುವಂತೆಯೇ ಬರವಣಿಗೆಯಲ್ಲಿ ನಾಟಕಕಾರನಿಗೂ ಇದೆ ಎಂಬುದನ್ನೂ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಒಟ್ಟೂ ನಾಟಕದ ಪರಿಣಾಮದ ದೃಷ್ಟಿಯಿಂದ ಒಬ್ಬರು ಸೂಚಿಸುವ ಸಾಧ್ಯತೆಯನ್ನು ಇನ್ನೊಬ್ಬರು ಒಪ್ಪುತ್ತಾ/ಮೀರುತ್ತಾ ಸಾಗಿ, ಒಟ್ಟಾರೆಯಾಗಿ ನಾಟಕದ ಫಲಿತಾಂಶವನ್ನು ಪ್ರೇಕ್ಷಕರಿಗೆ ತಲುಪಿಸುವುದಷ್ಟೇ ಮುಖ್ಯವಾಗುತ್ತದೆ. ಇದನ್ನು ಸಾಧಿಸುವ ನಿಟ್ಟಿನಲ್ಲಿ ನಾಟಕಕಾರ, ನಿರ್ದೇಶಕ, ನಟ ಮೂವರೂ ಪರಸ್ಪರ ಪೂರಕವಾಗಿ ಪ್ರೇಕ್ಷಕನನ್ನು ತಲುಪುವುದಷ್ಟೇ ನಾಟಕ ಎಂಬ ಪ್ರಾಜ್ಞರ ಮಾತನ್ನು ಎಲ್ಲರೂ ಒಪ್ಪಲೇಬೇಕು. ಅದರಲ್ಲೂ ಕನ್ನಡ ಮಕ್ಕಳ ನಾಟಕರಂಗ ತನ್ನ ಎರಡನೆಯ ಹಂತಕ್ಕೆ ಜಿಗಿಯುವ ಮುನ್ನ, ಆ ಮಹಾಜಿಗಿತಕ್ಕೆ ಭುಜಕೊಟ್ಟು ನಿಂತ ಸುಬ್ಬಣ್ಣನಂತಹವರೇ ಇಂತಹ ಸೂಚನೆಗಳನ್ನು ನೀಡಿದ್ದರೆಂದರೆ, ಪ್ರಾಯಶಃ ಅದರ ಹಿಂದೆ ದೀರ್ಘವಾದ ಸಮರ್ಥನೆಯಿದೆ, ಚಿಂತನೆಯಿದೆ.

2. **ಬೆಟ್ಟಕ್ಕೆ ಚಳಿಯಾದರೆ**: "ಪಿ. ಎಸ್. ರಾಮಪ್ಪನವರು ವಿಜಯ ತೆಂಡೂಲ್ಕರ್ ಅವರ ಮಕ್ಕಳ ನಾಟಕವೊಂದನ್ನು ಅನುವಾದಿಸಿದ್ದರು. ಅದರಲ್ಲಿ ಬರುವ ಟಪಾಲು ಡಬ್ಬಿ, ಟೆಲಿಫೋನ್ ಕಂಬ, ಪೋಸ್ಟರ್ ಮುಂತಾದ ಪಾತ್ರಗಳ ಆಧಾರದ ಮೇಲೆ ಬೇರೆ ನಾಟಕವೊಂದನ್ನು ಸೂಚಿಸಿದರು. 1979ರಲ್ಲಿ (ಅಕ್ಟೋಬರ್) ನಮ್ಮ ನೀನಾಸಂ ಆಶ್ರಯದಲ್ಲಿ ಶಿವಮೊಗ್ಗದ ಬಾಲಭವನದ ಮಕ್ಕಳಿಗೆ ಒಂದು ಶಿಬಿರ ನಡೆಸಿದಾಗ, ಅಲ್ಲಿ ಆಡಿಸಲು ಅಕ್ಷರ ಮತ್ತು ನಾನು ಕೂಡಿ ಈ ನಾಟಕ ರಚಿಸಿಕೊಂಡೆವು. ಮುಂದೆ

ನೀನಾಸಂ ಮಕ್ಕಳು ಕೂಡ ಈ ನಾಟಕವನ್ನು ಪ್ರಯೋಗಿಸಿದರು. ಪ್ರಯೋಗಕ್ಕೆ ಹೆಚ್ಚಿನ ಸ್ವಾತಂತ್ರ್ಯ ಸಿಗತಕ್ಕದ್ದೆಂಬ ದೃಷ್ಟಿಯಿಂದ ನಾಟಕದ ರಚನೆಯನ್ನು ಶಿಥಿಲವಾಗಿಟ್ಟಿದೆ. ಪ್ರಯೋಗಿಸುವವರು ಬೇಕೆನ್ನಿಸುವಂತೆ ಬದಲಿಸಿಕೊಳ್ಳಲು ಅವಕಾಶವಿದೆ"

ಇದು ಕೆ.ವಿ. ಸುಬ್ಬಣ್ಣನವರು ನಾಟಕದಲ್ಲಿ ಹೇಳಿರುವ ಮೊದಲ ಮಾತು. ಇಡೀ ನಾಟಕ ಮುದ್ದು ಮಗುವಿನ ಮುಗ್ಧ ಕಣ್ಣಿನ ಮೂಲಕ ಪ್ರಪಂಚವನ್ನು ನೋಡುವ ಪ್ರಯತ್ನ.

ಆದರೆ ತಮ್ಮ ಹಿಂದಿನ ನಾಟಕದಲ್ಲಿ ನಿರ್ದೇಶಕರಿಗೂ ಸೂಚನೆ ಕೊಟ್ಟ ಸುಬ್ಬಣ್ಣನವರು, ತಮ್ಮ ಈ ನಾಟಕದಲ್ಲಿ ರಚನೆಯನ್ನೇ ಶಿಥಿಲವಾಗಿಟ್ಟು, ಪ್ರಯೋಗಿಸುವವರಿಗೆ ಮುಕ್ತ ಸ್ವಾತಂತ್ರ್ಯ ಕೊಟ್ಟಿದ್ದಾರೆ. ಪ್ರಾಯಶಃ ಅರವತ್ತರ ದಶಕದ ಧೋರಣೆಯ ಪ್ರತೀಕ 'ಕಾಡಿನಲ್ಲಿ ಕಥೆ'ಯಲ್ಲಿದ್ದರೆ ಎಪ್ಪತ್ತರ ದಶಕದ ಧೋರಣೆ ಈ ನಾಟಕದ ಸೂಚನೆಯಲ್ಲಿದೆ. ಆದರೆ ನಾವು ಹಿಂದೆಯೇ ಚರ್ಚಿಸಿದಂತೆ ಎರಡರ ಉದ್ದೇಶವೂ ನಾಟಕದ ಒಟ್ಟೂ ಪರಿಣಾಮದ ಯಶಸ್ಸು. ಈ ನಾಟಕ ಮೊದಲ ಬಾರಿಗೆ ಇಕ್ಬಾಲ್ ಅಹಮದ್ ನಿರ್ದೇಶನದಲ್ಲಿ 1979ರಲ್ಲಿ ಶಿವಮೊಗ್ಗದಲ್ಲಿ ಪ್ರದರ್ಶನಗೊಂಡಿತ್ತು.

3. **ಜಯಂಟ್ ಮಾಮ:** ಸುಬ್ಬಣ್ಣನವರು ಬರೆದ ಇನ್ನೊಂದು ನಾಟಕ ಜಯಂಟ್ ಮಾಮ. The selfish Giant ಎನ್ನುವ ಆಸ್ಕರ್ ವೈಲ್ಡ್‌ನ ಕಾಲ್ಪನಿಕ ರಾಕ್ಷಸನ ಕತೆ ಪ್ರಸಿದ್ಧವಾದುದು. "ಅದನ್ನಾಧರಿಸಿ ಒಂದು ಮಕ್ಕಳ ನಾಟಕ ತಯಾರಿಸಲು ಹೊರಟಾಗ ಅದು ಅಂತಿಮವಾಗಿ ಮತ್ತೊಂದು ರೂಪವನ್ನೇ ತಳೆದು ನಿಂತಿತು. ಅದೇ ಜಯಂಟ್ ಮಾಮ".

"ಆಸ್ಕರ್ ವೈಲ್ಡ್‌ನ ರಾಕ್ಷಸ ಕಥೆಯ ಕಾಲ್ಪನಿಕ ಚಿತ್ರವನ್ನು ತಂದು ನಮ್ಮ ಸಮಕಾಲೀನ ಔದ್ಯೋಗಿಕ ಕಾಲೋನಿಯ ಚಿತ್ರದ ಮೇಲೆ ಉಪರಿ-ಮುದ್ರಿಸಿ ಈ ನಾಟಕವನ್ನು ರೂಪಿಸಿದೆ. ಮಕ್ಕಳ ಮನಸ್ಸು ಕಲ್ಪಕತೆಯಲ್ಲಿ ಶ್ರೀಮಂತವಾದದ್ದು ಎನ್ನುವುದು ನಮಗೆಲ್ಲ ಗೊತ್ತು. ಈ ಕಲ್ಪಕತೆ ಎದುರಿಸುವ ವಾಸ್ತವವನ್ನು ಕಡೆಗಣಿಸಿ ಇದರಿಂದ ಬಿಡಿಸಿಕೊಂಡು ಬೇರೊಂದು ಸ್ತರದಲ್ಲಿ ನುಸುಳಿಕೊಳ್ಳುವುದಿಲ್ಲ. ಎದುರಿರುವ ಮೂರ್ತ ವಾಸ್ತವದಲ್ಲೇ ಕಲ್ಪಕತೆಯನ್ನು ಸೃಜಿಸಿಕೊಳ್ಳುವಂತದ್ದು. ಮಕ್ಕಳ ಇಂಥ ಸೃಜನಶೀಲ ಕಲ್ಪಕತೆಯನ್ನು ರಂಗದಲ್ಲಿ ದುಡಿಸಿಕೊಳ್ಳುವ ದೃಷ್ಟಿಯಿಂದಲೇ ರಚಿತವಾದ ಈ ನಾಟಕ ಹಾಗೆ ಹೊಸ ಪ್ರಯೋಗವೆನ್ನಬಹುದು." ಕೆ.ವಿ.ಸುಬ್ಬಣ್ಣ ಈ ನಾಟಕದ ಮೊದಲ ಮಾತಿನಲ್ಲಿ ಹೀಗೆ ಹೇಳಿದ್ದಾರೆ. ಈ ನಾಟಕ, ನೀನಾಸಂ ಮಕ್ಕಳ ಬಳಗದವರಿಂದ 1983ರ ಜುಲೈ 14,15ರಂದು ಹೆಗ್ಗೋಡಿನ ಶಿವರಾಮ ಕಾರಂತ ರಂಗಮಂದಿರದಲ್ಲಿ ಕೆ.ಜಿ. ಕೃಷ್ಣಮೂರ್ತಿಯವರ ನಿರ್ದೇಶನದಲ್ಲಿ ಪ್ರದರ್ಶನಗೊಂಡಿದೆ. ಒಂದು ಕಾಡಿನಲ್ಲಿ

ವಾಸವಾಗಿದ್ದ ಒಬ್ಬ ದೈತ್ಯ, ತನ್ನ ಮಿತ್ರನನ್ನು ನೋಡಲು ಹೋಗಿ ಬರುವಷ್ಟರಲ್ಲಿ ಆತನ ಮೂಲಸ್ಥಾನ ಮಾನವನ ಪ್ರವೇಶದಿಂದ ಔದ್ಯೋಗೀಕರಣಕ್ಕೆ ಒಳಪಟ್ಟು ಆಗಿರುವ ಬದಲಾವಣೆಗಳನ್ನು ಮಕ್ಕಳ ಮೂಲಕ ಅನಾವರಣಗೊಳಿಸುತ್ತಾ ಸಾಗುವ ನಾಟಕ, ಮಕ್ಕಳಿಗೆ ಕಲ್ಪಕತೆಯ ಜೊತೆಯಲ್ಲಿ ವಾಸ್ತವದ ಪ್ರಜ್ಞೆಯನ್ನು ಹಬ್ಬಿಸುವ ಪ್ರಯತ್ನ ಮಾಡುತ್ತದೆ.

## ಬಿ.ವಿ. ಕಾರಂತರ ನಾಟಕಗಳು

**1. ಪಂಜರಶಾಲೆ :** "ರವೀಂದ್ರನಾಥ ಠಾಗೋರರ ಎರಡು–ಮೂರು ಪುಟಗಳ ಚಿಕ್ಕ ಕಥೆಯೊಂದನ್ನು ಆಧರಿಸಿ ಕಾರಂತರೇ ಇದನ್ನು ಹಿಂದಿಯಲ್ಲಿ ನಾಟಕವಾಗಿ ಬರೆದುಕೊಂಡಿದ್ದರು. ಪುನಃ ಅವರೇ ಅದನ್ನು ಗುಜರಾತಿಗೆ ಪರಿವರ್ತಿಸಿ ಅಹಮದಾಬಾದಿನಲ್ಲಿ ಆಡಿಸಿದ್ದರು. ಪಂಜರಶಾಲೆಯ ಪ್ರಥಮ ಪ್ರಯೋಗದ ಕುರಿತು ಸುಬ್ಬಣ್ಣ ಹೀಗೆ ಹೇಳುತ್ತಾರೆ. "ನಮ್ಮದು ಮೂಲೆಯ ಚಿಕ್ಕಹಳ್ಳಿ, ಇಲ್ಲಿ ನಾಟಕ ಆಡಿಸಲಿಕ್ಕೆಂದು ಬಂದಾಗ ಕಾರಂತರಲ್ಲಿದ್ದುದು ನಾಟಕದ ಗುಜರಾತಿ ರೂಪ. ಒಂದೆರಡು ದಿನಗಳಲ್ಲಿ ಅವರು ಕನ್ನಡದ ಕರಡನ್ನು ತಯಾರಿಸಿಕೊಂಡರು.... ಮೊದಲು ಯಾರಿಗೂ ಮಾತುಗಳನ್ನು ಬರೆಸಲಿಲ್ಲ. ಆಯಾ ಪಾತ್ರದ 'ಸಾಲು' ಬಂದಾಗ ಇವರೇ ಅವರಿಗೆ ಆ ಸಾಲುಗಳನ್ನು ಓದಿ ಹೇಳುವುದು. ಓದಿ ಹೇಳಿದ್ದನ್ನು ಪಾತ್ರಧಾರಿಗಳು ಸ್ವಲ್ಪ ಹೆಚ್ಚು ಕಡಿಮೆ ಪುನರುಚ್ಚರಿಸುವುದು. ಕಾರಂತರು ಆಯಾ ಪಾತ್ರಧಾರಿಗಳ ಜಾಯಮಾನಕ್ಕೂ, ಸಂದರ್ಭಕ್ಕೂ ಹೊಂದುವ ಹಾಗೆ ಸಂಭಾಷಣೆಗಳನ್ನು ತಿದ್ದಿಕೊಳ್ಳುತ್ತಾ ಆ 'ಹೊತ್ತಿಗೆ' ಸಂಭಾಷಣೆಗಳ ಸ್ಥಿರರೂಪವನ್ನು ಸಿದ್ಧಗೊಳಿದಿದ್ದರು."[18]

ಹೀಗೆ ಈ ನಾಟಕವನ್ನು ಬಿ.ವಿ. ಕಾರಂತರು ಆಡಿಸುತ್ತ ಆಡಿಸುತ್ತ ಬೆಳೆಸಿ ಒಂದು ಸ್ಥಿರ ರೂಪ ಕೊಟ್ಟರು. ಈ ನಾಟಕಕೃತಿಯ ಆರಂಭದಲ್ಲಿ ಹೇಳಿರುವುದೂ ಇಷ್ಟೆ : "ಇದು ಸ್ವತಂತ್ರವಾದ ಒಂದು ಸಾಹಿತ್ಯಕ ಕೃತಿಯಲ್ಲ, ರಂಗ ಪ್ರಯೋಗಕ್ಕೆ ಸಹಾಯಕವಾಗಿ ಒದಗಬಹುದಾದ ವಾಚಿಕ ಕರಡು ಮತ್ತು ಪ್ರಯೋಗ ಟಿಪ್ಪಣಿ ಎಂಬುದನ್ನು ದಯವಿಟ್ಟು ಗಮನಿಸಬೇಕಾಗಿ ವಿನಂತಿ. ಕೃತಿ ರಂಗದ ಮೇಲೆ ಮೂಡಬೇಕು. ಅದರ ನಿರ್ಮಾಣಕ್ಕೆ ಸಹಾಯಕವಾಗುವ ಸಲಕರಣೆಗಳು ಇಲ್ಲಿವೆ, ಅಷ್ಟೆ." ನಾಟಕಕೃತಿ ಎಷ್ಟೇ ಕರಡು ರೂಪದಲ್ಲಿದ್ದರೂ, ಉದ್ದೇಶಪೂರ್ವಕವಾಗಿ, ನಾಟಕ ಕಟ್ಟುವವರ ಸ್ವಾತಂತ್ರ್ಯಕ್ಕಾಗಿ ಹಾಗೇ ಉಳಿಸಿದ್ದರೂ 'ಪಂಜರಶಾಲೆ' ಕನ್ನಡ ಮಕ್ಕಳ ರಂಗಭೂಮಿಯ ಪುನಶ್ಚೇತನಕ್ಕೆ ಕಾರಣವಾದ ಕೃತಿಯಾಗಿ ನಿಂತಿದ್ದಂತೂ ಸತ್ಯ.

2. **ಹೆಡ್ಡಾಯಣ:** ದಿವಂಗತ ಪಂಜೆ ಮಂಗೇಶರಾಯರ 'ಹೆಡ್ಡ ಧೂಮನ ಕಥೆ'ಯನ್ನು ನೆನಪಿಸಿಕೊಂಡು ಬರೆದ ಮಕ್ಕಳ ನಾಟಕವನ್ನು ಬಿ.ವಿ. ಕಾರಂತರೇ

ಮೊದಲ ಬಾರಿಗೆ 1972ರಲ್ಲಿ ಉಡುಪಿಯಲ್ಲಿ ಪ್ರಯೋಗಿಸಿದರು. ನಂತರವೂ ಈ ನಾಟಕ ಅನೇಕ ಯಶಸ್ವೀ ಪ್ರಯೋಗ ಕಂಡಿದೆ. ಇದು ಮಕ್ಕಳಿಗೆ ಹೇಳಿ ಮಾಡಿಸಿದ ನಾಟಕವೆನ್ನಿಸಿದೆ. ಗುಂಪುಗಳಲ್ಲಿ ಸನ್ನಿವೇಶ ಕಟ್ಟಿಕೊಡುವ ಕಲ್ಪನೆ ಕಾರಂತರಂತ ಕನಸು ಕಾಣುವ ಮಂದಿಗೆ ಮಾತ್ರ ಸಾಧ್ಯ.

ಇದೇ ನಾಟಕವನ್ನು ಬಿ.ವಿ. ಕಾರಂತರೇ ಹಿಂದಿಯಲ್ಲಿ 'ಬುದ್ಧೂ ರಾಮ್ ಚರಿತ' ಎಂಬ ಹೆಸರಿನಲ್ಲಿ ಆಡಿಸಿದ್ದರು. ಈ ನಾಟಕವನ್ನು ಅವರು 1971–72ರಲ್ಲಿ ಉಡುಪಿಯಲ್ಲಿ ಆಡಿಸಿದ ಕುರಿತು ಕು.ಶಿ. ಹರಿದಾಸ ಭಟ್ಟರು ಹೀಗೆ ಹೇಳುತ್ತಾರೆ : "ಅವರು ಹೆಡ್ಡ ಧೂಮ ಮತ್ತು ಏಕಲವ್ಯ ಎಂಬ ಎರಡು ಬಾಲನಾಟಕಗಳನ್ನು ತಯಾರಿಸಿ ಹತ್ತು ದಿನಗಳ ಅಲ್ಪಾವಧಿಯಲ್ಲಿ ಯಶಸ್ವಿಯಾಗಿ ಆಡಿ ತೋರಿಸಿದರು. ಮುಂಜಾನೆ 9 ರಿಂದ ರಾತ್ರಿ 8 ರವರೆಗೂ ತರಬೇತಿ. ಮಕ್ಕಳ ಸಹಕಾರ ಪಡೆಯುವ ಎಲ್ಲ ತೆರನ ಜಾಣ್ಮೆಯೂ ಕಾರಂತರಲ್ಲಿದೆ. ಈ ನಾಟಕಗಳ ಸಲುವಾಗಿ ಸುಮಾರು 27 ಗೀತೆಗಳನ್ನು ರಚಿಸಿ, ಸ್ವರಪ್ರಸ್ತಾರ ಹಾಕಿ ತರಬೇತಿ ಮಾಡಿಸಿದರು. ಇದು ತನ್ನದೇ ಹೊಸ ದಾಖಲೆ ಎನ್ನುತ್ತಾರೆ ಅವರು. ಅಜ್ಜಿಕತೆಯಲ್ಲಿ ಅಡಕವಾದ ಹೆಡ್ಡಧೂಮನ ಸ್ವಾರಸ್ಯಮಯವಾದ ವ್ಯಕ್ತಿತ್ವವನ್ನು ನೋಡಿದ ದೊಡ್ಡವರು ಬಿದ್ದು ನಗುವಂತೆ ಒಬ್ಬ ಬಾಲಕ ನಟಿಸಿದ. ಬಾಲಕರೇ ಮಾತು ಕಟ್ಟಿ ನಟನೆ ತೋರಿಸುವಂತೆ ಅವರಿಗೆ ಪ್ರೇರಣೆ ನೀಡುವುದು ಕಾರಂತರ ವಿಶಿಷ್ಟ ನಿರ್ದೇಶನ ಕಲೆಗಾರಿಕೆ"[9]

3. **ಅಳಿಲು ರಾಮಾಯಣ** : ಅಳಿಲು ಮರಿಯೊಂದು ರಾಮನನ್ನು ಮೆಚ್ಚಿಸುವ ಕತೆ ಬಹಳ ಹಳೆಯದು. ಆದರೆ ಅದು ರಾಮನನ್ನು ಮೆಚ್ಚಿಸುವ ಸಂದರ್ಭ ಮಕ್ಕಳಿಗೆ ಮುದ ಕೊಡುವಂತಹದ್ದು. ಇದನ್ನು ದಕ್ಷಿಣ ಕನ್ನಡದ ಮೂಲೆಯ ಹಳ್ಳಿಯೊಂದರಲ್ಲಿ ಐ.ಕೆ. ಬೊಳುವಾರರು ಆಡಿಸಲು ನಡೆಸಿದ ಸಿದ್ಧತೆಯನ್ನು ನೋಡಿದಾಗ, ಈ ನಾಟಕವು ಒಳಗೊಳ್ಳಬಹುದಾದ ಸಾಮುದಾಯಿಕ ವಾತಾವರಣ ಎಷ್ಟೊಂದು ಪರಿಣಾಮಕಾರಿ ಎನ್ನಿಸಿತು. ಶಾಲೆಯ ನೂರಾರು ಮಕ್ಕಳು ಕಪಿವೀರರಾಗಿ, ತಾವೇ ಸಿದ್ಧಪಡಿಸಿಟ್ಟುಕೊಂಡ ಅಡಿಕೆಯ ಹಾಳೆ ಮತ್ತು ಕಾಗದದ ಬಂಡೆಗಳನ್ನು ಹೊತ್ತು ಸೇತುವೆ ಕಟ್ಟಲು ಶಾಲೆಯ ಹಿಂದಿನ ನೂರಡಿಗೂ ಹೆಚ್ಚಿನ ಉದ್ದದ ಕಟ್ಟೆಯನ್ನು ಬಳಸಿಕೊಳ್ಳುವುದು... ಈ ನಡುವೆ ಪುಟ್ಟ ಅಳಿಲು ತನ್ನ ಪಾತ್ರವನ್ನು ಪ್ರತಿಷ್ಠಾಪಿಸುವುದು. ಈ ಎಲ್ಲ ಘಟನೆಗಳು ಮಕ್ಕಳ ಮೇಲೆ ಉಂಟುಮಾಡುವ ಪರಿಣಾಮ ನಿಜಕ್ಕೂ ಅದ್ಭುತ. ಮಕ್ಕಳ ಸಹಜ ಸ್ವಭಾವಕ್ಕೆ ಒಗ್ಗಿಕೊಳ್ಳುವ ಈ ನಾಟಕ ಕಾರಂತರು ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಂಡಿರುವುದರ ಪ್ರತೀಕ. ಇಡೀ ನಾಟಕ ಮಕ್ಕಳನ್ನು ಪೂರ್ಣವಾಗಿ ಒಳಗೆ ಸೆಳೆದುಕೊಳ್ಳುವ ಪರಿ ಅದ್ಭುತ. ಇಂತಹ ನಾಟಕವಾಡಿಸಲು ರಂಗಮಂದಿರಗಳೇ ಆಗಬೇಕೆಂದಿಲ್ಲ. ಒಂದರ್ಥದಲ್ಲಿ ರಂಗಮಂದಿರವಾದರೇ ಕಷ್ಟ. ಹಳ್ಳಿಗಳ ಶಾಲೆಗಳಲ್ಲಿ ಆಡಲು ತುಂಬ ಸಲೀಸಾದ ನಾಟಕ.

4. **ನೀಲಿ ಕುದುರೆ:-** ಬ್ರೆಜಿಲ್ಲಿನ ಮಾರಿಯಾ ಕ್ಲಾಡಾ ಮಶಾಡೋ ಅವರು ಪೋರ್ಚ್‌ಗೀಸ್‌ನಲ್ಲಿ ಬರೆದ ಈ ಮಕ್ಕಳ ನಾಟಕ ಜಗತ್ಪ್ರಸಿದ್ಧವಾಗಿದ್ದು, ಅದನ್ನು ಆನಂದದತ್ತರು 'ಅಗ್ನಿದ್ವಾರಾ' ಎಂದು ಹಿಂದಿಯಲ್ಲಿ ಅನುವಾದಿಸಿದ್ದರು. ಅದನ್ನು ಪಿ.ಎಸ್. ರಾಮಪ್ಪ ಅವರು ಕನ್ನಡಿಸಿದ್ದರು. 1972ರಲ್ಲಿ ಬಿ.ವಿ. ಕಾರಂತರು ನೀನಾಸಂ ಮಕ್ಕಳ ತಂಡಕ್ಕೆ ಒಂದು ನಾಟಕ ಮಾಡಿಸುವ ಸಲುವಾಗಿ ಆ ಹಸ್ತ ಪ್ರತಿಯನ್ನಿಟ್ಟುಕೊಂಡು ಅದರ ಆಧಾರದ ಮೇಲೆ ಪ್ರಸ್ತುತ ನಾಟಕವನ್ನು ಸಿದ್ಧಗೊಳಿಸಿ, ನಿರ್ದೇಶಿಸಿದರು. ಈ ನಾಟಕ ಕನ್ನಡ ಮಕ್ಕಳ ನಾಟಕಗಳಲ್ಲಿ ಒಂದು ಮಹತ್ವದ ಕೃತಿ ಎನ್ನಿಸಿಕೊಂಡಿತಲ್ಲದೆ ಪ್ರಯೋಗವೂ ಯಶಸ್ವಿಯಾಗಿ, ಜನಪ್ರಿಯವಾಯಿತು. 4-3-1973ರಲ್ಲಿ ಹೆಗ್ಗೋಡಿನ ಶಿವರಾಮ ಕಾರಂತ ರಂಗಮಂದಿರದಲ್ಲಿ ಪ್ರಪ್ರಥಮವಾಗಿ ಪ್ರದರ್ಶನಗೊಂಡಿತ್ತು. ನಂತರ ಬೆಂಗಳೂರಿನ ಬಾಲಭವನದ ನಾಟಕೋತ್ಸವದಲ್ಲಿ ಪ್ರದರ್ಶಿತವಾಗಿ ಜನಮನ್ನಣೆ ಗಳಿಸಿತು. ಒಬ್ಬ ಕನಸುಗಾರ ಹುಡುಗ ಪ್ರೀತಿಯಿಂದ ಸಾಕಿಕೊಂಡಿದ್ದ ಬಡಕಲು ಕುದುರೆಯೊಂದನ್ನು ಆತನ ತಂದೆ ಮಾರಿಬಿಡುತ್ತಾನೆ. ಇದರಿಂದ ಹತಾಶನಾದ ಹುಡುಗ ಕುದುರೆಯನ್ನು ಹುಡುಕುತ್ತಾ ಮನೆಬಿಟ್ಟು ಅಲೆಯುತ್ತಾನೆ. ಸರ್ಕಸ್ ಕಂಪೆನಿ, ಡಕಾಯಿತರು, ಪೇಟೆ, ಕುದುರೆಲಾಯ... ಹೀಗೆ ಹೊರಜಗತ್ತಿನ ಹಲವು ವ್ಯಕ್ತಿ ಮತ್ತು ಸನ್ನಿವೇಶಗಳಿಗೆ ಮುಖಾಮುಖಿಯಾಗುತ್ತ ಹೋಗುವ ಹುಡುಗ ಅಂತಿಮವಾಗಿ ತನ್ನ ಕುದುರೆಯನ್ನು ಕಲ್ಪನೆಯ ಉಬ್ಬರದಲ್ಲಿ ಪಡೆಯುತ್ತಾನೆ. ಈ ನಾಟಕವನ್ನು 1985ರಲ್ಲಿ ನೀನಾಸಂನವರು ತಿರುಗಾಟಕ್ಕೆ ಆಡಿದ್ದರು. ಅಲ್ಲಿಯವರೆಗೂ ಮಕ್ಕಳ ನಾಟಕವಾಗಿ ಕೇವಲ ಮಕ್ಕಳಿಂದ ಆಡಲ್ಪಟ್ಟ ನಾಟಕ, ತಿರುಗಾಟದಲ್ಲಿ ದೊಡ್ಡವರಿಂದ ಮಕ್ಕಳಿಗಾಗಿ ಅಭಿನಯಿಸಲ್ಪಟ್ಟಿತು.

## ಚಂದ್ರಶೇಖರ ಕಂಬಾರರ ಮಕ್ಕಳ ನಾಟಕಗಳು

1. **ಆಲಿಬಾಬ ಮತ್ತು ನಲವತ್ತು ಮಂದಿ ಕಳ್ಳರು:** ಈ ನಾಟಕದ ಮುನ್ನುಡಿಯಲ್ಲಿ ಕಂಬಾರರು ಹೀಗೆ ಹೇಳುತ್ತಾರೆ "ಪ್ರೇಮಾ ಕಾರಂತ ದುಂಬಾಲು ಬಿದ್ದು, ಮಕ್ಕಳೆಲ್ಲಾ ಓದಿ ಅದರಲ್ಲಿರುವ ಖುಷಿ ಭಾಗವನ್ನು ಆನಂದಿಸುತ್ತಿದ್ದುದನ್ನು ಅನುಭವಿಸಿ ಬರೆದದ್ದು. ಇದು ಹೇಳಿ ಕೇಳಿ ಜನಪದ ಕತೆಯಾದ್ದರಿಂದ ನಾಟಕೀಯ ಸಂಘರ್ಷಕ್ಕೆ ಅವಕಾಶವೇ ಇಲ್ಲ. ಆದ್ದರಿಂದ ಬಯಲಾಟದ ರೂಪದಲ್ಲೇ ಬರೆಯಬೇಕಾಯಿತು. ಇದನ್ನರಿತೇ ಪ್ರೇಮಾ ಕಾರಂತರು ಹಾಡು, ನೃತ್ಯಗಳ ಅಗತ್ಯ ಹೇಳಿದ್ದರೆಂದು ತೋರುತ್ತದೆ. ಬರೆಯುತ್ತ ಹೋದಂತೆ ನನಗೂ ಈ ನಾಟಕ ಖುಷಿ ಕೊಡತೊಡಗಿತು. 1980ರ ಮೇ 23ರಂದು ಈ ನಾಟಕವನ್ನು ಬೆನಕ ತಂಡದವರು ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಯೋಗಿಸಿದರು. ನಂತರ 1985ರಲ್ಲಿ ಮತ್ತು 1986ರಲ್ಲಿ ನೀನಾಸಂ ತಿರುಗಾಟದಲ್ಲಿ ಈ ನಾಟಕವನ್ನು ಪ್ರದರ್ಶಿಸಲಾಯಿತು. ಇದು ಕನ್ನಡ ನಾಟಕ ಸಾಹಿತ್ಯಕ್ಕೆ ಒಂದು ವಿಶೇಷ ಕೊಡುಗೆ

ಎಂದು ನೀನಾಸಂ ಹೇಳಿದೆ. ಜಾನಪದ ಪ್ರಕಾರಗಳ ರೂಪ ಬಂಧಗಳ ಬಳಕೆಯಿಂದಾಗಿ ಈ ನಾಟಕ ಕನ್ನಡದಲ್ಲಿರುವ ಮಕ್ಕಳ ನಾಟಕಗಳಲ್ಲಿ ಅನನ್ಯವಾಗಿ ಉಳಿಯುತ್ತದೆ. ಚುರುಕಿನ ಮಾತುಗಾರಿಕೆ, ಉತ್ಸಾಹದ ಹಾಡು ಘಟನೆಗಳ ಸರಮಾಲೆಯಂತೆ ಕಥೆ ಕಟ್ಟುವ ತಂತ್ರ ಇವೆಲ್ಲವುಗಳಿಂದ ಕೂಡಿ ಆಲಿಬಾಬಾ ರಂಜನೀಯವಷ್ಟೇ ಅಲ್ಲ, ಅರ್ಥಪೂರ್ಣವಾಗುವಂತೆಯೂ ಮಾಡಿದೆ. ನಾಟಕದ ಕಥೆ ಎಲ್ಲರಿಗೂ ಗೊತ್ತಿರುವ ಆಲಿಬಾಬಾ ಅಥೆಯೇ ಆದರೂ, ಅದು ನಾಟಕದಲ್ಲಿ ಪ್ರಸ್ತುತಗೊಂಡಿರುವ ಪರಿ ವಿಶೇಷವಾಗಿದೆ.

ನೀನಾಸಂ ಪ್ರದರ್ಶನದಲ್ಲಿ ಉತ್ತರ ಕರ್ನಾಟಕದ ಜನಪದ ಪ್ರಕಾರಗಳ ಕುಣಿತದ ಮಟ್ಟುಗಳು, ಸಂಗೀತ, ಅಭಿನಯ ಶೈಲಿ ಮುಂತಾದವನ್ನು ಬಳಸಿಕೊಂಡು ಮಕ್ಕಳಿಗೆ ಆಕರ್ಷಣೀಯವಾಗುವಂತೆ ಪ್ರಯೋಗಿಸಲಾಗಿತ್ತು.

ಮಕ್ಕಳ ನಾಟಕಗಳನ್ನು ವಿಮರ್ಶಿಸುವುದು ಹೆಚ್ಚಾಗಿ ಕಂಡುಬರದ ಕನ್ನಡದ ಸಂದರ್ಭದಲ್ಲಿ, ಆಲಿಬಾಬಾ ನಾಟಕವನ್ನು ಕುರಿತು ಕೆ.ವಿ. ಅಕ್ಷರ ಹೀಗೆ ಬರೆಯುತ್ತಾರೆ: "ಆಲಿಬಾಬ ಕೃತಿಯ ಒಂದು ದೊಡ್ಡಗುಣವೆಂದರೆ ಅದು 'ಕಥನ'ದ ಮೇಲೆ ತನ್ನೆಲ್ಲ ಶಕ್ತಿಯನ್ನು ಕೇಂದ್ರೀಕರಿಸುತ್ತದೆ. 'ವ್ಯಾಖ್ಯಾನ' ಮಾಡುವ ಭಾರ ಅದರ ತಲೆಯ ಮೇಲೆ ಕೂತಿಲ್ಲ. ಜನಪ್ರಿಯ ಕಥೆಯೊಂದನ್ನು ಎತ್ತಿಕೊಂಡು, ಅದನ್ನು ನೆಟ್ಟಗೆ ಮರುಕಥನ ಮಾಡುವ ಧೋರಣೆಯಿಂದ ಹೊರಡುತ್ತದೆ. ಆರಂಭದಲ್ಲೇ ಒಂದು ಸೃಜನಶೀಲ ಕಲಬೆರಕೆಯಿಂದ ಮೊದಲುಗೊಳ್ಳುವ ಈ ನಾಟಕ ಮುಂದೆ, 'ಜಾನಪದ' ಮತ್ತು 'ಜನಪ್ರಿಯ' ಎಂಬೆರಡು ಮಾದರಿಗಳನ್ನು ಮಿಶ್ರ ಮಾಡಲು ಹೊರಡುತ್ತದೆ. 'ಶ್ರೀ ಗಜವದನಾ' ಎಂಬ ಪ್ರಾರ್ಥನೆಯೊಂದಿಗೆ, ಪೂರ್ಣವಾಗಿ ಒಂದು ಸಣ್ಣಾಟದ ಶೈಲಿಯಲ್ಲಿಯೇ ಆರಂಭವಾಗುವ ಈ ನಾಟಕ ಮುಂದೆ 'ಓ ಪ್ಯಾರಿ ಮರ್ಜೀನಾ' ಎಂಬಂಥ ಹುಸಿ ಜನಪ್ರಿಯ ಹಾಡುಗಳನ್ನು, ಪತ್ತೇದಾರಿ ಕಥನದ ಸಾರಸ್ಯಗಳನ್ನು ಸೇರಿಸಿಕೊಳ್ಳುತ್ತ ಜಾನಪದವೋ ಜನಪ್ರಿಯವೋ ಎಂದೇನೂ ಬೇರೆ ಮಾಡಲಾಗದ ಮಿಶ್ರ ರೂಪವೊಂದನ್ನು ಸಾಧಿಸಿಕೊಳ್ಳುತ್ತದೆ. ಪಾತ್ರ ನಿರ್ಮಾಣದಲ್ಲೂ ಅಷ್ಟೇ. ಖಾಸೀಮನ ಹೆಂಡತಿ ಒಂದು ಕಡೆಗೆ ಸದಾ ವಟಗುಟ್ಟುವ ಸಿದ್ಧಮಾದರಿಯ ಪಾತ್ರವಾಗಿ ಕಂಡೂ ತನ್ನ ಮತ್ತು ತನ್ನ ಗಂಡನ ನಡುವಿನ ಜಗಳವನ್ನು, ಪ್ರೀತಿಯೆಂದು ಸಮರ್ಥಿಸಿಕೊಳ್ಳುವಾಗ ಆ ಸಿದ್ದಮಾದರಿಯಿಂದಾಚೆ ಜಿಗಿಯುತ್ತಾಳೆ. ಈ ನಾಟಕದ ಮಾತುಗಳಲ್ಲಿ ಕನ್ನಡ ಇಂಗ್ಲೀಷ್ ಮತ್ತು ಹಿಂದಿಗಳು ಮಿಶ್ರಗೊಳ್ಳುವಷ್ಟೇ ಸುಲಲಿತವಾಗಿ ಶೈಲಿಗಳು, ಪಾತ್ರ ಮಾದರಿಗಳು ಮತ್ತು ಸಾಂಸ್ಕೃತಿಕ ಆವರಣಗಳು ಬೆರಕೆಗೊಳ್ಳುತ್ತವೆ"[20]

2. **ಕಿಟ್ಟಿ ಕಥೆ:** ಇದು ಚಂದ್ರಶೇಖರ ಕಂಬಾರರು ಬರೆದ ಮೊದಲ ಮಕ್ಕಳ ನಾಟಕ. ಮುನ್ನುಡಿಯಲ್ಲಿ ಕಂಬಾರರು ಹೀಗೆ ಹೇಳುತ್ತಾರೆ: "ಮಕ್ಕಳ ನಾಟಕವೊಂದನ್ನು

ಬರೆಯುವ ವಿಚಾರ ನನಗೂ ಇರಲಿಲ್ಲ. ಪಪೆಟ್ ಲ್ಯಾಂಡಿನ ಶ್ರೀಮತಿ ವಿಜಯಾ ಅವರು ಗೊಂಬೆಯಾಟಕ್ಕಾಗಿ ಒಂದು ನಾಟಕ ಕೊಡಬೇಕೆಂದು ಹೇಳಿದ್ದರು. ನನ್ನ ಪೂರ್ವಾಗ್ರಹಗಳಿಂದಾಗಿ ಗೊಂಬೆಯಾಟಕ್ಕೆ ಒಂದು ಜನಪದ ಕತೆಯಾದರೇ ಅದೂ ಒಂದು ಬಯಲಾಟದ ರೂಪದಲ್ಲಿದ್ದರೇ ಒಳ್ಳೆಯದೆಂದು ಅನ್ನಿಸಿತು. ಸಂಗ್ರಹಿಸಿದ್ದ ಒಂದೆರಡು ಜನಪದ ಕತೆ ಸೇರಿಸಿ ನಾಟಕವನ್ನು ಅವರಸರವಾಗಿಯೇ ತಯಾರಿಸಿಕೊಟ್ಟೆ. ಅವರು ಅದಕ್ಕಾಗಿ ಅನೇಕ ಗೊಂಬೆಗಳನ್ನು ಮಾಡಿ ಪ್ರಯೋಗಿಸಿದರು. ಪ್ರಯೋಗ ಯಶಸ್ವಿಯಾಗಲಿಲ್ಲ. ಕಾರಣ ಅವರ ಪ್ರಯೋಗದಲ್ಲಿದ್ದಂತೆ ನನ್ನ ನಾಟಕದಲ್ಲೂ ಅನೇಕ ದೋಷಗಳಿದ್ದವು. ಮುಂದೆ ಶ್ರೀಮತಿ ವಿಮಲಾ ರಂಗಾಚಾರ್ ಅವರು ಬಾಲಭವನದ ಮಕ್ಕಳಿಗಾಗಿ ಒಂದು ನಾಟಕ ತಯಾರಿಸಿ ಕೊಡುವಂತೆ ನನ್ನನ್ನು ಕೇಳಿದರು. ಕಿಟ್ಟಿಯ ಕತೆಯೇ ಯಾಕಾಗಬಾರದೆಂದು ಕೈ ಹಾಕಿದೆ. ನಾನೇ ನಿರ್ದೇಶಕನಾದ್ದರಿಂದ ನಾಟಕದ ಕುಂದುಗಳನ್ನೆಲ್ಲಾ ಭರ್ತಿಮಾಡುವ ಅಗತ್ಯ ಕಂಡು ಬಂತು. ಹೊಸದಾಗಿ ಹಾಡು, ಮಾತು ಸೇರಿಸಿ ಈಗಿರುವ ರೂಪದಲ್ಲಿ ಸಿದ್ಧವಾಯಿತು.

ಮಕ್ಕಳ ನಾಟಕಗಳಿಗೆ ಕೆಲವು ವಿಶೇಷ ಲಕ್ಷಣಗಳಿವೆ. ಅದು ಹಾಗಿರಬೇಕು, ಹೀಗಿರಬಾರದು ಅಂತ ಏನೇನೋ ಹೇಳಿ ಎದುರಿಗಿದ್ದವರನ್ನು ಗಾಬರಿಗೊಳಿಸುವ ಇಚ್ಛೆ ನನಗಿಲ್ಲ. ಯಾಕೆಂದರೆ ಅದೇನೆಂದು ನನಗೂ ಗೊತ್ತಿಲ್ಲ. ಗೊತ್ತಿದ್ದೂ ಒಳ್ಳೆಯ ನಾಟಕ ಬಂದೀತೆಂದು ಏನು ಗ್ಯಾರಂಟಿ? ಮಕ್ಕಳ ಬಗ್ಗೆ ನನಗೊಂದು ತಿಳಿವಳಿಕೆಯಿದೆ. ಅದರಂತೆ ಈ ನಾಟಕ ಬರೆದಿದ್ದೇನೆ. ಬಾಲಭವನದಲ್ಲಿ ಇದರ ಹತ್ತು ಪ್ರಯೋಗಗಳಾದವು. ಕೆಲವರು, ಅವರೂ ನನ್ನ ಮಿತ್ರರೇ, ಕಿಟ್ಟಿ, ಸೂಳೆಮನೆಯಲ್ಲಿ ಸೊಂಟದ ಬಗ್ಗೆ ಮಾತಾಡಿದ್ದು, ಭಗವಂತ ಹೇಮಮಾಲಿನಿ ಬಗ್ಗೆ ಆಡಿದ್ದು, ಮಕ್ಕಳ ಮಟ್ಟಕ್ಕೆ ಮೀರಿದ್ದೆಂದು, ಮಕ್ಕಳನ್ನು ಅಡ್ಡದಾರಿ ಹಿಡಿಸುವಂತಾದ್ದೆಂದು ಏನೇನೂ ಹೇಳಿದರು. ಇದನ್ನೆಲ್ಲಾ ಕೇಳಿದ ಮೇಲೂ ಆ ಭಾಗಗಳನ್ನು ತೆಗೆದು ಹಾಕಬೇಕೆಂದು ನನಗನ್ನಿಸಲಿಲ್ಲ. ಆಡುವವರಿಗೆ ಅಜೀರ್ಣವಾದರೆ ತೆಗೆದು ಹಾಕಬಹುದು. ನಿರ್ದೇಶಕನಿಗೆ ನನ್ನ ಸೂಚನೆಯಿಷ್ಟೇ. ಜನಪದ ಕತೆಯ ಆ ನಾಯಕನ ಮೂಲಕ ಇಂದಿನ ಒಬ್ಬ ರಾಜಕೀಯ ನಾಯಕನನ್ನು ಚಿತ್ರಿಸುವುದು ನನ್ನ ಉದ್ದೇಶ. ಹತ್ತು ಪೈಸೆಯಲ್ಲೇ ಮದುವೆ ಆಗಬೇಕೆಂದು ಕಿಟ್ಟಿಯ ಮಹಾತ್ವಾಕಾಂಕ್ಷೆ. ಒಳಗಾದ ಪ್ರತಿ ಸಂದರ್ಭವನ್ನು ತನ್ನ ಪ್ರಯೋಗಕ್ಕೆ ಹೇಗೆ ಬಳಸಿಕೊಳ್ಳಬೇಕೆಂದು ಹೊಂಚು ಹಾಕುತ್ತಾನೆ. ತನ್ನಲ್ಲಿರುವ ವಸ್ತುವಿಗೆ ಬೇಡಿಕೆ ಸೃಷ್ಟಿಸಿ, ಅದರಿಂದ ಲಾಭ ಪಡೆಯಬೇಕು. ಈ ಲಾಭ ತನ್ನ ಉದ್ದೇಶದ ಈಡೇರಿಕೆಗೆ ಮಾರ್ಗವಾಗಬೇಕು, ಹಾಗೆ ಮಾಡುತ್ತಲೇ ಮದುವೆಯಾಗುತ್ತಾನೆ. ಅದೂ ರಾಜಕುಮಾರಿಯನ್ನ. ಅವನ ಸಾಹಸಕ್ಕೆ ರಾಜಕುಮಾರಿಯಂತ ಬಹುಮಾನ ಸಿಕ್ಕುವುದೂ ಸಹಜವೇ. ಇಷ್ಟನ್ನೂ ಮನಸ್ಸಿನಲ್ಲಿಟ್ಟುಕೊಂಡು, ಬಯಲಾಟದ ಹೊರಗೆರೆಗಳನ್ನಾದರೂ ತಿಳಿದುಕೊಂಡು ಈ ನಾಟಕವನ್ನು ಪ್ರಯೋಗಿಸಬೇಕು." ಇದು ಕಂಬಾರರು ನಾಟಕ

ಆಡುವವರಿಗೆ ನೀಡುವ ಸೂಚನೆ. ಈ ನಾಟಕದ ಮೊದಲ ಪ್ರದರ್ಶನ 1973ರ ಏಪ್ರಿಲ್ 6 ರಂದು ಬೆಂಗಳೂರಿನ ಬಾಲಭವನದಲ್ಲಿ ನಡೆಯಿತು. ಕಂಬಾರರ ಈ ಸೂಚನೆಗಳನ್ನು ಗಮನಿಸಿದ ಮೇಲೂ ಈ ನಾಟಕ ಮಕ್ಕಳ ನಾಟಕದ ಮಿತಿಯನ್ನು ಮೀರಿದೆ ಎಂಬ ಅಭಿಪ್ರಾಯ ಮೂಡಿದರೆ ಪ್ರಾಯಶಃ ಅದು ಅಂತಹ ತಪ್ಪಾಗಲಿಕ್ಕಿಲ್ಲ.

3. **ಪುಷ್ಪರಾಣಿ:** ಪ್ರಾಯಶಃ ಕಂಬಾರರ ಮೂರು ಮಕ್ಕಳ ನಾಟಕಗಳಲ್ಲಿ ಅತಿ ಹೆಚ್ಚು ತಂಡಗಳಿಂದ ಅಭಿನಯಿಸಲ್ಪಟ್ಟ ನಾಟಕ ಪುಷ್ಪರಾಣಿ. ಈ ನಾಟಕದ ಕಥಾನಾಯಕಿ ಪುಷ್ಪರಾಣಿ, ವನದೇವತೆಯ ಮಗಳು. ಆದರೆ ಅವಳು ಸಿಕ್ಕಿದ್ದು ವನಪಾಲಕನಿಗೆ. ವನಪಾಲನೆಯ ಮಹತ್ವನ್ನು ಸಾರುವ ಈ ನಾಟಕ ವನದೇವತೆಯ ಮಗಳ ಮುಗ್ಧ ಬದುಕಿನ ಮೇಲೆ ನಡೆಯುತ್ತಾ ಹೋಗುವ ಮಾನವ ನಿರ್ಮಿತ ಕ್ರೌರ್ಯವನ್ನು ದಾಖಲಿಸುತ್ತಾ ಸುಖಾಂತ್ಯವಾಗುತ್ತದೆ. ಇಡೀ ನಾಟಕ ವಾಚ್ಯವಾಗಿಯೇ ವನರಕ್ಷಣೆಯ, ಪರಿಸರ ರಕ್ಷಣೆಯ ಪಾಠವನ್ನು ಬೋಧಿಸುತ್ತದೆ. ಆದರೆ ಇಡೀ ನಾಟಕ ಸಂಚಲನಗೊಳ್ಳುವ ರೀತಿ ಮಕ್ಕಳ ಮನಸ್ಸನ್ನು ಸೆರೆ ಹಿಡಿಯಬಲ್ಲದ್ದಾಗಿದೆ. ಈ ನಾಟಕವನ್ನು ಕಂಬಾರರ ಅಲಿಬಾಬಾನೊಂದಿಗೆ ಹೋಲಿಸುತ್ತಾ ಕೆ.ವಿ. ಅಕ್ಷರ ಒಂದೆಡೆ ಹೀಗೆ ಹೇಳುತ್ತಾರೆ: "ಪುಷ್ಪರಾಣಿ ಕೃತಿಯು ಮಕ್ಕಳ ನಾಟಕದ ಲಘುತ್ವವನ್ನೂ ಲವಲವಿಕೆಯನ್ನೂ ಉದ್ದಕ್ಕೂ ರೂಢಿಸಿಕೊಂಡಿದ್ದರೂ ಅದು 'ವ್ಯಾಖ್ಯಾನ'ದ ಪಂಗಿನಿಂದ ಮುಕ್ತವಾಗಿಲ್ಲ. ತಾನು ಪರಿಸರ ವಿಜ್ಞಾನವೆಂಬ ಆಧುನಿಕ ಶಾಸ್ತ್ರವೊಂದರ ಮೂಲಸಂಚಿಕೆಯನ್ನು ಪ್ರತಿನಿಧಿಸುವ ರೂಪಕ ಎನ್ನುವ ಪ್ರಜ್ಞೆ ಈ ಮರುಕಥನದ ಹಿನ್ನಲೆಯಲ್ಲಿ ಗಟ್ಟಿಯಾಗಿ ನೆಲೆಯೂರಿರುವುದೇ ಇದಕ್ಕೆ ಕಾರಣವೆಂದು ನಾನು ತಿಳಿಯುತ್ತೇನೆ. ನಾಟಕದ ಮೊದಲಿಗೆ ಸೂತ್ರಧಾರ ಮತ್ತು ಮೇಳ ಆಡುವ ಈ ಮಾತುಗಳನ್ನು ನೋಡಿ. "ಪರಿಸರ ರಕ್ಷಣೆ ಅಂತ ನೀವು ಕೇಳಿದ್ದೀರಿ... ಓದಿದ್ದೀರಿ. ಆದಿಕಾಲದಲ್ಲೂ ಈ ಬಗ್ಗೆ ಕಾಳಜಿ ಮಾಡಿದ್ದರು ಶಿವಾ. ಅಂಥಾದ್ದೊಂದು ಕಥೆ ಹೇಳತೀವಿ... ಇಂಥ ಸ್ವ-ನಿರೂಪಣೆಯೊಂದಿಗೆ ಮುನ್ನಡೆಯುವುದರಿಂದಲೇ ಈ ನಾಟಕಕ್ಕೆ 'ಅಲಿಬಾಬಾ'ದ ಮುಕ್ತತೆ ಸಾಧ್ಯವಾಗಿಲ್ಲ. ಮಾತ್ರವಲ್ಲ ಅದು ತನ್ನ ಕಟ್ಟಡದಲ್ಲಿ ಕೂಡಾ 'ಅಲಿಬಾಬಾ...'ದ ಬಹುತ್ವವನ್ನು ಗಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ" [21]

ಕಂಬಾರರ ಇನ್ನೊಂದು ನಾಟಕ 'ಬೆಪ್ಪುತಕ್ಕಡಿ ಭೋಳೇಶಂಕರ' 1988ರ ತಿರುಗಾಟದಲ್ಲಿ ಕೆ.ಜಿ. ಕೃಷ್ಣಮೂರ್ತಿಯವರ ನಿರ್ದೇಶನದಲ್ಲಿ ಪ್ರದರ್ಶಿತವಾಯಿತು. ಜನಪದ ನೀತಿಕತೆಯೊಂದರ ಆಧಾರದಲ್ಲಿ ಬರೆದ ಈ ನಾಟಕ ಮೂಲತಃ ಮಕ್ಕಳ ನಾಟಕವೆಂದು ಬರೆದದ್ದಲ್ಲ. ಆದರೆ ತಿರುಗಾಟ ಕೆಲವೊಂದು ಬದಲಾವಣೆ ಮಾಡಿಕೊಂಡು ಇದನ್ನು ಮಕ್ಕಳ ನಾಟಕವೆಂದು ಪ್ರಯೋಗಿಸಿತು. ಮಕ್ಕಳ ನಾಟಕವಾಗಿ ಅಂತಹ ಗಮನಾರ್ಹ ಯಶಸ್ಸು ಇದಕ್ಕೆ ದಕ್ಕಲಿಲ್ಲ ಎನ್ನಲಾಗಿದೆ.

## ಎನ್.ಎಸ್. ವೆಂಕಟರಾಂ ನಾಟಕಗಳು

ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ಪದವೀಧರರಾದ ಎನ್.ಎಸ್. ವೆಂಕಟರಾಂ, ನಿರ್ದೇಶನ ಕಲೆಯಲ್ಲಿ ವಿಶೇಷಜ್ಞತೆ ಪಡೆದವರು. ಅವರು 1970, 1980ರ ದಶಕದಲ್ಲಿ ಮಕ್ಕಳ ರಂಗಭೂಮಿಗಾಗಿ ದುಡಿದರು. ಮಕ್ಕಳಿಗಾಗಿ ಅನೇಕ ನಾಟಕಗಳನ್ನು ಬರೆದು, ನಿರ್ದೇಶಿಸಿದರು. ಬಾಲಭವನದ ಕಲಾವಿಭಾಗ ಹಾಗೂ ಶಿಕ್ಷಣ ಸಂಪನ್ಮೂಲ ಕೇಂದ್ರದ ಮುಖ್ಯಸ್ಥರಾಗಿ ದುಡಿದ ಶ್ರೀಯುತರು ಬರೆದ ಹಲವಾರು ನಾಟಕಗಳ ಪೈಕಿ ಹತ್ತು ನಾಟಕಗಳನ್ನು ಕ್ರೋಢೀಕರಿಸಿ 'ಮಕ್ಕಳ ನಾಟಕ' ಎಂಬ ಪುಸ್ತಕದ ಮೂಲಕ ಪ್ರಕಟಿಸಿದ್ದಾರೆ. ಈ ಪುಸ್ತಕದ ಮುನ್ನುಡಿಯಲ್ಲಿ ಲೇಖಕರು ಹೀಗೆ ಹೇಳುತ್ತಾರೆ : "ಈ ಸಂಗ್ರಹದಲ್ಲಿರುವ ನಾಟಕಗಳು ರಚಿತವಾಗಲು ಮಕ್ಕಳಿಗಾಗಿಯೇ ರಚಿಸಲ್ಪಟ್ಟ ನಾಟಕಗಳ ಅಭಾವ ಒಂದು ಕಾರಣವಾದರೆ, ನಾನು ಆಯ್ಕೆ ಮಾಡಿಕೊಂಡ ಮಕ್ಕಳ ನಾಟಕತಂಡ ತಮಗೆ ಪ್ರಿಯವೆಂದು ಸೂಚಿಸಿದ ಕತೆಯೇ ಅನೇಕ ಸಂದರ್ಭದಲ್ಲಿ ಪ್ರೇರಣೆ ನೀಡಿ ನಾಟಕ ಪ್ರಯೋಗದ ಮೂಲದ್ರವ್ಯವಾದದ್ದೂ ಉಂಟು. ಕೆಲವು ಕತೆಗಳನ್ನು ದೃಶ್ಯ ರೂಪದಲ್ಲಿ ಸಾಕಾರಗೊಳಿಸಲು ಮಕ್ಕಳೇ ಸಹಕರಿಸಿದ್ದಾರೆ. ಈ ನಾಟಕಗಳನ್ನು ರಾಜ್ಯಾದ್ಯಂತ ಅನೇಕ ಜಿಲ್ಲಾ ಕೇಂದ್ರಗಳಲ್ಲಿ ಪ್ರಯೋಗಿಸಿದಾಗ ಅಭಿನಯಿಸಿದ ಮಕ್ಕಳು ಖುಷಿಪಟ್ಟಿದ್ದಾರೆ, ನೋಡಿದ ಮಕ್ಕಳು ಆನಂದಪಟ್ಟಿದ್ದಾರೆ" ತಮ್ಮ ಸಂಗ್ರಹದಲ್ಲಿರುವ ನಾಟಕಗಳನ್ನು ಕುರಿತು ಅವರು ಹೀಗೆ ಹೇಳಿಕೊಂಡಿದ್ದಾರೆ: "ಕಾಡುಗೋಡಿ ಗ್ರಾಮದ ಹಳ್ಳಿ ಮಕ್ಕಳಿಗಾಗಿ ಬರೆದ ನಾಟಕ 'ಬಂಗಾರದ ಗಿಣಿ'. ಭರತೇಂದು ಹರಿಶ್ಚಂದ್ರ ಅವರ ಹಿಂದಿ ನಾಟಕದ ರೂಪಾಂತರ – ಅಂಧೇರ್ ನಗರಿ ಚೌಪಟ್ ರಾಜ. ಪ್ರಾಣಿಗಳಿಗೆ ಮನುಷ್ಯರ ಸ್ವಭಾವ, ರೀತಿ–ನೀತಿಗಳನ್ನು ಆರೋಪಿಸಿ ಮಾಗಡಿ ರಸ್ತೆ ಕಾರ್ಪೊರೇಷನ್ ಶಾಲೆಯ ಮಕ್ಕಳಿಗಾಗಿ ನಾನು ಬರೆದದ್ದು 'ಕತ್ತೆ ಬಾಲ– ಕುದುರೆ ಜುಟ್ಟು'.

ಅರೇಬಿಯನ್ ನೈಟ್ಸ್ ಮಾದರಿಯ ಕಥೆಯನ್ನಾಧರಿಸಿದ್ದು, 'ಸಿಂದಾಬಾದ್'. 'ಸ್ನೋವೈಟ್' ಮೂಲಕಥೆಯಲ್ಲಿ ಅನೇಕ ಮಾರ್ಪಾಡುಗಳನ್ನು ಮಾಡಿದ ನಂತರ ಮೂಡಿಬಂದಿದೆ, 'ಹಿಮಾನಿ ಮತ್ತು ಏಳು ಜನ ಕುಳ್ಳರು'. ಅವಲಹಳ್ಳಿಯ ಶಾಲೆಯ ಮಕ್ಕಳಿಗೋಸ್ಕರ ಬರೆದದ್ದು, ಈಸೋಪನ ನೀತಿಕಥೆಯನ್ನಾಧರಿಸಿ ರಚಿತವಾದ ನೃತ್ಯರೂಪಕ 'ಸೋಮಾರಿ ಕಾಗೆ'. ಸಂಗ್ರಹದಲ್ಲಿರುವ ಹತ್ತು ನಾಟಕಗಳಲ್ಲಿ ಬಹುತೇಕ ನಾಟಕಗಳು, ಮಕ್ಕಳೇ ಇಷ್ಟಪಟ್ಟ ಕಥೆಗಳ ರೂಪಾಂತರ. ಇನ್ನು ಸ್ವತಃ ನಿರ್ದೇಶಕರೇ ಆಗಿದ್ದ ಎನ್.ಎಸ್. ವೆಂಕಟರಾಂ, ರಂಗದ ಇತಿ–ಮಿತಿ ಸಾಧ್ಯಾಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡೇ ಈ ನಾಟಕಗಳನ್ನು ರಚಿಸಿದ್ದಾರೆ. ಬಹುತೇಕ ಎಲ್ಲ ನಾಟಕಗಳು ಜನಪ್ರಿಯ ಕತೆಯನ್ನು ಆಧರಿಸಿ ನಿಂತಿರುವುದರಿಂದ ರಂಗದಲ್ಲಿ ದೃಶ್ಯವನ್ನು ಕಟ್ಟುವುದಕ್ಕಿಂತ

ಕಥಾಪ್ರವಾಹಕ್ಕೆ ಮಹತ್ವ ದಕ್ಕಿದೆ. ಈ ಎಲ್ಲ ನಾಟಕಗಳಲ್ಲಿ 'ಹಿಮಾನಿ ಮತ್ತು ಏಳು ಜನ ಕುಳ್ಳರು' ಮತ್ತೆ ಮತ್ತೆ ಪ್ರದರ್ಶನಗೊಂಡಿವೆ. ಅದಕ್ಕೂ ಕಾರಣ ಲೇಖಕರು ಹೇಳಿರುವಂತೆ ಮೂಲಕಥೆಯ ಜನಪ್ರಿಯತೆ.

'ಮುರುಕು ತಟ್ಟೆ', 'ಚಿನ್ನದ ತಟ್ಟೆ', 'ಕಪ್ಪೆಯ ಕಾಶೀಯಾತ್ರೆ' ಈ ಮೂರು ನಾಟಕಗಳನ್ನು ಮೊದಲು ಬೊಂಬೆ ಆಟಕ್ಕಾಗಿ ಬರೆದದ್ದು. ನಂತರ ರಂಗದ ಮೇಲೆ ಮಕ್ಕಳು ಈ ನಾಟಕವನ್ನು ಅನೇಕ ಬಾರಿ ಅಭಿನಯಿಸಿದ್ದಾರೆ"

ಅವರ ನಾಟಕಗಳ ಬಗ್ಗೆ ಹೇಳುತ್ತಲೇ ನಾವು, 70ರ, 80ರ ದಶಕದಲ್ಲಿ ವೆಂಕಟರಾಂ ಮಕ್ಕಳ ರಂಗಭೂಮಿಗಾಗಿ ಪಟ್ಟ ಶ್ರಮವನ್ನು ದಾಖಲಿಸಬೇಕು. ಬಾಲಭವನ, ಅವರ ಚಟುವಟಿಕೆಗಳಿಗೆ ಹೇಗೆ ವೇದಿಕೆಯಾಗಿತ್ತೋ ಹಾಗೆ ಬಾಲಭವನಕ್ಕೂ ವೆಂಕಟರಾಂ ಅನಿವಾರ್ಯವಾಗಿದ್ದರು. ಬೆಂಗಳೂರಿನಲ್ಲಿ ಮಕ್ಕಳ ರಂಗಭೂಮಿಗೆ ಚಾಲನೆ ಶರುವಲ್ಲಿ ಶ್ರಮಿಸಿದ ಮಹಾನುಭಾವರಲ್ಲಿ ವೆಂಕಟರಾಂ ಮೊದಲಿಗರು. ನಂತರದ ದಿನಗಳಲ್ಲಷ್ಟೇ ಪ್ರೇಮಾ ಕಾರಂತ, ಜಯಶ್ರೀ, ಎ.ಎಸ್. ಮೂರ್ತಿ ಮುಂತಾದವರು ಚಟುವಟಿಕೆಗಳನ್ನು ಆರಂಭಿಸಿದ್ದು.

## ಆರ್. ವಿ. ಭಂಡಾರಿಯವರ ನಾಟಕಗಳು

13 ನಾಟಕಗಳಿರುವ 'ಬೆಳಕಿನೆಡೆಗೆ' ಎಂಬ ನಾಟಕ ಸಂಗ್ರಹಗಳ ಪುಸ್ತಕವನ್ನು ಪ್ರಕಟಿಸಿರುವ ಶ್ರೀ ಆರ್.ವಿ. ಭಂಡಾರಿ ಅದರ ಮುನ್ನಡಿಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ: "ಇಲ್ಲಿನ ಹೆಚ್ಚಿನ ನಾಟಕಗಳು ನಾನು ಮಾಸ್ತರಿಕೆಯಲ್ಲಿದ್ದಾಗಲೇ ಬರೆದು ವಿದ್ಯಾರ್ಥಿಗಳಿಂದ ಆಡಿಸಿದ್ದು. ಇನ್ನು ಕೆಲವು ಸಿರ್ಸಿಯ ರಂಗಸಂಗದ ಕಿರಣ್ ಭಟ್ ಮತ್ತು ಅವರ ಸಂಗಡಿಗರಿಗಾಗಿ ಬರೆದದ್ದು. ನನ್ನ ಹೆಚ್ಚಿನ ನಾಟಕಗಳನ್ನು ನನಗಿಂತ ಹೆಚ್ಚಾಗಿ ರಂಗಸಂಗದವರು ಆಡಿಸಿದ್ದಾರೆ. ಇಲ್ಲಿ ಕೆಲವು ನಾಟಕಗಳು ಪಂಚತಂತ್ರ ಆಧಾರಿತವಾದರೆ, ಕೆಲವು ಪಠ್ಯಪುಸ್ತಕ ಆಧಾರಿತ. ಇನ್ನು ಕೆಲವು ಬೇರೆಯವು. ಪ್ರಾಥಮಿಕ ಎರಡನೇ ವರ್ಗದಿಂದ ಎಂಟನೇ ವರ್ಗದವರೆಗಿನ ವಿದ್ಯಾರ್ಥಿಗಳ ಮಾನಸಿಕ ಬೆಳವಣಿಗೆ, ಗ್ರಹಣ ಸಾಮರ್ಥ್ಯ, ಅಭಿರುಚಿ, ಆದರ್ಶದ ಹಂಬಲ, ರಂಜನೆ, ಮಾತಿನ ಧಾಟಿ, ಅಭಿನಯಪಟುತ್ವ ಇತ್ಯಾದಿಗಳನ್ನು ಗಮನಿಸಿ ಇಲ್ಲಿಯ ನಾಟಕಗಳನ್ನು ರಚಿಸಲಾಗಿದೆ. ಮಕ್ಕಳ ನಾಟಕ ಚಿಕ್ಕದಾಗಿರಬೇಕು. ಸಂಭಾಷಣೆ ಚುರುಕಾಗಿರಬೇಕು. ನಟನೆಗೆ ಅನುಕೂಲವಾಗಿರಬೇಕು. ಹೆಚ್ಚು ಮಕ್ಕಳು ಭಾಗವಹಿಸುವಂತಿರಬೇಕು. ರಂಗರಚನೆಯಲ್ಲಿ ಸುಲಭ ತಾಂತ್ರಿಕ ಸೌಲಭ್ಯವಿರಬೇಕು. ಕಥೆ ಇರಬೇಕು. ರಸಭಾವ ಮಕ್ಕಳ ವಯಸ್ಸಿಗೆ ತಕ್ಕದ್ದಿರಬೇಕು. ಕೊನೆಗೆ ನಾಟಕವು ಶೈಕ್ಷಣಿಕವೂ ಆಗಿರಬೇಕು". ಈ ಎಲ್ಲ ಅಂಶಗಳನ್ನು ಗಮನಿಸಿ, ಅವರು ಒಟ್ಟು 13 ನಾಟಕಗಳನ್ನು ಈ ಸಂಗ್ರಹದಲ್ಲಿ ಸೇರಿಸಿದ್ದಾರೆ.

1. ಅಪ್ಪಿಕೋ, 2. ನರಿಯ ಜಾಣ್ಮೆ, 3. ಬೆಕ್ಕು ಮತ್ತು ರೊಟ್ಟಿ, 4. ಮುದುಕನೂ ಹುಲಿಯೂ, 5. ಗಡ್ಡ ಎಳೆದವನ ಬಾಯಿಗೆ ಮಿಠಾಯಿ, 6. ಜಾಣ ಕೋಳಿ, 7. ಧ್ರುವ ಚರಿತ್ರೆ, 8. ಉಪ್ಪಿನ ಸತ್ಯಾಗ್ರಹವೆಂಬ ಆಟ, 9. ಹಕ್ಕಿಗಳೂ ಮತ್ತು ಬಲೆಯೂ. 10. ಕೊಲ್ಲುವವರು, ಕಾಯುವವರು, 11. ಕಸದ ಡಬ್ಬಿ ಮತ್ತು ಬಹುಮಾನ 12. ಬಿತ್ತಿದ್ದನ್ನು ಬೆಳಕೂ, 13. ಬೆಳಕಿನೆಡೆಗೆ.

ಆರ್.ವಿ. ಭಂಡಾರಿಯವರನ್ನು ಕುರಿತು ರಂಗಕರ್ಮಿ ಶ್ರೀಪಾದ ಭಟ್ ಹೀಗೆ ಹೇಳುತ್ತಾರೆ : "ಜಿಲ್ಲೆಯ ಹಿರಿಯ ಸಾಹಿತಿ ಡಾ॥ ಆರ್.ವಿ. ಭಂಡಾರಿ ಮಕ್ಕಳ ಲೋಕವನ್ನು ಸಹಜವಾಗಿ ಪ್ರವೇಶಿಸಬಲ್ಲ ಸೂಕ್ಷ್ಮ ಸಂವೇದಿಗಳು, ಅವರು ತಾವು ಕೆಲಸ ನಿರ್ವಹಿಸುತ್ತಿದ್ದ ಶಾಲೆಗಳಲ್ಲಿ ಮಕ್ಕಳಿಗಾಗಿ ನಾಟಕ ಬರೆದು ಆಡಿಸುತ್ತಿದ್ದರು. ಎಂಭತ್ತರ ದಶಕದ ಮಧ್ಯಭಾಗದಲ್ಲಿ (84ರಲ್ಲಿ) ಆರ್.ವಿ. ಭಂಡಾರಿಯವರ 'ಅಪ್ಪಿಕೋ ಮತ್ತು ಇತರ ನಾಟಕಗಳು' ಸಂಕಲನ ಪ್ರಕಟವಾಯಿತು. 1981ರಲ್ಲೇ ಶಿರಸಿಯ ರಂಗಸಂಗ ಆರ್.ವಿ. ಭಂಡಾರಿಯವರ ಮಕ್ಕಳ ನಾಟಕಗಳನ್ನು ರಂಗತರಬೇತಿ ಶಿಬಿರ ನಡೆಸಿ, ಪ್ರಯೋಗಿಸಿತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಯೋಗವಾದ ಹೆಚ್ಚಿನ ನಾಟಕಗಳು ಡಾ॥ ಆರ್.ವಿ. ಭಂಡಾರಿಯವರದ್ದು"[22] ಬೇರೆ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಯೋಗಗಳು ನಡೆದ ಮಾಹಿತಿಗಳು ಅಲಭ್ಯವಾದರೂ, ತಮ್ಮ ಸ್ವಂತ ಜಿಲ್ಲೆಯಲ್ಲಿ ಆರ್.ವಿ. ಭಂಡಾರಿಯವರ ನಾಟಕಗಳು ಪ್ರದರ್ಶನಗೊಂಡಿದೆ ಎನ್ನಲು ಸಾಕಷ್ಟು ಆಧಾರಗಳಿವೆ.

## ಇನ್ನು ಕೆಲವು ಮುಖ್ಯ ನಾಟಕಗಳು

### ಛುಕ್ ಛುಕ್ ಭಯ್ಯಾ ತಾಲಂ ತಾಲ್

**ಮೂಲ :** ಸ್ನಾಕರ್ ಲಾಕ್ ಎಂಡ್ ಮಿಕಿನಿಕಿ ಎಂಬ ಜರ್ಮನ್ ನಾಟಕ. ಕನ್ನಡ

**ರೂಪಾಂತರ :** ಗೋನ್‌ವಾರ್ ಕಿಶನ್‌ರಾವ್. ಈ ನಾಟಕ ಎರಡು ಸ್ತರದಲ್ಲಿ ಕೆಲಸ ಮಾಡುತ್ತದೆ. ಒಂದು, ಸಹಜ ಮಕ್ಕಳ ಆಟಿಕೆ, ಕುತೂಹಲದಂತೆ. ಎರಡನೆಯದು ಒಂದು ಪ್ರತಿಮೆಯಾಗಿ – ಛಿದ್ರಗೊಂಡ ಮನಸ್ಸನ್ನೂ, ಬದುಕನ್ನೂ ಬೆಸೆಯುವ ಪ್ರತಿಮೆಯಾಗಿ. ರೈಲ್ವೆ ಇಂಜಿನ್ನೊಂದರ ಮೇಲೆ ಮಕ್ಕಳು ಸವಾರಿ ಮಾಡಿ ಖುಷಿ ಪಡುತ್ತಿದ್ದರು. ಇದನ್ನು ಸಹಿಸದ ಇಂಜಿನ್ ಮಾಲೀಕ ದುಷ್ಟತನದಿಂದ ಅದರ ಭಾಗಗಳನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಹರಿದು ಒಗೆದುಬಿಡುತ್ತಾನೆ. ಮಕ್ಕಳು ಈ ರೈಲಿನಲ್ಲಿ ಆಡಿ ನಲಿಯುವುದನ್ನು ಅವನಿಗೆ ಸಹಿಸಲಾಗದ್ದರಿಂದ ರೈಲು ಇಂಜಿನ್ ಓಡಲಾಗದಂತೆ ಕೆಡಿಸಿಬಿಡುವುದು ಅವನ ಉದ್ದೇಶ. ಈಗ ಮಕ್ಕಳಿಗೆ ಸವಾರಿ ಮಾಡಲು ಇಂಜಿನ್ ಇರದೆ ಬೇಸರವಾಗುತ್ತದೆ. ಎಲ್ಲ ಭಾಗಗಳನ್ನು ಹುಡುಕಿ ತಂದರೆ ಇಂಜಿನನ್ನು ಮಕ್ಕಳಿಗೇ

ಕೊಡುವುದಾಗಿ ಮಾಲಿಕ ಹೇಳುತ್ತಾನೆ. ಮಕ್ಕಳಾದ ಬಿಕ್ಕು, ಮುನ್ನಿ, ಚೆನ್ನಿ ಡ್ರೈವರನ ಜೊತೆಗೂಡಿ ಇಂಜಿನ್ ಬಿಡಿ ಭಾಗಗಳನ್ನು ಹುಡುಕಲು ಹೊರಡುತ್ತಾರೆ. ಇಡೀ ದೇಶ ಸುತ್ತುತ್ತಾರೆ. ಛಿದ್ರ ಛಿದ್ರಗೊಂಡ ರೈಲಿನ ಭಾಗಗಳನ್ನು ಪ್ರತಿದೃಶ್ಯದಲ್ಲಿ ಸಿಕ್ಕಷ್ಟು ಹುಡುಕಿ ಕೂಡಿಸುತ್ತಾರೆ. ಸರಿ ಹೋಗದಿದ್ದಾಗ ಮತ್ತೆ ಹುಡುಕುತ್ತಾರೆ. ಯಾರು ಯಾರೋ ಸಿಕ್ಕುತ್ತಾರೆ. ಹೇಗೆ ಹೇಗೋ ಇಂಜಿನ್ ಭಾಗವನ್ನು ಹುಡುಕಿ ಹೊಂದಿಸಿ ಬಿಡುತ್ತಾರೆ. ಮಕ್ಕಳ ಸವಾರಿ ಸುರಕ್ಷಿತವಾಗಿ ಪುನರಾರಂಭವಾಗುತ್ತದೆ. ಇದರಲ್ಲಿ ಮಕ್ಕಳಿಗೆ ವಿವಿಧ ಪ್ರದೇಶದ ವಿವಿಧ ಜನಗಳು ಸಿಕ್ಕಿ ಹೊಸ ಹೊಸ ಅನುಭವ ಉಂಟಾಗುತ್ತದೆ. ಚುರುಕಾದ ಸಂಭಾಷಣೆ, ಪದ್ಯಕ್ಕಿಂತ ಹೆಚ್ಚು ಗದ್ಯ- ಮಕ್ಕಳಿಗೆ ಖುಷಿ ಕೊಡುತ್ತದೆ.

## ನಕ್ಕಿತು ನಕ್ಷತ್ರ

ರಚನೆ – ಸೂ ಸುಬ್ರಹ್ಮಣ್ಯ; ಪ್ರಕಟಣೆ, ಕನ್ನಡ ವಿಜ್ಞಾನ ಪರಿಷತ್ತು, ವರ್ಷ 1986. ವಿಜ್ಞಾನ ವಿಷಯಗಳನ್ನು ಬರಡಾಗಿ ನಿರೂಪಿಸಿ ಅವುಗಳ ಆಂತರಿಕ ಸತ್ವ ಸೊಬಗುಗಳಿಗೆ ಬೂದಿ ಮುಚ್ಚಿಸುವ ಬದಲು ಅಂಥ ವಿಷಯಗಳಿಗೆ ಶ್ರವ್ಯ ಹಾಗೂ ದೃಶ್ಯ ಮಾಧ್ಯಮಗಳ ವಿಶೇಷ ರಂಗು ಲೇಪಿಸಿ, ಕಣ್ಮನ ಸೆಳೆಯುವ ವೇಷ ಪೋಷಾಕುಗಳನ್ನು ತೊಡಿಸಿ, ಮಕ್ಕಳ ಮುಂದಿಟ್ಟಾಗ ಆಗುವ ಅನುಭವ, ಪರಿಣಾಮಗಳೇ ಬೇರೆ ರೀತಿಯವು. ಇಂತಹ ಪ್ರಯೋಗ-ಪ್ರಯತ್ನಗಳಿಂದ ಮಕ್ಕಳಿಗೆ ವಿಜ್ಞಾನದಲ್ಲಿ ಆಸಕ್ತಿ ಮೂಡುತ್ತದೆ. ವಿಷಯದ ಅರಿವಿಗೆ ನೆರವು ಕೂಡಿಬರುತ್ತದೆ. ಮನೋವಿಕಾಸಕ್ಕೆ ಕಾರಣವಾಗಬಲ್ಲ ಹೂರಣಕ್ಕೆ ಮನೋರಂಜನೆಯ ಹೊದಿಕೆ ಹಾಕಿ ಮಕ್ಕಳ ಮನಸ್ಸನ್ನು ಮುಟ್ಟುವ ಇಂಥ ಪ್ರಯೋಗಗಳು ಕನ್ನಡದಲ್ಲಿ ಸಾಕಷ್ಟು ಬೇಕಾಗಿದೆ. ಕನ್ನಡದ ಪ್ರಪ್ರಥಮ ಮಕ್ಕಳ ವಿಜ್ಞಾನ ನಾಟಕ ಎಂಬ ಕೀರ್ತಿಗೆ ಭಾಜನವಾಗಬಲ್ಲ 'ನಕ್ಕಿತು ನಕ್ಷತ್ರ' ಈ ದೃಷ್ಟಿಯಿಂದ ಗಮನಾರ್ಹ. ಮಕ್ಕಳ ದಿನಾಚರಣೆಯ ಅಂಗವಾಗಿ ಬೆಂಗಳೂರು ಆಕಾಶವಾಣಿ ಕೇಂದ್ರವು ನವೆಂಬರ್ 14, 1983ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಈ ನಾಟಕವನ್ನು ಪ್ರಥಮ ಬಾರಿಗೆ ಪ್ರದರ್ಶಿಸಿತು.

## ಪಂಜರದಲ್ಲಿ ಹುಲಿ

ನಾ.ಸು. ಭರತನಹಳ್ಳಿ; ರಂಗಸಂಗ; ಶಿರಸಿ; 1996. ನಾ.ಸು. ಭರತನಹಳ್ಳಿ ಉತ್ತರ ಕನ್ನಡ ಜಿಲ್ಲೆಯ ಪ್ರಖ್ಯಾತ ಲೇಖಕರು. ಜೊತೆಗೆ ಶಿಕ್ಷಕರಾಗಿದ್ದವರು. ಮಕ್ಕಳೊಂದಿಗೆ ನಿರಂತರವಾಗಿ ಒಡನಾಡಿ ಅವರ ನಾಡಿ ಅರಿತವರು. ತಮ್ಮ ಮಾಸ್ತರಿಕೆಯ ದಿನಗಳಲ್ಲಿ ಮಕ್ಕಳಿಗಾಗಿ ನಾಟಕಗಳನ್ನು ಬರೆದು ಆಡಿಸಿ, ನೋಡಿ ಆನಂದಪಟ್ಟವರು. ಪಂಚತಂತ್ರದ ಕಥೆಯನ್ನಾಧರಿಸಿದ ಈ ನಾಟಕ ತುಂಬ ಸರಳವಾಗಿದೆ ಮತ್ತು ಕನಿಷ್ಠ ಸೌಲಭ್ಯದೊಂದಿಗೆ

ಯಾವುದೇ ಶಾಲೆಯಲ್ಲಿಯೂ ಅಭಿನಯಿಸಲು ಯೋಗ್ಯವಾಗಿದೆ. ನಾಟಕದ ಮೊದಲರ್ಧ ಭಾಗದ ಸಂಭಾಷಣೆ ಪ್ರಾದೇಶಿಕವಾಗಿದ್ದು, ನಾಡಿನ ಉಳಿದ ಭಾಗದ ಮಕ್ಕಳಿಗೆ ಕೊಂಚ ತೊಡಕಾಗುತ್ತದೆ ಎಂಬ ಹೇಳಿಕೆಯೂ ಇದೆ.

## ಬೆಳೆದವರು

ಎಂ. ಅಬ್ದುಲ್ ರಹಮಾನ್ ಪಾಶ, ಮನೌ ಪ್ರಕಾಶನ, ಮಂಗಳೂರು 1987. ಇದರಲ್ಲಿ 'ಬೆಳೆದವರು' ನಾಟಕ ಜಿ.ಪಿ. ರಾಜರತ್ನಂ ದತ್ತಿ ನಿಧಿ ಬಹುಮಾನ ವಿಜೇತ ಕೃತಿ.

ಮಕ್ಕಳ ಮಾನಸ ಲೋಕದ ಗಂಭೀರ ಅಧ್ಯಯನದಲ್ಲಿ ನಿರತರಾಗಿರುವ ಪಾಶರು ಮಕ್ಕಳನ್ನು ಪುಸ್ತಕ ಲೋಕದಾಚೆಗೆ ಇರುವ ವಾಸ್ತವದ ಸವಾಲುಗಳಿಗೆ ಒಡ್ಡಿ, ಅಕ್ಷರ ಲೋಕದ ಮಿತಿಗಳ ಜೊತೆಗೇ ಅನುಭವ ಲೋಕದ ಅಂತಿಮತೆಯ ಆನಂದವನ್ನೂ ಧ್ವನಿಸುತ್ತಾರೆ. ಪ್ರಾಯೋಗಿಕವಾಗಿ ಮಕ್ಕಳಿಗೆ ಆಧುನಿಕ ರಂಗಭೂಮಿಯ ತಂತ್ರಗಳನ್ನು ತೋರಿಸಿ ಕೊಡಬಲ್ಲ, ಸಾಧ್ಯತೆಗಳನ್ನು ತೆರೆದು ತೋರಬಲ್ಲ ಕೃತಿ. ರಂಗಪ್ರವೇಶ, ನಿಷ್ಕ್ರಮಣಗಳ ನಿಯೋಜನೆ, ರಂಗದ ಮೇಲಿನ ಚಲನೆ, ಸಮೂಹ ಸಂಯೋಜನೆ, ದೃಶ್ಯಗಳ ವಿಲೀನ, ವಿಭಜನೆಯೇ ಮುಂತಾದ ರಂಗತಂತ್ರ ಹಾಗೂ ನಿರ್ವಹಣೆಯ ಪ್ರಾಥಮಿಕ ಪಾಠಗಳನ್ನು ಮಕ್ಕಳಿಗೆ ಕಲಿಸಿಕೊಡಲು ಅಭ್ಯಾಸ ಕೃತಿಯಾಗಬಲ್ಲ ಈ ನಾಟಕ ತಿಳಿಹಾಸ್ಯದಿಂದ ಕೂಡಿದೆ.

## ನೀ ನನಗಿದ್ದರು ನಾ ನಿನಗೆ

ಪಾಶಾರವರ ಎರಡನೇ ನಾಟಕ 'ನೀ ನನಗಿದ್ದರೆ ನಾ ನಿನಗೆ' ಹೆಸರೇ ಹೇಳುವಂತೆ ಬದುಕಿನ ಪರಸ್ಪರ ಅವಲಂಬನೆಯ ಅಗತ್ಯವನ್ನೂ ಅನಿವಾರ್ಯತೆಯನ್ನೂ ಹೇಳುವ ನಾಟಕ. ಮೂಲತಃ ಇದು ರೇಡಿಯೋಕ್ಕಾಗಿ ಬರೆದ ಕೃತಿಯಾದ್ದರಿಂದ ಹೆಚ್ಚಾಗಿ ಧ್ವನಿ ಪರಿಣಾಮಗಳನ್ನು ನೆಚ್ಚಿಕೊಂಡಿರುವಂತದ್ದು. ಶ್ರಮ ಹಾಗೂ ಸಾಹಸವನ್ನು ತಿರಸ್ಕಾರದಿಂದ ನೋಡುವುದರ ಅತ್ಯಂತಿಕ ದುರಂತದ ವಿರುದ್ಧ ಎಚ್ಚರಿಸುವ ಈ ನಾಟಕ, ಸ್ವಾರಸ್ಯ ಉಳಿಸಿಕೊಳ್ಳುತ್ತಾ ತನ್ನ ಗತಿಶೀಲತೆಯಿಂದಾಗಿ ಕುತೂಹಲ ಕಾಯ್ದುಕೊಳ್ಳುತ್ತದೆ.

## ದುಂಡಿರಾಜರ ಅಜ್ಜಿಕಥೆ

ಅಜ್ಜಿಯೇ ಕಥೆ ಹೇಳಿ ಶುರುವಾಗುವ ನಾಟಕದಲ್ಲಿ ರಾಜನ 8ನೇ ರಾಣಿ ಗರ್ಭಿಣಿಯಿದ್ದು ರಾಜಕುವರನ ಉತ್ಕಟ ನಿರೀಕ್ಷೆಯಲ್ಲಿದ್ದರೂ 'ಹೆಣ್ಣು ಹುಟ್ಟಿ ಹುಣ್ಣಾದಂತೆ'

ಈ ನಾಟಕ ಬಿಚ್ಚಿಕೊಳ್ಳುತ್ತದೆ. ರಾಜಕುಮಾರಿ ಹೆಣ್ಣಿನಂತೆ ಬೆಳೆಯದೆ ಗಂಡಿನಂತೆ ಕತ್ತಿವರಸೆ, ಕುದುರೆ ಸವಾರಿ ಇತ್ಯಾದಿ ವಿಷಯಗಳಲ್ಲಿ ಪರಿಣಿತಿಯನ್ನು ಪಡೆಯುತ್ತಾ ಬೆಳೆಯುತ್ತಾಳೆ. ಕಾರಣಾಂತರದಿಂದ ರಾಜನಿಂದ ಹೊರದೂಡಲ್ಪಟ್ಟ ರಾಜಕುಮಾರಿ ಅಡವಿಯಲ್ಲಿ ಪ್ರಾಣಿ ಪಕ್ಷಿಗಳೊಂದಿಗೆ ಬೆಳೆಯುತ್ತಾಳೆ. ರಾಜ ಮತ್ತು ರಾಜಕುಮಾರರು ಶತ್ರು ದಾಳಿಗೆ ಸಿಕ್ಕಿ ಸೋತಾಗ, ಈಕೆ ಹೋರಾಡಿ ಗೆದ್ದು ತನ್ನ ತಂದೆಗೆ ಮರಳಿ ರಾಜ್ಯವನ್ನು ದೊರಕಿಸಿಕೊಡುತ್ತಾಳೆ. ಹೆಣ್ಣು ಅಬಲೆಯಲ್ಲ, ಸಬಲೆ ಎಂಬ ಸ್ತ್ರೀಪರ ಧೋರಣೆಯುಳ್ಳ ಈ ನಾಟಕ ಒಂದು ಉತ್ತಮ ಮಕ್ಕಳ ನಾಟಕ.

## ಗಿಡ್ಡೊ ಟೇಲರನ ಸಾಹಸಗಳು

ಬಿ.ಟಿ. ದೇಸಾಯಿ; ಅಕ್ಷರ ಪ್ರಕಾಶನ; 1990. ಮಕ್ಕಳಿಗೆ ನಗೆಯನ್ನು ಉಕ್ಕಿಸುವ ವಿಷಯಗಳಲ್ಲಿ ವ್ಯಕ್ತಿಯ ದಡ್ಡತನವೂ ಒಂದು. ಆದರೆ ಗಿಡ್ಡೊ ಟೇಲರನ ಸಾಹಸದಲ್ಲಿ ಬರುವ ಗಿಡ್ಡೊ ಟೇಲರ್ ಪೂರ್ತಿಯಾಗಿ ದಡ್ಡನೇನೂ ಅಲ್ಲ. ದಡ್ಡನಂತಿರುವ ಒಬ್ಬ ವಿಕ್ಷಿಪ್ತ ವ್ಯಕ್ತಿ. ಅವನ ಪೆದ್ದತನಕ್ಕೆ ಕೂಡ ಚುರುಕುತನದ ಹೊರಲೇಪನವಿದೆ. ಅಥವಾ ಚುರುಕುತನಕ್ಕೆ ದಡ್ಡತನದ ಹೊರಲೇಪ. ಇಡೀ ನಾಟಕ ಈ ಟೆಡ್ಡಿ ಸ್ಪೆಷಲಿಸ್ಟನ ಜಾಣದಡ್ಡತನವನ್ನು ಆಧರಿಸಿ ನಡೆಯುತ್ತದೆ. ಒಬ್ಬ ಸಾಮಾನ್ಯ ಸಿಂಪಿಗ, ಅನಿರೀಕ್ಷಿತ ಪ್ರಸಂಗಗಳಲ್ಲಿ ಬಳಸಿದ ಬುದ್ಧಿ ಶಕ್ತಿಯಿಂದ ಇಡೀ ರಾಜ್ಯಕ್ಕೆ ಬೇಕಾದವನಾಗುತ್ತಾನೆ. ಚತುರತೆಯಿಂದ ದುಷ್ಟಶಕ್ತಿಗಳನ್ನು ದಮನ ಮಾಡಿ ರಾಜಕುಮಾರಿಯನ್ನು ಮದುವೆಯಾಗಿ ಕಡೆಗೆ ಇಡೀ ರಾಜ್ಯಕ್ಕೆ ಒಡೆಯನಾಗುತ್ತಾನೆ. ಭ್ರಮೆ, ಕಲ್ಪನೆಗಳ ಹಳಿಗಳ ಮೇಲೆ, ಕುಣಿತ ಹಾಡುಗಳ ಸಂವಾದದೊಂದಿಗೆ ಇಡೀ ರಂಗ ಮಕ್ಕಳ ಮನೋರಂಜನೆಯ ತಾಣವಾಗುತ್ತದೆ. ಈ ನಾಟಕ ಹಲವು ಕಡೆ ಯಶಸ್ವಿಯಾಗಿ ರಂಗದ ಮೇಲೆ ಪ್ರದರ್ಶನಗೊಂಡಿದೆ.

## ಮಕ್ಕಳ ರಾಜ್ಯ ; ಎಸ್.ಕೆ. ಶರ್ಮಾ

ಈ ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದರೂ ಮಕ್ಕಳಿಗೆ ಬಂದಿಲ್ಲ. ಇಂದಿನ ಮಕ್ಕಳು ನಾಳಿನ ಸಮರ್ಥ ಪ್ರಜೆಗಳಾಗಬೇಕಾದರೆ, ಅನ್ಯಾಯವನ್ನು ವಿರೋಧಿಸುವ ಸಾಮರ್ಥ್ಯ ಪಡೆಯಬೇಕು ಎಂಬುದು ಸ್ವತಃ ನ್ಯಾಯವಾದಿಗಳಾಗಿರುವ ನಾಟಕಕಾರರ ನಿರ್ಣಯ.

## ಕಪ್ಪು ಕಾಗೆಯ ಹಾಡು

ಮೂರ್ತಿ ದೇರಾಜೆ; ಸಮನ್ವಯ ಪ್ರಕಾಶನ; ವಿಟ್ಲ. ಇದು ಮೇಲ್ನೋಟಕ್ಕೆ ನೀತಿಯ ಪಾಠವನ್ನು ಬೋಧಿಸುವಂತೆ ಇದೆ ಎನ್ನಿಸಿದರೂ ನಾಟಕ ಅದನ್ನು ಮೀರಿ

ನಿಲ್ಲುತ್ತದೆ. ಇಡೀ ನಾಟಕದಲ್ಲಿ ಒಂದು ರೀತಿಯ ಲೈಫ್ ಇದೆ. ಇದರ ಕತೆ ತೀರಾ ಸರಳವಾಗಿದೆ. ಒಂದು ದಿನ ಕೆಲವು ಹಕ್ಕಿಗಳು ಸೇರಿ ರುಚಿಯಾದ ತಿಂಡಿಗಳನ್ನು ತಯಾರಿಸುತ್ತವೆ. ಅದರ ಪರಿಮಳದಿಂದ ಆಕರ್ಷಿತವಾದ ಕಾಗೆಯೊಂದು ಆಸೆಯಿಂದ ಹಾರಿ ಬಂದು, ತನಗೂ ಒಂದಿಷ್ಟು ತಿಂಡಿ ಕೊಡಲು ಬೇಡುತ್ತದೆ. ಹಕ್ಕಿಗಳು ಕಾಗೆಯ ಕಪ್ಪನ್ನು ಅಪಹಾಸ್ಯ ಮಾಡುತ್ತವೆ. ಕೊನೆಗೆ ಹಕ್ಕಿಯ ರಾಣಿ ನೀನು ಮಿಂದು ಬಂದರೆ ತಿಂಡಿ ಕೊಡುತ್ತೇನೆಂದು ಹೇಳುತ್ತದೆ. ಕಾಗೆ ಬಾವಿಗೆ ಹೋಗುತ್ತದೆ. ಬಾವಿಯನ್ನು ನೀರು ಕೇಳಿದಾಗ, ಬಿಳಿ ಕೊಕ್ಕರೆ ನೀನು ಕಪ್ಪು ಎಂದು ಹೀಯಾಳಿಸಿ, ಮಡಕೆ ತಂದರೆ ನೀರು ಕೊಡುವುದಾಗಿ ಹೇಳುತ್ತದೆ. ಕಾಗೆ ಕುಂಬಾರನಲ್ಲಿಗೆ ಹೋಗಿ. ಅಲ್ಲಿಂದ ಕಮ್ಮಾರನಲ್ಲಿಗೆ... ಹೀಗೆ ಸಾಗಿ ಕೊನೆಗೆ ಹಕ್ಕಿಗಳ ಶರತ್ತು ತೀರಿಸುತ್ತದೆ. ಆದರೂ ಹಕ್ಕಿಗಳು ನೀನು ಕಪ್ಪು ಎಂದು ಹೀಯಾಳಿಸಿದಾಗ ಕಾಗೆ ಮೂರ್ಛೆ ಹೋಗುತ್ತದೆ. ಹಕ್ಕಿ ಗುಂಪಿನ ಮರಿಹಕ್ಕಿಯ ಉಪಚಾರದಿಂದ ಎದ್ದು, ಅದರ ಕರುಣೆಯಿಂದ ತಿಂಡಿ ಪಡೆಯುತ್ತದೆ. ಅಲ್ಲಿ ಮುದ್ದು ಹಕ್ಕಿಗಳ ಚಲನವಲನ, ಸಂಭಾಷಣೆ ಚೇತೋಹಾರಿಯಾಗಿ ಮೂಡಿ ಬಂದಿದೆ.

## ಸಾಣೆಭಟ್ಟನ ಸ್ವರ್ಗದ ಕನಸು

ಡಾ. ಗಜಾನನ ಶರ್ಮ. ಅಕ್ಷರ ಪ್ರಕಾಶನ ಹೆಗ್ಗೋಡು. "ಮಕ್ಕಳ ಮನೋಲೋಕದ ವಿಶೇಷಗಳನ್ನು ಗುರುತಿಸುವ ಒಂದು ಕಥೆ. ಅದನ್ನು ತುಂಬ ಸ್ವಾರಸ್ಯಕರವಾದ ಘಟನೆ, ಸನ್ನಿವೇಶ ಮತ್ತು ಮಾತುಗಾರಿಕೆಯ ಹದದಲ್ಲಿ ಲೇಖಕರು ನಾಟ್ಯೀಕರಿಸಿದ್ದಾರೆ." – ಎಂಬುದು ಕೆ.ವಿ. ಅಕ್ಷರ ಅವರ ಅಭಿಪ್ರಾಯ. ಹಲವು ರಂಗತಂಡಗಳಿಂದ ಯಶಸ್ವಿಯಾಗಿ ಪ್ರಯೋಗಿಸಲ್ಪಟ್ಟ ನಾಟಕ.

## ಗೊಂಬೆ ರಾವಣ

ಡಾ. ಗಜಾನನ ಶರ್ಮ. ಅಕ್ಷರ ಪ್ರಕಾಶನ. ಹೆಗ್ಗೋಡು. "ಪುರಾಣದ ಒಂದು ಮೂಲ ಘಟನೆಯನ್ನು ಎತ್ತಿಕೊಂಡು ಹೊರಡುವ ಈ ನಾಟಕವು, ಅದರ ಪರಿಧಿಯ ಸುತ್ತಲೇ ಸುತ್ತುತ್ತ, ಇವತ್ತಿನದೋ ಅವತ್ತಿನದೋ ಎಂದು ಗೊತ್ತಾಗದಂಥ ಕಥನವೊಂದನ್ನು ಕಟ್ಟುತ್ತದೆ. ಈ ದೃಷ್ಟಿಯಿಂದ ಈ ನಾಟಕವು ಕುವೆಂಪುರವರ 'ನನ್ನ ಗೋಪಾಲ', ಬಿ.ವಿ ಕಾರಂತರ 'ಅಳಿಲು ರಾಮಾಯಣ' ಮುಂತಾಗಿ ಕನ್ನಡದಲ್ಲೇ ಬಂದ ಇಂಥ ಮಕ್ಕಳ ನಾಟಕಗಳ ವಿಶೇಷ ಧಾರೆಯನ್ನು ಮುಂದುವರೆಸುವ ಕೃತಿ ಎನ್ನಬಹುದು"– ಇದು ನಾಟಕದ ಮುನ್ನುಡಿಯಲ್ಲಿ ಕೆ.ವಿ. ಅಕ್ಷರ ಹೇಳಿರುವ ಮಾತು. ಹಲವು ಕಡೆ ತುಂಬ ಯಶಸ್ವಿಯಾಗಿ ಪ್ರದರ್ಶಿತಗೊಂಡ ನಾಟಕ.

ಮಿಸ್ ಪಾಯಿಂಟ್; ಕುಮಾರಿ ಬಿಂದು.

ರೇಖಾಗಣಿತದ (ಜ್ಯಾಮಿಟ್ರಿ) ಮೂಲಸೂತ್ರಗಳನ್ನು ಮಕ್ಕಳಿಗೆ ರಂಜನೀಯವಾಗಿ ರಂಗಮಾಧ್ಯಮದ ಮೂಲಕ ತಿಳಿಸಿ ಕೊಡುವ ಈ ನಾಟಕದ ರಚನೆ ಕೆ. ಮಧುಕರ. ಮೂಲ Let us play geometry ಎಂಬ ಇಂಗ್ಲೀಷ್ ಕಥೆ. ಬಿಂದುವಿನ ಸುತ್ತ ತಿರುಗುವ ಮಿಸ್ ಪಾಯಿಂಟ್ ಮಕ್ಕಳ ಶೈಕ್ಷಣಿಕ ಅಗತ್ಯಗಳಿಗೆ ರಂಗಭೂಮಿ ನೀಡಬಲ್ಲ ಕೊಡುಗೆಗೆ ಒಂದು ಉದಾಹರಣೆ. ನಿಸ್ಸತ್ವ ವಿಷಯದ ಚೌಕಟ್ಟಿನೊಳಗೆ ಪ್ರಾಣಸಂಚಾರ ಮಾಡಿಸುವ ನಾಟಕದ ಸಂವಿಧಾನ ಅದ್ಭುತವಾಗಿ ಜ್ಯಾಮಿಟ್ರಿ ಬಾಕ್ಸಿನೊಳಗಿನ ಕೋನಮಾಪಕ, ಇಂಚುಪಟ್ಟಿ, ಪೆನ್ಸಿಲ್, ರಬ್ಬರ್, ತ್ರಿಜ್ಯ, ತ್ರಿಕೋಣ, ಚೌಕ, ವರ್ತುಲ ಎಲ್ಲವೂ ಜೀವಂತಗೊಳ್ಳುತ್ತ ಸಾಗುವ ಈ ನಾಟಕದಲ್ಲಿ, ರೇಖಾಗಣಿತದ ಕುರಿತು ಅನಾಸಕ್ತಿ ಇದ್ದವರೂ ಅದನ್ನು ಇಷ್ಟಪಡುವಂತೆ ಮಾಡಬಲ್ಲ ಸಾಮರ್ಥ್ಯ ಇದೆ. ಮಿಸ್ ಪಾಯಿಂಟ್ ಯಾತ್ರೆಗೆ ಹೊರಡುತ್ತಾಳೆ. ತ್ರಿಕೋನ, ವರ್ತುಲ, ಚೌಕ ರಾಜ್ಯವನ್ನು ಕಾಣುತ್ತಾಳೆ. ರಬ್ಬರ್ ರಾಕ್ಷಸನ ಉಪಟಳದಿಂದ ನಲುಗಿದರೂ, ಕೊನೆಗೆ ಎಲ್ಲರೂ ಸೇರಿ ಅವನಿಗೆ ಬುದ್ಧಿ ಬರುವಂತೆ ಮಾಡುವುದರೊಂದಿಗೆ ನಾಟಕ ಮುಕ್ತಾಯ. ಔಚಿತ್ಯಪೂರ್ಣವಾಗಿ ರಂಗಮುಖೇನ ಶಿಕ್ಷಣ ನೀಡುವ ಇಂತಹ ನಾಟಕ ಇನ್ನಷ್ಟು ಬರಬೇಕು. ಇದು ಕಿನ್ನರಮೇಳದಿಂದ ಯಶಸ್ವಿಯಾಗಿ ಪ್ರದರ್ಶನಗೊಂಡಿದೆ.

## ಎ.ಎಸ್. ಮೂರ್ತಿಯವರ ನಾಟಕಗಳು

ರಂಗಭೂಮಿ, ಬೀದಿನಾಟಕ, ಆಕಾಶವಾಣಿ ಮೊದಲಾದ ಸಮೂಹಮಾಧ್ಯಮಗಳ ಮೇಲೆ ಹಿಡಿತವಿದ್ದ ಅನುಭವಿ ಶ್ರೀ ಎ.ಎಸ್. ಮೂರ್ತಿ 1990ರ ಸುಮಾರಿಗೆ ಮಕ್ಕಳ ನಾಟಕ ರಚನೆಗೆ ಕೈ ಇಟ್ಟರು. ಅವರ ನಾಟಕ ರಚನೆಯ ಆಸಕ್ತಿಗೆ ಇಂಬಾದ ವಿಷಯ, ಆ ಕುರಿತಾದ ವಿಚಾರಗಳನ್ನು "ಐದು ಮಕ್ಕಳ ನಾಟಕಗಳು" ಎಂಬ ಪುಸ್ತಕದಲ್ಲಿ ಅವರೇ ಹೀಗೆ ಹೇಳಿಕೊಂಡಿದ್ದಾರೆ:

"ಪ್ರತಿ ವರ್ಷವೂ ಎಲ್ಲ ಶಾಲೆಗಳಲ್ಲಿ ವಾರ್ಷಿಕೋತ್ಸವ ನಡೆದೇ ನಡೆಯುತ್ತದೆ. ಕೊನೆಯ ನಿಮಿಷದಲ್ಲಿ ಉಪಾಧ್ಯಾಯರು ನಾಟಕಕ್ಕಾಗಿ ತಡಕಾಡುತ್ತಾರೆ. ಆಗ ದಕ್ಕುವುದು ಕೆಲವೇ ಕೆಲವು ಮಕ್ಕಳ ನಾಟಕಗಳು. ಹೀಗಾಗಿ 'ಹಾಡಿದ್ದೇ ಹಾಡೋ ಕಿಸಬಾಯಿ ದಾಸ' ಎಂಬಂತೆ ಅದೇ ಹಳೇ ನಾಟಕಗಳನ್ನು ಹೊಸ ರಂಗತಂತ್ರದೊಂದಿಗೆ ಪ್ರಯೋಗಿಸುವ ಮನ ಮಾಡಬೇಕು. ನಮ್ಮ ಸಾಹಿತ್ಯ ವಲಯದ ದಿಗ್ಗಜರಿಗೆ ಮಕ್ಕಳ ನಾಟಕ ರಚನೆ ಏಕೆ ಅಪ್ರಿಯವಾಯಿತು ಎಂಬುದಕ್ಕೆ ಸರಿಯಾದ ಉತ್ತರ ಸಿಕ್ಕಿಲ್ಲ. ಬೆಂಗಳೂರು, ತುಮಕೂರು ಮುಂತಾದ ಕಡೆ ಮಕ್ಕಳ ನಾಟಕ ಸ್ಪರ್ಧೆ ನಡೆಯುವುದು

ನಿಜ. ಮಕ್ಕಳ ನಾಟಕಗಳ ಅಭಾವದಿಂದಾಗಿ ದೊಡ್ಡವರು ಅಭಿನಯಿಸಿದ 'ಮೇಜರ್' ನಾಟಕಗಳನ್ನು ಮಕ್ಕಳು ಇಲ್ಲಿ ಆಡಿವೆ. ಹಾಡು. ಕುಣಿತ, ಚಿತ್ರಕಲೆ, ಸಂಗೀತ, ನೃತ್ಯ ಕಲಿತ ಮಕ್ಕಳ ದಂಡು ಲವಲವಿಕೆಯಿಂದ ಹೊಸ ನಾಟಕವಾಡುವ ಉತ್ಸಾಹ ತೋರಿದ್ದು ಕಂಡಾಗ ಅವರೆಲ್ಲರ ಪ್ರತಿಭೆಗೆ ಕನ್ನಡಿ ಹಿಡಿಯುವಂತೆ ನಾಟಕ ರಚಿಸುವ ಮನಸ್ಸಾಯಿತು. ಜಿ.ಪಿ. ರಾಜರತ್ನಂ ಪಾಠ ಮಾಡುತ್ತ ಮಕ್ಕಳಿಗಾಗಿಯೇ ಪದ್ಯ ರಚಿಸಿದಂತೆ 'ಬಿಂಬ'ದ ಕಾರಣವಾಗಿ ಮಕ್ಕಳ ನಾಟಕಗಳ ರಚನೆಯತ್ತ ಮನಸ್ಸು ಮಾಡಿದೆ"[23]

ಈ ಪುಸ್ತಕವಲ್ಲಿರುವ ಐದು ನಾಟಕಗಳು ಹೀಗಿವೆ: 1. ಮಂತ್ರವಾದಿ, 2. ಓ ನನ್ನ ಮರವೇ, 3. ಚಿನ್ನದ ಚೆಂಡು, 4. ಹಾಡುಹಕ್ಕಿ, 5. ಕಾಶಿ–ಕಿಟ್ಟಿ

ತಮ್ಮ 'ಮಂತ್ರವಾದಿ' ನಾಟಕವನ್ನು 'ಬಿಂಬ' ತಂಡದಿಂದ ಪ್ರದರ್ಶಿಸಿದ ಕುರಿತು ಮೂರ್ತಿ ಹೀಗೆ ಹೇಳುತ್ತಾರೆ: 'ಮಂತ್ರವಾದಿ' ಶಿಸ್ತಿನ ಅಮೆಚೂರು ತಂಡವೊಂದು ಅಭಿನಯಿಸಿದರೆ ನೀಡುವ ಪರಿಣಾಮ 'ಬಿಂಬ' ಮಕ್ಕಳ ತಂಡ ನೀಡಿತು. 'ಹಾಸಿಗೆ ಇದ್ದಷ್ಟು ಕಾಲು ಚಾಚು–ಹತ್ತಿದ ಏಣಿ ಒದೆಯುವುದು ಒಳ್ಳೆಯದಲ್ಲ' ಎಂಬ ನೀತಿಯನ್ನು ಹಾಡು–ಕುಣಿತಗಳೊಂದಿಗೆ ಹೇಳಿದ ಪ್ರಯೋಗ ವಿಷುಯಲ್ ಗ್ರಾಂಜರ್ ನೀಡುವಲ್ಲಿಯೂ ಯಶಸ್ವಿ ಎನಿಸಿತು. ಈ ಸಂದರ್ಭದಲ್ಲಿ ನಾಟಕ ನೋಡಿ ಮೆಚ್ಚಿದ ಹಲವು ಪ್ರಸಿದ್ಧರ ವಿಮರ್ಶೆಯನ್ನೂ ನಾಟಕ ಪುಸ್ತಕದಲ್ಲೇ ನೀಡಲಾಗಿದೆ. "'ಹಾಡಿದ್ದೇ ಹಾಡೋ ಕಿಸಬಾಯಿ ದಾಸ' ಎಂಬಂತೆ ನೋಡಿದ ನಾಟಕಗಳನ್ನೇ ನೋಡಿ ನೋಡಿ ಸುಸ್ತಾದ ಕಣ್ಣುಗಳಿಗೆ ಹೊಸ ಹುಮ್ಮಸ್ಸು, ತೇಜಸ್ಸು ಹಾಗು ಹೊಸ ನೋಟ ನೀಡಿದ ನಾಟಕ ಬಿಂಬದ ಮಂತ್ರವಾದಿ. ನಗಿಸುತ್ತ, ನಲಿಸುತ್ತ ಅರ್ಥಪೂರ್ಣ ಅಂಶಗಳಿಗೆ ನೀರೆರೆದು ಪೋಷಿಸುವ ಮಕ್ಕಳ ಮನೋವಿಕಾಸಕ್ಕೆ ಜ್ಞಾನಾರ್ಜನೆಗೆ ನೆರವಾಗುವ ಇಂಥ ನಾಟಕಗಳು ಏಕಿಂದು ಬರುತ್ತಿಲ್ಲ ಎಂದು ಚಿಂತಿಸುವಂತಾಯಿತು" ಇದೇ ಧಾಟಿಯಲ್ಲಿ ಹತ್ತು ಹಲವು ಪ್ರಮುಖರು ಈ ನಾಟಕದ ಯಶಸ್ಸನ್ನು ಹಾಡಿ ಹೊಗಳಿರುವುದನ್ನು ಆ ಪುಸ್ತಕವಲ್ಲಿಯೇ ನೀಡಲಾಗಿದೆ.

ಇನ್ನು ಈ ಸಂಗ್ರಹದ ಎರಡನೇ ನಾಟಕ 'ಓ ನನ್ನ ಮರವೇ' ಕುರಿತು ಎ.ಎಸ್. ಮೂರ್ತಿಯವರು ಹೀಗೆ ಹೇಳಿಕೊಂಡಿದ್ದಾರೆ. "ಮಂತ್ರವಾದಿ ಬರೆದು ಯಶಸ್ವಿಯಾದ ನಂತರವೇ ಪರಿಸರ ಪ್ರೇಮ ಕುರಿತು 'ಓ ನನ್ನ ಮರವೇ' ಬರೆವ ಮನಸಾದದ್ದು. ಆಗ ನನ್ನ ಪಾಲಿಗೆ 'ಬಿಂಬ' ಒಂದು ಲ್ಯಾಬೊರೇಟರಿ ಆಯಿತು. ವಿಜ್ಞಾನಿ ಅನೇಕ ಪ್ರಯೋಗಗಳನ್ನು ಮಾಡಿ ಅಂತಿಮವಾಗಿ ತನ್ನ ಸಂಶೋಧನೆ ಜಗತ್ತಿಗೆ ಸಾರುವಂತೆ ಬಿಂಬ ಶನಿವಾರದ ಶಾಲೆಯಲ್ಲಿ ಮಕ್ಕಳಿಗೆ ಎಲ್ಲ ಕಲೆಗಳಲ್ಲಿ ತರಬೇತಿ ನೀಡಿದ ನಂತರ ಸಾಹಿತ್ಯ ಕೃತಿಯೊಂದು ರಂಗದಲ್ಲಿ ಸಾಕ್ಷಾತ್ಕಾರ ಪಡೆವ ಸಾಧ್ಯತೆ ಖುಷಿ ತಂದ ಅಂಶವೆನಿಸಿತು. ಮರದೊಂದಿಗೆ ಮಗುವಿನ ಮಾತುಕತೆಯಿದ್ದಾಗ ಮಾತ್ರ ಈ ನಾಟಕ ಯಶಸ್ವಿಯಾಗುವುದು ಎನಿಸಿದಾಗ ಕಲಾವಿದ ಎ.ಎಂ. ಪ್ರಕಾಶ್ ದೊಡ್ಡ ಮರಕ್ಕೆ ಕಣ್ಣು

ಬಾಯಿ ಇಟ್ಟು, ಅದು ತುಟಿ ಚಲಿಸಿ ಮಾತಾಡುವಂತೆ ಮಾಡಿದ್ದು ಈ ಮಕ್ಕಳ ನಾಟಕ ಕ್ಲಿಕ್ ಆಗಲು ಕಾರಣವಾಯಿತು. ಫ್ಯಾಂಟಸಿ ಮಕ್ಕಳಿಗೆ ಪ್ರಿಯ. ಅದರಿಂದ ಕನಸಿನ ದೃಶ್ಯವೊಂದು ಕಥೆಗೆ ಪೂರಕವಾಗಿ ತೇಲಿ ಬರಲು ಚಂದ್ರಕುಮಾರ್ ಸಿಂಗ್ ಕಾರಣರಾದರು. ಹಾಡು, ಕುಣಿತಗಳು ಈ ನಾಟಕದ ಅವಿಭಾಜ್ಯ ಅಂಗವಾಗಿದ್ದು, 'ಓ ನನ್ನ ಮರವೇ' ಜನಪ್ರಿಯವಾಗಲು ಮುಖ್ಯ ಕಾರಣವಾಯಿತು. ಮಕ್ಕಳು ಕೂತರೂ ಚೆನ್ನ, ಎಡವಿದ್ದರೂ ಚೆನ್ನ ಎಂಬ ಯಾವುದೇ ರಿಯಾಯಿತಿ ನನಗೆ ಬೇಕಿರಲಿಲ್ಲ. ಮಕ್ಕಳೊಂದಿಗಿನ ಒಡನಾಟ, ಮಾತುಕತೆ, ಪಾಠ ಮಾಡುವಾಗಿನ ಮಕ್ಕಳ ಇಂಪ್ರೋವೈಸೇಶನ್‌ನಿಂದಲೂ ನಾನು ಬಹಳಷ್ಟು ಕಲಿತೆ"[25]

ಈ ನಾಟಕ 50 ಬಾರಿ ಪ್ರದರ್ಶನಗೊಂಡ ಜನಪ್ರಿಯ ಮಕ್ಕಳ ನಾಟಕವೆಂದು ಪುಸ್ತಕದಲ್ಲಿ ಹೇಳಲಾಗಿದೆ. ಇದೇ ಪುಸ್ತಕದಲ್ಲಿ ನೀಡಿದ ಹಲವಾರು ವಿಮರ್ಶೆಗಳಲ್ಲಿ ಒಂದು ಹೀಗೆ ಹೇಳುತ್ತದೆ : "ಮಕ್ಕಳ ಮನವನ್ನು ಕಿನ್ನರಲೋಕಕ್ಕೆ ಕರೆದೊಯ್ದ ಸಿದ್ದನ ಕನಸಿನ ದೃಶ್ಯಗಳು, ಮಾತಾಡುವ ಮರದ ಆತ್ಮೀಯ ಮಾತುಕತೆ, ಕನಸಿನಲ್ಲಿ ತೇಲಿ ಬಂದ ತಂದೆ ತಾಯಿ ದೃಶ್ಯಗಳು ಖುಷಿ ನೀಡಿದರೆ, ಮರಗಳನ್ನು ಕಡಿದಾಗ ಉಂಟಾದ ನೋವು ಮಕ್ಕಳ ಕಣ್ಣಲ್ಲಿ ನೀರು ತರಿಸಿತ್ತು. ಗಾಳಿ-ಮಳೆಗಳಿಗೆ ಕಾರಣವಾದ ಮರಗಳ ಕಥೆಯನ್ನು ಮಾರ್ಮಿಕವಾಗಿ ಹೇಳಿದ ಗೌರಿದತ್ತು ನಿರ್ದೇಶನದ ಎ.ಎಸ್. ಮೂರ್ತಿಯವರ ಈ ನಾಟಕದಲ್ಲಿ 40ಕ್ಕೂ ಹೆಚ್ಚು ಮಕ್ಕಳು ಅಭಿನಯಿಸಿದ್ದರು. ಈ ನಾಟಕ ರಂಜನೀಯವೂ ಹೌದು – ಬೋಧಪ್ರದವೂ ಹೌದು" ಈ ತರದ ಹತ್ತೆಂಟು ವಿಮರ್ಶೆಗಳನ್ನು ಈ ಪುಸ್ತಕದಲ್ಲಿ ಸೇರಿಸಲಾಗಿದೆ. ಇದಲ್ಲದೆ ಮಕ್ಕಳಿಗಾಗಿ "ನಕ್ಷತ್ರ ಮಾಲೆ" ಎಂಬ ಸಂಕಲನದಲ್ಲಿ 13 ಶಿಶುಗೀತೆಗಳು ಹಾಗೂ 13 ನಾಟಕಗಳನ್ನು ಮಕ್ಕಳಿಗಾಗಿ ರಚಿಸಿದ್ದಾರೆ. ಅಲ್ಲದೇ "ಹೋರಾಟದ ಹಾದಿಯಲ್ಲಿ", "ಆಮನಿ ಈಮನಿ", "ಗುಮ್ಮ", "ಯಾರಿವನು" ಎಂಬ ಮಕ್ಕಳ ನಾಟಕಗಳನ್ನೂ ರಚಿಸಿದ್ದು ಈ ನಾಟಕಗಳನ್ನೂ ವಿಜಯನಗರ ಬಿಂಬ ಹಲವಾರು ಪ್ರದರ್ಶನಗಳನ್ನು ನೀಡಿದೆ. ಅಲ್ಲದೇ ನಾಟಕೋತ್ಸವದಲ್ಲಿ ಪ್ರದರ್ಶಿಸಿ ಬಹುಮಾನವನ್ನೂ ಗಳಿಸಿದೆ.

## 'ವೈದೇಹಿ'ಯವರ ಮಕ್ಕಳ ನಾಟಕಗಳು

ಇತ್ತೀಚಿನ ದಿನಗಳಲ್ಲಿ ಕನ್ನಡದ ಪ್ರಮುಖ ಮಕ್ಕಳ ನಾಟಕಕಾರರೆಂಬ ಹೆಸರಿಗೆ ಪೂರ್ಣ ಭಾಜನರಾದವರು ಲೇಖಕಿ ವೈದೇಹಿ. 'ಚಿಣ್ಣ-ಬಣ್ಣ', 'ರಂಗಾಯಣ', 'ಕಿನ್ನರ ಮೇಳ', 'ನೀನಾಸಂ' ಮುಂತಾದ ಪ್ರತಿಷ್ಠಿತ ಸಂಸ್ಥೆಗಳೆಲ್ಲವೂ ಅವರ ನಾಟಕ ಆಡಿವೆ. ಇನ್ನೂ ವಿಸ್ತರಿಸಿ ಹೇಳುವುದಾದರೆ ಇಂತಹ ಪ್ರತಿಷ್ಠಿತ ನಾಟಕ ತಂಡಗಳಿಗಾಗಿಯೇ ಕೋರಿಕೆಯ ಮೇರೆಗೆ ನಾಟಕ ಬರೆದು ಕೊಟ್ಟವರು ಶ್ರೀಮತಿ ವೈದೇಹಿ. ತುಮರಿಯ

ಕೆ.ಜಿ. ಕೃಷ್ಣಮೂರ್ತಿಯವರ ಕಿನ್ನರ ಮೇಳದ ನಾಟಕ ಸಂಕಿರಣದ ಸಂದರ್ಭದಲ್ಲಿ ತಮ್ಮ ಮಕ್ಕಳ ನಾಟಕ ರಚನೆಯ ಸಂದರ್ಭವನ್ನು ವೈದೇಹಿಯವರೇ ಹೀಗೆ ವಿವರಿಸಿದರು:

"ನಾಟಕವೆನ್ನುವುದು ನಮ್ಮ ನಿತ್ಯದಲ್ಲಿ ಇರುತ್ತದೆ. ನಾವು ನಿತ್ಯವನ್ನು ಪರಿಭಾವಿಸಿಕೊಳ್ಳುವುದು ನಾಟಕವಾಗುತ್ತದೆ. ಚಿಕ್ಕವರಿದ್ದಾಗಿನ ಮನಸ್ಥಿತಿ ತಲುಪಿದಾಗ ನಾಟಕವೆನ್ನುವುದು ನಮ್ಮ ಮನಸ್ಸಿನಲ್ಲೇ ಹುಟ್ಟುತ್ತದೆ. ಬಾಲ್ಯದಲ್ಲಿ ನಮಗೆ ಸಮಸ್ತ ಪ್ರಕೃತಿಯನ್ನು ಆಹ್ವಾನಿಸಿಕೊಳ್ಳುವ, ಪುರಲೆ, ಕಾಗೆ, ಗುಬ್ಬಿಯಾಗಿ ಅಭಿನಯಿಸುವ ಮೂಲಕ ನಾವು ಸಹಜ ನಟರಾಗುವ ಅನುಭವ ದಕ್ಕುತ್ತದೆ. ಆ ಪುರಲೆ ಹಕ್ಕಿ ರಂಗದ ಪರಿವೆಯಿಲ್ಲದೆ, ರಂಗಭೂಮಿಯ ಯಾವ ಪ್ರಜ್ಞೆಯೂ ಇಲ್ಲದೆ ರೆಕ್ಕೆ ಪುಕ್ಕಗಳೊಂದಿಗೆ ಹಾರುತ್ತದೆ.... ಮಕ್ಕಳ ರಂಗಭೂಮಿ ಉಪದೇಶ, ರಂಜನೆ ಎಲ್ಲವನ್ನೂ ಮೀರಿ ಬಾಲ್ಯವನ್ನು ಹುಟ್ಟು ಹಾಕುತ್ತದೆ. ಟೆಂಪೆಸ್ಟ್ ನಾಟಕವನ್ನು ಕನ್ನಡದಲ್ಲಿ ಮಕ್ಕಳಿಗಾಗಿ ಬರೆದುಕೊಡು ಎಂದು ಸುಬ್ಬಣ್ಣನವರು ಕೇಳಿದಾಗ ಪ್ರಾರಂಭದಲ್ಲಿ ಅಳುಕುಂಟಾಯಿತು. ಆದರೆ ಬರೆಯುತ್ತಾ ಹೋದಂತೆ ಅದು ನಮ್ಮ ನಾಟಕ, ಕನ್ನಡದ ಮಕ್ಕಳ ನಾಟಕವೇ ಅನ್ನಿಸಿಬಿಟ್ಟಿತು.... ನಾಟಕದ ಪ್ರದರ್ಶನ ನಾಟಕ ಮಾಡುವವರ ಮೇಲೆ ಅವಲಂಬಿಸಿರುತ್ತದೆ.... ಯಾಕೆಂದರೆ ನಾನು ಕೊಡುವುದು ಕೇವಲ ಚೌಕಟ್ಟು, ಅದರಲ್ಲಿ ಭಾವನೆಗಳ ಬಣ್ಣ ತುಂಬುವವರು ನಿರ್ದೇಶಕರು...."[27]

ಪ್ರಾರಂಭದಲ್ಲಿ ವೈದೇಹಿಯವರ ಮೊದಲ ಎರಡು ನಾಟಕಗಳನ್ನು ನಿರ್ದೇಶಿಸಿದ ಕೆ.ಜಿ. ಕೃಷ್ಣಮೂರ್ತಿಯವರು ಅದೇ ಸಂದರ್ಭದಲ್ಲಿ ಹೀಗೆ ಹೇಳಿದ್ದರು: "ಬಿ.ವಿ. ಕಾರಂತರ ಪ್ರವೇಶದ ನಂತರ ಕನ್ನಡ ಮಕ್ಕಳ ನಾಟಕಗಳಲ್ಲಿ ಪ್ರದರ್ಶನದ ದೃಷ್ಟಿಯ ಅಂದರೆ 'Performance oriented' ನಾಟಕಗಳೇ ಬರತೊಡಗಿದವು. ಉದಾಹರಣೆಗೆ ಪಂಜರ ಶಾಲೆ, ಕಿಟ್ಟಿಕತೆ, ಆಲಿಬಾಬಾ, ಪುಷ್ಪರಾಣಿ ಇತ್ಯಾದಿ. ಮಕ್ಕಳ ನಾಟಕಗಳ ರಚನೆಯಲ್ಲಿ ಈ ತಂತ್ರದಿಂದ ಬದಲಾವಣೆ ಸಿಕ್ಕಿದ್ದು ವೈದೇಹಿಯವರ ಪ್ರವೇಶದಿಂದ. ವೈದೇಹಿಯವರು ಮುಗ್ಧ ಮನಸ್ಸು ಹೇಗೆ ಕೆಲಸ ಮಾಡುತ್ತ ಹೋಗುತ್ತದೆ ಎಂಬುದನ್ನು ಮಾತ್ರ ಹೇಳುತ್ತ ಹೋಗುತ್ತಾರೆ..... ಆ ನಾಟಕಗಳನ್ನು ಆಡಿ ಹೊರಗೆ ಬಂದ ನಂತರ ನಾವು ಖಾಲಿಯಾಗಿ ಬಿಡುತ್ತೇವೆ. ಇನ್ನೂ ಕಣ್ಣು ಬಿಡುವ ಮಗುವಿಗೆ ಬೇಕಾದ ಮುಗ್ಧತೆ ಆ ನಾಟಕಗಳಲ್ಲಿ ಅಡಕವಾಗಿದೆ. ಕೆಟ್ಟದ್ದನ್ನು ಹೇಳುವುದಾದರೆ ಅದೂ ಕೂಡ ಅರಿವನ್ನು ಹೆಚ್ಚಿಸುವ ರೀತಿಯಲ್ಲಿವೆ. ಅವುಗಳಲ್ಲಿ ಕುಸುರಿ ಕೆಲಸದ ಐಟಂ (Item)ಗಳು ಬೆರೆತಿರುತ್ತವೆ. ನಿರ್ದೇಶಕರಿಗೆ ಪಂಥಾಹ್ವಾನ ನೀಡುವ, ಚಾಲೆಂಜ್ ನೀಡುವ ಪ್ರಯತ್ನ ಅವರ ನಾಟಕಗಳಲ್ಲಿವೆ. ಒಂದು ರಂಗಕೃತಿ, ಸಾಹಿತ್ಯಕೃತಿಯಾಗಿ ಹೊಮ್ಮುವ ಸಾಧ್ಯತೆ ವೈದೇಹಿಯವರಿಂದ ಮೂಡಿ ಬಂತು ಎಂದು ಹೇಳಬಹುದು"[28]

ಥಾಂ ಥೂಂ ಸುಂಟರಗಾಳಿ:

ಶೇಕ್ಸ್‌ಪಿಯರ್‌ನ ಟೆಂಪೆಸ್ಟ್ ನಾಟಕವನ್ನು ವೈದೇಹಿ 'ಥಾಂ ಥೂಂ ಸುಂಟರಗಾಳಿ' ಎನ್ನುವ ಹೆಸರಿನಲ್ಲಿ ಕನ್ನಡಕ್ಕೆ ರೂಪಾಂತರಿಸಿದ್ದಾರೆ. ಮಾಯಾದ್ವೀಪದ ಮಂತ್ರವಾದಿಯ ಕೈಚಳಕದಿಂದ ಎದ್ದ ಸುಂಟರಗಾಳಿಗೆ ಸಿಲುಕಿದ ರಾಜನ ಹಡಗು ಒಡೆದು ನುಚ್ಚುನೂರಾಗುತ್ತದೆ. ರಾಜನ ಸಂಬಂಧಿಯೇ ಆಗಿರುವ ಆ ಮಂತ್ರವಾದಿಯನ್ನು ಹಿಂದೆ ರಾಜ ಮೋಸಗೊಳಿಸಿ ಓಡಿಸಿರುತ್ತಾನೆ. ನಂತರ ದ್ವೀಪಕ್ಕೆ ಬಂದು ಮಂತ್ರವಾದಿಯಾಗಿ ಆ ದ್ವೀಪದಲ್ಲಿದ್ದ ರಾಕ್ಷಸಿಯನ್ನು ಕೊಂದು, ಗಿಡದಲ್ಲಿ ಸೆರೆ ಸಿಕ್ಕಿದ್ದ ಯಕ್ಷನನ್ನು ಬಿಡುಗಡೆ ಮಾಡಿ ಸ್ವಾತಂತ್ರ್ಯವನ್ನು ಕೊಡುವ ಭರವಸೆ ಕೊಟ್ಟಿರುತ್ತಾನೆ. ಸತ್ತ ರಾಕ್ಷಸಿಯ ಮಗನನ್ನು ಅಡಿಯಾಳಾಗಿ ಮಾಡಿಕೊಂಡು ಅವನಿಂದ ತನ್ನ ಕೆಲಸ ಮಾಡಿಸಿಕೊಳ್ಳುತ್ತಿರುತ್ತಾನೆ. ಇಂಥ ಮಂತ್ರವಾದಿಯ ಸೇಡಿಗೆ ಬಲಿಯಾದ ರಾಜ ಮತ್ತು ಅವನ ಪರಿವಾರ ಆ ನಡುಗಡ್ಡೆಯಲ್ಲಿ ಕಾಣೆಯಾದ ರಾಜಕುಮಾರನನ್ನು ಅರಸುತ್ತದೆ.

ಇತ್ತ ಆ ರಾಜಕುಮಾರನನ್ನು ಕಂಡ ಮಂತ್ರವಾದಿಯ ಮಗಳು ಮತ್ತು ರಾಜಕುಮಾರನ ನಡುವೆ ಪ್ರೇಮ ಬೆಳೆಯುತ್ತದೆ. ಈ ಮಧ್ಯೆ ಮಂತ್ರವಾದಿಯ ಅಡಿಯಾಳಾಗಿದ್ದ ಸತ್ತ ರಾಕ್ಷಸಿಯ ಮಗನು ರಾಜನ ಹಿಂಬಾಲಕರಾದ ಉಂಡಾಡಿಗಳನ್ನು ಪುಸಲಾಯಿಸಿ, ಮಂತ್ರವಾದಿಯನ್ನು ಕೊಂದು ತನ್ನ ತಾಯಿಯ ಕೊಲೆಯ ಸೇಡನ್ನು ತೀರಿಸಿಕೊಳ್ಳುವ ಹಂಚಿಕೆ ಹೂಡುತ್ತಾನೆ. ಮಂತ್ರವಾದಿಯು ತನ್ನ ಮಗಳು ಮತ್ತು ರಾಜಕುಮಾರನ ಗಾಢವಾದ ಪ್ರೀತಿಯನ್ನು ಕಂಡು, ಪರಿವರ್ತನೆ ಹೊಂದಿ ಅವರಿಬ್ಬರ ಪ್ರೀತಿಯನ್ನು ಮನ್ನಿಸುತ್ತಾನೆ. ರಾಜನಿಗೆ ಮಂತ್ರವಾದಿಯನ್ನು ಕಂಡು ತನ್ನ ತಪ್ಪಿನ ಅರಿವಾಗಿ, ಆತ ಮಂತ್ರವಾದಿಯ ಕ್ಷಮೆ ಕೇಳುತ್ತಾನೆ. ಉಂಡಾಡಿಗಳ ಹಾಗು ರಾಕ್ಷಸಿಯ ಪುತ್ರನ ಹಂಚಿಕೆ ವಿಫಲವಾಗಿ, ಇಡೀ ಪ್ರಸಂಗ ಸುಖಾಂತವಾಗುತ್ತದೆ. ಈ ನಾಟಕ 1989ರ ನೀನಾಸಂ ತಿರುಗಾಟದಲ್ಲಿ ರಾಜ್ಯದಾದ್ಯಂತ ಪ್ರದರ್ಶನಗೊಂಡು ಯಶಸ್ವಿಯಾಯಿತು.

**ನಾಯಿಮರಿ** : ಒಂದೂರಿನಲ್ಲಿ ತೋಟ ಇಟ್ಟುಕೊಂಡು ಜೀವನ ನಡೆಸುತ್ತಿದ್ದ ಅಜ್ಜ–ಅಜ್ಜಿ, ಅವರಿಗೊಬ್ಬ ಮೊಮ್ಮಗಳು–ಸಣ್ಣಮ್ಮ. ಅವರದ್ದೊಂದು ಪುಟ್ಟಮನೆ. ಮನೆಯ ಸುತ್ತ ತೋಟ. ಮನೆಯಲ್ಲೊಂದು ಗಿಣಿ. ಈ ಪುಟ್ಟ ಪ್ರಪಂಚಕ್ಕೆ ಇರುವುದೊಂದೇ ಸಮಸ್ಯೆ–ಕಳ್ಳರದ್ದು. ಕಳ್ಳರೆಂದರೆ ದೊಡ್ಡ ಕಳ್ಳರ ಗುಂಪಲ್ಲ. ತೆಂಗಿನಕಾಯಿ ಕದಿಯುವ ರಂಗಾಣಿ, ಪಿಂಗಾಣಿ, ಮಂಗಾಣಿ ಎಂಬ ಕೋಡಂಗಿ ಗುಂಪು ಅದು. ಈ ಕಳ್ಳರಿಂದ ಮುಕ್ತರಾಗಲು ಅಜ್ಜ ಒಂದು ನಾಯಿಮರಿ ತರುತ್ತಾನೆ. ಮೊಮ್ಮಗಳು ಸಣ್ಣಮ್ಮ, ಆ ನಾಯಿಮರಿಯೊಂದಿಗೆ ಸ್ನೇಹ ಬೆಳೆಸುತ್ತಾಳೆ. ಇದೀಗ ಕಥೆಗೆ ಇನ್ನೊಂದು ಜಟಾಪಟಿ ಸೇರಿಕೊಳ್ಳುತ್ತದೆ. ಅಷ್ಟು ದಿನ ನಿರಾತಂಕರಾಗಿದ್ದ ಕಳ್ಳರು ತಮ್ಮ ಹೊಸ ಶತ್ರು, ನಾಯಿಮರಿ

ವಿರುದ್ಧ ಸಂಚು ಹೂಡುತ್ತಾರೆ. ಪೇಟೆಯಲ್ಲೊಮ್ಮೆ ಅದನ್ನು ಎಗರಿಸಲು ಹೋಗಿ ಸಿಕ್ಕಿಬೀಳುತ್ತಾರೆ. ಕಡೆಗೊಮ್ಮೆ ಅದನ್ನು ಹಾರಿಸುವುದರಲ್ಲಿ ಯಶಸ್ವಿಯಾಗುತ್ತಾರೆ. ಅದನ್ನು ಬಿಸಾಕಬೇಕೆಂದಿದ್ದಾಗ, ಊರಿನ ದರ್ಜಿ ಅದನ್ನು ಬಚಾವು ಮಾಡುತ್ತಾನೆ. ಇಷ್ಟರಲ್ಲಿ ಆ ನಾಯಿಮರಿ ಅರೆಜೀವವಾಗಿರುತ್ತದೆ. ಡಾಕ್ಟರ್ ಬಂದು ನಾಯಿಮರಿ ಉಳಿಯುವುದು ಕಷ್ಟ ಎನ್ನುತ್ತಾನೆ. ಇಲ್ಲಿಂದ ಮುಂದಿನದು ಕಲ್ಪನಾಲೋಕ.

ನಿದ್ದೆ ಬಾರದ ಮೊಮ್ಮಗಳಿಗೆ ಅಜ್ಜಿ ಹೇಳುವ ಕತೆ ಮೊಮ್ಮಗಳ ಹೊಸ ಸಾಹಸಕ್ಕೆ ಪ್ರೇರಣೆಯಾಗುತ್ತದೆ. ತನ್ನ ಸಂಗಾತಿ ಪಂಚರಂಗಿ ಗಿಣಿಯ ಜೊತೆ ಹುಡುಗಿ ಕಾಡಿಗೆ ಹೋಗಿ ಯಕ್ಷಿಣಿ ದೇವಿಯನ್ನು ಕಂಡು ಸಂಜೀವಿನ ಮಣಿ ಪಡೆಯುತ್ತಾಳೆ. ಅಲ್ಲೂ ಅಡ್ಡಗಾಲು ಹಾಕುವ ಕಳ್ಳರಿಂದ ತಪ್ಪಿಸಿಕೊಂಡು ಹಿಂತಿರುಗಿ, ನಾಯಿಮರಿಯನ್ನು ಬದುಕಿಸಿಕೊಳ್ಳುತ್ತಾಳೆ.

ಈ ನಾಟಕದ ವಿಶೇಷತೆ ಇರುವುದು ಕತೆಯಲ್ಲಲ್ಲ, ಕತೆಯ ಹರಿವಿನಲ್ಲಿ. ಕತೆಯೇನೋ ಹಲವಾರು ಮಕ್ಕಳ ಕತೆಗಳಲ್ಲಿ ಪದೇ ಪದೇ ಬಳಕೆಯಾಗುವ ಸನ್ನಿವೇಶಗಳ ಹೊಂದಾಣಿಕೆ. ಕಥಾ ಸನ್ನಿವೇಶಗಳು ತುಂಬ ಸಹಜವಾಗಿ ಒಣ ತಾರ್ಕಿಕತೆಯನ್ನು ಮೀರಿ, ಮಕ್ಕಳ ಕಲ್ಪನಾವಿಲಾಸಕ್ಕೆ ಒಗ್ಗುವಂತೆ ಎತ್ತಂದತ್ತ ಬೆಳೆಯುತ್ತ ಸಾಗುತ್ತವೆ. ಮಾತುಗಳೂ ಹಾಗೇ, ಮಕ್ಕಳ ಮುಗ್ಧತರ್ಕಕ್ಕೆ ಹೊಂದಿಕೊಳ್ಳುವಂತೆ ಜೋಡಣೆಯಾಗುತ್ತಾ ಹೋಗುತ್ತದೆ. ಹಾಡು–ಮಾತು–ಸನ್ನಿವೇಶ ಇಂತಹ ಯಾವುದೇ ಎಗ್ಗಿಲ್ಲದೆ ವಿಸ್ತರಿಸಿಕೊಳ್ಳುತ್ತ ಹೋಗುವ ಗುಣವೇ ಈ ನಾಟಕದ ಅತ್ಯಂತ ಪರಿಣಾಮಕಾರೀ ಶಕ್ತಿ. ಮಕ್ಕಳ ನಾಟಕವೆಂಬ, ಕನ್ನಡದಲ್ಲಿ ಇನ್ನೂ ಸಾಕಷ್ಟು ಬೆಳವಣಿಗೆಯಾಗದ ಕ್ಷೇತ್ರದಲ್ಲಿ ಈ ನಾಟಕ ಒಂದು ವಿಶೇಷವಾದ ಪ್ರಯತ್ನವೆಂದು ನೀನಾಸಂ ಗುರುತಿಸಿದೆ.

**ಗೊಂಬೆ ಮ್ಯಾಕ್‌ಬೆತ್**: ಇದು ಶೇಕ್ಸ್‌ಪಿಯರ್‌ನ ಮ್ಯಾಕ್‌ಬೆತ್ ಆಧರಿಸಿ, ಕೆ.ವಿ. ಸುಬ್ಬಣ್ಣನವರು ಕೊಟ್ಟ ಹೊಳಹಿನ ಮೇಲೆ ರಚಿಸಿದ ನಾಟಕವೆಂದು ವೈದೇಹಿಯವರೇ ಹೇಳಿದ್ದಾರೆ. ಇದು ಇಕ್ಬಾಲರ ಚಿಣ್ಣ–ಬಣ್ಣಕ್ಕಾಗಿ ವೈದೇಹಿ ರಚಿಸಿದ್ದು, ಚಿಣ್ಣಬಣ್ಣ ಇದನ್ನು ರಾಜ್ಯಾದ್ಯಂತ ಪ್ರದರ್ಶಿಸಿದೆ.

**ಸೂರ್ಯಬಂದ**: ಸೂರ್ಯನಿಲ್ಲದೆ ಊರ ಜನರು ಕತ್ತಲೆ ರಾಜ್ಯದಲ್ಲಿ, ಅಜ್ಜನೊಂದಿಗೆ ತೊಳಲುತ್ತಿದ್ದರು. ಇವರ ತೊಳಲಾಟದ ಬೆಂಕಿಗೆ ರಾಕ್ಷಸನ ಆಜ್ಯ. ನಿದ್ರಾದೇವಿಯಿಂದಾಗಿ ಊರೆಲ್ಲ ನಿದ್ರಾವಶ. ಈ ಕಠಿಣ ಪರಿಸ್ಥಿತಿಯಲ್ಲಿ ಸೂರ್ಯ ಬರುತ್ತಾನೆ. ಎಲ್ಲವೂ ಸುಗಮವಾಯಿತು ಎಂದುಕೊಳ್ಳುವಾಗಲೇ ಬೆಟ್ಟದ ರಾಕ್ಷಸ ಆ ಸೂರ್ಯನನ್ನೇ ಹಿಡಿದು ಬೆಟ್ಟದಡಿ ಮುಚ್ಚಿಡುತ್ತಾನೆ. ಮತ್ತೆ ಕತ್ತಲೆಯ ಅವಾಂತರ. ಈ ಕಠಿಣ ಪರಿಸ್ಥಿತಿಯನ್ನು ಮನಗಂಡು ರಾಕ್ಷಸನಿಂದ ಸೂರ್ಯನನ್ನು ಬಿಡಿಸಲು ಅಜ್ಜ ಗುದ್ದಲಿ ಹಿಡಿದು ಬೆಟ್ಟದಲ್ಲಿ ದಾರಿ ಮಾಡಿಕೊಂಡು ಹೋಗುತ್ತಾನೆ. ಆದರೆ ಆ ರಾಕ್ಷಸನ ದಾವಾನಲಕ್ಕೆ ಸಿಕ್ಕಿ

ಸಾಯುತ್ತಾನೆ. ಊರ ಜನರು ಅಜ್ಜನನ್ನು ಮತ್ತು ಸೂರ್ಯನನ್ನು ಕಾಣದೆ ಕಂಗಾಲಾಗುತ್ತಾರೆ. ಸೂರ್ಯನ ಕುದುರೆಗಳ ಸಹಾಯದಿಂದ ಬೆಟ್ಟದಲ್ಲಿ ದಾರಿ ಮಾಡಿಕೊಂಡು ಒಗ್ಗಟ್ಟಿನ ಬಲದಿಂದ ಆ ರಾಕ್ಷಸನನ್ನು ಓಡಿಸಿ, ಸೂರ್ಯನನ್ನು ಬಿಡುಗಡೆಗೊಳಿಸುತ್ತಾರೆ. ಕತ್ತಲೆ ತುಂಬಿದ ಜಗಕೆ ಸೂರ್ಯ ಬಂದ, ಬೆಳಕು ತಂದ. ಆದರೆ ಅಜ್ಜ ಮಾತ್ರ ಬರಲಿಲ್ಲ ಎಂದು ಮಕ್ಕಳು ಹಾಡುತ್ತಾ ಕುಣಿಯುತ್ತಾರೆ. ಈ ನಾಟಕ ಅನಕ್ಷರತೆ, ಪರಿಸರ ಪ್ರೇಮ, ಸ್ವಾತಂತ್ರ್ಯ.. ಹೀಗೆ ಎಲ್ಲ ಅರ್ಥಗಳನ್ನೂ ಒಳಗೊಂಡು ಮಕ್ಕಳ ಕಲ್ಪನಾಶಕ್ತಿಯನ್ನು ಪ್ರಚೋದಿಸುತ್ತದೆ.

**ಹಕ್ಕಿ ಹಾಡು:** The Emperers Nightingale ಎಂಬ ಕಥೆಯನ್ನು ಮೂಲವಾಗಿಟ್ಟುಕೊಂಡು ವೈದೇಹಿಯವರು ರಚಿಸಿದ ಸ್ವತಂತ್ರ ನಾಟಕ. ಮೈನಾಹಕ್ಕಿಯ ಸಂಗೀತವನ್ನು ಅಸ್ವಾದಿಸುತ್ತ ರಾಜ, ಕಡೆಗೆ ಯಂತ್ರ ಹಕ್ಕಿಯ ಗಾಯನಕ್ಕೆ ಮರುಳಾಗುವ ಕಥೆಯನ್ನು ಹೊಂದಿರುವ ಈ ನಾಟಕ, ಪ್ರಕೃತಿಯ ಸಹಜತೆ ಹಾಗೂ ಯಂತ್ರ ಯುಗದ ಕೃತಕತೆಯನ್ನು ಚಿತ್ರಿಸುತ್ತದೆ. ಮುಖ್ಯವಾಗಿ ತಂತ್ರಜ್ಞಾನ ಮತ್ತು ಸೃಜನಶೀಲತೆಯ 'ಕಾಡಿನ ಮೈನಾಹಕ್ಕಿ-ಯಂತ್ರ ಹಕ್ಕಿ' ನಡುವಿನ ಸಂಘರ್ಷವನ್ನು ಹೇಳುವ ಕೃತಿ ಪ್ರಕೃತ ನಮ್ಮ ಸ್ಥಿತಿಗೆ ಹಿಡಿದ ಕನ್ನಡಿ.

'ಪಶ್ಚಿಮದ ಕಡೆ ಮುಖ ಮಾಡಿ ರಾಕ್, ಬ್ರೇಕ್, ಶೇಕ್ ಡ್ಯಾನ್ಸ್‌ಗಳೆಂದು ಕ್ಷಣ ಉದ್ರೇಕಿಸುವ ಮಾಧ್ಯಮಗಳ ಪ್ರಭಾವಕ್ಕೆ ಒಳಗಾಗಿ ಜನರು ತಮ್ಮ ಸಂವೇದನೆಯನ್ನು ಜಡವಾಗಿಸಿಕೊಂಡಿದ್ದಾರೆ. ಅಂಥವರ ಮನಸ್ಸು ಅರಳಬೇಕಾಗಿದೆ. ಜಾಗತೀಕರಣದ ಗದ್ದಲದಲ್ಲಿರುವ ನಾವು ಅದಕ್ಕೆ ಗಟ್ಟಿ ಎದುರುತ್ತರ ಕೊಡಬೇಕಾದರೆ ನಮ್ಮ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಸೃಜನಶೀಲರಾಗಿ, ಚಲನಶೀಲರಾಗಿ ಬದುಕುವ ಅನಿವಾರ್ಯತೆಯಿದೆ. ಸದ್ಯದಲ್ಲಿ ನಾವು ಜಾಗತೀಕರಣದಲ್ಲಿ ಮುಳುಗಿ ತ್ರಿಶಂಕುಗಳಾಗಿಬಿಡುವ ಭಯವಿದೆ. ಹಾಗಾಗಿ ಈ ನಾಟಕ ಆಂತರ್ಯದಲ್ಲಿ ನಮ್ಮ ಬದುಕಿನ ದ್ವಂದ್ವಗಳನ್ನು ಧ್ವನಿಸುವ ಪ್ರಯತ್ನ ಮಾಡುತ್ತಿದೆ. ನಾಟಕದ ಹೊರಕವಚ ಮಕ್ಕಳಿಗಾದರೂ ಅದರ ತಿರುಳು ತಲುಪಬೇಕಾದದ್ದು ದೊಡ್ಡವರಿಗೆ. ಮಕ್ಕಳು ಮತ್ತು ಹಕ್ಕಿ ಎರಡೂ ಕೂಡ ಕಲುಷಿತವಾಗದ ಮುಗ್ಧ ಭಾವ ಜೀವಿಗಳು ಎಂಬುದು ನಾಟಕದ ಧ್ವನಿ.

**ಮೂಕನ ಮಕ್ಕಳು :** ಬಿ.ವಿ. ಕಾರಂತರು ಮಾಸ್ತಿಯವರ ಕಥನಕವನ 'ಮೂಕನ ಮಕ್ಕಳು' ಆಧರಿಸಿ ಕಿರಿಯರು ಮತ್ತು ಹಿರಿಯರು ಇಬ್ಬರಿಗೂ ಸಲ್ಲುವಂತೆ ನಾಟಕ ಬರೆದು ಕೊಡಲು ಸೂಚಿಸಿದರು. ಕಾರಂತರು ಆ ಕುರಿತು ಕೆಲವು ಟಿಪ್ಪಣಿಗಳನ್ನೂ ನೀಡಿದರು. ಆ ಟಿಪ್ಪಣಿಗಳನ್ನು ಗಮನದಲ್ಲಿಟ್ಟುಕೊಂಡು ಈ ನಾಟಕವನ್ನು ಬರೆಯುವ ಪ್ರಯತ್ನ ಮಾಡಿದ್ದೇನೆಂದು ವೈದೇಹಿ ಪ್ರಾರಂಭದಲ್ಲಿ ಹೇಳಿಕೊಂಡಿದ್ದಾರಲ್ಲದೆ ನಾಟಕವನ್ನು ಪ್ರಯೋಗಿಸಿದ ರಂಗಾಯಣಕ್ಕೆ ವಂದನೆ ಅರ್ಪಿಸಿದ್ದಾರೆ. ಈ ನಾಟಕ ರಂಗಾಯಣದಿಂದ

ಯಶಸ್ವಿಯಾಗಿ ಪ್ರದರ್ಶಿತವಾಯಿತು. ಇದಲ್ಲದೆ ವೈದೇಹಿಯವರು 'ಢಾಣಾ ಡಂಗುರ', 'ಝುಂ ಝುಂ ಆನೆ' 'ಕೋಟು ಗುಮ್ಮ' ಮುಂತಾದ ನಾಟಕಗಳನ್ನೂ ರಚಿಸಿದ್ದಾರೆ.

## ಡಾ॥ ಎಸ್. ಕಶ್ಯಪ್‌ರವರ ಮಕ್ಕಳ ನಾಟಕಗಳು

ವಿಜಯನಗರ ಬಿಂಬದ ಜೊತೆಗೂಡಿಸಿಕೊಂಡಿರುವ ಇವರು ಸತತವಾಗಿ ಹೊಸ ನಾಟಕಗಳನ್ನು ರಚಿಸಿ ರಂಗಶಾಲೆಯ ಮಕ್ಕಳಿಂದ ಪ್ರದರ್ಶನಕ್ಕೆ ಅನುವು ಮಾಡಿದ್ದಾರೆ. ಇವರ ನಾಟಕದಲ್ಲಿ ಹೆಚ್ಚು ಮಕ್ಕಳು ಪಾತ್ರವಹಿಸಿ ರಂಗದ ಮೇಲೆ ತಮ್ಮ ಅಭಿನಯವನ್ನು ಪ್ರದರ್ಶಿಸಲು ಪೂರಕವಾಗಿದೆ. ಇವರು ರಚಿಸಿರುವ ನಾಟಕಗಳು.

1. ಹೀಗೂ ಆಗಬಹುದು 2. ಕುಮಾರವ್ಯಾಸ.com 3. ಚಿಟ್ಟೆ 4. ಮಾಯಾಚೀಲ 5. ಗಾಂಧಿ ಪಾರ್ಕ್ 6. ಕಲಿ 7. ಶುದ್ಧಗೆ 8. ಚಂದ್ರಮುಖಿ 9. ಜಜ್ಜೀ 10. ಬಿರುದನ್ನರಸಿ 11. ಕಾಕೋಲುಕೀಯ 12. ಅಲ್ಲಿನೋಡು 13. ಅರ್ಬುದಕಾಡು 14. Y 3 K 15. ಗೂಡಿನ ಪಾಡು 16. ಒಂದು ನಿಮಿಷದ ಕತೆ.

ಈ ಎಲ್ಲಾ ನಾಟಕಗಳಲ್ಲಿ ಸಮಕಾಲೀನ ವಿಷಯಗಳನ್ನೂ ಮಕ್ಕಳಿಗೆ ತಿಳಿಸುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. "ಶುದ್ಧಗೆ" ನಾಟಕದ ವಸ್ತು ಕನ್ನಡ ಅಕ್ಷರಗಳಾಗಿದ್ದು, ಕನ್ನಡ ಭಾಷಾ ಚರಿತ್ರೆಯನ್ನೂ ಮಕ್ಕಳಿಗೆ ತಿಳಿ ಹೇಳುವ ಪ್ರಯತ್ನ ಮತ್ತು ಕನ್ನಡದ ಇಂದಿನ ಸ್ಥಿತಿಗತಿಗಳನ್ನೂ ತಿಳಿ ಹೇಳುವುದೇ ನಾಟಕದ ಮೂಲೋದ್ದೇಶ. ಈ ನಾಟಕವನ್ನು ಶಾಲಾ ಕಾಲೇಜು ಮಕ್ಕಳಿಗಾಗಿ ಹಲವೆಡೆ ಪ್ರದರ್ಶಿಸಲಾಯಿತು.

## ಇನ್ನೆಷ್ಟೋ ನಾಟಕಗಳು

ನಾವು ಈಗಾಗಲೇ ಚರ್ಚಿಸಿದ ನಾಟಕಗಳಲ್ಲದೆ ಇನ್ನೂ ಹಲವಾರು ನಾಟಕ ಕೃತಿಗಳನ್ನು ಇಲ್ಲೀಗ ಉಲ್ಲೇಖಿಸ ಬಯಸುತ್ತೇನೆ. ಅವುಗಳಲ್ಲಿ ಹಲವು ಕೃತಿಗಳು ಲಭ್ಯವಾಗಿದ್ದರೆ. ಅನೇಕ ಕೃತಿಗಳು ಅಲಭ್ಯ. ಆದರೆ ಅಂತಹ ನಾಟಕಕೃತಿಗಳ ಕುರಿತು ಮಾಹಿತಿಗಳು ಹಲವು ಪುಸ್ತಕಗಳಲ್ಲಿ, ಲೇಖನಗಳಲ್ಲಿ ಉಲ್ಲೇಖಿತವಾಗಿವೆ. ಹಾಗಾಗಿ ಅಂತಹ ಮಕ್ಕಳ ನಾಟಕಕೃತಿಗಳ ಕೃತಿಗಳ ಹೆಸರನ್ನು ಮಾತ್ರಾ ಇಲ್ಲಿ ಉಲ್ಲೇಖಿಸಲಾಗಿದೆ.

### 1. ಕೆಲವು ಪೌರಾಣಿಕ ನಾಟಕಗಳು

ಭಕ್ತಿ ಪ್ರಧಾನವಾದ ಹಾಗೂ ಕಥಾ ಪ್ರಧಾನವಾದ ಪೌರಾಣಿಕ ನಾಟಕಗಳು ಪ್ರಾರಂಭದಿಂದಲೂ ರಚನೆಯಾಗುತ್ತಾ ಬಂದಿವೆ. ಮುಖ್ಯವಾಗಿ ಈ ಕೆಳಗಿನವುಗಳನ್ನು ಗಮನಿಸಬಹುದಾಗಿದೆ.

1. ಹೊಯ್ಸಳರ 'ಪ್ರಸಾದ'
2. ಪಳಕಳ ಸೀತಾರಾಮ ಭಟ್ಟರ ನಚಿಕೇತ
3. ಪಳಕಳ ಸೀತಾರಾಮ ಭಟ್ಟರ 'ಏಕಲವ್ಯ'
4. ಪಳಕಳ ಸೀತಾರಾಮ ಭಟ್ಟರ 'ಬಾಲ ತಪಸ್ವಿ'
5. ಉಳುವೀಶರ 'ಬಾಲ ತಪಸ್ವಿ'
6. ಕೆ.ಆರ್. ಪದ್ಮಜೆ ಅವರ 'ಭರತ'
7. ಯಲ್ಲೂರು ಉಮೇಶರವರ 'ಉತ್ತರ ಕುಮಾರ'
8. ಬಿ. ಪಾಂಡುರಂಗರಾಯರ 'ಕೊಳೂರು ಚಿನ್ನಕ್ಕ'
9. ಬಿ. ಚಂದ್ರಶೇಕರರವರ 'ಸಂಭವಾಮಿ ಯುಗೇ ಯುಗೇ'
10. ಎ.ಎನ್. ಕುಲಕರ್ಣಿಯವರ 'ಶಬರಿ'
11. ಲೀಲಾಬಾಯಿ ಪಿ. ರವರ 'ಶ್ರೀರಾಮ ಮಹಾಪ್ರಸ್ಥಾನ'
12. ಎಸ್.ಎಂ. ಹಿರೇಮಠದ 'ಚಿನ್ನರ ಬಣ್ಣದ ಲೋಕ'
13. ಎಸ್.ಎಂ. ಹಿರೇಮಠದ 'ಪರಾಶರ'
14. ಪ್ರೊ. ಶರ್ಮಾ ಅವರ 'ರಾಮರಾಜ್ಯ'
15. ಪಳಕಳ ಸೀತಾರಾಮ ಭಟ್ಟರ 'ಯಾರಿವನು'
16. ಶಶಿಧರ ನರೇಂದ್ರರ 'ಉಪಮನ್ಯು'
17. ಪಾರ್ವತಿ ಐತಾಳರ 'ಗುರುದಕ್ಷಿಣೆ'

## 2. ನಿಸರ್ಗದ ಕುರಿತ ಕೆಲವು ನಾಟಕಗಳು

1. ಆರ್ಯರವರ 'ಮಳೆ ಬಂತು'
2. ಕೆರಳ್ಳಿ ಗುರುನಾಥರೆಡ್ಡಿಯವರ 'ಹೀಂಗೊಂದು ರಾಗ'
3. ಕೆರಳ್ಳಿ ಗುರುನಾಥರೆಡ್ಡಿಯವರ 'ಬಾಂದಳದ ಬಾಲಕಿಯರು'
4. ಎ.ಎಸ್. ಪ್ರಸನ್ನರ 'ಒಂದಾನೊಂದು ಕಾಡಿನಲ್ಲಿ'
5. ಗೋಪಾಲರಾವ್ ಹೆಚ್.ಎಸ್. ಅವರ 'ಗುಲ್ವಟ್ಟಿ–ಮುನ್ವಟ್ಟಿ'
6. ಉಷಾದೇವಿ ಅವರ 'ಜಾಣ ಮೊಲ'
7. ಕೃಷ್ಣಮೂರ್ತಿ ಬೆಳಗೆರೆ ಅವರ 'ಮಳೆಹುಚ್ಚ ನವಿಲೂರಿನ ಕತೆ'

## 3. ಕೆಲವು ಐತಿಹಾಸಿಕ ನಾಟಕಗಳು

1. ಮೇವುಂಡಿ ಮಲ್ಲಾರಿ ಅವರ 'ಮಯೂರವರ್ಮ'
2. ಎಂ.ವಿ. ಸೀತಾರಾಮಯ್ಯ ಅವರ 'ಕರುಣೆಯ ಕುಡಿ'
3. ಸುಂದರೇಶ ಅವರ 'ಕೋಣನ ತುಪ್ಪ'
4. ಶ್ರೀನಿವಾಸ ಅವರ 'ಬೈಲಂಗಡಿ ರಾಣಿ'
5. ಈಶ್ವರ ಚಿಂತಾಮಣಿಯವರ 'ಶಿಲ್ಪಿಗಳ ಸಮಾಗಮ'
6. ಎ.ಕೆ. ರಾಮೇಶ್ವರರ 'ಕ್ಷಮಾದಾನ'
7. ಎ.ಕೆ. ರಾಮೇಶ್ವರ ಅವರ 'ಅಭಯರುಚಿ–ಅಭಯಮತಿ'
8. ಪ್ರಕಾಶ ಮೂರ್ತಿ ಅವರ 'ವೀರ ಮಹಿಳೆ ಓಬವ್ವ'
9. ರಘುಸುತ ಅವರ 'ಹೊಸಬೆಳಕು'
10. ಲೀಲಾಬಾಯಿ ಪಿ. ಅವರ 'ಹೊಯ್–ಸಳ'
11. ಬಿ.ಎಚ್. ಶ್ರೀಧರರ 'ಮಯೂರ ಶರ್ಮ'

ಇಷ್ಟಲ್ಲದೆ ಇನ್ನೂ ಹಲವಾರು ನಾಟಕಗಳನ್ನು ಗಮನಿಸಲಾಯಿತಾದರೂ, ಅವುಗಳ ಹೆಸರು ಪ್ರದರ್ಶನ ದೃಷ್ಟಿಯಿಂದಲೂ, ಪಠ್ಯದ ದೃಷ್ಟಿಯಿಂದಲೂ ಬಹಳಷ್ಟು ಕೇಳಿಬರಲಿಲ್ಲವಾಗಿ ಅವುಗಳನ್ನು ಆಪ್ತವಾಗಿ ಗಮನಿಸಲ್ಲ. ಹಾಗೆಂದ ಮಾತ್ರಕ್ಕೆ ಇಲ್ಲಿ ವಿವೇಚಿಸಿದ ನಾಟಕಗಳು ಮಾತ್ರ ಶ್ರೇಷ್ಠವೆಂದೂ ವಿವೇಚಿಸಿದಿರುವ ನಾಟಕಗಳು ಗಮನಾರ್ಹವಲ್ಲವೆಂದೂ ಅರ್ಥವಲ್ಲ. ಪ್ರಾತಿನಿಧಿಕವಾಗಿ ದೊರಕಿದ ನಾಟಕಗಳಲ್ಲಿ ಕೆಲವನ್ನು ಗಂಭೀರವಾಗಿ ಗಮನಿಸಲಾಯಿತೇ ಹೊರತು ಶ್ರೇಷ್ಠತೆಯನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಇಷ್ಟಲ್ಲದೆ ಎಷ್ಟೋ ಮಕ್ಕಳ ನಾಟಕಗಳು ಆಯಾ ಪ್ರದೇಶದಲ್ಲಿ ತುಂಬ ಪರಿಣಾಮಕಾರಿಯಾಗಿ ಪ್ರದರ್ಶನಗೊಂಡಿರುತ್ತವೆ. ಹೆಸರಾಂತ ನಿರ್ದೇಶಕರು ಅಥವಾ ಪ್ರಕಾಶಕರು ಅಥವಾ ವಿಮರ್ಶಕರು ಅವುಗಳತ್ತ ಗಮನ ಹರಿಸದೆ ಅವುಗಳು ಪ್ರಸಿದ್ಧಿಗೆ ಬಾರದಿರಬಹುದು. ಕೆಲವು ನಾಟಕಗಳು ರಾಜಧಾನಿಯ ಕಾರಣದಿಂದ ಅಥವಾ ಆಡುವ ರಂಗತಂಡಗಳು ಗಳಿಸಿದ ಕೀರ್ತಿಯಿಂದ ಜನಪ್ರಿಯತೆ ಪರಿಧಿಗೆ ಬಂದಿರುತ್ತದೆ. ಎಷ್ಟೋ ಬಾರಿ ಅದಕ್ಕಿಂತ ಉತ್ತಮ ನಾಟಕಗಳು ಪರಿಗಣನೆಗೆ ಬಂದಿರಲು ಸಾಧ್ಯವಾಗಿರುವುದಿಲ್ಲ. ಇನ್ನು ಕೆಲವು ಬಾರಿ 'ಈ ನಾಟಕ ನಿರ್ದೇಶಕರಿಗೆ ಚಾಲೆಂಚ್' ಎಂದು ನಾಟಕವನ್ನು ತೆಗೆದುಕೊಳ್ಳುವ ನಿರ್ದೇಶಕ, ಇನ್ನೊಂದನ್ನು 'ಇದರಲ್ಲಿ ನಾಟಕೀಯ ಅಂಶಗಳು ಕಡಿಮೆ ಇರುವುದರಿಂದ ಇದನ್ನು ಪ್ರದರ್ಶಿಸುವುದು ಕಷ್ಟ' ಎನ್ನಬಹುದು. ಇಲ್ಲಿ ನಾಟಕಗಳ ಆಯ್ಕೆ ಅವರವರ ಇಷ್ಟಾನಿಷ್ಟದ ಮೇಲೆ ನಡೆಯುವುದರಿಂದ ಇಂಥವರು

ಆಡಿದ ಮಕ್ಕಳ ನಾಟಕಗಳು ಶ್ರೇಷ್ಠ; ಇಂಥವರು ಆಡಿದ್ದು ಕನಿಷ್ಠ ಎಂಬ ಮಾನದಂಡಕ್ಕಿಂತಲೂ ಆಡುವ, ನೋಡುವ ಮಕ್ಕಳನ್ನು ಸಂಪೂರ್ಣ ಒಳಗೊಳ್ಳುವ ನಾಟಕವೇ ಶ್ರೇಷ್ಠ ಎನ್ನಲಡ್ಡಿಯಿಲ್ಲ.

ಕನ್ನಡದ ಶ್ರೇಷ್ಠ ಮಕ್ಕಳ ನಾಟಕಗಳು ಯಾವುವೆಂದು ನನ್ನನ್ನೇ ಕೇಳಿದರೆ ಪುಸ್ತಕವಾಗಿ ಪ್ರಕಟವಾಗಿರದಿದ್ದರೂ ಶಾಲೆಗಳಲ್ಲಿ ಆಡಲ್ಪಟ್ಟು, ಮಕ್ಕಳ ಮನಸ್ಸನ್ನು ಮುಟ್ಟಿರುವ ಹತ್ತು ಹಲವು ಕೃತಿಗಳು ಎಂದು ಹೇಳಬಲ್ಲೆ. ಯಾಕೆಂದರೆ ಅವು ಮಕ್ಕಳ ರಂಗಪ್ರಜ್ಞೆಯನ್ನು ಅರಳಿಸಿದ, ಅರಳಿಸುವ ಕೃತಿಗಳು. ಅವು ಮಕ್ಕಳನ್ನು ಬಿಟ್ಟು ಬೇರೆ ಯಾರ ಗಮನವನ್ನೂ ಸೆಳೆಯುವ ಉದ್ದೇಶವನ್ನು ಹೊಂದಿರುವುದಿಲ್ಲ. ನಾವು ಅವುಗಳ ವ್ಯಾಪ್ತಿಯ ಕುರಿತು, ಶ್ರೇಷ್ಠತೆಯ ಕುರಿತು ಯಾವ ಮಾತನಾಡಿದರೂ, ಮಾತನಾಡದಿದ್ದರೂ ಅಂತಹ ನಾಟಕಗಳು ನಡೆಯುತ್ತಲೇ ಸಾಗಿವೆ, ಸಾಗುತ್ತವೆ. ನಾವು ಕೇವಲ ಶ್ರೇಷ್ಠತೆಯ ಪರಿಕಲ್ಪನೆಯಿಂದ ಮಾತನಾಡಿದರೆ ಪ್ರಯೋಜನವಿಲ್ಲ. ನಮ್ಮ ಒಳ ಉದ್ದೇಶ ಒಬ್ಬ ಸುನಿಲ್ ಗವಾಸ್ಕರ್, ಒಬ್ಬ ಸಚಿನ್ ತೆಂಡೂಲ್ಕರ್ ಅಲ್ಲ. ನಮ್ಮ ಅಗತ್ಯ ಗೆಲ್ಲುವ ತಂಡವನ್ನು ಸೃಷ್ಟಿಸುವುದು. ತಂಡದಲ್ಲಿರುವ ಎಲ್ಲರೂ ಗೆಲ್ಲುವಂತಹ ಆಟ ಆಡುವುದು. ಶ್ರೇಷ್ಠತೆಯನ್ನು ಸಾಧಿಸಬೇಕೆಂದು ಕ್ರೀಡಾಪಟುಗಳನ್ನು ಕೋಣೆಯೊಂದರಲ್ಲಿ ಕೂಡಿಹಾಕಿ, ಅವರಿಗೆ ಹಾರ್ಮೋನ್‌ಗಳನ್ನು ಕೊಟ್ಟು ಅವರ ಎಲುಬು, ಮಾಂಸಗಳ ಸಹಜತೆಯನ್ನು ನಾಶಪಡಿಸಿ, ಒಲಿಂಪಿಕ್‌ನಲ್ಲಿ ಚಿನ್ನವನ್ನು ಗಳಿಸಲೇಬೇಕೆಂದು ಪ್ರಯತ್ನಿಸುವ ಜರ್ಮನಿಯವರ ಸಾಹಸ ನಮಗೆ ಬೇಕಿಲ್ಲ. ನಾವು ಶ್ರೇಷ್ಠ ಬಾಲನಟರನ್ನು ತಯಾರಿಸಲಾಗಲೀ ಶ್ರೇಷ್ಠ ಮಕ್ಕಳ ನಾಟಕಗಳನ್ನು ರಚಿಸಲಾಗಲೀ, ಪ್ರದರ್ಶಿಸಲಾಗಲೀ ಹೊರಟವರಲ್ಲ. ನಮ್ಮ ಸಮುದಾಯದ ಎಲ್ಲ ಮಕ್ಕಳೂ ಸಹಜವಾಗಿ, ತಮ್ಮ ತಮ್ಮ ನೆಲೆಯಲ್ಲಿ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವಂತೆ, ಆ ವ್ಯಕ್ತಿತ್ವ ಬೆಳೆಯುವಲ್ಲಿ ಸಹಕಾರಿಯಾಗುವ ನಾಟಕಗಳನ್ನು ಕೊಡುವುದಷ್ಟೇ ನಮ್ಮ ಕೆಲಸ. ಹಾಗಾಗಿ ನಮ್ಮ ಈ ಪಟ್ಟಿಯಲ್ಲಿರುವವರು ಸಚಿನ್ ತೆಂಡೂಲ್ಕರ್‌ನಂತಹ ಆಟಗಾರರು, ಉಳಿದವರು ಆಟಗಾರರೇ ಅಲ್ಲ ಎನ್ನುವಂತೇನೂ ಇಲ್ಲ. ಎಲ್ಲರೂ ನಮ್ಮ ಆಟಗಾರರು ಎಂಬುದಷ್ಟೇ ನಮಗೆ ಮುಖ್ಯ ವಿಷಯ. ಇಂದು ಹೆಸರಿರದ ಯಾವುದೇ ಆಟಗಾರ ನಾಳೆ ರಾಷ್ಟ್ರೀಯ ತಂಡದೊಳಕ್ಕೆ ಬರಬಲ್ಲ ಎಂಬ ನಂಬಿಕೆಯೇ ನಮ್ಮ ತರಬೇತಿಗಳ ಉದ್ದೇಶ. ಜೊತೆಗೆ ಉಳಿದ ಆಟಗಾರರೂ ಅವರವರ ನೆಲೆಯಲ್ಲಿ ಗೆಲ್ಲಬಲ್ಲ ಕ್ರೀಡಾಪಟುಗಳಾಗಲಿ ಎಂಬುದೇ ನಮ್ಮ ಹಾರೈಕೆ.

ಇಂದಿಗೂ ನಮ್ಮ ಸಾವಿರಾರು ಶಾಲೆಗಳಲ್ಲಿ ನಡೆಯುವ ನಾಟಕಗಳಿಗೆ ಹೋಲಿಸಿದರೆ, ರಂಗದಲ್ಲಿ ಪ್ರದರ್ಶನಗೊಳ್ಳುವ ನಾಟಕಗಳು ಶೇಕಡಾ ಒಂದಕ್ಕಿಂತ ಕಮ್ಮಿ. ನಾನು ನನ್ನ ಅಧ್ಯಯನಕ್ಕಾಗಿ ಶಿವಮೊಗ್ಗ ನಗರವನ್ನು ಆರಿಸಿಕೊಂಡಾಗ,

ಕಳೆದ ಹತ್ತು ವರ್ಷಗಳಲ್ಲಿ ಇಲ್ಲಿ ನಡೆಯುವ ಹೆಚ್ಚು ಕಡಿಮೆ ನೂರು ಶಾಲೆಗಳ ವಾರ್ಷಿಕೋತ್ಸವದಲ್ಲಿ ನಾವು ಇಲ್ಲಿ ಪ್ರಸ್ತಾಪಿಸಿದ ಒಂದೇ ಒಂದು ನಾಟಕವೂ ನಡೆದಿಲ್ಲ. ಆದರೆ ಬಹುತೇಕ ಎಲ್ಲ ಶಾಲೆಗಳಲ್ಲಿ ವಾರ್ಷಿಕೋತ್ಸವ ನಡೆದೇ ನಡೆಯುತ್ತದೆ. ಎಲ್ಲ ವಾರ್ಷಿಕೋತ್ಸವದಲ್ಲೂ ಒಂದು ಪುಟ್ಟ ನಾಟಕವಾದರೂ ಇದ್ದೇ ಇರುತ್ತದೆ. ಆದರೆ ಆ ನಾಟಕಗಳು ಯಾವುದು?

ಹಾಗೆಂದ ಮಾತ್ರಕ್ಕೆ ಇಂತಹ ಅಧ್ಯಯನಗಳ ಅರ್ಥವಂತಿಕೆಯನ್ನು ಪ್ರಶ್ನಿಸಿದಂತಾಗುವುದಿಲ್ಲವೆಂದು ಭಾವಿಸುತ್ತೇನೆ. ಇಂತಹ ಅಧ್ಯಯನಗಳು ಇಂತಹ ಶಾಲೆಗಳಲ್ಲಿ ಪ್ರದರ್ಶನಗೊಳ್ಳುವ ನಾಟಕಗಳನ್ನೂ ಒಳಗೊಳ್ಳುವ ಮಟ್ಟಕ್ಕೆ ಇಳಿಯಬೇಕು. ನಾಟಕಗಳು ಮಕ್ಕಳ ಮೇಲೆ ಬೀರುವ ಪರಿಣಾಮ ಮತ್ತು ವ್ಯಕ್ತಿತ್ವ ನಿರ್ಮಾಣದಲ್ಲಿ ಮಕ್ಕಳ ನಾಟಕಗಳ ಪಾತ್ರವನ್ನು ಶಾಲಾಕಾಲೇಜುಗಳ ಉಪಾಧ್ಯಾಯರವರೆಗೂ ವಿಸ್ತರಿಸಿ, ಅವರು ರಚಿಸುವ, ಪ್ರದರ್ಶಿಸುವ ನಾಟಕಗಳಿಗೂ ನಮ್ಮ ಅಧ್ಯಯನಗಳ ಸಾರಂಶ ತಲುಪುವಂತೆ ಮಾಡುವುದು ಅಗತ್ಯ. ಹಾಗಾಗಿ ಈ ಅಧ್ಯಯನವನ್ನು ಕೇವಲ ಲಭ್ಯವಿರುವ/ಲಭಿಸಿದ ಕೃತಿಗಳಿಗೇ ಸೀಮಿತಗೊಂಡ ಕಿರು ಅಧ್ಯಯನ ಮಾತ್ರವೆಂದು ಓದುಗರು ಸ್ವೀಕರಿಸಬೇಕಾಗಿ ವಿನಂತಿ.

**ಉಲ್ಲೇಖಗಳು:**

1. ಹಲೇನ್ ಎಸ್. ರೋಸೆನ್ ಬರ್ಗ್ – ಥಿಯೇಟರ್ ಫಾರ್ ಯಂಗ್ ಪೀಪಲ್: ನ್ಯೂಯಾರ್ಕ್ 1983

2. ಕೃಷ್ಣಮೂರ್ತಿ ಚಿತ್ರಾಪುರ, ಸುರತ್ಕಲ್ ಇವರ ಎಂಫಿಲ್ ಪ್ರಬಂಧ

3. ಜಿ. ಲೀಲಾಭಟ್, ಎಂ.ಎಸ್. ಕಾಮತ್ ಕೃತಿಗಳು, ಕರ್ನಾಟಕ ಸಂಘ ಪುತ್ತೂರು, ಸಂಪುಟ–2

4. ಕೃಷ್ಣಮೂರ್ತಿ ಚಿತ್ರಾಪುರ. ಸುರತ್ಕಲ್ ಇವರ ಎಂ.ಫಿಲ್. ಪ್ರಬಂಧ.

5. ಬಿ.ವಿ. ವೈಕುಂಠರಾಜು. ಕನ್ನಡ ರಂಗಭೂಮಿ: ಕನ್ನಡ ವಿಶ್ವವಿದ್ಯಾನಿಲಯ 1997

6. ಮಕ್ಕಳ ಸಾಹಿತ್ಯ ಶತಮಾನ. ಸಂ: ಆನಂದ ಪಾಟೀಲ್ ಇದರಲ್ಲಿನ ಲೇಖನ: ನಾಟಕ ಮತ್ತು ಸಿನಿಮಾಗಳಲ್ಲಿ ಮಕ್ಕಳ ಸಾಹಿತ್ಯ, ಸುರೇಶ್ ಕುಲಕರ್ಣಿ

7. ಟಿ.ಎಸ್. ನಾಗರಾಜಶೆಟ್ಟಿ 'ಮಕ್ಕಳ ಸಾಹಿತ್ಯ ಏಕೆ ಬೇಕು', ನಿರ್ಮಲ ಪ್ರಕಾಶನ: ತಿಪಟೂರು 1995

8. ಕೆ.ವಿ. ಸುಬ್ಬಣ್ಣ 'ಪಂಜರ ಶಾಲೆ- ಒಂದು ರಂಗ ಪ್ರಯೋಗ'ವೆಂಬ ಲೇಖನ. ಪುಸ್ತಕ: ಬಿ.ವಿ. ಕಾರಂತ. ಸಂ: ಮುರುಳೀಧರ ಉಪಾಧ್ಯ ಹಿರಿಯಡ್ಕ: ಕರ್ನಾಟಕ ಸಂಘ, ಪುತ್ತೂರು-1996

9. ಕೆ.ವಿ. ಸುಬ್ಬಣ್ಣ 'ಪಂಜರ ಶಾಲೆ- ಒಂದು ರಂಗ ಪ್ರಯೋಗ'ವೆಂಬ ಲೇಖನ. ಪುಸ್ತಕ: ಬಿ.ವಿ. ಕಾರಂತ. ಸಂ: ಮುರುಳೀಧರ ಉಪಾಧ್ಯ ಹಿರಿಯಡ್ಕ: ಕರ್ನಾಟಕ ಸಂಘ, ಪುತ್ತೂರು-1996

10. ಬಿ.ವಿ. ವೈಕುಂಠರಾಜು. ಕನ್ನಡ ರಂಗಭೂಮಿ: ಕನ್ನಡ ವಿಶ್ವವಿದ್ಯಾನಿಲಯ 1997

11. ನ. ರತ್ನ ನಿರ್ದೇಶಕನ ನೆರಳು 'ಬಿ.ವಿ. ಕಾರಂತ' ಮುರುಳೀಧರ ಉಪಾಧ್ಯ, ಕರ್ನಾಟಕ ಸಂಘ ಪುತ್ತೂರು.

12. ಬಿ.ವಿ. ಕಾರಂತ: ಬಿ.ವಿ. ಕಾರಂತರ ಒಂದು ಸಂದರ್ಶನ. ಟಿ.ಪಿ. ಅಶೋಕ, ಬಿ.ವಿ. ಕಾರಂತ ಮುರುಳಿಧರ ಉಪಾಧ್ಯ, ಕರ್ನಾಟಕ ಸಂಘ, ಪುತ್ತೂರು.

13. ಬಿ. ಲೀಲಾಭಟ್, ಎಂ.ಎಸ್. ಕಾಮತರ ಕೃತಿಗಳು, ಸಂಪುಟ 2, ಕರ್ನಾಟಕ ಸಂಘ, ಪುತ್ತೂರು.

14. ಕನ್ನಡ ವಿಶ್ವಕೋಶ, ಮಕ್ಕಳ ಸಾಹಿತ್ಯ, ಪುಟ 649

15. ಕುವೆಂಪು ನನ್ನ ಗೋಪಾಲ, ಉದಯರವಿ ಪ್ರಕಾಶನ, 4ನೇ ಮುದ್ರಣ, 1995

16. ಬಿ.ವಿ. ವೈಕುಂಠರಾಜು. ಕನ್ನಡ ರಂಗಭೂಮಿ: ಕನ್ನಡ ವಿಶ್ವವಿದ್ಯಾನಿಲಯ 1997

17. ಕೆ. ಮರುಳಸಿದ್ದಪ್ಪ, ಆಧುನಿಕ ಕನ್ನಡ ನಾಟಕ 1983, ಪ್ರಿಂಟರ್ಸ್ ಪ್ರಕಾಶನ.

18. ಕೆ.ವಿ. ಸುಬ್ಬಣ್ಣ ಬಿ.ವಿ.ಕಾರಂತ ಮುರುಳೀಧರ ಉಪಾಧ್ಯ, ಕರ್ನಾಟಕ ಸಂಘ ಪುತ್ತೂರು.

19. ಕು.ಶಿ. ಹರಿದಾಸ ಭಟ್ಟ, ಬಿ.ವಿ. ಕಾರಂತ ಮುರುಳೀಧರ ಉಪಾಧ್ಯಾ, ಕರ್ನಾಟಕ ಸಂಘ ಪುತ್ತೂರು.

20. ಕೆ.ವಿ. ಅಕ್ಷರ, 'ಆಧುನಿಕ ಜನಪದದ ಈಚಿನ ಅವತಾರಗಳು', ಪತ್ರಿಕಾ ಲೇಖನ

21. ಕೆ.ವಿ. ಅಕ್ಷರ. 'ಆಧುನಿಕ ಜನಪದದ ಈಚಿನ ಅವತಾರಗಳು', ಪತ್ರಿಕಾ ಲೇಖನ

22. ಶ್ರೀಪಾದಭಟ್, 'ಉತ್ತರ ಕನ್ನಡದಲ್ಲಿ ಮಕ್ಕಳ ರಂಗಭೂಮಿ'-ಲೇಖನ. ಪುಸ್ತಕ : ಮಕ್ಕಳ ರಂಗಭೂಮಿ. ಸಂಪಾದಕರು ಕಿರಣ್ ಭಟ್, ಮಕ್ಕಳ ನಾಟಕೋತ್ಸವ ಸಮಿತಿ: ಹೊನ್ನಾವರ

23. ಎ.ಎಸ್. ಮೂರ್ತಿ - 'ಐದು ಮಕ್ಕಳ ನಾಟಕಗಳು' ನೆಲೆಮನೆ ಪ್ರಕಾಶನ, ಶ್ರೀರಂಗಪಟ್ಟಣ, 1998

24. ಡಾ। ಆರ್.ವಿ. ಭಂಡಾರಿ ಕನ್ನಡದಲ್ಲಿ ಮಕ್ಕಳ ನಾಟಕ, ಪುಸ್ತಕ: ಮಕ್ಕಳ ರಂಗಭೂಮಿ ಸಂ: ಕಿರಣ ಭಟ್

25. ಎ.ಎಸ್. ಮೂರ್ತಿ – 'ಐದು ಮಕ್ಕಳ ನಾಟಕಗಳು' ನೆಲಮನೆ ಪ್ರಕಾಶನ, ಶ್ರೀರಂಗಪಟ್ಟಣ, 1998

26. ಡಾ। ಆರ್.ವಿ. ಭಂಡಾರಿ ಕನ್ನಡದಲ್ಲಿ ಮಕ್ಕಳ ನಾಟಕ, ಪುಸ್ತಕ: ಮಕ್ಕಳ ರಂಗಭೂಮಿ ಸಂ: ಕಿರಣ ಭಟ್

27. ವೈದೇಹಿ, ಭಾಷಣ, ಕಿನ್ನರ ಮೇಳ, ತುಮರಿ 2001

28. ಕೆ.ಜಿ. ಕೃಷ್ಣಮೂರ್ತಿ, ಭಾಷಣ, ಕಿನ್ನರ ಮೇಳ, ತುಮರಿ 2001

***

# ರಾಜ್ಯದಲ್ಲಿ ಮಕ್ಕಳ ರಂಗಚಟುವಟಿಕೆಗಳು: ಕೆಲವು ಉದಾಹರಣೆಗಳು

–ಡಾ.ಗಜಾನನ ಶರ್ಮ

## ಕರ್ನಾಟಕದ ಮಕ್ಕಳ ರಂಗಭೂಮಿ:

ಕರ್ನಾಟಕದಲ್ಲಿ ಮಕ್ಕಳ ರಂಗಭೂಮಿ ಹೇಗಿದೆ ಎಂಬುದನ್ನು ಕೆ.ವಿ. ಅಕ್ಷರ ಅವರ ಈ ಕೆಳಗಿನ ಮಾತುಗಳ ಮೂಲಕ ಗಮನಿಸಬಹುದಾಗಿದೆ:

"ನಮ್ಮ ಮಕ್ಕಳ ರಂಗಭೂಮಿ ಹೇಗಿದೆ? ಮೊದಲನೆ ಉತ್ತರ – ನಮ್ಮಲ್ಲಿ ಮಕ್ಕಳ ರಂಗಭೂಮಿ ಇಲ್ಲವೇ ಇಲ್ಲ ಅನ್ನುವಷ್ಟು ಕಡಿಮೆ ಪ್ರಮಾಣದಲ್ಲಿದ್ದರೆ, ಗೆಜೆಟ್‌ನ ದಾಖಲೆ ತೆಗೆದುನೋಡಿ – ಕರ್ನಾಟಕದ ಜನಸಂಖ್ಯೆಯ ಸುಮಾರು ಅರ್ಧದಷ್ಟು ಭಾಗ ಹದಿನಾಲ್ಕು ವರ್ಷಕ್ಕಿಂತ ಕೆಳಗಿನವರು. ಈ ಪ್ರಮಾಣಕ್ಕೆ ಹೋಲಿಸಿ ನೋಡಿದರೆ ರಂಗಭೂಮಿ ಯಾಕೆ, ಮಕ್ಕಳ ಸಾಹಿತ್ಯ, ಮಕ್ಕಳ ಚಿತ್ರಕಲೆ ಹಾಗೂ ಯಾವುದೇ ರೀತಿಯ ಸಾಂಸ್ಕೃತಿಕ ಚಟುವಟಿಕೆಗಳು ಕೂಡ ಸಾಲುವಷ್ಟು ಇಲ್ಲ!

ಎರಡನೆಯದಾಗಿ ಮಕ್ಕಳ ರಂಗಭೂಮಿ ಹೇಗಿರಬೇಕು? ಕರ್ನಾಟಕದಲ್ಲಿ ಇಲ್ಲಿಯ ತನಕ ನಡೆದ ಹೆಚ್ಚಿನ ಮಕ್ಕಳ ನಾಟಕಗಳು ಕಾಲ್ಪನಿಕ ಲೋಕವನ್ನು ಬಿಂಬಿಸುವಂತಹವು. ಹಲವು ಪ್ರದರ್ಶನ ಕಂಡ ಪ್ರಭಾತ್ ಕಲಾವಿದರ 'ಸಿಂಡ್ರೆಲಾ' ಇರಲಿ, ಅಥವಾ ಹಲವು ಕಡೆ ಪ್ರದರ್ಶಿತವಾಗಿ ಜನಪ್ರಿಯವಾಗಿರುವ ಡಾ। ಕಂಬಾರರ 'ಅಲಿಬಾಬಾ' ಇರಲಿ, ಕಾರಂತರ 'ಪಂಜರಶಾಲೆ' ಇರಲಿ – ಎಲ್ಲವೂ ಮಕ್ಕಳಿಗೆ ಕಾಲ್ಪನಿಕತೆಯ ಸಂತೋಷ ತೆರೆಯಿಸುವಷ್ಟೇ ಸೀಮಿತ ಉದ್ದೇಶ ಹೊಂದಿರುವಂಥವು."[1]

ಮೇಲಿನ ಅಭಿಪ್ರಾಯವನ್ನು ಮಾನ್ಯ ಮಾಡದೇ ಇರುವವರೂ ಕೂಡ ಒಪ್ಪಲೇಬೇಕಾದ ಸತ್ಯವೆಂದರೆ ಕನ್ನಡದಲ್ಲಿ ಮಕ್ಕಳ ರಂಗಚಟುವಟಿಕೆಯ ಪ್ರಮಾಣ ಮತ್ತು ಗುಣಮಟ್ಟ ಎರಡೂ ಸಾಕಷ್ಟಿಲ್ಲ. ಆದರೆ ಈ ಶತಮಾನದ ಒಟ್ಟೂ ಇತಿಹಾಸವನ್ನು ಗಮನಿಸಿದಾಗ, ಶೂನ್ಯದಿಂದ ಹೊರಟ ನಮ್ಮ ಸಾಧನೆ ತೃಪ್ತಿಕರವಲ್ಲದಿದ್ದರೂ ತಕ್ಕಷ್ಟು

ಬೆಳೆದು ನಿಂತಿದೆ ಎಂಬುದೂ ಸತ್ಯ. ನಮ್ಮ ಮಕ್ಕಳ ಸಂಖ್ಯೆಗೆ ಸಮಾನಾಂತರವಾಗಿ ಅಲ್ಲವಾದರೂ, ಅಲ್ಲಲ್ಲಿ ರಂಗಚಟುವಟಿಕೆಗಳು ನಡೆದಿರುವುದಂತೂ ಸತ್ಯ. ಅದರಲ್ಲೂ ವಿಶೇಷವಾಗಿ ನಮ್ಮ ಮಕ್ಕಳ ನಾಟಕಗಳ ಉಗಮಕ್ಕೆ ಕಾರಣವಾದ ಶಾಲಾರಂಗಭೂಮಿ ಇಂದಿಗೂ ಜೀವಂತವಾಗಿ ಮುಂದುವರೆದಿದೆ. [ಇತ್ತೀಚಿನ ದಿನಗಳಲ್ಲಷ್ಟೇ ಅದರ ಜೀವಂತಿಕೆ ಸೊರಗಲು ಪ್ರಾರಂಭವಾಗಿದೆಯೆಂಬುದೂ ಉತ್ಪ್ರೇಕ್ಷೆಯಲ್ಲ.]

## ಶಾಲಾ ರಂಗಭೂಮಿ:

ಕಳೆದ ಶತಮಾನದ ಆದಿಯಲ್ಲಿ ಪಠ್ಯದ ಭಾಗವಾಗಿದ್ದ ಇಂಗ್ಲಿಷ್ ನಾಟಕಗಳ ತುಣುಕಗಳನ್ನೇ ಉರುಹೊಡೆದು ಒಪ್ಪಿಸುವ ಮೂಲಕ ನಾಟಕ ಪ್ರದರ್ಶನಗಳು ನಮ್ಮ ಶಾಲೆಗಳಲ್ಲಿ ಆರಂಭವಾಯಿತು. ನಂತರ ಶಾಲೆಗಳಲ್ಲಿ ಕನ್ನಡ ನಾಟಕಗಳನ್ನು ಆಡುವ ಉದ್ದೇಶದಿಂದ ಪೌರಾಣಿಕ ಕಥೆಗಳ, ಐತಿಹಾಸಿಕ ಕಥೆಗಳ ಸಂದರ್ಭಗಳಿಗೆ ಹೊಂದುವಂತೆ ಕೆಲವು ಸಂಭಾಷಣೆಗಳನ್ನು ಹೆಣೆದು, ಮಕ್ಕಳಿಂದ ಕಂಠಪಾಠ ಮಾಡಿಸಿ, ಒಪ್ಪಿಸಿ, ಅದನ್ನು ನಾಟಕವೆಂದು ಕರೆಯಲಾಗುತ್ತಿತ್ತು. ಕ್ರಮೇಣ ಜಾನಪದ ಕಥೆಗಳ, ನೀತಿಕಥೆಗಳ ಅಳವಡಿಕೆಯೂ ಕೆಲವು ಉಪಾಧ್ಯಾಯರಿಂದ, ಇನ್ನೂ ಕೆಲವು ಆಸಕ್ತರಿಂದ ನಡೆಯಿತು. ಮುಂದೆ ಶಾಲೆಗಳಲ್ಲಿ ಸಭೆ ಸಮಾರಂಭಗಳಲ್ಲಿ ನಾಟಕ ಆಡುವ ಪ್ರಕ್ರಿಯೆ ಮುಂದುವರೆಯುತ್ತಾ ಬಂತು.

ಮುಂದೆ ಸಾರ್ವಜನಿಕ ಶಾಲೆಗಳು ಹೆಚ್ಚಿದಂತೆ, ಶಾಲೆಗಳಲ್ಲಿ ನಾಟಕವಾಡುವುದೂ ಹೆಚ್ಚಿತು. ಪ್ರತಿಶಾಲೆಗಳಲ್ಲಿ 'ವಾರ್ಷಿಕೋತ್ಸವ' ಆಚರಿಸುವ ಪದ್ಧತಿ ಆಚರಣೆಗೆ ಬಂದಿತು. ಸೂಕ್ಷ್ಮವಾಗಿ ಅವಲೋಕಿಸಿದರೆ ಕನ್ನಡದಲ್ಲಿ ಮಕ್ಕಳ ನಾಟಕಗಳು ಬೆಳೆದು ಬರಲು ಈ 'ಶಾಲಾ ವಾರ್ಷಿಕೋತ್ಸವ'ಗಳ ಕೊಡುಗೆ ಅಪಾರವಾಗಿದೆ. ಇಂದಿಗೂ ಕೂಡ ಕೆಲವಾದರೂ ಶಾಲೆಗಳಲ್ಲಿ 'ಶಾಲಾ ವಾರ್ಷಿಕೋತ್ಸವ'ಗಳು ಬಂದಾಗ ಆಸಕ್ತ ಉಪಾಧ್ಯಾಯರುಗಳು ಮಕ್ಕಳ ನಾಟಕ ಕೃತಿಗಳಿಗಾಗಿ, ತಮ್ಮ ಶಾಲೆಯ ಇತಿ–ಮಿತಿಗಳಿಗೆ ಒಳಪಟ್ಟು ಕೃತಿಗಳನ್ನು ಆಯ್ಕೆ ಮಾಡಲು ತಿಣುಕುವುದನ್ನು ನಾವು ಗಮನಸಬಹುದು.

ಈಗಾಗಲೇ ಹೇಳಿದಂತೆ ಈ ನಾಟಕಗಳು ವಿಮರ್ಶಕರ ತೆಕ್ಕೆಗೆ ಸಿಕ್ಕದೆ, ಪ್ರಕಟಣೆಯ ಪ್ರಲೋಭನೆಗೆ ಒಳಗಾಗದೆ, ಪತ್ರಿಕಾ ಪ್ರಚಾರಗಳಿಗೆ ಪಕ್ಕಾಗದೆ ಸೂಕ್ತ ದಾಖಲಾತಿ ಪಡೆಯದೇ ಹೋದವು. ಆದರೂ ಪ್ರತಿ ಶಾಲೆಗಳಲ್ಲಿ ವಾರ್ಷಿಕೋತ್ಸವ ನಡೆಯುತ್ತಲೇ ಇದ್ದವು. ಪ್ರತಿ ವಾರ್ಷಿಕೋತ್ಸವದಲ್ಲಿ ನಾಟಕಗಳು ನಡೆಯುತ್ತಲೇ ಬಂದವು. ನಂತರದ ದಿನಗಳಲ್ಲಿ ಸಂಭವಿಸಿದ ಪ್ರಮುಖ ಬದಲಾವಣೆಯೆಂದರೆ ಶಾಲಾರಂಗಭೂಮಿಗೆ ಕೈಲಾಸಂ ನಾಟಕಗಳ ಪ್ರವೇಶ. ಬಹುತೇಕ ಶಾಲೆಗಳಲ್ಲಿ ಕೈಲಾಸಂ ನಾಟಕಗಳು, ನಂತರದ ದಿನಗಳಲ್ಲಿ ಕೆ. ಗುಂಡಣ್ಣ, ದಾಶರಥಿ ದೀಕ್ಷಿತ್, ಬೇಲೂರು ಕೃಷ್ಣಮೂರ್ತಿಯಂಥವರ

ನಾಟಕಗಳು ಪ್ರದರ್ಶನಗೊಳ್ಳತೊಡಗಿದವು. ಆಗಿನ ಸಂದರ್ಭಗಳಲ್ಲಿ ಶಾಲೆಗಳಲ್ಲಿ ಒಂದು ಧನಾತ್ಮಕ ಪ್ರವೃತ್ತಿ ಬೆಳೆಯುತ್ತಾ ಬಂದಿತು. ಅದೇನೆಂದರೆ, ಆ ಕಾಲದಲ್ಲಿ ಶಾಲೆಗಳಲ್ಲಿ ಬರಿಯ ವಾರ್ಷಿಕೋತ್ಸವಗಳೇ ಅಲ್ಲದೆ ತಿಂಗಳ ಹಬ್ಬ, ಸರಸ್ವತೀ ಪೂಜೆ, ರಾಷ್ಟ್ರೀಯ ಹಬ್ಬಗಳ ಆಚರಣೆ... ಮುಂತಾಗಿ ಹಲವು ತರಹದ ಸಮಾರಂಭಗಳನ್ನು ನಡೆಸಲಾಗುತ್ತಿತ್ತು. ಈ ಸಮಾರಂಭಗಳಿಗಾಗಿ ಹಲವು ತರಹದ ಚಟುವಟಿಕೆಗಳನ್ನೂ, ಸ್ಪರ್ಧೆಗಳನ್ನೂ ನಡೆಸುವ ಪರಿಪಾಠ ನಡೆದಿತ್ತು. ಬಿ.ವಿ. ಕಾರಂತರು ಇಂತಹ 'ತಿಂಗಳ ಹಬ್ಬ'ವೊಂದರಲ್ಲಿ ತಾವು 'ಸುಕ್ಲುಂಡೆ ಐತಾಳ್ರು ಕುಂಬ್ಳಕಾಯಿ ಭಾಗವತ್ರು' ಎಂಬ ನಾಟಕದಲ್ಲಿ 'ಸುಕ್ಲುಂಡೆ ಐತಾಳ್ರ' ಪಾತ್ರ ವಹಿಸಿದ್ದನ್ನು 7.5.2002 ರಂದು ತುಮರಿಯ ಕಿನ್ನರ ಮೇಳದ ನಾಟಕೋತ್ಸವದ ಸಂದರ್ಭದಲ್ಲಿ ನೀಡಿದ ಉಪನ್ಯಾಸದಲ್ಲಿ ನೆನಪಿಸಿಕೊಂಡರಲ್ಲದೆ, ಆಗ ಅದು ತನಗೆ ನೀಡಿದ ಸಂಭ್ರಮವನ್ನು ಮೆಲುಕು ಹಾಕಿದರು. ಇಂತಹ ಸಮಾರಂಭಗಳ ಸಂದರ್ಭದಲ್ಲಿ ನಡೆಯುತ್ತಿದ್ದ ಹಾಡಿನ ಸ್ಪರ್ಧೆ, ಭಾಷಣ ಸ್ಪರ್ಧೆ, ವಿವಿಧ ವೇಷ ಸ್ಪರ್ಧೆ, ಏಕಪಾತ್ರಭಿನಯ, ನೃತ್ಯ, ಜಾನಪದ ನೃತ್ಯ, ಚಿತ್ರ ರಚನೆ ಮುಂತಾದ ಸ್ಪರ್ಧೆಗಳೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ರಂಗಭೂಮಿಗೆ ಪೂರಕ ಚಟುವಟಿಕೆಗಳೇ ಆಗಿದ್ದು, ಮಕ್ಕಳಲ್ಲಿ ರಂಗಭೂಮಿಯ ಆಸಕ್ತಿಯನ್ನು ಹುಟ್ಟಿಸುವಲ್ಲಿ ಮತ್ತು ಹುಟ್ಟಿದ ಆಸಕ್ತಿಯ ಜೀವಂತಿಕೆಯನ್ನು ಕಾಪಾಡುವಲ್ಲಿ ಸಹಕರಿಸುತ್ತಿದ್ದವು. ವಿವಿಧ ವೇಷ ಸ್ಪರ್ಧೆಯ ಸಂದರ್ಭದಲ್ಲಿ ಮಕ್ಕಳು ತಮಗೆ ಸ್ಥಳೀಯವಾಗಿ ದೊರೆಯುತ್ತಿದ್ದ ಪರಿಕರಗಳಿಂದಲೇ ಪಾತ್ರಗಳನ್ನು ಸೃಷ್ಟಿಸುವ ಕಲೆಯನ್ನು ಕಲಿಯುತ್ತಿದ್ದವು. ಏಕಾಪಾತ್ರಭಿನಯದಿಂದ ಮಕ್ಕಳು, ನಾಟಕದ ತುಣುಕೊಂದನ್ನು ಆರಿಸಿಕೊಂಡು, ತಮ್ಮಲ್ಲಿ ಹುದುಗಿದ್ದ ಅಭಿನಯ ಕಲೆಯನ್ನು ಅಭಿವ್ಯಕ್ತಿಗೊಳಿಸಲು ಸಮರ್ಥವಾಗುತ್ತಿದ್ದವು. ಚಿತ್ರ ಬರೆಯುವುದರಿಂದ ಬಣ್ಣಗಳನ್ನು ಕಲ್ಪಿಸಿಕೊಳ್ಳುವ, ತಮ್ಮ ಸುತ್ತಲ ಪ್ರಪಂಚವನ್ನು ಗ್ರಹಿಸುವ ರೀತಿಯನ್ನು ಕಲಿಯುತ್ತಿದ್ದವು. ಹಾಡಿನಿಂದ ನಾಟಕಕ್ಕೆ ಬೇಕಾದ ಸಂಗೀತ, ಭಾಷಣದಿಂದ ಮಾತು, ಏಕಾಪಾತ್ರಾಭಿನಯದಿಂದ ಅಭಿನಯ, ವಿವಿಧವೇಷದಿಂದ ವೇಷಭೂಷಣ, ಚಿತ್ರ ಬರೆಯುವುದರಿಂದ ರಂಗಸಜ್ಜಿಕೆ– ಹೀಗೆ ಈ ಎಲ್ಲ ಚಟುವಟಿಕೆಗಳೂ ರಂಗಭೂಮಿಯ ಅಂಶಗಳನ್ನೇ ಒಳಗೊಂಡು ಮಕ್ಕಳಲ್ಲಿ ರಂಗಾಸಕ್ತಿಯನ್ನು ಹುಟ್ಟು ಹಾಕುತ್ತಿದ್ದವು; ಪೋಷಿಸುತ್ತಿದ್ದವು.

1971ರಲ್ಲಿ ಬಿ.ವಿ. ಕಾರಂತರಿಂದ ರಂಗಭೂಮಿಯು ಹೊಸ ಚೇತನವನ್ನು ಪಡೆಯಿತು ಎಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಆದರೆ ಇಲ್ಲಿ ನಾವು ಸೂಕ್ಷ್ಮವಾಗಿ ಗಮನಿಸಬೇಕಾದ ಒಂದು ವಿಷಯವೆಂದರೆ, ಬಹು ಚರ್ಚಿತವಾದ ಕಾರಂತರ ಪ್ರವೇಶವು ಶಾಲಾ ರಂಗಭೂಮಿಯ ಮೇಲೆ ಮಹತ್ತರವಾದ ಪರಿಣಾಮ ಬೀರಲಿಲ್ಲ. ಶಿಕ್ಷಕರು ಬರೆದ ನಾಟಕವನ್ನು ಬಿಟ್ಟು ಆಸಕ್ತರು ಬರೆದ ನಾಟಕವನ್ನು ಎಲ್ಲೋ ಕೆಲವು ಪ್ರಮುಖ

ಸಂದರ್ಭಗಳಲ್ಲಿ ಆಯ್ಕೆ ಮಾಡಿಕೊಂಡು ಆಡಿದ ಉದಾಹರಣೆಗಳಿದ್ದರೂ, ಸಾಮಾನ್ಯ ಸಂದರ್ಭದಲ್ಲಿ ಶಾಲಾರಂಗಭೂಮಿ ತನ್ನ ಹಳೆಯ ಪದ್ಧತಿಯನ್ನೇ ಮುಂದುವರೆಸಿತು. ಇದು ಅನಿವಾರ್ಯವಾಗಿತ್ತು ಕೂಡ. ಯಾಕೆಂದರೆ ನಮ್ಮ ಹೆಚ್ಚಿನ ಶಾಲಾ ಕಾಲೇಜುಗಳು ಸರ್ಕಾರದ ನಿಯಂತ್ರಣದಲ್ಲೇ ಇದ್ದು, ಸರ್ಕಾರ ಮಕ್ಕಳ ರಂಗಭೂಮಿಯ ಕುರಿತು ಯಾವುದೇ ಸ್ಪಷ್ಟವಾದ ಸಿದ್ಧಾಂತವನ್ನಾಗಲೀ, ಕಾರ್ಯಸೂಚಿಯನ್ನಾಗಲೀ ಅಳವಡಿಸಿಕೊಂಡಿರದೇ ಇರುವ ಪ್ರಯುಕ್ತ, ಶಾಲೆಗಳಲ್ಲಿ ನಾಟಕ ಆಡಲು ಇತಿಮಿತಿಗಳು ಹೆಚ್ಚು. ಅಷ್ಟೇ ಅಲ್ಲ. ಶಾಲಾಕಾಲೇಜುಗಳಲ್ಲಿ ರಂಗ ಚಟುವಟಿಕೆಗಳು ನಡೆಯಲು ಬೇಕಾಗುವ ಕನಿಷ್ಟ ಸೌಕರ್ಯಗಳನ್ನು ಒದಗಿಸುವ ಪ್ರಯತ್ನಗಳೂ ನಡೆದಿಲ್ಲ, ಹಾಗಾಗಿ ಶಾಲೆಗಳು ಹಿಂದಿನಂತೆಯೇ ತಮ್ಮ ಇತಿಮಿತಿಗಳಿಗೊಳಪಟ್ಟೇ ತಮ್ಮ ರಂಗಚಟುವಟಿಕೆಗಳನ್ನು ನಡೆಸುವುದು ಅನಿವಾರ್ಯವಾಗಿತ್ತು; ಅನಿವಾರ್ಯವಾಗಿದೆ.

ಇತ್ತೀಚಿನ ದಿನಗಳಲ್ಲಿ ಖಾಸಗಿ ಶಾಲೆಗಳು ಹೆಚ್ಚಾಗುತ್ತಿದ್ದಂತೆ, ಸೌಲಭ್ಯಗಳಿಗೆ ಕೊರತೆಯಿಲ್ಲವಾಯಿತಾದರೂ ದುರದೃಷ್ಟವಶಾತ್ ಈ ವಾರ್ಷಿಕೋತ್ಸವಗಳು ಶಾಲೆಗಳ ಪ್ರತಿಷ್ಠೆಯ ಸಂಕೇತಗಳಾಗಿ ಪರಿವರ್ತಿತವಾದವು. ಇಂತಹ ಸಂದರ್ಭದಲ್ಲಿ, ಈ ಶಾಲೆಗಳು ಸರ್ಕಾರಿ ಶಾಲೆಗಳಂತೆ ನಾಟಕಗಳನ್ನು ಆಡುವುದು ತಮ್ಮ ಪ್ರತಿಷ್ಠೆಗೆ ಕುಂದು ಎಂದು ಬಗೆದು, ಬೇರೆ ರೀತಿಯ ಮನೋರಂಜನಾ ಕಾರ್ಯಕ್ರಮಗಳಿಗೆ ಒತ್ತು ನೀಡತೊಡಗಿದವು. ಇದರಲ್ಲಿ ಮುಖ್ಯವಾಗಿ ಆಯಾ ಊರಿನ ಪ್ರತಿಷ್ಠಿತ ರಂಗಮಂದಿರಗಳನ್ನು ಬಾಡಿಗೆಗೆ ಪಡೆಯುವುದು, ಅದ್ದೂರಿಯಾಗಿ ರಂಗಮಂಚವನ್ನು ಆಲಂಕರಿಸುವುದು, ಕ್ಯಾಸೆಟ್‌ಗಳನ್ನು ಹಾಕಿ ಚಲನಚಿತ್ರ ಗೀತೆಗಳ ನೃತ್ಯಗಳನ್ನು ಅಭಿನಯಿಸುವುದು ಸಾಮಾನ್ಯವಾದುವು. ಇಲ್ಲಿಕೂಡ ಕನ್ನಡ ಚಲನಚಿತ್ರ ಗೀತೆಗಳಿಗಿಂತ ಹಿಂದಿ ಚಲನಚಿತ್ರ ಗೀತೆಗಳ ನೃತ್ಯಕ್ಕೆ ಹೆಚ್ಚು ಪ್ರಾತಿನಿಧ್ಯ ಮತ್ತು ಪ್ರತಿಷ್ಠೆಯ ಮೆರುಗು!

ಇವುಗಳಲ್ಲದೆ ಶಾಲೆಗಳಲ್ಲಿ ಇತ್ತೀಚೆಗೆ ಕಂಡುಬರುತ್ತಿರುವ ಪ್ರಮುಖ ಬದಲಾವಣೆಗಳೆಂದರೆ ರಂಗಾಂಶಗಳಿಂದ ತುಂಬಿದ ಏಕಪಾತ್ರಾಭಿನಯ, ವಿವಿಧವೇಷ ಮುಂತಾದ ಸ್ಪರ್ಧೆಗಳನ್ನು ಕೈಬಿಟ್ಟು, ಟಿ.ವಿ. ಮುಂತಾದ ಸಮೂಹ ಮಾಧ್ಯಮಗಳ ಪ್ರಭಾವಕ್ಕೆ ಪಕ್ಕಾಗಿ 'ಏಕ್ ಮಿನಿಟ್', ಕ್ವಿಜ್, ಮುಂತಾದ ಸ್ಪರ್ಧೆಗಳನ್ನು ನಡೆಸುವ ಪರಿಪಾಠ ಆರಂಭಿಸಿದ್ದು. ಇಂತಹ ಸ್ಪರ್ಧೆಗಳೂ ಇಂದಿನ ಮಕ್ಕಳಿಗೆ ಅನಿವಾರ್ಯವೆನ್ನುವ ವಾದವನ್ನು ಪೂರ್ಣವಾಗಿ ಅಲ್ಲಗಳೆಯಲಾಗದಿದ್ದರೂ, ರಂಗಭೂಮಿಯ ಪೂರಕ ಚಟುವಟಿಕೆಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣದಲ್ಲಿ ಸಹಕರಿಸಿದಷ್ಟು ಇವು ಸಹಕಾರಿಗಳಲ್ಲ ಎಂಬುದು ಗಮನಾರ್ಹ. ಅದರಲ್ಲೂ ಕ್ಯಾಸೆಟ್ ಡ್ಯಾನ್ಸ್, ಏಕ್ ಮಿನಿಟ್ ಮುಂತಾದ ಸ್ಪರ್ಧೆಗಳನ್ನೇ ಹೆಚ್ಚು ಹೆಚ್ಚಾಗಿ ನಡೆಸುತ್ತಿರುವುದು ಮತ್ತು ಅಗತ್ಯಕ್ಕಿಂತ ಹೆಚ್ಚು 'ರಸ ಪ್ರಶ್ನೆ' ಕಾರ್ಯಕ್ರಮಕ್ಕೆ ಒತ್ತು ಕೊಡುತ್ತಿರುವುದು ಟಿ.ವಿ. ನಮ್ಮ ಜೀವನದ

ಅವಿಭಾಜ್ಯ ಅಂಗ ಎಂಬ ಭಾವನೆಯನ್ನು ಮಕ್ಕಳಲ್ಲಿ ಮೂಡಿಸುತ್ತಿದೆ. ಮಾತ್ರವಲ್ಲದೆ ಕೇವಲ ಅನುಕರಣೆಯೇ ಸೃಜನಶೀಲತೆ ಎನ್ನುವ ಭ್ರಮೆಯನ್ನು ಬೆಳೆಸುತ್ತಿದೆ. ಮಾಹಿತಿಗಳನ್ನು ನೆನಪಿಟ್ಟುಕೊಳ್ಳುವುದಷ್ಟೇ ನಮ್ಮ ಭವಿಷ್ಯದ ಆಶಾಕಿರಣ ಎಂಬ ಭಾವನೆಗಳು ಬೆಳೆದು ವಿದ್ಯಾರ್ಥಿಗಳು 'ಅನುಭವ'ಗಳ ಅಗತ್ಯವನ್ನೂ ಮಹತ್ವವನ್ನೂ ನಿರಾಕರಿಸುವಂತೆ ಮಾಡುತ್ತವೆ.

ಇನ್ನೊಂದು ಶೋಚನೀಯ ವಿಚಾರವೆಂದರೆ, ಇತ್ತೀಚೆಗೆ ನಡೆಯುವ ಸ್ಪರ್ಧೆಗಳಲ್ಲಿ ಬಹುಮಾನ ಪಡೆಯುವುದಷ್ಟೇ ಪ್ರತಿಷ್ಠೆ ಎಂಬಂತಾಗಿ, ಸ್ಪರ್ಧೆ 'ಆರೋಗ್ಯಕರ' ಹಂತವನ್ನು ದಾಟುತ್ತಿದೆ. ಉದಾಹರಣೆಗೆ ವೇಷಭೂಷಣ ಸ್ಪರ್ಧೆಗಾಗಿ ಹಿಂದೆ ವಿದ್ಯಾರ್ಥಿಗಳೂ, ಉಪಾಧ್ಯಾಯರೂ, ಪೋಷಕರೂ ತಮಗೆ ಸುಲಭದಲ್ಲಿ ದೊರೆಯುತ್ತಿದ್ದ ಪರಿಕರಗಳನ್ನು ಕಲಾತ್ಮಕವಾಗಿ ಬಳಸಿ, ಹೊಸ ವೇಷ ಕಟ್ಟುವ ಸೃಜನಶೀಲತೆಯಿತ್ತು. ಆದರೆ ಈಗ ಯಾರಾದರೂ ಪ್ರಸಾಧನತಜ್ಞರ ಬಳಿ ಮಗುವನ್ನು ಕರೆದುಕೊಂಡು ಹೋಗಿ ರಾಮ, ಕೃಷ್ಣ, ವಿವೇಕಾನಂದರನ್ನಾಗಿಸಿ, ಅವರನ್ನು ಕರೆತಂದು ವೇದಿಕೆಯಲ್ಲಿ ನಿಲ್ಲಿಸಿ ಬಹುಮಾನ ಗಿಟ್ಟಿಸುವುದು ಸಾಮಾನ್ಯವಾಗುತ್ತಿದೆ. ಇದರಲ್ಲಿ ಮಕ್ಕಳಿಗೆ ಕೆಲವು ತಾಸು ಹಿಂಸೆಯ ಹೊರತಾಗಿ ಯಾವುದೇ ಸೃಜನಶೀಲತೆ ದಕ್ಕುವುದಿಲ್ಲ. ಕೇವಲ 'ಅನುಕರಣೆ'ಯೇ ಪ್ರಧಾನವಾಗುತ್ತಾ 'ಸೃಜನಶೀಲತೆ' ಮಾಯವಾಗುತ್ತಿರುವುದು ಮತ್ತು 'ಮಾಹಿತಿ ಸಂಗ್ರಹ'ವಷ್ಟೇ ಪ್ರಧಾನವಾಗುತ್ತಾ, 'ಅನುಭವಿಸಿ ಗ್ರಹಿಸುವ ಪ್ರಕ್ರಿಯೆ' ತೆರೆಮರೆಗೆ ಸರಿಯುತ್ತಿರುವುದು ಮಕ್ಕಳ ವ್ಯಕ್ತಿತ್ವದ ನಿರ್ಮಾಣದ ದೃಷ್ಟಿಯಿಂದ ದುರದೃಷ್ಟಕರ.

ಇಷ್ಟೇ ಅಲ್ಲದೆ ಇತ್ತೀಚಿನ ದಿನಗಳಲ್ಲಿ ನಮ್ಮ ಶಾಲೆಗಳ ಕನ್ನಡ ಕಲಿಕೆಯ ಸ್ಥಿತಿಯೂ ಶೋಚನೀಯವಾಗಿದೆ. ಕೆಲವು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಕನ್ನಡದಲ್ಲಿ ಮಕ್ಕಳ ನಾಟಕ ಆಡಿಸಲು ಒಂದು ಶಾಲೆಯ ಕೆಲವು ಮಕ್ಕಳನ್ನು ಆಯ್ಕೆ ಮಾಡಿಕೊಂಡ ಸಂದರ್ಭವೊಂದರಲ್ಲಿ ಅವರಿಗೆ ಸಂಭಾಷಣೆ ಬರೆಸುವುದೇ ಕಷ್ಟವಾದ ನನ್ನ ಸ್ವಂತ ಅನುಭವವನ್ನು ದಾಖಲಿಸಲು ಇಚ್ಛಿಸುತ್ತೇನೆ. 'ನಾನು' ಎಂದು ಬರೆಸಲು ಇಂಗ್ಲಿಷ್ ವರ್ಣಮಾಲೆಯ ಎನ್.ಎ.ಎನ್.ಯು 'ನಾನು' ಎಂದು ಕೆಲವು ಮಕ್ಕಳು ಬರೆದುಕೊಂಡಿದ್ದು ನಾನು ಸ್ವತಃ ಕಂಡು ಅನುಭವಿಸಿದ ಪರಿಸ್ಥಿತಿ. ಶಿವಮೊಗ್ಗದಂತಹ ಊರಿನಲ್ಲೂ ಮಕ್ಕಳಿಗೆ ಸಂಭಾಷಣೆ ಬರೆಸುವ ಸಂದರ್ಭದಲ್ಲಿ, ಉದಾಹರಣೆಗೆ ಆರನೇ ತರಗತಿಯಲ್ಲಿ ಓದುವ ಹುಡುಗನ ತಾಯಿ 'ಸಾರ್, ನಾನೇ ಬರೆದುಕೊಳ್ಳುತ್ತೇನೆ. ಅವನಿಗೆ ಕನ್ನಡದಲ್ಲಿ ಕೈ ಓಡುವುದಿಲ್ಲ' ಎನ್ನುವಷ್ಟರ ಮಟ್ಟಿಗೆ ಮಕ್ಕಳಲ್ಲಿ ಕನ್ನಡದ ಕಲಿಕೆಯ ಮಟ್ಟ ಕುಸಿದಿದೆ ಮತ್ತು ಪೋಷಕರಿಗೆ ಕನ್ನಡದ ಕುರಿತು ಕೀಳರಿಮೆ ಬೆಳೆದಿದೆ ಎಂಬುದು ನಮ್ಮ ನಡುವಿನ ಕಹಿಸತ್ಯ.

## ಬೇಸಿಗೆ ಶಿಬಿರಗಳು:

ಸರ್ಕಾರವು ಶಿಕ್ಷಣವನ್ನು ಕಡ್ಡಾಯಗೊಳಿಸಿದ ನಂತರ ಸಾರ್ವಜನಿಕ ಶಿಕ್ಷಣ ಸರ್ವವ್ಯಾಪಿಯಾಯಿತು. ಅಲ್ಲಿಯವರೆಗೂ ಸಮಗ್ರ ಕುಟುಂಬದಲ್ಲಿ ಬೆರೆತು ಅನನ್ಯವಾಗಿದ್ದ ಮಕ್ಕಳು ಕ್ರಮೇಣ ಒಂದು ಪ್ರತ್ಯೇಕ ಸಮುದಾಯವಾಗಿ ಅಸ್ತಿತ್ವ ಪಡೆಯತೊಡಗಿದರು.

ಸಮೂಹದಲ್ಲಿ, ತಲೆಮಾರುಗಳು ಒಟ್ಟಿಗೆ ಕಲೆತು ಬದುಕುವ ಕೌಟುಂಬಿಕ ವ್ಯವಸ್ಥೆ ಕುಸಿತಗೊಂಡು, ಕುಟುಂಬಗಳು 'ಪುಟ್ಟ ಸಂಸಾರ' (Nuclear family)ಗಳಾಗಿ ಒಡೆದು ನಿಂತವು. ಮಧ್ಯಮ ವರ್ಗದಲ್ಲಿ ಮಹಿಳೆಯರೂ ದುಡಿಯುವುದು ಅನಿವಾರ್ಯವಾಗಿ, ಗಂಡ–ಮಕ್ಕಳನ್ನು ಕಛೇರಿ–ಶಾಲೆಗಳಿಗೆ ಕಳುಹಿಸುತ್ತಲೇ, ತಾನೂ ಊಟದ ಡಬ್ಬಿಯೊಡನೆ ಉದ್ಯೋಗಕ್ಕೆ ಹೊರಡುವ ಮಹಿಳೆಗೆ ಶಾಲಾ ರಜಾದಿನಗಳಲ್ಲಿ ಮಕ್ಕಳು 'ಸಮಸ್ಯೆ'ಯಾಗತೊಡಗಿದರು.

ಬಡ ವರ್ಗದ ಮಂದಿಗೂ ಕೂಡ, ಹಿಂದಿನಂತೆ ತಮ್ಮೊಂದಿಗೆ ಕೂಲಿ–ನಾಲಿಗೆ ಬರದೆ ಶಾಲೆಗೆ ಹೋಗುವ 'ಹೈಕಳು' ವರ್ಷದ ಕೆಲವು ದಿನ ತಮ್ಮೊಂದಿಗೆ ಬರಲೂ ಒಲ್ಲದೆ, ಮನೆಯಲ್ಲಿರುವುದೂ ಕಷ್ಟಪಡುವಂತಾಗುವ ಕಾರಣದಿಂದ ಅವರಿಗೂ ರಜೆಯಲ್ಲಿ ಮಕ್ಕಳು ಸಮಸ್ಯೆಯಾದರು. ಇನ್ನು ಹಳ್ಳಿಗಳಲ್ಲಿ ಹಿಂದಿನಂತೆ ಹೊಲಗದ್ದೆಗಿಳಿಯದ 'ಶಾಲೆಗೆ ಹೋಗುವ ಹೈಕಳು' ರಜಾ ದಿನಗಳಲ್ಲಿ ಕಾಡುಮೇಡು ಸುತ್ತಿ ಸಮಯ ವ್ಯರ್ಥಗೊಳಿಸುವಂತಾಯಿತು. ಹೀಗೆ ಸಮಾಜದ ಎಲ್ಲ ವರ್ಗಗಳಲ್ಲಿ ವರ್ಷದ ಬಹುತೇಕ ದಿನಗಳಲ್ಲಿ ಶಾಲೆಗೆ ಹೋಗುವ ಮಕ್ಕಳು ಒಂದೆರಡು ತಿಂಗಳ ರಜಾ ಕಾಲದಲ್ಲಿ ಏನು ಮಾಡಬೇಕೆಂಬುದು ತಿಳಿಯದಂತಾಯ್ತು.

ರಜಾ ದಿನಗಳಲ್ಲಿ ಮಕ್ಕಳ ಸಮಯ ವ್ಯರ್ಥವಾಗುವುದನ್ನು ತಪ್ಪಿಸುವ ಅಂಗವಾಗಿ ಆರಂಭಗೊಂಡ 'ಶಿಬಿರ'ಗಳು ಮಕ್ಕಳಲ್ಲಿ ಸಾಮುದಾಯಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಿದವು. ಶಾಲೆಗೆ ರಜೆ ಲಭಿಸಿದ ಬಳಿಕ ಹೊತ್ತು ಕಳೆಯಲು ಕಷ್ಟಪಡುವ ಮಕ್ಕಳಿಗೂ 'ರಜಾ ಶಿಬಿರ'ಗಳಲ್ಲಿ ಆಸಕ್ತಿ ಉಂಟಾಯಿತು. ಆಟ–ಪಾಠ ಕಲಿಕೆಯೊಂದಿಗೆ ಮಕ್ಕಳ ಸೂಕ್ಷ್ಮ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹಿಸಲು ರಜಾ ಶಿಬಿರಗಳು ಬಹಳ ಸಹಕಾರಿಗಳೆನ್ನಿಸಿದವು.

ಸುಮಾರು 70ರ ದಶಕದ ನಂತರದ ದಿನಗಳಲ್ಲಿ ಇಂತಹ ರಜಾ ಶಿಬಿರಗಳು ಎಲ್ಲ ಕಡೆಗಳಲ್ಲೂ ಸಾಮಾನ್ಯವೆನ್ನಿಸಿದವು. ಇದನ್ನು ಪ್ರಚಲಿತ ಅರ್ಥದಲ್ಲಿ ಬೇಸಿಗೆ ಶಿಬಿರಗಳೆಂದು ಕರೆಯಬಹುದಾದರೂ, ಕೆಲವೆಡೆ ಅರ್ಧವಾರ್ಷಿಕ ರಜೆಯಲ್ಲೂ ನಡೆಯುವ 'ಶರತ್–ಶಿಬಿರ'ಗಳಿವೆ. ಈ ಶಿಬಿರಗಳು ಸಾಮಾನ್ಯವಾಗಿ 10 ದಿನಗಳಿಂದ 30 ದಿನಗಳವರೆಗೆ ನಡೆಯುತ್ತವೆ. ಇವು ಕೇವಲ ನಾಟಕಗಳಿಗೆ ಮಾತ್ರ

ಸೀಮಿತವಾಗಿರುವುದು ಕಡಿಮೆ (ಅಂತಹ ಶಿಬಿರಗಳೂ ಇವೆ). ಹೆಚ್ಚಿನ ಶಿಬಿರಗಳಲ್ಲಿ ಚಿತ್ರಕಲೆ, ಭಾಷಣ, ಸಂಗೀತ, ಯೋಗ, ನೃತ್ಯ, ಕಥೆ ಹೇಳುವುದು, ಆಟ-ಪಾಠಗಳೂ ಸೇರಿ ಹಲವು ಬಗೆಯ ಲಲಿತಕಲೆಗಳನ್ನು ಕಲಿಸುವ ಪ್ರಯತ್ನ ಮಾಡಲಾಗುತ್ತಿದೆ. ಕೆಲವು ಶಿಬಿರಗಳಲ್ಲಿ ಸಾಹಿತ್ಯದ 'ಕ್ಲಾಸಿಕ್' ಕೃತಿಗಳನ್ನು, ಮಹಾಕಾವ್ಯಗಳ ಸಾರಂಶಗಳನ್ನು, ಮಕ್ಕಳಿಗೆ ಹೇಳಿಕೊಡುವ ಪ್ರಯತ್ನಗಳೂ ನಡೆದಿವೆ.

ಇಂತಹ ಶಿಬಿರಗಳಲ್ಲಿ ಸಾಮಾನ್ಯವಾಗಿ ಮೊದಲ ಕೆಲವು ದಿನ ಚಿತ್ರಕಲೆ, ಆಟ-ಪಾಠಗಳನ್ನು ಹೇಳಿಕೊಡುತ್ತಾ, ಕ್ರಮೇಣ ಮಕ್ಕಳಿಗೆ ಥಿಯೇಟರ್ ಗೇಮ್ಸ್ (ರಂಗದಾಟ) ಹೇಳಿಕೊಡುತ್ತಾರೆ. ಕ್ರಮೇಣ ನಾಟಕ ತರಬೇತಿ ಆರಂಭಿಸುತ್ತಾರೆ. ನಾಟಕ ಹೇಳಿಕೊಡುವ ಮೊದಲು ರಂಗ ಚಲನೆ, ಬಾಡಿ ಲಾಂಗ್ವೇಜ್ ಬಗ್ಗೆ, ಧ್ವನಿ ವ್ಯಾಯಾಮದ ಬಗ್ಗೆ, ತಿಳುವಳಿಕೆ ನೀಡುತ್ತಾರೆ. ಇಂತಹ ರಂಗಶಿಕ್ಷಣಕ್ಕೆ ನಿರ್ದಿಷ್ಟವಾದ ಪಠ್ಯಕ್ರಮಗಳನ್ನು ನಿಖರವಾಗಿ ರೂಢಿಸಿಕೊಂಡಿಲ್ಲವಾದರೂ, ಹೆಚ್ಚಿನ ಕಾರ್ಯಕರ್ತರು ರಂಗಭೂಮಿಯಲ್ಲಿ ನುರಿತವರೇ ಆಗಿರುವುದರಿಂದ ಅವರು ತಮ್ಮ ತಮ್ಮ ಅನುಭವಗಳ ಮೂಲಕ ರಂಗಭೂಮಿಯ ಪ್ರಾಥಮಿಕ ಮಾಹಿತಿಗಳನ್ನು ಮಕ್ಕಳಿಗೆ ನೀಡುತ್ತಾರೆ.

ಬೆಂಗಳೂರಿನಲ್ಲಿ ಹಲವು ರಂಗಾಸಕ್ತರು ಇಂತಹ ಬೇಸಿಗೆ ಶಿಬಿರ ನಡೆಸಲು 1970ರ ದಶಕದ ಆರಂಭದಲ್ಲೇ ಕಾರ್ಯೋನ್ಮುಖರಾದರು. ಬೆಂಗಳೂರಿನ ಬೆನಕ ತಂಡ (ಬೆಂಗಳೂರು ನಗರ ಕಲಾವಿದರು) 1977ರಿಂದಲೂ ಮಕ್ಕಳ ಬೇಸಿಗೆ ಶಿಬಿರ ನಡೆಸುತ್ತಾ ಬಂದಿದೆ. ಇಲ್ಲಿ ಪ್ರೇಮಾ ಕಾರಂತರಂತಹ ಪ್ರಸಿದ್ಧ ನಿರ್ದೇಶಕರು ಮಕ್ಕಳ ಶಿಬಿರದ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಬೆಂಗಳೂರಿನ ಹಲವು ಹತ್ತು ಬಡಾವಣೆಗಳಲ್ಲಿ ಪ್ರತಿವರ್ಷ ಇಂತಹ ಶಿಬಿರಗಳು ನಡೆಯುತ್ತಾ ಬಂದಿವೆ. ಇದೇ ತರಹ ಮೈಸೂರಿನಲ್ಲೂ ಬೇಸಿಗೆ ಶಿಬಿರಗಳು, ರಜಾ ಶಿಬಿರಗಳು ನಡೆಯುತ್ತಾ ಬಂದಿವೆ. ಉದಾಹರಣೆಗೆ, ಮೈಸೂರಿನ ವಿ.ವಿ. ಮೊಹಲ್ಲಾದ ಚಿಲ್ಡ್ರನ್ಸ್ ಲಿಟರರಿ ಕ್ಲಬ್‌ನವರು 45 ದಿನಗಳ ಮಕ್ಕಳ ಸಾಹಿತ್ಯಿಕ ಶಿಬಿರ ನಡೆಸುತ್ತಾರೆ. 1996ರಲ್ಲಿ ಗ್ರೀಕ್ ಪುರಾಣದ ಆಧಾರದ ಮೇಲೆ 'ಪರ್ ಸಿಫನಿ' ನಾಟಕ ಆಡಿ ಜನಮೆಚ್ಚುಗೆ ಗಳಿಸಿದ್ದ ಉದಾಹರಣೆ ಹಲವರ ನೆನಪಿನಂಗಳದಲ್ಲಿ ಇನ್ನೂ ಹಸಿರಾಗಿದೆ. ಇದೇ ತರಹ ಹತ್ತು ಹಲವು ನಗರಗಳಲ್ಲಿ ರಜಾ ಶಿಬಿರಗಳು ಸರ್ವೇಸಾಮಾನ್ಯವಾಗಿವೆ.

ಉತ್ತರ ಕರ್ನಾಟಕದಲ್ಲಿ ಕೂಡ ಬೇಸಿಗೆ ಮತ್ತು ಶರತ್ ಶಿಬಿರಗಳನ್ನು ಬಹಳಷ್ಟು ಆಸಕ್ತ ರಂಗತಂಡಗಳು, ಸಾಂಸ್ಕೃತಿಕ ಸಂಘಗಳು ನಡೆಸಿವೆ. ಧಾರವಾಡದ 'ಅಭಿನಯ ಭಾರತಿ' 1987ರಿಂದ 'ಚಿಗುರು-1', 'ಚಿಗುರು-2' ಎಂದು ರಜಾ ಶಿಬಿರಗಳನ್ನು ನಡೆಸಿಕೊಂಡು ಬರುತ್ತಿರುವುದಲ್ಲದೆ. ಪ್ರತಿ ಶಿಬಿರದಲ್ಲಿ ಉತ್ತಮ ನಾಟಕಗಳನ್ನು ಆಡಿಸುತ್ತಾ ಬರುತ್ತಿದೆ. ಬಂಡೂ ಕುಲಕರ್ಣಿ, ಯಶವಂತ ಸರದೇಶಪಾಂಡೆ, ದಿ। ಧ್ರುವರಾಜ

ದೇಶಪಾಂಡೆ, ಪ್ರಕಾಶ ಗರೂಡ, ನಾರಾಯಣ ಪಾಂಡುರಂಗ, ಆನಂದ ಪಾಟೀಲ್.... ಇತ್ಯಾದಿ ರಂಗಾಸಕ್ತರು ಉತ್ತರ ಕರ್ನಾಟಕದಲ್ಲಿ ಈ ತರಹದ ಶಿಬಿರದ ಮೂಲಕ ಮಕ್ಕಳಿಗೆ ಉತ್ತಮ ನಾಟಕಗಳನ್ನು ಆಡಿಸುತ್ತಾ ಬಂದಿದ್ದಾರೆ. ಧಾರವಾಡದ 'ಪಂಚರಂಗಿ', ಹುಬ್ಬಳ್ಳಿಯ 'ಮಧುರಂಗ ಕಲಾವೃಂದ', ಬೆಳಗಾವಿಯ ಜಿಲ್ಲಾಮಟ್ಟದ 'ಚಿಣ್ಣರ ಮೇಳ' 'ಭರತ ನಾಟಕ ಶಾಲೆ' ಹುಬ್ಬಳ್ಳಿ, ಹುಬ್ಬಳ್ಳಿಯ 'ಅಕಾಡೆಮಿ ಆಫ್ ಪರ್ ಫಾರ್ಮಿಂಗ್ ಆರ್ಟ್ಸ್', ಗದುಗಿನ 'ಅಭಿನಯರಂಗ' ಇತ್ಯಾದಿ ಸಂಸ್ಥೆಗಳಲ್ಲದೆ ಇನ್ನೂ ಹಲವಾರು ಸಂಸ್ಥೆಗಳು ಇಂತಹ ಶಿಬಿರಗಳನ್ನು ನಡೆಸಿಕೊಂಡು ಬಂದಿವೆ; ಬರುತ್ತಿವೆ.

ಉತ್ತರ ಕನ್ನಡ ಜಿಲ್ಲೆಯ ಹೆಸರಾಂತ ರಂಗತಂಡ 'ರಂಗಸಂಗ'ವು ಕಿರಣಭಟ್ಟರ ನೇತೃತ್ವದಲ್ಲಿ ನಿರಂತರವಾಗಿ ಇಂತಹ ಶಿಬಿರಗಳನ್ನು ನಡೆಸಿಕೊಂಡು ಬಂದಿರುವುದರ ಜೊತೆಗೆ, ಉತ್ತರ ಕನ್ನಡ ಜಿಲ್ಲೆಯ ಬೇರೆ ಬೇರೆ ಸಂಸ್ಥೆಗಳೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಂಡು, ಶಿಬಿರಗಳ ಮೂಲಕ ನಾಟಕಗಳನ್ನು ಆಡಿಸುತ್ತಿದ್ದಾರೆ. ಅಂಬಿಕಾ ನಗರ, ಹೊನ್ನಾವರ ಹೀಗೆ ಹಲವು ಕಡೆ ಇವರು ಅಥವಾ ಇವರ ಆಸಕ್ತ ಮಿತ್ರರು ಇಂತಹ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಇನ್ನು ಶಿವಮೊಗ್ಗ ಜಿಲ್ಲೆಯಂತೂ ರಂಗಭೂಮಿಯ ತವರು. ಇಲ್ಲಿ ನೀನಾಸಂನಿಂದ ಮೊದಲುಗೊಂಡು ಸಾಗರದ ಉದಯ ಕಲಾವಿದರು, ಕೆಳದಿಯ ಭಾರತೀ ಕಲಾವಿದರು, ಜೋಗದ ಮಿತ್ರ ಮಂಡಳಿ, ಶಿವಮೊಗ್ಗದ ಕಲಾಜ್ಯೋತಿ, ಕಲಾಕಿರಣ ಹೀಗೆ ಹಲವು ಆಸಕ್ತ ತಂಡಗಳಲ್ಲದೆ, ಬ್ರಹ್ಮಾಚಾರ್,ಗುರುರಾವ್ ಬಾಪಟ್, ದೇವೇಂದ್ರ ಬೆಳೆಯೂರು, ಹೆಚ್.ಎಂ. ಪ್ರಭಾಕರ್, ಗಜಾನನ ಶರ್ಮ ಮುಂತಾದ ವ್ಯಕ್ತಿಗಳೂ ಕೂಡ ಇಂತಹ ಕೆಲಸಗಳನ್ನು ಮುಂದುವರೆಸಿದ್ದಾರೆ. ಚಿಕ್ಕಮಗಳೂರಿನಲ್ಲೂ ಎನ್.ಎನ್. ಮಾಸೂರ್‌ರವರ ಮಗ ಸುರೇಶ್ ಮುಂತಾದವರು ತಮ್ಮ ಆಸಕ್ತ ಮಿತ್ರರೊಡಗೂಡಿ ಪ್ರತಿವರ್ಷ ಇಂತಹ ಶಿಬಿರ ನಡೆಸುತ್ತಿದ್ದಾರೆ. ತುಮರಿಯ ಕಿನ್ನರಮೇಳದ ಕೆ.ಜಿ. ಕೃಷ್ಣಮೂರ್ತಿಯವರು ಪ್ರತಿವರ್ಷ ಮಕ್ಕಳ ನಾಟಕೋತ್ಸವ,ವಿಚಾರ ಸಂಕಿರಣ ನಡೆಸುತ್ತಾ ಬರುತ್ತಿದ್ದಾರೆ.

ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಂತೂ ಐ.ಕೆ. ಬೊಳುವಾರ್, ಮೋಹನ ಸೋನಾ, ಮೂರ್ತಿ ದೇರಾಜೆ ಮುಂತಾದ ಆಸಕ್ತರೂ, ಅಭಿನಯ ಸುಳ್ಯ, ವಿನ್ಯಾಸ ಬಾಳಿಲ, ನಿರತ ನಿರಂತ, ಪರಿವಾರರಂಗ ಸುಳ್ಯ, ಚದುರಂಗ ಮೂಡುಬಿದರೆ, ಆಯನ ನಾಟಕದ ಮನೆ, ರಾಗತರಂಗ ಮಂಗಳೂರು, ಸಮುದಾಯ ಕುಂದಾಪುರ ಮುಂತಾದ ಸಂಸ್ಥೆಗಳೂ ರಂಗಶಿಬಿರದ ಚಟುವಟಿಕೆಯಲ್ಲಿ ನಿರತವಾಗಿವೆ. ಇದಲ್ಲದೆ ಬೆಂಗಳೂರಿನ ವಿಜಯನಗರ ಬಿಂಬ ಮತ್ತು ಹನುಮಂತನಗರ ಬಿಂಬ, ತುಮಕೂರಿನ ಶ್ರೀರಂಗರಂಗ ಹವ್ಯಾಸಿ ಕಲಾವಿದರು, ಅಲ್ಲದೆ ಮೈಸೂರಿನ ರಂಗಾಯಣ ಕೂಡ ಮಕ್ಕಳಿಗಾಗಿ ನಾಟಕೋತ್ಸವ ನಡೆಸುತ್ತಿವೆ. ಇಡೀ ರಾಜ್ಯದಲ್ಲಿ ಇಂತಹ ರಜಾ ಶಿಬಿರ, ನಾಟಕೋತ್ಸವ ಇತ್ಯಾದಿ

ಚಟುವಟಿಕೆಗಳು ಮಕ್ಕಳ ರಂಗಭೂಮಿಯ ಜೀವಂತಿಕೆಯನ್ನು ಸಲಹಿಕೊಂಡು ಬರುವಲ್ಲಿ ಸಫಲವಾಗಿವೆಯೆಂದು ಹೇಳಬಹುದಾಗಿದೆ.

**ಸಂಚಾರಿ ರಂಗತಂಡಗಳು:**

ಮಕ್ಕಳ ನಾಟಕಗಳ ಸಂಚಾರಿ ರಂಗತಂಡಗಳ ಚರಿತ್ರೆ ನಮ್ಮ ವೃತ್ತಿರಂಗಭೂಮಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲದಷ್ಟು ಹಿಂದಿನಿಂದಲೇ ಆರಂಭಗೊಂಡಿದೆ.

**ಬಾಲಕಲಾ ವರ್ಧಿನಿ:** "ಅದು 1925ರ ಕಾಲ. ಗುಬ್ಬಿ ಕಂಪನಿಯ ಸುವರ್ಣಯುಗ. ಈ ಸಂದರ್ಭದಲ್ಲಿ ಗುಬ್ಬಿ ವೀರಣ್ಣನವರು ಮಕ್ಕಳಿಗೇ ಪ್ರತ್ಯೇಕವಾದ ನಾಟಕಗಳನ್ನು ಮಕ್ಕಳಿಂದಲೇ ಪ್ರದರ್ಶಿಸಬೇಕೆನ್ನುವ ತಮ್ಮ ಹಳೆಯ ಆಸೆಗೆ ಜೀವ ತುಂಬಲು ಬಯಸಿದರು. ಅದಕ್ಕಾಗಿ ಭೀಮರಾಜು ಅವರಿಂದ 'ಸಾವಿತ್ರಿ' ಎನ್ನುವ ನಾಟಕವನ್ನು ಬರೆಯಿಸಿ ಅಭ್ಯಾಸ ಮಾಡಿಸಿದರು. ಅದೇ ವರ್ಷ (1925) ಮಕ್ಕಳಿಗಾಗಿಯೇ ಒಂದು ಪ್ರತ್ಯೇಕ ಸಂಸ್ಥೆಯನ್ನು ಕಟ್ಟಬಾರದೇಕೆ ಎಂದು ಯೋಚಿಸಿ, ಎಂಟರಿಂದ ಹದಿನಾಲ್ಕು ವರ್ಷದೊಳಗಿನ ಮಕ್ಕಳನ್ನು ಕಲೆಹಾಕಿ 'ಬಾಲಕಲಾವರ್ಧಿನಿ' ಎನ್ನುವ ಸಂಸ್ಥೆಯನ್ನು ಪ್ರಾರಂಭಿಸಿದರು. 'ಸಾವಿತ್ರಿ'ಯನ್ನಲ್ಲದೆ ಭೀಮರಾಜು ಅವರಿಂದ 'ಕಬೀರ ಲೀಲೆ' ಎನ್ನುವ ನಾಟಕವನ್ನು ಬರೆಯಿಸಿ ಈ ಸಂಘದ ಬಾಲಕರಿಂದ ಪ್ರದರ್ಶಿಸಿದರು ಜೊತೆಗೆ ನರಹರಿಶಾಸ್ತ್ರಿಗಳ 'ಶ್ರೀ ಕೃಷ್ಣಪಾರಿಜಾತ' 'ಜಲಂಧರ', 'ಕೃಷ್ಣಗಾರುಡಿ', 'ಭಾಮಾ ಪರಿಣಯ' ಮೊದಲಾದ ನಾಟಕಗಳನ್ನು ಈ ಹುಡುಗರು ಪ್ರದರ್ಶಿಸಿ ಕೀರ್ತಿ ಪಡೆದರು. ಮೈಸೂರಿನ ಮಹಾರಾಜರೂ ಈ ಹುಡುಗರ ನಾಟಕವನ್ನು ನೋಡಿ ಸಂತೋಷಪಟ್ಟರು. ಈ ಸಂಸ್ಥೆ ಕರ್ನಾಟಕದಾದ್ಯಂತ ಪ್ರವಾಸ ಮಾಡಿತಲ್ಲದೆ ಮದರಾಸು ಪ್ರಾಂತ್ಯದಲ್ಲಿಯೂ ಯಶಸ್ಸುಗಳಿಸಿತು. ಈ ತಂಡವೇ ಕನ್ನಡದ ಮಕ್ಕಳ ನಾಟಕಗಳ ಪ್ರಥಮ ಸಂಚಾರೀತಂಡ. ನಟಸಾರ್ವಭೌಮ ವರದಾಚಾರ್ಯರೂ ತಮ್ಮ ಕಂಪೆನಿಯಲ್ಲಿದ್ದ ಮಕ್ಕಳನ್ನೇ ಸೇರಿಸಿ 'ಬಾಲ ರತ್ನಾವಳಿ' ಎಂಬ ಯಶಸ್ವೀ ನಾಟಕವನ್ನು ಪ್ರದರ್ಶಿಸಿದ್ದಾಗಿ ತಿಳಿದುಬರುತ್ತದೆಯಾದರೂ, ಅದು ಬೇರೆ ಬೇರೆ ಸ್ಥಳಗಳಲ್ಲಿ ಪ್ರದರ್ಶನವಾದ ದಾಖಲೆಗಳಿಲ್ಲ."[2]

**ನೀನಾಸಂ ತಿರುಗಾಟ:** ಕರ್ನಾಟಕದಲ್ಲಿ ಹವ್ಯಾಸಿ ರಂಗತಂಡಗಳಲ್ಲಿ 'ಸಂಚಾರ'ವನ್ನು ನಡೆಸಿ ನಾಟಕ ಪ್ರದರ್ಶಿಸಿದ ಪ್ರಪ್ರಥಮ ಹವ್ಯಾಸಿ ಸಂಸ್ಥೆಯೆಂಬ ಹೆಗ್ಗಳಿಕೆಗೆ ಪಾತ್ರವಾದ ನೀನಾಸಂ ಮೊದಲ ಕೆಲವು ವರ್ಷ, ಮಕ್ಕಳನ್ನು ಗುರಿಯಾಗಿಟ್ಟುಕೊಂಡು ಒಂದು ನಾಟಕವನ್ನು ಪ್ರದರ್ಶಿಸುವ ಪರಿಪಾಠವನ್ನಿಟ್ಟುಕೊಂಡಿತ್ತು. ಈ ದೃಷ್ಟಿಯಿಂದ ಮಕ್ಕಳ ನಾಟಕಗಳನ್ನು ಪ್ರದರ್ಶಿಸಿದ ಮೊದಲ ಸಂಚಾರಿ ಹವ್ಯಾಸಿ ರಂಗ ಸಂಸ್ಥೆಯೆನ್ನುವ ಹೆಗ್ಗಳಿಕೆಯೂ ನೀನಾಸಂಗೇ ಸೇರುತ್ತದೆ. ನೀನಾಸಂ ಮಕ್ಕಳಿಗಾಗಿ 'ತಿರುಗಾಟ'ದಲ್ಲಿ,

ಕೆ.ವಿ. ಅಕ್ಷರರ ನಿರ್ದೇಶನದಲ್ಲಿ 1985ರಲ್ಲಿ ನೀಲಿಕುದುರೆ, ಕೆ.ಜಿ. ಕೃಷ್ಣಮೂರ್ತಿ ನಿರ್ದೇಶನದಲ್ಲಿ 1986ರಲ್ಲಿ ಹಾಗೂ 1987ರಲ್ಲಿ ಆಲಿಬಾಬಾ, 1988ರಲ್ಲಿ ಬೆಪ್ಪು ತಕ್ಕಡಿ ಭೋಳೇಶಂಕರ, 1989ರಲ್ಲಿ ಧಾಂ ಧೂಂ ಸುಂಟರಗಾಳಿ, 1991ರಲ್ಲಿ ನಾಯಿಮರಿ ಮತ್ತು 1990ರಲ್ಲಿ ಇಕ್ಬಾಲ್ ಅಹ್ಮದ್ ನಿರ್ದೇಶನದಲ್ಲಿ ಪಂಜರಶಾಲೆ ನಾಟಕಗಳನ್ನು ಪ್ರದರ್ಶಿಸಿತು. ನಂತರದ ದಿನಗಳಲ್ಲಿ ಮಕ್ಕಳಿಗಾಗಿ ತಿರುಗಾಟದಲ್ಲಿ ನಾಟಕವನ್ನು ಪ್ರದರ್ಶಿಸುವ ಪರಿಪಾಠವನ್ನು ನೀನಾಸಂ ಕಾರಣಾಂತರಗಳಿಂದ ಕೈಬಿಟ್ಟಿತು.

**ಚಿಣ್ಣ–ಬಣ್ಣ:** ಇಕ್ಬಾಲ್ ಅಹ್ಮದ್ ಕನ್ನಡದ ಹೊಸ ಪೀಳಿಗೆಯ ಒಬ್ಬ ಸಮರ್ಥ ನಿರ್ದೇಶಕ. ಇವರಿಗೆ ಮಕ್ಕಳಿಗಾಗಿ ಒಂದು ಸಂಚಾರಿ ರಂಗತಂಡವನ್ನು ಕಟ್ಟುವ ಕನಸು ಹುಟ್ಟಿ 1988ರಲ್ಲಿ 'ಚಿಣ್ಣ–ಬಣ್ಣ' ಎಂಬ ಹೆಸರಿನಲ್ಲಿ ಸಾಗರ ತಾಲ್ಲೂಕಿನ ಶಿರವಂತೆ ಎಂಬ ಹಳ್ಳಿಯನ್ನು ಕೇಂದ್ರವಾಗಿಟ್ಟು ತಂಡವೊಂದನ್ನು ಕಟ್ಟಿದರು. ಕೇವಲ ಮಕ್ಕಳಿಗಾಗಿ ಸಂಚಾರಿ ತಂಡವೊಂದನ್ನು (ಹವ್ಯಾಸಿಗಳಲ್ಲಿ) ಕಟ್ಟಿದ, ಮಕ್ಕಳಿಗಾಗಿ ದೊಡ್ಡವರು ನಾಟಕ ಪ್ರದರ್ಶಿಸುವ ಈ ಪ್ರಯತ್ನ ದೇಶದಲ್ಲೇ ಮೊದಲನೆಯದು. ಇದಾದ ನಂತರ ಎನ್.ಎಸ್.ಡಿ. ಕೂಡ ಇದೇ ಪ್ರಯತ್ನ ನಡೆಸಿತು. ಈ ತಂಡ ಪ್ರದರ್ಶಿಸಿದ ನಾಟಕಗಳಲ್ಲಿ ಗೊಂಬೆ ಮ್ಯಾಕ್‌ಬೆತ್, ಗಿಡ್ಡೂ ಟೇಲ್ಲರ್ ಚೆಡ್ಡಿ ಸ್ಪೆಷಲಿಸ್ಟ್, (Animal form)ನ ಸರ್ಕಸ್, ನೀಲಿ ಕುದುರೆ ಇತ್ಯಾದಿ ಪ್ರಮುಖವಾದವು. ಒಂದೆರಡು ಜಿಲ್ಲೆಗಳನ್ನು ಬಿಟ್ಟರೆ ಕರ್ನಾಟಕದ ಬಹುತೇಕ ಜಿಲ್ಲೆಗಳನ್ನು ಸಂಚರಿಸಿ 800ಕ್ಕೂ ಹೆಚ್ಚು ಪ್ರದರ್ಶನ ನೀಡಿದ ಕೀರ್ತಿ ಚಿಣ್ಣ ಬಣ್ಣದ್ದು.

**ಕಿನ್ನರ ಮೇಳ:** ಹೆಗ್ಗೋಡಿನ ನೀನಾಸಂ ಪ್ರದರ್ಶಿಸಿದ ಬಹುತೇಕ ಮಕ್ಕಳ ನಾಟಕಗಳ ನಿರ್ದೇಶಕರಾದ ಕೆ.ಜಿ. ಕೃಷ್ಣಮೂರ್ತಿ, ಎನ್.ಎಸ್.ಡಿ. ಪದವೀಧರರು. ಇವರು ಪ್ರಾರಂಭದಲ್ಲಿ ಇಕ್ಬಾಲ್ ಅಹ್ಮದ್ ಜೊತೆಗೆ 'ಚಿಣ್ಣ ಬಣ್ಣ'ದಲ್ಲಿಯೂ ಕೆಲಸ ಮಾಡಿದವರು. ನಂತರ ತಮ್ಮ ಹುಟ್ಟೂರು 'ತುಮರಿ'ಯನ್ನು ಕೇಂದ್ರವಾಗಿಟ್ಟುಕೊಂಡು ಮಕ್ಕಳಿಗಾಗಿ ನಾಟಕ ಪ್ರದರ್ಶಿಸುವ ದೊಡ್ಡವರ ತಂಡವಾಗಿ 'ಕಿನ್ನರ ಮೇಳ' ಸಂಸ್ಥೆಯನ್ನು 1990 ರಲ್ಲಿ ಹುಟ್ಟುಹಾಕಿದರು. ಮಕ್ಕಳಿಗೆ ಆರೋಗ್ಯಕರ ರಂಜನೆ ಕೊಡುವುದರ ಜೊತೆಗೆ, ಅವರಲ್ಲಿ ಹೊಸ ಬಗೆಯ ಸಾಂಸ್ಕೃತಿಕ ಎಚ್ಚರವನ್ನು ಮೂಡಿಸುವುದು, ರಂಗಮಾಧ್ಯಮದ ಮೂಲಕ ಮಕ್ಕಳಲ್ಲಿ ಸಾಮಾಜಿಕ ಅರಿವು, ಜವಾಬ್ದಾರಿಯನ್ನು ಬೆಳೆಸಿ ಅವರ ವ್ಯಕ್ತಿತ್ವ ಮತ್ತು ಕಲ್ಪನಾಶಕ್ತಿಯನ್ನು ವಿಸ್ತಾರಗೊಳಿಸುವುದು, ನಾಟಕದ ಮೂಲಕ ಶಿಕ್ಷಣ ಸಂಸ್ಥೆಗಳಲ್ಲಿ ರಂಗಭೂಮಿಯ ಕುರಿತು ಪ್ರಾಥಮಿಕ ತಿಳುವಳಿಕೆ ನೀಡುವುದು, ಇಂದಿನ ಮಕ್ಕಳಿಗೆ ಪರಂಪರೆಯ ಗ್ರಾಮೀಣ ಕ್ರೀಡೆಗಳು, ಶಿಶುಗೀತೆಗಳನ್ನು ನೆನಪಿಸುವುದರ ಮೂಲಕ ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ಮುಂತಾದ ಉದ್ದೇಶಗಳನ್ನಿಟ್ಟುಕೊಂಡು ಕಿನ್ನರ ಮೇಳ ಕಾರ್ಯನಿರ್ವಹಿಸುತ್ತಿದೆ.

**ಕಿನ್ನರಮೇಳ ರೆಪರ್ಟರಿ:** ದೊಡ್ಡವರು ಮಕ್ಕಳಿಗಾಗಿ ಅಭಿನಯಿಸುವ ರಂಗತಂಡ. ಹನ್ನೆರಡು ಜನ ವೇತನ ಪಡೆಯುವ ಪೂರ್ಣಾವಧಿ ನಟರನ್ನು ಹೊಂದಿರುವ ತಂಡ. ಪ್ರತಿವರ್ಷ ಮಕ್ಕಳಿಗಾಗಿ ಒಂದು, ಕಾಲೇಜು ವಿದ್ಯಾರ್ಥಿಗಳಿಗಾಗಿ ಇನ್ನೊಂದು, ನಾಟಕಗಳನ್ನು ತಯಾರಿಸಿಕೊಂಡು ಪ್ರದರ್ಶನ ನೀಡುತ್ತದೆ. ಶಾಲಾ ಅವಧಿಯಲ್ಲಿ ಹಗಲು ಹೊತ್ತು ಮಕ್ಕಳಿದ್ದಲ್ಲಿಗೇ ಹೋಗಿ ಎಲ್ಲೆಂದರಲ್ಲಿ ಪ್ರದರ್ಶನ ನೀಡುವುದು ತಂಡದ ವೈಶಿಷ್ಟ್ಯ. ಪ್ರತಿವರ್ಷ ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಸಂಚರಿಸುವ ಈ ತಂಡ, ಸರಾಸರಿ 150 ಪ್ರದರ್ಶನಗಳನ್ನು ನೀಡುತ್ತದೆ ಮತ್ತು ಎಪ್ಪತ್ತೈದು ಸಾವಿರ ಪ್ರೇಕ್ಷಕರು ನಾಟಕಗಳನ್ನು ವೀಕ್ಷಿಸುತ್ತಾರೆ ಎಂದು ಹೇಳಲಾಗಿದೆ.

**ಕಿನ್ನರ ಮೇಳದ ರಂಗಮುಖೇನ ಶಿಕ್ಷಣ ಶಿಬಿರ:** ಮೂರು ಜನ ರಂಗತಜ್ಞರನ್ನೊಳಗೊಂಡ ರಂಗಶಿಕ್ಷಣ ಘಟಕವು ಶಾಲೆಗಳಲ್ಲಿ ನಾಲ್ಕು ವಾರಗಳ ಕಾಲ ನಾಟಕ ಶಿಬಿರಗಳನ್ನು ನಡೆಸುತ್ತದೆ. ಈ ಶಿಬಿರಗಳಲ್ಲಿ ಮಕ್ಕಳಿಗಾಗಿ ಒಂದು ಪೂರ್ಣಾವಧಿ ನಾಟಕ ಮತ್ತು ಎರಡು ಪಠ್ಯನಾಟಕಗಳನ್ನು ಸಿದ್ಧಪಡಿಸಿ ಪ್ರದರ್ಶಿಸಲಾಗುತ್ತದೆ. ವಾರ್ಷಿಕವಾಗಿ ಇಂತಹ ನಾಲ್ಕಾರು ಕಾರ್ಯಾಗಾರಗಳನ್ನು ಬೇರೆ ಬೇರೆ ಶಾಲೆಗಳಲ್ಲಿ ನಡೆಸಲಾಗುತ್ತದೆ. ಸೂರ್ಯಬಂದ, ಮಿಸ್ ಪಾಯಿಂಟ್, ಪುಷ್ಪರಾಣಿ, ಹಕ್ಕಿ ಹಾಡು, ಸಿರಿಸಂಪಿಗೆ ಇತ್ಯಾದಿ ನಾಟಕಗಳು ಕಿನ್ನರಮೇಳ ತಂಡದ ಕಾಣಿಕೆಗಳು.

**ರಂಗಾಯಣ:** ಮೈಸೂರಿನಲ್ಲಿ ಪ್ರಾರಂಭವಾದ ಪ್ರತಿಷ್ಠಿತ 'ರಂಗಾಯಣ' ಸಂಸ್ಥೆ ಕೂಡ ಮಕ್ಕಳಿಗಾಗಿ ನಾಟಕ ಪ್ರದರ್ಶನ ನಡೆಸಿದೆ. ಕಿಂದರಿ ಜೋಗಿ, ಮೂಕನ ಮಕ್ಕಳು... ಮುಂತಾದವು ಮಕ್ಕಳಿಗಾಗಿ ರಂಗಾಯಣದ ಕೊಡುಗೆಗಳು. ಇದಲ್ಲದೆ ಮಕ್ಕಳಿಗಾಗಿ ತರಬೇತಿ ಶಿಬಿರ, ನಾಟಕೋತ್ಸವಗಳೂ ಕೂಡ ರಂಗಾಯಣದಿಂದ ನಡೆಯುತ್ತಿವೆ. ಇತ್ತೀಚಿನ ದಿನಗಳಲ್ಲಿ ಸ್ವೀಡನ್ ದೇಶದ ಸ್ವೀಡಿಶ್ ಐಟಿಐ ಸಹಯೋಗದೊಂದಿಗೆ ರಂಗಚಟುವಟಿಕೆ ನಡೆಸುತ್ತಿರುವ ರಂಗಾಯಣ, ನಾಡಿನ ಮಕ್ಕಳ ನಾಟಕಕಾರರನ್ನು ಕರೆಸಿ, ಅವರಿಂದ ನಾಟಕ ಬರೆಸುವ ಶಿಬಿರಗಳನ್ನೂ ನಡೆಸಿ, ಸಿದ್ಧವಾದ ನಾಟಕಗಳನ್ನು ಪ್ರಕಟಿಸುವ ಹೊಣೆಯನ್ನು ನಿರ್ವಹಿಸುತ್ತಿದೆ.

## ಪ್ರಾದೇಶಿಕ ರಂಗಚಟುವಟಿಕೆಗಳು

**ಕರಾವಳಿಯಲ್ಲಿ:** ಪ್ರಾಯಶಃ ಕನ್ನಡದಲ್ಲಿ ದಾಖಲಾಗಿರುವ ಮೊದಲ ಮಕ್ಕಳ ನಾಟಕ ಪ್ರಯೋಗಕ್ಕೆ ಸಾಕ್ಷಿಯಾದ ಕರಾವಳಿಯು ಅಂದಿನಿಂದ ಇಂದಿನವರೆಗೂ ಮಕ್ಕಳ ನಾಟಕ ಚಟುವಟಿಕೆಯ ಮುಂಚೂಣಿಯಲ್ಲೇ ಉಳಿದಿದೆ ಎಂದರೆ ತಪ್ಪಾಗಲಾರದು. ಯಾಕೆಂದರೆ ಕನ್ನಡ ಮಕ್ಕಳ ನಾಟಕ ಪರಂಪರೆಯನ್ನು ಹುಟ್ಟು ಹಾಕಿದ ಎಂ.ಎನ್. ಕಾಮತ್, ಶಿವರಾಮ ಕಾರಂತರು, ದಕ್ಷಿಣ ಕನ್ನಡದವರೇ ಕನ್ನಡದಲ್ಲಿ ಮಕ್ಕಳ ನಾಟಕ

ಕ್ಷೇತ್ರದ ಪುನಶ್ಚೇತನಕ್ಕೆ ಕಾರಣದಿಂದ ಬಿ.ವಿ. ಕಾರಂತರೂ ಕರಾವಳಿಯ ಕೊಡುಗೆ. ಯಾವಾಗಲೂ ತಮ್ಮತನವನ್ನು ಉಳಿಸಿಕೊಂಡೇ ಹೊಸತನ್ನು ತೆರೆದ ಬಾಹುವಿನಿಂದ ಸ್ವಾಗತಿಸುವ ಕರಾವಳಿಯಲ್ಲಿ ಪ್ರಾರಂಭದಿಂದಲೂ ಮಕ್ಕಳ ರಂಗ ಚಟುವಟಿಕೆಗಳು ಹೆಚ್ಚು. ಕರಾವಳಿಯ ಬಹುತೇಕ ಸ್ಥಳಗಳಲ್ಲಿ ಇಂದಿಗೂ ಮಕ್ಕಳ ರಂಗಭೂಮಿ ಜೀವಂತವಾಗಿ ಮುಂದುವರೆದಿದೆ.

ಬಿ.ವಿ. ಕಾರಂತರು ದೆಹಲಿಯಿಂದ ಬಂದು ಹೆಗ್ಗೋಡಿನಲ್ಲಿ 'ಪಂಜರಶಾಲೆ' ಪ್ರಯೋಗಿಸಿದ ನಂತರ, 1971ರಲ್ಲಿ ಉಡುಪಿಯಲ್ಲಿ ಮಕ್ಕಳಿಗಾಗಿ ರಂಗತರಬೇತಿ ಶಿಬಿರವೊಂದನ್ನು ನಡೆಸಿಕೊಟ್ಟರು. 1971ರಲ್ಲಿ ಕಡಿಯಾಳಿಯ ಶಾಲಾಮಕ್ಕಳಿಗಾಗಿ 'ಹೆಡ್ಡಧೂಮ' ಮತ್ತು 'ಏಕಲವ್ಯ' ಎಂಬ ಎರಡು ಮಕ್ಕಳ ನಾಟಕಗಳನ್ನು ತಯಾರಿಸಿ ಹತ್ತು ದಿನಗಳ ಅವಧಿಯಲ್ಲಿ ಆಡಿ ತೋರಿಸಿದರು. ಇದರ ನಂತರ ಮಕ್ಕಳ ರಂಗಚಟುವಟಿಕೆ ಕಂಡುಬಂದದ್ದು ಸುಳ್ಯದಲ್ಲಿ. 1977ರಲ್ಲಿ ಕಲಾವಿದ 'ಮೋಹನ ಸೋನ್' ಮಕ್ಕಳ ರಂಗಭೂಮಿಯತ್ತ ಆಕರ್ಷಿತರಾದರು. 1977ರಲ್ಲಿ ದೊಡ್ಡತೋಟ ಎಂಬಲ್ಲಿ ಶಾಲಾ ಮಕ್ಕಳಿಗೆ ಎರಡು ತಿಂಗಳ ರಂಗಭೂಮಿ ಕಾರ್ಯಾಗಾರ ನಡೆಸಿ 'ಹುಚ್ಚುನಾಯಿ' ಎಂಬ ಮಕ್ಕಳ ನಾಟಕವನ್ನು ಪ್ರದರ್ಶಿಸಿದರು. 1978ರಲ್ಲಿ ಹಿಮಾನಿ ಮತ್ತು ಏಳುಜನ ಕುಳ್ಳರು, 1979ರಲ್ಲಿ 'ಅಜ್ಜನ ಕೋಲು', 'ಜೇಸಿಗೆ', 'ತುಂಟ' ಮುಂತಾದ ನಾಟಕಗಳನ್ನು ಪ್ರದರ್ಶಿಸಿದರು. 1980ರಲ್ಲಿ 'ಮಳೆ ಬಂತು ಮಳೆ' ಎಂಬ ನಾಟಕವನ್ನು ವಿವಿದೆಡೆ ಪ್ರದರ್ಶಿಸಿದರು. 1981ರಲ್ಲಿ 'ಕಾಳಿ ಮತ್ತು ದಿಡ್ಡಿ ಬಾಗಿಲು', 82ರಲ್ಲಿ 'ಮಕ್ಕಳ ಮನಸ್ಸು', 1983ರಲ್ಲಿ 150 ಮಕ್ಕಳಿದ್ದ 'ಅಳಿಲು ರಾಮಾಯಣ' ಪ್ರದರ್ಶಿಸಿದರು.

ದಕ್ಷಿಣ ಕನ್ನಡದಲ್ಲಿ ಮೋಹನ ಸೋನ, ಐ.ಕೆ. ಬೊಳುವಾರು, ಮೂರ್ತಿ ದೇರಾಜೆ, ಜಿಜ್ಞಾಸು ಕಾಸರಗೋಡು ಮೊದಲದವರು ಮಕ್ಕಳ ರಂಗಭೂಮಿಯಲ್ಲಿ ಆಸಕ್ತಿಯಿಂದ ದುಡಿಯುತ್ತಿದ್ದಾರೆ. ಅಭಿನಯ ಸುಳ್ಯ, 1987ರಿಂದ ಪ್ರತಿವರ್ಷ ನಾಟಕೋತ್ಸವನ್ನು ನಡೆಸುತ್ತಾ ಬರುತ್ತಿದೆ. ಇದರಲ್ಲಿ ಮಕ್ಕಳ ರಂಗಭೂಮಿಯ ಕುರಿತು ತೀವ್ರ ಆಸಕ್ತಿಯುಳ್ಳ ಜೀವನರಾಂ ಸುಳ್ಯ ಮುಂತಾದವರು ಅತೀವ ಆಸಕ್ತಿಯಿಂದ ದುಡಿಯುತ್ತಿದ್ದಾರೆ.

1980ರ ವೇಳೆಯಲ್ಲಿ ಬಾಳಿಲದಲ್ಲಿ ವಿನ್ಯಾಸ ಎಂಬ ಸಂಸ್ಥೆ ಉದಯವಾಯಿತು. ವಿದ್ಯಾಬೋಧಿನಿ ವಿದ್ಯಾಸಂಸ್ಥೆಯಲ್ಲಿ ಶಿಕ್ಷಕರಾಗಿರುವ ಜಿಜ್ಞಾಸು ಕಾಸರಗೋಡು ಮತ್ತು ಊರಿನ ರಂಗಾಸಕ್ತರು ಸೇರಿ ಆರ್. ನಾಗೇಶ್‌ರವರಿಂದ ರಂಗತರಬೇತಿ ಶಿಬಿರ ನಡೆಸಿದರು. ಮತ್ತೆ 1983ರಲ್ಲಿ ನೀನಾಸಂನ ಸಹಕಾರದಿಂದ ರಂಗತರಬೇತಿ ಶಿಬಿರ ನಡೆಯಿತು. ಶಿಬಿರಾಂತ್ಯದಲ್ಲಿ ಚಿದಂಬರರಾವ್ ಜಂಬೆಯವರ ನಿರ್ದೇಶನದಲ್ಲಿ 'ನೀಲಿ ಕುದುರೆ'ಯನ್ನು ರಂಗಕ್ಕೆ ತರಲಾಯಿತು.

1975ರಿಂದೀಚೆಗೆ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವ

ರಂಗಾಸಕ್ತರು ಜೊತೆಯಾಗಿ ರೂಢಿಸಿಕೊಂಡ ಹೆಸರು ನಿರತನಿರಂತ. 1993ರಿಂದ ಸೋಣಂಗೇರಿ ಎಂಬಲ್ಲಿ (ಇಲ್ಲಿ 1993ರಿಂದ, ಇಡೀ ಹಳ್ಳಿಯನ್ನೇ ಬಯಲು ಚಿತ್ರಾಲಯವಾಗಿ ರೂಪಿಸಿದ್ದಾರೆ) ಪ್ರತಿ ಮೇ ತಿಂಗಳಲ್ಲಿ ಕಲೆ, ನಾಟಕ, ಸಾಹಿತ್ಯ ಮಕ್ಕಳ ನಾಟಕ, ಪ್ರದರ್ಶನಗಳ ಉತ್ಸವ ಏರ್ಪಡಿಸುತ್ತಾರೆ.

1995ರ ಜೂನ್ ತಿಂಗಳಲ್ಲಿ ಪಂಜದಲ್ಲಿ 'ಪರಿವಾರ ರಂಗ' ಎಂಬ ಸಂಸ್ಥೆ ಹುಟ್ಟಿ ಮಕ್ಕಳ ರಂಗತರಬೇತಿ ಶಿಬಿರ ನಡೆಸಿತಲ್ಲದೆ 'ಮೂಕನ ಮಕ್ಕಳು' ನಾಟಕವನ್ನು ಪ್ರದರ್ಶಿಸಿತು. 1998ರಲ್ಲಿ ಶಿಬಿರ ನಡೆಸಿ 'ನಕ್ಕಳಾ ರಾಜಕುಮಾರಿ' ನಾಟಕ ಪ್ರದರ್ಶಿಸಿತು.

5-2-1985ರಲ್ಲಿ ಮಕ್ಕಳ ರಂಗಭೂಮಿಯ ಬಗ್ಗೆ ಸಂವಾದ ಏರ್ಪಡಿಸಿದ ಮೂಡುಬಿದರೆಯ 'ಚದುರಂಗ' ತಂಡವು ಮಕ್ಕಳಿಗಾಗಿ ರಂಗಶಿಬಿರ ನಡೆಸಿ 'ಬೆಕ್ಕು-ಮಗು' ನಾಟಕ ಪ್ರದರ್ಶಿಸಿದರು. ಇಲ್ಲಿ ಐ.ಕೆ. ಬೊಳುವಾರು ಹಲವಾರು ನಾಟಕಗಳನ್ನು ಮಕ್ಕಳಿಗಾಗಿ ನಿರ್ದೇಶಿಸಿದರು. ಅದೇ ತರಹ ವಿಟ್ಲದ ಬಂದಳಿಕೆಯಲ್ಲಿ ಮೋಹನ ಸೋಣ 1983ರಲ್ಲಿ 'ಅಳಿಲು ರಾಮಾಯಣ' ನಾಟಕವನ್ನು ಮಕ್ಕಳಿಗೆ ಕಲಿಸಿ, ಪ್ರದರ್ಶಿಸಿದರು. 1986ರಿಂದ ವಿಟ್ಲದಲ್ಲಿ 'ರಂಗಾಸಕ್ತರು' ಎಂಬ ತಂಡ ಮೂರ್ತಿ ದೇರಾಜೆ, ಸುರೇಶ ಪಂದಾಡಿ, ಶಂಕರ ಪ್ರಸಾದ್ ಮುಂತಾದವರೊಂದಿಗೆ ಸೇರಿ ಮಕ್ಕಳ ಚಟುವಟಿಕೆ ನಡೆಸತೊಡಗಿದರು. 1986ರಿಂದಲೇ 'ಕಾಟುಕುಕ್ಕೆ'ಯಲ್ಲಿ ಮೂರ್ತಿ ದೇರಾಜೆಯವರು ಮಕ್ಕಳ ನಾಟಕಗಳನ್ನು ಆಡಿಸುತ್ತಾ ಬಂದರು. ಕರ್ನಾಟಕ ನಾಟಕ ಅಕಾಡೆಮಿಯು 14-12-1987 ರಿಂದ 18-12-1987 ರವರೆಗೆ ವಿಭಾಗೀಯ ನಾಟಕೋತ್ಸವವನ್ನು ಮಂಗಳೂರಿನಲ್ಲಿ ನಡೆಸಿತು.

1987ರಲ್ಲಿ ಆಧುನಿಕ ರಂಗಭೂಮಿಯ ಕುರಿತು ಚಟುವಟಿಕೆ, ಪ್ರದರ್ಶನ, ತರಬೇತಿಗಳ ಮೂಲಕ ಮಂಗಳೂರಿನಲ್ಲಿ ರೂಪುಗೊಂಡ 'ಅಯನ-ನಾಟಕ ಮನೆ' ತಂಡವು ಮಕ್ಕಳ ರಂಗಭೂಮಿಯತ್ತಲೂ ತನ್ನ ಗಮನ ಹರಿಸಿತು. 1994ರಲ್ಲಿ ಅಕಾಡೆಮಿಯ ಆಶ್ರಯದಲ್ಲಿ ಯೋಜಿಸಲಾಗಿದ್ದ ಭಾನುವಾರದ ಶಿಬಿರಗಳಲ್ಲಿ 350ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದೇ ರೀತಿ ಮಂಗಳೂರಿನ 'ರಾಗತರಂಗ' ತಂಡವು ರಂಗತರಬೇತಿ ಶಿಬಿರವನ್ನು ಹಮ್ಮಿಕೊಂಡಿತು. ಮಕ್ಕಳಿಗೆ ನಟನಾ ಕೌಶಲ್ಯವನ್ನು ಕಲಿಸಿ 'ಪಂಜರಶಾಲೆ' ನಾಟಕವನ್ನು ಸುರೇಶ ಆನಗಳ್ಳಿ ಸಿದ್ಧಪಡಿಸಿದರು. 1995ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಇವರೊಂದಿಗೆ ಜಂಟಿಯಾಗಿ ಪುನರೂರಿನಲ್ಲಿ ಹದಿನೈದು ದಿನಗಳ ವಾಸ್ತವ್ಯ ರಂಗತರಬೇತಿ ಶಿಬಿರವನ್ನು ಏರ್ಪಡಿಸಿತು. ಶಿಬಿರ ನಿರ್ದೇಶಕರಾಗಿ ಸುರೇಶ ಆನಗಳ್ಳಿ ಕಾರ್ಯನಿರ್ವಹಿಸಿ 'ಅಪಕಾರಿಯ ಕಥೆ'ಯನ್ನು ರಂಗಕ್ಕೆ ತಂದರು. ಇದೇ ರೀತಿ ಕುಂದಾಪುರದ ಸಮುದಾಯ ಘಟಕವು 1990ರಿಂದ ಮಕ್ಕಳ ರಂಗಭೂಮಿಯತ್ತ ತನ್ನ ಗಮನ ಹರಿಸಿದೆ. ಉಡುಪಿಯ 'ರಥಬೀದಿ ಗೆಳೆಯರು'

'ರಂಗಭೂಮಿ' ಮುಂತಾದವರೂ ಇಂತಹದೇ ಚಟುವಟಿಕೆಗಳ ಮೂಲಕ ತಮ್ಮ ಛಾಪನ್ನು ಮೂಡಿಸಿವೆ.[3]

ಮಕ್ಕಳ ರಂಗಭೂಮಿ ಎಂದು ನಾವು ಏನನ್ನು ವ್ಯಾಖ್ಯಾನಿಸುತ್ತೇವೆಯೋ ಆ ಪರಿಕಲ್ಪನೆಯ ಅಡಿಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲಸ ಆರಂಭವಾದದ್ದು 80ರ ದಶಕದಲ್ಲಿ. ಅದಕ್ಕೂ ಮೊದಲ ಮಕ್ಕಳಿಗೂ ನಾಟಕಕ್ಕೂ ಸಂಬಂಧವಿರಲಿಲ್ಲವೆಂದಲ್ಲ. ಆದರೆ ಈ ಸಂಬಂಧವನ್ನು ನಾವು ಮಕ್ಕಳ ರಂಗಭೂಮಿ ಎಂದು ಮುದ್ರೆ ಹಾಕಿ ಅಧಿಕೃತಗೊಳಿಸುವಂತಿಲ್ಲ.

ಗೌರೀಶ ಕಾಯ್ಕಿಣಿಯಂತಹ ಹಿರಿಯ ಸಾಹಿತಿಗಳು, ಅವರು ಶಿಕ್ಷಕರಿದ್ದಾಗ ಮಾಡಿದ ಮಕ್ಕಳ ನಾಟಕಗಳ ಬಗ್ಗೆ ಉಲ್ಲೇಖಿಸಿದ್ದಾರೆ. "ಆದರೆ ಇವೆಲ್ಲ ಪಠ್ಯೇತರ ಚಟುವಟಿಕೆಗಳಾಗಿದ್ದವೆಂಬುದನ್ನು ನಾವು ಗಮನಿಸಬಹುದು. ಹರಿಶ್ಚಂದ್ರ, ಬಭ್ರುವಾಹನದಂತಹ ನಾಟಕಗಳನ್ನು ಅಥವಾ ಸಕ್ಕರೆ ಗೊಂಬೆ, ತ್ಯಾಗಮಯಿಯಂಥ ನಾಟಕಗಳನ್ನೇ 'ಕುಬ್ಜ'ಗೊಳಿಸಿ ಇಲ್ಲಿ ಪ್ರದರ್ಶಿಸಲಾಗುತ್ತಿತ್ತು. ಮೂರನೇ ಇಯತ್ತೆಯ ಹುಡುಗ ಪ್ಯಾಂಟು ಏರಿಸಿ, ಮೀಸೆ ಸಿಕ್ಕಿಸಿಕೊಂಡು ರಾಸ್ತಾಸೀನಿನಲ್ಲಿ ನಿಂತು 'ಲವ್ ಸಾಂಗ್' ಹೇಳುವುದು ಸಾಮಾನ್ಯವಾಗಿತ್ತು. ಇಲ್ಲೆಲ್ಲ ಮಕ್ಕಳನ್ನು 'ಕುಬ್ಜ ಮಾನವ'ರೆಂದು ಗ್ರಹಿಸಿ ನಡೆಸಿದ ಪ್ರಯತ್ನಗಳನ್ನು ನಾವು ಗುರುತಿಸಬಹುದು. ಆದರೆ ಮಕ್ಕಳ ರಂಗಭೂಮಿಯ ಹಿಂದೆ ಮಕ್ಕಳನ್ನು ಅವರ ವಿಶಿಷ್ಟ ವ್ಯಕ್ತಿತ್ವದ ಹಿನ್ನಲೆಯಲ್ಲಿ ಪ್ರತ್ಯೇಕ ಘಟಕವಾಗಿ ಪರಿಭಾವಿಸಿದ ಚಿಂತನಾಕ್ರಮ ಇದೆ. ಅಂತಹ ಪ್ರಯತ್ನ ಇಲ್ಲಿ ನಡೆದದ್ದು 80ರ ದಶಕದಲ್ಲಿ."[4]

'ಮಕ್ಕಳಿಗಾಗಿ ಹಲವು ನಾಟಕ ಬರೆದು ಆಡಿಸಿದ ಡಾ। ಆರ್.ವಿ. ಭಂಡಾರಿ, ಎಂಬತ್ತರ ದಶಕದ ಮಧ್ಯ ಭಾಗದಲ್ಲಿ 'ಪಂಜರಶಾಲೆ' ಆಡಿಸಿದ ಜಿ.ಯು. ಭಟ್ ಮುಂತಾದವರ ಪ್ರಯತ್ನವನ್ನು ಗಮನಿಸುತ್ತಾ 1981ರಲ್ಲಿ ಮಕ್ಕಳ 'ರಂಗಭೂಮಿ' ಅಧಿಕೃತವಾಗಿ ಉದ್ಘಾಟನೆಗೊಂಡಿದ್ದನ್ನು ನೆನೆಯಬಹುದು. 1981ರಲ್ಲಿ ಮಂಚಿಕೇರಿಯ ರಾಜರಾಜೇಶ್ವರಿ ತಂಡ ಶಿವರಾಮ ಕಾರಂತರ 'ಸಿಹಿ ಮೂಲಂಗಿ'ಯನ್ನು ಪ್ರಯೋಗಿಸಿದರೆ, ಶಿರಸಿಯ 'ರಂಗಸಂಗ' ಆರ್.ವಿ. ಭಂಡಾರಿಯವರ ನಾಟಕಗಳನ್ನು ರಂಗತರಬೇತಿ ಶಿಬಿರ ನಡೆಸಿ ಪ್ರಯೋಗಿಸಿತು. ಉತ್ತರ ಕನ್ನಡ ಜಿಲ್ಲೆಯ ಕೆಲವೇ ತಾಲ್ಲೂಕುಗಳಲ್ಲಿ, ಕೆಲವೇ ಹವ್ಯಾಸಿಗಳು, ಮಿತ ಸಂಪನ್ಮೂಲದ ನಡುವೆ ಸುಮಾರು 120 ರಂಗಪ್ರಯೋಗಗಳನ್ನು ನಡೆಸಿವೆ. 65ಕ್ಕೂ ಹೆಚ್ಚು ನಾಟಕಗಳು, 6ಕ್ಕೂ ಹೆಚ್ಚು ಮಕ್ಕಳ ನಾಟಕೋತ್ಸವಗಳು, 25ಕ್ಕೂ ಹೆಚ್ಚು ನಿರ್ದೇಶಕರು ಕೆಲಸ ಮಾಡಿದ್ದಾರೆ. ಹೆಚ್ಚಾಗಿ ಶಿರಸಿ, ಹೊನ್ನಾವರ, ಮಂಚಿಕೇರಿ, ಅಂಬಿಕಾನಗರದ ಸುತ್ತಮುತ್ತ ರಂಗಪ್ರಯೋಗಗಳು ನಡೆದವು.'[5]

'ಉತ್ತರ ಕನ್ನಡ ಜಿಲ್ಲೆಯ ರಂಗಭೂಮಿಗೆ ಹೊಸ ಚೈತನ್ಯ ತುಂಬಿದ ಮಕ್ಕಳ ರಂಗಭೂಮಿಯನ್ನು ತನ್ನ ಬದ್ಧತೆಯನ್ನಾಗಿ ಸ್ವೀಕರಿಸಿದ ಕಿರಣಭಟ್‌ರ ರಂಗಸಂಗ, ಮಂಚಿಕೇರಿಯ ರಾಜರಾಜೇಶ್ವರಿ ರಂಗತಂಡ, ಜೋಕುಮಾರಸ್ವಾಮಿ ಬಳಗ-ಅಂಬಿಕಾ ನಗರ, ಆಶ್ರಯ ಬಳಗ-ಹೊನ್ನಾವರ ಮುಂತಾದ ಸಂಸ್ಥೆಗಳು ಮಕ್ಕಳ ನಾಟಕ ಶಿಬಿರ ಮತ್ತು ನಾಟಕಗಳನ್ನು ನಡೆಸಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಯೋಗವಾದ ಹೆಚ್ಚಿನ ನಾಟಕಗಳು ಡಾ॥ ಆರ್.ವಿ. ಭಂಡಾರಿಯವರ ರಚನೆಗಳು. ಅವರನ್ನು ಬಿಟ್ಟರೆ ಎನ್.ಎಸ್. ವೆಂಕಟರಾಂರವರ ನಾಟಕಗಳು. ಇದಲ್ಲದೆ ನೀನಾಸಂನ ಮಕ್ಕಳ ನಾಟಕಗಳು, ಇಕ್ಬಾಲ್‌ರ ಚಿಣ್ಣಬಣ್ಣ ತಂಡ, ತುಮರಿಯ 'ಕಿನ್ನರ ಮೇಳ'ದ ಮಹತ್ವದ ಪ್ರಯೋಗಗಳೂ ಈ ಜಿಲ್ಲೆಯಲ್ಲಿ ನಡೆದಿವೆ. ಉತ್ತರ ಕನ್ನಡ ಜಿಲ್ಲೆಯ ಮಕ್ಕಳ ರಂಗಭೂಮಿಗೆ ಶಿರಸಿಯ ಸದಾನಂದ ಶಾನಭಾಗ (ಪುತ್ತಣ್ಣ) ನೀಡಿದ ಕೊಡುಗೆ ತುಂಬ ಮಹತ್ವದ್ದು. ಉತ್ತಮ ರಂಗಪರಿಕರಗಳನ್ನು ಸಿದ್ಧಪಡಿಸುವ ಕಲಾವಿದ ಪುತ್ತಣ್ಣನವರ ಸೃಜನಶೀಲತೆಯೇ ಹಲವಾರು ರಂಗತಂಡಗಳಿಗೆ ಸ್ಫೂರ್ತಿ ಎಂದು ರಂಗಕರ್ಮಿ ಶ್ರೀಪಾದಭಟ್ ಹೇಳುತ್ತಾರೆ. ಕಿರಣ ಭಟ್‌ರ ರಂಗಭೂಮಿ ಪುಸ್ತಕದಲ್ಲಿ 1987ರಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದ 121 ಮಕ್ಕಳ ನಾಟಕಗಳ ಪಟ್ಟಿಯನ್ನು ಶ್ರೀಪಾದ ಭಟ್ ನೀಡಿದ್ದಾರೆ.'[6]

## ಮಲೆನಾಡಿನ ಮಕ್ಕಳ ರಂಗಭೂಮಿ:

ಮಲೆನಾಡಿನ ಪ್ರಾರಂಭದ ನಾಟಕ ಚಟುವಟಿಕೆಗಳ ಕುರಿತು ಶ್ರೀ ಎನ್. ಆನಂದ ಕೃಷ್ಣಾಚಾರ್ ರವರು ನೀನಾಸಂ ಸಂಸ್ಥೆಯ 'ಬೆಳ್ಳಿಯ ಗರಿ' ಸಂಚಿಕೆಯಲ್ಲಿ ಬರೆದ ಮಾತುಗಳನ್ನು ಗಮನಿಸಬಹುದು.

"1947ರಲ್ಲಿ ದೇಶ ಸ್ವಾತಂತ್ರ್ಯ ಪಡೆದ ಮೇಲೆ ಎಲ್ಲಾ ಕಡೆ ಆದ ಹಾಗೆ ಈ ಭಾಗದ ಜನಜೀವನದಲ್ಲೂ ಒಂದು ಹೊಸ ಉತ್ಸಾಹ ಕಾಣಿಸಿಕೊಂಡಿತು. ಆ ಕಾಲಕ್ಕೆ ಸಾಗರದಲ್ಲೂ, ಸುತ್ತಮುತ್ತಣ ಹಳ್ಳಿಗಳಲ್ಲೂ ಅನೇಕ ವಿಲಾಸಿ ನಾಟಕ ಸಂಸ್ಥೆಗಳು ಹುಟ್ಟಿಕೊಂಡವು. ಆಗ ಹುಟ್ಟಿದ ವಿಲಾಸ ಸಂಸ್ಥೆಗಳು ಕಂಪೆನಿ ನಾಟಕಗಳನ್ನು ಅನುಕರಿಸುವಂಥವೇ ಆಗಿದ್ದವು.

1947ರ ಹೊತ್ತಿಗೆ ಸಾಗರದ ಮುನ್ಸಿಪಲ್ ಹೈಸ್ಕೂಲ್ ನಾಟಕ ಚಟುವಟಿಕೆಗಳ ಒಂದು ಕೇಂದ್ರವಾಗಿ ರೂಪುಗೊಂಡಿತು. ಆಗ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ವೆಂಕಟನಾರಾಯಣಪ್ಪನವರು ಮತ್ತು ಅವರ ಸಹೋದ್ಯೋಗಿಗಳು ಇದಕ್ಕೆ ಕಾರಣರಾಗಿದ್ದಂತೆ, ಶ್ರೀ ಬಿ.ರಾಮಾಚಾರ್, ಶ್ರೀ ಮಂಗೇಶರಾಯರು ಮುಂತಾದ ಕೆಲವು ಹಿರಿಯ ವಕೀಲರು ಮತ್ತು ಸಾರ್ವಜನಿಕರು ಪ್ರೋತ್ಸಾಹಕರಾಗಿದ್ದರು. ತರುಣರಾದ ಶ್ರೀ ಆರ್.ಪಿ. ಜನಾರ್ಧನ್, ಶ್ರೀ ಎನ್.ಆರ್. ಮಾಸೂರ್ ಮುಂತಾದವರು ಹೆಚ್ಚಿನ

ಆಸಕ್ತಿತಾಳಿದರು. ಈ ಹೈಸ್ಕೂಲಿನ ಗುಂಪು ಒಳ್ಳೇ 'ಸಾಹಿತ್ಯ ನಾಟಕ'ಗಳ ಕಡೆ ಗಮನ ಕೇಂದ್ರೀಕರಿಸಿತ್ತು.[7]

ಮುಂದೆ ಇಂತಹ ಆಸಕ್ತರೇ ಸೇರಿ 'ಉದಯ ಕಲಾವಿದರು' ಸಂಸ್ಥೆಯನ್ನು ಹುಟ್ಟಿಹಾಕಿದರು. ಮುಂದೆ, ಶಿವಮೊಗ್ಗದಲ್ಲೂ ಯುನೈಟೆಡ್ ಆರ್ಟಿಸ್ಟ್ ಎಂಬ ಸಂಸ್ಥೆ ರೂಪುಗೊಂಡಿತು. ಈ ಸಂಸ್ಥೆಗಳು ನೇರವಾಗಿ ಮಕ್ಕಳ ನಾಟಕಗಳನ್ನು ಆಡದಿದ್ದರೂ ಶಾಲಾರಂಗಭೂಮಿಯ ಚಟುವಟಿಕೆಗಳಿಗೆ ಪ್ರೋತ್ಸಾಹ, ಸಹಕಾರ ನೀಡುತ್ತಾ ಬಂದವು.

ಪ್ರಾಯಶಃ ಮಲೆನಾಡಿನಲ್ಲಿ ಹವ್ಯಾಸಿ ಸಂಸ್ಥೆಯೊಂದು ಮಕ್ಕಳ ನಾಟಕವನ್ನು ಆಡಿದ ದಾಖಲೆಯು ಉಲ್ಲೇಖಿತವಾಗಿರುವುದು ನೀನಾಸಂನಲ್ಲೇ. 1947ರಲ್ಲಿ ಕೆಲವು ಆಸಕ್ತ ಗೆಳೆಯರು ಹೆಗ್ಗೋಡಿನ ಗ್ರಾಮೀಣ ಪ್ರದೇಶದಲ್ಲಿ ನಾಟಕವಾಡಲು ಪ್ರಯತ್ನ ಮಾಡಿದರು. 1949ರಲ್ಲಿ ಈ ಚಟುವಟಿಕೆಗಳಿಗೆ ಸಾಂಸ್ಥಿಕ ರೂಪ ದೊರೆತು 'ನೀನಾಸಂ' ಹುಟ್ಟಿಕೊಂಡಿತು. ಅದು ತನ್ನ ಪ್ರದೇಶದಲ್ಲಿ ನಾಟಕವಾಡುತ್ತಾ, ಅದಕ್ಕಾಗಿ ತಾತ್ಕಾಲಿಕ ರಂಗಮಂದಿರವೊಂದನ್ನು ನಿರ್ಮಿಸಿ, ಸಕ್ರಿಯವಾಗಿ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿತು.

1967ರಲ್ಲಿ ಬಹುಸಂಖ್ಯೆಯ ಚಿಕ್ಕಮಕ್ಕಳನ್ನು ಸೇರಿಸಿಕೊಂಡು ಕೆ.ವಿ. ಸುಬ್ಬಣ್ಣನವರೇ ಬರೆದ 'ಕಾಡಿನಲ್ಲಿ ಕಥೆ' ಎಂಬ ಪ್ರಾಣಿಜೀವನದ ಚಿರಗನ್ನೊಳಗೊಂಡ ಪ್ರಾಯೋಗಿಕ ನಾಟಕವನ್ನು ಸುಬ್ಬಣ್ಣನವರ ನಿರ್ದೇಶನದಲ್ಲಿ ಸಿದ್ಧಗೊಳಿಸಿ ಪ್ರದರ್ಶಿಸಲಾಯಿತು. 1968ರಲ್ಲಿ ಮಕ್ಕಳಿಗಾಗಿ ಶಿಕ್ಷಣದ ಶಿಬಿರವೊಂದನ್ನು ಏರ್ಪಡಿಸಿ, ಅದರ ಅಂಗವಾಗಿ ಬಹುಸಂಖ್ಯೆಯ ಬಾಲಕ ಬಾಲಕಿಯರು ಭಾಗವಹಿಸಿದ ಕೀರ್ತಿನಾಥ ಕುರ್ತುಕೋಟಿಯವರ 'ಆ ಮನಿ' ನಾಟಕವನ್ನು ಸುಬ್ಬಣ್ಣನವರ ನಿರ್ದೇಶನದಲ್ಲಿ ಪ್ರಯೋಗಿಸಲಾಯಿತು. 1971ರಲ್ಲಿ ಮಕ್ಕಳ ನಾಟಕ ಕ್ಷೇತ್ರದಲ್ಲಿ ಒಂದು ಗಣನೀಯ ಪ್ರಯೋಗವಾಗಿ, ಬಿ.ವಿ. ಕಾರಂತರ ನಿರ್ದೇಶನದಲ್ಲಿ 'ಪಂಜರಶಾಲೆ' ಪ್ರಯೋಗಿಸಲ್ಪಟ್ಟಿತು. ಈ ನಾಟಕವನ್ನು ಸ್ಥಳೀಯವಾಗಿ ಪ್ರದರ್ಶಿಸಿದ್ದಲ್ಲದೆ ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ಆರು ವಿಶೇಷ ಪ್ರದರ್ಶನಗಳನ್ನು ಏರ್ಪಡಿಸಲಾಯಿತು. ಕನ್ನಡ ರಂಗಭೂಮಿಯಲ್ಲೇ ಇದೊಂದು ವಿಶೇಷ, ಮೊದಲ ಪ್ರಯೋಗವೆನ್ನಿಸಿಕೊಂಡು ನಾಟಕಪ್ರಿಯರಿಂದಲೂ, ಪತ್ರಿಕೆಗಳಿಂದಲೂ ವಿಶೇಷ ಪ್ರಶಂಸೆ ಪಡೆದುಕೊಂಡಿತು.

ಮತ್ತೆ 1973ರಲ್ಲಿ (ಮಾರ್ಚ್ ತಿಂಗಳು) ಒಂದು ವಿಶೇಷ ನಾಟಕೋತ್ಸವವನ್ನು ನೀನಾಸಂ ನಡೆಸಿತು. ಆ ಸಂದರ್ಭದಲ್ಲಿ ಬ್ರೆಜಿಲಿಯನ್ ನಾಟಕದ ರೂಪಾಂತರವಾದ 'ನೀಲಿಕುದುರೆ' ನಾಟಕ ಬಿ.ವಿ. ಕಾರಂತರಿಂದ ನಿರ್ದೇಶಿಸಲ್ಪಟ್ಟು ಪ್ರಯೋಗಿಸಲ್ಪಟ್ಟಿತು. 1973ರಲ್ಲಿ (ನವೆಂಬರ್) ಬೆಂಗಳೂರಿನ ಬಾಲಭವನದವರು ನಡೆಸಿದ ಮೊಟ್ಟಮೊದಲ

ಮಕ್ಕಳ ನಾಟಕೋತ್ಸವದಲ್ಲಿ ನೀನಾಸಂ ಪಂಜರಶಾಲೆ, ನೀಲಿಕುದುರೆ, ಅಂಚೆಮನೆ ಎಂಬ ಮೂರು ಮಕ್ಕಳ ನಾಟಕಗಳನ್ನು ಪ್ರದರ್ಶಿಸಿತು.

1975ರಲ್ಲಿ ಇದೇ ಬಾಲಭವನ ನಾಟಕೋತ್ಸವದ ಸಮಾರೋಪ ಸಮಾರಂಭದಲ್ಲಿ 'ಕಾಳಿಂಗಮರ್ಧನ'ವೆಂಬ ಮಕ್ಕಳ ಯಕ್ಷಗಾನ ನೃತ್ಯರೂಪಕವನ್ನು ನೀನಾಸಂ ನಡೆಸಿತು. 1979ರಲ್ಲಿ ಶಿವಮೊಗ್ಗದಲ್ಲಿ ಮಕ್ಕಳಿಗಾಗಿ 'ಬೆಟ್ಟಕ್ಕೆ ಚಳಿಯಾದರೆ' ನಾಟಕವನ್ನು ಇಕ್ಬಾಲರ ನಿರ್ದೇಶನದಲ್ಲಿ ನೀನಾಸಂ ತರಬೇತುಗೊಳಿಸಿತು. ಇಷ್ಟು ಹೊತ್ತಿಗೆ ಶಿವಮೊಗ್ಗದಲ್ಲೂ ಮಕ್ಕಳ ನಾಟಕ ಚಟುವಟಿಕೆ ನಡೆಯತೊಡಗಿತ್ತು.

ಹಾಗೆ ನೋಡಿದರೆ ಶಿವಮೊಗ್ಗ ಜಿಲ್ಲೆ ಮತ್ತು ಅದರ ಆಸುಪಾಸು ಮಕ್ಕಳ ಸಾಹಿತ್ಯ ರಚನೆಯ ಅಡೊಂಬಲ, 1926ರಲ್ಲೇ ಮಕ್ಕಳಿಗಾಗಿ ಮೋಡಣ್ಣನ ತಮ್ಮನನ್ನು ಸೃಷ್ಟಿಸಿದ, ಬೊಮ್ಮನಹಳ್ಳಿ ಕಿಂದರಜೋಗಿ, ನನ್ನ ಗೋಪಾಲ, ಅಮಲನ ಕಥೆ ಬರೆದ ಕುವೆಂಪು, ನಂತರದಲ್ಲಿ ಬೆಟ್ಟಕ್ಕೆ ಚಳಿಯಾದರೆ, ಜಾಯಂಟ್ ಮಾಮ..... ಮುಂತಾದ ನಾಟಕ ಬರೆದ ಕೆ.ವಿ. ಸುಬ್ಬಣ್ಣ, ಇಲ್ಲಿಯವರೆಗೆ ಮಕ್ಕಳ ಸಾಹಿತ್ಯದಲ್ಲಿ ಹೆಸರು ಮಾಡಿದ ಲಕ್ಷ್ಮೀನಾರಾಯಣ ಭಟ್ಟ, ಹೆಚ್.ಎಸ್. ವೆಂಕಟೇಶಮೂರ್ತಿ ಇಲ್ಲಿಯವರೇ ಅದರೆ, ವೈದೇಹಿ ಮಕ್ಕಳ ನಾಟಕ ರಚನೆ ಆರಂಭಿಸಿದ್ದು ಶಿವಮೊಗ್ಗದಿಂದ, ಸಾಗರದ ಪ್ರಸಿದ್ಧ ಸಾಹಿತಿ ನಾ.ಡಿಸೋಜ ಕೂಡ ಮಕ್ಕಳಿಗಾಗಿ ಬೇರೆ ಬೇರೆ ಸಾಹಿತ್ಯ ರಚನೆಯ ಜೊತೆಗೆ ಕೆಲವು ನಾಟಕಗಳನ್ನೂ ರಚಿಸಿದ್ದಾರೆ. ಕೆ.ಜಿ. ಕೃಷ್ಣಮೂರ್ತಿ, ಅಕ್ಷರ ಮುಂತಾದ ನಿರ್ದೇಶಕರು ಇಲ್ಲಿಯವರಾದರೆ, ಇಕ್ಬಾಲ್ ಅಹ್ಮದ್ ತಮ್ಮ ಚಿಣ್ಣ ಬಣ್ಣದ ಕನಸನ್ನು ಕಾರ್ಯರೂಪಕ್ಕಿಳಿಸಿದ್ದು ಇಲ್ಲಿ. ಹಾಗೆ ನೋಡಿದರೆ ಮಕ್ಕಳ ಸಂಚಾರಿ ರಂಗತಂಡಗಳು ಹುಟ್ಟಿ ಬೆಳೆದದ್ದೇ ಸಾಗರದ ಸುತ್ತಮುತ್ತ. ಮೊಟ್ಟಮೊದಲು ಮಕ್ಕಳ ನಾಟಕವನ್ನು ತಿರುಗಾಟದಲ್ಲಿ ಪ್ರದರ್ಶಿಸಿದ ನೀನಾಸಂ, ಮಕ್ಕಳ ರಂಗಭೂಮಿಯಲ್ಲಿ ಅದ್ಭುತಗಳನ್ನು ಸಾಧಿಸುತ್ತಿರುವ ಕಿನ್ನರ ಮೇಳ, ಚಿಣ್ಣಬಣ್ಣ ಮೂರೂ ಇಲ್ಲಿಯವೇ.

ಶಿವಮೊಗ್ಗದ ಕಲಾಜ್ಯೋತಿ ಮಕ್ಕಳಿಗಾಗಿ ಶಿಬಿರಗಳನ್ನು ನಡೆಸಿದರೆ, 'ಕಲಾಕಿರಣ' ಮಕ್ಕಳಿಗಾಗಿ ಹಲವು ನಾಟಕ ಪ್ರದರ್ಶಿಸಿತು. ಹೆಗ್ಗೋಡಿನಲ್ಲಿ ನೀನಾಸಂ ಆಶ್ರಯದಲ್ಲಿ, ತುಮರಿಯಲ್ಲಿ ಕಿನ್ನರಮೇಳದ ಆಶ್ರಯದಲ್ಲಿ, ಸಾಗರದ ಉದಯ ಕಲಾವಿದರು ಆಶ್ರಯದಲ್ಲಿ ಮಕ್ಕಳ ನಾಟಕೋತ್ಸವಗಳು ನಡೆಯುತ್ತಿವೆ, ನಡೆದಿವೆ. ಸಾಗರದ ಸಿ.ಟಿ. ಬ್ರಹ್ಮಾಚಾರ್, ಡಾ. ಗುರುರಾವ್ ಬಾಪಟ್, ಶಿವಮೊಗ್ಗದ ಹೆಚ್.ಎಂ. ಪ್ರಭಾಕರ್, ಡಾ.ಗಜಾನನ ಶರ್ಮ ಮಕ್ಕಳ ರಂಗಭೂಮಿಗಾಗಿ ಬಹಳಷ್ಟು ಕೆಲಸ ಮಾಡಿದ ರಂಗಕರ್ಮಿಗಳು.

## ಬೆಂಗಳೂರು–ಮೈಸೂರು–ತುಮಕೂರುಗಳಲ್ಲಿ:

1983ರ ಏಪ್ರಿಲ್ 26 ರಂದು ಆರ್.ಕಲ್ಯಾಣಮ್ಮನವರು ಬೆಂಗಳೂರಿನಲ್ಲಿ ಮಕ್ಕಳಕೂಟವನ್ನು ಸ್ಥಾಪಿಸಿ ಮಕ್ಕಳ ಚಟುವಟಿಗಳಿಗೆ ನಾಂದಿ ಹಾಡಿದರು. 1960ರ ದಶಕದಲ್ಲಿ ಕೆಲವು ಹವ್ಯಾಸಿಗಳು ಮಕ್ಕಳ ನಾಟಕಗಳನ್ನು ಆಡಲು ಮನಸ್ಸು ಮಾಡಿದರು. ಬೆಂಗಳೂರಿನಲ್ಲಿ ಬೇರೆ ಬೇರೆ ನೆಲೆಗಳಲ್ಲಿ ಮಕ್ಕಳ ನಾಟಕಗಳನ್ನು ಆಡಲು ಹವ್ಯಾಸಿಗಳು ಮನಸ್ಸು ಮಾಡಿದ ಮಾಹಿತಿಗಳು ದೊರೆಯುತ್ತವೆ. ಈ ನಡುವೆ ಬೆಂಗಳೂರಿನಲ್ಲಿ ನಡೆದ ನೀನಾಸಂ ಮಕ್ಕಳ ನಾಟಕಗಳ ಬಗ್ಗೆ ಬಿ.ವಿ.ವೈಕುಂಠರಾಜು ಹೀಗೆ ಹೇಳಿದ್ದಾರೆ.

"ಪಂಜರಶಾಲೆಯಲ್ಲಿ 85 ಮಕ್ಕಳೂ, ನೀಲಿ ಕುದುರೆಯಲ್ಲಿ 108 ಮಕ್ಕಳೂ ಪಾಲ್ಗೊಂಡಿದ್ದರೆಂದರೆ ಈ ಸಂಘದ ಸಾಹಸವೆಷ್ಟು ಎನ್ನುವುದು ಅರ್ಥವಾದೀತು. 'ಪಂಜರಶಾಲೆ'ಯ ಆರು ಪ್ರದರ್ಶನಗಳು (1971ರಲ್ಲಿ) ಬೆಂಗಳೂರಿನಲ್ಲಿ ನಡೆದಾಗ, ಎಳೆಯ ಮಕ್ಕಳು ಪ್ರೇಕ್ಷಕರ ಮೇಲೆ ಬೀರಿದ ಪರಿಣಾಮವನ್ನು ಮರೆಯುವಂತಿಲ್ಲ. ಎಲ್ಲೆಂದರಲ್ಲಿ, ಆದರೆ ಶಿಸ್ತಿನಿಂದ ಕಾಣಿಸುವ ಮಕ್ಕಳ ಗುಂಪು, ನಿಧಾನವಾಗಿ ರೆಕ್ಕೆಬಿಚ್ಚಿ ಹಾರುವ ಗಿಳಿಹಿಂಡು, ಪಂಜರ ನಿರ್ಮಿಸುವವರ, ಶಿಕ್ಷಣ ಪಂಡಿತರ ಸಮೂಹ, ಇವೆಲ್ಲವನ್ನೂ ಮಕ್ಕಳು ಸಹಜವೆನ್ನುವಂತೆ ಅಭಿನಯಿಸಿ ನಿರ್ದೇಶನದ ಸಾರ್ಥಕತೆಯನ್ನು ತೋರಿಸಿದರು. ಬೆಂಗಳೂರಿನಂತಹ ನಗರದಲ್ಲೂ ಇಷ್ಟು ಸಂಖ್ಯೆಯಲ್ಲಿ ಮಕ್ಕಳನ್ನು ಕಲೆ ಹಾಕಿ ನಾಟಕ ಪ್ರದರ್ಶಿಸುವ ಸಾಹಸ ನಡೆದಿಲ್ಲ"[8]

ಈ ಪ್ರದರ್ಶನಗಳು ಬೆಂಗಳೂರಿನ ಹವ್ಯಾಸಿಗಳ ಮೇಲೆ ಎಷ್ಟೊಂದು ಗಾಢ ಪರಿಣಾಮ ಬೀರಿತೆಂದರೆ, ಬೆಂಗಳೂರಿನಲ್ಲಿ ಅದುವರೆಗೂ ಮಂದವಾಗಿದ್ದ ಮಕ್ಕಳ ನಾಟಕ ಚಟುವಟಿಕೆ 1971ರ ನಂತರ ಬಿರುಸಾಯಿತು. ಇದರ ನಡುವೆ 1972ರಲ್ಲಿ ಜವಾಹರ ಬಾಲಭವನ ಮಕ್ಕಳಿಗಾಗಿಯೇ ಪ್ರತ್ಯೇಕ ರಂಗಮಂದಿರವೊಂದನ್ನು ಬೆಂಗಳೂರಿನಲ್ಲಿ ಸ್ಥಾಪಿಸಿ, ಕಾವೇರುತ್ತಿದ್ದ ಮಕ್ಕಳ ರಂಗಭೂಮಿಯ ಚಟುವಟಿಕೆಗೆ ಮತ್ತಷ್ಟು ಕುಮ್ಮಕ್ಕು ಕೊಟ್ಟಿತು. ಇಲ್ಲಿ ಪ್ರದರ್ಶನಗೊಂಡ ನಾಟಕಗಳು ಹಲವು ಜಿಲ್ಲಾ ಕೇಂದ್ರಗಳಲ್ಲೂ ಪ್ರದರ್ಶಿತವಾದವು. ಎನ್.ಎಸ್. ವೆಂಕಟರಾಂ ಮಕ್ಕಳ ರಂಗಭೂಮಿಯ ದೊಡ್ಡ ಹೆಸರಾಗಿ ಮೂಡಿಬರಲು ಜವಾಹರ ಬಾಲಭವನದ ಚಟುವಟಿಕೆಗಳು ಬಹುಮಟ್ಟಿಗೆ ಕಾರಣವಾಯಿತು.

ಬೆಂಗಳೂರು ನಗರ ಕಲಾವಿದರು (ಬೆನಕ) ಸಂಸ್ಥೆ, 1977ರಿಂದಲೂ ಮಕ್ಕಳಿಗಾಗಿ ಲಲಿತಕಲಾ ಶಿಬಿರಗಳನ್ನೂ ರಂಗತರಬೇತಿ ಶಿಬಿರಗಳನ್ನೂ ನಡೆಸುತ್ತಾ ಬಂದಿತ್ತಲ್ಲದೆ, ಬಿ.ವಿ. ಕಾರಂತ, ಪ್ರೇಮಾ ಕಾರಂತ ಮುಂತಾದವರ ನಿರ್ದೇಶನದಲ್ಲಿ ಮಕ್ಕಳ ನಾಟಕಗಳು ನಡೆಯುತ್ತಾ ಬಂದವು. ಇದೇ ರೀತಿ ಇನ್ನೂ ಹಲವಾರು ಸಂಸ್ಥೆಗಳು ನಗರದ ಕೇಂದ್ರ

ಭಾಗವಲ್ಲದೆ ಆಸುಪಾಸಿನ ಉಪನಗರ/ಹಳ್ಳಿಗಳಲ್ಲಿ ನಾಟಕ ಚಟುವಟಿಕೆಗಳನ್ನು ನಡೆಸುತ್ತಾ ಬಂದರು. ಬೆಂಗಳೂರು ಆಕಾಶವಾಣಿ ಕೂಡ ರಂಗಚಟುವಟಿಕೆಗಳಿಗೆ ಆಸ್ಪದ ನೀಡುತ್ತಾ ಬಂದಿತು.

ಬೆಂಗಳೂರಿನ ಚಿತ್ರಾ ನಾಟಕ ಶಿಬಿರ, ವಿಜಯನಗರ ಬಿಂಬ ಮತ್ತು ಹನುಮಂತನಗರ ಬಿಂಬ ಶನಿವಾರದ ಶಾಲೆ, ಮತ್ತು ನಾಟಕ ಶಿಬಿರಗಳು, ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರ ಗಮನ ಸೆಳೆದಿವೆ. ಎ.ಎಸ್. ಮೂರ್ತಿ, ಗೌರಿದತ್ತು, ಪ್ರೇಮಾ ಕಾರಂತ, ಸಿ. ಲಕ್ಷ್ಮಣ, ಶೋಭಾ ವೆಂಕಟೇಶ್ ಎ.ಎಂ. ಪ್ರಕಾಶ್, ಡಾ॥ ಕಶ್ಯಪ್, ಸುಷ್ಮಾ ಪ್ರಶಾಂತ್, ದಾಕ್ಷಾಯಿಣಿ ಭಟ್, ಮಂಗಳಾ ಅರ್ಚನಾ ಶ್ಯಾಂ ಮುಂತಾದವರು ಬೆಂಗಳೂರಿನಲ್ಲಿ ಮಕ್ಕಳ ರಂಗಭೂಮಿಗಾಗಿ ದುಡಿಯುತ್ತಿದ್ದಾರೆ. ವಿಜಯನಗರ ಬಿಂಬ ಇದುವರೆಗೆ 15 ವರ್ಷಗಳಿಂದ ಸತತವಾಗಿ ರಂಗಶಿಬಿರಗಳನ್ನು ನಡೆಸುತ್ತಾ ಪ್ರತಿವರ್ಷವೂ ಹೊಸ ಹೊಸ ಮಕ್ಕಳ ರಂಗಪ್ರಯೋಗಗಳನ್ನು ಮಾಡುತ್ತಾ ಬಂದಿದೆ.

ಇದೇ ರೀತಿ ಮೈಸೂರಿನಲ್ಲೂ ಹತ್ತು ಹಲವು ತರದಲ್ಲಿ ಮಕ್ಕಳ ಚಟುವಟಿಕೆಗಳು ನಡೆಯುತ್ತಾ ಬಂದವು. ಇತ್ತೀಚೆಗೆ ರಂಗಾಯಣ ಮತ್ತು ನಟನಾವೂ ಕೂಡ ಮಕ್ಕಳಿಗಾಗಿ ನಾಟಕಗಳನ್ನು ಪ್ರದರ್ಶಿಸಿದ್ದಲ್ಲದೆ, ಮಕ್ಕಳ ನಾಟಕೋತ್ಸವ ಕೂಡ ನಡೆಸುತ್ತಾ ಬಂದಿವೆ. ಮಕ್ಕಳಿಗಾಗಿ ಶಿಬಿರಗಳನ್ನೂ ಕೂಡ ನಡೆಸುತ್ತಿವೆ.

ಇನ್ನು ಬೆಂಗಳೂರು, ತುಮಕೂರುಗಳಲ್ಲಿ ನಾಟಕ ಸ್ಪರ್ಧೆಗಳು ಮಕ್ಕಳಿಗಾಗಿ ನಡೆದಿವೆ. ತುಮಕೂರಿನ ರಂಗಾಸಕ್ತ ಶ್ರೀ ಹೆಚ್.ಎಂ.ಟಿ. ರಂಗಯ್ಯ ಹೊಸಕೆರೆ ಎಂಬುವವರ ಮುಂದಾಳತ್ವದಲ್ಲಿ ಪ್ರಾರಂಭವಾದ ಶ್ರೀರಂಗರಂಗ ಹವ್ಯಾಸಿ ಕಲಾವೃಂದ ರಾಜ್ಯಮಟ್ಟದ ಮಕ್ಕಳ ನಾಟಕ ಸ್ಪರ್ಧೆಯನ್ನು ನಡೆಸಿಕೊಂಡು ಬರುತ್ತಿದೆ.

## ಉತ್ತರ ಕರ್ನಾಟಕದ ಮಕ್ಕಳ ರಂಗಚಟುವಟಿಕೆಗಳು:

ಪ್ರಾಯಶಃ ಉತ್ತರ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎನ್ನಬಹುದಾದ ಧಾರವಾಡ, ಮಕ್ಕಳ ನಾಟಕದ ವಿಷಯದಲ್ಲೂ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ. ಉಳಿದ ಕಡೆಗಳಂತೆ ಉತ್ತರ ಕರ್ನಾಟಕದಲ್ಲೂ ಶಾಲೆಗಳ ಆರಂಭವೇ ಮಕ್ಕಳ ರಂಗಭೂಮಿಯ ಆರಂಭ. 1823ರಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ವಿದ್ಯಾ ಇಲಾಖೆ ಆರಂಭವಾಯಿತು. 1827ರಲ್ಲಿ ಮರಾಠಿ ಶಾಲೆಗಳು ಆರಂಭವಾದರೆ, 1835ರಲ್ಲಿ ಕನ್ನಡ ಶಾಲೆಗಳು ಒಂದೊಂದಾಗಿ ಸಾರ್ವಜನಿಕವಾಗಿ ತಲೆಯೆತ್ತಿದವು. ಸುಮಾರು ಇದೇ ಹೊತ್ತಿಗೆ, ಮಂಗಳೂರಿನಲ್ಲಿ ಮುದ್ರಣಾಲಯವನ್ನು ಕ್ರೈಸ್ತ ಮಿಶನರಿಗಳು ಪ್ರಾರಂಭಿಸಿದ ಮೇಲೆ ಶಾಲಾಕ್ರಮಿಕ ಪುಸ್ತಕಗಳು ಮುದ್ರಣಗೊಂಡು ಮಕ್ಕಳ ಕೈಗೆ ಬರಹತ್ತಿದವು. ಮುಂದೆ 1865ರಲ್ಲಿ ರೈಸ್ ಸಾಹೇಬರು ದಕ್ಷಿಣ ಭಾಗದ ಶಿಕ್ಷಣಾಧಿಕಾರಿಗಳಾದ ಮೇಲೆ,

1866ರಲ್ಲಿ ಡೆಪ್ಯೂಟಿ ಚೆನ್ನಬಸಪ್ಪನವರು ಈ ಭಾಗದ ಶಿಕ್ಷಣದ ಕರ್ಣಧಾರತ್ವವನ್ನು ವಹಿಸಿಕೊಂಡ ಮೇಲೆ, ಕನ್ನಡದ ಭಾಗ್ಯವು ಕದ ತೆರೆಯಿತೆಂದು ಹೇಳಬಹುದು. ಸಾಹಿತಿ ಶಿಕ್ಷಕರಿಗೆ ಒಳ್ಳೆಯ ಪ್ರೇರಣೆ, ಪ್ರೋತ್ಸಾಹ ದೊರೆಯಿತು. 1865ರಲ್ಲಿಯೇ ಧಾರವಾಡದ ಟ್ರೈನಿಂಗ್ ಕಾಲೇಜಿನಲ್ಲಿ 'ಮಠ' ಪತ್ರಿಕೆಯು ಪ್ರಾರಂಭವಾಯಿತು. ಈ ಮಠ ಪತ್ರಿಕೆಯೇ ಮುಂದೆ ಕನ್ನಡ ಶಾಲಾ ಪತ್ರಿಕೆಯಾಯಿತು. ಈ ಶಾಲೆಗಳಲ್ಲಿ ಮಕ್ಕಳ ನಾಟಕಗಳು ವಾರ್ಷಿಕ ಪದ್ಧತಿಯಾಗಿ ನಡೆದ ಉದಾಹರಣೆಗಳು ದೊರೆಯುತ್ತವೆ. ಮುಂದೆ ಮೇವುಂಡಿ ಮಲ್ಲಾರಿ, ದ.ರಾ.ಬೇಂದ್ರೆ, ಕೀರ್ತಿನಾಥ ಕುರ್ತುಕೋಟಿ, ಶ್ರೀರಂಗ ಮುಂತಾದ ಹಿರಿಯರು ಮಕ್ಕಳಿಗಾಗಿ ನಾಟಕ ಬರೆದರು. ಧಾರವಾಡ, ಹುಬ್ಬಳ್ಳಿಯಲ್ಲಲ್ಲದೆ ಗದಗದಂತಹ ಸ್ಥಳಗಳಲ್ಲೂ ಮಕ್ಕಳ ನಾಟಕಗಳು ನಡೆದವು ಎನ್ನಲಾಗಿದೆ.

1970ರ ನಂತರ ಕರ್ನಾಟಕದ ಉಳಿದ ಕಡೆಗಳಂತೆ ಉತ್ತರ ಕರ್ನಾಟಕ ಪ್ರದೇಶಗಳಲ್ಲೂ ಹವ್ಯಾಸಿ ತಂಡಗಳು ತಲೆಯೆತ್ತಿ ಮಕ್ಕಳ ನಾಟಕ, ಶಿಬಿರಗಳನ್ನು ನಡೆಸತೊಡಗಿದರು, ಏಣಗಿ ಬಾಳಪ್ಪನವರಂತಹ ಹಿರಿಯರೂ ತಮ್ಮ ಹಳೆಯ ರಂಗಭೂಮಿಯ ನೆನಪುಗಳನ್ನು ಮಕ್ಕಳ ನಾಟಕ ಆಡಿಸುವ ಮೂಲಕ ನವೀಕರಿಸಿಕೊಂಡ ಉದಾಹರಣೆ ದೊರೆಯುತ್ತದೆ. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೋಕಿನ ಏಣಗಿಯಲ್ಲಿ ಬಾಲಭಾರತಿ ನಾಟ್ಯ ಸಂಘದ ಪತಿಯಲ್ಲಿ ಬೇಲೂರು ಕೃಷ್ಣಮೂರ್ತಿಯವರ 'ಮದುವೆಯ ಹುಚ್ಚು' ನಾಟಕವನ್ನು ಪಲವಾರು ಬದಲಾವಣೆಗಳನ್ನು ಮಾಡಿಕೊಂಡು, ಕನ್ನಡ ವೃತ್ತಿರಂಗಭೂಮಿಯ ಹಿರಿಯ ಚೇತನ, ಹೆಸರಾಂತ ಗಾಯಕ ಏಣಗಿ ಬಾಳಪ್ಪನವರೇ ನಿರ್ದೇಶಿಸಿದ ಪತ್ರಿಕಾ ವರದಿಯಿದೆ.

ಧಾರವಾಡದ 'ಅಭಿನಯ ಭಾರತಿ' ಹವ್ಯಾಸಿ ಕಲಾವೃಂದ 1987ರಿಂದಲೂ 'ಚಿಗುರು' ಎಂಬ ಶಿಬಿರ ನಡೆಸುತ್ತಾ ಬರುತ್ತಿದೆ. ಇದರಲ್ಲಿ ನಮ್ಮ ಹೆಸರಾಂತ ಆಧುನಿಕ ರಂಗತಜ್ಞರು ನಾಟಕಗಳನ್ನು ನಿರ್ದೇಶಿಸಿದ್ದಾರೆ. ಧ್ರುವರಾಜ ದೇಶಪಾಂಡೆ, ಬಂಡೂ ಕುಲಕರ್ಣಿ, ನಾರಾಯಣ ಪಾಂಡುರಂಗಿ, ಪ್ರಕಾಶ ಗರೂಡ ಗುಲ್ಬರ್ಗಾ ಜಿಲ್ಲೆಯ ಸೇಡಂನ ಪ್ರಭಾಕರ ಜೋಷಿ ಮುಂತಾದವರು ಉತ್ತರ ಕರ್ನಾಟಕದ ಮಕ್ಕಳ ರಂಗಭೂಮಿಯಲ್ಲಿ ಸಕ್ರಿಯರಾಗಿ ದುಡಿಯುತ್ತಿದ್ದಾರೆ. ಚಿಗುರು ಶಿಬಿರದಲ್ಲಿ ಬಂಡೂ ಕುಲಕರ್ಣಿ 'ಛುಕ್ ಛುಕ್ ಭಯ್ಯಾ', 'ಜಾಯಂಟ್ ಮಾಮಾ' ಮುಂತಾದ ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸಿದ್ದಾರೆ.

1981ನೇ ಇಸವಿ ಸೆಪ್ಟೆಂಬರ್ 5ರಂದು ಸ್ಥಾಪಿತವಾದ ಅಭಿನಯ ಭಾರತಿ ರಂಗಚಟುವಟಿಕೆಗಳಿಗಾಗಿ ಮೀಸಲಾದ ಸಂಸ್ಥೆ, 91ರಲ್ಲಿ ಪುಷ್ಪರಾಣಿ, 92ರಲ್ಲಿ ಜಾದೂ ಜಂಗಲ್, 93ರಲ್ಲಿ ನೀಲಿಕುದುರೆ, 94ರಲ್ಲಿ ಪಂಜರಶಾಲೆ, 95ರಲ್ಲಿ ಇರುವೆಗಳ ಪ್ರಸಂಗ ಹೀಗೆ ಮಕ್ಕಳ ನಾಟಕಗಳನ್ನು ಈ ಸಂಸ್ಥೆ ಪ್ರಯೋಗಿಸುತ್ತಾ ಬಂದಿದೆ.

ಬಿಜಾಪುರ ಜಿಲ್ಲೆಯ ಹುನಗುಂದದಲ್ಲಿ ಯಶವಂತ ಸರದೇಶಪಾಂಡೆಯವರ ನಿರ್ದೇಶನದಲ್ಲಿ ನಡೆದ ಮಿಸ್ ಪಾಯಿಂಟ್, ಗದಗದ 'ಅಭಿನಯದ ರಂಗ'ದ ಶಿಬಿರ, ಕಲಘಟಗಿ, ಮುಂಡರಗಿ, ಧಾರವಾಡ, ಹಾವೇರಿ, ನವಲಗುಂದ, ಕುಂದಗೋಳಗಳಲ್ಲಿ ನಡೆದ ಮಕ್ಕಳ ನಾಟಕೋತ್ಸವ, ಹೊಸಪೇಟೆಯ 'ನಾವು' ಕಂಡ ಮಕ್ಕಳ ನಾಟಕ, ಯಶವಂತ ಸರದೇಶಪಾಂಡೆಯ, 20 ಜನ 20 ದಿನ ಶಿಬಿರ, ಪಂಚರಂಗಿ ಶರತ್ ಶಿಬಿರದ 'ಕೈಲಾಗದ ಮೈಗಳ್ಳನಿಗೆ' ನಾಟಕ, ಹುಬ್ಬಳ್ಳಿಯ ಅಕಾಡೆಮಿ ಆಫ್ ಪರ್ ಫಾರ್ಮಿಂಗ್ ಆರ್ಟ್ಸ್ ಸಂಸ್ಥೆಯ ಗೊಂಬೆಯಾಟ, ಭರತ ನಾಟಕ ಶಾಲೆ ಹುಬ್ಬಳ್ಳಿಯ 'ಅಜ್ಜಿಕಥೆ' ಹುಬ್ಬಳ್ಳಿಯ ಮಧುರಂಗದ ಕಾಸ್ಮೊ–2000ರ ಶಿಬಿರದಲ್ಲಿ ಆಡಿದ ದುಂಡಿರಾಜರ 'ಅಜ್ಜಿಕಥೆ', ಶಿವಯೋಗ ಗ್ರಾಮ ಬಿದರಕುಂದಿ, ಮುದ್ದೆಬಿಹಾಳ ತಾಲ್ಲೂಕಿನಲ್ಲಿ ನಡೆದ 'ಕಲಿ–ನಲಿ' ಶಿಬಿರ ಇತ್ಯಾದಿಗಳು ಉತ್ತರ ಕರ್ನಾಟಕದಲ್ಲಿ ನಡೆಯುತ್ತಿರುವ ಮಕ್ಕಳ ರಂಗ ಚಟುವಟಿಕೆಯ ಕೆಲವು ಉದಾಹರಣೆಗಳು.

## ಇತರ ರಂಗಪ್ರಕಾರಗಳು ಮತ್ತು ಮಕ್ಕಳು

ಜನಸಾಮಾನ್ಯರಿಂದ ಜನಸಾಮಾನ್ಯರಿಗಾಗಿ ರೂಪು ತಳೆದ ಜನಪದ ರಂಗಭೂಮಿ, ಜನಸಾಮಾನ್ಯರಲ್ಲಿ ಬದುಕಿನ ಜ್ಞಾನವನ್ನು ಬಿತ್ತುವ ಆಶಯದೊಂದಿಗೆ ಸಾಗಿ ಬಂದಿದೆ. ಪ್ರಾಯಶಃ ಆದಿಮಾನವನ ಕಾಲದಲ್ಲೇ ತನ್ನ ಬೇರುಗಳನ್ನು ಬಿಟ್ಟುಕೊಂಡಿರುವ ಜನಪದ ರಂಗಭೂಮಿ ಕಾಲಕ್ರಮೇಣ ರೂಪಾಂತರಗಳನ್ನು ಹೊಂದುತ್ತಾ ಉಳಿದು ಬೆಳೆದು ಬಂದಿತು. ಜನಪದ ಕಲೆಗಳು ಜನಪದ ಸಾಹಿತ್ಯಕ್ಕಿಂತ ಪ್ರಾಚೀನವಾದವು. ಮಾನವನ ವ್ಯವಹಾರದಲ್ಲಿ ಭಾಷೆಗಿಂತ ಮೊದಲು ಸಂಕೇತ ಮತ್ತು ನೃತ್ಯಗಳು, ಅದರ ನಂತರ ಸಂಬಂಧಪಟ್ಟ ಸಾಹಿತ್ಯಗಳು ಬೆಳೆದವು ಎಂದು ತಜ್ಞರು ತೀರ್ಮಾನಿಸಿದ್ದಾರೆ. ಅತ್ಯಂತ ಪ್ರಾಚೀನವಾದ ಕರ್ನಾಟಕದ ಜನಪದ ಕಲೆಗಳಲ್ಲಿ ಯಕ್ಷಗಾನ, ಗೊಂಬೆಯಾಟ ಮತ್ತು ಸಣ್ಣಾಟ ಇವು ಪ್ರಮುಖ ಪ್ರಭೇದಗಳು.

"ಜನಪದ ರಂಗಭೂಮಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಪ್ರಾದೇಶಿಕ ವೈಶಿಷ್ಟ್ಯಗಳಿಗೆ ತಕ್ಕಂತೆ ಹಲವು ಪ್ರಭೇದಗಳು ಉಂಟಾಗಿದ್ದರೂ, ಅವುಗಳ ಆಂತರಿಕ ಸತ್ವ ಮತ್ತು ರೂಪ ಮಾತ್ರ ಒಂದೇ. ವ್ಯತ್ಯಾಸಗಳೇನಿದ್ದರೂ ಕಂಡುಬರುವುದು ಅವುಗಳ ಹೊರಮೈ ಲಕ್ಷಣದಲ್ಲಿ ಮಾತ್ರ."[9]

ಕರ್ನಾಟಕ ಯಕ್ಷಗಾನ ಬಯಲಾಟಗಳಲ್ಲಿ ಮೂಡಲಪಾಯ ಮತ್ತು ಪಡುವಲಪಾಯವೆಂಬ ಎರಡು ಪ್ರಭೇದಗಳಿವೆ. ಉತ್ತರ ಕರ್ನಾಟಕ ಭಾಗದಲ್ಲಿ 'ದೊಡ್ಡಾಟ' ಎಂದು ಪ್ರಚಲಿತವಾಗಿರುವ ಆಟವನ್ನೂ ತಜ್ಞರು ಮೂಡಲಪಾಯದ ಗುಂಪಿಗೇ ಸೇರಿಸಿದ್ದಾರೆ. ಪ್ರಾದೇಶಿಕವಾಗಿ ನಮ್ಮ ಜನಪದ ರಂಗಭೂಮಿ ಹೀಗೆ

ಹಂಚಿಹೋಗಿದೆ. ಮೂಡಲಪಾಯದಲ್ಲಿನ 'ದಕ್ಷಿಣ ಸಂಪ್ರದಾಯ' – ತುಮಕೂರು, ಬೆಂಗಳೂರು, ಕೋಲಾರ, ಮಂಡ್ಯ, ಮೈಸೂರು, ಹಾಸನ, ಚಿತ್ರದುರ್ಗಗಳಲ್ಲಿ, ಮೂಡಲಪಾಯದಲ್ಲಿನ 'ಉತ್ತರ ಸಂಪ್ರದಾಯ' ಬಳ್ಳಾರಿ, ಧಾರವಾಡ, ಬಿಜಾಪುರ, ಗುಲ್ಬರ್ಗ, ರಾಜಚೂರು, ಬೀದರ್, ಬೆಳಗಾಂಗಳಲ್ಲಿ, ಪಡುವಲಪಾಯ 'ಯಕ್ಷಗಾನ' ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗಗಳಲ್ಲಿ, ಇದರಲ್ಲಿಯೇ ಉಡುಪಿಯನ್ನು ಗಡಿಯಾಗಿಟ್ಟುಕೊಂಡು ಅದರ ದಕ್ಷಿಣಕ್ಕೆ ತೆಂಕುತಿಟ್ಟು ಮತ್ತು ಉತ್ತರಕ್ಕೆ ಬಡಗುತಿಟ್ಟು ಎಂಬ ಪ್ರಭೇಧಗಳೂ ಹಂಚಿಕೆಗೊಂಡಿವೆ.

ಉತ್ತರ ಕರ್ನಾಟಕ ಭಾಗದಲ್ಲಿ ಕಂಡುಬರುವ 'ಸಣ್ಣಾಟ'ಗಳು ಯಕ್ಷಗಾನ ಬಯಲಾಟದ ಅನುಕರಣೆಯಿಂದಲೇ ಹುಟ್ಟಿದರೂ ಕೂಡ, ನಂತರದಲ್ಲಿ ಕಂಪೆನಿ ನಾಟಕಗಳ ಪ್ರಭಾವಕ್ಕೆ ಒಳಗಾಗಿ ರೂಪಾಂತರಗೊಂಡಿವೆ. ಇದರಲ್ಲಿ ಬೇರೆ ಬೇರೆ ಗುಂಪುಗಳಿವೆ (ಶೈವಸಣ್ಣಾಟ, ವೈಷ್ಣವ ಸಣ್ಣಾಟ, ಲೌಕಿಕ ಸಣ್ಣಾಟ). ಸಾಮಗಾನವೆಂಬುದೂ ಕಂಪನಿ ನಾಟಕಗಳ ಪ್ರಭಾವದಿಂದ ಬೆಳಕಿಗೆ ಬಂದ, ಕುಣಿತವಿಲ್ಲದ – ಹೆಚ್ಚು ನಾಟಕಕ್ಕೆ ವಾಲಿದ ಜನಪದ ಕಲೆ. ಕರ್ನಾಟಕದ ಯಕ್ಷಗಾನ ಗೊಂಬೆಯಾಟಗಳಲ್ಲಿ ಸೂತ್ರದ ಗೊಂಬೆಯಾಟ, ತೊಗಲು ಗೊಂಬೆಯಾಟ ಎಂಬ ಎರಡು ಪ್ರಭೇದಗಳಿವೆ. ಇದರಲ್ಲಿ ಸೂತ್ರದ ಗೊಂಬೆಯಾಟ ಇಡೀ ಕರ್ನಾಟಕದಲ್ಲಿ ಕಂಡುಬರುವ ಕಲೆ. ತೊಗಲು ಗೊಂಬೆಯಾಟ ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಹೆಚ್ಚು ರೂಢಿಯಲ್ಲಿದೆ.

ನಾವು ಮೇಲೆ ಗಮನಿಸಿದ ಎಲ್ಲ ಕಲೆಗಳೂ ಜನಪದದ ಮಧ್ಯದಲ್ಲಿ ಹುಟ್ಟಿ ಜನರ ನಡುವೆಯೇ ಬೆಳೆದುಬಂದ, ಜನರ ಬದುಕಿನ ಭಾಗವಾಗಿ ಹಾಸುಹೊಕ್ಕಾಗಿರುವ ಕಲಾಪ್ರಕಾರಗಳು. ಇವೆಲ್ಲವುಗಳ ಆಳದಲ್ಲಿ ಧರ್ಮದ, ನೀತಿಯ, ಬದುಕಿನಲ್ಲಿ ಕೆಡುಕನ್ನು ಮೆಟ್ಟಿ ಒಳಿತನ್ನು ಮಾನ್ಯಮಾಡುವ ದೃಷ್ಟಿಕೋನ ಅಂತರ್ಗತವಾಗಿವೆ. ಮನುಷ್ಯನು ಬದುಕಿನಲ್ಲಿ ಅನುಸರಿಸಬೇಕಾದ 'ನೈತಿಕತೆ'ಯ ಮಹತ್ವವನ್ನು ಸಾರುತ್ತಾ ಅನೀತಿಪಂತರು ಅಳಿದುಹೋಗುವ ಸತ್‌ಸಂಪ್ರದಾಯವನ್ನು ಹರಡುವುದೇ ಇವುಗಳ ಮೂಲೋದ್ದೇಶ. ಹಾಗಾಗಿ ಈ ಎಲ್ಲ ಕಲೆಗಳೂ ಬದುಕನ್ನು ಸಮಗ್ರವಾಗಿ ಗ್ರಹಿಸುವ, ಭಾರತೀಯ ದೃಷ್ಟಿಕೋನವನ್ನೇ ತಮ್ಮ ಅನುಶಾಸನವಾಗಿಟ್ಟುಕೊಂಡು ಬೆಳೆದುಬಂದಿವೆ. ಇಲ್ಲಿ ಮಕ್ಕಳಿಗೆ, ಸ್ತ್ರೀಯರಿಗೆ, ಪುರುಷರಿಗೆ ಎಂಬ ಮೀಸಲಾತಿಯಾಗಲೀ, ಉಳ್ಳವರಿಗೆ, ಊಳಿಗದವರಿಗೆ ಎಂಬ ಮೀಸಲಾತಿಯಾಗಲೀ ಇಲ್ಲ. ಭಾರತೀಯ ಸಮಾಜವು ಅವಿಭಾಜ್ಯ ಅಂಗವಾಗಿ ಹೊಂದಿರುವ 'ಜಾತಿ'ಯ ವಿಘಟನೆಯೂ ಈ ಕಲೆಗಳಲ್ಲಿ ಇಲ್ಲ. ಇದು ಅಬಾಲ ವೃದ್ಧರಾಗಿಯಾಗಿ ಮೇಲು ಕೀಳೆನ್ನದೇ ಎಲ್ಲರೂ ಕಲೆತು ಅನುಭವಿಸುವ ಸಮುದಾಯದ ಆಚರಣೆ. ಇಲ್ಲಿ ಪಾತ್ರ ವಹಿಸುವವರೇ ಆಗಲಿ, ಪ್ರೇಕ್ಷಕರೇ ಆಗಲಿ ಯಾವುದೇ ನಿರ್ದಿಷ್ಟ ಗುಂಪಿನವರಲ್ಲ. ಇದೊಂದು ಊರೊಟ್ಟಿನ ಸಮಾಜೋತ್ಸವ.

ಇವುಗಳ ಪ್ರದರ್ಶನದ ಪರಂಪರೆಯಲ್ಲೂ ಅಂತಹುದೇ ಸೂತ್ರವನ್ನು ಅನುಸರಿಸಿಕೊಂಡು ಬರಲಾಗಿದೆ. ಅದು ಮೂಡಲಪಾಯವಾಗಿರಲಿ, ಪಡುವಲಪಾಯವಾಗಿರಲಿ, ಗೊಂಬೆಯಾಟವೇ ಆಗಿರಲಿ, ಪ್ರಾರಂಭವಾಗುವುದು ನಾಂದೀಭಾಗದಿಂದ. ನಾಂದೀಭಾಗ ನೇಪಥ್ಯಗೃಹದಿಂದಲೇ ಆರಂಭಗೊಂಡಿರುತ್ತದೆ. ಪ್ರಸಂಗಾರಂಭಕ್ಕೂ ಮೊದಲು ರಂಗಸ್ಥಳದಲ್ಲಿ ಕಿರೀಟ ಮೊದಲಾದ ಆಭರಣವಿಶೇಷಗಳನ್ನಿಟ್ಟು ವಿನಾಯಕನ ಪೂಜೆ ನಡೆಯುತ್ತದೆ. ನೇಪಥ್ಯಗೃಹದಿಂದಲೇ ಬರುವ ಭಾಗವತರೂ ಹಿಮ್ಮೇಳದವರೂ ರಂಗಪ್ರವೇಶಿಸಿ, ರಂಗದ ಬಲಭಾಗದಲ್ಲಿ ನಿಂತುಕೊಳ್ಳುತ್ತಾರೆ (ಇದು ಮೂಡಲಪಾಯದಲ್ಲಿ). ಪಡುವಲಪಾಯದಲ್ಲಿ ಭಾಗವತರು ಹಾಗೂ ವಾದ್ಯವೃಂದದವರು ರಂಗಸ್ಥಳದ ಹಿಂದೆ ಉತ್ತರಭಾಗದಲ್ಲಿ ಕುಳಿತುಕೊಂಡು ಭಾಗವತಿಕೆ ನಡೆಸುತ್ತಾರೆ. ಇವರ ರಂಗಪ್ರವೇಶದ ನಂತರ ವಿನಾಯಕ ಪೂಜೆ ನಡೆಯುತ್ತದೆ. ಮೂಡಲಪಾಯದಲ್ಲಿ ಗಣಪತಿಯನ್ನು ಪೂಜಿಸಲು ಭಾಗವತರು ಪೂಜಾರಿಯನ್ನು ವಿಶೇಷವಾದ ರೀತಿಯಲ್ಲಿ ಆಹ್ವಾನಿಸುತ್ತಾರೆ. ನಂತರ ಪಾರ್ವತೀ ಪರಮೇಶ್ವರರನ್ನು, ನಂದೀಶ, ಭೃಂಗಿ, ವೀರಭದ್ರ ಮೊದಲಾದ ಶಿವಗಣಗಳನ್ನು ಸ್ಮರಿಸಿ ಶಾರದಾದೇವಿಯನ್ನು ರಂಗಕ್ಕೆ ಬರಮಾಡಿಕೊಳ್ಳಲಾಗುತ್ತದೆ. ಈ ಸಂದರ್ಭದಲ್ಲಿಯೇ ರಂಗಕ್ಕೆ ಹನುಮನಾಯಕನ ಪ್ರವೇಶವಾಗುತ್ತದೆ. ಹನುಮನಾಯಕ ಶಾರದೆಯನ್ನು ಸ್ತುತಿಸಿ, ವಾತನಾಡಿಸಿ, ಆಶೀರ್ವಾದ ಪಡೆದ ನಂತರ 'ಬಾಲಗೋಪಾಲ'ರ ಪ್ರವೇಶವಾಗುತ್ತದೆ. ಮೂಡಲಪಾಯ, ಪಡುವಲಪಾಯ ಮತ್ತು ಗೊಂಬೆಯಾಟಗಳಲ್ಲಿ ಮೇಲೆ ಹೇಳಿದ ಕ್ರಮಗಳಲ್ಲಿ ವ್ಯತ್ಯಾಸವಿರಬಹುದಾದರೂ, ದೇವರಸ್ತುತಿ ಮತ್ತು ಆಶೀರ್ವಾದಗಳ ನಂತರ ಈ ಬಾಲಗೋಪಾಲರ ಪ್ರವೇಶ ಮಾತ್ರ ಎಲ್ಲ ಪ್ರಕಾರಗಳಲ್ಲೂ ಸಾಮಾನ್ಯ. ಇದು ಭಕ್ತಿಮಾರ್ಗದ ಕೊಡುಗೆ ಎಂದು ಹೇಳಲಾಗುತ್ತದೆ. 'ಬಾಲಗೋಪಾಲಕರಾಗಿ' ಬಾಲಕರು ರಂಗಪ್ರವೇಶ ಮಾಡುತ್ತಾರೆ. ಇಂತಹ ಕಲೆಗಳ ನಿರಂತರತೆಯನ್ನು ಉಳಿಸಿಕೊಂಡು ಬರಲು, ಕಲಾವಿದರಾಗಿ ಬೆಳೆಯಬಲ್ಲ ಎಳೆಯರಿಗೆ, ಅಭ್ಯಾಸದ ದೃಷ್ಟಿಯಿಂದ ಈ 'ಬಾಲಗೋಪಾಲ'ರ ಪ್ರವೇಶದ ಪದ್ಧತಿಯನ್ನು ಬೆಳೆಸಿಕೊಂಡು ಬರಲಾಗಿದೆ ಎಂಬ ಅಭಿಪ್ರಾಯವೂ ಇದೆ. ಹೀಗೆ ದೇವಾನುದೇವತೆಗಳು, ಹನುಮನಾಯಕ, ಕೋಡಂಗಿ, ಸ್ತ್ರೀಪಾತ್ರ, ರಾಕ್ಷಸ ಪಾತ್ರ... ಇತ್ಯಾದಿ ಎಲ್ಲ ಪಾತ್ರಗಳೂ ಬೆರೆತು ಇಂತಹ ಪ್ರದರ್ಶನ ಕಲೆಗಳು ತಮ್ಮ ಸಮಗ್ರತೆಯನ್ನು ಉಳಿಸಿಕೊಳ್ಳುವಲ್ಲಿ ಸಹಕಾರಿಯಾಗಿವೆ ಎಂಬುದಂತೂ ಸತ್ಯ. ಇಂತಹ ಪ್ರದರ್ಶನಗಳಲ್ಲಿ ಕಂಡುಬರುವ ಬಣ್ಣಬಣ್ಣದ ವೇಷಭೂಷಣ, ಅಬ್ಬರದ ಸಂಗೀತ, ಕುಣಿತ, ಹನುಮನಾಯಕ, ಚಾರಕ, ಕೋಡಂಗಿಗಳ ಹಾಸ್ಯ, ಅಲೌಕಿಕ ರಮ್ಯ ಆವರಣಗಳು... ಇವೆಲ್ಲವೂ ಹಿಂದಿನಿಂದಲೂ ಮಕ್ಕಳಿಗೆ ಇವುಗಳ ಮೇಲೆ ಆಸಕ್ತಿ ಮೂಡಿಸುವಲ್ಲಿ ಯಶಸ್ವಿಯಾಗಿವೆ. ಕಲೆಗಳು ಎಲ್ಲಿಯತನಕ ಇಂತಹ ಸಮಗ್ರತೆಯನ್ನು ಉಳಿಸಿಕೊಳ್ಳುವವೋ ಅಲ್ಲಿಯತನಕ ಅದನ್ನು ವಯೋಮಾನದ

ಆಧಾರದಲ್ಲಿ ಬೇರೆ ಬೇರೆಯವರಿಗೆಂದು ಗೆರೆ ಕೊರೆಯುವ ಅವಶ್ಯಕತೆಯೇ ಉಂಟಾಗುವುದಿಲ್ಲ. ಪ್ರಾಯಶಃ ನಮ್ಮಲ್ಲಿ ಮಕ್ಕಳಿಗಾಗಿ ವಿಶೇಷ ರಂಗಪ್ರಕಾರಗಳು ಹುಟ್ಟದೇ ಇರಲು ಇದು ಪ್ರಮುಖ ಕಾರಣ. ಸೂಕ್ಷ್ಮವಾಗಿ ಗಮನಿಸಿದರೆ, ಇಂತಹ ವ್ಯಾಖ್ಯಾನಗಳು ಹಿರಿಯರಿಗಿಂತ ಮಕ್ಕಳನ್ನು ಆಕರ್ಷಿಸುವ ಸಾಧ್ಯತೆಯೇ ಹೆಚ್ಚು.

ಇಂತಹ ಪ್ರಸಂಗಗಳು, ಕಥಾನಕಗಳು ಎಳೆಯ ಮನಸ್ಸುಗಳನ್ನು ಹೇಗೆ ಆಕರ್ಷಿಸಿ, ಅವುಗಳಲ್ಲಿ ಅಚ್ಚೊತ್ತಿ ನಿಲ್ಲುತ್ತಿದ್ದವು ಎಂಬುದಕ್ಕೆ ಡಾ। ಶಿವರಾಮ ಕಾರಂತರ 'ಹುಚ್ಚುಮನಸ್ಸಿನ ಹತ್ತು ಮುಖಗಳು' ಕೃತಿಯಲ್ಲಿ ಶಿವರಾಮ ಕಾರಂತರೇ ಹೇಳಿದ ಮಾತುಗಳನ್ನು ಗಮನಿಸೋಣ.

"ಇನ್ನು ನಮ್ಮ ಊರಿನ ಜನರ ಸಾರ್ವಜನಿಕ ವಿನೋದವೆಂದರೆ ದಶಾವತಾರ ಆಟಗಳು. ಮಂದರ್ತಿ ಮತ್ತು ಮಾರಣಕಟ್ಟೆ ಮೇಳಗಳೆಂಬುವವು ಇಂದಿಗೂ ಪ್ರಸಿದ್ಧವಾಗಿವೆ. ನಮ್ಮ ಹಳ್ಳಿಗೆ ಮೇಳದವರು ಆಗಾಗ ಬರುತ್ತಿರುತ್ತಾರೆ. ಎಳೆಯರಾದ ನಮಗೆ ಬಯಲಾಟದ ವೇಷ ನೋಡಲು ತುಂಬ ಇಷ್ಟ. ನಾನು ಸುಮಾರು ಮೂರು ವರ್ಷದವನಿದ್ದಾಗ ನೋಡಿದ 'ಮಹಂಕಾಳಿಯ' (ಚಂಡಿ) ವೇಷವು ಮರೆಯಲಾರದ ಏನೋ ಒಂದು ಮುದ್ರಿಕೆಯೊತ್ತಿದೆ ಮನದಲ್ಲಿ. ಆಟದ ಬಯಲಲ್ಲಿ ರಾತ್ರಿಯೆಲ್ಲ ಮಲಗಿದ್ದು, ಬೆಳಗಿನ ಜಾವಕ್ಕೆ ಬರುವ ಶೇಷ ಎಂಬುವನ ಬಣ್ಣದ ವೇಷ ಆ ಕಾಲದಲ್ಲಿ ನಮ್ಮನ್ನು ರಾಕ್ಷಸಲೋಕಕ್ಕೆ ಒಯ್ಯುತ್ತಿತ್ತು. ಅದರಂತೆ ನಾವು ಆತುರದಿಂದ ಕಾಣಲು ಕಾಯುತ್ತಿದ್ದ ವೇಷಗಳೆಂದರೆ ಗಂಧರ್ವ, ಕಿರಾತ, ಕರ್ಣ, ಶಲ್ಯರಂಥ ಅದ್ಭುತ ಬೆಡಗಿನ ವೇಷಗಳು. ಅವು ನನ್ನ ಪಾಲಿಗೆ ಇಂದಿಗೂ ಬಣ್ಣಗಾರಿಕೆಯಲ್ಲೂ, ವೇಷಭೂಷಣಗಳಲ್ಲೂ ಅತ್ಯುತ್ಕೃಷ್ಟ ಮಾದರಿಗಳೆನಿಸಿವೆ."[10]

ಇಲ್ಲಿ ನಾವು ಇನ್ನೊಂದು ಮುಖ್ಯ ಅಂಶವನ್ನು ಗಮನಿಸಬೇಕು. ಶಿವರಾಮ ಕಾರಂತರಂತೆಯೇ ಬಿ.ವಿ. ಕಾರಂತರಂತಹ ನಾಟಕಕಾರರೂ ತಮ್ಮ ಸಾಧನೆಯ ಹಿಂದೆ ತಾವು ಎಳೆತನದಲ್ಲಿ ನೋಡಿದ ಯಕ್ಷಗಾನದಂತಹ ಪ್ರದರ್ಶನ ಕಲೆಗಳು ತಮ್ಮ ಮೇಲೆ ಬೀರಿದ ಪರಿಣಾಮವೇ ತಾವು ವ್ಯಕ್ತಿತ್ವ ಬೆಳೆಸಿಕೊಳ್ಳುವಲ್ಲಿ ಸಹಕಾರಿಯಾಯಿತು ಎಂದು ಹೇಳಿದ್ದಾರೆ. ಅಂದಮೇಲೆ ಈ ಕಲೆಗಳು ಎಳೆಯ ಮನಸ್ಸುಗಳ ಮೇಲೆ ಉಂಟುಮಾಡಬಲ್ಲ ಗಾಢ ಪರಿಣಾಮಗಳು ಎಷ್ಟು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬಹುದು. ಇಂತಹ ಬಾಲ್ಯದ ಸಂಭ್ರಮಗಳ ನೆನಪಿನ ಬುತ್ತಿಯೇ ಮುಂದೊಂದು ದಿನ ಅವರೊಳಗಿನ ಕಲಾವಿದರನ್ನು, ಸಾಹಿತಿಯನ್ನು, ನಾಟಕಕಾರನನ್ನು ಹೊರತರುವುದಾದರೆ ಅದಕ್ಕಿಂತ ಭಿನ್ನವಾದ ಕಲೆಯೊಂದರ ಅಗತ್ಯವಾದರು ಏನು?

ಮೂಡಲಪಾಯ, ಪಡುವಲಪಾಯ ಯಕ್ಷಗಾನಗಳು, ಸಣ್ಣಾಟ, ಗೊಂಬೆಯಾಟ ಮುಂತಾದ ಎಲ್ಲ ರಂಗಪ್ರಕಾರಗಳಲ್ಲಿ 'ಮಕ್ಕಳಿಗೆ' ಎಂಬ ಹಣೆಪಟ್ಟಿ ಕಟ್ಟಿಕೊಂಡ

ಯಾವ ವಿಭಾಗವೂ ಇಲ್ಲ. ಪ್ರದರ್ಶನದ ನಡುನಡುವೆ ನಿದ್ದೆಹೋದರೂ, ಇಡೀ ರಾತ್ರಿ ಯಾವುದೋ ಯಕ್ಷಲೋಕದ ರಮ್ಯ ವಾತಾವರಣದಲ್ಲಿದ್ದು, ಅರ್ಧ ನಿದ್ದೆ ಅರ್ಧ ಎಚ್ಚರದಲ್ಲಿ ಒಟ್ಟೂ ಕತೆಯಲ್ಲಿ ತಮಗಿಷ್ಟವಾದ ಭಾಗಗಳನ್ನಷ್ಟೇ ಮೆಲುಕಾಡುವ ಮಕ್ಕಳಿಗೊಂದು ಸಂಭ್ರಮ. ಇಂದಿನ ಬಹಳಷ್ಟು ಹಿರಿಯರನ್ನು ಅವರ ಬಾಲ್ಯದ ಕುರಿತು ಕೇಳಿದಾಗ, ಇಂತಹ ಪ್ರದರ್ಶನಗಳನ್ನು ಅವರು ಬಾಲ್ಯದಲ್ಲಿ ಎಷ್ಟು ಸಂಭ್ರಮದಿಂದ ಅನುಭವಿಸಿದ್ದರು ಎಂಬುದು ನಮ್ಮ ಗಮನಕ್ಕೆ ಬರುತ್ತದೆ. ಹಾಗಾಗಿ ನಮ್ಮಲ್ಲಿ ನಾಟಕವಲ್ಲದೆ ಇನ್ನಿತರ ಯಾವ ರಂಗಪ್ರಕಾರಗಳೂ 'ಮಕ್ಕಳಿಗಾಗಿ' ಎಂದು ಪ್ರತ್ಯೇಕ ಅಸ್ತಿತ್ವ ಪಡೆದಿಲ್ಲ. ಇಡೀ ಪ್ರದರ್ಶನದಲ್ಲಿ ಕೇವಲ ಬಾಲಗೋಪಾಲರೇ ಅಲ್ಲದೆ ಬೇರೆ ಪಾತ್ರಗಳಿಗೆ ಮಕ್ಕಳ ಅವಶ್ಯಕತೆ ಬಂದರೆ ಅವರನ್ನು ಸಂಕೋಚವಿಲ್ಲದೆ ಬಳಸಲಾಗುತ್ತಿತ್ತು.

ಇತ್ತೀಚೆಗೆ ಪಡುವಲಪಾಯ ಯಕ್ಷಗಾನದಲ್ಲಿ ಮಾತ್ರ ಅಲ್ಲಲ್ಲಿ ಕೇವಲ ಮಕ್ಕಳನ್ನು ಬಳಸಿದ 'ಮಕ್ಕಳ ತಂಡ'ಗಳು ಪ್ರದರ್ಶನ ನೀಡಿದ ಉದಾಹರಣೆಗಳಿವೆ. ಇಲ್ಲೂ ಕೂಡ ಕುಣಿತವಾಗಲೀ, ಪ್ರಸಂಗವಾಗಲೀ ಮಕ್ಕಳಿಗಾಗಿ ರೂಪುಗೊಂಡಿದ್ದಲ್ಲ. ಭಾಗವತರು, ಚಂಡೆ ಮದ್ದಳೆಯವರೆಲ್ಲರೂ ದೊಡ್ಡವರೇ. ಕಥಾನಕದಲ್ಲಿ ಯಾವದೊ ಎಳೆಯ ಪಾತ್ರಕ್ಕೆ ಪ್ರಾಧಾನ್ಯವಿರುವ ಭಾಗವನ್ನಿಟ್ಟುಕೊಂಡು, ಅದನ್ನು ಮಕ್ಕಳಿಂದ ಆಡಿಸುವ ಪ್ರಯತ್ನಗಳಷ್ಟೇ ನಡೆದಿವೆ. ಈ ಕ್ಷೇತ್ರದಲ್ಲಿ ಕೆಲವು ವ್ಯಕ್ತಿಗಳು ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಅವರಲ್ಲಿ ಮುಖ್ಯವಾಗಿ ಶ್ರೀಧರ ಹಂದೆ, ಹೊಸ್ತೋಟ ಮಂಜುನಾಥ ಭಾಗವತರು ಮುಂತಾದವರು ಪ್ರಮುಖರು. ಹೊಸ್ತೋಟ ಮಂಜುನಾಥ ಭಾಗವತರು ಅಂಧ ಮಕ್ಕಳಿಗೆ ಕುಣಿತವನ್ನು ಹೇಳಿಕೊಟ್ಟು ಅವರಿಂದ ಯಕ್ಷಗಾನ ಮಾಡಿಸಿದ ಮಹಾನುಭಾವರು.

## ಗೀತರೂಪಕ; ಗೀತನಾಟಕಗಳು:

ಕನ್ನಡದಲ್ಲಿ ಪ್ರಚಾರದಲ್ಲಿರುವ 'ಗೀತರೂಪಕಗಳು' ಅಥವಾ ಗೀತನಾಟಕಗಳು ಎಂಬ ಸಾಹಿತ್ಯ ಪ್ರಕಾರಕ್ಕೆ ಹತ್ತಿರವಾಗುವಂತಹ ಸಾಹಿತ್ಯ ಪ್ರಕಾರವನ್ನು ಪಾಶ್ಚಾತ್ಯದಲ್ಲಿ 'ಅಪೇರಾ' ಎಂದು ಕರೆಯುತ್ತಾರೆ. ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ನಾಟಕದ ಇತಿಹಾಸವನ್ನು ಗಮನಿಸುವಾಗ, ಗೀತನಾಟಕ ತೀರಾ ಇತ್ತೀಚಿನ ಬೆಳವಣಿಗೆ. ನಮ್ಮ ನಾಟಕಗಳಲ್ಲಿ ಹಿಂದೆಯೂ ಸಂಗೀತ ಇತ್ತು. ಸಂಗೀತ ಮೂಲಗಳಿಂದಲೇ ನಾಟಕಗಳು ಬೆಳೆದವು ಎಂದೂ ಹೇಳಲಾಗಿದೆ. ಆದರೂ ಪ್ರಸ್ತುತ ಕನ್ನಡದಲ್ಲಿ ನಡೆದಿರುವ 'ಗೀತನಾಟಕ'ಗಳು ಮಾತ್ರ ಹೆಚ್ಚು ಕಡಿಮೆ ಪಾಶ್ಚಾತ್ಯರಿಂದ ಪ್ರಭಾವಗೊಂಡಿವೆ ಎಂದೇ ಹೇಳಲಾಗಿದೆ.

"ನಾಟಕ ಎಂಬುದೊಂದು ಸಂಕೀರ್ಣ ಕಲೆ. ಇದರಲ್ಲಿ ನೃತ್ಯ, ಕಥೆ, ಸಂಗೀತಗಳು ಮಿಲನಗೊಂಡಿವೆ. ನಾಟಕವು ಪ್ರಯೋಗದಲ್ಲಿ ಸಫಲವಾಗಬೇಕಾದರೆ ಚಿತ್ರಕಲೆ, ಶಿಲ್ಪಕಲೆ,

ವರ್ಣಕಲೆ, ಅಭಿನಯ, ರಂಗಸಜ್ಜಿಕೆ ಮುಂತಾದ ಎಲ್ಲಾ ಕಲೆಗಳ ಸಾಮರಸ್ಯ ಅತ್ಯಗತ್ಯ. ಆದುದರಿಂದಲೇ "ಅತ್ರ ಲೋಕಚರಿತಂ ನಾನಾರಸಂ ದೃಷ್ಯತೇ ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಮ್" ಎಂದು ಕಾಳಿದಾಸ ತನ್ನ ಮಾಲವಿಕಾಗ್ನಿ ಮಿತ್ರದಲ್ಲಿ ಹೇಳಿರುವುದು ಅರ್ಥಪೂರ್ಣ ಸೂತ್ರವಾಗಿದೆ."[11]

ಸಂಸ್ಕೃತ ನಾಟಕವೂ ಗ್ರೀಕ್ ನಾಟಕದಂತೆಯೇ ಗಾಯನ ಮತ್ತು ನೃತ್ಯಗಳಿಂದ ಉತ್ಪತ್ತಿಗೊಂಡಿರಬೇಕೆಂದು ಹೇಳಲಾಗುತ್ತದೆ. "ಸಾಮವೇದದ ಗಾಯನದ ಮೂಲಕವೇ ನಾಟಕಕಲೆಯ ಅವತರಣವಾಗಿದೆ. ಉದಾತ್ತ, ಅನುದಾತ್ತ, ಸ್ವರಿತ ಸ್ವರಗಳಲಿ ಹಾಡುವುದರ ಮೂಲಕವೇ ಅದರ ಮೂಲ ಸೌಂದರ್ಯವನ್ನೂ, ಅರ್ಥಗಾಂಭೀರ್ಯವನ್ನೂ ಉಳಿಸಿಕೊಳ್ಳಲು ಸಾಧ್ಯವಾಯಿತು."[12] ಎಂಬ ಮಾತನ್ನು ಗಮನಿಸಬೇಕು. ಅಷ್ಟೇ ಅಲ್ಲದೆ 'ಮಹಾಕಾವ್ಯಗಳ ಗಾಯನ ಪದ್ಧತಿ ಇಲ್ಲದಿದ್ದರೆ ನಾಟಕವೇ ಇರುತ್ತಿರಲಿಲ್ಲ'[13] ಎಂಬ ಮಾತೂ ನಾಟಕದ ಪ್ರಾರಂಭದಲ್ಲಿ ಗೀತೆಗೆ ಇದ್ದ ಪ್ರಾಮುಖ್ಯತೆಯನ್ನು ಎತ್ತಿತೋರಿಸುತ್ತದೆ.

"ಭರತನು ತನ್ನ ನಾಟ್ಯಶಾಸ್ತ್ರದಲ್ಲಿ ಮಾತು, ನಡಿಗೆ ಮತ್ತು ಭಾವಪ್ರಕಾಶಗಳಿಗೆ ಸಹಾಯಕವಾಗುವ ಮೂರು ವೃತ್ತಿಗಳನ್ನು ಪ್ರಸ್ತಾಪಿಸುತ್ತಾನೆ. ಭಾರತಿ, ಸಾತ್ವತಿ ಆರಭಟಿ ಮತ್ತು ಕೈಶಿಕೀ ಎಂಬ ಈ ಮೂರು ವೃತ್ತಿಗಳಲ್ಲಿ ಕೈಶಿಕೀ ಎಂಬುದು ನರ್ತನ ಮತ್ತು ಗಾಯನ."[14] ಹೀಗೆ ಸಂಸ್ಕೃತ ನಾಟಕಗಳ ಮೂಲವೇ ಸಂಗೀತ ಮತ್ತು ನೃತ್ಯ ಎಂಬುದನ್ನು ನಾವು ಗಮನಿಸಬಹುದಲ್ಲದೆ 'ಗೀತಗೋವಿಂದ'ದಂತಹ ಗೇಯ ರಚನೆಯೂ ಸಂಸ್ಕೃತದಲ್ಲಿತ್ತು ಎಂಬುದನ್ನು ಉಲ್ಲೇಖಿಸಬಹುದು. "ಬಂಗಾಳದಲ್ಲಿ ಅತ್ಯಂತ ಜನಪ್ರಿಯವಾಗಿದ್ದ 'ಯಾತ್ರಾನಾಟಕೆ'ಗಳಿಂದ ಪ್ರಭಾವಿತನಾದ ಜಯದೇವ ಕವಿಯು ಸ್ವಲ್ಪ ಹೆಚ್ಚು ಕಡಿಮೆ ಅದೇ ಮಾದರಿಯಲ್ಲಿ 'ಗೀತಗೋವಿಂದ' ರಚಿಸಿದ್ದಾನೆ."[15] ಇದರ ನಂತರ ಕೃಷ್ಣಲೀಲಾ ತರಂಗಿಣಿ, ಕುಚೇಲೋಪಾಖ್ಯಾನ, ಅಜಾಮಿಳೋಪಾಖ್ಯಾನ ಮುಂತಾದ ಗೇಯ ನಾಟಕಗಳು ರಚನೆಯಾಗುತ್ತಾ ಬಂದವು. ಹಿಂದಿಯಲ್ಲೂ ಸುಮಾರು 13ನೇ ಶತಮಾನದಷ್ಟು ಹಿಂದೆಯೇ ಗೇಯ ನಾಟಕಗಳು ಇದ್ದವು. ಬಂಗಾಳವಂತೂ ಗೀತಾನಾಟಕಗಳ ವಿಚಾರದಲ್ಲಿ ಬಹಳ ಪ್ರಖ್ಯಾತವಾಯಿತು.

## ಕನ್ನಡದಲ್ಲಿ ಗೀತನಾಟಕಗಳು

ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದಾಗ ನಮ್ಮಲ್ಲಿ ನಾಟಕವೆಂಬುದು 17ನೆಯ ಶತಮಾನದವರೆಗೂ ಇರಲೇ ಇಲ್ಲ ಎಂಬುದು ಸೋಜಿಗದ ಸಂಗತಿ. ಸಿಂಗಾರಾರ್ಯರ 'ಮಿತ್ರವಿಂದ ಗೋವಿಂದ' ಮತ್ತು 'ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ'ಗಳೇ ಕನ್ನಡದ ಮೊದಲ ನಾಟಕಗಳು. ಆದರೆ ಈ ಸಿಂಗಾರಾರ್ಯರ 'ಮಿತ್ರವಿಂದ ಗೋವಿಂದ', ಜಯದೇವ ಕವಿಯ ಗೀತಗೋವಿಂದದ ಮಾದರಿಯ ಗೇಯರೂಪಕ.

ನಮ್ಮಲ್ಲಿ ಯಕ್ಷಗಾನ ಪ್ರಸಂಗಗಳು, ಬಯಲಾಟಗಳು ಗೇಯರೂಪಕಕ್ಕೆ ತುಸು ಹತ್ತಿರದಲ್ಲಿರುವವಾದರೂ ಅವುಗಳ ಪ್ರದರ್ಶನ ರೂಪವೇ ಬೇರೆ. ಹಾಗಾಗಿ ಕನ್ನಡದಲ್ಲಿ ಗೇಯನಾಟಕಗಳು ರಚನೆಯು ಇಂಗ್ಲಿಷ್ ಅಪೆರಾಗಳಿಂದಲೇ ಪ್ರಭಾವಿತವಾಗಿದೆ ಎನ್ನಬಹುದು. ಪಾಶ್ಚಾತ್ಯ ಅಪೆರಾಗಳ ಮಾದರಿಯಲ್ಲಿ ಶಿವರಾಮ ಕಾರಂತರು ಕೆಲವು ನಾಟಕಗಳ ಪ್ರಯತ್ನ ನಡೆಸಿದ್ದಾರೆ. ಸಂಗೀತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ರೂಪಕಗಳನ್ನು ರಚಿಸಿದ್ದಾರೆ. ಅವರೇ ತಮ್ಮ ರೂಪಕಗಳ ಸಂಗೀತದ ಬಗ್ಗೆ ಪ್ರಸ್ತಾಪಿಸುತ್ತಾ,

"The songs were composed in music, It is not music imposed later, raga and pattern are a part of the form. You can not change the musical structure without determent to the architecture of the drama. I have purposely used the word architecture"[16] ಎಂದು ಹೇಳಿದ್ದಾರೆ.

ಮುಂದೆ, ಕನ್ನಡದಲ್ಲಿ ಪು.ತಿ.ನ, ಬಿ. ಪುಟ್ಟಸ್ವಾಮಯ್ಯ, ಆನಂದಕಂದ ಮುಂತಾದವರು ಗೀತನಾಟಕಗಳನ್ನು ರಚಿಸುತ್ತಾ ಬಂದಿದ್ದಾರೆ. ಅದೇ ತರಹ ಡಿ.ವಿ.ಜಿ.ಯವರ 'ಭಸ್ಮಾಸುರ ಮೋಹಿನಿ', 'ಗೀತಶಾಕುಂತಲ', 'ಅಂತಃಪುರ ಗೀತೆಗಳು', ದ.ರಾ. ಬೇಂದ್ರೆಯವರ 'ಯಕ್ಷ-ಯಕ್ಷಿ' ಉತ್ತಮವಾದ ರೂಪಕಗಳೆಂದು ಹೆಸರು ಪಡೆದಿವೆ. ಆದರೆ ಮಕ್ಕಳಿಗಾಗಿ ಗೇಯರೂಪಕ ಬರೆದವರಲ್ಲಿ ಶಿವರಾಮ ಕಾರಂತ, ಕುವೆಂಪು ಮುಖ್ಯರಾಗುತ್ತಾರೆ.

"ಎಲ್ಲಾ ದೃಷ್ಟಿಯಿಂದಲೂ ಸಮರ್ಪಕ ಎಂದೆನಿಸಬಹುದಾದ ಗೀತನಾಟಕಗಳನ್ನು ರಚಿಸಿದವರಲ್ಲಿ ಅಗ್ರಗಣ್ಯರಾಗಿ ನಿಲ್ಲುವವರು ಕನ್ನಡದ ಮಟ್ಟಿಗೆ ಇಬ್ಬರೇ. ಒಬ್ಬರು ಡಾ॥ ಶಿವರಾಮ ಕಾರಂತರು, ಮತ್ತೊಬ್ಬರು ಡಾ। ಪು.ತಿ. ನರಸಿಂಹಾಚಾರ್ಯರು."[17]

ಡಾ। ಕಾರಂತರು 1930ರ ಸುಮಾರಿಗೆ ಗೀತನಾಟಕಗಳನ್ನು ಪ್ರಕಟಿಸಿದರು. ಅವರೇ ತಮ್ಮ ನಾಟಕಗಳನ್ನು ಯಶಸ್ವಿಯಾಗಿ ರಂಗದ ಮೇಲೆ ಪ್ರದರ್ಶಿಸಿದರು. ಅವರ ನಾಟಕಗಳಲ್ಲಿ ಅಪೆರಾ ಮತ್ತು ಬ್ಯಾಲೆಗಳೆರಡಕ್ಕೂ ಹೊಂದಿಕೆಯಾಗುವಂತಹ ರಚನೆಗಳಿವೆ. ಅವುಗಳನ್ನು ಮುಖ್ಯವಾಗಿ ಯಕ್ಷಗಾನ ಬ್ಯಾಲೆಗಳು ಮತ್ತು ಗೀತನಾಟಕಗಳು ಎಂದು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಕಾರಂತರ ಮುಖ್ಯವಾದ ಎಂಟು ಯಕ್ಷಗಾನ ಬ್ಯಾಲೆಗಳು ಇವೆ.

1. ಕಿನ್ನರ ನೃತ್ಯ 2. ಕೃಷ್ಣಾರ್ಜುನರ ಕಾಳಿಗ, 3. ಭೀಷ್ಮವಿಜಯ, 4. ಅಭಿಮನ್ಯು, 5. ಸೈಂಧವ ವಧೆ, 6. ಬಭ್ರು ವಾಹನ ಕಾಳಗ, 7. ರತಿಕಲ್ಯಾಣ, 8. ಕೃಷ್ಣಾರ್ಜುನ.

1946ರಲ್ಲಿ ಗೀತನಾಟಕಗಳು ಎಂಬ ಹೆಸರಿನಿಂದ ಪ್ರಕಟವಾದ ಸಂಕಲನದಲ್ಲಿ 9 ಗೀತನಾಟಕಗಳೂ, ನಡೆದು ಬಂದ ದಾರಿಯಲ್ಲಿ ಒಂದು ಗೀತ ನಾಟಕವೂ,

ಆಕಾಶವಾಣಿಯಲ್ಲಿ ಎರಡು ಗೀತನಾಟಕಗಳು ಪ್ರಕಟವಾಗಿರುವುದಲ್ಲದೆ ಹಸ್ತಪ್ರತಿಯ ರೂಪದಲ್ಲಿನ ಒಂದು ನಾಟಕವನ್ನು ಕಾರಂತರೇ ರಂಗದ ಮೇಲೆ ತಂದಿದ್ದಾರೆ. ಮುಖ್ಯವಾಗಿ ಕಿಸಾಗೌತಮಿ, ಸಾವಿತ್ರಿ ಸತ್ಯವಾನ್, ಸೋಮಿಯ ಸೌಭಾಗ್ಯ, ಬುದ್ಧೋದಯ, ಯಾರೋ ಅಂದರು, ಕೀಚಕ ಸೈರಂಧ್ರಿ, ಮುಕ್ತದ್ವಾರ, ಗಯಚರಿತ್ರೆ, ಶೀಲಭಂಗ, ಲವಕುಶ, ಬದುಕಬಹುದು, ಅಂದು ಇಂದು... ಇತ್ಯಾದಿ. ಈ ಸಂದರ್ಭದಲ್ಲಿ ಗೌರೀಶ ಕಾಯ್ಕಿಣಿಯವರ ಮಾತು ಗಮನಾರ್ಹ.

"ಆಧುನಿಕ ಕನ್ನಡಕ್ಕೆ ಗೀತನಾಟಕಗಳನ್ನು ಪ್ರಥಮತಃ ಸಲ್ಲಿಸಿದ ಶ್ರೇಯಸ್ಸು ಡಾ|| ಶಿವರಾಮ ಕಾರಂತರದು. ಈ ಕ್ಷೇತ್ರದಲ್ಲಿ ಡಾ| ಕಾರಂತರೂ, ಶ್ರೀ ಪು.ತಿ. ನರಸಿಂಹಾಚಾರ್ಯರೂ ಅಗಗಣ್ಯರು. ಡಾ|| ಕಾರಂತರದು ಬಹುಧಾನಕ ಪ್ರತಿಭೆ. ಅತ್ಯಂತ ಪ್ರಯತ್ನವಾದಿ, ಪ್ರಯೋಗಶೀಲ, ಅಸಮಸಾಹಸಿಗ ಮತ್ತು ಅಸಹಾಯಕ ಕಲೋಪಾಸಕರು. ಆದರೆ ಒಟ್ಟಾರೆ ಅವರಲ್ಲಿ ಕಾವ್ಯ ಪ್ರತಿಭೆ ಕಡಿಮೆ."[18]

ಕಾರಂತರು ತಮ್ಮ ಹೆಚ್ಚಿನ ಗೀತನಾಟಕಗಳನ್ನು ಪ್ರದರ್ಶಿಸಲು ಪಾತ್ರಧಾರಿಗಳಾಗಿ ಆರಿಸಿಕೊಂಡದ್ದು ಮಕ್ಕಳನ್ನು ಮತ್ತು ಯುವಕರನ್ನು. ಆಗ, ಗ್ರಾಮ ಶಿಬಿರಗಳನ್ನು ನಡೆಸುತ್ತಿದ್ದ ಕಾರಂತರು, ಆಯಾ ಊರಿನ ಹಳೆಯ ವಿದ್ಯಾರ್ಥಿಗಳು ಅಥವಾ ಶಾಲಾಮಕ್ಕಳನ್ನು ಬಳಸಿ ಇಂತಹ ನೃತ್ಯನಾಟಕಗಳನ್ನು ಪ್ರದರ್ಶಿಸುತ್ತಿದ್ದರ. ಕೆಲವು ನೃತ್ಯನಾಟಕಗಳನ್ನು ಮಕ್ಕಳಿಗಾಗಿಯೇ ಬರೆದು ಮಕ್ಕಳಿಂದಲೇ ಆಡಿಸಿದ್ದರು. ಅಂದು ಇಂದು, ಪರಿವರ್ತನ ಭಾರತ, ಋತುಯಾತ್ರೆ, ಕಾಕಪರಿಣಯ ಇವುಗಳು ಮಕ್ಕಳಿಗಾಗಿಯೇ ಬರೆದು, ಮಕ್ಕಳಿಂದಲೇ ಆಡಿಸಿದ ನೃತ್ಯ ನಾಟಕಗಳು. ಈ ದೃಷ್ಟಿಯಿಂದ ಗಮನಿಸಿದಾಗ ಕನ್ನಡದಲ್ಲಿ ಮೊದಲ ಹಲವು ನೃತ್ಯನಾಟಕ ಪ್ರದರ್ಶನಗಳು ಕಾರಂತರ ನಿರ್ದೇಶನದಲ್ಲಿಯೇ ನಡೆದವು. ಕಾರಂತರ ನೃತ್ಯನಾಟಕಗಳಲ್ಲಿ ಭಾಗವಹಿಸಿದ್ದ ಪ್ರಸಿದ್ಧ ಭರತ ನಾಟ್ಯ ಕಲಾವಿದೆ, ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಅಧ್ಯಕ್ಷೆಯಾಗಿದ್ದ ಶ್ರೀಮತಿ ಚಂದ್ರ ಭಾಗಾದೇವಿಯವರ ಪ್ರತಿಕ್ರಿಯೆಯನ್ನು ಮಾಲಿನಿ ಮಲ್ಯರು ತಮ್ಮ 'ಶಿವರಾಮ ಕಾರಂತರ ಕಿನ್ನರ ಲೋಕ' ಪುಸ್ತಕದಲ್ಲಿ ಹೀಗೆ ದಾಖಲಿಸಿದ್ದಾರೆ: "ಅಂದಿನ ದಿನಗಳಲ್ಲಿ ನೃತ್ಯ ಎಂಬ ವಿಷಯ ಯಾರಿಗೂ ತಿಳಿಯದ ವಿಷಯವಾಗಿತ್ತು. ಕಾಲಿಗೆ ಗೆಜ್ಜೆಕಟ್ಟಿ ಕುಣಿಯುವ ಜಾನಪದ ನೃತ್ಯಗಳನ್ನು ಬಿಟ್ಟರೆ, ಬೇರೆ ನತ್ಯಗಳ ಪರಿಚಯ ಯಾರಿಗೂ ಇರಲಿಲ್ಲ. ನೃತ್ಯ ಊಹೆಗೂ ಬಾರದ ವಿಷಯವಾಗಿತ್ತು. ನನಗೆ ಆಗ 8–9 ವರ್ಷ ವಯಸ್ಸಿರಬಹುದು. ಕುಣಿಯುವ ಆಸೆ– ಅದು ಒಂದು ನೈಸರ್ಗಿಕ ಆಕಾಂಕ್ಷೆ. ನನಗೆ ಸುಮಾರು 11–12 ವರ್ಷ ವಯಸ್ಸು ಅನ್ನುವಾಗ ಶಿವರಾಮ ಕಾರಂತರು ನೃತ್ಯ ಕ್ಷೇತ್ರದಲ್ಲಿ ತಮ್ಮ ರಚನಾಶಕ್ತಿ ಕ್ರಿಯಾಶಕ್ತಿ, ಜ್ಞಾನಶಕ್ತಿ ಪ್ರಯೋಗಿಸಲು ಆರಂಭ ಮಾಡಿದಾಗ ನನ್ನಲ್ಲಿದ್ದ ನೃತ್ಯಕಲೆಯ ಪ್ರತಿಭೆಯನ್ನು ಕಂಡರು. ಕೆಲವು ನೃತ್ಯಪ್ರಯೋಗ ಮಾಡಲು ಆತುರಪಟ್ಟರು. ಆದರೆ ನರ್ತಿಸುವವರು ಯಾರು? ತಮ್ಮ ಮಕ್ಕಳನ್ನೆಲ್ಲ ನಮ್ಮ ತಂದೆತಾಯಿ ಅವರ ರಚನೆಗಳಿಗೆ

ಸಹಕರಿಸಲು ಕಳುಹಿಸಿಕೊಟ್ಟರು. ಅಂದಿನಿಂದ ಅವರ ಕೆಲವು ನೃತ್ಯರೂಪಕಗಳು ವೇದಿಕೆಯನ್ನೇರಿ ಪ್ರದರ್ಶಿಸಲ್ಪಟ್ಟವು. ಪ್ರೇಕ್ಷಕರಿಗೆ ಹೊಸ ರಂಜನೆ. ನೃತ್ಯಕಲೆಯ ಪರಿಚಯ. 'ಶುಭದತ್ತ' ಎಂಬ ಗೀತನಾಟಕವನ್ನು ರಚಿಸಿದರು. ಕಟ್ಟಿಗೆ ಮಾರುವ ಬಡವನ ಜೀವನದ ಚಿತ್ರ ಅದರ ಕಥಾವಸ್ತು. ಅವನು ಕಾಡಿಗೆ ಹೋಗಿ ಮರ ಕಡಿದು, ಕಟ್ಟಿಗೆ ಹೊತ್ತು ತಂದು ಮಾರಿಬಂದ ಹಣ ಸಾಲದೆ ಬವಣೆ ಪಡುತ್ತಿರುವ ದೃಶ್ಯಗಳು, ತಾನು, ತನ್ನ ಹೆಂಡತಿ ಮಕ್ಕಳ ನೃತ್ಯ ಚಲನೆಗಳಿಂದ ರೂಪಕ ಪ್ರದರ್ಶಿಸುವುದು, ಬಡತನದ ಬೇಗೆ, ಕಠಿಣ ಶ್ರಮ, ಶ್ರಮಕ್ಕೆ ತಕ್ಕ ಫಲಿತಾಂಶವಿಲ್ಲದೆ ಸಂಕಷ್ಟಗಳ ಹೊರೆಯನ್ನು ಹೊರುವ ದಾರುಣ ಚಿತ್ರ ಒಂದು ರೂಪಕವಾಗಿ, ಪ್ರೇಕ್ಷಕರು ಕಣ್ಣೀರಿಳಿಸುವಂತೆ ಪರಣಾಮಕಾರಿಯಾಗಿ ಯಶಸ್ವಿಯಾಯಿತು. ಕಾರಂತರು ನೃತ್ಯ ನಿರ್ದೇಶಕರಾಗಿ ಅಭಿನಂದಿಸಲ್ಪಟ್ಟರು. ಈ ಮೇಲೆ 'ಶೀಲಭಂಗ' ಎಂಬ ಅರ್ಥಪೂರ್ಣವಾದ ಕಥಾವಸ್ತುವೊಂದನ್ನು ಯೋಜಿಸಿ, ಕಾರ್ಯಗತರಾದರು. ಮುಗ್ಧ ಕನ್ನಿಕೆಯೊಬ್ಬಳನ್ನು ರಾಕ್ಷಸೀ ಪ್ರವೃತ್ತಿಯಿರುವ ಮಾನವನೊಬ್ಬ ಕೆಡಿಸುವ ಭಯಂಕರ ಘಟನೆ, ಅದರಲ್ಲಿ ಯುವತಿಯನ್ನು ಒಂದು ಕಮಲಕ್ಕೆ ಹೋಲಿಸಿದ್ದರು. ಮೊಗ್ಗಾಗಿದ್ದ ಹೂವು ಕ್ರಮೇಣ ಅರಳುತ್ತಿರುವ ಸಮಯದಲ್ಲಿ ದುಷ್ಟ ಮಾನವನು ಕಂಡು, ಅದಕ್ಕಾಗಿ ಆಸೆಪಟ್ಟು ಅದನ್ನು ಕಿತ್ತು, ಎಸಳುಗಳನ್ನು ಚೆಲ್ಲಾಪಿಲ್ಲಿಯಾಗಿ ಎಸೆದು ಹೂವನ್ನು ಹಾಳುಮಾಡುವ ದೃಶ್ಯ, ಹೊಳೆ, ಹೊಳೆಯ ವರ್ಣನೆ, ಕಮಲಗಳ ಅಂದಚಂದ ಇತ್ಯಾದಿ ವಿವರಗಳಿಂದ ಆರಂಭವಾಗುವ ಈ ನೃತ್ಯರೂಪಕ ಕೊನೆಗೆ ದುರಂತದಲ್ಲಿ ಕೊನೆಗೊಳ್ಳುವ ಕಥಾವಸ್ತು. ಅದರಲ್ಲಿ ನಾನು ಮುಗ್ಧ ಯುವತಿಯ ಪಾತ್ರವನ್ನು ಪಡೆದು ಕುಣಿದಿದ್ದೆ. 'ಮಹಾಲಿಂಗ' ಎಂಬ ಶಾಲಾಮಾಸ್ತರರು ದುಷ್ಟಮಾನವನ ಪಾತ್ರದಲ್ಲಿ ನರ್ತಿಸುವಾಗ ನನ್ನನ್ನು ಎತ್ತಿ ಆತ ತನ್ನ ಕಂಕುಳಲ್ಲಿ ಹಿಡಿದು ನರ್ತಿಸಿದ ನೆನಪು. ಆತ, ಕುಣಿಯುತ್ತಿರುವಾಗ ಆತನ ಮೈಯಿಂದ ಸುರಿಯುತ್ತಿದ್ದ ಬೆವರು ನನ್ನ ಮೈಯ್ಯನ್ನೆಲ್ಲ ಒದ್ದೆ ಮಾಡುತ್ತಿದ್ದುದು ನನಗೆ ಇಷ್ಟವಾಗುತ್ತಿರಲಿಲ್ಲ. ಒಂದಲ್ಲ, ಎರಡಲ್ಲ ಮೂರಾವರ್ತಿ, ಎಷ್ಟೋ ಸಲ ಮತ್ತೆ ಆ ದೃಶ್ಯವನ್ನು ಮಾಡುತ್ತಿದ್ದು, ಕಾರಂತರಿಗೆ ತೃಪ್ತಿಯಾಗುವಂತೆ ಕುಣಿಯಬೇಕಾಗಿತ್ತು. ನನಗೆ ಆಗ ಚಿಕ್ಕ ವಯಸ್ಸು 13–14 ಇರಬಹುದು. ಕಥಾವಸ್ತು ಏನೆಂದೂ ಗೊತ್ತಿರಲಿಲ್ಲ. ಕಾರಂತರು ನಿರ್ದೇಶಿಸಿದಂತೆ ಕುಣಿಯುತ್ತಿದ್ದೆ. ಅವರ ಆ ಕಥೆ ರಹಸ್ಯಾರ್ಥಕವಾಗಿದ್ದು, ಅವರ ರಚನಾಶಕ್ತಿಯ ಮೇಲ್ಮಟ್ಟವನ್ನು ತೋರಿಸುತ್ತಿತ್ತು. ಕುಣಿಯುವುದು ನನಗೆ ತುಂಬಾ ಪ್ರಿಯವಾಗಿತ್ತು. ಕಾರಂತರ ರಚನೆಗಳಿಗೆ ನಾನು ಅಂದು ಒಂದು ಮಾಧ್ಯಮವಾಗಿದ್ದೆ ಎಂದರೆ ತಪ್ಪಾಗಲಾರದು....

ಕಾರಂತರು ನನ್ನನ್ನು, ನನ್ನ ತಮ್ಮ ಮತ್ತು ಮೂವರು ತಂಗಿಯರನ್ನು ಸೇರಿಸಿ ಮಯೂರನೃತ್ಯವೊಂದನ್ನು ರಚಿಸಿದರು. ಅದರಲ್ಲಿ ನನ್ನ ತಮ್ಮ ಮತ್ತು ಒಬ್ಬ ತಂಗಿ

ಶಾಂತಿ (ಈಗ ಇಲ್ಲ) ಗಂಡು ನವಿಲುಗಳು. ಇನ್ನೊಬ್ಬ ತಂಗಿ ಜಯವಂತಿ ಹೆಣ್ಣು ನವಿಲು. ನಾನು ಮೋಡವಾಗಿ ಆಕಾಶದಿಂದ ಹಾದು ಬಂದು ನವಿಲುಗಳೊಂದಿಗೆ ನಲಿದು, ಮೆರೆದು ಅವರನ್ನು ಪ್ರಚೋದಿಸಿ ಅವರು ಗರಿಗಳನ್ನು ಬಿಚ್ಚಿ ಕುಣಿಯುವಂತೆ ಮಾಡುತ್ತಿದ್ದುದು ನನಗೆ ಅತ್ಯಂತ ಪ್ರಿಯವಾದ ಪಾತ್ರವಾಗಿತ್ತು. ಹಾರ್ಮೋನಿಯಂನಲ್ಲಿ ನನ್ನ ಚಿಕ್ಕಪ್ಪ ಪಡುಕೋಣೆ ಪ್ರಭಾಕರ ರಾಯರು ಮೇಘಮಲ್ಹಾರ ರಾಗವನ್ನು ಬಾರಿಸುತ್ತಿದ್ದರು. ನಮ್ಮ ಅಮ್ಮ ಸುಶ್ರಾವ್ಯವಾಗಿ ಹಾಡುತ್ತಿದ್ದುದು ಸ್ಫೂರ್ತಿದಾಯಕವಾಗಿತ್ತು. ಅದನ್ನು ನಾವು ರಾಯಚೂರಿನ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ (ಅಧ್ಯಕ್ಷರು–ಪಂಜೆ ಮಂಗೇಶರಾಯರಾಗಿದ್ದರು) ಪ್ರದರ್ಶಿಸಿದಾಗ ಅತ್ಯಂತ ಯಶಸ್ವಿಯಾಗಿ ಹೆಸರುವಾಸಿಯಾಯಿತು. ಅದರ ವಿಮರ್ಶೆ 1943ರ ಪ್ರಬುದ್ಧ ಕರ್ನಾಟಕ, ಸಂಪುಟ 16, ಮೈಸೂರು ವಿಶ್ವವಿದ್ಯಾನಿಲಯ – ಅದರಲ್ಲಿ ವಿ. ಸೀತಾರಾಮಯ್ಯ ಬರೆದುದನ್ನು ಇಲ್ಲಿ ತಿಳಿಸುತ್ತೇವೆ. ನನ್ನ ಮೋಡದ ಪಾತ್ರವನ್ನು ಹೀಗೆ ವಿಮರ್ಶಿಸಿದ್ದರು. 'ತೆಳ್ಳಗೆ ಉದ್ದಕ್ಕಿರುವ ಈ ಮಗು ಹಗುರಾಗಿ, ತೂಗಿ, ಆಡಿ, ಸುಳಿದಾಡಿ, ನಾದಗತಿಗೆ ತೊನೆದು ನೆಲವನ್ನು ಮೀಟುತ್ತ ನವಿಲುಗಳ ನಡುವೆ ತೇಲಿ, ಚಿಮ್ಮಿ ಮೋಡವನ್ನು ಉಜ್ವಲಗೊಳಿಸುವುದನ್ನು, ನವಿಲುಗಳ ನೆತ್ತರನ್ನು ಕುದಿಸುವುದನ್ನು ಒಮ್ಮೆ ಕಂಡವರು ಮರೆಯಲಾರರು...' ನನ್ನ ತಮ್ಮ ತಂಗಿಯರು ನವಿಲುಗರಿಗಳನ್ನು ಸೊಂಟಕ್ಕೆ ಕಟ್ಟಿಕೊಂಡು ಅವನ್ನು ಬಿಚ್ಚಿಕುಣಿಯುತ್ತಿದ್ದಾಗ ಹೆಣ್ಣು ನವಿಲು, ಗರಿಗಳನ್ನು ಕಟ್ಟಿಕೊಂಡು ಅವರ ಮಧ್ಯೆ ಕುಣಿಯುತ್ತಿದ್ದುದು ಪ್ರೇಕ್ಷಕರಿಗೆ ನೋಡಲು ಒಂದು ರಮಣೀಯ ದೃಶ್ಯವಾಗಿತ್ತು. ಮಿಂಚು, ಗಾಳಿ, ಮಳೆಗಳಿಂದ, ಮೋಡವಾದ ನಾನು ನರ್ತಿಸುವಾಗ ರಂಗಸ್ಥಳದಲ್ಲಿ ಆ ವಾತಾವರಣವನ್ನು ದೀಪ, ಬೆಳಕುಗಳಿಂದ ಹಾಗೂ ಧ್ವನಿ, ಸಂಗೀತಗಳಿಂದ ನಿರ್ಮಿಸುತ್ತಿದ್ದಾಗ, ನಾನು ಸಂತೋಷದಿಂದ ಮೈಮರೆತು ಕುಣಿಯುತ್ತಿದ್ದೆ. ಆ ಕುಣಿತ ಸ್ವೇಚ್ಛಾಪರ–ನಿರ್ದಿಷ್ಟ ರೀತಿಯಲ್ಲಿರಲಿಲ್ಲ. ಕಾರಂತರ ರಚನಾತ್ಮಕ ಗುಣವಿಶೇಷ ಗಮನೀಯ. 'ನರ್ತಿಸುವವರು ಸ್ವೇಚ್ಛೆಯಾಗಿ, ಸಂಗೀತದಿಂದ ಸ್ಫೂರ್ತಿ ಪಡೆದು ಯಾವ ಚೌಕಟ್ಟಿನಲ್ಲಿಯೂ ಸೆರೆಸಿಗದೆ ನರ್ತಿಸಬೇಕು. ಸಂಗೀತ ಕೇಳು, ನಿನಗೇನನ್ನಿಸುತ್ತದ, ಅದನ್ನು ಕೇಳಿ ಮನಬಂದಂತೆ ಕುಣಿ' ಎಂಬುದು ಅವರ ಆದೇಶ. ಸ್ಫೂರ್ತಿ ಸಿಕ್ಕಂತೆ ನೃತ್ಯದ ಚಲನೆಗಳು, ಇಂದು ಮಾಡಿದಂತೆ ನಾಳೆ ಇಲ್ಲ....[19]

ಇಲ್ಲಿ ಇದನ್ನು ದೀರ್ಘವಾಗಿ ಉಲ್ಲೇಖಿಸುವ ಕಾರಣ ಕಾರಂತರು ಹೇಗೆ ಗೀತನಾಟಕವನ್ನಲ್ಲದೆ, ರೂಪಕಗಳನ್ನು ಹೆಣೆಯುವುದರಲ್ಲಿಯೂ ಸಿದ್ಧಹಸ್ತರಾಗಿದ್ದರು ಮತ್ತು ಕಾರಂತರ ರೂಪಕಗಳು ಇಂದಿನಂತೆ ಶೈಲೀಕೃತವಾಗಿರದೆ ಹೊಸ ಹೊಸ ರೂಪ ಪಡೆಯುವ ಸ್ವತಂತ್ರ ಸಾಧ್ಯತೆಗಳನ್ನು ಒಳಗೊಂಡಿದ್ದವು ಎಂಬುದನ್ನು ಗಮನಿಸಲು.

ಶಿವರಾಮ ಕಾರಂತರನ್ನು ಬಿಟ್ಟರೆ ಮಕ್ಕಳಿಗಾಗಿ ಬರೆದ ನಿಸರ್ಗರಮ್ಯ

ಗೀತರೂಪಕಗಳಲ್ಲಿ ಮುಖ್ಯವಾಗಿ ಕಂಡುಬರುವುದು ಕುವೆಂಪು ಅವರ 'ಮೋಡಣ್ಣನ ತಮ್ಮ'. ಇದೇ ತರಹ 'ಅಮಲನ ಕಥೆ'ಯೂ ಮಕ್ಕಳ ಮನಸ್ಸನ್ನು ಸೆರೆ ಹಿಡಿಯಬಲ್ಲ ಕೃತಿ. ಕುವೆಂಪುರವರ ಇನ್ನೊಂದು ಕಥಾಕವನ 'ಬೊಮ್ಮನಹಳ್ಳಿಯ ಕಿಂದರಿಜೋಗಿ'.

"ಕಿಂದರಿ ಜೋಗಿ ಖಂಡಾಖಂಡಿತವಾಗಿ ನೋಡುವುದಾದರೆ ಸ್ವಕಪೋಲಕಲ್ಪಿತ ಕವನವಲ್ಲ. ಶಾಲೆಯಲ್ಲಿ ಅದನ್ನು ಅದರ ಗೇಯತೆ ಮತ್ತು ಕತೆಯನ್ನು ಕಂಡು ಖುಷಿಪಟ್ಟಿದ್ದ ನನಗೆ ಇದು 19ನೆಯ ಶತಮಾನದ ಕೊನೆಯಲ್ಲಿ 1812–1889 ರಲ್ಲಿ ಬದುಕಿದ್ದ ರಾಬರ್ಟ್ ಬ್ರೌನಿಂಗ್ ಕವಿಯ 'Piedpiper of Hemlin' ಕವನವನ್ನು ಆಧರಿಸಿದ್ದು ಎನ್ನುವ ವಿಷಯ ನಾನು ಬಿ.ಎ. ಪದವಿಗಾಗಿ ಅಭ್ಯಾಸ ಮಾಡಲು ಮಹಾರಾಜ ಕಾಲೇಜಿಗೆ ಬಂದಾಗಲೇ ಗೊತ್ತಾದದ್ದು. ಹಳ್ಳಿಯ ವಿದ್ಯಾರ್ಥಿಗಳಲ್ಲಿ ಎಷ್ಟು ಜನರಿಗೆ ಇದರ ಮೂಲ ಕವನವನ್ನು ಪತ್ತೆ ಮಾಡಲು ಸಾಧ್ಯ? ಒಂದು ಪಕ್ಷ ಕವನ ಸಿಕ್ಕಿದರೂ ಅದನ್ನು ಓದಿ ಅರ್ಥಮಾಡಿಕೊಳ್ಳುವಷ್ಟು ಶಕ್ತಿ ಇದೆ? ಬಿ.ವಿ. ಕಾರಂತರು ರಂಗಾಯಣದ ವೇದಿಕೆಯ ಮೇಲೆ ಇದನ್ನು ತಂದಾಗ ಮೈಸೂರಿನ ಮತ್ತು ಮೈಸೂರಿನ ಸುತ್ತಮುತ್ತದ ಹಳ್ಳಿಗಳ ಎಷ್ಟು ಜನ, ಮಕ್ಕಳು ಈ ಕವನವನ್ನು ದೃಶ್ಯ ಮಾಧ್ಯಮದಲ್ಲಿ ನೋಡಿ ಆನಂದಿಸಿದ್ದಾರೆ ಎನ್ನುವುದನ್ನು ನಾನೇ ಕಂಡಿದ್ದೇನೆ. ವಾಸ್ತವ ಅನುಭವ ನಮಗೆ ಮುಖ್ಯವಾಗುವುದಾದರೆ ಈ ಕವನದ ಜನಪ್ರಿಯತೆಯನ್ನು ನಾವು ಒಪ್ಪಿಕೊಳ್ಳಬೇಕು."[20]

ಈ ಮಾತುಗಳನ್ನು ಗಮನಿಸುವಾಗ ನಮಗೆ ಈ ಕವನ ದೃಶ್ಯಮಾಧ್ಯಮದಲ್ಲಿ ಯಶಸ್ವಿಯಾದ ಬಗೆ ತಿಳಿದುಬರುವುದು. ಇದೇ ತರಹ ಪುಣ್ಯ ಕೋಟಿ, ತಿರುಕನ ಕನಸು ಮುಂತಾದ ಕವನಗಳೂ ದೃಶ್ಯ ರೂಪಕಗಳಾಗಿ ಯಶಸ್ವಿಯಾಗಿವೆ.

ಡಾ|| ಶಿವರಾಮ ಕಾರಂತರ ನಂತರದ ದಿನಗಳಲ್ಲಿ ನೃತ್ಯ ನಾಟಕಗಳನ್ನು ಮಕ್ಕಳಿಗಾಗಿ ಪ್ರದರ್ಶಿಸಿದ ಹೆಚ್ಚಿನ ದಾಖಲೆಗಳು ದೊರೆಯುವುದಿಲ್ಲ. ನೃತ್ಯ ತಂಡಗಳು ತಮ್ಮ ವಾರ್ಷಿಕೋತ್ಸವಗಳಲ್ಲಿ ಕಥಾನಕಗಳನ್ನು ಅಭಿನಯಿಸಿದ ದಾಖಲೆಗಳು ದೊರೆಯುತ್ತವೆ. ನಂತರ ಗೀತನಾಟಕ ಅಥವಾ ದೃಶ್ಯರೂಪಕಗಳು ಮಕ್ಕಳನ್ನು ಸೆಳೆದ ಉದಾಹರಣೆಯೆಂದರೆ ಬೆಂಗಳೂರಿನ ಪ್ರಭಾತ್ ಕಲಾವಿದರ ಪ್ರದರ್ಶನಗಳು.

## ಪ್ರಭಾತ್ ಕಲಾವಿದರು:

ಕರಿಗಿರಿಯಾಚಾರ್, ಗೋಪೀನಾಥ್‌ದಾಸ್, ಜಯಸಿಂಹ, ದ್ವಾರಕಾನಾಥ್ ಎಂಬ ನಾಲ್ವರು ಸಹೋದರರು ಸೇರಿ, ಮಕ್ಕಳಿಗಾಗಿ ಏನನ್ನಾದರೂ ಮಾಡಬೇಕೆಂಬ ತಮ್ಮ ತಂದೆಯ ಆಸೆಯನ್ನು ಪೂರೈಸುವುದಕ್ಕಾಗಿ 1940ರಲ್ಲಿ ಪ್ರಾರಂಭಿಸಿದ ಸಂಸ್ಥೆ 'ಪ್ರಭಾತ್ ಕಲಾವಿದರು'. ಮಕ್ಕಳ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಉಂಟುಮಾಡುವ,

ಮಕ್ಕಳ ಗಮನವನ್ನು ತನ್ನತ್ತ ಸೆಳೆದುಕೊಳ್ಳುವ ಕಥೆಗಳನ್ನು ಆರಿಸಿ, ಮಕ್ಕಳಿಂದಲೇ ಮಕ್ಕಳಿಗಾಗಿ, ಸುಂದರ ದೃಶ್ಯಗಳನ್ನು ನಿರ್ಮಿಸಿ, ನೃತ್ಯಗಳ ಮೂಲಕ ಪ್ರಯೋಗಿಸುವ ಇವರ ಪ್ರಯತ್ನ ಬಹಳ ಯಶಸ್ವಿಯಾಯಿತು. ಮಕ್ಕಳಿಗಾಗಿ (ದೊಡ್ಡವರಿಗೂ ಸಹ) ಸಂಗೀತ, ನೃತ್ಯಗಳ ಮೂಲಕ ದೃಶ್ಯರೂಪಕಗಳನ್ನು ಹೆಣೆಯುವ, ಅದನ್ನು ಜನಾಕರ್ಷಕವಾಗಿ ಪ್ರಯೋಗಿಸುವ ಪ್ರಯತ್ನ ಬಹಳ ಬೇಗ ಜನಮನ್ನಣೆ ಪಡೆಯಿತು. ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಂಡು ಅವರಿಗೆ ಪ್ರಿಯವಾಗುವಂತೆ ಹೇಳಿ ಕಲಿಸುವುದು ತುಂಬ ಕಷ್ಟದ ಕೆಲಸ, ಇದಕ್ಕಾಗಿ ನರ್ಸರಿ ತರಬೇತಿ ಪಡೆದು ಒಂದು 'ಶಿಶುವಿಹಾರ' ಸ್ಥಾಪಿಸಿದ ಸಂಸ್ಥೆ 'ಪ್ರಭಾತ್ ಕಲಾವಿದರು'. ಅಲ್ಲಿ ಮಕ್ಕಳಿಗೆ ಓದು, ಬರಹವಲ್ಲದೆ ಸಂಗೀತ, ನೃತ್ಯ, ನಾಟಕ, ಯೋಗ ಶಿಕ್ಷಣಗಳನ್ನೂ ಹೇಳತೊಡಗಿದರು. ಕನ್ನಡದಲ್ಲಿ ಇದೊಂದು ವಿನೂತನ ಪ್ರಯತ್ನ. ಇಷ್ಟೇ ಅಲ್ಲದೆ ಇತ್ತೀಚೆಗೆ ಪ್ರಭಾತ ಕಲಾವಿದರು ಮಕ್ಕಳಿಗಾಗಿ ಶಿಶುಗೀತೆಗಳನ್ನು ರಚಿಸಿ, ಅದಕ್ಕೆ ರಾಗ, ತಾಳ, ನೃತ್ಯ ಸಂಯೋಜಿಸಿ, ಅಭಿನಯದ ಮೂಲಕ ಮಕ್ಕಳ ಮನಸ್ಸನ್ನು ಅನೇಕ ಪಠ್ಯ ವಿಚಾರಗಳತ್ತ ಸೆಳೆಯುವ ಪ್ರಯತ್ನವನ್ನೂ ಮಾಡಿದ್ದಾರೆ. 'ನಗಾರಿ ತಿಮ್ಮ', 'ಜೋಡಿ ಕಹಳೆ' ಎಂಬ ಶಿಶುಗೀತೆಗಳ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಇಂತಹ ಮಕ್ಕಳ ಪದ್ಯಗಳನ್ನು ಧ್ವನಿಸುರುಳಿಗಳಲ್ಲಿ ವೀಡಿಯೋ ಕ್ಯಾಸೆಟ್‌ಗಳಲ್ಲಿ ಸಹ ಅಳವಡಿಸಿದ್ದಾರೆ.

ಪ್ರಭಾತ್ ಕಲಾವಿದರ ನೃತ್ಯ ರೂಪಕಗಳೆಂದರೆ ಕರ್ನಾಟಕದ್ಯಾದಂತ ಮನೆಮಾತಾಗುವ ಮಟ್ಟಿಗೆ ಇವರ ಪ್ರದರ್ಶನಗಳು ಹೆಸರು ಮಾಡಿದ್ದವು. ಇವರು ಮಕ್ಕಳಿಗಾಗಿಯೇ ಸಿದ್ಧಪಡಿಸಿ, ಪ್ರದರ್ಶಿಸಿದ 'ತುಂಟ ಗಣಪ', 'ಸಿಂಡರೆಲಾ', 'ಪುಣ್ಯಕೋಟಿ', 'ಕಿಂದರಜೋಗಿ', 'ಲವಕುಶ', 'ಚಂದ್ರಹಾಸ', 'ಧ್ರುವ', 'ಪ್ರಹ್ಲಾದ', 'ಪಂಚತಂತ್ರ', 'ಕೃಷ್ಣಸುಧಾಮ' ಮಕ್ಕಳ ಮನಸ್ಸನ್ನು ಸೂರೆಗೊಂಡವು. ಇದಲ್ಲದೆ ಇವರು ಮಕ್ಕಳು ಮತ್ತು ದೊಡ್ಡವರೆಲ್ಲರಿಗಾಗಿ 'ಶ್ರೀಕೃಷ್ಣ ವೈಜಯಂತಿ', 'ಶ್ರೀರಾಮ ಪ್ರತೀಕ್ಷಾ', 'ಶ್ರೀನಿವಾಸ ಕಲ್ಯಾಣ', 'ಕರ್ನಾಟಕ ವೈಭವ', 'ಮಹಿಷಾಸುರ ಮರ್ದಿನಿ', 'ಮೋಹಿನಿ ಭಸ್ಮಾಸುರ', 'ಪಾಶುಪತಾಸ್ತ್ರ', 'ಕೆರೆಗೆ ಹಾರ', 'ಬಾಹುಬಲಿ ವೈಭವ', 'ಧರ್ಮಭೂಮಿ' ಮೊದಲಾದ ಪ್ರಯೋಗಗಳನ್ನು ಉತ್ತಮ ರಂಗಸಜ್ಜಿಕೆ, ದೀಪವ್ಯವಸ್ಥೆ, ಧ್ವನಿ ವ್ಯವಸ್ಥೆಗಳ ಮೂಲಕ ಪ್ರದರ್ಶಿಸಿ ಜನಮೆಚ್ಚುಗೆ ಗಳಿಸಿದರು. ತಾಂತ್ರಿಕವಾಗಿ ಗುಣಮಟ್ಟವನ್ನು ಕಾಪಾಡಿಕೊಂಡ ಪ್ರಭಾತ್ ಕಲಾವಿದರು ರಂಗಭೂಮಿಯ ಧ್ವನಿಗ್ರಹಣ, ದೀಪ ವ್ಯವಸ್ಥೆ ಮುಂತಾದ ವಿಷಯಗಳಲ್ಲಿ ಅತ್ಯುನ್ನತ ಸಾಧನೆ ಮಾಡಿದರು. ಅವರ ಪ್ರದರ್ಶನದ ಅಚ್ಚುಕಟ್ಟುತನ, ಅವರ ತಾಂತ್ರಿಕ ಉನ್ನತೀಕರಣ ಜನರನ್ನು ಆಕರ್ಷಿಸಿದವು. ಪ್ರಭಾತ್ ಕಲಾವಿದರು ದೇಶದಾದ್ಯಂತವಲ್ಲದೆ ವಿದೇಶಗಳಲ್ಲೂ ಕನ್ನಡದ ಕಂಪನ್ನು ಪಸರಿಸಿದವರು. 1993ರಲ್ಲಿ ಅಮೆರಿಕಾದಲ್ಲಿ ಸ್ವಾಮಿ ವಿವೇಕಾನಂದರ ಕುರಿತು ಇಂಗ್ಲಿಷ್ ಭಾಷೆಯಲ್ಲಿ

ಕಾರ್ಯಕ್ರಮ ನೀಡಿ, ಜನರ ಮೆಚ್ಚುಗೆ ಗಳಿಸಿದರು. ಈ ಸಂಸ್ಥೆಯ ಶಾಖೆಯೊಂದು 'ಪಂಪಾ' ಎಂಬ ಹೆಸರಿನಲ್ಲಿ ಅಮೆರಿಕೆಯ 'ಸ್ಯಾನ್ ಫ್ರಾನ್ಸಿಸ್ಕೋ' ನಗರದಲ್ಲಿ ಆರಂಭವಾಗಿ, ಅಲ್ಲಿಯೂ ಕನ್ನಡದ ಕಂಪನ್ನು ಹರಡುವ ಕೆಲಸ ಮಾಡುತ್ತಿದೆ.

ಇತ್ತೀಚೆಗೆ ಗೀತನಾಟಕಗಳು ಅಥವಾ ರೂಪಕಗಳನ್ನು ಪ್ರದರ್ಶಿಸುತ್ತಿರುವವರೆಂದರೆ ಬೇರೆಬೇರೆ ನೃತ್ಯವೃಂದದವರು ಮಾತ್ರ. ಅವುಗಳಲ್ಲಿ ಕೂಡ ನೃತ್ಯ ಮತ್ತು ಅದರ ಶಾಸ್ತ್ರೀಯತೆಗೆ ಹೆಚ್ಚು ಒತ್ತು ನೀಡಿ, ನಾಟಕೀಯತೆಗೆ ಕಡಿಮೆ ಪ್ರಾಧಾನ್ಯತೆ ನೀಡುತ್ತಾ ಬಂದಿರುವುದರಿಂದ ಬಹುತೇಕ ನೃತ್ಯ ರೂಪಕಗಳನ್ನು ಮನ ಸೆಳೆಯಬಲ್ಲ ನೃತ್ಯ ನಾಟಕಗಳೆಂದು ಮಕ್ಕಳು ಒಪ್ಪಿಕೊಂಡ ಹಾಗೆ ಕಂಡುಬಂದಿಲ್ಲ

ಒಟ್ಟಿನಲ್ಲಿ ಮೇಲ್ನೋಟಕ್ಕೆ ತಿಳಿದುಬರುವ ಅಂಶವೆಂದರೆ ನೃತ್ಯನಾಟಕಗಳ ಪ್ರಯೋಗ ನಮ್ಮಲ್ಲಿ ಬಹಳಷ್ಟು ಯಶಸ್ಸು ಕಂಡಿಲ್ಲ. ಬಂಗಾಳದಂತಹ ಭಾಷೆಗಳಲ್ಲಿ ನೃತ್ಯನಾಟಕಗಳ, ರೂಪಕಗಳ ಯಶಸ್ಸನ್ನು ಗಮನಿಸಿದಾಗ, ನಮ್ಮ ಪ್ರಗತಿ ಹೇಳಿಕೊಳ್ಳುವಂತಹದ್ದಲ್ಲವೆಂಬ ಅಪ್ರಿಯ ಸತ್ಯವನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ.

## ಬಾನುಲಿ ಮಕ್ಕಳ ನಾಟಕಗಳು:

ಆಕಾಶವಾಣಿ ಅಥವಾ ರೇಡಿಯೋ ಜನಪ್ರಿಯವಾಗುತ್ತಾ ಸಾಗಿದಂತೆ, ಅದರಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ನೀಡುತ್ತಾ ಬರಲಾಯಿತು. ಕೇವಲ ಧ್ವನಿ ಅಥವಾ ಶಬ್ಧಗಳಲ್ಲಿಯೇ ನಾಟಕದ ಆವರಣ ನಿರ್ಮಿಸುವುದು, ಬಾನುಲಿ ನಾಟಕಗಳ ವಿಶೇಷ. ಮಕ್ಕಳಿಗಾಗಿ ಇಂತಹ ನಾಟಕಗಳನ್ನು ನೀಡುವ ಪ್ರಯತ್ನವೇ ಬಾನುಲಿ ಮಕ್ಕಳ ನಾಟಕಗಳು.

ಭಾರತವು 15–8–1947 ರಲ್ಲಿ ಸ್ವತಂತ್ರಗೊಂಡ ತರುವಾಯ, ಅದರ ಮೊದಲ ಸ್ವಾತಂತ್ರ್ಯೋತ್ಸವದ ಆಚರಣೆಯ ಸಂದರ್ಭದಲ್ಲಿ ಖ್ಯಾತ ಮಕ್ಕಳ ಸಾಹಿತಿ ಜಿ.ಪಿ. ರಾಜರತ್ನಂರವರಿಂದ 'ಧ್ವಜವಂದನೆ' ಎಂಬ ನಾಟಕ ಬರೆಸಿ ಅದನ್ನು ಬಾನುಲಿಯಲ್ಲಿ ಬಿತ್ತರಿಸಿಲಾಯಿತು. ಮುಂದೆ ಆ ನಾಟಕವು ಪ್ರಕಟವಾದಾಗ ಅದರ ಮುನ್ನುಡಿಯಲ್ಲಿ ರಾಜರತ್ನಂ ಹೀಗೆ ಬರೆದಿದ್ದಾರೆ: 'ಈ ಸಣ್ಣ ನಾಟಕವನ್ನು ಮೊದಲು ಬರೆದದ್ದು ಮೈಸೂರಿನ ಆಕಾಶವಾಣಿಯವರಿಗಾಗಿ. ಅವರು ನಮ್ಮ ಭಾರತದ ಮೊದಲನೆಯ ಸ್ವಾತಂತ್ರ್ಯ ಉತ್ಸವವನ್ನು ಆಚರಿಸಿದಾಗ. ಇದರೊಳಗೆ ನನಗೆ ಹಿರಿಯರೂ, ಹಿತವರೂ ಆದ ಕವಿಗಳ ಪಂಕ್ತಿಗಳನ್ನು ಎತ್ತಿಕೊಂಡಿದ್ದೇನೆ. ಅವರಿಗೆ ನಾನು ಋಣಿ' ಎಂದು ಬರೆದಿದ್ದಾರೆ. ಅದೇ ತರಹ 5–5–1963ರಲ್ಲಿ ಮೇವುಂಡಿ ಮಲ್ಲಾರಿಯವರ 'ಕದಂಬ ಮಯೂರವರ್ಮ'ವು ಧಾರವಾಡದ ಆಕಾಶವಾಣಿಯ 'ಗಿಳಿವಿಂಡು' ಕಾರ್ಯಕ್ರಮದಲ್ಲಿ ಬಿತ್ತರವಾಯಿತು. ಇದೇ ರೀತಿ ಆಗಾಗ ಆಕಾಶವಾಣಿಯಲ್ಲಿ ಮಕ್ಕಳ ನಾಟಕಗಳು

ಬಿತ್ತರಗೊಳ್ಳುತ್ತಾ ಬಂದವು. ಶ್ರೀಯುತ ಆನಂದ ಪಾಟೀಲರು ಗುಲ್ಬರ್ಗ ಆಕಾಶವಾಣಿ ನಿಲಯದ ನಿರ್ದೇಶಕರಾಗಿದ್ದಾಗ ಆಕಾಶವಾಣಿ ಮಕ್ಕಳ ನಾಟಕ ಸಪ್ತಾಹ ಆಚರಿಸಿದ್ದು ಒಂದು ದಾಖಲೆ. ಆಗ ಅವರು ಹಕ್ಕಿಯ ಪಯಣ, ಮದುವೆಯ ಆಟ, ಮುದುಕನೂ ಹುಡುಗಿಯೂ, ಮಂಗಳ ಲೋಕದ ಅಂಗಳದಲ್ಲಿ, ವಾದ್ಯಗಳ ಲೋಕದಲ್ಲಿ, ಕೋಟುಗುಮ್ಮ, ಕಿಟ್ಟಿ, ವಾಯಪ್ಪಜ್ಜನ ರುಮಾಲು ಮುಂತಾದ ನಾಟಕಗಳನ್ನು ಬಾನುಲಿಯ ಮೂಲಕ ಬಿತ್ತರಿಸಿದರು. ಇಲ್ಲಿ ಕೂಡ, ಪಾಶ್ಚಾತ್ಯ ದೇಶಗಳ ಪ್ರಯತ್ನಗಳನ್ನು ಕಂಡಾಗ, ನಮ್ಮ ಸಾಧನೆ ಅತ್ಯಲ್ಪವೆನ್ನುವುದು ಕಟುವಾಸ್ತವ.

## ಉಲ್ಲೇಖಗಳು

1. ಕೆ.ವಿ. ಅಕ್ಷರರ ಲೇಖನ– 'ಮಕ್ಕಳ ರಂಗಭೂಮಿಯ ಹೊಸ ದಿಕ್ಕುಗಳು', ಮಕ್ಕಳ ರಂಗಭೂಮಿ, ಸಂ: ಕಿರಣ್‌ಭಟ್ 2001

2. ಬಿ.ವಿ. ವೈಕುಂಠರಾಜು ಕನ್ನಡ ರಂಗಭೂಮಿ ಕನ್ನಡ ವಿವಿ ಹಂಪಿ 1993

3. ಕೃಷ್ಣಮೂರ್ತಿ ಚಿತ್ರಾಪುರ ಇವರ ಎಂ. ಫಿಲ್ ಪ್ರಬಂಧ, ಮಂಗಳೂರು ವಿವಿ

4. ಶ್ರೀಪಾದಭಟ್, ಉತ್ತರ ಕನ್ನಡದಲ್ಲಿ ಮಕ್ಕಳ ರಂಗಭೂಮಿ, ಮಕ್ಕಳ ರಂಗಭೂಮಿ, ಸಂ: ಕಿರಣ್ ಭಟ್ 2001

5. ಶ್ರೀಪಾದಭಟ್, ಉತ್ತರ ಕನ್ನಡದಲ್ಲಿ ಮಕ್ಕಳ ರಂಗಭೂಮಿ, ಮಕ್ಕಳ ರಂಗಭೂಮಿ, ಸಂ: ಕಿರಣ್ ಭಟ್ 2001

6. ಶ್ರೀಪಾದಭಟ್, ಉತ್ತರ ಕನ್ನಡದಲ್ಲಿ ಮಕ್ಕಳ ರಂಗಭೂಮಿ, ಮಕ್ಕಳ ರಂಗಭೂಮಿ, ಸಂ: ಕಿರಣ್ ಭಟ್ 2001

7. ಎಸ್. ಆನಂದಕೃಷ್ಣಾಚಾರ್ ಬೆಳ್ಳಿಯ ಗರಿ ನೀನಾಸಂ ಬೆಳ್ಳಿಹಬ್ಬದ ಸಂಚಿಕೆ 1976

8. ಬಿ.ವಿ. ವೈಕುಂಠರಾಜು, ಪ್ರಜಾವಾಣಿ ದಿನಪತ್ರಿಕೆ, 17.6.1973

9. ಡಿ.ಕೆ. ರಾಜೇಂದ್ರ, ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ, ಮೈಸೂರು ವಿಶ್ವವಿದ್ಯಾನಿಲಯ 1980

10. ಶಿವರಾಮ ಕಾರಂತರ 'ಹುಚ್ಚು ಮನಸ್ಸಿನ ಹತ್ತು ಮುಖಗಳು', ಎಸ್.ಬಿ.ಎಸ್. ಪಬ್ಲಿಷರ್ಸ್ ಬೆಂಗಳೂರು ಐದನೇ ಮುದ್ರಣ–1995.

11. ಡಾ। ಡಿ.ಬಿ. ರಾಮಚಂದ್ರರಾವ್, ಪು.ತಿ.ನ. ಅವರ ನಾಟಕಗಳು ಪ್ರಸಾರಂಗ ಮೈಸೂರು ವಿಶ್ವವಿದ್ಯಾಲಯ 1990.

12. M. Winternitz-A History of Indian literature vol II.

13. A.B. kiets- The Sanskrit Drama in its origin, development, Theory and practice.

14. Adya Rangacharya – The Indian theatre.

15. A.B. Kiets – The Sanskrit Drama.

16. ಡಾ। ಡಿ.ಬಿ. ರಾಮಚಂದ್ರ ರಾವ್, ಪು.ತಿ.ನ. ಅವರ ನಾಟಕಗಳು ಪ್ರಸರಾಂಗ ಮೈಸೂರು ವಿಶ್ವವಿದ್ಯಾನಿಲಯ.

17. ಡಾ। ಡಿ.ಬಿ. ರಾಮಚಂದ್ರ ರಾವ್, ಪು.ತಿ.ನ. ಅವರ ನಾಟಕಗಳು ಪ್ರಸರಾಂಗ ಮೈಸೂರು ವಿಶ್ವವಿದ್ಯಾನಿಲಯ.

18. ಬಿ. ಮಾಲಿನ ಮಲ್ಯ, ಶಿವರಾಮ ಕಾರಂತರ ಕಿನ್ನರ ಲೋಕ, ಎಸ್.ಬಿ.ಎಸ್. ಪಬ್ಲಿಷರ್ಸ್.

19. ಬಿ. ಮಾಲಿನ ಮಲ್ಯ, ಶಿವರಾಮ ಕಾರಂತರ ಕಿನ್ನರ ಲೋಕ, ಎಸ್.ಬಿ.ಎಸ್. ಪಬ್ಲಿಷರ್ಸ್.

20. ಎಸ್.ಎಸ್. ರಘುನಾಥ್, ಶತಮಾನದ ಮಕ್ಕಳ ಸಾಹಿತ್ಯ ಕರ್ನಾಟಕ ಸಾಹಿತ್ಯ ಅಕಾಡೆಮಿ–2001

***

# ಆಟ, ನಾಟಕ, ರಂಗಭೂಮಿ

**- ಪ್ರೇಮಾ ಕಾರಂತ**

ಪುಟಾಣಿ ಮಕ್ಕಳು ಸಾಧಾರಣವಾಗಿ ಆಡುವ ಆಟಗಳೆಲ್ಲಾ ಸೃಜನಾತ್ಮಕ ನಾಟಕಗಳೇ. ನೀನು ಡಾಕ್ಟರಾಗು, ನಾನು ರೋಗಿಯಾಗುತ್ತೇನೆ, ನೀನು ಕುದುರೆ ಆಗು, ನಾನು ಸವಾರನಾಗುತ್ತೇನೆ – ಇದನ್ನೆಲ್ಲಾ ಮಕ್ಕಳು ಮೂಕಾಭಿನಯ ಉಪಯೋಗಿಸಿ ಎಷ್ಟು ಚೆನ್ನಾಗಿ ಆಡುತ್ತಾರೆಂದರೆ - ಆಡುವ ಮಕ್ಕಳನ್ನು ಪ್ರೋತ್ಸಾಹಿಸುವ ತಂದೆ ತಾಯಿಗಳು ಬಹಳ ಕಡಿಮೆ.

ಆಟ, ನಾಟಕ, ರಂಗಭೂಮಿ ಈ ಮೂರು ಶಬ್ದಗಳು ಪರಸ್ಪರ ಕೊಂಡಿಯಂತೆ ಕೂಡಿಕೊಂಡಿವೆ. ಮಕ್ಕಳು ಮೊದಲು ಆಡುವುದು ಆಟವನ್ನೇ , ಆಟ ನಾಟಕವಾಗಿ ಬೆಳೆಯುತ್ತದೆ. ನಾಟಕ ರಂಗಭೂಮಿಯಾಗಿ ಬೆಳೆಯುತ್ತದೆ. ಈ ಮೂರಕ್ಕೂ ತನ್ನದೇ ಆದ ಮಹತ್ವವಿದೆ. ಮಕ್ಕಳು ಆಟದಲ್ಲೇ ಆಗಲಿ, ನಾಟಕದಲ್ಲೇ ಆಗಲಿ, ರಂಗಭೂಮಿಯಲ್ಲೇ ಆಗಲಿ ಗಳಿಸುವುದು ಅಪಾರ.

ಮಕ್ಕಳಲ್ಲಿ ಹುದುಗಿರುವ ಸ್ವಾಭಾವಿಕವಾದ ಅವರ ಮಾತಿನ ಸರಣಿ, ಮುಖಭಾವ, ಕಾರ್ಯರೂಪಕ್ಕೆ ಬರಲು ಪ್ರತಿಕ್ಷಣವೂ ಚಡಪಡಿಸುವ ಚೈತನ್ಯ ಇವೆಲ್ಲಾ ಮಕ್ಕಳ ಬೆಳವಣಿಗೆಗೆ ಎಷ್ಟೊಂದು ಅವಶ್ಯಕ. ಶಾಲೆಗಳಲ್ಲಿ ಕಲ್ಪನಾಶಕ್ತಿಯಿರುವ ಅಧ್ಯಾಪಕರುಗಳಿಂದ ಮಕ್ಕಳಲ್ಲಿ ಇರುವ ಸೃಜನಾತ್ಮಕ ಶಕ್ತಿ 'ಸೃಜನಾತ್ಮಕ ನಾಟಕ' ರೂಪ ಹೊಂದಿದರೆ ಎಷ್ಟೊಂದು ಚೆಂದ. ಇದೇ ಮಕ್ಕಳ ಸ್ವಯಂಪ್ರೇರಿತ ನಾಟಕ. ಇಲ್ಲಿ ಮಕ್ಕಳು ಸಂಭಾಷಣೆಗಳನ್ನು ಉರು ಹೊಡೆಯಬೇಕಾಗಿಲ್ಲ, ಹೆಚ್ಚಿನ ನಿರ್ದೇಶನದ ಅಗತ್ಯವಿಲ್ಲ ಬರೀ ಮಾರ್ಗದರ್ಶನವಿದ್ದರೆ ಸಾಕು. ಮಕ್ಕಳು ಅಸಾಧ್ಯವಾದುದನ್ನೆಲ್ಲಾ ಮಾಡಿ ತೋರಿಸುತ್ತಾರೆ. ಅವರದೇ ಆದ ಅಭಿನಯ, ಅವರದೇ ಆದ ಸಂಭಾಷಣೆ, ಈ ರೀತಿ ಅನೌಪಚಾರಿಕ ನಾಟಕಕ್ಕೆ ಬೇಕಾದದ್ದು ಬರೀ ಒಂದು ಜಾಗ ಮತ್ತು ಕಲ್ಪನಾ ಶಕ್ತಿ. ಇದಕ್ಕೆ ಪ್ರೇಕ್ಷಕರೂ ಬೇಕಿಲ್ಲ, ಭಾಗವಹಿಸುವ ಮಕ್ಕಳೇ ಪ್ರೇಕ್ಷಕರು !

ಈ ರೀತಿ ಅನೌಪಚಾರಿಕ ನಾಟಕದಿಂದ ಹುಟ್ಟಿಕೊಳ್ಳುತ್ತದೆ ನಿಜವಾದ ರಂಗಭೂಮಿ,

ಔಪಚಾರಿಕ ನಾಟಕ, ಇಂಥಾ ಔಪಚಾರಿಕ ನಾಟಕಗಳಿಂದ ಎಷ್ಟೋ ಸುಂದರವಾದ ಕಥೆಗಳನ್ನು ಮಕ್ಕಳು ಜೀವಂತವಾಗಿ ರಂಗದ ಮೇಲೆ ನೋಡುತ್ತಾರೆ. ಮಕ್ಕಳಲ್ಲಿ ಒಳ್ಳೆಯ ಅಭಿರುಚಿ ಬೆಳೆಯಲು ಸಾಧ್ಯವಾಗುತ್ತದೆ.

ನಾಟಕದ ಅಭ್ಯಾಸ ಶುರುವಾದಾಗ ಭಾವನೆಗಳು, ಸಂವೇದನೆಗಳ ಅನುಭವಗಳಿಂದಾಗಿ ಮಕ್ಕಳ ಸಂತೋಷ ಹೇಳತೀರದು.

ನಲವತ್ತು ಮಕ್ಕಳಿದ್ದರೆ ನಲವತ್ತೂ ಮಕ್ಕಳು ಈ ಅನುಭವವನ್ನು ಅನುಭವಿಸುತ್ತಾರೆ. ನಾಟಕ ಮಾಡುವಾಗ ಮಕ್ಕಳಿಗೆ ಮೊದಲು ಸಿಗಬೇಕಾದುದು ಖುಷಿ, ಸಂತೋಷ. ಮಕ್ಕಳಿಗೆ ಮಾತ್ರವಲ್ಲ ಯಾರಿಗೇ ಆಗಲಿ ಈ ಪ್ರಪಂಚದಲ್ಲಿ ಏನೇ ಕೆಲಸ ಮಾಡಿದರೂ ಮೊದಲು ಸಿಗಬೇಕಾದದ್ದು ಖುಷಿ, ಸಂತೋಷ, ತೃಪ್ತಿ , ನಂತರ ಅದರಿಂದಾಗುವ ಪ್ರಯೋಜನಗಳು.

ಮಕ್ಕಳಿಗೆ ನಾಟಕ ಶಿಬಿರದಿಂದ ನಾಟಕ ಅಭ್ಯಾಸದಿಂದ ಸಿಕ್ಕುವ ಪ್ರಯೋಜನಗಳು ಅಪಾರ. ಇವುಗಳನ್ನು ಅವರು ಶಾಲೆಯಿಂದ ಪಡೆಯಲು ಸಾಧ್ಯವೇ ಇಲ್ಲ. ನಾಟಕದ ಅಭ್ಯಾಸ ಸ್ವಯಂಪ್ರೇರಿತ ಭಾವನೆಗಳಿಗೆ, ಶೈಲಿಗಳಿಗೆ ಅವಕಾಶ ಮಾಡಿಕೊಡುತ್ತದೆ. ಕಲ್ಪನಾಶಕ್ತಿಯಂತೂ ಬೆಳೆಯುತ್ತಲೇ ಹೋಗುತ್ತದೆ. ವಿವಿಧ ರೀತಿಯ ಪಾತ್ರಗಳನ್ನು ನಿರ್ವಹಿಸುವುದರಿಂದ ಸಾಮಾಜಿಕ, ಮಾನಸಿಕ ಅರಿವು ಹೆಚ್ಚುತ್ತದೆ. ಸ್ಪಷ್ಟವಾಗಿ ಸಂಭಾಷಣೆ ಹೇಳುವುದನ್ನು ಕಲಿಯುತ್ತಾರೆ. ಪ್ರಾಪಂಚಿಕ ವ್ಯವಹಾರ ಜ್ಞಾನ, ಸ್ವಯಂಗೌರವ, ಸ್ವಯಂ ಶಿಸ್ತು , ಎಲ್ಲದಕ್ಕಿಂತ ಹೆಚ್ಚಾಗಿ ಆತ್ಮವಿಶ್ವಾಸ ಬೆಳೆಯುತ್ತಾ ಹೋಗುತ್ತದೆ. ತಂಡದ ಜೊತೆ ಬೆರೆತು ಕೆಲಸ ಮಾಡುವುದರಿಂದ, ಒಬ್ಬರನ್ನೊಬ್ಬರು ಹೇಗೆ ಕಾಣಬೇಕೆಂದೂ, ಯಾವ ರೀತಿ ಮರ್ಯಾದೆ ಕೊಡಬೇಕೆಂದೂ ತಾನಾಗೇ ಬರುತ್ತದೆ. ತಮ್ಮ ಸ್ವಂತ ಜೀವನ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳಲು ಅವಕಾಶ ನೀಡುತ್ತದೆ. ಇಷ್ಟೆಲ್ಲಾ ನಾಟಕ ಕಲಿಸುವುದರಿಂದ ಒಳ್ಳೆಯ ನಾಗರೀಕನಾಗಲು ಇನ್ನೇನು ತಾನೇ ಬೇಕು ? ಮಕ್ಕಳಿಗಂತೂ ನಾಟಕ ಒಂದು ಅದ್ಭುತವಾದ ಮಾಧ್ಯಮ.

ಆದ್ದರಿಂದ ಪ್ರಿಯ ತಂದೆತಾಯಿಗಳೇ ಮತ್ತು ಅಧ್ಯಾಪಕರುಗಳೇ ಮಕ್ಕಳಲ್ಲಿ ಬುದ್ಧಿಯ ಹಸಿವು, ಚೈತನ್ಯದ ಹಸಿವು ಯಾವಾಗಲೂ ಏನಾದ್ರೂ ಮಾಡ್ತಾನೇ ಇರಬೇಕು ಅನ್ನೋ ಮನಸ್ಸಿನ ಹಸಿವು – ಇವೆಲ್ಲಾ ಅರ್ಥಮಾಡಿಕೊಂಡು ಬಿಟ್ಟರೆ, ನಿಮ್ಮ ಸಹಕಾರದಿಂದ ಒಳ್ಳೆಯ ಮಕ್ಕಳ ರಂಗಭೂಮಿ ಬೆಳೆಯುತ್ತಾ ಹೋಗುತ್ತದೆ.

★★★

# ಧ್ವನಿ ಮತ್ತು ಭಾಷೆ

- ಬಿ.ವಿ. ಕಾರಂತ್

ಕೊನೆಗೆ ಟೀಚರ್ ಕೂಡಾ ಸಿಂಗ್ ಸಾಂಗ್ ಸಿಸ್ಟಂನಲ್ಲಿ ಒಂದಾನೊಂದು ಕಾಲದಲ್ಲಿ ಒಬ್ಬ ರಾಜನಿದ್ದ, ಅವನಿಗೆ ಮೂರು ಜನ ರಾಣಿಯರು ಇದ್ದರು ಎಂದು ಹೇಳುತ್ತಾರೆ. ಇದು ನಮ್ಮ ಪೇಟೆಂಟ್ ಧ್ವನಿ, ಸೌಂಡ್ ಪ್ಯಾಟರ್ನ್. ಯಾವ ರೀತಿಯಲ್ಲಿಯೂ ಕೂಡಾ ಭಾಷೆ ಸ್ವರದಲ್ಲಿ ಭಾಷೆ ತನ್ನ ಶಕ್ತಿಯ ಮುಖಾಂತರ ಹೊರ ಹೊಮ್ಮುವುದಕ್ಕೆ ಅವಕಾಶ ಕೊಡುತ್ತಿಲ್ಲ ಅದಕ್ಕೆ ಸರಿಯಾದ ಬರವಣಿಗೆಯ ಮೇಲೆ ಎಷ್ಟು ಮಹತ್ವ ಕೊಡುತ್ತೇವೆ ಅಂದರೆ, ಅದನ್ನು ಬರೆಯಬೇಕಾದರೂ ಕೂಡ, ಕೊನೆಗೆ ಒಂದು ಎಸ್ಸೇಯನ್ನು ಬರೆಯಬೇಕಾದರೂ ಕೂಡಾ, ಅದರಲ್ಲಿಯೂ ಕೂಡ ನಮ್ಮ ಬುದ್ಧಿ ಉಪಯೋಗಿಸಬೇಕು ಅಥವಾ ಅಲ್ಲಿ ತೊಳಲಾಟದಿಂದ, ಆಪ್‌ಷನ್‌ನಿಂದ ಏನು ಉಪಯೋಗಿಸಬೇಕು ಎನ್ನುವುದನ್ನು ಮರೆತು ಬಿಟ್ಟಿದ್ದೇವೆ.

ಮಕ್ಕಳೂ ಕೂಡ ಹಿರಿಯರು ಹೇಳಿದ ಹಾಗೆ, ಮಾಸ್ಟರ್ ಹೇಳಿದ ಹಾಗೆ ಅಥವಾ ತಂದೆ ತಾಯಿಗಳು ಹೇಳಿದ ಹಾಗೆ ಹೋಗುತ್ತಾರೆ. ಒಂದು ಮನೆಯಲ್ಲಿ ನಿಮಗೆಲ್ಲರಿಗೂ ಗೊತ್ತಿರುವ ಹಾಗೆ, 7-8 ಜನ ಮಕ್ಕಳು ಇದ್ದರೆ ಅವರು ಅಪ್ಪ ಡಾಮಿನೇಟ್ ಮಾಡಿದರೆ ಅಪ್ಪನ ಧ್ವನಿಯನ್ನು ಎಲ್ಲರೂ ಅವಲಂಬಿಸಿಕೊಂಡು ಹೋಗುತ್ತಾರೆ. ಅಲ್ಲಿ ಒಬ್ಬರ ಷಾಹಿ ಶುರುವಾಗುತ್ತದೆ. ಆದ್ದರಿಂದ ಶಾಲೆಯಲ್ಲಿ ಅಧ್ಯಾಪಕರು ಡಾಮಿನೇಟ್ ಮಾಡುವುದಕ್ಕೆ ಹೋದರೆ ಮಕ್ಕಳು ಅಧ್ಯಾಪಕರನ್ನೇ ಕಾಪಿ ಮಾಡುವುದಕ್ಕೆ ಹೋಗುತ್ತಾರೆ. ಈ ರೀತಿಯಾಗಿ ಮೊದಲಿನಿಂದಲೂ ಕೂಡಾ ಮಕ್ಕಳು ಚೆನ್ನಾಗಿ ಕಾಪಿ ಮಾಡುತ್ತಾರೆ, ಅನುಕರಣೆ ಮಾಡುತ್ತಾರೆ. ನಕಲು ಮಾಡುತ್ತಾರೆಂದು ಹೇಳಿ ಅದನ್ನೇ ಹೆಚ್ಚಾಗಿ ಬೆಳೆಸುವುದಕ್ಕೆ ಹೋಗುತ್ತೇವೆಯೇ ಹೊರತು ಹಾಗೆ ನಾವು ಕ್ರಿಯೇಟ್ ಮಾಡುವುದಕ್ಕೆ ಮಹತ್ವ ಕೊಟ್ಟಿಲ್ಲ. ಇದಕ್ಕೆ ಹೀಗೆ ಆಗಿದೆ ಎಂದರೆ, ನಾವು ಭಾಷೆಯ ಬಗ್ಗೆ ತೋರಿಸಿದ ಒಂದು ಅಸಡ್ಡೆ, ತಾವೆಲ್ಲರೂ ಕೇಳಬಹುದು, ಏಕೆ ಹೀಗೆ ಎಂದು.

ಸ್ಕೂಲು ಎಂದ ಕೂಡಲೆ ಸ್ಕೂಲ್‌ನಲ್ಲಿ ಕೊಠಡಿ ಇದೆ, ಹುಡುಗರನ್ನು

ಕೂಡಿಹಾಕುತ್ತಾರೆ, ಅದಕ್ಕೆ ಒಂದೊಂದು ಬಾಗಿಲು ಇದೆ, ಕಿಡಕಿ ಇವೆ, ಕಿಡಕಿ ಇದ್ದರೂ ನೋಡುವುದಕ್ಕೆ ಬರುವುದಿಲ್ಲ, ಮಾಸ್ಟರ್ ಯಾವಾಗಲೂ ಬೆತ್ತವನ್ನು ಹಿಡಿದುಕೊಂಡು ತಿರುಗಾಡಬೇಕು, ಆ ಕಡೆಯಿಂದ ಈ ಕಡೆಗೆ ತಿರುಗಾಡಬೇಕು, ಇದೆಲ್ಲಾ ವಿಚಾರಗಳು ನಮ್ಮ ಮುಂದೆ ಬರುತ್ತವೆ. ಶಾಲೆಯ ಮಕ್ಕಳನ್ನು ವಿಧಾನಸೌಧದ ಮುಂದೆ ಅಥವಾ ಇಂಡಿಯಾಗೇಟ್ ಮುಂದೆ ಈ ಉಪಾಧ್ಯಾಯರು ದಾಟಿಸಬೇಕಾದರೆ, ಕ್ರಾಸ್ ಮಾಡಿಸಬೇಕಾದರೆ ಉಪಾಧ್ಯಾಯರುಗಳ ಮುಖಗಳನ್ನು ನಾವು ನೋಡುವುದಕ್ಕಾಗುವುದಿಲ್ಲ. ಈ ದೃಷ್ಟಿಯಲ್ಲಿದ್ದಾಗ ನಮಗೆ ಸ್ಕೂಲು ಎಂದರೆ ಒಂದು ಜೈಲು ಇದ್ದ ಹಾಗೆ ಎನ್ನುವ ಕಲ್ಪನೆ ಬಂದುಬಿಡುತ್ತದೆ. ಇನ್ನೊಂದು ಕಲ್ಪನೆ ನಮಗೆ ಶಾಲೆ ಎಂದರೆ ಹಿಂದೆ ಇದ್ದಂಥ ಗುರುಕುಲಗಳು ಎಂದು ನಮಗೆ ಬರುತ್ತವೆ. ಗುರುಕುಲ ಎಂದರೆ ನಮಗೆ ಸ್ವಾಭಾವಿಕವಾಗಿ ಗಿಡ ಮರಗಳು, ನದಿ ಹರಿಯುವುದು, ಗುಡ್ಡ ಬೆಟ್ಟಗಳು ಇರುತ್ತವೆಂದು ಸಹಜವಾದ ಭಾವನೆ ಬರುತ್ತದೆ. ನಾನು ಹೇಳುತ್ತಿರುವ ಗುರುಕುಲದ ಸಿಸ್ಟಂ ಈಗ ಇಲ್ಲ, ಏನು ಇದ್ದರೂ ಏನು ಉಪಯೋಗ, ನಾನು ಅದಕ್ಕೆ ಎಷ್ಟು ಉಪಯೋಗ, ನನಗೂ ಅದಕ್ಕೂ ಏನು ಸಂಬಂಧ, ಎನ್ನುವ ಸಂಭಾಷಣೆ ಮನುಷ್ಯ ಮನುಷ್ಯರಲ್ಲೆ ಅಲ್ಲ, ತಾನು ವಾತಾವರಣದ ಜೊತೆಗೆ ಹೇಗೆ ಸಂಭಾಷಣೆ ಮಾಡುತ್ತೇನೆ, ಹೇಗೆ ವಸ್ತುವನ್ನು ಮುಟ್ಟುತ್ತೇನೆ, ಹೇಗೆ ನಡೆಯುತ್ತೇನೆ, ಹೇಗೆ ಕೇಳುತ್ತೇನೆ ಎನ್ನುವ ಭಾವನೆಗಳು ಕಿವಿಗೆ ಬೀಳುತ್ತವೆ. ಇವೆಲ್ಲಾ ಬಂದಾಗ ನನ್ನಲ್ಲಿ ಒಂದು ರೀತಿಯ ಚಾರ್ಮ್ಸ್ ಅರಿಕೆ ಶುರುವಾಗುತ್ತದೆ. ಚಾರ್ಮ್ಸ್ ಎಂದ ಕೂಡಲೇ ಅಸ್ತೆಟಿಕ್ ಬಂದೇ ಬರುತ್ತದೆ. ಏಕೆಂದರೆ, ಇದು ಬೇಕು, ಇದು ಬೇಡ, ಇದು ಚೆನ್ನಾಗಿದೆ, ಇದು ಚೆನ್ನಾಗಿಲ್ಲ ಎನ್ನುವ ಅಸ್ತೇಟಿಕ್ ಭಾವನೆ ತನ್ನಲ್ಲಿ ಬರಬೇಕಾದರೆ, ಅವನಲ್ಲಿ ಒಂದು ರೀತಿಯ ಆಕ್ಟಿವಿಟೀಸ್ ಬೆಳೆಯುತ್ತದೆ. ಈಗ ಅಧ್ಯಾಪಕ ತನ್ನನ್ನು ವಿದ್ಯಾರ್ಥಿಗಳಲ್ಲಿ ತನ್ನ ಧ್ವನಿಯನ್ನು ಡಾಮಿನೇಷನ್ ಮಾಡುವುದಿಲ್ಲ, ಆದರೆ ವಿದ್ಯಾರ್ಥಿಗಳೇ ಅನುಕರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ.

ನಾವು ಧ್ವನಿ ಭಾಷೆ ಎಂದ ಕೂಡಲೇ ಅದು ವ್ಯಾಕರಣ ಶುದ್ಧವಾಗಿರಬೇಕು. ಕರ್ತೃ, ಕರ್ಮ, ಕ್ರಿಯಾ, ಪೂರ್ಣ ವಿರಾಮ ಹಾಕಬೇಕು ಎಂದು ಹೇಳುತ್ತೇವೆ. ಆದರೆ ನಿಜವಾದ ಜೀವಂತ ಭಾಷೆಯಲ್ಲಿ ಕರ್ತೃ ಇರುವುದಿಲ್ಲ, ಕರ್ಮ ಇರುವುದಿಲ್ಲ, ಕ್ರಿಯೆ ಇರುವುದಿಲ್ಲ, ಅದರಲ್ಲಿ ಜೀವನದ ಭಾವನೆಯ ಒಂದು ಸತ್ವ, ಫ್ರೆಷ್‌ನೆಸ್, ಹಸಿತನ, ಕಾವು ಇರುತ್ತದೆ. ಇದನ್ನು ನಾವು ಮತ್ತೂ ಸ್ಪಷ್ಟವಾಗಿ ನೋಡಿದಾಗ ಲಿಪಿಯಲ್ಲಿ ಇಷ್ಟೂ ಭಾಷೆ ಇರಲಿಕ್ಕೆ ಸಾಧ್ಯ ಇದೆ, ಅಷ್ಟೂ ನಾವು ಮಾತನಾಡುವ ಭಾಷೆಯಲ್ಲಿ ಮಾತನಾಡುವ ಧ್ವನಿಗಳಲ್ಲಿ ಅದರ ಹತ್ತಂಶವೂ ಕೂಡ ಬರುವುದಕ್ಕೆ ಸಾಧ್ಯ ಇಲ್ಲ. ಅಷ್ಟೇ ಅಲ್ಲ ಅದು ಎಷ್ಟು ಅನ್ಯಾಯ ಕೊನೆಗೆ ಮಾಡುತ್ತದೆಂದರೆ, ಪುಸ್ತಕಗಳು ಇರುವಷ್ಟೆ ಭಾಷೆ ಇದೆಯೇನೋ ಎಂದು ಅದಕ್ಕೆ ನಾವು

ಗುಲಾಮರಾಗಿ ಬಿಡುತ್ತೇವೆ. ನಮ್ಮಲ್ಲಿ ಸ್ವಲ್ಪ ಇರುವ ಪ್ರಾಕೃತ ಶಕ್ತಿಯನ್ನು ನಾವು ಕಳೆದುಕೊಂಡು ಬಿಡುತ್ತೇವೆ. ಇದಕ್ಕೆ ಭಾಷೆ ಯಾವಾಗಲೂ ಮೌಕಿಕವಾಗಿರಬೇಕು. ಭಾಷೆ ಬಂದದ್ದೂ ಮೌಕ್ತಿಕವಾಗಿಯೇ. ಇದಕ್ಕೆ ನಾವು ಹೆಚ್ಚು ಇನ್ಸ್‌ಟಿಟ್ಯೂಷನಲ್ ಆಗಿರಬೇಕು, ಇದರ ಶಕ್ತಿಯನ್ನು ಹೇಗೆ ಬೆಳೆಸಬೇಕು ಮತ್ತು ಅದನ್ನು ಹೇಗೆ ಸಾಮೂಹಿಕವಾಗಿ ಮಾಧ್ಯಮವಾಗಿ ಉಪಯೋಗಿಸಬೇಕು, ಎನ್ನುವುದಕ್ಕೆ ನಾವು ಹೆಚ್ಚು ಪ್ರಯತ್ನ ಮಾಡಬೇಕಾಗಿದೆ. ನಾವು ಅಕ್ಕಪಕ್ಕದಲ್ಲಿ ನೋಡಿದಾಗ ಯಾವುದಕ್ಕೆ ನಾವು ಅಸಡ್ಡೆ ಮಾಡುತ್ತೇವೆಯೋ ಅಷ್ಟೂ ಧ್ವನಿಗಳಲ್ಲಿ ಎಷ್ಟು ಭಾಷೆ ಇದೆ, ನಾವು ಯಾವುದನ್ನು ಯೀಡಿಯಂ ಎಂದು ಹೇಳುತ್ತೇವೆಯೋ, ಯಾವುದನ್ನು ಗಾದೆ ಎಂದು ಹೇಳುತ್ತೇವೆಯೋ, ಯಾವುದನ್ನು ಪೂರ್ಣ, ಸಂಪೂರ್ಣ ಪ್ರಶಸ್ತು ಎಂದು ಹೇಳುತ್ತೇವೆಯೋ ಅವೆಲ್ಲಾ ಒಂದು ಧ್ವನಿಯನ್ನು ಒದಗಿಸುತ್ತೇವೆ.

ಒಂದು ಮಗುವನ್ನು ನಾವು 'ಹಾಯ್' ಎಂದು ಬಿಟ್ಟರೆ ತಕ್ಷಣ 'ಆ' ಎನ್ನುವ ಧ್ವನಿ ಅಲ್ಲಿ ಕೇಳಿಸುತ್ತದೆ. ಇದನ್ನು ಬರವಣಿಗೆಯಲ್ಲಿ ಬರೆಯುವುದಕ್ಕೆ ಸಾಧ್ಯವೇ ಇಲ್ಲ. ಆದರೆ 'ಆಹಾ' ಎನ್ನುವಾಗ 'ಹಾ' ಈಗ ಅರ್ಥವಾಯಿತು ಎಂದು ನಾವು ಅರ್ಥಮಾಡಬೇಕಾಗುತ್ತದೆ. ಆದರೆ ಈ ವಾಕ್ಯಕ್ಕೂ 'ಆಹಾ' ಎಂದು ಅರ್ಥ ಮಾಡುವುದಕ್ಕೂ ಮತ್ತು ಇದನ್ನು ಹತ್ತು ಹುಡುಗರು ಹೇಳುವುದಕ್ಕೂ ಎಷ್ಟು ವ್ಯತ್ಯಾಸ ಇರುತ್ತದೆ ಎನ್ನುವುದನ್ನು ನಾವು ಅಬ್ಸರ್ವ್ ಮಾಡಬಹುದು. ಇದು ನಿಜವಾದ ಭಾಷೆ. ಅಷ್ಟೇ ಅಲ್ಲ ಆಮೇಲೂ ಕೂಡಾ ಆಹಾ, ಹೋಹೋ, ಅಯ್ಯೋ ಎಂದು ನಾವು ಏನು ಬೇಕಾದರೂ ಹೇಳಲಿ ಇದರಲ್ಲಿ ಪ್ರತಿಯೊಬ್ಬರದೂ ಒಂದು ಸ್ವಂತಿಕೆ ಇದೆ. ಈ ಸ್ವಂತಿಕೆಯಲ್ಲಿ ಭಾಷೆ ಬೆಳವಣಿಗೆಯಾಗುತ್ತದೆ. ಹೊಸ ಶಬ್ದಗಳು ಬರುತ್ತವೆ. ಈ ಶಬ್ದಗಳು ಯಾವ ರೀತಿಯಲ್ಲಿಯೂ ಡಿಕ್ಷನರಿ ಶಬ್ದಗಳಲ್ಲ, ಅವನೇ ಕ್ರಿಯೇಟ್ ಮಾಡಿದಂಥ ಶಬ್ದಗಳು. ಈ ಶಬ್ದ ಬರಬೇಕಾದರೆ ನಾವು ಯಾವ ರೀತಿಯ ಶಿಕ್ಷಣ ಕೊಡಬೇಕು, ಅದಕ್ಕೆ ಅವನಲ್ಲಿ ಏನು ಇದೆ, ಎಂದಾಗ ನನ್ನ ದೃಷ್ಟಿಯಲ್ಲಿ ಸ್ಕೂಲು ಎಂದರೆ, ಅದು ಯಾವಾಗಲೂ ಬರೀ ಕೊಠಡಿಯಲ್ಲ, ನೀವು ಯಾವ ಹಳ್ಳಿ ಸ್ಕೂಲಿಗೆ ಹೋಗಲಿ, ಪೇಟೆಯ ಸ್ಕೂಲಿಗೆ ಹೋಗಲಿ, ಸ್ಕೂಲನ್ನು ಒಂದು ಕ್ವಾರ್ಟರ್‌ನಲ್ಲಿ, ಒಂದು ಕಂಪಾರ್ಟ್‌ಮೆಂಟನಲ್ಲಿ ನಾನು ಕಲ್ಪನೆ ಮಾಡಲಾರೆ. ಅಂದರೆ, ಇಷ್ಟೆಲ್ಲಾ ನಿಯಮಗಳನ್ನು ನಮ್ಮ ಮೇಲೆ ನಾವು ಹೇರಿಕೊಂಡರೂ ಕೂಡಾ ಇದು ನಮ್ಮ ಸ್ಕೂಲು ಎಂದಾಗ ಓಪನ್‌ನೆಸ್ ಎನ್ನುವ ಫೀಲಿಂಗ್ ಬರುತ್ತದೆ. ಸ್ಕೂಲು ಒಳಗೆ ಇದ್ದರೂ ಕೂಡಾ ಅಲ್ಲಿಯೇ ಒಂದು ಒಳಾಂಗಣ ಇದೆ. ಹೊರಗೆ ಬಂದರೆ, ಆಟವಾಡುವುದಕ್ಕೆ ಮೈದಾನ ಇದೆ, ಅಥವಾ ತುಂಬಾ ಗಿಡಗಳು ಇವೆ. ಒಂದು ಹೂದೋಟ ಇದೆ, ಎನ್ನುವ ಕಲ್ಪನೆ ನಮ್ಮಲ್ಲಿದೆ. ಅಷ್ಟೇ ಅಲ್ಲ, ಹೊರಗಡೆ ಹೋದರೂ ಕೂಡಾ ಗುರುಕುಲದಲ್ಲಿ ನದಿ, ಪಕ್ಷಿಗಳ ಧ್ವನಿಗಳು ಇದೆಲ್ಲಾ ನಮಗೆ ಕೇಳುತ್ತಿರುತ್ತದೆ.

ಈಗ ಸಿಟಿಯಲ್ಲಿ ಈ ಧ್ವನಿಗಳು ಇಲ್ಲ, ಇದು ಏಕೆ ಇಲ್ಲ ಎಂದು ನಾವು ಅಳಬೇಕಾಗಿಲ್ಲ, ಪಶ್ಚಾತ್ತಾಪ ಪಡಬೇಕಾಗಿಲ್ಲ, ಏಕೆಂದರೆ, ಇದಕ್ಕೆ ಬದಲಾಗಿ, ರೈಲಿನ ಧ್ವನಿ, ಇನ್ನೂ ಇತರ ಧ್ವನಿಗಳು ನಮಗೆ ದಿನನಿತ್ಯದ ಧ್ವನಿಗಳಾಗಿವೆ. ಇದಕ್ಕೂ ಒಂದು ಅರ್ಥವಿದೆ. ಇದಕ್ಕೆಲ್ಲಾ ನಮ್ಮ ಇರುವಿಕೆಗೆ, ಅಸ್ತಿತ್ವಕ್ಕೆ ಒಂದು ಅರ್ಥ ಕೊಡುತ್ತದೆ. ಇದು ನಮ್ಮ ಜೀವನದ ಸಂಭಾಷಣೆಯ ಅಂಗವಾಗಿದೆ. ಈಚೆಗೆ ನಾವು ಸ್ಕೂಲನ್ನೇ ಪ್ರತ್ಯೇಕವಾಗಿ ತೆಗೆದುಕೊಂಡಾಗ ಇದು ಕೇವಲ ಕೊಠಡಿಯಲ್ಲ , ಬಿಲ್ಡಿಂಗ್ ಮಾತ್ರವಲ್ಲ , ಅದರಲ್ಲಿ ಚೇರ್‌ಗಳು, ಟೇಬಲ್‌ಗಳು, ಆಮೇಲೆ ಹುಡುಗರು ನೂರಾರು ಮಕ್ಕಳಲ್ಲ , ಸಾವಿರಾರು ಮಕ್ಕಳು , ಇವರ ಧ್ವನಿಗಳು, ಇವರು ಮಾತನಾಡುವ ಶಬ್ದಗಳು ಇವೆಲ್ಲಾ ನಮ್ಮ ಮನಸ್ಸಿಗೆ ಬಂದಾಗ ನಮಗನ್ನಿಸುತ್ತದೆ ಎಂಥ ಸಂಪತ್ತು ನಮ್ಮಲ್ಲಿದೆಯೆಂದು. ಸಹಜವಾಗಿಯೇ ಇದು ಬಂದಾಗ ಈ ಸಂಪತ್ತನ್ನು ಹೇಗೆ ಫಂಕ್ಷನಲ್ ಆಗಿ ಸಕ್ರಿಯವಾಗಿ ಉಪಯೋಗಿಸಬಹುದು. ಮತ್ತೆ ಅದನ್ನು ಹೇಗೆ ಆಸ್ತೆಟಿಕ್ ಆಗಿ ಉಪಯೋಗಿಸಬಹುದು ಎಂದು ನಾವು ಯೋಚನೆ ಮಾಡಬೇಕಾಗುತ್ತದೆ.

ಮೊದಲೇ ಅದಕ್ಕೆ ನಾನು ಭಾಷೆಯನ್ನು ತೆಗೆದುಕೊಂಡಿದ್ದೇನೆ. ಕಾಪಿ ಮಾಡುವುದು ಅಲ್ಲ , ಇದನ್ನು ಮಗುವಿನಲ್ಲಿ ಹೇಗೆ ಅಭಿವ್ಯಕ್ತಿಗೊಳಿಸಬೇಕು, ಅದಕ್ಕೋಸ್ಕರವೇ ನಾವು ಇದಕ್ಕೆ ಮಹತ್ವ ಕೊಡಬೇಕು ಎಂದು ನಾನು ಹೇಳುವುದು. ನಾನು ಬಹಳ ಸ್ಥೂಲವಾಗಿ ಇದನ್ನು ಹೇಳುವುದಕ್ಕೆ ಹೋಗುತ್ತಿದ್ದೇನೆ. ತಾವೂ ಸಹ ಸೂಕ್ಷ್ಮವಾಗಿ ಆಮೇಲೆ ಯೋಚನೆ ಮಾಡಿ. ನಾವು ಸ್ಥೂಲವಾಗಿ ಹೋದರೂ ಕೂಡಾ ನಾವು ಹೇಗೆ ಶಬ್ದಗಳನ್ನು ಉಪಯೋಗಿಸುತ್ತೇವೆ, ಮಕ್ಕಳಿಗೆ ಶಬ್ದಗಳನ್ನು ಕಲಿಸಬೇಕಾದರೂ ಕೂಡಾ ಅದನ್ನು ಪ್ರಯೋಗ ಮಾಡುವುದಕ್ಕೂ ಕೂಡಾ ನಾವು ಹೇಳುತ್ತೇವೆ. ಉದಾಹರಣೆಗೆ 'ಉತ್ತಮ' ಎನ್ನುವ ಶಬ್ದ ಬಂದುಬಿಟ್ಟರೆ, ಪರೀಕ್ಷೆಯಲ್ಲಿ ನಾವು ಇದನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿ ಎಂದು ಹೇಳುತ್ತೇವೆ. ಆಮೇಲೆ ಅವನು ಉತ್ತಮ ಪ್ರಭುತ್ವ ಇತ್ತು , ಉತ್ತಮ ಮನುಷ್ಯ ಆಗಿದ್ದ ಎಂದು ಉತ್ತರ ಕೊಡುತ್ತಾನೆ. ನಮ್ಮ ಅಧ್ಯಾಪಕರು ಇದನ್ನು ಸ್ವಂತವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಮಹತ್ವ ಕೊಟ್ಟಿಲ್ಲ. ಬೇರೆ ರೀತಿಯಲ್ಲಿ ನಾನು ಹೇಳುತ್ತೇನೆ, ಇಲ್ಲ ಎನ್ನುವುದಕ್ಕೆ ಬೇಡ ಎಂದು, ಅಥವಾ ಒಳ್ಳೆಯದು ಎನ್ನುವುದಕ್ಕೆ ಉತ್ತಮ ಎನ್ನತಕ್ಕ ಶಬ್ದಗಳು ಇವೆ. ಅನೇಕ ವಿರೋಧಿ ಶಬ್ದಗಳನ್ನು , ಸಿನಾನಿಮ್ಸ್‌ಗಳನ್ನು ನಾವು ಮಕ್ಕಳಿಗೆ ಕಲಿಸಿಕೊಡುತ್ತೇವೆ. ಈಡಿಯಂಸ್, ವಾಗ್‌ರೂಢಿಗಳು, ಗಾದೆಗಳು, ಕಥೆಗಳನ್ನು ಹೇಳಿಕೊಡುತ್ತೇವೆ. ನಾವು ಹೇಳಿದ ಕಥೆ ಅವನು ಹೇಳಿದ ಹಾಗೇ ಇರಬೇಕು. ಅವನು ತಲೆಯೊಳಗೆ ಇದು ಬಂದಾಗ ಅವನು ಹೇಗೆ ಇಲ್ಲದ್ದನ್ನು ಇಂಟರ್‌ಪ್ರಿಟ್ ಮಾಡಬಹುದು, ಈ ರೀತಿಯಾಗಿ ಅವನು ಇಂಟರ್‌ಪ್ರಿಟ್ ಮಾಡಿದಾಗ ಅದು ಎಷ್ಟು ಮಹತ್ವಪೂರ್ಣವಾಗಬಹುದು, ಒಂದಲ್ಲ ಒಂದು ರೀತಿ ಇದನ್ನು ಅವನು ರೀಆಕ್ಟ್

ಮಾಡುತ್ತಿದ್ದಾನೆ. ಅಕ್ಕಪಕ್ಕದ ಜನಕ್ಕೆ ಅಕ್ಕಪಕ್ಕದ ವಾತಾವರಣಕ್ಕೆ ತಕ್ಕ ಹಾಗೆ ಅಂದಾಗ, ಭಾಷೆಯ ಸಂಪೂರ್ಣ ಮಾತು ಬೇರೆ ತರಹ ಆಗಿಬಿಡುತ್ತದೆ. ನಾವು ಕೂಡ ಕಲಿಸಿದ ದೃಷ್ಟಿಕೋನ ಬೇರೆ ಆಗಿಬಿಡುತ್ತದೆ.

ಇದಕ್ಕೆ ನಾನು ಸ್ಥೂಲವಾಗಿ ಉದಾಹರಣೆ ಕೊಡುತ್ತಿದ್ದೇನೆ. ಉದಾಹರಣೆಗೆ : ಒಬ್ಬ ಕೈಕೊಟ್ಟ , ಮೋಸ ಮಾಡಿದ ಅಂತ ಹೇಳುತ್ತೇವೆ. ಹಾಗೆಯೇ, ಕೈಕೊಟ್ಟ , ತಿರುಪತಿ ತೋರಿಸಿದ, ನಾಮ ಹಾಕಿದ ಇವೆಲ್ಲಾ ಶಬ್ದಗಳು ನಮ್ಮಲ್ಲಿವೆ, ಈಡಿಯಂಸ್ ಇವೆ. ಆದರೆ ನಾವೇನು ಮಾಡುತ್ತೇವೆಂದರೆ, ಇದನ್ನು ಬಾಯಿಪಾಠ ಮಾಡಿಕೊಂಡು ಬಾ ಎಂದು ಹೇಳುತ್ತೇವೆ. ಇದನ್ನು ಹೇಗೆ ಫಂಕ್ಷನಲ್ ಆಗಿ ಸಕ್ರಿಯವಾಗಿ ಉಪಯೋಗ ಮಾಡಬಹುದು, ಸಂಭಾಷಣೆ ಮಾಡಬಹುದು, ನಾಟಕ ಮಾಡಬಹುದು ಎಂದು ನಾವು ಹೇಳುವುದಿಲ್ಲ. ನಾವು ಅವನು ಕೈಕೊಟ್ಟ ಅಂತ ಹೇಳಬಹುದು, ಇನ್ನೊಬ್ಬ ಕೇಳಬಹುದು. ಅಂದರೆ ಏನು ಮಾಡಿದ ಎಂದು, ತಿರುಪತಿ ಹಾಕಿದ, ತಿರುಪತಿಗೆ ಕಳುಹಿಸಿಬಿಟ್ಟ ಅಂದರೆ, ಈ ಸಂಭಾಷಣೆಯಲ್ಲಿ ಒಬ್ಬನಿಗೆ ಇದು ಅರ್ಥವಾಗುತ್ತದೆ, ಇನ್ನೊಬ್ಬನಿಗೆ ಅರ್ಥವಾಗುವುದಿಲ್ಲ; ಸಂಭಾಷಣೆ ನಾಟಕೀಯವಾಗಿ, ಸಕ್ರಿಯವಾಗಿ ಬರಬೇಕು. ಅದೇ ರೀತಿಯಲ್ಲಿ ಯಾವುದೋ ಒಂದು ಶಬ್ದ ತೆಗೆದುಕೊಳ್ಳಿ , 'ಏನು ಮಾಡಿದೆಪ್ಪಾ' ನಾವು ಪುಸ್ತಕದಲ್ಲಿ ಇದನ್ನು ಬರೆಯುವಾಗ ಏನು ಮಾಡಿದೆ ಎಂದು ಬರೆಯಬಹುದು. ಆದರೆ ಮಾತನಾಡಬೇಕಾದರೆ, ಏನು ಮಾಡಿದೆ ಎಂದು ಕೇಳುವುದಿಲ್ಲ. ನಾವು ಚಿಕ್ಕ ಹುಡುಗನಿಗೆ ಗೊತ್ತಾಗುವಂತೆ ನಮ್ಮ ಭಾವನೆಗಳನ್ನು ಭಾಷೆಯಲ್ಲಿ ಉಪಯೋಗಿಸುತ್ತಾ ಇಲ್ಲ. ಉಪಯೋಗಿಸುವಾಗ ಭಾಷೆಯನ್ನೇ ಸಾಯಿಸುತ್ತೇವೆ. ನಾವು ಉಪಯೋಗಿಸುವ ಭಾಷೆ ಏನು ಅರ್ಥ ಕೊಡುತ್ತದೆ ಎನ್ನುವುದನ್ನು ಮರೆತುಬಿಡುತ್ತೇವೆ.

ನಾವು ಹುಡುಗರಿಗೆ ಹೇಳಬೇಕಾದರೂ ಕೂಡಾ ಏನು ಅರ್ಥವಾಗುತ್ತದೆ ಎನ್ನುವುದನ್ನು ನಾವು ಮರೆತುಬಿಡುತ್ತೇವೆ. ನಮಗೆ ಪುಸ್ತಕದ ಪಾಠ, ಎಂದ ಕೂಡಲೇ ಯಾವ ರೀತಿಯಲ್ಲಿ ಅದು ನಮಗೆ ಅದು ಡೆಡ್ ಆಗಿಬಿಡುತ್ತದೆ ಎಂದರೆ, ಕೊನೆಗೆ ಹುಡುಗರು ಟೆಕ್ಸ್ಟ್‌ಬುಕ್ ಓದುವುದಕ್ಕೆ ಇಷ್ಟಪಡುವುದಿಲ್ಲ, ಹುಡುಗರಲ್ಲಿ ಬರಬರುತ್ತಾ ಕಾಲೇಜ್ ಮಟ್ಟದಲ್ಲಿ ಟೆಕ್ಸ್ಟ್‌ಬುಕ್ಸ್ ಓದುವುದಿಲ್ಲ, ಏಕೆ ಓದಬೇಕು, ಪರೀಕ್ಷೆಯಲ್ಲಿ ಇದು ಬರುವುದಿಲ್ಲ, ಏಕೆ ಓದಬೇಕು, ನಮಗೆ ಪರೀಕ್ಷೆಯಲ್ಲಿ ಚಾಯ್ಸ್ ಇರುತ್ತದೆ, ಎನ್ನುವುದು ಇದೆ. ನಮ್ಮ ಪರೀಕ್ಷಾ ಪದ್ಧತಿಯೂ ಕೂಡಾ ಹಾಗೆಯೇ ಇದೆ. ನೂರು ಮಾರ್ಕ್ಸ್‌ಗಳನ್ನು ಇಟ್ಟಿರುವಾಗ 40 ಮಾರ್ಕ್ಸ್ ಬಂದರೆ ಪಾಸ್ ಮಾಡುತ್ತಾರೆ. ನೂರು ಮಾರ್ಕ್ಸ್ ನಮಗೆ ಬೇಕಾಗಿಲ್ಲ ಎನ್ನುವ ಆಕ್ಸೆಪ್ಟ್ ಮಾಡುವುದರಲ್ಲಿ ನಮ್ಮಲ್ಲಿ ಬಡತನ ಇದೆ. ಈ ಬಡತನ ಏಕೆ ಬರುತ್ತದೆ ಎಂದರೆ, ನಮ್ಮ ಸಿಸ್ಟಂ, ಪದ್ಧತಿ ಯಾಂತ್ರಿಕವಾಗಿದೆ. ಇದನ್ನು ನಾವು ಭಾಷೆಯಲ್ಲಿ ಮೊದಲಿನಿಂದಲೂ ಕಾಣುತ್ತಿದ್ದೇವೆ.

ಇನ್ನೊಂದು ಗಾದೆ. 'ಕುಣಿಯಲಾರದ ಸೂಳೆಗೆ ನೆಲ ಡೊಂಕು' ಎಂದು ಹೇಳುತ್ತೇವೆ. ಇದಕ್ಕೊಂದು ಉದಾಹರಣೆ ಮಾಡು ಎಂದು ಹೇಳಿದಾಗ ಅವನು ಪುಸ್ತಕ ಓದುತ್ತಾನೆ, ಅಜ್ಜ ಅಜ್ಜಿಯನ್ನು ಕೇಳುತ್ತಾನೆ, ನಾವು .... ಹೇಳಬೇಕು ಎಂದರೆ ಎಲ್ಲೋ ಅವನ್ನು ನಾವು ಪ್ರವೋಕ್ ಮಾಡಬೇಕಾಗುತ್ತದೆ. 'ಕುಣಿಯಲಾರದ ಸೂಳೆಗೆ ನೆಲ ಡೊಂಕು' ಎನ್ನುವುದು ಯಾವ ಸಂದರ್ಭದಲ್ಲಿ ಬಂತು ಅದನ್ನು ಎಲ್ಲಿ ಹೇಗೆ ಉಪಯೋಗಿಸಬೇಕು, ಇದನ್ನು ಮಿತ್ರರಲ್ಲಿ ಹೇಗೆ, ಗೆಳೆಯ ಗೆಳೆಯರಲ್ಲಿ ಹೇಗೆ ಉಪಯೋಗಿಸಬೇಕು, ನನಗೆ ಗೊತ್ತಿಲ್ಲ ನನಗೆ ಬರುವುದಿಲ್ಲ, ಎಂದು ಹೇಳುವುದಕ್ಕೋಸ್ಕರ ಹೇಗೆ ನೆಪ ಹಾಕಿದ, ಬಹುಶಃ ಕುಣಿಯಲಾರದ ಸೂಳೆ ಎನ್ನುವುದಕ್ಕೆ ಸರಿಯಾದ ಅರ್ಥವನ್ನು ಅವನು ಉಪಯೋಗಿಸಿಕೊಂಡಾಗ ಅವನ ಬಾಯಲ್ಲಿ ಈ ಗಾದೆ ಬಂದಾಗ ಹೊಸ ಅರ್ಥ ಮಿನುಗು ಇದಕ್ಕೆ ಬರುತ್ತದೆ. ಹೊಸ ಬೆಳಕು ಇದಕ್ಕೆ ಬರುತ್ತದೆ.

ಈಗ ಯಾವುದಾದರೂ ಒಂದು ಕಥೆಯನ್ನು ತೆಗೆದುಕೊಳ್ಳಿ. ಇಲಿ ಸಿಂಹದ ಕಥೆಯನ್ನೇ ತೆಗೆದುಕೊಳ್ಳಿ. ಇದು ಎಲ್ಲರಿಗೂ ಗೊತ್ತಿದೆ. ಒಂದಾನೊಂದು ಕಾಡಿನಲ್ಲಿ ಒಂದು ಸಿಂಹ ಇತ್ತು, ಹಾಗೆಯೇ ಇಲಿಯೂ ಇತ್ತು. ಸಿಂಹ ಎಂದು ಅಂದಕೂಡಲೆ, ಇಲಿ ಎಂದು ಅಂದ ಕೂಡಲೆ ನಮ್ಮಲ್ಲಿ ಇಲಿಯ, ಸಿಂಹದ ಒಂದು ಇಮೇಜ್ ಬರುತ್ತದೆ. ಅದರ ಬಗ್ಗೆ ಆಕಾರ ಪ್ರಕಾರದ ಬಗ್ಗೆ ಸೆಲೆಕ್ಷನ್ ಬಂದಾಗ ಇಲಿ ಬಹಳ ಚಿಕ್ಕದು, ಸಿಂಹ ಬಹಳ ದೊಡ್ಡದು ಎಂದು ಅವನಲ್ಲಿ ಬಂದಕೂಡಲೇ ಅವನ ಧ್ವನಿಯಲ್ಲಿಯೂ ಕೂಡಾ ಚಿಕ್ಕದು, ದೊಡ್ಡದು ಎಂದು ಬರುತ್ತದೆ. ಇದು ಅಷ್ಟು ಸಕ್ರಿಯವಾಗಿರುತ್ತದೆ ; ಒಂದು ಕಥೆಯನ್ನು ಹೇಳುವುದರಲ್ಲಿ ನಾವು ಎಷ್ಟು ವೆರೈಟಿಯನ್ನು ತೋರಿಸಬಹುದು ಎಷ್ಟು ನಾಟಕೀಯವಾಗಿ ಮಾಡಬಹುದು ಎನ್ನುವುದು ಗೊತ್ತಾಗುತ್ತದೆ. ಇಂಥ ಕಥೆಗಳನ್ನು ಒಂದು ವರ್ಷಕ್ಕೆ 5 ಹೇಳಿದರೆ ಸಾಕು. ಕೊನೆಗೆ, ಇವುಗಳ ಪೈಕಿ ಮೂರನ್ನು ಉಪಯೋಗ ಮಾಡಿ ಎಂದು ಪರೀಕ್ಷಾ ದೃಷ್ಟಿಯಿಂದ ನಾವು ಮಕ್ಕಳಿಗೆ ಚಾಯ್ಸ್ ಕೊಟ್ಟಿರುತ್ತೇವೆ. ನಾವು ಕೇವಲ ಇಷ್ಟನ್ನು ಚಾಯ್ಸ್ ಕೊಡುವುದು ಇಲ್ಲ. ಜಗತ್ತನ್ನೇ ಚಾಯ್ಸ್ ಆಗಿ ಕೊಡಬೇಕೇ ಹೊರತು ನಾವೇ ಮೊದಲು ಹತ್ತು ಪ್ರಶ್ನೆಗಳನ್ನು ಕೊಟ್ಟುಬಿಟ್ಟು ಅದರಲ್ಲಿ ಎರಡು ಮೂರು ಎಂದು ಚಾಯ್ಸ್ ಕೊಡುವುದು ಇಲ್ಲ. ಚಾಯ್ಸ್ ಇದರಲ್ಲಿ ಇರಬೇಕು, ಅವನು ಯಾವುದನ್ನು ಲೈಕ್ ಮಾಡುತ್ತಾನೆಯೋ, ಅವನಿಗೆ ಯಾವುದರಲ್ಲಿ ಶಕ್ತಿ ಇದೆಯೋ ಅವನಿಗೆ ಯಾವುದರಲ್ಲಿ ಅಟ್ರಾಕ್ಷನ್ ಇದೆಯೋ ಅದರಲ್ಲಿ ಚಾಯ್ಸ್ ಕೊಡಬೇಕು. ಆಗ ನಮಗೆ ಯಾವ ಮಗುವೂ ಹಾಂಡಿಕ್ಯಾಪ್ಡ್ ಆಗುವುದಿಲ್ಲ, ಯಾವ ಮಗುವೂ ಅಸುಂದರ ಆಗುವುದಿಲ್ಲ, ಯಾವ ಅಶಿಕ್ಷಿತ, ಬ್ಯಾಕ್‌ವರ್ಡ್ ಅಥವಾ ಷೆಡ್ಯೂಲ್ಡ್ ಕ್ಯಾಸ್ಟ್ ಎಂದು ಬರುವುದಿಲ್ಲ.

ಪ್ರತಿಯೊಬ್ಬರಿಗೂ ತನ್ನ ಜೀವನದಲ್ಲಿ, ಅಕ್ಕಪಕ್ಕದ ಜೀವನದ ಒಂದಲ್ಲ ಒಂದು ಅಂಶ ಇರುತ್ತದೆ. ಷೆಡ್ಯೂಲ್ಡ್ ಕ್ಯಾಸ್ಟ್ ಎಂದಕೂಡಲೇ ನಾವು ಯಾವಾಗಲೂ

ಅನ್‌ಎಜುಕೇಟೆಡ್, ಇಲ್ಲಿಟರಸಿ ಎಂದು ಹೇಳುತ್ತೇವೆ. ನಮ್ಮಲ್ಲಿ ಸಾಕ್ಷರತೆ ಬಂದ ಕೂಡಲೆ ನಾವೆಲ್ಲ ವಿದ್ಯಾವಂತರು ಎಂದು ತಿಳಿದುಕೊಳ್ಳುತ್ತೇವೆ, ಇದು ನಮ್ಮಲ್ಲಿರುವ ಮೂರ್ಖತನ. ಈ ದೃಷ್ಟಿಯಲ್ಲಿ ನಮ್ಮ ಕಾಲೇಜು ಹುಡುಗರು ಸಾಕ್ಷರಸ್ಥರಾಗಿದ್ದಾರೆಂದು ಅವರು ಎಷ್ಟು ಅಸಂಸ್ಕೃತರಾಗಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತು. ಜೀವನದ ಜೊತೆಯಲ್ಲಿ ಅಖಂಡವಾಗಿ ಬೆಳೆಯಬೇಕಾದ್ದು ಜೀವನದ ದರ್ಶನ. ಮೊದಲು ನಾವು ಇದನ್ನು ಹೀಗೆ ಪ್ರತ್ಯೇಕ ಪ್ರತ್ಯಯವಾಗಿ ತೋರಿಸುವುದರಿಂದ ಇವರಿಗೆ ಈ ಸಮಸ್ಯೆ ಬಂದುಬಿಟ್ಟಿದೆ.

ಇನ್ನೊಂದು ಅವರ ದೇಹನೆ-ನಾನು ಮೊದಲೇ ಹೇಳಿದ ಹಾಗೆ, ಒಂದು ಸ್ಕೂಲಿನಲ್ಲಿ ಒಬ್ಬರಲ್ಲ 40 ಹುಡುಗರು ಇರಬಹುದು, 50-60 ಹುಡುಗರು ಇರಬಹುದು. ನನಗೆ ಎಷ್ಟು ಹುಡುಗರು ಇದ್ದರೂ ಕೂಡಾ ನಷ್ಟ ಅನ್ನಿಸುವುದಿಲ್ಲ , ಹೆಚ್ಚು ಲಾಭ ಅನ್ನಿಸುತ್ತದೆ. ಒಬ್ಬೊಬ್ಬರಿಗೆ ಒಂದೊಂದು ವೈಯಕ್ತಿಕವಾದ ಲಿಮಿಟೇಷನ್ ಇರಬಹುದು, ಅದೇ ವ್ಯಕ್ತಿಗಳು ಒಂದು ಗುಂಪಲ್ಲಿ ಬಂದಾಗ ಅದಕ್ಕೆ ಎಷ್ಟು ಗುಣಾಕಾರಗಳು ಭಾಗಾಕಾರಗಳು ಆಗಿ ನಮಗೆ ದೊಡ್ಡ ಅನುಭವ ಬರುತ್ತದೆ. 60 ಹುಡುಗರನ್ನು ಸೇರಿಸಿಕೊಂಡಾಗ, ಅವರ ಫಿಜಿಕಲ್ ಸ್ಟ್ರಕ್‌ಚರ್ ನೋಡಿದಾಗ ಅವರ ಆಕಾರಗಳನ್ನು ನಾವು ನೋಡಿದಾಗ ಎಲ್ಲರೂ ಒಂದೇ ತರಹ ಕೂತುಕೊಳ್ಳುವುದಕ್ಕೆ ಸಾಧ್ಯವಿಲ್ಲ , ಆದರೆ ಸಾಮಾಜಿಕವಾಗಿ ನಾವು ಸಿವಿಲೈಸ್ಡ್ ಎಂದಾಗ ಏನು ಮಾಡುತ್ತೇವೆಂದರೆ, ಎಲ್ಲರಿಗೂ ಒಂದೇ ತರಹ ಖುರ್ಚಿಯನ್ನು ಕೊಡುತ್ತೇವೆ, ಒಂದೇ ತರಹದ ಬಟ್ಟೆಯನ್ನು ಕೊಡುತ್ತೇವೆ, ಚೀಲವನ್ನು ಕೊಡುತ್ತೇವೆ, ಯೂನಿಫಾರಂ ಎಂದು ಕೊಡುತ್ತೇವೆ. ಈ ಬಗ್ಗೆ ನಾವು ಯೋಚನೆ ಮಾಡಿದಾಗ ಫಾರ್ಮಲ್ ಆಗಿ ನಾವು ಎಷ್ಟು ಇವರನ್ನು ಅನ್‌ನ್ಯಾಚುರಲ್ ಆಗಿ ಹಿಡಿದು ಬಿಡುತ್ತೇವೆ. ಅದಕ್ಕೋಸ್ಕರವಾಗಿ ನಾವು ಸಹಜವಾಗಿ ಹುಟ್ಟಿದವರು ನಮ್ಮ ಕಾಲಿಗೆ ಬೂಟನ್ನು ಸರಿಯಾಗಿ ಅಡ್ಜಸ್ಟ್ ಮಾಡಿಕೊಳ್ಳಬೇಕಾಗುತ್ತದೆ. ನಮ್ಮ ಚಡ್ಡಿಗಳನ್ನು ಕೂಡಾ ಬಾಡಿಗೆ ಅಡ್ಜಸ್ಟ್ ಮಾಡಿಕೊಳ್ಳಬೇಕಾಗುತ್ತದೆ. ಖುರ್ಚಿಗಳನ್ನು ಹಿಪ್ಸ್‌ಗೆ ಸರಿಯಾಗಿ ಅಡ್ಜಸ್ಟ್ ಮಾಡಿಕೊಳ್ಳಬೇಕಾಗುತ್ತದೆ. ಹೀಗೆ ಎಲ್ಲಾ ಒಂದು ರೀತಿಯಲ್ಲಿ ಯಾಂತ್ರಿಕವಾಗಿ, ನಾವು ನಮ್ಮ ಸ್ವಂತಿಕೆಯನ್ನು ಕಳೆದುಕೊಳ್ಳಬೇಕಾಗಿದೆ. ನೂರಾರು ಹುಡುಗರು ಬಂದಾಗ ನೂರಾರು ತರಹ ಕೂತುಕೊಳ್ಳುತ್ತಾರೆ. ನೂರು ತರಹ ಎದ್ದು ನಿಂತುಕೊಳ್ಳುತ್ತಾರೆ, ನೂರು ತರಹ ಕೈ ಎತ್ತುತ್ತಾರೆ. ಇದೇ ಅವರಲ್ಲಿರುವ ವೈಶಿಷ್ಟ್ಯ. ಆದರೆ ನೂರು ಜನರೂ ಒಟ್ಟಿಗೆ ಬಂದಾಗಲೂ ಕೂಡಾ ಒಂದೇ ತರಹ ಮಿಲಿಟರಿ ತರಹ ಇರುವುದಿಲ್ಲ, ಅದರಲ್ಲಿ ಒಂದು ಷೇಡ್ ಬಂದುಬಿಡುತ್ತದೆ. ಇದೇ ಅಸ್ಥೆಟಿಕ್, ಇದೂ ಅವರಿಗೆ ಗೊತ್ತಾಗುತ್ತದೆ. ಮತ್ತು ನಾನು ಹತ್ತು ಜನರ ಜೊತೆಗೆ ಬಂದಾಗ ಎಷ್ಟು ಮಹತ್ವ ಬಂದುಬಿಡುತ್ತದೆ, ಎಷ್ಟು ದೊಡ್ಡ ಶಕ್ತಿ ಬರುತ್ತದೆ, ನಾನೂ ದೊಡ್ಡ ಗುಂಪಿನ ಅಂಗವಾಗಿದ್ದೇನೆ ಎನ್ನುವ ಭಾವನೆ ಅವನಲ್ಲಿ ಬಂದುಬಿಡುತ್ತದೆ. ಈ ರೀತಿಯಾಗಿ ನೂರು ಹುಡುಗರನ್ನು ಒಂದು ನಾಟಕದಲ್ಲಿ

ಉಪಯೋಗಿಸಿಕೊಳ್ಳಿ ಅಥವಾ ಒಂದು ಎಕ್ಸರ್‌ಸೈಸ್‌ನಲ್ಲಿ ಉಪಯೋಗಿಸಿಕೊಳ್ಳಿ, ಅಥವಾ ಎಲ್ಲಿಯೋ ವಿಧಾನಸೌಧಕ್ಕೆ ಹೋಗಬೇಕಾದರೆ, ಉಪಯೋಗಿಸಿಕೊಳ್ಳಿ. ರೋಡ್ ಕ್ರಾಸ್ ಮಾಡಬೇಕಾದರೆ, ಪಾರ್ಕ್‌ನಲ್ಲಿ ಹೋಗಬೇಕಾದರೆ, ಇವರು ಗುಂಪಿನಲ್ಲಿ ಹೋಗಬೇಕಾಗುತ್ತದೆ. ಇವರನ್ನು ನಾವು ಲೈನ್‌ನಲ್ಲಿ ಬನ್ನಿ ಎಂದು ಪ್ರತಿಯೊಂದು ಕಡೆಯೂ ನಮಗೆ ಅನುಕೂಲವಾದ ಮಾರ್ಗವನ್ನು ನಾವು ನೋಡುತ್ತೇವೆ. ಆದಕ್ಕೋಸ್ಕರ ಲೈನು ಬಹಳ ಸುಲಭವಾದ ಮಾರ್ಗ. ಲೈನು ಇಲ್ಲದೆ ಕೂಡ ಆರ್ಗನೈಸ್ ಆಗಿರಬಹುದು, ಇದೇ ನಮ್ಮ ಸ್ವಂತಿಕೆ. ಇದೇ ನಮ್ಮಲ್ಲಿರುವುದು. ಅವನಿಗೆ ಗೊತ್ತಿಲ್ಲದೆ, ಸ್ವಂತಿಕೆಯನ್ನು ಒರಿಜಿನಾಲಿಟಿಯನ್ನು ಅವನು ಮರೆತುಬಿಡುತ್ತಾನೆ. ಇದನ್ನೂ ಕೂಡಾ ಅವನು ಫಂಕ್ಷನಲ್ ಆಗಿ ಯೂಸ್ ಮಾಡುವಂಥ ಸಂದರ್ಭ ಇದೆ.

ಇನ್ನು ಮೂರನೆಯದು, ಸ್ಕೂಲಿನಲ್ಲಿ ಸಿಕ್ಕುವಂಥ ವಸ್ತುಗಳು. ಒಂದು ಖುರ್ಚಿ, ಒಂದು ಟೇಬಲ್ ತೆಗೆದುಕೊಳ್ಳಿ, ಬೇಕಾದಷ್ಟು ವಸ್ತುಗಳು ಇವೆ. ಒಂದು ರೂಮು ಆಗಲಿ, ಕೊಠಡಿಯಾಗಲಿ, ಹಿಂಬಾಗಿಲು ಆಗಲಿ, ಎಲ್ಲದಕ್ಕೂ ಒಂದು ಇಂಡಿಪೆಂಡೆಂಟ್ ಷೇಡ್ ಇದೆ. ಅದೇ ರೀತಿಯಾಗಿ ಟೇಬಲ್ ಖುರ್ಚಿಗಳನ್ನು ಸೇರಿಸಿಕೊಂಡಾಗಲಿ, ಬೇರೆ ಯಾವ ವಸ್ತುಗಳನ್ನು ಸೇರಿಸಿಕೊಂಡಾಗಲೀ ಅವನು ಬಿಲ್ಡಿಂಗ್ ಕಟ್ಟಬಹುದು, ಅಥವಾ ಫ್ಯಾಕ್ಟರಿ ಕಟ್ಟಬಹುದು, ಬ್ರಿಡ್ಜ್ ಕಟ್ಟಬಹುದು. ಇಲ್ಲಿಯೂ ಕೂಡಾ ಅವನಿಗೆ ಅಸ್ಥೆಟಿಕ್ ಸೆನ್ಸ್ ಬರುತ್ತದೆ. ಇದರಲ್ಲಿ ಅವನಿಗೆ ಕರೆಕ್ಟ್ ಮಾಡುವುದಕ್ಕೆ ಅವಕಾಶವಿರುತ್ತದೆ. ಈ ರೀತಿಯಾಗಿ ಪ್ರತಿಯೊಂದು ಅಕ್ಕಪಕ್ಕದ ವಸ್ತುವೂ ಕೂಡಾ ಒಂದಲ್ಲ ಒಂದು ರೀತಿಯಿಂದ ತನ್ನ ಕ್ರಿಯೇಟಿವಿಟಿಯ ಒಂದು ಭಾಗವಾಗಿ ಬಿಡುತ್ತದೆ.

ಈಗ ಸಂಗೀತ ಅಥವಾ ಡ್ಯಾನ್ಸ್ ತೆಗೆದುಕೊಳ್ಳಿ, ಇದಕ್ಕೆ ಕ್ಲಾಸಿಕಲ್ ಡ್ಯಾನ್ಸರ್ ಕರೆಯಿಸುತ್ತಾರೆ ಅಥವಾ ಈ ಮ್ಯೂಸಿಕ್‌ನಲ್ಲಿ ಮತ್ತೆ ನಮ್ಮ ಹುಡುಗರನ್ನು ಹಾಳು ಮಾಡುತ್ತಾರೆ. ಇಲ್ಲಿ ಸರಿಗಮ, ಸ್ವರಗಳು 7 ಎಂದು ಪಾಠ ಹೇಳಿಕೊಡುತ್ತಾರೆ. ಈ ರೀತಿಯಾಗಿ ಹೇಳಿಕೊಟ್ಟು ಸ್ವರಗಳನ್ನು ಸಾಯಿಸಿಬಿಡುತ್ತಾರೆ. ಕ್ಲಾಸಿಕಲ್ ಮ್ಯೂಜಿಕ್‌ನಲ್ಲಿ ಸಪ್ತಸ್ವರಗಳು ಎಂದು ಹೇಳಿಕೊಡುತ್ತಾರೆ. ಡ್ಯಾನ್ಸ್ ಎಂದ ಕೂಡಲೆ, ಏಕತಾಳ, ದ್ವಿತಾಳ, ತ್ರಿತಾಳ ಮತ್ತು ಚೌತಾಳ ಎಂದು ತಾಳಕ್ಕೆ ಸಿಕ್ಕಿಸಿಬಿಡುತ್ತಾರೆ. ಆದರೆ ಅವನಲ್ಲಿ ಸಹಜವಾದ ಸೆನ್ಸ್ ಇದೆ, ರಿದಂ ಸೆನ್ಸ್ ಏನು ಇದೆ, ಅದು ನಮ್ಮ ಭಾಷೆಗೆ ಹೊಂದಿಕೊಂಡ ಹಾಗೆ ಸಹಜವಾಗಿ ಬಂದಿದ್ದು. ಇದು ನಮ್ಮ ಉಸಿರಿಗೆ ಹೊಂದಿಕೊಂಡು ಸಹಜವಾಗಿ ಬಂದದ್ದು. ಈ ಒಂದು ನೇಚರನ್ನು, ಪ್ರಕೃತಿಯಲ್ಲಿ ಬಂದಿದ್ದದನ್ನು ನಾವು ಮರೆತುಬಿಡುತ್ತೇವೆ. ಆದರೆ ಸಂಗೀತ ಎಂದಾಗ ಏನು ಮಾಡಬೇಕು ಎಂದರೆ ಇಲ್ಲಿ ಕ್ಲಾಸಿಕಲ್ ಮ್ಯೂಜಿಕ್ ತರಲೇಬಾರದು. ಸಂಗೀತಕ್ಕೆ ಅವರು ಮಹಾ ಶತ್ರುಗಳಾಗಿ ಬಿಡುತ್ತಾರೆ. ಏಕೆಂದರೆ ಅಲ್ಲಿ ಒಂದು ಅಕ್ಸೆಪ್ಟೆಡ್ ರೆಡಿಮೇಡ್ ಕ್ಲೀಷೆ ಎಂದು ನಾವು ಯೂಸ್ ಮಾಡುತ್ತೇವೆ. ಆದರೆ

ಡ್ಯಾನ್ಸ್ ಎಂದ ಕೂಡಲೆ, ಅವನು ಕುಣಿಯುತ್ತಿರಬಹುದು, ನಡೆಯುತ್ತಿರಬಹುದು, ಏನು ಮಾಡುತ್ತಾನೆಂದು ಅದು ಯಾರಿಗೆ ಗೊತ್ತು ? ಅವನು ಅದನ್ನು ಹೇಗೆ ಅನುಭವಿಸುತ್ತಿದ್ದಾನೆಯೋ ಅದರ ಹಿಂದೆ ಅವನು ಮಾಡತಕ್ಕದ್ದು ಮುಖ್ಯವಾಗುತ್ತದೆ. ಅವನು ಕುಣಿಯುವುದು ನಿಜ, ಓಡುವುದು ನಿಜ, ಓಡುವುದು ಅವನಿಗೆ ಕುಣಿತವಾಗಿರಬಹುದು, ಕುಣಿಯುವುದೇ ಓಡಾಟವಾಗಿರಬಹುದು. ಅಲ್ಲಿ ಅವನ ಒಂದು ಸ್ವಂತಿಕೆ ಅಥವಾ ಇನ್‌ವಾಲ್ವ್‌ಮೆಂಟ್ ಏನು ಇದೆ ಅದು ಮುಖ್ಯ.

ಈಗ ಅವನ ಕೈಚೀಲವನ್ನು ತೆಗೆದುಕೊಂಡರೆ ಅಥವಾ ಪುಸ್ತಕದ ಚೀಲವನ್ನು ತೆಗೆದುಕೊಂಡರೆ ಅದರಲ್ಲಿ ಬೇಕಾದಷ್ಟು ಇನ್‌ಸ್ಟ್ರುಮೆಂಟ್ಸ್ ಸಿಕ್ಕಿಬಿಡುತ್ತವೆ. ಅವನು ಪುಸ್ತಕ ತೆಗೆದುಕೊಂಡು ಛೇರಿಗೆ ಬಾರಿಸಬಹುದು, ಟೇಬಲ್‌ಗೆ ಬಾರಿಸಬಹುದು, ಏನು ಬಾರಿಸಿದರೂ ಸಹ ಅದು ರಿದಂ ಆಗಿಬಿಡುತ್ತದೆ. ಮೊದಲು ತಬಲ ಬಾರಿಸಬೇಕಾದರೆ ಯಾವುದೋ ಒಂದು ಮಡಕೆ ತೆಗೆದುಕೊಂಡು ಬಾರಿಸಿರಬಹುದು ಅಥವಾ ತಮಾಷೆಗೆ ಬಾರಿಸಿರಬಹುದು, ಆಮೇಲೆ ಅವನಲ್ಲಿ ಒಂದು ಕ್ರಿಯೇಟಿವಿಟಿ ಬರುತ್ತದೆ. ಇದು ಅವನನ್ನು ಹೇಗೆ ಅಟ್ರಾಕ್ಟ್ ಮಾಡಿತು, ಹೇಗೆ ಡೆವಲಪ್ ಆಯಿತು, ಮತ್ತೆ ಅವನು ಟೇಬಲ್, ಛೇರ್‌ಗೆ ಅಥವಾ ಒಂದು ಮರದ ತುಂಡನ್ನು ತೆಗೆದುಕೊಂಡು ಆಗಲೀ ಅಥವಾ ಕಲ್ಲಿನ ಹರಳು, ಸಣ್ಣದಾಗಲೀ ದೊಡ್ಡದಾಗಲಿ ತೆಗೆದುಕೊಂಡು ಚಿಕ್ಕಧ್ವನಿ ಮತ್ತು ದೊಡ್ಡ ಧ್ವನಿಯನ್ನು ಮಾಡಿ ಅದರಲ್ಲಿಯೇ ರಿದಂ ಅನ್ನು ಸೆಟ್ ಮಾಡಬಹುದು. ಮತ್ತೆ ಅವನಲ್ಲಿ ಇನ್‌ಸ್ಟ್ರುಮೆಂಟ್ ಬಾಕ್ಸ್ ಇದೆ, ರೂಲರ್ ಇದೆ, ಸ್ಕೂಲ್‌ಬ್ಯಾಗ್ ಇದೆ, ಷೂ ಹಾಕಿಕೊಳ್ಳುತ್ತಾನೆ. ಇದರಲ್ಲಿ ಉದ್ಭವವಾಗತಕ್ಕ ಶಬ್ದಗಳನ್ನು ಅಥವಾ ರಿದಂ ಅನ್ನು ಅವನು ಮ್ಯೂಜಿಕ್ ಆಗಿ ಉಪಯೋಗವಾಗಬಹುದು. ಇಷ್ಟೇ ಅಲ್ಲ, ಅವನು ಹಾಡುವಾಗಲೂ ಕೂಡಾ ಹೇಗೆ ಧ್ವನಿ ಮಾಡುತ್ತಾನೆ, ಮತ್ತು ಅವನು ಆಕಳಿಸಿದರೂ ಅದು ಸಂಗೀತವಾಗಬಹುದು. ಆಕಳಿಸಿದರೂ ಆಗಲಿ, ಸೀನಿದರೆ ಆಗಲೀ ಅಥವಾ ಹತ್ತು ಜನ ಸೇರಿಕೊಂಡು ಸೀನಿದರೆ ಅದು ರಿದಂ ಆಗಬಹುದು, ಒಟ್ಟಿಗೆ ಕೆಮ್ಮಿದರೆ ಅದೂ ಕೂಡಾ ಮ್ಯಾಜಿಕ್ ಆಗಿ ಶುರುವಾಗಬಹುದು. ಇದೆಲ್ಲಾ ಮಾಡಿದರೆ ನಾವು ಅಸಭ್ಯತನ ಎಂದು ತಿಳಿದುಕೊಳ್ಳಬಹುದು. ಆದರೆ ಒಂದಲ್ಲ ಒಂದು ರೀತಿಯಲ್ಲಿ ನಮ್ಮನ್ನು ನಾವೇ ಕುಬ್ಜರನ್ನಾಗಿ, ವಾಮನರನ್ನಾಗಿ ಮಾಡಿಕೊಳ್ಳುತ್ತಿದ್ದೇವೆ.

ಈಗಿನ ಸಂದರ್ಭದಲ್ಲಿ ನಾವು ಇರುವ ಮಟ್ಟದಲ್ಲಿ ನಾವು ಅಮೇರಿಕಾಕ್ಕೆ ಹೋಗಬೇಕಾಗಿಲ್ಲ ಅಥವಾ ರಷ್ಯಾಕ್ಕೆ ಹೋಗಬೇಕಾಗಿಲ್ಲ. ನಮ್ಮ ದೇಶದಲ್ಲಿಯೇ ನಾವಿರುವ ಮಟ್ಟದಲ್ಲಿ ಎಷ್ಟು ಬೇಕಾದರೂ ಮಾಡಬಹುದು. ಸ್ಕೂಲು ಟೀಚರ್ಸ್ ನಾಟಕ ಎಂದ ಕೂಡಲೇ ಸ್ಟೇಜಿಗೆ ಹೋಗಬೇಕು ಎಂದು ತಿಳಿದುಕೊಂಡಿದ್ದಾರೆ. ಆದರೆ ಮಕ್ಕಳಿಗೆ ನಾಟಕ ಮುಖ್ಯವಲ್ಲ ನಾಟಕ ಆಡುವುದು ಮುಖ್ಯ. ಪ್ಲೇ ಈಸ್ ಎ ಪ್ಲೇ. ಇಷ್ಟೆ ಅವರಿಗೆ

ತಿಳಿಯುವುದು. ನಾವು ನಾಟಕಗಳನ್ನು ಮರೆತಿದ್ದರಿಂದ, ನಾಟಕದ ಪರಂಪರೆ ಬೆಳೆಯುತ್ತಿಲ್ಲ. ಇದೆಲ್ಲವೂ ಶಿಕ್ಷಣದ ಪ್ರಾರಂಭದಲ್ಲಿಯೇ ಬಂದಿದ್ದರಿಂದ ಅವನ ಧ್ವನಿ, ಚಲನೆ, ಅವನ ಕ್ರಿಯೇಟಿವಿಟಿ ಅವನ ಬಾಯಲ್ಲಿ ಧ್ವನಿ ಮಾಡಬಹುದು. ಮಿಮಿಕ್ರಿ ಮಾಡಬಹುದು ಅಥವಾ ಟಕಟಕ ಶಬ್ದ ಮಾಡಬಹುದು. ಇವೆಲ್ಲವನ್ನು ನಾವು ದೊಡ್ಡವರಾದ ಮೇಲೆ ಮರೆತು ಬಿಡುತ್ತೇವೆ. ನಾವು ಈಗ ಸಭ್ಯರಾಗಿಬಿಟ್ಟಿದ್ದೇವೆ. ನಾವು ದೊಡ್ಡವರು ಇದನ್ನು ಮಾಡಬಾರದು, ಚಿಕ್ಕವರನ್ನು ಮಾಡುವುದಕ್ಕೆ ಬಿಡುತ್ತಿಲ್ಲ. ಮನೆಯಲ್ಲಿಯೂ ಕೂಡಾ ನಾವು ಸೀಟಿ ಹಾಕಬಾರದು ಎಂದು ಹೇಳುತ್ತೇವೆ.

ಹೀಗೆ ಪ್ರತಿಯೊಂದು ಕಡೆಯಲ್ಲಿಯೂ ಕೂಡಾ ಶಿಕ್ಷಣ ಬೆಳೆಯಬೇಕಾದರೆ, ಸ್ಕೂಲು ಅಷ್ಟೇ ಮುಖ್ಯವಲ್ಲ. ಎಲ್ಲಾ ಕಡೆಯಲ್ಲಿಯೂ ಅವನು ಏನು ಮಾಡುತ್ತಿದ್ದಾನೆ ಅದಕ್ಕೆ ನಾವು ಮಹತ್ವ ಕೊಡಬೇಕು. ಏಕೆಂದರೆ ಅಲ್ಲಿಯೇ ಅವನು ತನ್ನ ಅಸ್ತಿತ್ವವನ್ನು ತೋರಿಸುತ್ತಿದ್ದಾನೆ, ಅದನ್ನೇ ವ್ಯವಸ್ಥಿತವಾಗಿ ತೋರಿಸುವುದಕ್ಕೆ ಸ್ಕೂಲು ಇದೆ. ಸ್ಕೂಲು ಎಂದಾಗ ಎಲ್ಲಾ ವಸ್ತುಗಳು ಒಂದು ಬಿಲ್ಡಿಂಗ್ ಆಗಲೀ ಒಂದು ಛೇರ್ ಆಗಲೀ ಅಥವಾ ಒಂದು ಚೀಲವಾಗಲೀ ಇವೆಲ್ಲವೂ ಅವನದೇ ಆದ ಒಂದು ಅಂಗವಾಗಿ ಅವನ ವ್ಯಕ್ತಿತ್ವವಾಗಿಬಿಡುತ್ತವೆ. ಆಮೇಲೆ ಬಹುಶಃ ಅವನು ಬೆಳೆದ ಮೇಲೆ ಇವುಗಳ ಸಹಾಯದಿಂದ ಅವನದೇ ಆದಂಥ ಭಾಷೆ ರೂಪಿತವಾಗಿ ಅವನು ಸಮೂಹದಲ್ಲಿದ್ದರೂ ಕೂಡಾ ಅವನ ವೈಯಕ್ತಿಕತೆಗೆ, ಇಂಡಿವಿಜುಯಾಲಿಟಿಗೆ ಅವನ ಸ್ವಂತಿಕೆಯು ಬೆಳೆಯುವುದಕ್ಕೆ ಸಾಧ್ಯವಿದೆ. ಇಷ್ಟೆಲ್ಲಾ ಬೆಳೆಯುತ್ತಾ ಬಂದಾಗ ನಾನು ಏನು ಮಾಡಿದೆ, ಹೇಗೆ ಮಾಡಿದೆ, ಎನ್ನುವುದನ್ನು ಸಂಪೂರ್ಣವಾಗಿ ತಾನೇ ತಾನೇ ತಾನಾಗಿ ಎಲ್ಲವನ್ನೂ ಕಲಿತುಬಿಡುತ್ತಾನೆ.

ಹೀಗೆ ನಾವು ವಿಷಯಗಳನ್ನು ತೆಗೆದುಕೊಂಡಾಗ ಅವನಿಗೆ ರೈಲು ಬಂದಾಗ ಅಥವಾ ಒಂದು ಮೋಟರ್ ಬಂದಾಗ ಹೇಗೆ ಅವಾಯ್ಡ್ ಮಾಡಿಕೊಳ್ಳಬೇಕು ಎನ್ನುವುದು ಇನ್‌ಸ್ಟಿಂಕ್ಟೀವ್ ಆಗಿ ಬರುತ್ತದೆ. ಈ ವಿಚಾರವನ್ನು ನಾವು ಆಲೋಚನೆ ಮಾಡಿದಾಗ, ಅವನನ್ನು ನಾವು ಶ್ರಮಪಡಿಸಬೇಕಾಗುತ್ತದೆ. ಇದೇ ಸತ್ವ , ಇದರ ಬಗ್ಗೆ ನಾವು ಹೆಚ್ಚಿನ ಮಹತ್ವ ಕೊಡಬೇಕು. ತಾನು ಏನು ಮಾಡಿದೆ, ಹೇಗೆ ಮಾಡಿದೆ ಎನ್ನುವುದನ್ನು ಅವನು ತಿಳಿದುಕೊಳ್ಳಬೇಕು. ನಾಳೆ ಅವನು ಮಾಡಿರುವುದು ಸುಳ್ಳು ಆಗಿರಬಹುದು, ಹೀಗೆ ಎಂದು ನಾವೂ ಹೇಳಬಹುದು. ಮಕ್ಕಳು ಗುಡ್‌ಮಾರ್ನಿಂಗ್ ಸಾರ್ ಎಂದು ಹೇಳಿ ಯಾವುದೋ ಒಂದು ರೀತಿಯಲ್ಲಿ ನಡೆದುಕೊಂಡರೆ, ಹಾಗಲ್ಲ , ಹೀಗೆ ಎಂದು ನಾವು ಹೇಳುತ್ತೇವೆ. ಹೀಗೆ ಮಾಡಿ ಎಂದು ಹೇಳಿ ನಾವು ಅವರಿಗೆ ಸರಿಯಾದ ರೀತಿಯನ್ನು ತೋರಿಸಿಕೊಡುತ್ತೇವೆ. ಆದರೆ ಅದರ ಹಿಂದೆ ಯಾವ ಭಾವನೆ ಇದೆ ಅದಕ್ಕೆ ನಾವು ಹೆಚ್ಚು ಗಮನಕೊಡಬೇಕು.

ಈ ರೀತಿಯಾಗಿ ಬಂದಾಗ ನಮ್ಮ ಸಂಪೂರ್ಣವಾದ ಶಿಕ್ಷಣವನ್ನು ಕೇವಲ ಬರವಣಿಗೆ ಅಥವಾ ಲಿಖಿತ ಭಾಷೆಯಾಗಿ ತರದೆ, ಮೌಖಿಕ ಭಾಷೆಯಾಗಿ, ಅಂಗ ಭಾಷೆಯಾಗಿ ಒಂದು ಸಂಭಾಷಣೆಯ ಭಾಷೆಯಾಗಿ ಕಲಿಸುವುದು ಅಲ್ಲದೆ ಬೇರೆಯವರು ಹೇಗೆ ಕಲಿಸುತ್ತಾರೆ ಎನ್ನುವ ದೃಷ್ಟಿಯಿಂದಲೂ ನಾವು ಕಲಿಸಬೇಕಾಗಿದೆ. ಈಗ ನಮ್ಮ ಮಕ್ಕಳಿಗೆ ರೈಲು ಧ್ವನಿ ಅರ್ಥವಾಗುತ್ತದೆ, ಮೋಟಾರ್ ಧ್ವನಿ ಅರ್ಥವಾಗುತ್ತದೆ, ಆಟೋ ಧ್ವನಿ ಅರ್ಥವಾಗುತ್ತದೆ, ಪ್ರತಿಯೊಂದಕ್ಕೂ ಕೂಡಾ ಅರ್ಥ ಸಿಕ್ಕುತ್ತದೆ. ಬೆಳಿಗ್ಗೆ ಎದ್ದ ಕೂಡಲೇ, ಪೇಪರ್‌ವಾಲಾ ಬರುತ್ತಾನೆಂದು ಅರ್ಥವಾಗುತ್ತದೆ ; ಈಗ ಬೆಳಗಾಯಿತು ಎಂದು ತೋರಿಸಬೇಕಾದರೆ, ಸಿನಿಮಾಗಳಲ್ಲಿ ಪಕ್ಷಿಗಳ ಚಲನವಲನಗಳನ್ನು ತೋರಿಸಬೇಕಾಗಿಲ್ಲ , ಪೇಪರ್‌ವಾಲಾ ಬಂದರೆ, ಹಾಲಿನವನು ಬಂದರೆ ಬೆಳಗಾಯಿತು ಎಂದು ಗೊತ್ತಾಗುತ್ತದೆ.

ಅಂದರೆ ಹೇಗೆ ಆಧುನಿಕ ಸಭ್ಯತೆಯಲ್ಲಿಯೂ ಕೂಡಾ ವಾತಾವರಣ ಸೃಷ್ಟಿಯ ಶಬ್ದಗಳು ಇವೆ, ಅವುಗಳನ್ನು ನಾವು ತೆಗೆದುಕೊಂಡಾಗ ಪುಸ್ತಕ ಭಾಷೆಗೂ ಈ ಭಾಷೆಗೂ ಎಷ್ಟು ಅಂತರ ಇದೆ, ನಾವು ಹೇಗೆ ಹೆಚ್ಚುತ್ತಿದ್ದೇವೆಂದು ನಿಚ್ಚಳವಾಗಿ ನಮಗೆ ಗೊತ್ತಾಗುತ್ತದೆ. ಇಲ್ಲಿ ನಾನು ಉಪಾಧ್ಯಾಯರಿಗೆ ಕೇಳುವುದು ಇಷ್ಟೆ , ನಾವು ಸಂಪೂರ್ಣವಾಗಿ ಪ್ರತಿಯೊಂದನ್ನು ಕೂಡಾ ಒಂದು ತರಹ ಜಿಪುಣರ ಹಾಗೆ ಸಂಗ್ರಹಿಸಿಕೊಂಡು ಸ್ವಂತವಾಗಿ ತಮ್ಮ ತಮ್ಮ ದೃಷ್ಟಿಯಲ್ಲಿ ಕ್ರಿಯೇಟ್ ಮಾಡಬಹುದೋ ಅದಕ್ಕೆ ಹೆಚ್ಚು ಮಹತ್ವ ಕೊಡಬೇಕು. ಆಮೇಲೆ ಯಾವುದಕ್ಕೂ ನಮ್ಮಲ್ಲಿ ಕೊರತೆಯಿಲ್ಲ, ಯಾವುದಕ್ಕೂ ಅಭಾವ ಇಲ್ಲ. ಕೊರತೆ ಇದ್ದರೆ, ಅಭಾವ ಇದ್ದರೆ, ಅದು ನಮ್ಮ ಥಿಂಕಿಂಗ್‌ನಲ್ಲಿ ನಮ್ಮ ಅನುಭವದಲ್ಲಿ. ಇದರಲ್ಲಿ ನಮಗೆ ದಾರಿದ್ರ್ಯ ಇದೆಯೇ ಹೊರತು ದಾರಿದ್ರ್ಯ ಅಲ್ಲಿಂದ ಹುಟ್ಟಿ ಶುರುವಾದದ್ದು ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

★★★

# ಮಕ್ಕಳ ಶಿಕ್ಷಣದಲ್ಲಿ ದೃಶ್ಯ-ಶ್ರವ್ಯ ಮಾಧ್ಯಮಗಳ ಬಳಕೆಯ ಅಗತ್ಯ

- ಕೆ.ವಿ. ಸುಬ್ಬಣ್ಣ

''ಮಕ್ಕಳ ಶಿಕ್ಷಣದಲ್ಲಿ ದೃಶ್ಯ ಶ್ರವ್ಯ ಮಾಧ್ಯಮಗಳ ಬಳಕೆಯ ಅಗತ್ಯ'' ಎನ್ನುವುದು ನನ್ನ ಪತ್ರಿಕೆಯ ವಿಷಯ. ದೃಶ್ಯ-ಶ್ರವ್ಯ ಮಾಧ್ಯಮಗಳಲ್ಲಿ ನಾನು ರಂಗಭೂಮಿ ಮತ್ತು ಸಿನೆಮಾಗಳನ್ನೇ ಮುಖ್ಯ ಉದಾಹರಣೆಯಾಗಿ ಎತ್ತಿಕೊಳ್ಳುತ್ತೇನೆ. ಟೆಲಿವಿಜನ್ ಹೇಗೂ ಸಿನೆಮಾದ ಕ್ಷೇತ್ರದಲ್ಲೇ ಸೇರಿಕೊಳ್ಳುತ್ತವೆ ಎಂದು ಭಾವಿಸಬಹುದು.

ಮಕ್ಕಳ ಶಿಕ್ಷಣದಲ್ಲಿ ದೃಶ್ಯ-ಶ್ರವ್ಯ ಮಾಧ್ಯಮಗಳ ಬಳಕೆಯ ಅಗತ್ಯವನ್ನು ತಜ್ಞರೆಲ್ಲ ಉದ್ಘೋಷಿಸುತ್ತಲೇ ಬಂದಿದ್ದಾರೆ. ಅಲ್ಲಿಂದ, ಶಿಕ್ಷಣಕ್ಕೆ ಸಂಬಂಧಪಟ್ಟ ಎಲ್ಲರ ನಾಲಗೆಯಲ್ಲೂ ಆ ಘೋಷಣೆ ಎಡೆಬಿಡದೆ ಹೊರಳಿ ಹೊರಳಿ, ಅದರ ಅರ್ಥವೇ ಮರೆಯಾಗಿ ಹೋಗುವಷ್ಟು ಅದು ನುಣುಪಾಗಿಬಿಟ್ಟಿದೆ. ಆದರೆ ಇವತ್ತಿಗೂ, ದೃಶ್ಯ-ಶ್ರವ್ಯ ಮಾಧ್ಯಮಗಳನ್ನು ಮಕ್ಕಳ ವಿದ್ಯಾಭ್ಯಾಸದಲ್ಲಿ ನಿಜವಾದ ಶ್ರದ್ಧೆಯಿಂದ ಪ್ರಮುಖವಾಗಿ ಬಳಸುವುದನ್ನು ವಿರಳವಾಗಿ ಕೂಡಾ ನಾವು ಕಾಣುತ್ತಿಲ್ಲ. ಪ್ರದೇಶ ಪರಿಚಯ, ಸಮಾಜ ಪರಿಚಯ ಮುಂತಾದ ವಿಷಯಗಳಲ್ಲಿ ದೃಶ್ಯ-ಶ್ರವ್ಯ ಮಾಧ್ಯಮದ ಮೂಲಕ ಅತ್ಯಂತ ಪರಿಣಾಮಕಾರಿಯಾಗಿ ಅರ್ಧತಾಸು, ಒಂದು ತಾಸುಗಳಲ್ಲಿ ಮುಟ್ಟಿಸಬಹುದಾದ, ನಾಟಿಸಬಹುದಾದ ಅಂಶಗಳನ್ನು ನಮ್ಮ ಶಾಲೆಗಳಲ್ಲಿ ತಿಂಗಳುಗಟ್ಟಲೆ ನೋಟ್ಸ್ ಬರೆಸಿ ಉರು ಹೊಡೆಸುವುದನ್ನು ಕಾಣುತ್ತೇವೆ.

**ಯಾಕೆ ?**

ಪಾಶ್ಚಾತ್ಯ ತಜ್ಞರು ಹಾಗೆ ಹೇಳುತ್ತಾರೆ ; ನಾವೂ ಅದನ್ನು ಕಷ್ಟಪಟ್ಟು ಒಳ್ಳೆ ಇಂಗ್ಲೀಷಿನಲ್ಲಿ ಹೇಳಲು ಪ್ರಯತ್ನಿಸುತ್ತೇವೆ – ಇಷ್ಟೇ ಅನಿಸುತ್ತದೆ. ಈ ಮಾತುಗಳನ್ನು ನಾವು ನಮ್ಮ ಗಾಢ ನಂಬಿಕೆಯ ವಿಷಯಗಳಾಗಿ ಮಾಡಿಕೊಂಡಿಲ್ಲ.

ಸಹಸ್ರಾರು ವರ್ಷಗಳ ಮಾನವ ಇತಿಹಾಸದಲ್ಲಿ ಮನುಷ್ಯ ಪರಸ್ಪರ ಸಂಪರ್ಕಕ್ಕಾಗಿ

ಹಲವಾರು ಭಾಷೆಗಳನ್ನು ಸೃಷ್ಟಿಸಿಕೊಂಡಿದ್ದಾನೆ. ಶಾಬ್ದಿಕ ಭಾಷೆ, ನೃತ್ಯ, ಸಂಗೀತ, ಶಿಲ್ಪ, ರಂಗಭೂಮಿ - ಮುಂತಾಗಿ. ಕ್ರಮೇಣ, ಅದು ಹೆಚ್ಚು ಸೌಲಭ್ಯವುಳ್ಳದ್ದು ಎಂಬ ಕಾರಣ, ಆತ ಶಾಬ್ದಿಕ ಭಾಷೆಯನ್ನೇ ತನ್ನ ಎಲ್ಲಾ ವ್ಯವಹಾರಗಳ ಮುಖ್ಯ ಸಂಪರ್ಕ ಮಾಧ್ಯಮವಾಗಿಟ್ಟುಕೊಂಡು, ಉಳಿದ ಭಾಷೆಗಳನ್ನು ಹೆಚ್ಚಾಗಿ ಗಾಢ ಅನುಭವಗಳ ಅಭಿವ್ಯಕ್ತಿಗಾಗಿ, ಎಂದರೆ ಕಲಾಭಾಷೆಯಾಗಿ ಬಳಸುತ್ತಾ ಬಂದಿದ್ದಾನೆ. ಹೀಗಾಗಿ ಈಗ ಶಾಬ್ದಿಕ ಭಾಷೆಗಳೇ ಹೆಚ್ಚಾಗಿ ಮನುಷ್ಯನ ಮುಖ್ಯಸಂಪರ್ಕ ಸಾಧನಗಳಾಗಿವೆ. ಶಾಸ್ತ್ರ, ವ್ಯವಹಾರ, ಕಲೆ - ಮುಂತಾಗಿ ಎಲ್ಲಕ್ಕೂ ಅವು ಬಳಕೆಯಾಗುತ್ತಿವೆ. ಶಿಕ್ಷಣದಲ್ಲಿ ತೀರ ಕ್ವಚಿತ್ತಾಗಿ ಚಿತ್ರ ಶಿಲ್ಪ ಮುಂತಾದವುಗಳ ಬಳಕೆಯಾಗುವುದಿದ್ದರೂ ಮುಖ್ಯವಾಗಿ ಶಾಬ್ದಿಕ ಭಾಷೆಯೇ ಏಕಮೇವ ಎಂಬಂಥ ಸ್ಥಾನ ಪಡೆದುಕೊಂಡಿದೆ. ಸಾವಿರಾರು ವರ್ಷಗಳಿಂದಲೂ ಇದೇ ನಡೆದುಕೊಂಡು ಬಂದಿದೆ.

ಪಾಶ್ಚಾತ್ಯ ದೇಶಗಳಲ್ಲಿ ವೈಜ್ಞಾನಿಕ ಕ್ರಾಂತಿಯುಂಟಾಗಿ ಯಂತ್ರಯುಗದ ಕೇಂದ್ರೀಕೃತ ನಗರಜೀವನ ಆರಂಭವಾದ ಮೇಲೆ ನಮ್ಮ ಸಂಪರ್ಕ ಮಾಧ್ಯಮಗಳಲ್ಲೂ ಕ್ರಾಂತಿಯುಂಟಾಯಿತು. ಮುದ್ರಣ, ವೃತ್ತಪತ್ರಿಕೆ, ರೇಡಿಯೋ ಮುಂತಾದ ಸಮೂಹ ಸಂಪರ್ಕ ಸಾಧನಗಳು ಸೃಜನಗೊಂಡವು. ಇವುಗಳಲ್ಲಿ ಕೊನೆಯದು ಸಿನೆಮಾ.

ಉಳಿದ ಸಮೂಹ ಸಂಪರ್ಕ ಮಾಧ್ಯಮಗಳಿಗಿಂತ ಸಿನೆಮಾ ಭಿನ್ನವಾದದ್ದು. ಮುದ್ರಣ, ವೃತ್ತಪತ್ರಿಕೆ, ರೇಡಿಯೋ - ಮುಂತಾದವು ನಮ್ಮ ಹಳೆಯ ಭಾಷೆಗಳನ್ನು ಯಂತ್ರಗಳ ನೆರವಿನಿಂದ ಬಹುಜನರಿಗೆ ಮುಟ್ಟುವಂತೆ ಮಾಡಿದವು. ಅಂದರೆ, ಅವು ಹಳೆಯ ಭಾಷೆಗಳೇ ; ಆದರೆ ಅವುಗಳ ಪ್ರಸರಣ ವಿಧಾನದಲ್ಲಿ ಮಾತ್ರ ಕ್ರಾಂತಿಯುಂಟಾಯಿತು. ಸಿನೆಮಾ ಹಾಗಲ್ಲ. ಅದು ಸ್ವತಂತ್ರವಾದ ಒಂದು ಭಾಷೆಯೇ. ಸಮೂಹ ಸಂಪರ್ಕ ಮಾಧ್ಯಮವಾಗಿಯೇ ರೂಪು ತಳೆದ ಈ ಶತಮಾನದ ಹೊಸ ಭಾಷೆ ಅದು. ಹಿಂದಿನ ಕಾಲದಲ್ಲಿ ಶಾಬ್ದಿಕ ಭಾಷೆಗಳೇ ಶಿಕ್ಷಣಕ್ಕೆ ಹೆಚ್ಚು ಅನುಕೂಲವಾಗಿ ಒದಗುವಂಥವಾಗಿದ್ದವು. ಹೊಸದಾದ ಯಾಂತ್ರಿಕ ಸಾಧನಗಳಿಂದ ರೂಪುಗೊಂಡ ಸಾಮೂಹಿಕ ಸಂಪರ್ಕ ಸಾಧನಗಳು ಇಲ್ಲದಿರುವಾಗ ಹಾಗೂ ಭೌತಿಕ ಸಂಪರ್ಕ ಸಾಧನಗಳು ವಿರಳವಿದ್ದು ಮನುಷ್ಯರ ಗುಂಪು ಗುಂಪುಗಳ ನಡುವೆ ದೂರ ಹೆಚ್ಚಿದ್ದಾಗ ಲಿಪಿಸಮೇತವಾದ ಶಾಬ್ದಿಕ ಭಾಷೆ ಅತ್ಯುತ್ತಮ ಸಾಧನವಾಗಿತ್ತು ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಈಗ ಪರಿಸ್ಥಿತಿ ಬದಲಾಗಿದೆ.

ಈ ತನಕ, ನಾವು ಶಿಕ್ಷಣಕ್ಕೆ ಶಾಬ್ದಿಕ ಭಾಷೆಗಳನ್ನೇ ಬಳಸುತ್ತಾ ಬಂದಿದ್ದೇವಲ್ಲ ಅದರಲ್ಲಿ ಏನು ಕೊರತೆ ಕಂಡಿದೆ ಎನ್ನುವುದನ್ನು ನಾವು ಕೊಂಚ ಗಮನಿಸಬೇಕು. ಶಾಬ್ದಿಕ ಭಾಷೆ ತೀರಾ ಅಮೂರ್ತವಾದದ್ದು ; ಸ್ವೇಚ್ಛೆಯಿಂದ ಕಲ್ಪಿಸಿಕೊಂಡದ್ದು (arbitrary). ಅಲ್ಲದೆ – ದೀರ್ಘಕಾಲ ಅನೇಕ ರೀತಿಗಳಲ್ಲಿ ಬಳಕೆಯಾಗಿ ಸಾಕಷ್ಟು ಸವಕಲಾದದ್ದು. ಅದು

ನೇರವಾಗಿ ನಮ್ಮ ಇಂದ್ರಿಯಗಳ ಮೂಲಕ ಇಡೀ ವ್ಯಕ್ತಿತ್ವವನ್ನು ಮುಟ್ಟುವುದಿಲ್ಲ. ಮೊದಲು ಅದನ್ನು ಬೌದ್ಧಿಕವಾಗಿ ಗ್ರಹಿಸಿ ಅನಂತರ ಅದನ್ನು ನಮ್ಮ ಸಮಗ್ರ ವ್ಯಕ್ತಿತ್ವ ಸ್ವೀಕರಿಸಬೇಕಾಗುತ್ತದೆ. ಈ ಬಳಸುದಾರಿಯಲ್ಲಿ ಹೋಗುವಾಗ, ಎಷ್ಟೋ ಸಲ - ಭಾಷೆಯ ಅಭಿವ್ಯಕ್ತಿ ಬೌದ್ಧಿಕವಾಗಿ ಮಾತ್ರ ಗ್ರಹಿಸಲ್ಪಟ್ಟು ಇಂದ್ರಿಯಾನುಭವವಾಗದೇ ಹೋಗಿಬಿಡುತ್ತದೆ. ಫಿಸಿಕ್ಸ್ ಕೆಮಿಸ್ಟ್ರಿಗಳನ್ನು ಉರುಹೊಡೆದು ಕಲಿತು ಪರೀಕ್ಷೆಯಲ್ಲಿ ನೂರಕ್ಕೆ ನೂರು ನಂಬರು ಪಡೆದು ಪಾಸಾಗುವ ಅನೇಕ ವಿದ್ಯಾರ್ಥಿಗಳಿಗೆ ಆ ಶಾಸ್ತ್ರದ ಅಂಶಗಳು ಇಂದ್ರಿಯಾನುಭವವಾಗದೆ ಉಳಿಯುವುದನ್ನು ಸ್ಪಷ್ಟವಾಗಿ ಕಾಣಬಹುದು. ಹಸುವಿನ ಬಗ್ಗೆ ಡಾಕ್ಟರೇಟ್ ಥೀಸಿಸ್ ಬರೆದ ಪಂಡಿತರೊಬ್ಬರು ಹಸು ಎದುರಿಗೆ ಬಂದಾಗ ಗುರುತಿಸದೇ ಹೋದರು ಎಂಬಂಥ ಕಥೆಗಳನ್ನು ಕೇಳಿದ್ದೇವೆ ; ಅಷ್ಟೇ ಅಲ್ಲ - ವಿಜ್ಞಾನ ಕಲಿಸುವುದರಲ್ಲಿ ನಿಷ್ಣಾತನಾದ ಅಧ್ಯಾಪಕ ಕಾಲೇಜಿನಿಂದ ಮನೆಗೆ ಹೋದ ಕೂಡಲೇ ವಿಶ್ವಾಸವಿಧೇಯನಾಗಿ ಗ್ರಹಣದ ಕಟ್ಟಳೆಗಳನ್ನಾಚರಿಸುವುದನ್ನೂ ಕಂಡು ಬೆರಗಿಲ್ಲದೆ ಒಪ್ಪಿಕೊಳ್ಳುತ್ತೇವೆ.

ಇಂಥ ಸಂದರ್ಭದಲ್ಲಿ ಶಿಕ್ಷಣವನ್ನು ಜೀವಂತಿಕೆಯ ಆಚೆ ಹೊರಕೋಣೆಯಲ್ಲಿ ನಡೆಯುವ ಒಂದು ಔಪಚಾರಿಕ ವ್ಯವಹಾರವಾಗಲು ಬಿಡದೆ ಅದನ್ನು ನಮ್ಮ ಇಂದ್ರಿಯಗಳು ನಿಗ್ರಹಿಸುವಂತೆ ಮಾಡಿಕೊಳ್ಳಲು ಶಿಕ್ಷಣದ ಮಾಧ್ಯಮವಾಗಿ ಶಾಬ್ದಿಕವಲ್ಲದೆ ಬೇರೆ ಭಾಷೆಗಳನ್ನು ಬಳಸುವುದು ತೀರ ಅಗತ್ಯವಾಗಿದೆ. ಹಾಗೆ ಬೇರೆ ಬೇರೆ ಭಾಷೆಗಳನ್ನು ಮಾಧ್ಯಮವಾಗಿ ಬಳಸುವ ಮೂಲಕ ನಮ್ಮ ಶಾಬ್ದಿಕ ಭಾಷೆ ಆ ಎಲ್ಲ ಭಾಷೆಗಳ ಜೊತೆಗಿನ ಸಂಪರ್ಕ ಸಂಘರ್ಷದಿಂದ ಹೆಚ್ಚು ಜೀವಂತವಾಗಲೂ ಸಾಧ್ಯವಾದೀತು.

ಶಿಕ್ಷಣದ ಉದ್ದೇಶ ವ್ಯಾಪ್ತಿಗಳಲ್ಲಿ ಕೂಡ ಇವತ್ತಿನ ಕಾಲಕ್ಕೆ ಆಗಬೇಕಾಗಿರುವ ಪರಿವರ್ತನೆಗಳನ್ನು ನಾವು ಗಮನಿಸಬೇಕು.

1. ಹಿಂದೆ ಸಮಾಜ ತನ್ನ ಜನರಲ್ಲಿ ಆಯ್ದ ಕೆಲವರನ್ನು ಮಾತ್ರ ಅಧ್ಯಯನ-ಅಧ್ಯಾಪನಕ್ಕಾಗಿ ಮೀಸಲಿಡುತ್ತಿತ್ತು. ಆದರೆ ಈಗ ಸಮಾನತೆ ಸ್ವಾತಂತ್ರ್ಯ ಪ್ರಜಾಪ್ರಭುತ್ವಗಳ ಆದರ್ಶದಲ್ಲಿ ಹೊಸ ಮನುಕುಲವನ್ನು ಕಟ್ಟಲು ನಾವು ಹವಣಿಸುವಾಗ ಶಿಕ್ಷಣ ಎಲ್ಲರಿಗೂ ದೊರೆಯಬೇಕಾದ ಅಗತ್ಯ ಉಂಟಾಗಿದೆ. ಆದ್ದರಿಂದ ನಾವು ಶಿಕ್ಷಣಕ್ಕೆ ಸಮೂಹ ಸಂಪರ್ಕ ಸಾಧನಗಳನ್ನು ಬಳಸಬೇಕಾದ್ದಷ್ಟೇ ಅಲ್ಲ , ಅವುಗಳಲ್ಲಿ ಸುಲಭ ಗ್ರಾಹ್ಯವಾದ (ಉದಾಹರಣೆಗೆ - ಸಿನೆಮಾದಂಥ) ಮಾಧ್ಯಮಗಳನ್ನು ಬಳಸಲು ಮುಂದಾಗಬೇಕಿದೆ.

2. ಹಿಂದಿನ ಶಿಕ್ಷಣದಲ್ಲಿ, ಮನುಷ್ಯರೇ ಜ್ಞಾನವನ್ನು ಸಂಗೋಪಿಸಿ ಇಟ್ಟುಕೊಳ್ಳಬೇಕಾದ ಅವಶ್ಯಕತೆಯಿತ್ತು. ಈಗ ಯಾಂತ್ರಿಕ ಸಾಧನಗಳ ಮೂಲಕ ಹಾಗೂ ಇತರ ಸಂಘಟನೆಗಳ ಮೂಲಕ ಕೆಲಸ ಎಷ್ಟೋ ಸುಲಭವಾಗಿ ನಡೆಯುತ್ತದೆ. ಈಗ ಶಿಕ್ಷಣದ ಅತಿ ಮುಖ್ಯ ಲಕ್ಷ್ಯವಾಗಬೇಕಾದ್ದು - ಶಿಕ್ಷಣಾರ್ಥಿಯ ಕರಣಗಳನ್ನು

ಪಟುಗೊಳಿಸುವುದು, ಅವನ ವ್ಯಕ್ತಿತ್ವ ಸರ್ವತ್ರ ಸಂವೇದಿಯಾಗುವ ಮೂಲಕ ಜಾಗೃತವಾಗುವಂತೆ ಚುರುಕುಗೊಳಿಸುವುದು, ಈ ದೃಷ್ಟಿಯಿಂದಲೂ ಬುದ್ಧಿಯ ಮೂಲಕ ಗ್ರಹಿಸಬೇಕಾದ ಶಾಬ್ದಿಕ ಭಾಷೆಗಿಂತ ಹೆಚ್ಚು ಮೂರ್ತವಾದ ಭಾಷೆಗಳು ಶಿಕ್ಷಣ ಮಾಧ್ಯಮವಾಗಿ ತೊಡಗುವುದು ಅವಶ್ಯಕವಾಗಿದೆ.

ಈಗ ಶಿಕ್ಷಣದಲ್ಲಿ ಶಾಬ್ದಿಕ ಭಾಷೆಯನ್ನು ಬಳಸುತ್ತಿರುವಷ್ಟೇ ಶ್ರದ್ಧೆ ವಿಶ್ವಾಸಗಳಿಂದ ಅದಕ್ಕೆ ಜೊತೆಯಾಗಿ ರಂಗಭೂಮಿಯನ್ನೂ ಬಳಸುತ್ತೇವೆ ಎನ್ನೋಣ. Human behaviour ಅಥವಾ ಆಲಂಕಾರಿಕ ಪರಿಭಾಷೆಯ ಲೋಕಚರಿತ ಮೂಲದ್ರವ್ಯವಾಗಿರುವ ರಂಗಭೂಮಿ ಒಂದು ಶಾರೀರಿಕ ಭಾಷೆ. ಅದನ್ನು ಶಿಕ್ಷಣ ಮಾಧ್ಯಮವಾಗಿ ಮಕ್ಕಳು ಬಳಸತೊಡಗಿದರೆ, ಅವರು ಪಡೆಯುವ ಜ್ಞಾನ ಕೇವಲ 'ಸಂಚಿತ ಭಾವ'ವಾಗದೆ ರಕ್ತಗತವಾದ ಅಸ್ತಿಗತವಾದ ಅನುಭವವಾಗಿ ರೂಪುಗೊಳ್ಳಲು ಸಾಧ್ಯ. ರಂಗಭೂಮಿಯ ಭಾಷೆ ಮಕ್ಕಳ ಶರೀರಕ್ಕೆ ಹೊಸ ಸಂವೇದನಾ ಶೀಲತೆಯನ್ನೇ ತಂದುಕೊಡುತ್ತದೆ. ಅದು ಅವರ ಸಾಮೂಹಿಕ ಚಟುವಟಿಕೆಗಳನ್ನು ಸಹಜಗೊಳಿಸುವುದಷ್ಟೇ ಅಲ್ಲದೆ ರಂಗಭೂಮಿಯ ಕಾಲ್ಪನಿಕ ದೇಶ-ಕಾಲ-ವ್ಯಕ್ತಿಗಳು ಅವರ ಕಲ್ಪಕತೆಯನ್ನು ಕ್ರಿಯಾಶೀಲಗೊಳಿಸುತ್ತದೆ.

ಇದೇ ರೀತಿಯಲ್ಲಿ ಸಿನೆಮಾ. ರಂಗಭೂಮಿಗಿಂತ ಹೆಚ್ಚು ಪರಿಣಾಮಕಾರಿಯಾದ ಮಾಧ್ಯಮ ಇದು. ಈ ಮಾಧ್ಯಮ ಮಕ್ಕಳ ಇಡೀ ವ್ಯಕ್ತಿತ್ವವನ್ನು ಆವರಿಸಿ ಅವರನ್ನು ಸಮಗ್ರವಾಗಿ ರೂಪಿಸುವ ಶಕ್ತಿಯುಳ್ಳದ್ದು.

ಆದರೆ ಈ ದೃಶ್ಯ-ಶ್ರವ್ಯ ಮಾಧ್ಯಮಗಳ ಬಳಕೆಯನ್ನು ಅರೆಮನಸ್ಸಿನಿಂದ ಕೊಂಚ ಕೊಂಚ ಮಾಡುತ್ತಾ ಹೋದರೆ ಉಪಯೋಗವಾಗುವುದಿಲ್ಲ. ಈಗ ಮಕ್ಕಳು ಶಾಬ್ದಿಕ ಭಾಷೆಯನ್ನು ಕಲಿಯುತ್ತಾ, ಅದರ ಮೂಲಕ ಶಿಕ್ಷಣ ಪಡೆಯುತ್ತಾ, ಜತೆಜತೆಗೇ ಆ ಭಾಷೆಯನ್ನು ಸ್ವತಃ ಬಳಸುತ್ತಾ ಹೋಗುವಂತೆ ಈ ದೃಶ್ಯ-ಶ್ರವ್ಯ ಮಾಧ್ಯಮಗಳನ್ನೂ ಸ್ವತಃ ರಂಗ ನಿರ್ಮಾಪಕರಾಗಿ, ಚಿತ್ರ ನಿರ್ಮಾಪಕರಾಗಿ ದುಡಿಸಿಕೊಳ್ಳುತ್ತಾ ಹೋಗಬೇಕಾಗುತ್ತದೆ.

ಮಕ್ಕಳ ಶಿಕ್ಷಣದಲ್ಲಿ ನಾವು ರಂಗಭೂಮಿಯನ್ನೋ, ಸಿನೆಮಾವನ್ನೋ ಎಲ್ಲೋ ಅಲ್ಲಲ್ಲಿ ಅಲ್ಪಸ್ವಲ್ಪ ಬಳಸಿ ನೋಡಿದ್ದರೂ, ಅದನ್ನು ಇಡಿಮನಸ್ಸಿನಿಂದ ಇಡಿಯಾಗಿ ಮಾಡಿಲ್ಲ ಎನ್ನುವುದಕ್ಕಾಗಿ ಅದರಿಂದ ಯಾವ ಪ್ರಯೋಜನವೂ ನಮಗೆ ದೊರಕಿಲ್ಲ ಎನಿಸುತ್ತದೆ. ಏನೋ ಹೊಸ ಪ್ರಯೋಗದಲ್ಲಿ ತೊಡಗಿದ್ದೇವೆಂಬ ಅಹಂಕಾರವನ್ನು ಉಳಿಸಿಕೊಳ್ಳಲು ನಾವು ಮಕ್ಕಳಿಂದ ವರ್ಷಕ್ಕೆ ಒಂದೆರಡು ನಾಟಕ ಮಾಡಿಸುತ್ತೇವೆ ಅಥವಾ ವಾರಕ್ಕೋ ಎರಡು ವಾರಕ್ಕೋ ಒಮ್ಮೆ ಅವರಿಗೆ ಸಿನೆಮಾ ತೋರಿಸುತ್ತೇವೆ. ಇಂಥ ಕಾಟಾಚಾರಗಳಿಂದ ರಂಗಭೂಮಿ ಅವರಿಗೆ ಆತ್ಮೀಯ ಭಾಷೆಯಾಗಲು ಸಾಧ್ಯವಿಲ್ಲ.

ಇನ್ನು, ವೆಚ್ಚದ ಪ್ರಶ್ನೆ ಮುಂದಾಗಬಹುದು. ಹಾಗೇ ರಂಗಭೂಮಿ ಸಿನೆಮಾಗಳನ್ನು ಶಿಕ್ಷಣ ಮಾಧ್ಯಮವಾಗಿ ಬಳಸಲು ನಮ್ಮಂಥ ಹಿಂದುಳಿದ ದೇಶಕ್ಕೆ ಆರ್ಥಿಕ ದೃಷ್ಟಿಯಿಂದ ಸಾಧ್ಯವಾಗಲಿಕ್ಕಿಲ್ಲ – ಎನಿಸೀತು. ಆದರೆ ನಿಜವಾಗಿ, ಈಗ ನಾವು ನಮ್ಮ ಶಾಬ್ದಿಕ ಭಾಷೆಗಳ ಮೂಲಕವಾದ ಶಿಕ್ಷಣಕ್ಕೆ ಎಷ್ಟು ವೆಚ್ಚ ಮಾಡುತ್ತಿದ್ದೇವೆ - ಎನ್ನುವುದರ ಅಂಕಿ ಅಂಶಗಳನ್ನು ವಿವರವಾಗಿ ಪರಿಶೀಲಿಸಿದರೆ - ಈ ವಾದ ಹುರುಳಿಲ್ಲದ್ದು ಎಂಬುದು ಸ್ಪಷ್ಟವಾಗುತ್ತದೆ. ದೃಶ್ಯ - ಶ್ರವ್ಯ ಮಾಧ್ಯಮಗಳನ್ನು ಮಕ್ಕಳ ಶಿಕ್ಷಣ ಮಾಧ್ಯಮವಾಗಿ ಬಳಸಲು ನಮ್ಮಲ್ಲಿರುವ ಕೊರತೆ ನಿಜವಾಗಿ ಹಣದ್ದಲ್ಲ, ಯೋಚನೆಯ ಧೈರ್ಯದ್ದು.

ಸ್ವಾತಂತ್ರ್ಯ ಸಮಾನತೆಗಳ ಆಧಾರದ ಮೇಲೆ ಹೊಸ ಪ್ರಜಾಪ್ರಭುತ್ವಾತ್ಮಕ ವಿಕೇಂದ್ರೀಕೃತ ದೇಶವನ್ನು ಪಾಶ್ಚಾತ್ಯ ಮಾದರಿ ಬಿಟ್ಟು ನಮಗೆ ಹೊಂದುವ ನಮ್ಮದೇ ಮಾದರಿಯಲ್ಲಿ ಕಟ್ಟುವ ಛಲ ನಮಗಿದ್ದರೆ ಶಿಕ್ಷಣದಲ್ಲಿ ಇಂಥದೊಂದು ಸಮಗ್ರ ಕ್ರಾಂತಿಯನ್ನು ಸಾಧಿಸಲು ನಾವು ಧೈರ್ಯ ಮಾಡಬಲ್ಲೆವು.

***

# ಮಕ್ಕಳು ಮತ್ತು ನಾಟಕ-ರಂಗಭೂಮಿ

-ಎನ್.ಎಸ್. ವೆಂಕಟರಾಂ

ಮಕ್ಕಳ ನಾಟಕ ಎಂದೊಡನೆಯೇ ಅನೇಕರಿಗೆ ಅನೇಕ ರೀತಿಯ ಕಲ್ಪನೆ ಮೂಡಬಹುದು. ಯಾರೋ ಬರೆದದ್ದನ್ನು ರಂಗದ ಮೇಲೆ ಬಂದು ಒಪ್ಪಿಸಿಬಿಟ್ಟರೆ ಅಥವಾ ಅಪ್ಪ-ಅಮ್ಮಂದಿರಿಗೆ ಪ್ರಿಯವಾಗಿರಬಹುದಾದ ಹಾಸ್ಯಾಸ್ಪದ ಸನ್ನಿವೇಶವೊಂದನ್ನು ಪ್ರಸ್ತುತಪಡಿಸಿಬಿಟ್ಟರೆ ಅದನ್ನೇ ಮಕ್ಕಳ ನಾಟಕವೆಂದು ಕೆಲವರು ಭಾವಿಸುತ್ತಾರೆ. ಫ್ಯಾನ್ಸಿ ಡ್ರೆಸ್ ಹಾಕಿಕೊಂಡು ಬಂದು ಸಿಂಗ್ ಸಾಂಗ್ ಶೈಲಿಯಲ್ಲಿ ಚಾಚೂ ತಪ್ಪದೆ ಹೇಳಿಕೊಟ್ಟ ಮಾತನ್ನು ಹೇಳಿ ಬಿಟ್ಟರೆ ಮಕ್ಕಳ ನಾಟಕ ಎಂದು ಇನ್ನು ಕೆಲವರ ಭಾವನೆ. ಎಂಟು ವರ್ಷದ ಮಗುವಿನ ಬಾಯಲ್ಲಿ ಎಂಟು ಪುಟಗಳಷ್ಟು ಉದ್ದವಾದ ಸಂಭಾಷಣೆಯನ್ನು ಅದರಲ್ಲಿ ಯಾವುದೇ ಪದದ ಅರ್ಥ ಗೊತ್ತಿಲ್ಲದಿದ್ದರೂ, ಟೇಪ್‌ರಿಕಾರ್ಡರಿನಂತೆ ಪ್ಲೇ ಮಾಡಿಸುವುದು ಬಾಲ ಪ್ರತಿಭೆಗಳ ಮತ್ತೊಂದು ಮಾದರಿ.

ಮಕ್ಕಳ ನಾಟಕ ನೆನಪಾಗಬೇಕಾದರೆ ಶಾಲೆಗಳಲ್ಲಿ ವಾರ್ಷಿಕೋತ್ಸವ ಬರಬೇಕು. ಅನೇಕ ಕಾರ್ಯಕ್ರಮಗಳ ದೊಡ್ಡ ಪಟ್ಟಿಯಲ್ಲಿ ನಾಟಕಕ್ಕೂ ಒಂದು ಸ್ಥಾನ. ಹೇಗೋ ಮಾಡಿ ಮುಗಿಸಿದರಾಯಿತು ಎಂಬ ದಿವ್ಯ ನಿರ್ಲಕ್ಷ್ಯ. ಹೀಗಾಗಿ ಶಾಲೆಗಳಲ್ಲಿ ಆಗೊಮ್ಮೆ ಈಗೊಮ್ಮೆ ಆಡಿಸುವ ಮಕ್ಕಳ ನಾಟಕಗಳೂ ಒಂದು ಅರ್ಥಹೀನ ರಿಚುಯಲ್ ಆಗಿಬಿಟ್ಟಿದೆ. ವರ್ಷಕ್ಕೊಮ್ಮೆ ಜರುಗುವ ಶಾಲಾ ವಾರ್ಷಿಕೋತ್ಸವದ ಸಂತೋಷಕೂಟಕ್ಕೆ ಹೋಗಿ ನೋಡಬೇಕು. ಗ್ರೀನ್‌ರೂಂನಲ್ಲಿ ತಂದೆ-ತಾಯಿಯರೇ ತುಂಬಿರುತ್ತಾರೆ. ಪ್ರತಿಯೊಬ್ಬ ಅಪ್ಪ ಅಮ್ಮ ಮಗುವಿನ ಬಟ್ಟೆ-ಬರೆ, ಮೇಕಪ್‌ನ ಜವಾಬ್ದಾರಿ ಹೊತ್ತಿರುತ್ತಾರೆ. ಮಗುವಿನ ಪಾತ್ರ ಯಾವುದೇ ಇರಲಿ, ಅತ್ಯಂತ ಸುಂದರವಾಗಿ, ಆಕರ್ಷಕವಾಗಿ ತಮ್ಮ ಮಗು ಕಾಣಬೇಕೆಂಬುದೇ ತಾಯಂದಿರ ಹೆಬ್ಬಯಕೆ. ಝುಗಮಗಿಸುವ ವೇಷಭೂಷಣ, ಹೊರಲಾರದಷ್ಟು ಆಭರಣ ತಗುಲಿ ಹಾಕಿ, ಗೋಡೆಗೆ ಬಳಿಯುವಂತೆ ಬಣ್ಣ ಬಳಿಯುತ್ತಾರೆ. ನಾಟಕ ಶುರುವಾಯಿತೆಂದರೆ ಈ ತಾಯಂದಿರು ಪ್ರೇಕ್ಷಾಂಗಣಕ್ಕೆ ಓಡುತ್ತಾರೆ. ಅಲ್ಲಿ ಡ್ಯಾಡಿಗಳು ಫೋಟೋ ತೆಗೆಯಲು ಕ್ಯಾಮರಾ ಹಿಡಿದು

ಸನ್ನದ್ಧರಾಗಿರಬೇಕೆಂದು ಎಚ್ಚರಿಸುತ್ತಾರೆ. ತಮ್ಮ ಮಕ್ಕಳು ರಂಗದ ಮೇಲೆ ಬಂದಾಗ ಆನಂದಬಾಷ್ಪ ಸುರಿಸುತ್ತಾ ಚಪ್ಪಾಳೆ ತಟ್ಟುತ್ತಾರೆ. ಡ್ಯಾಡಿಗಳು ಕ್ಯಾಮರಾ ಹಿಡಿದು ಪ್ರೇಕ್ಷಕರಿಗೆ ಅಡ್ಡವಾಗಿ ರಂಗದ ಮೇಲೆ ಓಡಾಡುತ್ತಾ ಫ್ಲ್ಯಾಷ್ ಮಾಡುತ್ತಾರೆ ! ಇದು ಇನ್ನೊಂದು ಬಗೆಯ ಮಕ್ಕಳ ರಂಗಭೂಮಿಯ ದುರಂತ ಚಿತ್ರ.

ತಂದೆ ತಾಯಂದಿರಿಗೆ, ಪೋಷಕರಿಗೆ ತಮ್ಮ ಮುದ್ದು ಮಕ್ಕಳು ಏನು ಮಾಡಿದರೂ ಪ್ರಿಯವೇ. ಶಾಲಾ ವ್ಯವಸ್ಥಾಪಕರಿಗೂ ಇದೇ ಶ್ರೀರಕ್ಷೆ. ಒಂದು ವಾರ್ಷಿಕೋತ್ಸವ ಮುಗಿದು ಮತ್ತೊಂದು ಅವರಿಗೆ ನಾಟಕದ ನೆನಾಪಗಬೇಕಾದರೆ ಇನ್ನೊಂದು ವಾರ್ಷಿಕೋತ್ಸವವೇ ಬರಬೇಕು.

ಶಾಲೆಗಳಲ್ಲಿ ನಾಟಕ ಮಹತ್ವದ ಪಾತ್ರ ವಹಿಸಬಲ್ಲದು ಎಂದು ಅನೇಕ ವಿದ್ವಾಂಸರು ವೇದಿಕೆಯ ಮೇಲೆ ಹೇಳುತ್ತ ಬಂದಿದ್ದಾರೆ. ಆದರೆ ನಾಟಕಕ್ಕೆ ಮಾತ್ರ ಸಿಗಬೇಕಾದ ಪಾತ್ರ ಇನ್ನೂ ಸಿಕ್ಕಿಲ್ಲವೆಂಬುದು ಶೋಚನೀಯ. ಸುಪ್ತ ಪ್ರತಿಭೆಯ ಪ್ರಕಾಶನಕ್ಕೆ ಮುಕ್ತ ಅವಕಾಶಗಳನ್ನು ಕಲ್ಪಿಸುವುದೇ ಶಿಕ್ಷಣದ ಮೂಲ ಉದ್ದೇಶ. ಕಲಾನುಭವದ ಮೂಲಕ ಸೃಜನಶೀಲತೆಯನ್ನು ಬೆಳೆಸಿಕೊಳ್ಳಲು ಶಾಲಾಮಕ್ಕಳಿಗೆ ಅವಕಾಶಗಳನ್ನು ಕಲ್ಪಿಸಬೇಕು. ವಿವಿಧ ಕಲೆಗಳ ಸಂಗಮವಾದ ನಾಟಕ ಕಲೆ ಮಕ್ಕಳಿಗೆ ವಿಶಿಷ್ಟ ಕಲಾನುಭವ ನೀಡಬಲ್ಲದು.

ಮಕ್ಕಳ ನಾಟಕಗಳಲ್ಲಿ ಎರಡು ವಿಧ : ಮೊದಲನೆಯದು, ಮಕ್ಕಳೊಡನೆ ಸೃಷ್ಟಿ ಮಾಡುವ ನಾಟಕ. ಇದು ಮಕ್ಕಳೇ ಸ್ವಂತವಾಗಿ ರಚಿಸಿ ತಾವು ಬರೆದದ್ದನ್ನು ಪ್ರೇಕ್ಷಕರ ಮುಂದೆ ಪ್ರದರ್ಶಿಸುವುದು. ಇದು 'ಸೃಜನಾತ್ಮಕ ನಾಟಕ' ಎಂದು ಕರೆಯಬಹುದು. ಎರಡನೆಯದು, ವ್ಯವಸ್ಥಿತವಾದ ತಂಡ ಎಳೆಯ ವಯಸ್ಸಿನ ಪ್ರೇಕ್ಷಕರಿಗಾಗಿ ಪ್ರಯೋಗಿಸುವ ಪೂರ್ವ ನಿಯೋಜಿತ ನಾಟಕ. ಇದನ್ನೇ ''ಮಕ್ಕಳ ರಂಗಭೂಮಿ'' ಎನ್ನಬಹುದು. ಸೃಜನಾತ್ಮಕ ನಾಟಕ ಮತ್ತು ಮಕ್ಕಳ ರಂಗಭೂಮಿ ಇವೆರಡೂ ಕಲಾತ್ಮಕ ಪ್ರಕ್ರಿಯೆ. ಮಕ್ಕಳ ನಾಟಕ ಮತ್ತು ರಂಗಭೂಮಿ ಶಾಲಾಮಕ್ಕಳ ಕಲಿಕೆಯ ದಿನಗಳ ಅವಿಭಾಜ್ಯ ಅಂಗವಾದಲ್ಲಿ ರಂಗಮಾಧ್ಯಮ ಬಾಲಕ ಬಾಲಕಿಯರ ಬದುಕಿನಲ್ಲಿ ಸೌಂದರ್ಯ, ಹೃದಯ ಶ್ರೀಮಂತಿಕೆ ಮೂಡುತ್ತದೆ.

(ಹುಟ್ಟಿದ ದಿನದಿಂದಲೇ ಮಗು ನಾಟಕವನ್ನು ಕಲಿಕೆಯ ಸಾಧನವನ್ನಾಗಿ ಬಳಸಿಕೊಳ್ಳುತ್ತದೆ. ತಮ್ಮ ಮಗುವಿನ ಸಹಜ ಪ್ರತಿಕ್ರಿಯೆ ನಾಟಕೀಯವೆಂದು ಅಪ್ಪ-ಅಮ್ಮನಿಗೆ ತೋರಿದಾಗ ಆಶ್ಚರ್ಯ-ರಂಜನೆ ಏಕಕಾಲದಲ್ಲಿ ಉಂಟಾಗುತ್ತದೆ. ಪುಟ್ಟ ಪುಟ್ಟ ಹೆಜ್ಜೆಯಿಟ್ಟು ಮರಿಹೆಜ್ಜೆ ಕುರಿ ಹೆಜ್ಜೆ ಹಾಕಿಕೊಂಡು ಹೋಗಿ ಮಗು ತಾಯಿಯ ಸೆರಗಿನಲ್ಲಿ ಮುಖ ಹುದುಗಿಸಿಕೊಳ್ಳುತ್ತದೆ. ಕ್ಷಣಕಾಲದ ನಂತರ ಸೆರಗಿನಿಂದಾಚೆಗೆ ಇಣಕಿ ನೋಡುತ್ತ ಮಗು ನಾಟಕದ ಉತ್ಕಟ ಕಾತರ ಮತ್ತು ಸಂತೃಪ್ತಿ ಪಡೆಯುತ್ತದೆ. ''ನಾಯಿ ಏನನ್ನುತ್ತೆ ಮರಿ ಎಂದಾಗ ''ಬೌ ಬೌ ಎಂದೋ 'ಕೋಳಿ ಏನನ್ನುತ್ತೆ ಮಗು ?' ಎಂದಾಗ

ಕೊಕೊಕೋಕೋ.. ಎಂದು ; 'ಹಸು ?' ಎಂದು ಪ್ರಶ್ನಿಸಿದಾಗ, 'ಅಂಬಾ' ಎನ್ನುವ ಮಾತಿನ ಮೊದ ಮೊದಲ ಅನುಕರಣೆ ; ಕಪ್ಪೆಯ ಹಾಗೆ ಕುಳಿತು ಜಿಮ್ಮುವುದು, ಕುದುರೆ ಸವಾರಿ ಮಾಡಿದಂತೆ ನಟಿಸುವುದು ಮುಂತಾದ ಅನೇಕ ಬಾಲಲೀಲೆಗಳು ಮಕ್ಕಳ ನಾಟಕೀಯ ಅಭಿವ್ಯಕ್ತಿಗಳು.

ಸುತ್ತಲಿನ ಜಗತ್ತನ್ನು ಸಮಾಜವನ್ನು ಮಕ್ಕಳು ಅರ್ಥ ಮಾಡಿಕೊಳ್ಳುವ ರೀತಿಯನ್ನು ಆ ಮೂಲಕ ತಮ್ಮ ಅನುಭವದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವ ಬಗೆಯನ್ನು ನಮ್ಮಲ್ಲಿ ಅನೇಕರು ಗಮನಿಸಲಾರರು. ಬೊಂಬೆಗೆ ಡ್ರೆಸ್ ಮಾಡಿ ಹಾಲು ಕುಡಿಸುವ ಹೆಣ್ಣು ಮಗು ತನ್ನ ಅಮ್ಮನನ್ನು ಅನುಕರಿಸುತ್ತದೆ ; ಟ್ರಕ್ ಡ್ರೈವರನ ಮಗ ಬರಿಗೈಯಲ್ಲಿ ಚಕ್ರ ತಿರುಗಿಸುವಂತೆ ನಟಿಸುತ್ತಾ ಬಾಯಲ್ಲಿ 'ಡುರ್' ಎಂದು ಮನೆಯಲ್ಲೆಲ್ಲಾ ಓಡಾಡುವಾಗ ತನ್ನ ಅಪ್ಪನನ್ನು ಅನುಕರಿಸುತ್ತಾನೆ. ಮಕ್ಕಳು ಅನುಕರಣೆಯ ಮೂಲಕ ಲೋಕಜ್ಞಾನ ಪಡೆಯಬಲ್ಲರು. ಮಕ್ಕಳ ಈ ಸಹಜ ಪ್ರವೃತ್ತಿಯನ್ನು ಪ್ರಕೃತಿ ನೀಡಿರುವ ಒಂದು ವರ ಎಂದು ಮಕ್ಕಳ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.)

ಮೊದಲ ನಾಲ್ಕು ವರ್ಷಗಳ ಕಾಲ ಸುತ್ತಲಿನ ಜಗತ್ತಿನಲ್ಲಿ ತಾನು ಕಂಡದ್ದನ್ನು ಮಗು ಅರ್ಥಮಾಡಿಕೊಳ್ಳುವ ರೀತಿ ಸ್ವಾರಸ್ಯಪೂರ್ಣ. ತಾನು ಕಂಡದ್ದನ್ನು, ತಿಳಿದುಕೊಂಡದ್ದನ್ನು ಹೊಸ ಕಲ್ಪನೆಯೊಡನೆ ಮಗು ಪ್ರಯೋಗಿಸಿ ತನ್ನದೇ ರೀತಿಯಲ್ಲಿ ಅರ್ಥೈಸಿಕೊಳ್ಳುತ್ತದೆ. 'ಚುಕ್‌ಬುಕ್' ಎಂದು ಕೂಗುತ್ತಾ ರೈಲುಗಾಡಿಯಂತೆ ಚಲಿಸುವುದು, ಏರೋಪ್ಲೇನಿನಂತೆ ಹಾರಾಡುವುದು, ಅಪ್ಪನಂತೆ ಸೈಕಲ್ ಸವಾರಿ ಇವೆಲ್ಲಾ ಮನೆಯಲ್ಲಿ ಎಲ್ಲರೂ ಕಾಣುವ ಸಾಮಾನ್ಯ ದೃಶ್ಯ. ಆಟಕ್ಕೆ ಯಾರೂ ಸಿಗದಿದ್ದಾಗ ಕಾಲ್ಪನಿಕ ಸ್ನೇಹಿತನೊಡನೆ ಮಗು ಆಟ ಮುಂದುವರಿಸಬಲ್ಲುದು. ಈ ಕಾಲ್ಪನಿಕ ಮಿತ್ರನೊಡನೆ ಯಾವ ಜಗಳ, ವಿರಸ ಇರುವುದೇ ಇಲ್ಲ, ಮಳೆಯ ನೀರು ಕೋಡಿಯಾಗಿ ಹರಿಯುತ್ತಿದ್ದರೆ ಕಾಗದದ ದೋಣಿ ಬಿಟ್ಟು ಹಿಂದೆಯೇ ಮಗು ಓಡುತ್ತದೆ. ತಾನು ತಿಳಿದುಕೊಂಡದ್ದನ್ನು ಉಪಯೋಗಿಸಿ ಅನೇಕ ಹೊಸ ವಿಚಾರಗಳನ್ನು ಮಗು ಪ್ರತಿಕ್ಷಣವೂ ಆಟದ ಮೂಲಕ ಕಲಿಯುತ್ತಲೇ ಇರುತ್ತದೆ.

ಶಾಲೆಗೆ ಸೇರುವ ದಿನ ಮಗು ನಾಟಕವನ್ನೂ ಜತೆಯಲ್ಲೇ ಕರೆತರುತ್ತದೆ. ದುರ್ದೈವವೆಂದರೆ ನಾಟಕಕ್ಕೆ ಶಾಲೆಯೊಳಗೆ ಪ್ರವೇಶ ನಿಷಿದ್ಧ, ಮುಂದೆ ಭವ್ಯ ಕಲಾನುಭವಕ್ಕೆ ಪೀಠಿಕೆಯಾಗಬೇಕಿದ್ದ ಈ ಆಟ ಮಗುವಿನ ಮೊದಲ ನಾಟಕಾನುಭವ ಶಾಲೆ ಸೇರಿದೊಡನೆಯೇ ಸಮಾಪ್ತಿ.

ಇಂದು ಶಾಲೆಗಳ ಶಿಕ್ಷಣ ವಿಧಾನದಲ್ಲಿ ಮಕ್ಕಳ ಮುಕ್ತ ಅಭಿವ್ಯಕ್ತಿಗೆ ಅವಕಾಶವೇ ಇಲ್ಲ, ಯಾವುದೇ ಒಂದು ತರಗತಿಗೆ ಹೋಗಿ ನೋಡಿ, ಮುಚ್ಚಿದ ಒಂದು ಕೊಠಡಿ, ಅದರಲ್ಲಿ ಸೆರೆ ಸಿಕ್ಕಿದ ಕೈದಿಗಳಂತಿರುವ ವಿದ್ಯಾರ್ಥಿಗಳು. ಟೀಚರ್‌ನ ಮಾತು ಕೇಳುತ್ತಾ ಅಸಹಾಯಕ ಶ್ರೋತೃಗಳಂತೆ ಕುಳಿತಿರುವುದು ಒಂದು ಸಾಮಾನ್ಯ ದೃಶ್ಯ. ಇದು one-

way-traffic. ನಿಷ್ಕ್ರಿಯರಾಗಿ ಮಕ್ಕಳು ಗಂಟೆಗಟ್ಟಲೆ ಕುಳಿತು ನಿಸ್ತೇಜರಾಗುತ್ತಾರೆ. ಚಿಲುಮೆಯಂತೆ ಉಕ್ಕುವ ಜೀವಂತಿಕೆ, ಅಪರಿಮಿತ ಶಕ್ತಿ, ಅದಮ್ಯ ಉತ್ಸಾಹವನ್ನು ಈ ಏಕಮುಖಿ ಪಾಠ ಪ್ರವಚನ ಪದ್ಧತಿ ಕೊಲ್ಲುತ್ತದೆ.

ಅಷ್ಟೇ ಅಲ್ಲ. ಒತ್ತಾಯಪೂರ್ವಕವಾಗಿ ಅಂಕಗಣಿತ, ವಿಜ್ಞಾನದಂತಹ ಅನೇಕ ವಿಷಯಗಳ ಹೇರಿಕೆ ಮಕ್ಕಳ ಬೆಳವಣಿಗೆಯನ್ನು ಕುಂಠಿತಗೊಳಿಸಬಹುದು. ಯಾವುದೇ ಒಂದು ವಿಷಯದಲ್ಲಿ ವಿಶೇಷ ಒಲವು ತೋರಿಸುವ ಕೆಲವು ಮಕ್ಕಳಿರಬಹುದು, ಅಂಥವರು ಕಂಠಪಾಠ ಮಾಡಿ ಒಪ್ಪಿಸಿ ಇತರ ಮಕ್ಕಳೊಡನೆ ಹೋಲಿಸಿ ಸೋಮಾರಿಕಟ್ಟೆ, ಅಪ್ರಯೋಜಕ, ಕುರಿ ಕಾಯೋದಕ್ಕೆ ಲಾಯಕ್ಕು ! ಎಂದು ತಳ್ಳಿ ಹಾಕುವುದು ಮಕ್ಕಳಲ್ಲಿ ಕೀಳರಿಮೆ ಬೆಳೆಸುತ್ತದೆ.

ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸಿ, ಅವರ ಸ್ವತಂತ್ರ ಅಭಿವ್ಯಕ್ತಿಗೆ ಟೀಚರ್ ಉತ್ತೇಜನ ನೀಡಬೇಕು. ಇದರಿಂದ ಮಗುವಿನ ವಿಶಿಷ್ಟ ಪ್ರತಿಭೆ ಅರಳಿ, ಸ್ವಂತ ವ್ಯಕ್ತಿತ್ವ ಬೆಳಕಿಗೆ ಬರಲು ಸಾಧ್ಯ. ಪ್ರಶ್ನೆಗಳು ಮಕ್ಕಳನ್ನು ಕಾಡಬೇಕು. ಸುತ್ತಲಿನ ಪ್ರಪಂಚದ ಬಗ್ಗೆ ಕುತೂಹಲ ಬೆಳೆಯುವಂತೆ ಸೂಕ್ತ ವಾತಾವರಣ ಶಾಲೆಗಳಲ್ಲಿ ನಿರ್ಮಾಣವಾಗಬೇಕು.

'ಸೃಜನಾತ್ಮಕ ನಾಟಕ' ಮಕ್ಕಳ ಆಟಪಾಠಗಳ ಆಧಾರದ ಮೇಲೆ ರೂಪುಗೊಳ್ಳುವ ಒಂದು ಸಮೂಹ ಕ್ರಿಯೆ. ಮಕ್ಕಳಿಂದಲೇ ಸೃಷ್ಟಿಗೊಳ್ಳುವ ಈ ನಾಟಕಕ್ಕೆ ಪ್ರೇರಣೆ, ಮಾರ್ಗದರ್ಶನ ನೀಡುವವನು ಅನುಭವಿ ಶಿಕ್ಷಕ ಅಥವಾ ರಂಗ ಕಾರ್ಯಕರ್ತ. ಪ್ರೇರಣೆಯಿಂದ ಉತ್ಸುಕರಾಗುವ ಮಕ್ಕಳು ವಿಭಿನ್ನ ಪಾತ್ರಗಳನ್ನು ಗ್ರಹಿಸಿ, ಸೃಷ್ಟಿಸಿ, ಸೃಜನಕಾರ್ಯದಲ್ಲಿ ಪ್ರವೃತ್ತರಾಗುತ್ತಾರೆ. ಸೃಜನಾತ್ಮಕ ನಾಟಕದಲ್ಲಿ ಪಾತ್ರಧಾರಿಗೂ, ಪ್ರೇಕ್ಷಕರಿಗೂ ಯಾವ ಭೇದವೂ ಇಲ್ಲ, ಎಲ್ಲಾ ಮಕ್ಕಳೂ ಈ ಸೃಷ್ಟಿಕಾರ್ಯದಲ್ಲಿ ಪಾಲ್ಗೊಳ್ಳುವ ಅವಕಾಶವಿರುತ್ತದೆ. ಈ ಚಟುವಟಿಕೆ ನಡೆಯುವಾಗ ರಂಗಕಾರ್ಯಕರ್ತನ ಪಾತ್ರ ಮಹತ್ವವಾದದ್ದು. ಆತ ಪಾಠ ಹೇಳಿ ಕೊಡುವ ಟೀಚರ್ ಅಲ್ಲ. ನಾಟಕದ ನಿರ್ದೇಶಕನೂ ಅಲ್ಲ, ಮಕ್ಕಳ ತಂಡದ ಒಬ್ಬ ಆತ್ಮೀಯ ಮಿತ್ರ ಅಷ್ಟೆ. ಯಾವುದಾದರೂ ಕತೆ ಹೇಳಿ ಅಥವಾ ಮಕ್ಕಳಿಂದಲೇ ಹೇಳಿಸಿ ಪ್ರೇರಣೆ ನೀಡಿದೊಡನೆಯೇ ಮಕ್ಕಳ ಸೃಜನಾತ್ಮಕ ನಾಟಕ ಆರಂಭ. ನಾಟಕ ಕ್ರಿಯೆ ಪ್ರಾರಂಭವಾದ ನಂತರ ಮಕ್ಕಳ ಉತ್ಸಾಹಕ್ಕೆ ಭಂಗ ಬಾರದಂತೆ, ಮಕ್ಕಳು ನಾಟಕದ ಸೃಷ್ಟಿಯಲ್ಲಿ ತೊಡಗಿ ಸಂಪೂರ್ಣವಾಗಿ ತಲ್ಲೀನರಾಗುವಂತೆ ಪ್ರೇರೇಪಣೆ ನೀಡುವುದು ರಂಗಕಾರ್ಯಕರ್ತನ ಜವಾಬ್ದಾರಿ.

ಸೃಜನಾತ್ಮಕ ನಾಟಕದ ಅವಧಿ ಮಕ್ಕಳ ಆಸಕ್ತಿಗನುಗುಣವಾಗಿ ದೀರ್ಘವಾಗಬಹುದು, ಅಥವಾ ಚಿಕ್ಕದಾಗಿ ಮುಗಿಯಬಹುದು. ಪ್ರತಿಯೊಂದು ಸೃಜನಾತ್ಮಕ ನಾಟಕವನ್ನೂ ತಮ್ಮದೇ ಆದ ರೀತಿಯಲ್ಲಿ ಮುಗಿಸುವ ಸ್ವಾತಂತ್ರ್ಯ ಮಕ್ಕಳಿಗಿರಬೇಕು.

ಮಕ್ಕಳಿಗೆ ಪ್ರಿಯವಾದ ಕತೆ, ಪದ್ಯ, ಚಾರಿತ್ರಿಕ ಘಟನೆ ಅಥವಾ ಮಕ್ಕಳೇ ನಿರೂಪಿಸುವ ಯಾವುದೇ ಅನುಭವ ಅಥವಾ ದೃಶ್ಯ – ಇವುಗಳಿಂದ ಸೃಜನಾತ್ಮಕ ನಾಟಕ ರಚಿತವಾಗಬಹುದು. ಸೃಜನಾತ್ಮಕ ನಾಟಕಕ್ಕೆ ವೇಷಭೂಷಣ, ರಂಗಸಜ್ಜಿಕೆ, ಮೇಕಪ್ ಯಾವುದೂ ಬೇಕಿಲ್ಲ. ಈ ನಾಟಕಕ್ಕೆ ಪ್ರತ್ಯೇಕ ಪ್ರೇಕ್ಷಕ ವರ್ಗವಿಲ್ಲ. ಭಾಗವಹಿಸುವ ಮಕ್ಕಳೇ ಪ್ರೇಕ್ಷಕರೂ ಆಗಿರುತ್ತಾರೆ. ಇದು ಪ್ರತಿಭಾವಂತರಾದ ಕೆಲವೇ ಮಕ್ಕಳಿಗೆ ಸೀಮಿತವಾದ ಚಟುವಟಿಕೆ ಅಲ್ಲ. ಎಲ್ಲಾ ಮಕ್ಕಳೂ ನಾಟಕಸೃಷ್ಟಿಯಲ್ಲಿ ಪಾಲ್ಗೊಳ್ಳಬಹುದು.

ಸೃಜನಾತ್ಮಕ ನಾಟಕದಿಂದ ಮಕ್ಕಳಲ್ಲಿ ಕಲ್ಪನಾ ಸಾಮರ್ಥ್ಯ ಬೆಳೆಸಲು, ಸ್ವತಂತ್ರ ವಿಚಾರಶಕ್ತಿ ಹೆಚ್ಚಿಸಲು ಸಾಧ್ಯ. ಮಕ್ಕಳ ವ್ಯಕ್ತಿತ್ವ ರೂಪಿಸುವ ದೃಷ್ಟಿಯಿಂದ ಸೃಜನಾತ್ಮಕ ನಾಟಕಕ್ಕೆ ಮಹತ್ವಪೂರ್ಣ ಸ್ಥಾನ ದೊರೆಯುವಂತಾಗಬೇಕು.

ಸೃಜನಾತ್ಮಕ ನಾಟಕದಿಂದ ಮಕ್ಕಳಲ್ಲಿರುವ ಸಂಕೋಚ ಪ್ರವೃತ್ತಿ , ಭಯ-ಲಜ್ಜೆ ಗೊಂದಲ ದೂರವಾಗುತ್ತದೆ. ಓದು-ಬರಹದಲ್ಲಿ ಉದಾಸೀನರಾದ, ಅತಿಭಾವುಕತೆ ಅಥವಾ ಮಾನಸಿಕ ಅಸ್ವಸ್ಥತೆಯಿಂದ ತೊಳಲುವ ಮಕ್ಕಳಿಗೂ ಕೂಡಾ ಈ ಚಟುವಟಿಕೆ ಉಪಯುಕ್ತ. ವಿಭಿನ್ನ ಪಾತ್ರಗಳ ಮೂಲಕ ತಮ್ಮ ಭಾವನೆಗಳನ್ನು ಪ್ರಕಟಪಡಿಸಲು ಸೃಜನಾತ್ಮಕ ನಾಟಕದಲ್ಲಿ ಮುಕ್ತ ಅವಕಾಶ ದೊರೆಯುತ್ತದೆ.

ಸೃಜನಾತ್ಮಕ ನಾಟಕಗಳಲ್ಲಿ ಪಾಲ್ಗೊಳ್ಳುವ ಮಕ್ಕಳಿಗೆ ದೊರೆಯುವ ಪ್ರಯೋಜನ ಹಲವಾರು. ಸ್ವತಂತ್ರ ವಿಚಾರಶಕ್ತಿ , ಸೌಂದರ್ಯ ಪ್ರಜ್ಞೆ , ಇಂದ್ರಿಯಗಳ ಗ್ರಹಣಶಕ್ತಿ ಹೆಚ್ಚುತ್ತದೆ. ಮಕ್ಕಳು ತಮ್ಮ ಅನುಭವದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಾರೆ. ಸೃಜನಾತ್ಮಕ ನಾಟಕದಿಂದ ಮಗುವಿನ ಧ್ವನಿಶಕ್ತಿ ಉತ್ತಮಗೊಳ್ಳುತ್ತದೆ. ಶ್ರವಣಶಕ್ತಿ ತೀಕ್ಷ್ಣವಾಗುತ್ತದೆ. ಗಮನಶಕ್ತಿ ಹೆಚ್ಚುತ್ತದೆ.

ಸರಳವಾದ ಚುಟುಕ ಅಥವಾ ಪದ್ಯ ಹಾಡುತ್ತಾ , ಸ್ವೇಚ್ಛೆಯಿಂದ ಚಲಿಸುವಾಗ ದೊರೆಯುವಂಥ ಖುಷಿ ಮಕ್ಕಳಿಗೆ ಬೇರೆಲ್ಲೂ ಸಿಗಲಾರದು. ರೈಲುಗಾಡಿ ಅಥವಾ ಬಸ್ಸಿನಂತೆ ಚಲಿಸಬಹುದು. ಅಡಿಗೆಮನೆಯ ಒಂದು ನಿರ್ಜೀವ ತಟ್ಟೆಯಾಗಬಹುದು. ಹೊಸ ಹೊಸ ರೂಪಬಂಧ, ವಿನ್ಯಾಸಗಳನ್ನು ಮಕ್ಕಳೇ ಸೃಷ್ಟಿಸುತ್ತಾರೆ. ತಮ್ಮ ಸುತ್ತಲಿನ ಪರಿಸರವನ್ನು ಅರಿತುಕೊಳ್ಳಲು ರಂಗಚಟುವಟಿಕೆ ಒಂದು ಪರಿಣಾಮಕಾರಿ ಸಾಧನ. ಚಿಕ್ಕಮಕ್ಕಳು ಪ್ರಾಣಿ ಸಂಗ್ರಹಾಲಯ, ಮೆರ್ರಿ ಗೋ ರೌಂಡ್, ಋತುಗಳು ಮುಂತಾದ ದೃಶ್ಯಗಳನ್ನು ಸೃಷ್ಟಿಸುವುದರಲ್ಲಿ ಉತ್ಸಾಹದಿಂದ ಮುಂದೆ ಬರುತ್ತಾರೆ.

ಶಾಲೆಗಳಲ್ಲಿ ಸೃಜನಾತ್ಮಕ ನಾಟಕದ ಚಟುವಟಿಕೆ ನಡೆಸುವವರು ಯಾರು ? ಪಿ.ಟಿ. ಮಾಸ್ತರು ಅಥವಾ ಕ್ರಾಫ್ಟ್ ಟೀಚರ್‌ಗೆ ಇದೊಂದು ಸಂಬಳವಿರದ ಹೆಚ್ಚಿನ ಹೊರೆ. ಅಷ್ಟು ಮಾತ್ರವಲ್ಲ, ಶಾಲೆಯ ವ್ಯವಸ್ಥೆಗೆ ಸಂಬಂಧಪಟ್ಟ ಅನೇಕ ಕೆಲಸಗಳನ್ನೂ ಇದೇ ಮೇಷ್ಟ್ರಿಗೆ ಅಂಟಿಸಿರುತ್ತಾರೆ. ಸೃಜನಾತ್ಮಕ ನಾಟಕ ಚಟುವಟಿಕೆ ಪ್ರಾರಂಭಿಸಲು ನೇಮಿಸಿದರೂ, ಈತ

ಮೊದಲೇ ಸೋತು ಸುಣ್ಣವಾಗಿರುತ್ತಾನೆ. ಸೃಜನಾತ್ಮಕ ನಾಟಕ ಚಟುವಟಿಕೆಯಲ್ಲಿ ಭಾಗವಹಿಸುವ ಟೀಚರ್ ಪೂರ್ವಸಿದ್ಧತೆ ಮಾಡಿಕೊಳ್ಳಲು ಅವಕಾಶ ನೀಡಿ, ಯಾವಾಗಲೂ ಮಕ್ಕಳೊಡನೆ ಗೆಲುವಿನಿಂದ ಉತ್ಸಾಹದಿಂದ ಬೆರೆಯುವಂತೆ ಉತ್ತೇಜನ ನೀಡಬೇಕು.

ಸೃಜನಾತ್ಮಕ ನಾಟಕ ಚಟುವಟಿಕೆಗೆ ಸೂಕ್ತವಾದ ವಾತಾವರಣ ಎಷ್ಟೋ ಶಾಲೆಗಳಲ್ಲಿ ಇರುವುದಿಲ್ಲ. ಯಾವುದಾದರೂ ಪಾರ್ಕ್, ಜಾಗ, ಮನೆಯ ಮೇಲಿನ ಟೆರೇಸ್ ಅಥವ ಮೈದಾನ ಈ ಚಟುವಟಿಕೆ ಅತ್ಯಂತ ಪರಿಣಾಮಕಾರಿ.

ಸೃಜನಾತ್ಮಕ ನಾಟಕದಲ್ಲಿ ಪುಟಾಣಿ ಮಕ್ಕಳಿಗೆ ದೊರೆಯುವ ಪ್ರಯೋಜನ :

1. ಉಳಿದ ಮಕ್ಕಳೊಡನೆ ಸಹಕರಿಸಿ ಕೆಲಸ ಮಾಡುವಾಗ ಸಹನೆ ಹಾಗೂ ನಿಖರವಾಗಿ, ಖಚಿತವಾಗಿ, ಪರಿಣಾಮಕಾರಿಯಾಗಿ ತನ್ನ ವಿಚಾರಗಳನ್ನು ಅಭಿವ್ಯಕ್ತಿಗೊಳಿಸುವ ಶಕ್ತಿ ಪಡೆಯುತ್ತಾರೆ. ಶಬ್ದ ಮತ್ತು ಧ್ವನಿಯ ಮೂಲಕ ಈ ಶಕ್ತಿಯನ್ನು ಊರ್ಜಿತಗೊಳಿಸಿಕೊಳ್ಳಬಹುದು.

2. ಮಕ್ಕಳ ಕಲ್ಪನಾಶಕ್ತಿಗೆ ನಾಟಕ ಸಾಣೆ ಹಿಡಿಯಬಲ್ಲುದು. ಗ್ರಹಿಕೆ, ಗಮನ ಸಾಮರ್ಥ್ಯ ಮತ್ತು ಏಕಾಗ್ರತೆ ಬೆಳೆಸುತ್ತದೆ.

3. ಜ್ಞಾನವಾಹಿನಿಯನ್ನು ಒಂದು ವಿಶಿಷ್ಟ ಕಲಾನುಭವವಾಗಿ ಮಾರ್ಪಡಿಸುವುದು ಸೃಜನಾತ್ಮಕ ನಾಟಕದಿಂದ ಸಾಧ್ಯ.

★★★

# ಮಕ್ಕಳ ನಾಟಕಗಳ ತಂತ್ರ

- ಎನ್.ಎಸ್. ವೆಂಕಟರಾಮ್

ಚಿಕ್ಕ ಮಕ್ಕಳಿಗಾಗಿ ರಂಗಯೋಗ್ಯ ನಾಟಕ ಬರೆಯುವುದಾಗಲೀ, ಮಕ್ಕಳಿಂದ ನಾಟಕ ಆಡಿಸುವುದಾಗಲೀ ಅನೇಕರು ಭಾವಿಸಿರುವಂತೆ ಸುಲಭದ ಕೆಲಸವೇನಲ್ಲ. ಒಬ್ಬ ನಾಟಕಕಾರ ಮಹತ್ವಾಕಾಂಕ್ಷೆಯಿಂದ ಬರೆದ ನಾಟಕವೊಂದು ರಂಗದ ಮೇಲೆ ಪ್ರಯೋಗಿಸಲ್ಪಟ್ಟಾಗ ಮಕ್ಕಳಿಗೆ ಅರ್ಥವೇ ಆಗದೆ ಸೋಲಬಹುದು. ಹಾಗೆಯೇ ಸಾಧಾರಣ ದರ್ಜೆಯ ನಾಟಕವೊಂದು ಮಕ್ಕಳ ಮನಸ್ಸನ್ನು ಸೂರೆಗೊಂಡು ಖುಷಿ ನೀಡುವುದರಲ್ಲಿ ಸಫಲವಾಗಬಹುದು. ಯಶಸ್ವಿಯಾದ ನಾಟಕವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ ನೋಡಿದಾಗ ಆ ಪ್ರಯೋಗದಲ್ಲಿ ಪರಿಣತನೊಬ್ಬ ಅಳವಡಿಸಿದ ತಂತ್ರಕೌಶಲ್ಯ ನಮಗೆ ಗೋಚರಿಸುತ್ತದೆ.

ತಂತ್ರವೆಂದೊಡನೆ ಅಸಡ್ಡೆಯಿಂದ ಹೀಗಳೆಯುವವರೂ ಉಂಟು. ನಾಟಕ ರಚನೆಯಲ್ಲಿ ಅಥವ ಪ್ರಯೋಗದಲ್ಲಿ ತಂತ್ರಜ್ಞಾನದ ಉದ್ದೇಶ, ಸ್ವರೂಪ, ಶಕ್ತಿ ಕಲಾವಂತಿಕೆ, ಸೃಜನಶೀಲತೆ ಇವೆಲ್ಲವನ್ನೂ ಅರಿತ ಪರಿಣತನೊಬ್ಬ ಬಳಸಿದಾಗ ತಂತ್ರವು ತಾನು ನಿರ್ವಹಿಸಬೇಕಾದ ಕೆಲಸವನ್ನು ಮಾತ್ರವಲ್ಲದೆ, ಸೃಷ್ಟಿಕಾರ್ಯದಲ್ಲೂ ಸಹಭಾಗಿಯಾಗುತ್ತದೆ. ತಂತ್ರ ನಾಟಕದ ಮೂಲ ಉದ್ದೇಶವನ್ನು ಸ್ಪಷ್ಟೀಕರಿಸಲು ಪ್ರೇಕ್ಷಕರಿಗೆ ಮುಟ್ಟಿಸಲು ಸಹಾಯಕವಾಗುತ್ತದೆ.

ಪ್ರೇಕ್ಷಕರಲ್ಲಿ ಭಾವನೆಗಳನ್ನು ಪ್ರಚೋದಿಸಲು ಕಲ್ಪನಾ ಸಾಮರ್ಥ್ಯವೊಂದೇ ಸಾಲದು. ಉದ್ದೇಶಿತ ಭಾವನೆಯಾಗಲಿ, ಅರ್ಥವಾಗಲಿ ಪ್ರಕಟವಾಗಲು ಅಗತ್ಯವಾದ ಸೂಕ್ತ ಹಂದರ, ಅಥವ ರೂಪ ಬಂಧವೂ ಇರಬೇಕು. ನಿಜ ಜೀವನದ ಅಥವಾ ಕಲ್ಪನಾ ಚಿತ್ರಗಳ ಅಥವಾ ಕಾಲ್ಪನಿಕ ಚಿತ್ರ ಸರಣಿಯಷ್ಟೇ ದೃಶ್ಯಾವಳಿಗಳ ಪುನರಾವರ್ತನೆಯಾಗಿ ನಾಟಕವಾಗಲಾರದು. ಅಷ್ಟೇ ಸಾಕಾಗಿದ್ದರೆ ಕ್ಯಾಮರಾ ಛಾಯಾಚಿತ್ರಗಳನ್ನು ತೆಗೆಯುವಂತೆ ನಾಟಕಕಾರ ನಾಟಕಗಳನ್ನು ಪ್ರಸ್ತುತ ಪಡಿಸಬಹುದಾಗಿತ್ತು.

ನಾಟಕರೂಪದಲ್ಲಿ ನಿಜಜೀವನದ ವಿವಿಧ ಘಟನೆಗಳನ್ನು ವಿವಿಧ ಭಾಗಗಳನ್ನು ಒಂದು ನಿಶ್ಚಿತ ವಿಧಾನದಲ್ಲಿ ಮರು ಜೋಡಣೆ ಮಾಡಿದಾಗಲೇ ಲೇಖಕ ತನ್ನ ಅನುಭವ

ಅಥವಾ ವಿಚಾರವನ್ನು ನಾಟಕರೂಪದಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸಲು ಸಾಧ್ಯ. ಈ ಬಗೆಯ ಮರು ಜೋಡಣೆಯನ್ನು ತಂತ್ರಜ್ಞಾನದಿಂದ ಮಾತ್ರ ಸಾಧಿಸಲು ಸಾಧ್ಯ. ನಾಟಕದಲ್ಲಿ ಈ ತಂತ್ರ ಕೌಶಲ್ಯವನ್ನು ರಚನಾಕ್ರಮ ಅಥವಾ ವಿನ್ಯಾಸ ಎಂದು ಕರೆಯಬಹುದು. ರಚನಾವಿನ್ಯಾಸ ಕೆಲವು ಮೂಲ ತತ್ವಗಳನ್ನು ಅವಲಂಬಿಸಿರುತ್ತದೆ. ಈ ತತ್ವಗಳ ಬಗ್ಗೆ ಸ್ಪಷ್ಟ ವಿವರಣೆ ನೀಡುವುದು ಕ್ಲಿಷ್ಟವಾದರೂ ಇವು ಕಾಲಾನುಕ್ರಮದಲ್ಲಿ ಬೆಳೆಯುತ್ತಾ ಬಂದಿವೆ. ಅನೇಕ ವರ್ಷಗಳ ಅವಧಿಯಲ್ಲಿ ರಂಗಪ್ರಯೋಗದಲ್ಲಿ ಕಂಡುಕೊಂಡ ಸಂಗತಿಗಳ ಆಧಾರದಿಂದ ಪ್ರಮಾಣೀಕರಿಸಲ್ಪಟ್ಟಿವೆ. ಪ್ರಾರಂಭದಲ್ಲಿ ಯಾವ ಕಲೆಗೂ ನಿಶ್ಚಿತ ಸೂತ್ರ ಇರಲಿಲ್ಲ. ನೂರಾರು ವರ್ಷಗಳ ಅವಧಿಯಲ್ಲಿ ಕಲಾವಿದರು ತಮ್ಮ ರಂಗಾನುಭವದ ಮೂಸೆಯಲ್ಲಿ ಸೃಷ್ಟಿಕಾರ್ಯಕ್ಕೆ ಆಧಾರವಾದ ಕೆಲವು ಸೂತ್ರಗಳನ್ನು ಕಂಡುಕೊಂಡಿದ್ದಾರೆ. ಕೆಲವು ಕಲೆಗಳಿಗೂ ಅನ್ವಯಿಸಬಹುದಾದ ಮೂಲತತ್ವಗಳನ್ನು ಪರಿಶೀಲಿಸಿ ಇವು ನಾಟಕ ಕಲೆಗೆ ಹೇಗೆ ಪ್ರಯೋಜನಕಾರಿಯೆಂದು ನೋಡೋಣ. ಕಲಾಕೃತಿಯೊಂದರ ಸೃಷ್ಟಿಗೆ ಮುಖ್ಯವಾದ ಅಂಶಗಳಿವು. ಕ್ರಿಯೈಕ್ಯ (unify), ಆಯ್ಕೆ (selectivity), ಪರಿಮಾಣ (proportion), ಮರುಜೋಡಣೆ (re-arrangement), ತೀವ್ರತೆ (intensification).

ಕ್ರಿಯೈಕ್ಯ (unity) ಎಲ್ಲಾ ಪ್ರಕಾರಗಳಿಗೂ ಅನ್ವಯಿಸುವ ಮೂಲಸೂತ್ರ. ಇದನ್ನು ಫ್ರೆಂಚರು ಹೇಳುವ ಕಾಲೈಕ್ಯ, ಸ್ಥಳೈಕ್ಯ, ಭಾವೈಕ್ಯ ಎಂದು ತಿಳಿಯಬಾರದು. ಕ್ರಿಯೈಕ್ಯ ಎಂದರೆ ನಾಟಕದ ಚೌಕಟ್ಟಿನಲ್ಲಿ ಕಂಡುಬರುವ ನಿಷ್ಠೆ ಎನ್ನಬಹುದು. ಗೊತ್ತುಗುರಿಯಿಲ್ಲದೆ, ದಿಕ್ಕೆಟ್ಟು ಹರಿದಾಡುವ, ಅತ್ಯಂತ ಸಡಿಲವಾದ ಅರ್ಥಾರ್ಥಕ್ಕೆ ಸಂಬಂಧವಿರದ ಭಾಗಗಳ ಬಲವಂತ ಜೋಡಣೆಯಾಗಲೀ, ಅಸಂಬದ್ಧವಾದ ಹಾಗೂ ಹೊಂದಿಕೆಯೇ ಇರದ ಅನೇಕ ವಿಚಾರಗಳ ಸರಮಾಲೆಯನ್ನು ತುರುಕಿದಾಗ ದೃಶ್ಯಭಂಗವಾಗುವುದು ಸಹಜ. ಆದರೆ ಮೊದಲು ಅಂತಹ ವಿರೂಪದಲ್ಲೇ ಜನಿಸಿದ ನಾಟಕ ಕಲೆ ಕಾಲಾನುಕ್ರಮದಲ್ಲಿ ನಾಟಕದ ವಿನ್ಯಾಸ ವಸ್ತುನಿಷ್ಠವಾಗಿರಬೇಕೆಂಬ ತತ್ವವನ್ನು ಕಂಡುಕೊಂಡಿತು. ನಾಟಕದ ರೂಪಬಂಧದಲ್ಲಿ ಈ ತತ್ವದ ಉಪಯುಕ್ತತೆಯ ವ್ಯಾಪ್ತಿ, ಬಳಕೆ, ಪ್ರಯೋಜನ ಅಸಾಧಾರಣವಾದದ್ದು. ಇಡೀ ನಾಟಕವನ್ನು ಬಿಡಿಬಿಡಿಯಾಗಿ ವಿಂಗಡಿಸಿ, ಪರೀಕ್ಷಿಸಿದಾಗ ಪ್ರತಿಯೊಂದು ಬಿಡಿಭಾಗವೂ ವಸ್ತುನಿಷ್ಠವಾಗಿದೆಯೇ ಇಲ್ಲವೇ ಎಂಬುದನ್ನು ಮನಗಾಣಬಹುದು. ಯಾವುದೇ ಬಿಡಿ ಭಾಗವೂ ಪ್ರಾರಂಭದಲ್ಲಿ ಪರಕೀಯವಾಗಿ ಕಂಡರೂ ಕ್ರಮೇಣವಾಗಿ ಬೆಳೆದು ಮುಂದೆ ಮುಖ್ಯ ಸನ್ನಿವೇಶದಲ್ಲಿ ಗಾಢ ಅನುಭವ ನೀಡಲು ಸಹಾಯಕವಾದಲ್ಲಿ ಕ್ರಿಯೈಕ್ಯಕ್ಕೆ ಭಂಗ ಬರುವುದಿಲ್ಲ. ಮಕ್ಕಳ ಗ್ರಹಣ ಶಕ್ತಿಯ ಮಿತಿಯನ್ನು ಗಮನಿಸಿದಾಗ ರಚನಾ ವಿನ್ಯಾಸದಲ್ಲಿ ಕ್ರಿಯೈಕ್ಯದ ಪ್ರಾಮುಖ್ಯತೆ ತಿಳಿಯುವುದು.

**Unifying Devices :**

- ಒಂದು ಪಾತ್ರದ ಸುತ್ತ ಹೆಣೆದ ಘಟನಾವಳಿಗಳು ಪ್ರಸಿದ್ಧ ಲೋಕವಿಖ್ಯಾತ, ಚಾರಿತ್ರಿಕ ಪಾತ್ರವಾಗಿರಬಹುದು ಅಥವಾ ಕಾಲ್ಪನಿಕ ಪಾತ್ರವೇ ಇರಬಹುದು. ನಾಟಕದ ಭಾಗಗಳಿಗೆ ನೇರ ಸಂಬಂಧವಿರದಿದ್ದರೂ ಒಂದೇ ವ್ಯಕ್ತಿಯ ಬದುಕಿಗೆ ಸಂಬಂಧಪಟ್ಟಿದ್ದೆಂಬ ಕಾರಣದಿಂದ ಕ್ರಿಯೈಕ್ಯ ಸಾಧಿಸಬಹುದು

- ಒಂದು ಮುಖ್ಯ ಘಟನೆಯ ಪೂರ್ವೋತ್ತರ, ಕಾರ್ಯಕಾರಣ

- ಒಂದೇ ಸ್ಥಳದಲ್ಲಿ ಎಲ್ಲಾ ಕಾರ್ಯವ್ಯಾಪಾರಗಳೂ ಜರುಗುವುದು

- ಕಾಲವನ್ನು ಸಂಕುಚಿತಗೊಳಿಸುವುದು. ಒಂದು ದಿನದಲ್ಲಿ ಅಥವಾ ಕೆಲವೇ ದಿನಗಳಲ್ಲಿ ಘಟನೆ ನಡೆದಂತೆ ತಿಳಿಸುವುದು.

**ಸುಬದ್ಧತೆ (coherence)**

ಕ್ರಿಯೈಕ್ಯದಂತೆಯೇ ಸುಬದ್ಧತೆಯೂ ಕೂಡ ಒಂದು ನಾಟಕ ಪರಿಣಾಮಕಾರಿಯಾಗಲು ಮುಖ್ಯಸಾಧನ. ನಾಟಕದ ಒಂದು ಬಿಡಿಭಾಗ ಮತ್ತೊಂದು ಬಿಡಿಭಾಗಕ್ಕೆ ಸಂಬಂಧಪಟ್ಟಿದ್ದರೆ ಸಾಲದು, ಒಂದು ಬಿಡಿಭಾಗದಿಂದ ಮತ್ತೊಂದು ಬಿಡಿಭಾಗಕ್ಕೆ ತರ್ಕಬದ್ಧವಾಗಿ, ಸಮರ್ಪಕವಾಗಿ ನಾಟಕ ಕ್ರಿಯೆಯನ್ನು ಉತ್ಕಟಗೊಳಿಸುವ ಸಾಧನವಾಗಬೇಕು. ಪಾತ್ರಕ್ಕೂ ಕ್ರಿಯೆಗೂ ನಡುವೆ ಉದ್ಭವಿಸುವ ಭಾವನೆಗಳನ್ನು ಘನೀಕರಿಸಲು ಸಹಾಯಕವಾಗಬೇಕು.

**ಅರ್ಥಪ್ರಾಧಾನ್ಯ ಮತ್ತು ಆಯ್ಕೆ (emphasis and selectivity)**

ಸೂಕ್ತ ಆಯ್ಕೆಯಿಂದ ಲೇಖಕ ತಾನು ಇಚ್ಛಿಸುವ ಭಾಗಕ್ಕೆ ಒತ್ತು ನೀಡಲು ಸಾಧ್ಯ. ಆಯ್ಕೆಯಿಂದಾಗಿ ನಾಟಕದ ಪ್ರಮುಖ ಅಂಶಗಳನ್ನು ಪ್ರೇಕ್ಷಕ ಗ್ರಹಿಸಲು ಸಾಧ್ಯ. ಆಯ್ಕೆಯಿಂದಲೇ ನಾಟಕದ ಅರ್ಥಕ್ಕೆ ಪ್ರಾಧಾನ್ಯ ದೊರೆಯುವುದು. ಅನಪೇಕ್ಷಿತ ಭಾಗಗಳನ್ನು ವರ್ಜಿಸಿ ಬಿಟ್ಟು ಬಿಡುವುದರ ಮೂಲಕ ನಾಟಕದ ಪ್ರಮುಖ ಭಾಗಕ್ಕೆ ಪ್ರಾಧಾನ್ಯ ಸಿಗುವುದು. ಆಯ್ಕೆಯಿಂದ ನಾಟಕದ ರೂಪಬಂಧ ಸುಂದರವಾಗುವುದಲ್ಲದೆ ಗೊಂದಲವನ್ನು ಹೋಗಲಾಡಿಸಿ ಅರ್ಥಸ್ಪಷ್ಟತೆಯನ್ನು ನೀಡುತ್ತದೆ.

**ಪರಿಮಾಣ (proportion)**

ಅರ್ಥಪ್ರಾಧಾನ್ಯದಂತೆಯೇ ಪರಿಮಾಣವೂ ನಾಟಕ ರಚನಾ ವಿಧಾನದ ಮುಖ್ಯ ಅಂಶ. ಕೆಲವು ಭಾಗಗಳನ್ನು ಬಿಟ್ಟುಬಿಡುವುದರ ಮೂಲಕ ಅರ್ಥ ಪ್ರಾಧಾನ್ಯ ಸಾಧಿಸಬಹುದಾದರೂ ಮುಖ್ಯ ಭಾಗವನ್ನು ಬಿಟ್ಟು ಉಳಿದದ್ದನ್ನೆಲ್ಲಾ ವರ್ಜಿಸಬೇಕೆಂಬುದು ಈ

ಮಾತಿನ ಅರ್ಥವಲ್ಲ. ನಾಟಕದ ರಚನಾ ಕ್ರಮದಲ್ಲಿ ಇತರ ಎಲ್ಲಾ ಭಾಗಗಳೂ ಇರಬಹುದಾದರೂ ಅವು ಮುಖ್ಯ ಭಾಗಕ್ಕೆ ಅಧೀನವಾಗಿ, ಪೂರಕವಾಗಿ ಇರಬೇಕು. ಈ ಕಾರ್ಯ ಸಾಧಿಸಲು ಪ್ರತಿಭಾಗವೂ ಸರಿಯಾದ ಪರಿಮಾಣದಲ್ಲಿ ಹಿತಮಿತವಾಗಿರಬೇಕು.

**ಮರುಜೋಡಣೆ (re-arrangement)**

ಮರುಜೋಡಣೆ ಪಡೆಯಲು ನಾಟಕದ ಮುಖ್ಯ ಭಾಗಕ್ಕೆ ಪ್ರಾಧಾನ್ಯ ಕೊಡಲು ಪರಿಮಾಣ ಎಷ್ಟು ಅಗತ್ಯವೋ, ಆ ಮುಖ್ಯ ಭಾಗ ಯಾವ ಸ್ಥಾನದಲ್ಲಿ ಇದೆ ಎಂಬುದೂ ಅಷ್ಟೇ ಮುಖ್ಯ. ಮುಖ್ಯಭಾಗ ಸರಿಯಾದ ಸ್ಥಾನದಲ್ಲಿದ್ದಾಗ ಪ್ರೇಕ್ಷಕ ಅದನ್ನು ತಟ್ಟನೆ ಗ್ರಹಿಸಲು ಸಾಧ್ಯ. ಪೂರಕ ಭಾಗಗಳಿಗೆ ಕಡಿಮೆ ಪ್ರಾಧಾನ್ಯ ನೀಡಿ ಅವು ಮುಖ್ಯಭಾಗದತ್ತ ಪ್ರೇಕ್ಷಕನ ಗಮನವನ್ನು ಕೊಂಡೊಯ್ಯಲು ಸಹಾಯಕವಾಗಬೇಕು.

**ತೀವ್ರತೆ (intensification)**

ರಚನಾ ವಿನ್ಯಾಸದಲ್ಲಿ ಮರುಜೋಡಣೆಯ ಕ್ರಮದಿಂದ ಪ್ರೇಕ್ಷಕನಿಗೆ ಗಾಢ ಅನುಭವ ನೀಡುವುದು ಸಾಧ್ಯ. ಇಂತಹ ತೀವ್ರತೆಯ ಫಲವೇ ರಸಾನುಭವ. ವಿಭಿನ್ನತೆ, ಅನಿರೀಕ್ಷಿತ ಚಲನೆ, ಘಟನೆ, ದನಿ, ವರ್ಣಪ್ರಭೆ, ಈ ಸಾಧನೆಗಳ ಬಳಕೆಯಿಂದ ರಂಗದ ಮೇಲೆ ಪುನರ್ ಸೃಷ್ಟಿ ನಾಟಕೀಯ ತೀವ್ರತೆ ಪಡೆದು ಪರಿಣಾಮಕಾರಿಯಾಗಬಲ್ಲದು.

ಈವರೆಗೆ ವಿವರಿಸಿದ ಲಿಖಿತ ನಾಟಕ ವಿನ್ಯಾಸ ಲೇಖಕ ಪ್ರಯೋಗಕ್ಕಾಗಿ ಸಿದ್ಧಪಡಿಸುವ ಒಂದು ಲಿಖಿತ ನಾಟಕ ಅಥವಾ ಹಂದರ ಎನ್ನಬಹುದು. ರಂಗಕೃತಿಯಲ್ಲಿ ಪ್ರಯೋಗಕ್ಕೆ ನಿರ್ದೇಶನ ನೀಡುವ ಅನೇಕ ಸೂಚನೆಗಳನ್ನು ಲೇಖಕರೇ ನೀಡಿರಬಹುದು, ನೀಡದೇ ಇರಬಹುದು. ಇದರಲ್ಲಿ ಕ್ರಿಯೆ ನಡೆಯುವ ಸ್ಥಳ, ಕಾಲ, ವಾತಾವರಣ, ಮನೋಭೂಮಿಕೆಗಳ ಬಗ್ಗೆ ಲೇಖಕ ಸೂಚಿತಗೊಳಿಸಬಹುದು. ಎಲ್ಲಾ ನಾಟಕಗಳ ರಚನೆಯ ವಿನ್ಯಾಸದಲ್ಲಿ ಕಂಡುಬರುವ ಮುಖ್ಯ ಅಂಶಗಳು ಮೂರು ; ಕಥಾವಸ್ತು, ಪಾತ್ರರಚನೆ ಮತ್ತು ಭಾಷೆ. ಈ ಅಂಶಗಳಲ್ಲದೆ ವಿಚಾರವೂ ನಾಟಕ ಗಂಭೀರವಾದಂತೆ ಅದಕ್ಕನುಗುಣವಾಗಿ ಅಡಕವಾಗಿರಬಹುದು. ಸಂಗೀತ ಮತ್ತು ನೃತ್ಯದಲ್ಲಿ ಯಾವುದಾದರೊಂದು ಅಥವಾ ಎರಡೂ ಕೆಲವು ಬಗೆಯ ವಿನ್ಯಾಸಗಳಲ್ಲಿ ಇರಬಹುದು.

ನಾಟಕಕಾರ ಬರೆದ ನಾಟಕ ಬಹುಕಾಲ ಬಾಳಿಕೆ ಬರುವಂಥದು. ಒಂದೇ ನಾಟಕವನ್ನು ಒಂದು ತಂಡ ಅನೇಕ ಬಾರಿ ಅಭಿನಯಿಸಬಹುದು. ಬೇರೆ ಬೇರೆ ತಂಡಗಳು ಬೇರೆ ಬೇರೆ ಕಾಲದಲ್ಲಿ ಅದನ್ನು ಬಳಸಿಕೊಳ್ಳುವ ಸಾಧ್ಯತೆಯಿದೆ. ಆದರೆ ನಾಟಕಾಭಿನಯ ಮೂಲತಃ ಒಂದು ನಿರ್ದಿಷ್ಟ ಅಭಿನಯದ ಅವಧಿಗೆ ಮಾತ್ರ ಸೀಮಿತ. ಅಂದರೆ ಒಮ್ಮೆ ರಂಗದ ಮೇಲೆ ಅಭಿನಯಿಸಲ್ಪಡುವ ನಾಟಕಾಭಿನಯ ಅಥವ ರಂಗಪ್ರದರ್ಶನದ ಪುನರ್ ಪ್ರದರ್ಶನ ಒಂದೇ ತಂಡ ಅಭಿನಯಿಸಿದ್ದರೂ ಕೂಡ ಗುಣದಲ್ಲಿ ವ್ಯತ್ಯಾಸ

ಹೊಂದಿರುವುದನ್ನು ಗಮನಿಸಬಹುದು. ಆದ್ದರಿಂದ ನಾಟಕ ಪ್ರದರ್ಶನ ಮುಖ್ಯವಾಗಿ ಕಾಲಾಧೀನ. ಅದಕ್ಕೆ ಕಾಲವನ್ನು ಮೀರಿದ ಅಸ್ತಿತ್ವವಿಲ್ಲ. ಮತ್ತೊಂದು ಮುಖ್ಯ ಸಂಗತಿಯೆಂದರೆ ನಾಟಕಾಭಿನಯ ಅನುಕರಣೆಯ ತಂತ್ರ. ಅಂದರೆ ಲಿಖಿತ ನಾಟಕದ ಪಾತ್ರ ಮತ್ತು ಸನ್ನಿವೇಶಗಳನ್ನು ರಂಗದ ಮೇಲೆ ಪುನರ್ ಸೃಷ್ಟಿ ಮಾಡುವುದು. ಮೂರನೆಯದು ನಾಟಕ ಕಲೆ ಲಿಖಿತ ನಾಟಕದ ಸಂಯೋಜನೆಗನುಗುಣವಾಗಿ ಅರ್ಥೈಸುವ ಕಾರ್ಯವನ್ನು ಅಭಿನಯದಲ್ಲಿ ನಿರ್ವಹಿಸುತ್ತದೆ. ಅಲ್ಲದೆ ನಾಟಕಾಭಿನಯವು ವಿವಿಧ ಕಲೆಗಳ ಸಮಾವೇಶದಿಂದ ಸಾಧ್ಯವಾಗುತ್ತದೆ. ನಾಟಕ ರಚನಾ ವಿನ್ಯಾಸ, ನಿರ್ದೇಶನ, ರಂಗ ಮತ್ತು ದೃಶ್ಯ ವಿನ್ಯಾಸ, ನಟನೆ ಇತ್ಯಾದಿ.

ಲಿಖಿತ ನಾಟಕವೊಂದನ್ನು ರಂಗದ ಮೇಲೆ ಸಾಕಾರಗೊಳಿಸಲು ಅನೇಕರ ಸಹಾಯ, ಸಹಕಾರ ಅಗತ್ಯ. ನಾಟಕವನ್ನು ಅರ್ಥೈಸಿ, ನಾಟಕಕಾರನ ಮೂಲ ಉದ್ದೇಶವನ್ನು ಪ್ರೇಕ್ಷಕರಿಗೆ ಮುಟ್ಟಿಸುವವನು ನಿರ್ದೇಶಕ. ಮಕ್ಕಳ ನಾಟಕವನ್ನು ಪ್ರಯೋಗಿಸಲು ಕೈಗೆತ್ತಿಕೊಂಡ ನಿರ್ದೇಶಕ ಎದುರಿಸುವ ಸಮಸ್ಯೆಗಳು ಹಲವಾರು. ಮಕ್ಕಳಿಗಾಗಿ ನಾಟಕವನ್ನು ನಿರ್ದೇಶಿಸುವಾಗ ಪ್ರೇಕ್ಷಾಂಗಣದಲ್ಲಿರುವ ಎಲ್ಲಾ ಮಕ್ಕಳಿಗೂ ನಾಟಕದ ಪ್ರತಿಯೊಂದು ಸಂಭಾಷಣೆ ಅರ್ಥವಾಗುವಂತೆ ಪ್ರತಿಯೊಂದು ಚಲನ-ವಲನ, ಹಾವ-ಭಾವ, ಕ್ರಿಯೆ-ಪ್ರತಿಕ್ರಿಯೆಯತ್ತ ಮಕ್ಕಳ ಗಮನ ಸೆಳೆಯುತ್ತಾ ಹೋಗುವುದು ಸುಲಭದ ಕೆಲಸವೇನಲ್ಲ.

ಮಕ್ಕಳು ಎಂದೊಡನೆಯೇ ಎಲ್ಲಾ ಮಕ್ಕಳೂ ಮುಗ್ಧ ಕಿಶೋರ-ಕಿಶೋರಿಯರು ಅಥವ ಅವರು ಎಂಥಾ ಅಸಂಬದ್ಧವಾದ ವಯಸ್ಕರಿಗೆ ಮಾತ್ರ ತಕ್ಕುದಾದ ಪಾತ್ರ ಮತ್ತು ದೃಶ್ಯಗಳೂ ನಿರ್ವಹಿಸಬಲ್ಲರು ಎಂಬ ತಪ್ಪು ಅಭಿಪ್ರಾಯ ಅನೇಕರಲ್ಲಿದೆ. ನಾಟಕ ಆಡುವ ಮತ್ತು ನೋಡುವ ಮಕ್ಕಳ ಅನುಭವದ ವ್ಯಕ್ತಿ ಹಿನ್ನೆಲೆ, ವಯೋಮಾನ, ಭಾಷಾಸಾಮರ್ಥ್ಯ, ಗಮನಸಾಮರ್ಥ್ಯ ಇವುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡಾಗ ಮಾತ್ರ ಮಕ್ಕಳ ನಾಟಕ ಪರಿಣಾಮಕಾರಿಯಾದೀತು.

ಮಕ್ಕಳ ನಾಟಕದಲ್ಲಿ ಅಭಿನಯಿಸುವವರು ಮಕ್ಕಳೇ ಇರಬಹುದು, ದೊಡ್ಡವರೇ ಇರಬಹುದು ಅಥವಾ ಇಬ್ಬರೂ ಇರಬಹುದು. ನಾಟಕ ಪ್ರದರ್ಶನದ ಯಶಸ್ಸು ಕಿರಿಯ ವಯಸ್ಸಿನ ಪ್ರೇಕ್ಷಕರಿಗೆ ದೊರೆಯುವ ಖುಷಿ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಅವಲಂಬಿಸಿರುತ್ತದೆ.

## ಮಕ್ಕಳ ರಂಗಭೂಮಿಯ ಉದ್ದೇಶ

1. ಮಕ್ಕಳಿಗೆ ಪ್ರಿಯವಾದ ಕತೆಗಳು ರಂಗದ ಮೇಲೆ ಜೀವಂತವಾಗಿ ಘಟಿಸುವುದನ್ನು ಕಾಣುವ ಸಂತೋಷ. ಬಾಲ್ಯದ ಸುಂದರ ಅನುಭವಗಳು ಕ್ಷಣಿಕವಲ್ಲ - ಜೀವಮಾನ ಪರ್ಯಂತ ಉಳಿಯುವಂತದ್ದು.

2. ಮಕ್ಕಳಲ್ಲಿ ಉತ್ತಮ ಅಭಿರುಚಿ ಬೆಳೆಸುವುದು.

3. ನಾಟಕದ ಮೂಲಕ ಲೋಕದ ರೀತಿ-ನೀತಿಗಳ ಕಲಿಕೆ-ಅನುಭವದ ವ್ಯಕ್ತಿಯ ವಿಸ್ತಾರ.

ಮಕ್ಕಳ ನಾಟಕದ ಸ್ವರೂಪ ಕಥಾವಸ್ತು, ಮಕ್ಕಳ ವಯೋಮಾನಕ್ಕೆ ತಕ್ಕಂತೆ ಬದಲಾಗಬೇಕು. ಮುಖ್ಯ ಬದಲಾವಣೆ ಅಗತ್ಯವಿರುವ ವಯೋಮಾನವನ್ನು ಈ ರೀತಿ ವರ್ಗೀಕರಿಸಬಹುದು.

1. 10 ವರ್ಷದವರೆಗೆ

2. 10 ರಿಂದ 14 ವರ್ಷದವರೆಗೆ

3. 14ರ ಮೇಲ್ಪಟ್ಟ ವಯಸ್ಸಿನ ಮಕ್ಕಳು.

10 ವರ್ಷದವರೆಗಿನ ಮಕ್ಕಳಿಗೆ ರಾಮಾಯಣ, ಮಹಾಭಾರತ, ಕಿನ್ನರ ಲೋಕದ ಕಾಲ್ಪನಿಕ ಕಥೆಗಳು ಪ್ರಿಯವೆನಿಸಬಹುದು. ಸಣ್ಣಪುಟ್ಟ ಅಥವ ಪ್ರಾಸ ಬದ್ಧವಾದ ಪದ್ಯಗಳಿಗೆ ಹಾಡುತ್ತಾ ಕುಣಿಯುವುದು ಅಪೂರ್ವ ರಂಗಾನುಭವ ನೀಡಬಲ್ಲದು. ಒಟ್ಟಿನಲ್ಲಿ ಅತ್ಯಂತ ಕಿರಿಯ ವಯಸ್ಸಿನ ಮಕ್ಕಳಿಗೆ ರಂಗದ ಮೇಲೆ ದೊಡ್ಡ ಪ್ರಮಾಣದ ಮಾದರಿ ಪಾತ್ರಗಳು (Arechetypal Arechetypal) ಮೂಲಮಾದರಿಯ ಮೂಲ ಕಲ್ಪನೆಯೆ ಇಷ್ಟವಾಗಬಲ್ಲದು. ಎರಡನೆಯ ವರ್ಗಕ್ಕೆ ಅಂದರೆ 10-14 ವಯೋಮಾನದ ಮಕ್ಕಳು ಕಟ್ಟುಕತೆಗಳನ್ನು ಇಷ್ಟಪಡುತ್ತಾರೆ. 14ರ ನಂತರದ ವಯಸ್ಸಿನ ಮಕ್ಕಳಿಗೆ ಇಂದಿನ ಜಗತ್ತಿನಲ್ಲಿ ತಮ್ಮ ಪರಿಸರದಲ್ಲಿ ಕಂಡುಬರುವ ಪಾತ್ರಗಳ ಬಗ್ಗೆ ಕುತೂಹಲ, ಆಸಕ್ತಿ ಇರುತ್ತದೆ. ಈ ಬಗೆಯ ವಸ್ತುಗಳ ಪ್ರಭೇದಗಳನ್ನು ಮಕ್ಕಳ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಬಳಸಿದಾಗ ನಾಟಕ ಹೆಚ್ಚು ಪರಿಣಾಮಕಾರಿಯೂ, ಪ್ರಯೋಜನಕಾರಿಯೂ ಆದೀತು.

ಇನ್ನು ನಾಟಕ ಆಡಿಸುವ ನಿರ್ದೇಶಕ ಮಕ್ಕಳ ಗುಂಪಿನೊಡನೆ ಹೇಗೆ ವರ್ತಿಸಬೇಕು? 10 ವರ್ಷದವರೆಗಿನ ತಮ್ಮ ನಾಯಕ ಅಧಿಕಾರಶಾಹಿಯಾಗಿರಬೇಕೆಂದು ಬಯಸುತ್ತದೆ. 10-14 ವರ್ಷದ ಗುಂಪು ತನ್ನ ನಾಯಕ ಸ್ನೇಹಪೂರ್ವಕ ವರ್ತನೆಯಿದ್ದು ಪ್ರೀತಿಯಿಂದ ವರ್ತಿಸಬೇಕೆಂದು ಬಯಸುತ್ತದೆ. 14ರ ಮೇಲ್ಪಟ್ಟ ಮಕ್ಕಳ ಗುಂಪು ತಮ್ಮ ಸೃಜನಶೀಲ ಚಟುವಟಿಕೆಗಳಿಗೆ ಮುಕ್ತ ಅವಕಾಶ ನೀಡಿ, ಎಲ್ಲದರಲ್ಲೂ ನಾಯಕ ಸಹಕರಿಸಬೇಕೆಂದು ಬಯಸುತ್ತದೆ.

ಮಕ್ಕಳ ನಾಟಕದ ಭಾಷೆ ಅತ್ಯಂತ ಸರಳವಾಗಿರಬೇಕು. ಸಾಧ್ಯವಾದಷ್ಟೂ ದೃಶ್ಯರೂಪದಲ್ಲಿ, ಕ್ರಿಯೆಯ ಮೂಲಕ ವ್ಯಕ್ತವಾಗುವಂತಿದ್ದರೆ ಹೆಚ್ಚು ಪರಿಣಾಮಕಾರಿ. ಪಾತ್ರಗಳ ಸಂಯೋಜನೆಯಲ್ಲಿ ಸ್ಪಷ್ಟತೆಯಿರಬೇಕು - ಗೊಂದಲವಿರಬಾರದು. ಮಕ್ಕಳ

ಗ್ರಹಣ ಶಕ್ತಿಗನುಗುಣವಾದ ಪ್ರಮಾಣದಲ್ಲಿರಬೇಕು. ನಾಟಕದ ಅವಧಿ ಒಂದರಿಂದ ಒಂದೂವರೆ ಗಂಟೆಗೆ ಮೀರಿದರೆ ಮಕ್ಕಳ ಗಮನ ಸಾಮರ್ಥ್ಯಕ್ಕೆ ಮೀರಿತೆನ್ನಬಹುದು.

ಈ ಎಲ್ಲಾ ಅಂಶಗಳನ್ನೂ ಪರಿಶೀಲಿಸಿ ನಾಟಕವನ್ನು ರಚಿಸಿದರೂ, ಕೆಲವೊಮ್ಮೆ ವಿಶೇಷ ಸಂದರ್ಭಗಳಲ್ಲಿ ನಿರ್ದಿಷ್ಟವಾದ ಮಕ್ಕಳ ತಂಡದ ಹಿನ್ನೆಲೆಯನ್ನು ಅರ್ಥ ಮಾಡಿಕೊಳ್ಳದಿದ್ದಾಗ, ನಾಟಕ ಪ್ರದರ್ಶನ ಸೋಲಬಹುದು. ನಾಟಕರಚನೆಯ ಮತ್ತೊಂದು ಮುಖ್ಯ ಘಟ್ಟವೆಂದರೆ ಸ್ವತಃ ನಾಟಕಕಾರನೇ ತಾಲೀಮಿನ ಸಮಯದಲ್ಲಿ ನಿರ್ದೇಶಕನೊಡನೆ ಸಹಕರಿಸಿ ಸೂಕ್ತವಾಗಿ ಲಿಖಿತ ನಾಟಕವನ್ನು ಪರಿಷ್ಕರಿಸುವುದು. ನಾಟಕದ ಪ್ರತಿಯೊಂದು ಮಾತನ್ನೂ ಆಡಿಸಿ ಕೇಳಿದಾಗ ನಾಟಕಕಾರ ಮಕ್ಕಳ ಬಗ್ಗೆ ತಾನೆಷ್ಟು ಕಡಿಮೆ ತಿಳಿದುಕೊಂಡಿದ್ದೇನೆಂದು ಅನ್ನಿಸಿದರೆ ಆಶ್ಚರ್ಯವಿಲ್ಲ.

ಮಕ್ಕಳ ತಂಡದೊಡನೆ ಕೆಲಸ ಮಾಡುವುದು ಪೂರ್ವಸಿದ್ಧತೆಯನ್ನು ಬಹಳ ಎಚ್ಚರಿಕೆಯಿಂದ ನಡೆಸಬೇಕಾಗುತ್ತದೆ. ಅನಿರೀಕ್ಷಿತವಾದ ಮಕ್ಕಳ ಪ್ರಶ್ನಾವಳಿಗಳಿಗೆ ಸಮಾಧಾನ ನೀಡಲು ನಿರ್ದೇಶಕ ಸಿದ್ಧನಿರಬೇಕು.

ನಾಟಕಾಭಿನಯ ಮೆಚ್ಚಿಕೆಯಾಯಿತೇ ಇಲ್ಲವೇ ಎಂಬ ಬಗ್ಗೆ ಬಾಲಪ್ರೇಕ್ಷಕರ ಪ್ರತಿಕ್ರಿಯೆ ತಕ್ಷಣ ಪ್ರಕಟವಾಗುತ್ತದೆ. ನಾಟಕ ಮೆಚ್ಚಿಕೆಯಾಗದಿದ್ದರೆ ಪ್ರೇಕ್ಷಾಂಗಣದಲ್ಲಿ ಕುಳಿತು ಸದ್ದು ಗದ್ದಲ ಪ್ರಾರಂಭ. ನಾಟಕ ಇಷ್ಟವಾದರೆ ತಲ್ಲೀನರಾಗಿ, ಮೈಮರೆತು ನಾಟಕ ನೋಡುತ್ತಾ ಕುಳಿತಿರುತ್ತಾರೆ.

ಮಕ್ಕಳ ತಂಡದೊಡನೆ ರಿಹರ್ಸಲ್ ನಡೆಸಲು ಪ್ರತ್ಯೇಕವಾದ, ಫರ್ನಿಚರುಗಳಿಲ್ಲದ, ಬೇರೆ ಯಾವ ರೀತಿಯ ಜನರ ಓಡಾಟ ಅಥವಾ ತಲ್ಲೀನತೆಗೆ ಭಂಗ ತಾರದ ಹಾಲ್ ಅಥವ ಜಾಗ ಆರಿಸಿಕೊಳ್ಳುವುದು ಒಳ್ಳೆಯದು. ಈ ಜಾಗದಲ್ಲಿ ಲೈಟ್ಗಳು, ಪರದೆಗಳು, ಪ್ಲಾಟ್‌ಫಾರಂ ಲೆವೆಲ್‌ಗಳನ್ನು ಇಟ್ಟಾಗ ರಂಗಭೂಮಿಯ ವಿವಿಧ ಭಾಗಗಳಿಗೆ ಸುಲಭವಾಗಿ ಚಲಿಸಲು ಮಕ್ಕಳು ಅಭ್ಯಾಸ ಮಾಡಿಕೊಳ್ಳುತ್ತಾರೆ.

ವೇಷ-ಭೂಷಣ, ಮುಖವಾಡ ಇವುಗಳನ್ನು ನಾಟಕಾಭಿನಯದಲ್ಲಿ ಮಕ್ಕಳು ಉಪಯೋಗಿಸಬೇಕಾಗಿ ಬಂದಾಗ ನಿರ್ದೇಶಕ ಎಚ್ಚರಿಕೆ ವಹಿಸಬೇಕು. ಮುಖವಾಡ ಧರಿಸಿದ ಮಗುವಿಗೆ ಮುಂದಿರುವ ವಸ್ತುಗಳು ಕಾಣಿಸುತ್ತಿದೆಯೇ ಬಟ್ಟೆ ಬರೆ ಮೈಗೆ ಮುಜುಗರವುಂಟು ಮಾಡುತ್ತಿದೆಯೇ ದೊಗಲೆ ಅಥವ ಬಿಗಿತವೇ ಎಂಬುದನ್ನು ಸರಿಯಾಗಿ ಪರೀಕ್ಷಿಸಬೇಕು. ರಂಗದ ಮೇಲೆ ಲೆವೆಲ್ಸ್ ಉಪಯೋಗಿಸುವುದಾದರೆ, ಮುಂಚಿತವಾಗಿಯೇ ತಾಲೀಮಿನ ಸಮಯದಲ್ಲಿ ಮಕ್ಕಳಿಗೆ ದೃತ್ಯ ಸಂಯೋಜನೆ ಪರಿಚಯ ನೀಡಲೇಬೇಕು. ನಾಟಕಕಾರ ಈ ಎಲ್ಲ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ರಚಿಸಿದಾಗ, ಸಮರ್ಥ ನಿರ್ದೇಶಕ, ಮಕ್ಕಳ ತಂಡದ ಮೂಲಕ ಆಡಿಸಿದಾಗನಾಟಕಕಾರನ ಮೂಲ ಆಶಯ ಸಫಲವಾಗುವುದರಲ್ಲಿ ಸಂದೇಹವಿಲ್ಲ.

★★★

## SERVICE ABOVE SELF

– *Vimala Rangachar*

1954 the year I was selected to visit the great USSR. The Indo Soviet Cultural Society of India had been invited by Russia to send a delegation to visit and see for themselves the achievement made by their country. I was lucky to be chosen to be one of the delegates. This chance also conferred on me the distinction of be coming the first lady from Karnataka to travel in and see the USSR.

Soon after we reached Moscow and settled down, our hosts met each one of us and asked us about our special interests and our priorities. Theatre had always been my primary interest and added to this was my love for children. So, I requested them to give me an opportunity to see as much as possible in these two areas.

A visit to the great Bolshoi Theatre in Moscow was indeed the high light. To witness their 'Swan Lake', 'Stoneflower', 'Eugene Onegin' and other great ballets was a treat. The Puppet Theatre, Children's Theatre, Publicity plays and features were of immense interest then came visits to their Pioneer Palaces. Some of the palaces had been converted into Pioneer Palaces, specially set apart for children's activities. Children from various schools were brought to these palaces and spent the whole day in learning to paint, sing, play instruments learn puppetry, crafts. They were taught to play games, listen to stories, act in short plays. Exposing children to all

these activities was the main aim of these Pioneer Palaces and it made a deep impression on me, teaching the child through art and play has always held great fascination.

1971 - I finished my term as chair person of the Karnataka State Handicrafts Development Corporation and was idling at home. The then Governor of Karnataka late Sri. Dharma Vira sent for me and said I should take up some work which interested me and I immediately requested that the Bal bhavan in Cubbon Park be given to me for development. The Bal Bhavan movement was a direct out come of late Smt. Indira Gandhi's visit to Russia and seeing their Pioneer Palace for children. This was the chance I was waiting for - to develop a place which our children could call their own - to sing, to dance, to act, to paint and to play.

Into this scheme stepped in a person I was waiting for N.S. Venkatram had just finished his studies at the National School of Drama in Delhi. He was deeply interested in developing a theatre exclusively for children and I couldn't have asked for a more committed person. Venktram had the 'Vijaya Ranga'. Children from various schools came to learn and act. He taught them to write little plays, to work back-stage, to design their own costumes, to act the paints themselves gradually, there came the emergence of a theatre by children and a theatre for children. Prof. B. Chandra Shekar, B.V. Karnath, Prema Karanth, Chandra Shekar Kambar came to be associated with Bal Bhavan. Plays were written exclusively for children, for the first time, there came to be a children's theatre. Those were glorious years.

Venkataram was a quiet worker. He did not seek glory. He was happy writing, directing, organizing. For ten long years, we worked to-gether. I left Bal Bhavan in 1981 but Venkatram continued. His dedication never waned. Into this scheme of Bal Bhavan yet another

artist had 'stepped in' Vasanthalakshmi, a dance artist trained under the legendary Rukmini Devi of Adyar. Bal Bhavan became a center for regular festival of Drama and Dance for children. I remember the time when Vasanthalakshmi's father came to me, perturbed that Vasanthalakshmi and Venkatram had decided to wed. His daughter was a accomplished dancer and naturally he was apprehensive. I recall assuring him all would be well and that his daughter would receive not mere support but also encouragement from Venkatram and I was proved right. They worked as a team in Bal Bhavan and later too, complimenting each other in their work.

***

# ಹಂಬೆಯ ಗೊಂಬೆಗೆ ಜೀವ ಬಂದಾಗ

- ವೈದೇಹಿ

ಅಂದೆಲ್ಲ ನಾವು ಹೆಣ್ಣು ಮಕ್ಕಳು ಮನೆಯಾಟವಾಡುತ್ತಿದ್ದೆವು. ಆ ಆಟದಲ್ಲಿ ಮನೆಯಲ್ಲಿ, ನಿಜ ಮನೆಯಲ್ಲಿ ಏನೇನಿರುವುದೋ ಸುಮಾರಾಗಿ ಅವೆಲ್ಲಾ ಇರುತ್ತಿದ್ದುವು. ಆದರೆ ಸಂಕೇತ ಮಾತ್ರವಾಗಿ, ಒಲೆ, ಸೌಟು, ಪಾತ್ರೆ, ಅಡುಗೆ, ಕೊನೆಗೆ ಒಗ್ಗರಣೆಯೂ. 'ಚುಂಯ್ಯ' ಎಂದು ಬಾಯಲ್ಲಿ ನುಡಿದರೆ ಸೈ, ಅದು ಒಗ್ಗರಣೆಯೇ. ಬೆನ್ನಿಗೆ ಕೈಕೊಟ್ಟು ಕೋಲೂರಿ ಸೊಂಟ ಬಗ್ಗಿಸಿ ಮಾತನ್ನೂ ನಡಿಗೆಯನ್ನೂ ನಡುಗಿಸುತ್ತ ಬಂದರೆ ಅಜ್ಜಿ-ಅಜ್ಜನೆಂದು, ಸ್ಕೇಲು ಹಿಡಿದು ಗಂಭೀರವಾಗಿ ಬಂದರೆ ಟೀಚರೆಂದೋ (ಯಾಕೋ ಈ ಟೀಚರಿಗೆ ಪೆಟ್ಟು ಕೊಡುವುದು ಬಿಟ್ಟರೆ ಬೇರೆ ಉದ್ಯೋಗವೇ ಇರಲಿಲ್ಲ) ಒಂದು ಬೈರಾಸನ್ನೋ ಚಂಪೆ ಚೂರನ್ನೋ ಸೆರಗಿನಿಂದ ಹಾಕಿಕೊಂಡರೆ ಕೆಲಸದವಳು-ಹೀಗೆ. ಅರ್ಥವೆಂಬುದು ಎಲ್ಲಿಂದ ಎಲ್ಲಿಗೆ ಬೇಕಾದರೂ ಹೊರಳಿಕೊಳ್ಳುತ್ತಿತ್ತು. ಚಾಕುಪೀಸಿನ ಗೀಟುಗಳು ಕೋಣೆ ಗೋಡೆಗಳಾಗುತ್ತಿದ್ದವು. ಕೈ ಎರಡನ್ನೂ ಎತ್ತಿ ತುಯ್ಯುತ್ತ, ರೆಕ್ಕೆಯಂತೆ ಬೀಸುತ್ತ ಓಡಿದರೆ ಹಾರು ಹಕ್ಕಿಯನ್ನು ಕಾಃ ಕಾಃ ಕರೆಯುತ್ತ ಕರಕರೆ ಮಾಡಿದ ಕಾಗೆಗಳೆಷ್ಟು 'ಕೋಕೋ ಕೋ ಬೆಳಗಾಯಿತೋ, ಮಕ್ಕಳೆಲ್ಲ ಏಳಿರೋ....' ಎಂದು ಕೋಳಿ ಕೂಗಿದ ಹೊತ್ತೇ, ಅದು ಸಂಜೆಯಾಗಿದ್ದರೂ, ಬೆಳಗು. ಬುರ್‍ರೆಂದು ಬಾಯಲ್ಲಿ ಶಬ್ದ ಮಾಡುತ್ತ ಮುಂಗೈಗಳೆರಡನ್ನೂ ತಿರುತಿರಿಸುತ್ತ ರುಂಯ್ಯ ಓಡಿದರೆ ಅದೇ ಮೋಟರು! ಇವತ್ತಿಗೂ ಮಕ್ಕಳ ರೈಲು ಬಂಡಿಯ ಆವಿಷ್ಕಾರದ ಮೂಲ ಹಕ್ಕು ಮಕ್ಕಳದೇ. ಕೋಲಿನಿಂದ ದುಡಿಸಿಕೊಂಡು ಓಡುವ ಸೈಕಲ್ ಚಕ್ರ ಎಂದಿಗೂ ಸೈಕಲ್ ಚಕ್ರ ಮಾತ್ರವಾಗಿ ಉಳಿಯುವುದೇ ಇಲ್ಲ ಅಲ್ಲವೆ?

ಆದೆಲ್ಲ ನಮಗೆ ಅಂಗಡಿ ಗೊಂಬೆಗಳಿರಲಿಲ್ಲ. ಬಾಳೆಯ ಕಾಂಡವ (ಇದಕ್ಕೆ ನಾವು ಹಂಬೆ ಎನ್ನುತ್ತೇವೆ) ಪದರಿನ ಬೆನ್ನು ಸಿಗಿದು ಕತ್ತರಿಸಿ ನೀವಿ ಚೊಕ್ಕ ಮಾಡಿ ಕೈಕಾಲು ತೂರಿಸಿ ಕಣ್ಣು ಮೂಗು ಕೊರೆದೂ ಕೊರೆಯದೆಯೂ ಹಿರಿಯರು ಗೊಂಬೆ ಮಾಡಿಕೊಡುತ್ತಿದ್ದರು.

ಜಗಲಿ ಜಂತಿಗೆ ಹಂಬೆಯದೇ ತೊಟ್ಟಿಲು. ದಂತವರ್ಣದ ಉದ್ದ ಆಳದ ಈ ತೊಟ್ಟಿಲೊಳಗೆ ನುಣುಪು ಮೈಯ ದಂತವರ್ಣದ ಗೊಂಬೆ, ನಾಳೆ ಬೆಳಗಾದರೆ ಮಾಸುತ್ತದೆ. ಈಗಲೇ ಆಡಬೇಕು ಎತ್ತಿ ಇಳಿಸಿ ಮಲಗಿಸಿ ತೂಗುತ್ತಿದ್ದಂತೆ ಗೊಂಬೆ ಮಗು ಜೀವ ತಾಳುತ್ತಿತ್ತು, ನಗುತ್ತಿತ್ತು, ಅಳುತ್ತಿತ್ತು. ಅಲ್ಲೊಂದು ನಾಟಕ ನಿರಾತಂಕ ಸಾಗುತ್ತಿತ್ತು. ಆದಿ ಅಂತ್ಯವಿಲ್ಲದ ಯಾವ ಚೌಕಟ್ಟಿಲ್ಲದ ಯಾರೂ ಹೇಳಿಕೊಡದ ಅಲ್ಲಲ್ಲೇ ಹುಟ್ಟಿ ಬೆಳೆದು ಮಾಸುವ ಮರುದಿನ ಹೊಸತಾಗುವ ನಾಟಕವದು. ಹಿರಿಯರು ಊಟ-ತಿಂಡಿಗೆ ಕರೆದಾಗಲೇ ಮುಕ್ತಾಯದ ಪರದೆ. 'ಮಕ್ಕಳ ನಾಟಕ'ವೆಂದೊಡನೆ ಥಟ್ಟನೆ ಕಣ್ಣಿಗೆ ಕಕಟ್ಟುವುದು 'ರಂಗಕೃತಿ'ಯೇ. ನಾನು ನಾಲ್ಕೈದು ಮಕ್ಕಳ ನಾಟಕಗಳನ್ನು ಬರವಣಿಗೆಗೆ ಯತ್ನಿಸಿ ಬಲ್ಲೆನಷ್ಟೇ ಹೊರತು ಆಡಿಸಿ ಅಲ್ಲ, ಹಾಗಾಗಿ ರಂಗಕೃತಿಯ ಬಗ್ಗೆ ನನಗೆ ನೇರ ಅನುಭವವಿಲ್ಲ, ಆದರೆ ಅತಿ ಸಣ್ಣದಾಗಿ ಹೇಳಬಹುದಾದರೆ-ಸರಳತೆ ಅದರ ಜೀವಾಳ; ಮೇಲೆ ಹೇಳಿದ ಕೆಲ ಉದಾಹರಣೆಗಳ ಹಾಗೆ ಅಥವಾ ಮಕ್ಕಳ ಚಿತ್ರಗಳ ಹಾಗೆ. ಆರೇ ರೇಖೆಗಳಲ್ಲಿ ಅಪ್ಪ ಅಮ್ಮ, ಮೂರೇ ರೇಖೆಗಳಲ್ಲಿ ಹಕ್ಕಿ, ಅರ್ಥಾತ್ ಗೆರೆಗಳ ಬಲೆಗೆ ಅತಿಯಾಗಿ ಸಿಲುಕದ, ತಬ್ಬಿಬ್ಬು ಇಲ್ಲದ ಕೆಲವೇ ಗೆರೆಗಳ ಚಿತ್ರ ಪ್ರಪಂಚವಲ್ಲವೆ ಮಗುವಿನದು? ಮಕ್ಕಳ ನಾಟಕ ರಚನೆಯ ಹಲವು ಹನ್ನೊಂದು ಬಗೆಯ ಸೂತ್ರಗಳಲ್ಲಿ ಇದೂ ಒಂದು ಮಾರ್ಗಸೂತ್ರವೆನಿಸುತ್ತಿದೆ.

ಇನ್ನು -

ರಾಮಾಯಣ ಮಹಾಭಾರತ ಕಥೆಯನ್ನು ಮಕ್ಕಳಿಗೆ ಹೇಳುತ್ತೇವೆ. ಅರ್ಥವಾಗುತ್ತದೋ ಇಲ್ಲವೋ ಎಂಬ ಯಾವ ದುಗುಡ ಆತಂಕಗಳಿಲ್ಲದೆ ತನ್ನಷ್ಟಕ್ಕೇ ಹೇಗೆ ಹಗುರಹಗುರವಾಗಿ ಶಬ್ದಗಳ ಉಚ್ಚಾರ ರಿತಿಯಲ್ಲಿಯೇ ಕಣ್ಣು ಮೂಗು ಬಾಯಿಯ ಚಲನೆಯಲ್ಲಿಯೇ ವಿವಿಧ ಅರ್ಥ ಹೊಮ್ಮಿ ಅದು ರೂಪ ತಾಳುತ್ತಾ ಹೋಗುತ್ತದೆ ! ಮತ್ತೆ ಮತ್ತೆ ಕೇಳಲು ಮಗು ತವಕ ಪಡುವಂತೆ ! ತಾತ್ವಿಕ ಗಹನತೆಯ ಕಾವು ಅದನ್ನು ಸುಡದಂತೆ ಏನೆಂದು ಹೇಳಲಾರದೆ ಭಾವ ಬೆಚ್ಚನೆಯಲ್ಲಿ ಅದು ಮುಗ್ಧ ಹೊಕ್ಕಿ ಕುಳಿತುಕೊಳ್ಳುವಂತೆ. ಆಳ ವಿಚಾರ ವಿಸ್ತಾರಗಳ ಬೀಜಗಳೆಲ್ಲ ಸ್ಪಷ್ಟ ಕಾಣಿಸಿಕೊಳ್ಳದೆ, ಮಾಯಾರೂಪದಲ್ಲಿದ್ದು ಕಥನಕ್ರಮ ಕೇವಲ ಅಸ್ಥಿಪಂಜರ ಮಾತ್ರವಾಗಿ ಉಳಿದುಕೊಳ್ಳದೆ, ಪುಷ್ಟವಾಗಿ ! ಕೇಳುತ್ತಾ ಮಗು ಕೂಡ ತನ್ನದೊಂದು ಸಾಲಿನ ಮೂಲಕ ಕಥಾ ಹಂದರದಲ್ಲಿ ಪ್ರವೇಶಿಸುವಂತೆ !

ಇಂಥದೊಂದು ನಾಟಕದ ಕಾಡಿಗೆ ಹೋಗುವ ಪ್ರಸಂಗದಲ್ಲಿ ರಾಮನು ''ಸೀತೆ, ಕಿರೀಟ ಕಳಚಿ ಕೊಡು'' ಎಂದರೆ ಸೀತೆ ಒಲ್ಲೆನೆಂದಳು. ಕಣ್ಣೀರುಗರೆದಳು. ತನಗೇ

ಬೇಕೆಂದು ಹಟ ಮಾಡಿದಳು. ಆಗ ದಶರಥನ ಪಾತ್ರ ಮಾಡಿದ ಸಣ್ಣ ಮಾಣಿಯೊಂದು ಮೂರ್ಛಾವಸ್ಥೆಯಿಂದ ತಟಕ್ಕನೆದ್ದು ''ಸೀತೇ, ಕಿರೀಟ ಕಳಚಿಡು, ಇಲ್ಲವಾದರೆ ಕಾಡಿನಲ್ಲಿ ಗಿಡಮರಗಳಿಗೆ ಸಿಕ್ಕಿಕೊಳ್ಳುತ್ತದೆ'' ಎಂದದ್ದು...

ಯಾವ ಲಿಖಿತ ರಾಮಾಯಣದಲ್ಲೂ ಇಲ್ಲದ, ಅವನೆತ್ತರ ಮಾತಿನ ಒದಗೊಂದು ಈ ಮಾಣಿಗೆ ಸಿಕ್ಕಿಬಿಟ್ಟಿತ್ತು. ಇದೇ ಮಗು ಅಂಗಳ ದುಗ್ಗು, ಇಲಿಗಳ ಥಕಥೈ ಕಥೆಗಳನ್ನು ಕೇಳುತ್ತದೆ. ಬೆರಗುಗಣ್ಣು ಬಿಚ್ಚಿ, ಕಳೆದ ಬಾಯಿ ಮುಚ್ಚದೆ ಕಥೆ ಹೇಳುವವರಿಗೆ ಹುರುಪು ನೀಡುತ್ತಾ ನಾಲ್ಕು ಸಾಲು ಹೆಚ್ಚಿಸುವಂತೆ ಮಾಡಿ ರುಚಿ ಕಟ್ಟಿಸುತ್ತದೆ. ಅತ್ತ ರಾಮಾಯಣ ಮಹಾಭಾರತವನ್ನೂ ಕೇಳುವ, ಇತ್ತ ಮಕ್ಕಳ ಕಥೆಗಳೆಂದೇ ಹೆಸರು ಹೊತ್ತ ಸುಂದರ ಕಾಗೆಗುಬ್ಬಿ, ಪಂಚತಂತ್ರ, ಅಲ್ಲಾವುದ್ದೀನ್ ವಿಚಿತ್ರ ದೀಪ, ಭೂತ ಪ್ರೇತ, ಚೆಲುವಮ್ಮ, ಸಿಂಡರೆಲ್ಲ, ಇಸೋಪನ ಕಥೆಗಳು ಮುಂತಾದ ದೇಶೀ ವಿದೇಶೀ ಕಥೆಗಳನ್ನೂ ಏಕಾಸಕ್ತಿಯಿಂದ ಕೇಳುವ ತಲ್ಲೀನ ಮಕ್ಕಳು ! 'ಮೈನಾ ಹಕ್ಕಿ ಹಾಡಿತು ಹಾಡು' ಎಂಬ ಹಾಡನ್ನು ಹಾಡಿದರೆ ಸಾಕು, ಮಾಸ್ತರು ರಾಗವಾಗಿ ಹೇಳಿಕೊಡುತ್ತಿದ್ದರೆ ಸಾಕು, ಪ್ರತಿ ಮಗುವಿನ ಕಣ್ಣ ಮುಂದೆಯೂ ಅದರದೇ ಕಲ್ಪನೆಯ ಮೈನಾ ಹಕ್ಕಿ, ಮರ, ತುಂಟು ಹುಡುಗ, ಕಲ್ಲು, ಚಿಲಿಪಿಲಿ ಚಿಕ್ಕವ ಮರಿಗಳು, ಗೂಡು ಬಿಟ್ಟು ಸಂಸಾರವನ್ನೆತ್ತಿಕೊಂಡು ಹಾರಿಹೋಗುವ ಹಕ್ಕಿ... ತಲ್ಲಣಿಸುವ ಮಗು. ಒಮ್ಮೆ ಬಿರುಗಾಳಿ ಬೀಸಿ ಒಂದು ಪುರಲೆ ಹಕ್ಕಿಯ ಮನೆ ಮರದಡಿ ಸಿಕ್ಕಿ ಅದನ್ನೆತ್ತಿಕೊಳ್ಳಲು ಅದು ಪಟ್ಟ ಪಡಿಪಾಟಲಿನ ಕತೆಯಂತೂ, ಅಭಿನಯಪೂರ್ವಕ ಹೇಳುವ ರೀತಿಯಲ್ಲಿ ಮನದಲ್ಲಿ ಜೀವಂತ ನಾಟಕವಾಗಿ ನೆಟ್ಟು ಹೋಗುತ್ತದೆ. ಮಗುವಿನ ಪ್ರಕಾರ ಅದು ಕಲ್ಪನೆ ಅಲ್ಲ, ಎದುರೆದುರೇ ನಡೆಯುತ್ತಿದೆ.

ಮನೆಯಂಗಳದ ಒಂದು ಮೂಲೆಯಲ್ಲಿ ಒಂದು ಚೌಕಟ್ಟು ನಿರ್ಮಿಸಿ, ಅದರ ತುಂಬ ಹೊಯಿಗೆ ತುಂಬಿಸಿಡಿ. ಅದರಲ್ಲಿ ಮಕ್ಕಳು ಆಟವನ್ನು ಹೇಗೆ ಸೃಷ್ಟಿಸಿಕೊಳ್ಳುತ್ತವೆ ನೋಡಿ - ಎಂದಿದ್ದಾರೆ, ಕುಂದಾಪುರದ ಅಸಾಧಾರಣ ಶಿಕ್ಷಕ ಶ್ರೀ ಕೋ.ಲ. ಕಾರಂತರು, ತಮ್ಮ 'ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು' ಕೃತಿಯಲ್ಲಿ. ಮರ-ಗಿಡ, ಬಳ್ಳಿಗಳು ಮಾತ್ರವಲ್ಲ ಕಲ್ಲು-ಹುಲ್ಲುಗಳಷ್ಟೇ ಅಲ್ಲ, ಮರಳಮಣಿ, ಸಕಲ ಚರಾಚರದ ಕಣಕಣಗಳೂ ಮಕ್ಕಳ ನಿರೂಪಣೆಯಲ್ಲಿ ಜೀವ ತಾಳಿ ಬರಲು, ಎಂದೋ ಆಡಿ ದಣಿದು ಒಳ ಮರೆಯಾದ ಅವರೊಳಗಿನ ಮಗು ಎಷ್ಟರಮಟ್ಟಿಗೆ ಎಚ್ಚರವಾಗಿ ಹೊರಬರುತ್ತದೆ ಎಂಬುದು ಅತ್ಯಂತ ಮುಖ್ಯವಾದದ್ದು. ಹಾಗೆ ನೋಡಿದರೆ ಬಾಲ್ಯದ ಕಣ್ಣುಗಳು ಮುಚ್ಚುವುದೇ ಇಲ್ಲ, ಮರೆಯಾಗಿರುತ್ತವೆ. ಹುಕ್ಕೊಟ್ ಆಟದಂತೆ ಅಡಗಿದಲ್ಲಿಂದಲೇ, ವೃದ್ಧಾಪ್ಯದಲ್ಲಿಯೂ ಬಹುಶಃ ಇಣುಕುತ್ತವೆ - ಅಂತೆಲ್ಲ ಮಕ್ಕಳೊಡನೆ ಮಾತಾಡಲು, ಕತೆ ಹೇಳಲು, ಅವರಿಗಾಗಿ ಬರೆಯಲು ಹೊರಟಾಗ ಎಷ್ಟು ಸ್ಪಷ್ಟವಾಗಿ ಗೋಚರವಾಗುತ್ತದೆ !

ಮಕ್ಕಳ ನಾಟಕಗಳನ್ನು ನಾನು ಬರೆಯಲು ತೊಡಗಿದಾಗ ನನ್ನ ಮಾತಿನ ರೀತಿ ಬದಲಾದ್ದನ್ನು ಗಮನಿಸಿಕೊಂಡೆ. ಸಾಮಾನ್ಯವಾಗಿ ಮಕ್ಕಳೊಡನೆ ಮಾತಾಡುವಾಗ ನಮ್ಮ ಒತ್ತು ಉಚ್ಚಾರಗಳು ಪಲ್ಲಟಗೊಳ್ಳುತ್ತವಲ್ಲ ಹಾಗೆ, ಬರೆಯುವಾಗ ಅಲ್ಲಲ್ಲಿ ನನ್ನ ಪ್ರಾಥಮಿಕದ ''ಕನ್ನಡ ನೂತನ ಪಾಠಮಾಲೆ'' (ಮ್ಯಾಕ್ಮಿಲನ್ ಪ್ರಕಟಣೆ) ಯ ಕನ್ನಡ ಧಾಟಿಗೆ ದಾಟಿಕೊಂಡಿದ್ದೆ! 'ಅಮ್ಮಮ್ಮಾ ಏನು ಕೆಟ್ಟ ವಾಸನೆ !' ಎಂಬ ಒಂದು ವಾಕ್ಯವಿತ್ತು. ಒಂದು ಮೃಗಾಲಯಕ್ಕೆ ಮಕ್ಕಳು ಭೇಟಿ ಕೊಟ್ಟಾಗ ಕರಡಿ ಪಂಜರದ ಮುಂದೆ ನಿಂತ ಮಗು ಎತ್ತಿದ ಉದ್ಗಾರವದು. ಹೇಗೆ ಬರೆದಿದೆಯೋ ಹಾಗೆಯೇ ಓದುವ ದಕ್ಷಿಣ ಕನ್ನಡ ಜಿಲ್ಲೆಯ ಒಂದು ಬಗೆಯ ''ಇಗರ್ಜಿ ಉಚ್ಚಾರಣೆ''ಯಲ್ಲಿ ಮತ್ತು ರಾಗದಲ್ಲಿ ಅಂದು ಅದನ್ನು ಓದಿಕೊಂಡಿದ್ದೆವು. ಅದುವರೆಗೆ ಮರೆಯಾಗಿ ಎಲ್ಲಿತ್ತೋ, ನಾಟಕ ಬರೆವಾಗ ಅಲ್ಲಲ್ಲಿ ಸುಮ್ಮನೆ ಬಂದು ಇಣುಕಿ ಹೋಗುತಿತ್ತು.

ಮಕ್ಕಳ ನಾಟಕವೆಂದರೆ ಮಕ್ಕಳು ಆಡಿದಂತೆಯೋ, ಮಕ್ಕಳೊಡನೆ ಆಡಿದಂತೆಯೋ? ಮಕ್ಕಳು ಆಡಿದಂತೆ ಎಂದುಕೊಳ್ಳಿ, ಮಗುವಾಗಬೇಕಾಗುತ್ತದೆ. ಮಕ್ಕಳೊಡನೆ ಆಡಿದಂತೆ ಎಂಬುದು ಸ್ವಲ್ಪ ಸುಲಭದ್ದು ಎಂದು ಕಂಡರೂ ಸುಲಭದ್ದಲ್ಲ. ಆಡುತ್ತಾ ಆಡುತ್ತಾ ಇದ್ದಂತೆ ದೊಡ್ಡವರಾಗಿಯೆ ಉಳಿಯುತ್ತಾ , ಮತ್ತೆ ಎಚ್ಚರವಾಗಿ ಮಕ್ಕಳಾಟಕೆಗಿಳಿಯುತ್ತ ಹೋಗುವ ಪ್ರಕ್ರಿಯೆಯದು. ಮಕ್ಕಳಿಗಾಗಿ ಬರೆಯಲು ಹೊರಟಾಗಲೂ ಈ ಕಷ್ಟ ಎದುರು ನಿಲ್ಲುತ್ತದೆ. ಇದ್ದಕ್ಕಿದ್ದಂತೆ ನಮ್ಮ ದಪ್ಪ ದನಿ ಎಲ್ಲಿಂದಲೋ ಮೂಡುತ್ತದೆ, ಇದು ಹೀಗೆ ಮಕ್ಕಳೇ ಹಾಗಲ್ಲ, ದಡ್ಡರೇ ನಿಲ್ಲಿ, ಬೇಡಬೇಡ, ಬೇಡವೆಂದರೆ ಕೇಳದೇ ! - ಎಂಬೆಲ್ಲ ದನಿಗಳು ಯಜಮಾನಿಕೆ ನಡೆಸುತ್ತವೆ. ಇದೆಲ್ಲವನ್ನು ದಾಟಿ ಮಗುವಿನೆತ್ತರಕ್ಕೆ ಬಗ್ಗಲು ಸಾಧ್ಯವಾಯಿತೇ, ಅಷ್ಟೇ ಎತ್ತರದ ಶಬ್ದಗಳು, ಕಲ್ಪನೆಗಳು ಕುಣಿಕುಪ್ಪಳಿಸಿ ಬಂದು ಚಕಿತಗೊಳಿಸುತ್ತವೆ- ಎಂದರೆ ಒಂದು ರೀತಿಯಲ್ಲಿ ಮಕ್ಕಳ ನಾಟಕದ ಬರವಣಿಗೆಯೆಂದರೆ 'ಮಕ್ಕಳ ಎತ್ತರ'ಕ್ಕೆ ಜಗಿಯುವ ಅಥವಾ ಬಾಗುವ ಯತ್ನಗಳೇ. ಯತ್ನಗಳು ಎಂಬುದನ್ನು ಒತ್ತಿ ಹೇಳುತ್ತಿದ್ದೇನೆ.

ಇಂತಹ ಯತ್ನಗಳಲ್ಲಿ ನನಗೆ ಸುಖ ನೀಡಿದ ಬರವಣಿಗೆ ನಾನು ಮೊತ್ತ ಮೊದಲು ಬರೆದ ''ನಾಯಿಮರಿ ನಾಟಕ''. ಈ ನಾಯಿಮರಿ ಆರಂಭದಲ್ಲಿ ಬರಿಯ ನಾಯಿಮರಿಯೇ ಆಗಿತ್ತು ನನಗೂ. ಬರವಣಿಗೆ ಮುಂದರಿದಂತೆ ಅದು ನಿಧಾನವಾಗಿ ಅವತ್ತಿನ ನನ್ನ ಡೋಲಾಯದ ಬದುಕಿನ ರೂಪ ತಳೆದು ಒಳ ಸೆಳೆದುಕೊಂಡಿತು. ಆ ದುಷ್ಟರೆಲ್ಲ ನನಗೆ ಪರಿಚಿತರೇ ಇದ್ದರು ! ಇವರ ಕೈಗೆ ನನ್ನ ನಾಯಿಮರಿ ಸಿಕ್ಕಲೇ ಬಾರದೆಂದು ಹೋರಾಡಲು ನಾನು ಸಿದ್ಧಳಾದೆ. ಕಂಡ ಕೇಳಿದ ಓದಿದ ಹಲವಾರು ಚಿತ್ರಗಳು, ಕಥೆಗಳು,

ಛಪಛಪಕ್ಕೆಂದು ಏನೋ ಘಟಿಸಿ ಎಲ್ಲ 'ಸುಖ ಸಂತೋಷ'ದಲ್ಲಿ ಮುಗಿಯುವ ಪುರಾತನ ತಂತ್ರ-ಇವೆಲ್ಲವೂ ನನ್ನ ನೆರವಿಗೆ ಬಂದವು. ಫಲವಾಗಿ ಅಲ್ಲ್ಲೆ ಎಲ್ಲಿಂದಲೋ ಒಂದು ಮಾಣಿಕ್ಯಮಣಿ ಸೃಷ್ಟಿಯಾಯಿತು. ಅಲ್ಲೊಂದು ಯಕ್ಷಿಣಿ, ಮರ, ಹಾಡುವ ಮೈನಾ - ಹೀಗೆ ಎಲ್ಲ ಕಲಸಿ ಹೊಸ ರೂಪ ಪಡೆದು ಹೋರಾಡಿ ಅಂತೂ, ಅಬ್ಬಾ ! ನನ್ನ ನಾಯಿಮರಿ ಬದುಕಿತು ! ನಾನು ಬದುಕಿಸಿಕೊಂಡೆ ! ಹಾಂ ! 'ನಾನು' ಎಂಬುದು ಬಂದೇ ಬಿಟ್ಟಿತಲ್ಲ, ಹೇಳಿ ಕಳಿಸದೆಯೂ, ಎಷ್ಟು ಬೇಗ ! ಏನು 'ನಾನು' ಎಂದರೆ ? ನಾನು, ನನ್ನದು, ನನ್ನಿಂದ ಆಯಿತು ಎನ್ನುವಂತಿದೆಯೇ ಎಂದಾದರೂ? ಎಲ್ಲಾ ಹೋರಾಟಗಳ ಮೂಲದಲ್ಲಿರುವುದು ಯಾವ ಯುಗದ ಮಗುವೋ, ಮುದ್ದು ನಾಯಿಮರಿಯೋ. ಒಟ್ಟಿನಲ್ಲಿ ಅಂದು ಮಕ್ಕಳ ನಾಟಕ ಬರೆದು ಕೊಡಿ ಎಂದು ಶ್ರೀ ಕೆ.ವಿ. ಸುಬ್ಬಣ್ಣನವರು ಹೇಳಿದಾಗ ನನಗಾದ ''ನನ್ನಿಂದಾದೀತೆ !'' ಆತಂಕ, ಬರೆಯಲು ನಿಧಾನ ಯತ್ನಿಸುತ್ತ ''ನಾಯಿಮರಿ ನಾಟಕ''ಕ್ಕೆ ಬಂದು ಮುಟ್ಟಿಕೊಂಡಾಗ ಕೃತಜ್ಞತೆಯಾಗಿ ಮಾರ್ಪಟ್ಟಿತ್ತು.

***

## ಮಕ್ಕಳಿಗಾಗಿ ನಾಟಕಶಾಲೆ
## ಶಾಲೆಗಾಗಿ ಮಕ್ಕಳ ನಾಟಕಗಳು

**ಎಸ್.ಕೆ. ಮಾಧವರಾವ್.**

ಶಾಲೆಗಳಲ್ಲಿ ಮಕ್ಕಳ ನಾಟಕ ಏಕೆ ಬೇಕು ಎನ್ನುವ ಪ್ರಶ್ನೆ ಕಾಡುತ್ತದೆ. ವಿದ್ಯಾರ್ಥಿಗಳು ಪೋಷಕರನ್ನು ತಂದೆ ತಾಯಿಗಳನ್ನು ಶಾಲೆಗೆ ಹೋಗಿ ಮನೆಗೆ ಬಂದು ಓದಿದ್ದನ್ನು ಅಭ್ಯಾಸ ಮಾಡಲು ಸಮಯ ಸಿಗದೇ ಇದ್ದಾಗ ಇನ್ನ ನಾಟಕ, ಅದರ ತಾಲೀಮಿಗೆ ಸಮಯ ಎಲ್ಲಿ ತರುವುದು. ಅವರ ಆಟ ಪಾಠದ ಜೊತೆಗೆ ಈ tution, home work, examination, ಮುಂದಿನ ಭವಿಷ್ಯಕ್ಕೆ ಉತ್ತಮ ಅಂಕ, ಶಾಲಾ ಕಾಲೇಜುಗಳಲ್ಲಿ donation ಇಲ್ಲದೆ seat ಹಿಡಿಯುವುದು ಈ ಝುಂಜಾಟದ ಮಧ್ಯೆ ನಾಟಕಕ್ಕೆಲ್ಲಿ ಸಮಯ ತರುವುದು, ನಾಟಕ ಬೇಕಾದರೂ ಏಕೆ ಪರೀಕ್ಷೆಯಲ್ಲಿ ಅದಕ್ಕಾಗಿ ಅಂಕ ತೆಗೆದುಕೊಳ್ಳಬೇಕಾಗಲ್ಲ. ಸುಮ್ಮನೆ ವ್ಯರ್ಥಕಾಲ ಕಳೆಯುವುದು ಬೇಡ. ಮನೆಯಲ್ಲಿ ಅಪ್ಪ ಅಮ್ಮನಿಗೆ ಹೆದರಿಕೊಂಡು ವಿಧೇಯನಾಗಿ ಓದಿಕೊಂಡು ಮನೆಗೆ ಗೌರವತರಲು, ಪಕ್ಕದ ಮನೆಯವರಿಗಿಂತಲೂ ಜಾಣನಾಗಲಿ ತಂದೆ ತಾಯಿಗೆ ಹೆಸರು ತರಲಿ ಎಂದು ಅವರ ಅಭಿಪ್ರಾಯ ಎಲ್ಲ ಕಡೆ. ನನ್ನ ಮಗ ನನ್ನಂತೆಯೇ ಡಾಕ್ಟರಾಗಲಿ, ಇಂಜಿನಿಯರ್ ಆಗಲಿ, ಲಾಯರ್ ಆಗಲಿ ಎನ್ನುವ ಸ್ವಾರ್ಥ.

ಒಂದು ಬಾರಿಯಾದರೂ ಅವರ ಮನಸ್ಸಿನಲ್ಲಿ ನನಗಿಂತ ಬೇರೆ ವ್ಯಕ್ತಿ ಅಂದರೆ ಕಲಾವಿದನಾಗಲಿ, ನೃತ್ಯಪಟುವಾಗಲಿ, ಗಾಯಕನಾಗಲಿ, ನಟನಾಗಲಿ ಎಂಬ ಭಾವ ಬಂದಿದ್ದರೇ ಅವರಿಗೆ ಶಾಲೆಗಳಲ್ಲಿ ಮಕ್ಕಳಿಗಾಗಿ ನಾಟಕ ಏಕೆ ಬೇಕು ಎಂಬುದು ಅರಿವು ಆಗುತ್ತಿತ್ತು. ಹಾಗೆ ಪ್ರತಿಭಾನ್ವಿತರಾದರೂ ಆಹೋರಾತ್ರಿಯ ಒಳಗೆ ಪ್ರಪಂಚಕ್ಕೇ ಪರಿಚಯ ಆಗಿಬಿಡಬೇಕು. ಕೀರ್ತಿ ಅವನ ಕಾಲಿಗೆ ಬಿದ್ದುಬಿಡಬೇಕು ಎನ್ನುವ ಆಸೆ ಹಾಗೆ ಧಿಡೀರ್ ಕೀರ್ತಿ ಬಂದಾಗ ಮಕ್ಕಳು ಕಲಿಯುವುದು ಏನೂ ಉಳಿದಿಲ್ಲ ಎಂದುಕೊಂಡು ಕಲಿಯದೆ ಒಳಗೇ ಟೊಳ್ಳಾಗುತ್ತಾರೆ. ಬಂಡವಾಳವಿಲ್ಲದ ಬಡಾಯಿ ಆಗುತ್ತದೆ.

ಮಕ್ಕಳಲ್ಲಿ ಹುದುಗಿರುವ ಸುಪ್ತ ಪ್ರತಿಭೆಗಳು ತಾವಾಗಿ ತಾವೇ ಚಿಲುಮೆಯಂತೆ ಹೊಮ್ಮುವುದಿಲ್ಲ. ಅವುಗಳ ಉಗಮಕ್ಕೆ ವೇದಿಕೆ ಬೇಕು. ಪ್ರೋತ್ಸಾಹ ಬೇಕು. ಮೆಚ್ಚುವ ಪ್ರೇಕ್ಷಕರು ಬೇಕು. ಬೆನ್ನು ತಟ್ಟುವ ಹಿರಿಯರು ಬೇಕು. ಮಾರ್ಗ ತೋರಿಸುವ ಅಧ್ಯಾಪಕ ವೃಂದ ಬೇಕು.

ಈ ವಾತಾವರಣ ಶಾಲೆಯಲ್ಲಿ ಅಲ್ಲದೆ ಬೇರೆಡೆ ಸಿಗುವುದು ಸುಲಭ ಸಾಧ್ಯವಿಲ್ಲ. ಅವರ ಮನೋವಿಕಾಸಕ್ಕೆ ವ್ಯಕ್ತಿ ವಿಕಾಸಕ್ಕೆ ಸಂಘಟನಾ ಶಕ್ತಿಗೆ ಕಲಾಪ್ರದರ್ಶನಕ್ಕೆ ನಾಟಕ ಬೇಕು. ನಾಟಕ ಆಡುವುದು ಕೇವಲ ಮನರಂಜನೆಗಾಗಿ ಅಲ್ಲ. ಪ್ರೇಕ್ಷಕರ ಮೆಚ್ಚುಗೆಗೆ ಮಾತ್ರ ಅಲ್ಲ, ಜ್ಞಾನಭಂಡಾರವನ್ನು ಹೆಚ್ಚಿಸಿಕೊಳ್ಳುವುದಕ್ಕೆ, ಶಿಸ್ತು ಸಂಯಮವನ್ನು ಕಲಿಯುವುದಕ್ಕೆ ಅರಿವಿನ ದಾಹವನ್ನು ಅಡಗಿಸಿಕೊಳ್ಳುವುದಕ್ಕೆ ಎಂಥೆಂಥ ನಾಟಕಗಳು ಬೇಕು ಎಂಬ ಪ್ರಶ್ನೆ ಆವರಿಸುತ್ತದೆ. ನಮಗೆ ಮಾರ್ಗದರ್ಶನ ಮಾಡಿದ ಹಿರಿಯ ವ್ಯಕ್ತಿಗಳ ಬಗ್ಗೆ ತಿಳಿಯಲು ಎಂಥೆಂಥ ವೀರಾಧಿವೀರರು, ವೀರಮಹಿಳೆಯರು ಇದ್ದರೂ ಎಂಬುದನ್ನು ತಿಳಿಯುವುದಕ್ಕೆ, ನಮ್ಮ ಭಾರತೀಯ ಸಂಸ್ಕೃತಿ ಎಂಬುದನ್ನುತಿಳಿಯುವುದಕ್ಕೆ. ನಮ್ಮ ಸುತ್ತಮುತ್ತಲ ಆಗು ಹೋಗುಗಳನ್ನು ತಿಳಿದುಕೊಳ್ಳುವುದಕ್ಕೆ, ಕಲ್ಪನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ, ನಾಟಕಗಳು ಬೇಕು. ನಾಟಕಗಳಿವೆ. ಅಂದರೆ ಶಾಲೆಯಲ್ಲಿ ಮಕ್ಕಳಿಗಾಗಿ ನಾಟಕಗಳು ಇನ್ನೂ ಬರಬೇಕು. ಮಕ್ಕಳ ಸಾಹಿತ್ಯ ರಂಗದಲ್ಲಿ ಹೆಚ್ಚಿನ ಕೃಷಿ ಆಗಬೇಕು. ರಂಗಭೂಮಿ ಎಂದರೇನು, ರಂಗ ಪ್ರಜ್ಞೆ ಎಂದರೇನು ನೇಪಥ್ಯ ಎಂದರೇನು, ಸಂಘಟನೆ ಎಂದರೇನು ತಿಳಿಯುವುದಕ್ಕೆ ನಾಟಕ ರಂಗದಲ್ಲಿ ಪಾದಾರ್ಪಣೆ ಮಾಡಿದ ಮೇಲೆ ತಿಳಿಯುವುದು ಕಾರ್ಯಾಗಾರದ ಮಹಿಮೆ. ಅದರಲ್ಲಿ ಸಂಗೀತ ನೃತ್ಯ ಚಿತ್ರಕಲೆ ರಂಗಪರಿಕರಣ, ವಸ್ತುವಿನ್ಯಾಸದ ನಿರೂಪಣೆಯಲ್ಲಿನ ವಿಶೇಷತೆಗಳು ತಿಳಿಯಬೇಕಾಗಿದೆ.

ಮಕ್ಕಳ ರಂಗಭೂಮಿ ನಿಜವಾದ ಅರ್ಥದಲ್ಲಿ ವಿಕಾಸಗೊಳ್ಳಬೇಕಾದರೆ ಮಕ್ಕಳಿಗಾಗಿ ರಂಗಶಾಲೆ ಬರಬೇಕು. ಶಾಲೆಗಾಗಿ ಮಕ್ಕಳ ನಾಟಕಗಳು ಇರಬೇಕು.

ಬೆಳೆಯುವ ವೃಕ್ಷಕ್ಕೆ ನಾವು ನೆಟ್ಟ ಬೀಜ, ನಾವು ಹಾಕಿದ ಗೊಬ್ಬರ, ನಾವು ಎರೆದ ನೀರು ಮುಖ್ಯವಾಗಿ, ಫಲವನ್ನು ನೀಡುವ ವೃಕ್ಷ ನಿರೀಕ್ಷಿಸಿದಂತೆ ಕಂಗೊಳಿಸುವುದು. ಹಾಗೆಯೇ ಭವಿಷ್ಯದ ರಂಗಭೂಮಿಗೆ ಇಂದಿನ ಮಕ್ಕಳ ಕಾಣಿಕೆ ಅನಿವಾರ್ಯ ಆಗುತ್ತದೆ. ಇಂದಿನ ಬಾಲ ನಟರುಗಳು ನಟಿಯರು, ಗಾಯಕರು ಮುಂದಿನ ನಟ, ನಿರ್ದೇಶಕ, ಗಾಯಕರಾಗುತ್ತಾರೆ. ಹಾಗೆ ಮಾಡಬೇಕಾದರೆ ಇಂದಿನ ಮಕ್ಕಳಲ್ಲಿ ರಂಗಾಸಕ್ತಿಯನ್ನು ಮೂಡಿಸಬೇಕಾಗುತ್ತದೆ. ರಂಗಪ್ರಜ್ಞೆ ಬೆಳೆಸಬೇಕಾಗುತ್ತದೆ. ಈ ಕಾರ್ಯ ಪ್ರೈಮರಿ ಮಾಧ್ಯಮಿಕ ಮಟ್ಟದಲ್ಲಿ ಆರಂಭಮಾಡಿದ್ದು ರಂಗಭೂಮಿಯ ಬೆಳೆಸಲು ಒಂದು ಸುಮಾರ್ಗವನ್ನು ದರ್ಶನ ಮಾಡಿಸಿದ ಹಾಗಿರುತ್ತದೆ. ಇಲ್ಲಿ ನಮಗೆ ಸಿಗುವ ಸೌಲಭ್ಯ

ಎಂದರೆ ಶಾಲೆಯಲ್ಲಿ ಅಭ್ಯಾಸ ಮಾಡುವ ಎಲ್ಲ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪಾತ್ರಗಳಾಗಿರುತ್ತಾರೆ. ಅವರಲ್ಲಿ ಸುಪ್ತವಾಗಿ ಅಡಗಿರುವ ಎಲ್ಲಾ ಕಲೆಗಳಿಗೂ ಉಳಿಕೊಟ್ಟು ಎಬ್ಬಿಸಿದ ಹಾಗಿರುತ್ತದೆ. ಅವರಲ್ಲಿ ಆತ್ಮ ವಿಶ್ವಾಸವನ್ನು ಬೆಳೆಸುತ್ತದೆ. ತಾವು ಉತ್ತಮರಲ್ಲಿ ಒಬ್ಬರಾಗಬೇಕು ಎನ್ನುವ ಸ್ಪರ್ಧಾ ಭಾವನೆ ಉಂಟಾಗುತ್ತದೆ. ಇಲ್ಲಿ ಮುಖಲಕ್ಷಣಗಳು, ಅಂತಸ್ತಿನ ತಾರತಮ್ಯ ಇರುವುದಿಲ್ಲ. ರಂಗಕ್ರಿಯೆಯಲ್ಲಿ ಮುಳುಗುವ ಪ್ರತಿ ವಿದ್ಯಾರ್ಥಿಗಳಲ್ಲಿ ಏಕಾಗ್ರತೆ, ತಲ್ಲೀನತೆ ಉಂಟಾಗುತ್ತದೆ. ವೇದಿಕೆ ಅವರದಾಗುತ್ತದೆ. ವಿಚಾರ ವಿನಿಮಯ ಸಂಘಟನಾ ಶಕ್ತಿ, ಒಬ್ಬರನ್ನು ಒಬ್ಬರು ಅರಿಯುವ ಶಕ್ತಿ ಬೆಳೆಯುತ್ತದೆ. ನೇಪಥ್ಯದ ಕಾರ್ಯಕ್ರಮದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಾಗ ಅದರಲ್ಲಿ ಉದ್ಭವ ಆಗುವ ಚಿತ್ರಕಲೆ, ರಂಗಪರಿಕರಣ, ಹಿನ್ನೆಲೆ ಸಂಗೀತ, ಧ್ವನಿ ಪ್ರಸಾಧನ, ವಸ್ತ್ರವಿನ್ಯಾಸ ಮೊದಲಾದ ಭಾಗಗಳಲ್ಲಿ ತಾಲೀಮು ಸಿಗುತ್ತದೆ. ಒಂದು ಕಾರ್ಯಗಾರ ಸೃಷ್ಟಿಯಾಗುತ್ತದೆ. ಆ ಮಕ್ಕಳಲ್ಲಿ ರಂಗಪ್ರಜ್ಞೆ ಏರಲು ಸಹಾಯವಾಗುತ್ತದೆ. ಮಕ್ಕಳನ್ನು ಶಿಸ್ತಿನಲ್ಲಿ ಸಂಯಮದಲ್ಲಿ ಇಡುವ ಅವರ ಗುರುಗಳಿಗೆ (teachers) ರಂಗಾಸಕ್ತಿ ಬೆಳೆಸಿಕೊಳ್ಳಲು ಅವಕಾಶ ಸಿಗುತ್ತದೆ. ಅವರು ಮಕ್ಕಳ ಜೊತೆ ಇದ್ದರೆ ಮಕ್ಕಳಿಗೆ ಒಂದು ಪ್ರೋತ್ಸಾಹ ಕೊಟ್ಟಂತೆ ಆಗುತ್ತದೆ. ಒಂದು ಬೆಂಬಲ ಸಿಕ್ಕಂತೆ ಆಗುತ್ತದೆ. ಅವರಿಗೂ ಕ್ಲಿಷ್ಟವಾದ ಪದಗಳನ್ನು ದೃಶ್ಯ ಮಾಧ್ಯಮದಲ್ಲಿ ಹೇಳಿಕೊಡುವ ಅವಕಾಶ ಸಿಗುತ್ತದೆ. ಹುಡುಗರ ಹೃದಯದ ಹತ್ತಿರ ಬಂದ ಭಾಸವಾಗುತ್ತದೆ. ಈ ದೃಷ್ಟಿಯಿಂದ ನಟನೆ, ನಿರ್ದೇಶನ, ರಂಗಸಜ್ಜಿಕೆ, ಹಿನ್ನೆಲೆಸಂಗೀತ, ಬೆಳಕಿನ ಸಂಯೋಜನೆ, ವಸ್ತ್ರ ವಿನ್ಯಾಸ ಇವುಗಳನ್ನು ಆ ಹುಡುಗರ ಮಟ್ಟಕ್ಕೆ ಇಳಿದು ಪರಿಚಯ ಮಾಡಿಕೊಡುವ ನಾಟಕಶಾಲೆ ಅನಿವಾರ್ಯವಾಗುತ್ತದೆ. ಅವಶ್ಯಕವಾಗುತ್ತದೆ. ಶಾಲೆಯಲ್ಲಿ ಮಕ್ಕಳ ನಾಟಕಶಾಲೆ ಇದ್ದರೆ ರಂಗಕ್ರಾಂತಿ ತಾನಾಗಿ ತಾನೇ ಆಗುವುದು. ಇದು ಕಡ್ಡಾಯವಾದರೆ ಅಂದರೆ ಶಾಲೆಗೊಂದು ನಾಟಕಶಾಲೆ ಇದ್ದರೆ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ತರುತ್ತದೆ. ತಮ್ಮ ಶಾಲೆಯಲ್ಲೇ ರಂಗಸಂಭ್ರಮ ಕಂಡರೆ ಶಾಲೆ ಶಾಲೆಗೂ ಸಾಂಸ್ಕೃತಿಕ ಸಂಬಂಧ ಉಂಟಾಗಿ ಒಬ್ಬರನ್ನೊಬ್ಬರು ಅಪರಿಚಿತ ದೃಷ್ಟಿಯಿಂದ ನೋಡುವುದು ತಪ್ಪುತ್ತದೆ. ಶಾಲಾ ಚಟುವಟಿಕೆ ಪರಸ್ಪರ ಶಾಲೆಗಳ ಗಮನಕ್ಕೆ ಬರುತ್ತದೆ. ಮಕ್ಕಳ ರಂಗಭೂಮಿಯ ಕಾರ್ಯಕ್ರಮಕ್ಕೆ ಅಸ್ತಿಭಾರವನ್ನು ಹಾಕಿದಂತೆ ಆಗುತ್ತದೆ. ಒಳ್ಳೆಯ ಅಡಿಪಾಯದ ಮೇಲೆ ಬೆಳೆದು ನಿಂತ ರಂಗಭೂಮಿ ಭವಿಷ್ಯದಲ್ಲಿ, ಸುಸಜ್ಜಿತವಾಗಿ ದೃಢವಾಗಿ ನಿಲ್ಲುತ್ತದೆ. ಆ ನಿಟ್ಟಿನಲ್ಲಿ ಮುನ್ನಡೆದರೆ ಪ್ರತಿವರ್ಷವೂ ರಂಗನಿರಂತರವಾಗಿ ಬೆಳೆಯುತ್ತದೆ ಎಂಬುದು ನನ್ನ ಆಸೆ. ಇದರೊಡನೆ ಅಂತರ್ ವರ್ಗೀಯ ಅಂತರ್ ಶಾಲೆ. ನಾಟಕ ಸ್ಪರ್ದೆಯಾಗಬೇಕು. ತಮ್ಮ ಶಾಲೆಯ ನಾಟಕ ಅಲ್ಲಿದೆ ಇತರ ಶಾಲೆಗಳು ಪ್ರದರ್ಶಿಸುವ ನಾಟಕಗಳನ್ನು ನೋಡುವ ಅವಕಾಶ ಸಿಗಬೇಕು.

ಪ್ರಯೋಗ ವೈವಿಧ್ಯತೆಯನ್ನು ಅರಿಯುವ ಅವಕಾಶ ಆಗಬೇಕು. ಆಗ ಅದು ಸಂಸ್ಕೃತಿ ಪ್ರಚಾರ ದೃಷ್ಟಿಯಿಂದಲೂ ಅಪೇಕ್ಷಣೀಯ.

ಇಷ್ಟು ಶಾಲೆಯ ನಾಟಕಗಳು ಆಗಬೇಕೆಂದರೆ ಕೃತಿಗಳ ಅನಿವಾರ್ಯತೆ ಹೆಚ್ಚಾಗುತ್ತದೆ. ನಾಟಕ ಶಾಲೆಯಲ್ಲಿ ಇನ್ನೊಂದು ವಿಭಾಗವನ್ನು ತೆಗೆದು ನಾಟಕ ರಚನೆ, ಸಣ್ಣಕಥೆಗಳ ರಂಗರೂಪ ಅವುಗಳನ್ನು ದೃಶ್ಯ ಮಾಧ್ಯಮದಲ್ಲಿ ಅಳವಡಿಸುವ ಬಗ್ಗೆ ಇದರ ತಾಲೀಮನ್ನು ಅವರವರ ವಯಸ್ಸಿನ ಅನುಗುಣವಾಗಿ ಕೊಡಬೇಕಾಗುತ್ತದೆ.

ಇಷ್ಟನ್ನು ಮನಗಂಡಾಗ ಶಾಲೆಗಾಗಿ ಮಕ್ಕಳ ನಾಟಕಗಳು ಅನಿವಾರ್ಯವಾಗಬೇಕಾಗುತ್ತದೆ. ಪ್ರೈಮರಿ ಮಾಧ್ಯಮಿಕ ಶಾಲೆಯ ಮಕ್ಕಳಿಗೆ ಎಂಥಹ ನಾಟಕ ಬೇಕು ಎಂಬ ಸಮಸ್ಯೆ ಬಂದು ಒದಗುತ್ತದೆ. ಹಲವಾರು ದಶಕಗಳಿಂದ ಹಿರಿಯರು ಆಡಲು ಯೋಗ್ಯವಾದ ಸಾಂಸಾರಿಕ ಸಾಮಾಜಿಕ ವಿಚಾರ ಪೂರ್ಣ ನಾಟಕಗಳು ಪ್ರಚಾರದಲ್ಲಿ ಬಂದಿದೇ ಹೊರತು ಮಕ್ಕಳಲ್ಲಿ ಆಡಲು ನೋಡಲು ಆಸಕ್ತಿ ಕೆರಳಿಸುವ ನಾಟಕಗಳು ವಿರಳವಾಗಿದ್ದವು. ಬೆರಳು ಎಣಿಸುವಷ್ಟು ಮಂದಿ ಮಕ್ಕಳಿಗಾಗಿ ನಾಟಕ ಮಾಡಿದಲ್ಲದೆ ಮಕ್ಕಳೇ ಮಾಡುವ ನಾಟಕ ಅಪರೂಪವಾಗಿದ್ದಿತು.

ರಂಗಭೂಮಿ ಬೆಳೆದು ಬಂದ ದಾರಿ ಅಷ್ಟು ಪ್ರಮುಖವಲ್ಲ. ಈಗ ಭವಿಷ್ಯದಲ್ಲಿ ನಮ್ಮ ಹಿಡಿತಕ್ಕೆ ಸಿಗುವ ಮಕ್ಕಳಿಂದ ಯಾವ ಎಂಥ ನಾಟಕ ಆಡಿಸಬೇಕು. ಹಿರಿಯರು ಆಡಿಬಿಟ್ಟ ನಾಟಕಗಳ ಪುನರ್ ಪ್ರದರ್ಶನ ಆಗುತ್ತಿರಲೇಬೇಕೆ ಎನ್ನುವುದು. ಆಗ ನನಗೆ ಹೊಳೆದದ್ದು ನಾಟಕಗಳ ಸೃಷ್ಟಿ ಪ್ರಯೋಗ ಎಲ್ಲ ಶಾಲೆಗಳಲ್ಲೂ ವಿಶಾಲವಾದ ರಂಗಮಂದಿರಗಳು ಇರುವುದಿಲ್ಲ. ಇರುವ ಅಲ್ಪ ವಿಸ್ತೀರ್ಣದ ರಂಗ ಮಂಚದ ಮೇಲೆಯೇ ಆಡಬೇಕು. ವಿವಿಧ ಹಿನ್ನಲೆಗಳನ್ನು ಅಲ್ಲೇ ಪ್ರದರ್ಶಿಸಬೇಕು. ಹೆಚ್ಚು ಮಕ್ಕಳಿಗೆ ರಂಗದ ಮೇಲೆ ಬರಲು ಅವಕಾಶ ಕೊಡಬೇಕು. ತಾವೇ ಬಂದು ರಂಗದ ಮೇಲೆ ಹಾಡಿ ಕುಣಿಯಬೇಕು. ರಂಗದ ಮೇಲೆ ನೇಪಥ್ಯದಲ್ಲಿ ಎರಡೂ ಕಡೆ ಕ್ರಿಯಾಶೀಲರಾಗಬೇಕು. ತಮ್ಮನ್ನು ಸಂಪೂರ್ಣವಾಗಿ ನಾಟಕದಲ್ಲಿ ತೊಡಗಿಸಿಕೊಳ್ಳಬೇಕು. ಅಂಥಹ ನಾಟಕಗಳ ಅವಶ್ಯಕತೆ ಎನ್ನಿಸಿತು.

ನಾಲ್ಕು ದಶಕಗಳಿಂದ ಸುಮಾರು 70ಕ್ಕೂ ಹೆಚ್ಚಿನ ಶಾಲೆಗಳಲ್ಲಿ ನೂರಾರು ಮಕ್ಕಳ ಮಧ್ಯೆ ನಿಂತು ಕೆಲಸ ಮಾಡಿದಾಗ ಮಕ್ಕಳ ರಂಗಭುಮಿಯ ಪರಿಕಲ್ಪನೆಯಾಯಿತು. ಈ ಮೂಲಕ ಅನುಭವವಾಯಿತು. ಪ್ರಯೋಗಗಳ ಕಾರ್ಯ ಆರಂಭವಾಯಿತು. ಪ್ರತಿವರ್ಷ ನಡೆಯುವ ವಾರ್ಷಿಕೋತ್ಸವಗಳಲ್ಲಿ ಮಕ್ಕಳು ಹೊಸತು ಹೊಸತನ್ನು ಬಯಸುತ್ತಿದ್ದರು. ಇದರ ಫಲವಾಗಿ ಮಕ್ಕಳ ನಾಟಕಗಳ ಸೃಷ್ಟಿಯಾದವು.

ನಾಟಕಗಳ ಅಭಾವವೇನೂ ಇರಲಿಲ್ಲ. ಬಿ.ವಿ. ಕಾರಂತರ ಆಗಮನದಿಂದಾಗಿ ಅಪಕಾರಿಯ ಕಥೆ, ಪಂಜರಶಾಲೆ, ಆಲೀಬಾಬ, ಪೆಡ್ದಾಯಣ, ಜಂಬೂಸವಾರಿ ಇತ್ಯಾದಿ. ಅವು ಪೂರ್ಣಪ್ರಮಾಣವಾದ ನಾಟಕಗಳಾದವು. ಸಾರ್ವಜನಿಕ ಪ್ರದರ್ಶನಕ್ಕೆ ಹೇರಳವಾಗಿ ಖರ್ಚುಮಾಡಿ ಹೆಸರು ಗಳಿಸುವ ವಾಟಕಗಳಾದವು. ಈ ವಯೋಮಿತಿಯ ಹುಡುಗರು ತಮ್ಮ ಶಾಲೆಯ ಅಂಗಳದಲ್ಲಿ ಪ್ರದರ್ಶಿಸಲು ಅಸಾಧ್ಯವಾದುದಾಗಿದ್ದವು.

ಪ್ರಭಾತ ಕಲಾವಿದರು ನೀಡಿದ ಗೋವಿನ ಕಥೆ, ಸಿಂಡ್ರೆಲಾ, ನಯನಮನೋಹರ ನಾಟಕಗಳಾದವು. ಅವರಲ್ಲಿದ್ದ ಸೌಲಭ್ಯ ಶಾಲೆಗಳಿಗೆ ಲಭಿಸುವುದು ಅಸಾಧ್ಯವಾಗಿತ್ತು. ಆ ಸಮಯದಲ್ಲಿ ನನಗೆ ಪ್ರೋತ್ಸಾಹ ಕೊಟ್ಟ ನಾಟಕಗಳೆಂದರೆ ಎನ್.ಎಸ್. ವೆಂಕಟರಾಂರವರ ಮಕ್ಕಳಿಗಾಗಿಯೇ ಮಕ್ಕಳಿಂದಲೇ ಆಗುವ ನಾಟಕಗಳು.

ಅವರು ಬರೆದ ಅಂದೇರಿ ನಗರಿ ಚೌಪಟರಾಜ, ಹಿಮಾನಿ ಮತ್ತು ಏಳು ಜನ ಕುಳ್ಳರು, ಕಪ್ಪೇ ಕಾಶಿಯಾತ್ರೆ, ಸಿಂದಬಾದ್, ಮುರುಕಲು ತಟ್ಟೆ, ಚಿನ್ನದ ತಟ್ಟೆ ಮೊದಲಾದ ನಾಟಕಗಳು. ವಿಚಾರ ವೈವಿದ್ಯತೆ ಇರುವ ನಾಟಕಗಳು. ಅವರ ಹೆಜ್ಜೆಯಲ್ಲೇ ನಡೆಯಲು ಪ್ರಯತ್ನಿಸಿದೆ. ರಂಗ ಪ್ರಯೋಗಕ್ಕೆ ನಾನು ನಟಿಸಿದ ನಾಟಕಗಳ ನಿರ್ದೇಶಕರ ನಿರ್ದೇಶನದ ಅನುಭವ ಸಹಾಯಕ್ಕೆ ಬಂದಿತು.

ಆಗ ಹೊರಬಿತ್ತು ಶಾಲೆಗಾಗಿ ಮಕ್ಕಳ ನಾಟಕಗಳು ಮಾಲೆಯಲ್ಲಿ ನಾನು ರಚಿಸಿದ ನಾಟಕಗಳು ಮತ್ತು ಇದೇ ದಾರಿಯನ್ನು ಹಿಡಿದ ಇತರ ಕರ್ತೃಗಳ ನಾಟಕಗಳು.

ಐತಿಹಾಸಿಕ, ಪೌರಾಣಿಕ, ಅನುವಾದ, ರೂಪಾಂತರ, ಕಾಲ್ಪನಿಕ ಗೀತರೂಪಕ ರಂಗಕೃಷಿಗೆ ಸಹಾಯ ಮಾಡಿದವು.

ಕಲಾಗಂಗೋತ್ರಿ, ಭಾಗ್ಯಲಕ್ಷ್ಮೀ ಪ್ರಕಾಶನದ ಪ್ರೋತ್ಸಾಹದಿಂದ 50–60 ಹೊಸ ಮಕ್ಕಳ ನಾಟಕಗಳು ಸೃಷ್ಟಿಯಾದವು.

ನಾನು ರಚಿಸಿದ ನಾಟಕಗಳಲ್ಲಿ ನಿರೂಪಣೆಗೆ ಪ್ರಾಶಸ್ತ್ಯ ಕೊಟ್ಟಿದ್ದೇನೆ. ಮೇಳ ಒಂದು ಉತ್ತಮ ಪಾತ್ರವಾಗುತ್ತದೆ. ನನ್ನ ನಾಟಕಗಳಲ್ಲಿ ಮೇಳದಲ್ಲಿ ಹಾಡಲು ಬಲ್ಲವರನ್ನು, ಅನುಕರಣೆ ಮಾಡಬಲ್ಲವರನ್ನು ಸೇರಿಸಿಕೊಂಡು ಹಾಡುಗಳ ಮೂಲಕ ಕಥೆಯನ್ನು ಹೇಳುತ್ತಾ ಹೋಗುತ್ತದೆ. ರಂಗಕ್ರಿಯೆಗಳನ್ನು ಮಾಡುತ್ತಾ ಹೋಗುತ್ತದೆ. ಹಿನ್ನೆಲೆಯ ದೃಶ್ಯ ಬದಲಾವಣೆಗೆ ಮೇಳವೇ ಸಹಾಯವಾಗುತ್ತದೆ. ಮೇಳದಿಂದಲೇ ನಾಂದಿ ಮೇಳದಿಂದಲೇ ಮಂಗಳವಾಗುತ್ತದೆ. ನಟಿಸಲು ಅನುಭವವಿಲ್ಲದ ಎಲ್ಲ ವಿದ್ಯಾರ್ಥಿಗಳಿಗೂ, ಮೇಳದಲ್ಲಿ ಕ್ರಿಯಾಶೀಲರಾಗಿ ನಾಟಕದಲ್ಲಿ ಪಾಲ್ಗೊಂಡ ಅನುಭವ ಆಗುತ್ತದೆ.

ನಾಟಕದಲ್ಲಿ ಬೇಕಾದ ವಿಚಾರ, ಗಾಂಭೀರ್ಯ, ಕಾಯಕ, ಹಾಸ್ಯ, ಕಥೆ ಎಲ್ಲವನ್ನೂ ಅಡಕಮಾಡಿದ್ದೇನೆ. ನನ್ನ ನಾಟಕಗಳಲ್ಲಿ ಮಕ್ಕಳಿಗೆ ಬೇಕಾದುದು ನಟನೆಗೆ ಅವಕಾಶ, ಹಾಸ್ಯ ಸನ್ನಿವೇಶ, ನೃತ್ಯದ ಮೂಲಕ, ಸಂಗೀತದ ಮೂಲಕ, ಶ್ರುತಿಲಯ ಪ್ರದರ್ಶನ, ಪ್ರೇಕ್ಷಕರನ್ನು ಆಕರ್ಷಿಸುವ ರಂಗ ಶೈಲಿ ಇವುಗಳನ್ನು ಗಮನದಲ್ಲಿಟ್ಟುಕೊಂಡು ನಾಟಕಗಳ ರಚನೆಯಾಗಿವೆ. ಚಂದ್ರಹಾಸ, ಕೃಷ್ಣ-ಸುಧಾಮ ಪೌರಾಣಿಕವಾದರೆ, ಮಾಯದ ಮಾಟಗಾತಿ, ತೆನಾಲೀ ರಾಮಕೃಷ್ಣ, ಒಂದೂರಿನಲ್ಲಿ ಒಬ್ಬ ರಾಜ, ಒಂದು ದಂತಕಥೆ, ದಾಕ್ಷಿಣ್ಯ ಶಂಖಿನಾದ ಮರದಗೊಂಬೆ ಮೊದಲಾದ ಅನುವಾದ ರೂಪಾಂತರ ನಾಟಕಗಳು ಹಿರಣ್ಯಕೋಮಶಕ್ತಿ ಮತ್ತು ಯುಕ್ತಿ, ಕೃತಘ್ನ, ನೆಟ್ಟಿಗಿಲ್ಲದವರ ಸೊಟ್ಟ ಕೆಲಸ ಮೊದಲಾದ ಪಂಚತಂತ್ರ ಕಥೆ ಆದಾರಿತ ನಾಟಕಗಳು, ಆಲೀವರ್ ಟ್ವಿಸ್ಟ್, ಅಲ್ಲಾವುದ್ದೀನ್, ಪರಿವರ್ತನೆ, ಬಾಲ್ಯದ ಭಾಗ್ಯ, ಬಚ್ಚಲುಮನೆ ಬಾಗಿಲು, ಮಿಯಾವ್ ಮಾರ್ಜಾಲ ಸಾಫ್, ಮೊದಲಾದ ಅನುವಾದ ನಾಟಕಗಳನ್ನು ಸೃಷ್ಟಿ ಮಾಡಿ ಎಲ್ಲಾ ಶಾಲೆಗಳಲ್ಲೂ ವಿವಿಧ ಸಂದರ್ಭದಲ್ಲಿ ಪ್ರಯೋಗಿಸಲಾಯಿತು.

ನನ್ನಂತೆಯೇ ಗ್ರಾಮೀಣ ಪ್ರದೇಶಗಳಲ್ಲಿ, ಕರ್ನಾಟಕದ ಅಕ್ಕ ಪಕ್ಕದ ಪ್ರದೇಶಗಳಲ್ಲಿ, ಬೇರೆ ಬೇರೆ ಕಡೆಗಳಲ್ಲಿ ನಾಟಕ ರಚನೆ ಮಾಡಿ ಪ್ರಯೋಗಿಸಿ ಶಾಲೆಯಲ್ಲಿ ಮಕ್ಕಳ ನಾಟಕಗಳ ಅವಶ್ಯಕತೆಯನ್ನು ಪೂರೈಸಿದ್ದಾರೆ.

ನಾಟಕ ನಾಟಕಕಾರರ ಪರಿಚಯವಾಗಬೇಕಾದರೆ ಈಗ ಶಾಲೆಗಾಗಿ ಮಕ್ಕಳ ನಾಟಕ ಶೀರ್ಷಿಕೆಯಲ್ಲಿ ಬರೆದಿರುವ ಎಲ್ಲ ನಾಟಕಗಳನ್ನು ಕಡ್ಡಾಯವಾಗಿ ಪ್ರಯೋಗ ಪ್ರದರ್ಶನಗಳನ್ನು ಮಾಡಿ ಪ್ರಚಾರ ದೃಷ್ಟಿಯಲ್ಲೂ ಕೆಲಸವಾಗಬೇಕು.

ಆಗಿರುವುದನ್ನು ಬಿಟ್ಟು ಹೊಸ ನಾಟಕಗಳ ಸೃಷ್ಟಿ ಆಗಬೇಕು. ಎಂದರೆ ಪ್ರಖ್ಯಾರ ಕಥೆಗಾರರ ಸಣ್ಣಕಥೆಗಳನ್ನು ತೆಗೆದುಕೊಂಡು ರೂಪಾಂತರ ಅಥವಾ ಕಲ್ಪನೆಗೆ ಆಕಾರ ಕೊಡುವಂತಹ ನಾಟಕ ಬರೆಯಲು ಕಾರ್ಯಗಾರವಾಗಬೇಕು. ರಂಗಭೂಮಿಯನ್ನು ತರಬೇತಿ ಪಡೆದ ಹಿರಿಯ ನಟರುಗಳು ಕಿರಿಯರ ಮುಂದೆ ನಿಂತು ಮಾಡಿಸಬೇಕು. ಶಾಲೆಗಳಲ್ಲಿ ಅಲ್ಲದೆ ವಿವಿಧ ಬಡಾವಣೆಯಲ್ಲಿ ತಮ್ಮದೇ ಮಕ್ಕಳ ತಂಡ ಕಟ್ಟಿಕೊಂಡು, ಮಕ್ಕಳ ರಂಗಭುಮಿಗೆ ಶ್ರಮಿಸುವವರು ಇದ್ದಾರೆ. ಪ್ರೇಮಾಕಾರಂತ್, ಅನಂತಕೋಟಿ, ಶೋಭಾ ವೆಂಕಟೇಶ್, ಸಿ. ಲಕ್ಷ್ಮಣ್, ಎನ್. ಮಂಗಳ, ಬೇಳೂರು ರಾಮಕೃಷ್ಣ ಮಕ್ಕಳ ರಂಗಭೂಮಿಗೆ ತಮ್ಮ ತಮ್ಮ ಚೈತನ್ಯದ ಅನುಸಾರವಾಗಿ ಶ್ರಮಿಸಿದ್ದಾರೆ.

ವಿವಿಧ ಬಡಾವಣೆಗಳಲ್ಲಿ ತಂಡ ತಂಡವಾಗಿ ಬೆಳೆಯುವ ಸಂಘಸಂಸ್ಥೆಗಳಿಗಿಂತ ಶಾಲೆಗಳ ಮೂಲಕ ಈ ಕೆಲಸವಾದರೆ ಹೆಚ್ಚು ಹೆಚ್ಚಿನ ಮಕ್ಕಳಿಗೆ ರಂಗಾಸಕ್ತಿ ಬಂದು

ಭವಿಷ್ಯದಲ್ಲಿ ರಂಗಭೂಮಿಗೆ ಉತ್ತಮ ಕಾಣಿಕೆಯಾಗುತ್ತಾರೆ. ಅವರ ಕಲ್ಪನಾ ಸಾಮರ್ಥ್ಯ ಹೆಚ್ಚಾಗುತ್ತಿದ್ದ ಹಾಗೇ ಒಳ್ಳೆಯ ನಾಟಕಗಳನ್ನು ನೀಡಬಲ್ಲ ಕಲಾವಿದರಾಗಿ ಬೆಳೆಯುತ್ತಾರೆ ಎಂಬುದರಲ್ಲಿ ಸಂಶಯವಿಲ್ಲ. ಶಾಲೆಯ ಶೈಶವಾಸ್ಥೆಯಲ್ಲೇ–

ಪೌರಾಣಿಕ ನಾಟಕಗಳ ಮೂಲಕ ಪುರಾಣೇತಿಹಾಸ

ಐತಿಹಾಸಿಕ ನಾಟಕಗಳ ಮೂಲಕ ನಾವು ಹೆಮ್ಮೆ ಪಡಬೇಕಾದ ವ್ಯಕ್ತಿಗಳ ಪರಿಚಯ

ಸಾಮಾಜಿಕ ನಾಟಕಗಳ ಮೂಲಕ ಸಮಾಜಸ್ಥಿತಿ

ಹಾಸ್ಯ ನಾಟಕಗಳ ಮೂಲಕ ವಿಡಂಬನೆ ವ್ಯಂಗ್ಯದ ಪರಿಚಯ ಮಾಡಿಕೊಟ್ಟಲ್ಲಿ ಅವರಿಗೆ ನಮ್ಮ ಸಂಸ್ಕೃತಿಯ ಪುರಾಣ ಇತಿಹಾಸದ ಅರಿವು ಈಗಿನಿಂದಲೇ ಮೂಡಿ ಬೆಳೆಯುತ್ತಾ ಬೆಳೆಯುತ್ತಾ ವ್ಯಕ್ತಿ ವಿಕಾಸವನ್ನು ಪಡೆಯುತ್ತಾರೆ.

ಈ ದೃಷ್ಟಿಯಿಂದ ಶಾಲೆಗಾಗಿ ಮಕ್ಕಳ ನಾಟಕ ಮಾಲೆಯಲ್ಲಿ ಮತ್ತು ಹೆಚ್ಚು ಪುಸ್ತಕಗಳು ಬೆಳೆದು ಜ್ಞಾನ ಭಂಡಾರ ತುಂಬಲಿ ಎಂದು ಆಶಿಸುತ್ತೇನೆ.

ಧನ್ಯವಾದಗಳು

***

# ಮಕ್ಕಳ ರಂಗಭೂಮಿ ಮತ್ತು ಶಿಕ್ಷಣ

- ಜಿ. ಸೀತಾರಾಮ ಶೆಟ್ಟಿ ಕೂರಾಡಿ

ಇಲ್ಲಿ ನಾನು ಯಾವುದೇ ಶಿಕ್ಷಣ ತಜ್ಞರ, ಮನೋ ವಿಜ್ಞಾನಿಗಳ ಮಾತುಗಳನ್ನು ಇಲ್ಲವೇ ವಾಕ್ಯಗಳನ್ನು ಉದ್ಧರಿಸಲು ಪ್ರಯತ್ನಿಸುವುದಿಲ್ಲ. ಬದಲಾಗಿ 37 ವರ್ಷಗಳು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಸೇವೆ ಸಲ್ಲಿಸಿದ ಒಬ್ಬ ಅಧ್ಯಾಪಕನಾಗಿಯೂ, ರಂಗ ಕಲಾವಿದನಾಗಿಯೂ ಮಕ್ಕಳ ಜೊತೆಗಿದ್ದ ನನ್ನ ಅನುಭವಗಳನ್ನು ಮಾತ್ರ ಬಿಚ್ಚಿಡಲು ಪ್ರಯತ್ನಿಸುತ್ತೇನೆ. ನಾನು ಚಿಕ್ಕ ಪ್ರಾಯದಿಂದಲೂ ರಂಗಭೂಮಿಯ ಚಟುವಟಿಕೆಯಲ್ಲಿ ಆಸಕ್ತನಾಗಿದ್ದು, ಅಧ್ಯಾಪಕನಾಗಿ ಅದು ನನಗೆ ಹೆಚ್ಚು ಉಪಯೋಗಕ್ಕೆ ಬಂತು. ನಾನು ಗ್ರಹಿಸಿದಂತೆ ಒಬ್ಬ ಪ್ರಭಾವಯುತ ಅಧ್ಯಾಪಕನಾಗಲು ಹಾಗೂ ಪರಿಣಾಮಕಾರಿ ಬೋಧನೆಗೆ ರಂಗಭೂಮಿ ಪ್ರಮುಖ ಮಾಧ್ಯಮ. ನಾನೂ ಅದೇ ತಂತ್ರವನ್ನು ಬಳಸಿಕೊಂಡೆ ಹಾಗೂ ಯಶಸ್ವಿ ಶಿಕ್ಷಕ ಎನಿಸಿಕೊಂಡೆ ಮಕ್ಕಳನ್ನೇ ಬಳಸಿಕೊಂಡು, ರಂಗಭೂಮಿ ಕಟ್ಟಿದೆ ಅದಕ್ಕೆ ಬೇಕಾಗುವಂತಹ ಯೋಚನೆ ಇತ್ಯಾದಿಗಳನ್ನು ತಾಲೀಮು ಹಾಗೂ ಬಲ್ಲವರಿಂದ ಚರ್ಚಿಸಿ ತಿಳಿದುಕೊಂಡೆ ಯಾವುದೇ ಅಧ್ಯಾಪಕನು ರಂಗಭೂಮಿ ಮಟ್ಟಿಗೆ ನಿರಾಸಕ್ತನಾದರೆ ಅವನು ಪರಿಣಾಮಕಾರಿ ಶಿಕ್ಷಕನಾಗಲಾರ ಎಂಬುದು ನನ್ನ ಅಭಿಮತ.

ಮಕ್ಕಳು ಸಹಜವಾಗಿ ಹೆಚ್ಚು ಚಟುವಟಿಕೆಯಿಂದ ಕೂಡಿರುತ್ತಾರೆ. ಅದೇ ಚಟುವಟಿಕೆಯನ್ನು ಬಳಸಿ ರಂಗಭೂಮಿ ಕಟ್ಟಲು ಬಹಳ ಸುಲಭ. ಮಕ್ಕಳಿಗೆ ಚಟುವಟಿಕೆಯೇ ಸರಿ ಅಲ್ಲ ಎಂದರೆ ಮಾತ್ರ ಬಹುಶಃ ರಂಗಭೂಮಿ ಸರಿ ಅಲ್ಲ. ಶಿಕ್ಷಣದಲ್ಲಿ ತರಗತಿ ಕೋಣೆಯಲ್ಲಿ ಏನು ಕೊಡುತ್ತೇವೋ ಅದಕ್ಕಿಂತ ಹತ್ತರಷ್ಟು , ನೂರರಷ್ಟನ್ನು ರಂಗಭೂಮಿಯಲ್ಲಿ ಕೊಡುತ್ತೇವೆ. ಮಗು ಇಲ್ಲಿ ಕಲಿಯುತ್ತದೆ, ಕಲಿಸುತ್ತದೆ. ಎಲ್ಲಿಯೋ ಕೆಲವು ಸೀಮಿತ ವಿಚಾರಗಳಿಗೆ ಮಾತ್ರ ತರಗತಿ ಕೋಣೆ ಬೇಕಾಗಬಹುದು. ಹೆಚ್ಚಿನ ಶಾಲೆಗಳಲ್ಲಿ ನಾವು ಸಮೀಕ್ಷೆ ನಡೆಸಿದರೆ ರಂಗ ಮಂಟಪಗಳೇ ಇಲ್ಲ. ಇದ್ದರೂ ಅದು ತರಗತಿ ಕೋಣೆಗೋ ಅಥವಾ ಮದುವೆ ಮಂಟಪಕ್ಕೋ ಅಥವಾ ಗಣೇಶನನ್ನು ಇಡಲಿಕ್ಕೆ

ಅನುಕೂಲವಾಗುವಂತೆಯೋ ಮುಖ್ಯೋಪಾಧ್ಯಾಯರ ಮತ್ತು ಇಂಜಿನಿಯರವರ ಆಲೋಚನೆಗೆ ತಕ್ಕಂತೆ ಇರುತ್ತದೆ. ಯಾವುದೇ ರಂಗತಜ್ಞನ ಆಲೋಚನೆ ಅಂತಲ್ಲ. ಶಿಕ್ಷಣದ ಮೌಲ್ಯಗಳನ್ನು ರಂಗಭೂಮಿ ಕಲಿಸುವಷ್ಟು ಬೇರೆ ಎಲ್ಲೂ ಕಲಿಯಲು ಸಾಧ್ಯವಿಲ್ಲ. ಇಲ್ಲಿ ಮಗುವಿನ ಯೋಚನಾ ಶಕ್ತಿಯು ಜೊತೆಗೆ ಜ್ಞಾಪನ ಶಕ್ತಿ, ಬಣ್ಣಗಳ ಪರಿಕಲ್ಪನೆ, ದೃಶ್ಯದ ಪರಿಕಲ್ಪನೆ ಎಲ್ಲವನ್ನೂ ಮಗು ತಾನೇ ಮಾಡಿ ಕಲಿಯುತ್ತದೆ ಮತ್ತು ವಿಸ್ತೃತಗೊಳ್ಳುತ್ತಾ ಹೋಗುತ್ತದೆ. ಒಂದು ಕವಿತೆಯನ್ನು ಆಸ್ವಾದಿಸಲು ಹಾಗೂ ಅದರಲ್ಲಿರುವಂತಹ ದೃಶ್ಯಗಳನ್ನು ಮೆಲುಕು ಹಾಕಲು ರಂಗಭೂಮಿಯೇ ಹೆಚ್ಚು ಪರಿಣಾಮಕಾರಿ. ಮಗು ರಂಗಭೂಮಿಯಲ್ಲಿರುವಾಗಲೇ ಮಗುವಿನಲ್ಲಿ ಈ ಗುಣಗಳನ್ನು ಬೆಳೆಸುತ್ತಾ ಹೋಗಬೇಕು. ದೊಡ್ಡ ಮಟ್ಟದ ನಿರ್ದೇಶಕರಂತೆ ನಾಟಕ ರಿಹರ್ಸಲ್ ಬರೀ ಡ್ರಿಲ್ ಆಗಿರಬಾರದು ಅಷ್ಟೇ. ಹಾಗಾದರೇ ಅದು ಕಾನ್ವೆಂಟ್ ಶಿಕ್ಷಣವಾಗಬಹುದೆಂಬ ಭೀತಿಯೂ ಇದೆ. ದೃಶ್ಯದಲ್ಲಿ ಉಪಯೋಗಿಸುವ ಸೆಟ್ಟಿಂಗ್ಸ್ ಪರಿಕರಗಳು ಯಾಕೆ ಹೀಗೆ ? ಎಂಬುದನ್ನು ನಿರ್ದೇಶಕ ಮಕ್ಕಳಿಗೆ ಹೇಳಿದರೆ ಯಾವುದೇ ಅಜ್ಞಾತ ಗುಟ್ಟನ್ನು ಬಿಟ್ಟುಕೊಟ್ಟ ಹಾಗಾಗುವುದಿಲ್ಲ. ಯಾರು ಎಲ್ಲಿರಬೇಕು ಯಾಕಿರಬೇಕು ಇದು ಮಕ್ಕಳಲ್ಲಿ ಸಹಜವಾಗಿ ಮೂಡುವ ಆಸಕ್ತಿ. ಇದನ್ನು ನಿರ್ದೇಶಕ ಹೇಳಬೇಕು, ಆಗ ಮಗುವು ರಂಗಭೂಮಿ ಬಗ್ಗೆ ಮತ್ತಷ್ಟು ಆಸಕ್ತನಾಗುತ್ತಾನೆ. ಹಾಗೆಯೇ ಕಲಿಕೆಯೂ ಹೆಚ್ಚಾಗುತ್ತದೆ. ಭಿನ್ನ ವಿಚಾರಧಾರೆಗಳುಳ್ಳ ವಿಭಿನ್ನ ಸೂಕ್ಷ್ಮತೆಗಳು ಹತ್ತಾರು ಮಕ್ಕಳು ಇಲ್ಲಿ ಸೇರಿ ತಮ್ಮ ಯೋಚನೆಗಳನ್ನು ಅದಲು ಬದಲು ಮಾಡಿಕೊಳ್ಳುತ್ತಾರೆ ಹಾಗೂ ಖುಷಿ ಪಡುತ್ತಾರೆ. ಇಲ್ಲಿ ಆಗುವುದು ಖುಷಿಯ ಕಲಿಕೆ.

ನಾಟಕದಲ್ಲಿರುವ ಮಕ್ಕಳು ಓದಿನಲ್ಲಿ ಹಿಂದುಳಿಯುತ್ತಾರೆ ಎಂಬ ಮಾತನ್ನು ಅಥವಾ ಅಂಥ ಶ್ರದ್ಧೆಯನ್ನು ನಮ್ಮ ಶಾಲೆ ತೊಡೆದು ಹಾಕಿದೆ. ಯಾವ ಮಕ್ಕಳು ಸಾಂಸ್ಕೃತಿಕ ಚಟುವಟಿಕೆಯಲ್ಲಿ ಮತ್ತು ದೈಹಿಕ ಶಿಕ್ಷಣದಲ್ಲಿ ಹೆಚ್ಚಾಗಿ ತೊಡಗಿದ್ದಾರೋ ಆ ಮಕ್ಕಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಅಂಕಗಳಿರುವ ಬಗ್ಗೆ ನಮ್ಮಲ್ಲಿ ದಾಖಲಾತಿ ಇದೆ. ಶೇ. 95ಕ್ಕಿಂತ ಹೆಚ್ಚಿನ ಫಲಿತಾಂಶ ಬಹುಶಃ ಮಕ್ಕಳನ್ನು ಈ ಪ್ರಕಾರಗಳಲ್ಲಿ ಪ್ರೇರಣೆ ಮಾಡಿದ್ದೇ ಕಾರಣ ಇರಬಹುದು. ನಮ್ಮಲ್ಲಿ ರಾಷ್ಟ್ರಮಟ್ಟದಲ್ಲಿ ಆಟವಾಡಿದ ಮಕ್ಕಳಿದ್ದಾರೆ. ರಾಷ್ಟ್ರಮಟ್ಟದಲ್ಲಿ ಶೋ ಕೊಟ್ಟ ಮಕ್ಕಳಿದ್ದಾರೆ. ಅವರ ಶೋಗಳಿಂದ ಉಳಿದ ಲಾಭವನ್ನು ಮೂಲ ಧನವನ್ನಾಗಿರಿಸಿಕೊಂಡು ಶಾಲೆಯಲ್ಲಿ ಹೋಂ ಥಿಯೇಟರ್ ಕಟ್ಟಲಾಗಿದೆ. ಮಕ್ಕಳ ಜೊತೆ ಬೆರೆತಷ್ಟು ಅವರ ಪ್ರೀತಿಯ ಜೊತೆಗೆ ಹೊಸ ಯೋಚನೆಗಳು ನಿರ್ದೇಶಕನಿಗೆ ಸಂಪತ್ತಾಗುತ್ತಾ ಹೋಗುತ್ತದೆ ಎಂಬುದು ನನ್ನ ಖಡಾಖಂಡಿತವಾದ ಅಭಿಪ್ರಾಯ. ಮಗುವಿನ ಜೊತೆಗೆ ಈ ಕೊಡು-ಕೊಳ್ಳುವಿಕೆ ರಂಗಭೂಮಿಯಲ್ಲಿ ಸದಾ ಸಾಗುತ್ತಾ ಇರಲಿ.

ಮಕ್ಕಳ ರಂಗಭೂಮಿಗೆ ಜಯವಾಗಲಿ.

***

# ಕನ್ನಡದಲ್ಲಿ ಮಕ್ಕಳ ನಾಟಕ

- ಡಾ. ಶ್ರೀಪಾದ ಭಟ್

ಮಕ್ಕಳ ನಾಟಕಗಳನ್ನೂ ಒಳಗೊಂಡಂತೆ ಮಕ್ಕಳ ಸಾಹಿತ್ಯ, ಓದುಗ ಕೇಂದ್ರಿತ/ ನೋಡುಗ ಕೇಂದ್ರಿತವಾಗಿ ರೂಪುಗೊಂಡಿದೆ. ಮಕ್ಕಳು ಎಂದರೆ ಯಾರು ? ಎಂದು ಅವರು ಪರಿಭಾವಿಸಿಕೊಂಡಿದ್ದರೋ, ಮಕ್ಕಳು ಎಂದರೆ ಏನು ? ಎಂದು ನಿರ್ಧರಿಸಿಕೊಂಡಿದ್ದರೂ ಈ ಪರಿಕಲ್ಪನೆಯ ಹಿನ್ನೆಲೆಯಲ್ಲಿ ರಚಿತಗೊಂಡಿದೆ. ಹೀಗಾಗಿ ಬೇರೆ ಬೇರೆ ಕಾಲಘಟ್ಟದಲ್ಲಿ ಉಳಿದ ಪ್ರಕಾರಗಳು ಬದಲಾದ ಹಾಗೆ ಈ ಪರಿಕಲ್ಪನೆಗಳೂ ಗ್ರಹಿತವಾಗಿಟ್ಟುಕೊಂಡಿರುವ ಮಕ್ಕಳ ಪರಿಕಲ್ಪನೆಯಲ್ಲಿ ಏನಾದರೂ ಬದಲಾವಣೆ ಆಗಿದೆಯೇ ಎಂಬುದನ್ನು ಹುಡುಕಲು ಈ ಲೇಖನ ಪ್ರಯತ್ನಿಸುತ್ತದೆ.

ಈ ಗ್ರಹಿಕೆಗಳ ಹಿನ್ನೆಲೆಯಲ್ಲಿ ಮಕ್ಕಳ ನಾಟಕ ಸಾಹಿತ್ಯದ ಕೆಲವು ಘಟ್ಟಗಳನ್ನು ಅವುಗಳ ರಚನೆಯ ಚಿಂತನಾ ಕ್ರಮದ ಆಧಾರದಲ್ಲಿ ಮತ್ತು ಈ ಘಟ್ಟಗಳನ್ನು ನಾನು ಸೂಚಿಸುವಾಗ ಆಯಾ ಕಾಲಮಾನವನ್ನು ಪ್ರತಿನಿಧಿಸುವ ಕೆಲವರನ್ನು ಹೆಸರಿಸಿದ್ದೇನೆ. ಅದರಲ್ಲಿ ಉಕ್ತವಾದ ವ್ಯಕ್ತಿಗಳು ಮಾತ್ರವೇ ಮುಖ್ಯ, ಉಳಿದವರು ಅಲ್ಲ ಎಂದು ದಯಮಾಡಿ ಯಾರೂ ತಿಳಿಯಬಾರದು (ಶ್ರೇಷ್ಠತೆಯ ಮಾನದಂಡದಲ್ಲಿ ಕೋರ್ಟಿಗೆಳೆಯಬಾರದು). ಇಲ್ಲಿ ಸೂಚಿಸಿರುವ ಹೆಸರುಗಳು ಆಯಾ ನಿಲುವಿನ ಪ್ರತಿನಿಧಿಗಳು ಎಂಬುದಷ್ಟೇ ಈ ಆಯ್ಕೆಗೆ ಕಾರಣ. ಪರಸ್ಪರ ವಿರುದ್ಧವಾದ ಪರಿಕಲ್ಪನೆಗಳನ್ನು ಒಂದರ ಪಕ್ಕದಲ್ಲಿ ಒಂದಿಟ್ಟು ಅವು ಘರ್ಷಿಸುವ, ಸಾಹಚರ್ಯ ನಡೆಸುವ ಬಗೆಯನ್ನು ಕಾಣಲು ಪ್ರಯತ್ನಿಸುವುದು ಈ ಬರಹದ ಇನ್ನೊಂದು ಪ್ರಯತ್ನ.

ಕನ್ನಡದಲ್ಲಿ 'ಮಕ್ಕಳ ರಂಗಭೂಮಿ' ಎಂದು ಮಾತನಾಡುವಾಗ ಜಾನಪದ, ಯಕ್ಷಗಾನ, ಕಂಪನಿ ನಾಟಕ (ಬಾಲಕಲಾವರ್ಧಿನಿಯಂತಹ ಪ್ರಯೋಗಗಳನ್ನು) ಇವೆಲ್ಲವುಗಳನ್ನೂ ಪರಂಪರೆಯನ್ನಾಗಿ ಇಟ್ಟುಕೊಳ್ಳಬಹುದು. ಆದರೆ ಕನ್ನಡದಲ್ಲಿ 'ಮಕ್ಕಳ ನಾಟಕಗಳು' ಅಂತ ಹೇಳುವಾಗ ಅಷ್ಟು ಹಿಂದಿನ ಪರಂಪರೆಯನ್ನು ಗುರುತಿಸಲು ಸಾಧ್ಯವಿಲ್ಲ. ಕನ್ನಡದಲ್ಲಿ ಮಕ್ಕಳ ನಾಟಕದ ಬಹಳ ದೊಡ್ಡ ಬೆಳಸನ್ನು ನಾವು ನವೋದಯ

ಕಾಲದಲ್ಲಿಯೇ ನೋಡಬೇಕಾಗುತ್ತದೆ. ಆದರೆ ಅದರ ಪರಿಕಲ್ಪನೆ ರೂಪುಗೊಂಡಿದ್ದು ತುಸು ಹಿಂದೆ ಹೊಸಗನ್ನಡದ ಅರುಣೋದಯ ಕಾಲದಲ್ಲಿ; ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದ ಚಿಂತನೆಗಳಿಂದ. ಈ ಚಿಂತನೆಗಳು ಆರಂಭವಾದದ್ದು ಪಂಜೆ ಮಂಗೇಶರಾಯ ಮತ್ತು ಎಂ.ಎಸ್. ಪುಟ್ಟಣ್ಣ ಅವರಿಂದ.

## ಪಂಜೆ ಮಂಗೇಶರಾಯ ಮತ್ತು ಎಂ.ಎಸ್. ಪುಟ್ಟಣ್ಣ

ಪಂಜೆ ಮಂಗೇಶರಾಯ ಮತ್ತು ಎಂ.ಎಸ್. ಪುಟ್ಟಣ್ಣ ನೇರವಾಗಿ ಮಕ್ಕಳ ನಾಟಕಗಳನ್ನೇನೂ ಬರೆದವರಲ್ಲ. ಆದರೆ ಮಕ್ಕಳ ಸಾಹಿತ್ಯ ಉದ್ಘಾಟನೆಗೊಂಡಿದ್ದು ಅವರುಗಳಿಂದ ಮತ್ತು ಮುಂದಿನ ಮಕ್ಕಳ ನಾಟಕಗಳ ಸೈದ್ಧಾಂತಿಕ ಸ್ವರೂಪವನ್ನು ನಿರ್ಧರಿಸುವಲ್ಲಿ ಇವರ ಚಿಂತನೆಗಳು ಬಹಳ ಮುಖ್ಯ ಪಾತ್ರ ವಹಿಸಿವೆ. ಅವರಿಬ್ಬರಿಗೂ ಇದ್ದ ಮಕ್ಕಳ ಕುರಿತಾಗಿ ಇರುವ ಗ್ರಹಿಕೆಗಳು ಪರಸ್ಪರ ಭಿನ್ನವಾದವುಗಳು. ಆಶ್ಚರ್ಯವೆಂದರೆ ಅವರಿಬ್ಬರ ಮಕ್ಕಳ ಸಾಹಿತ್ಯದ ಕುರಿತಾದ ಗ್ರಹಿಕೆಗಳು ಇಂದಿನವರೆಗೂ ಬೇರೆ ಬೇರೆ ನೆಲೆಯಲ್ಲಿ ಬೇರೆ ಬೇರೆ ರೂಪದಲ್ಲಿ ಬೇರೆ ಬೇರೆ ವಿನ್ಯಾಸದಲ್ಲಿ ಆದರೆ ಸರಿಸುಮಾರು ಅದೇ ಆಶಯಗಳೊಂದಿಗೆ ಮುಂದುವರಿದಿರುವುದನ್ನು ನಾವು ಕಾಣಬಹುದಾಗಿದೆ.

ಎಂ.ಎಸ್. ಪುಟ್ಟಣ್ಣ ಶೈಕ್ಷಣಿಕ ಉದ್ದೇಶಕ್ಕಾಗಿ ಮಕ್ಕಳ ಪುಸ್ತಕ ರಚಿಸಿದವರು. ಮಕ್ಕಳಿಗಾಗಿ ರಚಿಸುವ ಸಾಹಿತ್ಯ ಹೇಗಿರಬೇಕು ಎಂಬ ಕುರಿತು ಒಂದು ಪ್ರಣಾಳಿಕೆಯನ್ನು ನೀಡಿದ್ದಾರೆ. ಅವರ ನೀತಿ ಚಿಂತಾಮಣಿಯ ಆಶಯ ಇದು.

''ನೀತಿಯಿಲ್ಲದ ವಿದ್ವತ್ತಿಗಿಂತಲೂ ನೀತಿಯುಳ್ಳ ಮೌಢ್ಯ ಉತ್ತಮ. ಆದ್ದರಿಂದ ಇತರ ಒಳ್ಳೆ ಅಭ್ಯಾಸಗಳಂತೆ ನೀತಿ ಸಂಬಂಧವಾದ ಅಭ್ಯಾಸಗಳು ಬಾಲ್ಯದಿಂದಲೂ ಅನುಸರಿಸತಕ್ಕದ್ದು''

ಅವರ ಇನ್ನೊಂದು ಹೇಳಿಕೆ ಹೀಗಿದೆ –

''ವಿದ್ಯಾಭ್ಯಾಸ ಮಾಡುವ ರೀತಿಯನ್ನು ವಿಧಿವತ್ತಾಗಿ ಹೇಳದೆ ಒಳ್ಳೇ ಮಾರ್ಗವನ್ನು ಹುಡುಗರು ಗ್ರಹಿಸುವ ಹಾಗೆ ಕಥಾರೂಪವಾಗಿ ದೊಡ್ಡ ವಿಷಯಗಳನ್ನು ತಿಳಿಸುವುದಕ್ಕೆ ನಮ್ಮ ಹಿತೋಪದೇಶ ಅಥವಾ ಪಂಚತಂತ್ರವನ್ನು ಬಿಟ್ಟರೆ ಬೇರೆ ಯಾವುದೇ ಗ್ರಂಥವೂ ನಮ್ಮಲ್ಲಿಲ್ಲ. ಆದರೆ ಪಂಚತಂತ್ರದಲ್ಲಿ ಮಾತನಾಡಲು ಶಕ್ತಿ ಇಲ್ಲದ ಜಂತುಗಳು ಮಾತನಾಡುವ ಹಾಗೆ ತೋರಿಸಿರುವ ಕಾರಣ, ಲೋಕದಲ್ಲಿಲ್ಲದ ಸುಳ್ಳನ್ನು ಹೇಳುವುದರ ಮೂಲಕ ನಿಶ್ಚಯವನ್ನು ಬೋಧಿಸಿದಂತಾಗುವುದು. ಇದು ಆಧುನಿಕರ ಮತವಲ್ಲ.'' 'ಮಾಡಿದ್ದುಣ್ಣೋ ಮಹರಾಯ'ದಂತಹ ಅಪ್ಪಟ ವಾಸ್ತವವಾದಿ ಕಾದಂಬರಿ ರಚಿಸಿದ ಪುಟ್ಟಣ್ಣನವರ ಹೇಳಿಕೆಯನ್ನು ಈ ಹಿನ್ನೆಲೆಯಲ್ಲಿಯೂ ಗಮನಿಸಬಹುದು.

ಮಕ್ಕಳ ಸಾಹಿತ್ಯಕ್ಕೆ ಭದ್ರ ಬುನಾದಿ ಹಾಕಿದ ಪಂಜೆಯವರೂ ನೇರವಾಗಿ ಮಕ್ಕಳ ನಾಟಕ ಬರೆದಿಲ್ಲ. ಆದರೆ ನಾಟಕದ ಪರಿಕಲ್ಪನೆ ಅವರಲ್ಲಿ ಗಟ್ಟಿಯಾಗಿತ್ತು. ಅವರ ಕತೆ, ಕವನಗಳು ನಾಟಕೀಯ ಶಕ್ತಿಯಿಂದ ಇಂದಿಗೂ ಅಪ್ಯಾಯಮಾನವಾಗಿವೆ. ಅವರ ಕೆಲ ಮಾತುಗಳಲ್ಲಿ ಅಭಿನಯದ ಕುರಿತಾಗಿ ಅವರಿಗಿರುವ ಸ್ಪಷ್ಟತೆ ತಿಳಿದು ಬರುತ್ತದೆ. ಮಕ್ಕಳ ಸಾಹಿತ್ಯದ ಕುರಿತಾದ ಅವರ ವೈಚಾರಿಕ ಪ್ರಣಾಳಿಕೆ ಹೀಗಿದೆ.

ಧರ್ಮಬೋಧನೆಗಾಗಿ, ನೀತಿ ಹೇಳುವುದಕ್ಕಾಗಿಯೇ ಕತೆ ಕಟ್ಟಬಾರದು. ಅದು ಕತೆಯ ಅಂತರಂಗದಲ್ಲಿರಲಿ. ಕತೆಗಳನ್ನು ಬರೆದು ಅಥವಾ ಹೇಳಿ ಅಂತ್ಯದಲ್ಲಿ ಬುದ್ಧಿವಾದವನ್ನು ಸ್ಪಷ್ಟವಾಗಿ ವ್ಯಕ್ತಮಾಡುವುದು ಅನುಚಿತ.

ಒಳಗಿನ ಮನೋವ್ಯಾಪಾರಗಳಿಗಿಂತ ಅವುಗಳನ್ನು ವ್ಯಕ್ತಗೊಳಿಸುವ ಅಂಗಮುದ್ರೆಗಳನ್ನು, ಬಾಹ್ಯ ಚೇಷ್ಟೆಗಳನ್ನು ಹೇಳಿದರೆ ಮಕ್ಕಳಿಗೆ ಮುಂದೆ ಅದನ್ನು ಅಭಿನಯಿಸಿ ತೋರಿಸುವುದಕ್ಕೂ ಅನುಕೂಲವಾಗುತ್ತದೆ.

ಹೇಳಿಕೆಗಿಂತ ಸಂಭಾಷಣೆ ಅಧಿಕವಿರಬೇಕು. ಕತೆಗಳಲ್ಲಿಯ ಒಂದೆರಡು ಸನ್ನಿವೇಶಗಳನ್ನಾದರೂ ಮಕ್ಕಳು ಕತೆಗಾರನ ಮಾತುಗಳನ್ನೇ ಇಟ್ಟು ಪ್ರದರ್ಶಿಸುವಷ್ಟು ಆತನ ಕತೆಯಲ್ಲಿ ಸಂಭಾಷಣೆ ಇರತಕ್ಕದ್ದು.

ಮುಂದೆ ರಚಿತಗೊಂಡ ಮಕ್ಕಳ ಸಾಹಿತ್ಯ/ನಾಟಕಗಳು ಈ ಚಿಂತನಾ ಕ್ರಮವನ್ನು ಸಾಕಷ್ಟು ಹತ್ತಿರದಿಂದ ಅನುಸರಿಸಿಕೊಂಡುಬಂದವು.

ಪುಟ್ಟಣ್ಣ ಮಾದರಿಯನ್ನು ಔಪಚಾರಿಕ ಶಿಕ್ಷಣ ಕ್ರಮವನ್ನು ಒಪ್ಪಿಕೊಂಡು ಬಂದವರು ಮುಂದುವರಿಸಿದರೆ ಪಂಜೆಯವರ ಮಾದರಿಯನ್ನು ಅನೌಪಚಾರಿಕ ಶಿಕ್ಷಣಕ್ರಮವನ್ನು ಒಪ್ಪಿಕೊಂಡವರು ಮುಂದುವರಿಸಿದರು.

**ಕುವೆಂಪು ಮತ್ತು ಶಿವರಾಮ ಕಾರಂತ ಮಾದರಿ**

ನವೋದಯ ಕಾಲಘಟ್ಟದಲ್ಲಿ ಮಕ್ಕಳ ನಾಟಕಗಳು ಆರಂಭಗೊಂಡವು. ಈ ಕಾಲಘಟ್ಟದಲ್ಲಿ ರಚಿತವಾದ ಮಕ್ಕಳ ನಾಟಕಗಳ ಎರಡು ಮಾದರಿಗಳಿಗೆ ಕುವೆಂಪು ಮತ್ತು ಕಾರಂತ ಮಾದರಿ ಎಂದು ಹೇಳಬಹುದು.

ಕುವೆಂಪು ಅವರು ಔಪಚಾರಿಕ ಶಿಕ್ಷಣಕ್ರಮದಿಂದಲೇ ಬಂದವರು. ಹೀಗಾಗಿ ಸಹಜವಾಗಿಯೇ ಅವರಲ್ಲಿ ಎಂ.ಎಸ್. ಪುಟ್ಟಣ್ಣ ಅವರ ನೀತಿ ಚಿಂತಾಮಣಿಯ ಕೆಲ ಅಂಶಗಳ ಮುಂದುವರಿಕೆ ಕಾಣಸಿಗುತ್ತದೆ. 'ಮೋಡಣ್ಣನ ತಮ್ಮ' ನಾಟಕದ ಈ ಸಾಲುಗಳನ್ನು ನೋಡಿ.

ಹುಡುಗ : ''ಓ ಮೋಡಣ್ಣ ಓ ಮೋಡಣ್ಣ ನಾನು ಬರುವೆನು ದಮ್ಮಯ್ಯಣ್ಣ...''

ಮೋಡಣ್ಣ: ಬುದ್ಧಿಯ ಹೇಳುವೆ ಆಲಿಸು ನೀನು
ಬುದ್ಧಿ ಅರಿಯೆ ಕರೆದೊಯ್ಯುವೆನು ನಾನು
ಧರ್ಮ ಮೇಘ ನೀನಾಗಲು ಬೇಕು ಧರ್ಮದ
ಮಳೆಯನು ಸುರಿಸಲು ಬೇಕು. ಸತ್ಯವನೆಂದಿಗೂ ಬಿಡಬೇಡ,
ಮಿತ್ಯವನೆಂದಿಗೂ ಹಿಡಿಯಲು ಬೇಡ.
ಚಿತ್ರದಿ ಭಕ್ತಿಯ ಬೀಜವನು ಬಿತ್ತುತ
ಪಡೆಯಿರಿ ಮುಕ್ತಿಯನ...
ಹೀಗೆ ಈ ಉಪದೇಶಗಳ ಮಾಲೆ ಮುಂದುವರಿಯುತ್ತದೆ.

ಈ ಬಗೆಯ ಉಪದೇಶಾತ್ಮಕ ನೀತಿಚಿಂತಾಮಣಿಯ ಮಾದರಿಯಲ್ಲಿ ಹಲವಾರು ನಾಟಕಗಳು ಬಂದಿವೆ.

(ಬಹಳ ಮುಖ್ಯವಾಗಿ ಈ ಬಗೆಯ ನಾಟಕಕಾರರ ನಾಟಕಗಳಲ್ಲಿ ಕಾವ್ಯಾಂಶವೇ ಅಧಿಕ, ನಾಟಕದ ಅಂಶಗಳು ಕಡಿಮೆ. ಆದರೆ ಇವರ ಕಾವ್ಯಗಳಲ್ಲಿ ನಾಟಕೀಯ ಶಕ್ತಿ ಅಧಿಕವಾಗಿದೆ. ಇದು ಬೇರೆಯದೇ ಆದ ಚರ್ಚೆಯೊಂದನ್ನು ಬಯಸುತ್ತದೆ.)

ಅನೌಪಚಾರಿಕ ಶಿಕ್ಷಣ ವ್ಯವಸ್ಥೆಯನ್ನು ಒಪ್ಪಿಕೊಂಡು ಬಂದವರು ಕಾರಂತರು. ಇವರನ್ನು ಪಂಜೆ ಮಾದರಿಯವರೆಂದು ಕರೆಯಬಹುದು. ಈ ಮಾದರಿಗೆ ಒಳ್ಳೆಯ ಸೇರ್ಪಡೆ ಎಂ.ಎನ್. ಕಾಮತ್, ಇವರೆಲ್ಲ ಮೊದಲು ನೀಡಿದ್ದು ಅನುವಾದಿತ ನಾಟಕಗಳನ್ನು. ಎಂ.ಎನ್. ಕಾಮತ ಅನುವಾದಿಸಿದ ಟ್ಯಾಗೋರರ 'ಅಂಚೆಮನೆ', 'ಶುಕ ಶಿಕ್ಷಣ', ಇದಕ್ಕೊಂದು ಮಾದರಿ. ಅನೌಪಚಾರಿಕ ಶಿಕ್ಷಣಕ್ರಮವನ್ನು ನಮ್ಮ ನಡುವೆ ಪ್ರಚುರ ಪಡಿಸಿದ ಕಾರಂತರು ಅಥವಾ ಎಂ.ಎನ್. ಕಾಮತರು ಇವರೆಲ್ಲರೂ ಮಕ್ಕಳ ನಾಟಕಗಳಿಗಾಗಿ ಆಕರಿಸಿದ್ದು , ಆ ಮಾದರಿಯ ಶಿಕ್ಷಣವನ್ನು ಪ್ರಚುರಪಡಿಸುತ್ತಿದ್ದ ಟ್ಯಾಗೋರರನ್ನು.

ಕಾರಂತರ ಸಿಹಿಮೂಲಂಗಿ ನಾಟಕದಲ್ಲಿಯ ಈ ಮಾತುಗಳನ್ನು ನೋಡಿ.

''ಹಾರೆಯಿಂದ ಮಣ್ಣು ತೆಗೆ, ಚಂದದಿಂದ ಕುಣಿಯ ಅಗೆ, ಕೀಳು ಬಿಸುಟು
ಕಳೆಯನೆಲ್ಲಾ ಬೆಳೆಯ ಬೇಕು ಗಿಡವನೆಲ್ಲ''

ಈ ನಾಟಕದಲ್ಲಿ ಗುಹೆಯ ಬಾಗಿಲನ್ನು ತೆರೆಯುವ ಕಾರಂತರ ಮಂತ್ರ ಹೀಗಿದೆ ನೋಡಿ. ''ತಾಯಿ ಧರಿತ್ರಿ ಫಲವತಿ ಪ್ರಥ್ವಿ ಜಲವೇ ನೆಲವೇ, ಮಣ್ಣೇ, ಮರಳೇ, ಇಳಿಸಿರಿ ಬೆವರನು ಸರಿಸಿರಿ ಕಲ್ಲನು. ಬೆಳೆಸಿರಿ ಬದುಕನು ತೋಳಿನ ಬಲದಿ'' ಈ ಸಾಲುಗಳನ್ನು ಪುಟ್ಟಣ್ಣ ಮಾದರಿಯ ನಾಟಕಗಳ ಸಾಲುಗಳೊಡನೆ ಇಟ್ಟು ನೋಡಿ. ಇನ್ನು ಸಾಕಷ್ಟು ಮಕ್ಕಳ ನಾಟಕಗಳು ಬಂದ ಮುಂದಿನ ಕಾಲಘಟ್ಟವನ್ನು ನೋಡೋಣ.

ಕಂದನನ್ನು ಕಾದುಕೊ, ಕಂದನನ್ನು ಬಿಡಿಸಿಕೊ

ಈ ಕಾಲಘಟ್ಟವನ್ನು ಕಂದನನ್ನು ಕಾದುಕೊ ಮಾದರಿ ಮತ್ತು ಕಂದನನ್ನು ಬಿಡಿಸಿಕೊ ಮಾದರಿ ಎಂದು ಕರೆಯುಬಹುದಾಗಿದೆ (ಕಂದನ ಕಾದುಕೋ ಇದು ವರದರಾಜ ಹುಯಿಲಗೋಳರವರ ನಾಟಕ ಸಂಕಲನದ ಹೆಸರು). ಕಂದನನ್ನು ಕಾದುಕೋ ಮಾದರಿಯ ತತ್ವಪ್ರಣಾಳಿಕೆ ಹೀಗಿದೆ.

★ ಮಕ್ಕಳಿಗೆ ಅವಶ್ಯ ಎಂದು ಹಿರಿಯರು ನಿರ್ಧರಿಸಿದ್ದನ್ನು ಕೊಟ್ಟು ಅವರನ್ನು ರಕ್ಷಿಸಬೇಕು.

★ ನಾವು ಈಗ ಏನನ್ನು ಬಿತ್ತುತ್ತೇವೆಯೋ ಅದೇ ಮುಂದೆ ಬೆಳೆಯುತ್ತದೆ.

★ ಮಕ್ಕಳ ಮನಸ್ಸೆಂದರೆ ಹಸಿಗೋಡೆ.

ಹೀಗೆ ತುಂಬ ಜನಪ್ರಿಯವಾದ ನುಡಿಗಳು ಇವು. ಔಪಚಾರಿಕ ಶಿಕ್ಷಣ ಕ್ರಮದ ಮಾದರಿಯಲ್ಲಿ ಮುಂದುವರಿದವರು ಈ 'ಕಂದನ ಕಾದುಕೊ' ಮಾದರಿಯನ್ನೆ ಮುಂದುವರಿಸಿದವರು. ಈ ಮಾದರಿಯಲ್ಲಿ ಕನ್ನಡದ ಬಹುತೇಕ ನಾಟಕಕಾರರು ಬರುತ್ತಾರೆ. ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ಮಕ್ಕಳ ಸಾಹಿತ್ಯ ಪುಸ್ತಕದಲ್ಲಿ ಅದರ ಸಂಪಾದಕರು ಹೇಳುವ ಈ ಮಾತುಗಳನ್ನು ಗಮನಿಸಿ.

''ಎಳೆಯ ಮನಸ್ಸಿನ ಮೇಲೆ ನೇರ ಪರಿಣಾಮವಾಗುವಂಥ ಕೆಲವು ಸತ್ಯಗಳನ್ನು, ಅಷ್ಟು ಜಾಗ್ರತೆ ಅವರ ಗಮನಕ್ಕೆ ತರದೆ, ಮಕ್ಕಳು ಪಾಲಿಸಬಹುದಾದ ಕೆಲವು ಆದರ್ಶಗಳನ್ನು ತೋರಿಸುವುದು ನನ್ನ ಉದ್ದೇಶ.''

ಏರಿಯಾ ಲಕ್ಷ್ಮೀನಾರಾಯಣ ಅವರು 'ರಂಗತರಂಗ' ನಾಟಕದ ಮುನ್ನುಡಿಯಲ್ಲಿ ಹೇಳುವ ಮಾತುಗಳು ಇವು. ''ಮಕ್ಕಳ ಮನಸ್ಸೆಂದರೆ ಇನ್ನು ಶೃತಿಗೊಳಿಸದ ವೀಣೆ ಇದ್ದಂತೆ. ನಾವು ಅದನ್ನು ಸರಿಯಾಗಿ ಶ್ರುತಿಗೊಳಿಸಬೇಕು.''

ಇನ್ನೊಬ್ಬ ನಾಟಕಕಾರರು ಹೀಗೆ ಘೋಷಿಸಿದ್ದಾರೆ. ''ನಮಗಿಂತ ನಮ್ಮ ಸಮಾಜ ಸಮಾಜಕ್ಕಿಂತ ನಾಡು, ನಾಡಿಗಿಂತ ದೇಶ ದೊಡ್ಡದು. ಅದರ ರಕ್ಷಣೆಗಾಗಿ ಪ್ರಾಣತ್ಯಾಗಕ್ಕೂ ಸನ್ನದ್ಧರಾಗಬೇಕು ಎಂಬ ಮನೋಭಾವನೆಯನ್ನು ಮಕ್ಕಳಲ್ಲಿ ಬೆಳೆಸಬೇಕು.'' ಅದಕ್ಕಾಗಿ ನಾಟಕ ಬರೆದ ಪರಂಪರೆ ಕಂದನ ಕಾದುಕೋ ಮಾದರಿಯಲ್ಲಿದೆ. ಅಂದರೆ ನಾವು ಕಂದ ಹೇಗಿರಬೇಕು ಎಂದು ಅಂದುಕೊಂಡಿದ್ದೇವೆಯೋ ಹಾಗೆ ಅವನನ್ನು ಕಾದುಕೊಳ್ಳುವುದು.

ಕಂದನನ್ನು ಬಿಡಿಸಿಕೋ ಪರಂಪರೆಯಲ್ಲಿ ಬಂದ ನಾಟಕಕಾರರು ಇಂತಹ ಸ್ಥಾಪಿತ ಮೌಲ್ಯಗಳನ್ನು ಬಿಟ್ಟು ಅವರ ಪ್ರಪಂಚವನ್ನು ಸ್ವತಂತ್ರಗೊಳಿಸುವ ಮನೋಭಾವದ ಹಿನ್ನೆಲೆಯಲ್ಲಿ ನಾಟಕಗಳನ್ನು ರಚಿಸಿದ್ದಾರೆ. ಈ ಹಿಂದೆಯೇ ಹೇಳಿದಂತೆ ಹಲವಾರು ಅನುವಾದಗಳು ರೂಪಾಂತರಗಳು ಈ ಮಾದರಿಯಲ್ಲಿ ಬಂದಿವೆ. ಕೆ.ವಿ. ಸುಬ್ಬಣ್ಣ, ಬಿ.ವಿ.

ಕಾರಂತ ಮುಂತಾದವರು ಈ ಬಗೆಯ ಚಿಂತನಾಕ್ರಮದಲ್ಲಿ ನಾಟಕ ಬರೆದು ಆಡಿಸಿದರು; ಮಕ್ಕಳ ನಾಟಕಗಳಿಗೆ ಅಧಿಕೃತತೆ ತಂದುಕೊಟ್ಟರು. ಈ ಮಾದರಿಯ ಬರಹಗಾರರ ಹಿನ್ನೆಲೆಯಲ್ಲಿರುವ ಚಿಂತನಾ ಪ್ರಣಾಳಿಕೆ 'ಖಲೀಲಗಿಬ್ರಾನ್' ನಂತವರ ವಿಚಾರಧಾರೆಯಿಂದ ಪ್ರಭಾವಿಸಲ್ಪಟ್ಟಿದ್ದು. ''ನಿಮ್ಮ ಮಕ್ಕಳೆಂದರೆ ನಿಮ್ಮ ಮಕ್ಕಳಲ್ಲ, ಜೀವನ ಸ್ವಪ್ರೇಮದ ಪುತ್ರ ಪುತ್ರಿಯರು ಅವರು. ಅವರನ್ನು ನಿಮ್ಮಂತೆಯೇ ಆಗಲು ಒತ್ತಾಯಿಸಿದಿರಿ. ನೀವು ಅವರಂತಾಗಲು ಪ್ರಯತ್ನಿಸಿ.... ಜೀವನ ಹಿಮ್ಮುಖವಾಗಿ ಹರಿಯದಿರಲಿ.''

ಮಕ್ಕಳ ಸಾಹಿತ್ಯದ ಕುರಿತು ಕೆ.ವಿ. ಸುಬ್ಬಣ್ಣನವರ ಚಿಂತನೆ ಹೀಗಿದೆ. ''ಮಕ್ಕಳ ಅನುಭವವು ಮಿತವಾದದ್ದು , ಆದರೆ ಅವರಲ್ಲಿ ಒಳಗಿರುವ ಭಾಷಾ ಸಾಮರ್ಥ್ಯವು ಮಿತವಾದದ್ದಲ್ಲ. ವಯಸ್ಕರ ಜಡವಾಗಿ ಹೋಗಿರುವ ಭಾಷಾ ಸಾಮರ್ಥ್ಯಕ್ಕಿಂತ ಹೆಚ್ಚು ಸಾಮರ್ಥ್ಯವಾಗಿರುತ್ತದೆ. ಜೀವಂತ ಭಾಷೆಯ ಸಹಚರ್ಯವೇ ಅವರಲ್ಲಿ ಎಲ್ಲ ತಿಳಿವು, ನೀತಿಗಳನ್ನು ಉಚದ್ಬೋಧಿಸುತ್ತವೆ. ಮಕ್ಕಳಿಗೆ ಯಾವುದು ಅರ್ಥವಾದೀತು ಎಂದು ಹೆಜ್ಜೆ ಹೆಜ್ಜೆಗೂ ಸಂದೇಹಿಸುತ್ತ, ಅಳುಕುತ್ತ ಆಯ್ಕೆ ಮಾಡುವುದು ಅನಗತ್ಯ'' ಅವರ ನಾಟಕಗಳು ಪ್ರಮುಖವಾಗಿ ಈ ಚಿಂತನೆಗಳನ್ನು ಆಧರಿಸಿಯೇ ರಚನೆಗೊಂಡಿದೆ.

ಇನ್ನು ವರ್ತಮಾನದ ಕಾಲಘಟ್ಟವನ್ನು ನೋಡೋಣ. ಮಕ್ಕಳ ನಾಟಕಗಳ ಇಂದಿನ ವರ್ತಮಾನ ಮೇಲ್ನೋಟಕ್ಕೆ ಮಕ್ಕಳ ನಾಟಕವನ್ನು ಕಟ್ಟುವ, ಅದನ್ನು ಪ್ರಸಾರ ಪಡಿಸುವ, ಪರಿಭಾವಿಸುವ ನೆಲೆಯಿಂದ ಹೆಚ್ಚು ಶ್ರೀಮಂತವಾಗಿವೆ. ಆದರೆ ಇಲ್ಲಿಯೂ ಪುಟ್ಟಣ್ಣ , ಪಂಜೆ ಮಾದರಿಯ ಅಂಶಗಳು, ಅದರಲ್ಲಿಯೂ 'ಕಂದನ ಕಾದುಕೊ' ಮಾದರಿಯ ಅಂಶಗಳು ಗುಪ್ತಗಾಮಿನಿಯಾದರೂ ಹರಿದಿರುವುದನ್ನು ಗಮನಿಸಬಹುದು. ಆದರೆ ವಿನ್ಯಾಸದಲ್ಲಿ ಹಿಂದಿನಷ್ಟು ಸ್ಥೂಲವಲ್ಲದ (ಶಿಕ್ಷಕರು ಮಕ್ಕಳಿಗಾಗಿ ಬರೆದ ಕೆಲವು ನಾಟಕಗಳನ್ನು ಹೊರತುಪಡಿಸಿ) ರಂಗತಂತ್ರದ ದೃಷ್ಟಿಯಿಂದ ಹಲವು ಬೆಳವಣಿಗೆಗಳನ್ನು ಒಳಗೊಂಡ ನಾಟಕಗಳನ್ನು ನಾವು ಇಂದು ಕಾಣಲು ಸಾಧ್ಯ. ಅಂತಹ 3 ಮಾದರಿಗಳನ್ನು ನಾನಿಲ್ಲಿ ಗುರುತಿಸಬಯಸುತ್ತೇನೆ.

## 1. ಕೆ. ರಾಮಯ್ಯ ಮಾದರಿ

ತಾತ್ವಿಕ ಬದ್ಧತೆ, ರಾಜಕೀಯ ಪ್ರಜ್ಞೆಯನ್ನು ಬೋಧಿಸುವಂತಹ ನಾಟಕಗಳು ಈ ಮಾದರಿಯಲ್ಲಿ ಬರುತ್ತವೆ. ಡಾ. ಆರ್.ವಿ. ಭಂಡಾರಿ, ಎ.ಎಸ್. ಮೂರ್ತಿ, ಎಸ್. ಮಾಲತಿ ಹೀಗೆ ತುಂಬ ಶಕ್ತವಾದ ನೂರಾರು ಜನರನ್ನು ಪಡೆದುಕೊಂಡ ಮಾದರಿ ಇದು. ಪರಿಸರ ಕಾಳಜಿ, ಸಮಾಜ ಸುಧಾರಣೆ ಇತ್ಯಾದಿ ಅಂಶಗಳನ್ನು ಒಳಗೊಂಡ, ಔಪಚಾರಿಕ ಶಿಕ್ಷಣ ಕ್ರಮವನ್ನು ಒಪ್ಪಿಕೊಂಡ, ಆಳದಲ್ಲಿ ಪುಟ್ಟಣ್ಣ ಮಾದರಿಯನ್ನು ಧ್ವನಿಸುವ, ಆದರೆ ನಾಟಕ ಕಟ್ಟುವ ಕಲೆಯಲ್ಲಿ ಹಿಂದಿಗಿಂತ ಹೆಚ್ಚು ಶ್ರೀಮಂತವಾದ ಪರಂಪರೆ ಇದು.

## 2. ವೆಂಕಟೇಶಮೂರ್ತಿ ಮಾದರಿ

ಮುಖ್ಯವಾಹಿನಿಯ ತರ್ಕಗಳನ್ನು ತಲೆಕೆಳಗು ಮಾಡುವ ವಿಧಾನದ ನಾಟಕಗಳು ಇಲ್ಲಿ ಬರುತ್ತವೆ. ವೆಂಕಟೇಶಮೂರ್ತಿಯವರ 'ಹಕ್ಕಿಸಾಲು' ಕವನ ಸಂಕಲನದ ಗುಬ್ಬಿ ಮರಿಯ ಹೊಸ ತರ್ಕದಂತಹ ಕವನಗಳು ಈ ವಿಚಾರಧಾರೆಯನ್ನು ತುಂಬ ಸ್ಪಷ್ಟಪಡಿಸುತ್ತವೆ. ಪರಿಧಿಯ ಅನೇಕ ಅಂಶಗಳನ್ನು ಮತ್ತೆ ಕೇಂದ್ರಕ್ಕೆ ತರುವ ಇಂತಹ ನಾಟಕಗಳನ್ನು ಇಲ್ಲಿ ಗುರುತಿಸಬಹುದಾಗಿದೆ. ಮೂರ್ತಿ ದೇರಾಜೆ, ಡಾ|| ಎಸ್.ವಿ. ಕಶ್ಯಪ ಮುಂತಾದ ನಾಟಕಕಾರರನ್ನು ನಾವಿಲ್ಲಿ ಗಮನಿಸಬಹುದಾಗಿದೆ. ಪರಿಧಿಯಲ್ಲಿರುವ ಅಳಿಲು ಕೇಂದ್ರಕ್ಕೆ ಬಂದು ಅಳಿಲು ರಾಮಾಯಣವನ್ನು ಕಟ್ಟಿಕೊಟ್ಟಂತೆ, ಸ್ಥಾಪಿತ ಮೌಲ್ಯಗಳ ತಲೆಕೆಳಗು ಮಾಡುತ್ತ, ಮಕ್ಕಳನ್ನು ಹೆಚ್ಚು ಸ್ವತಂತ್ರಗೊಳಿಸುತ್ತ, ಅನೌಪಚಾರಿಕ ಶಿಕ್ಷಣದ ಧಾರೆಯಡಿ ಬೆಳೆದುಬಂದ ಈ ಪರಂಪರೆಯಲ್ಲಿ ಅಲ್ಲಲ್ಲಿ ಪಂಜೆಯವರನ್ನು ನಾವು ಕಾಣಲು ಸಾಧ್ಯ.

ಹೆಚ್.ಎಸ್. ವೆಂಕಟೇಶಮೂರ್ತಿ ಮಕ್ಕಳ ಕೃತಿಗಳ ಬಗ್ಗೆ ಹೇಳುವ ಈ ಮಾತುಗಳನ್ನು ಗಮನಿಸಿ -

''...ಮಕ್ಕಳ ಜಗತ್ತನ್ನು ಅದರ ಸ್ವಧರ್ಮಕ್ಕೆ ಲೋಪ ಬರದಂತೆ ಹಿಗ್ಗಿಸುವ ಸಾಮರ್ಥ್ಯ ಪಡೆದಿರಬೇಕು. ಮಕ್ಕಳ ಕಲ್ಪನಾ ಸಾಮರ್ಥ್ಯವನ್ನು ಅನುಮಾನಿಸದೆ ಅದು ಮತ್ತಷ್ಟು ಎತ್ತರಕ್ಕೆ ಜಿಗಿಯಲು ಅನುವು ಮಾಡಿಕೊಡಬೇಕು. ತಾರ್ಕಿಕ ಮಿತಿ ದಾಟಬೇಕು. ಜೀವನಶಕ್ತಿಯ ಚೈತನ್ಯವನ್ನು ಗರ್ಭೀಕರಿಸಿಕೊಂಡಿರಬೇಕು.''

## 3. ವೈದೇಹಿ ಮಾದರಿ

ಇದು ಅನೌಪಚಾರಿಕ ಶಿಕ್ಷಣ ಕ್ರಮದ ಮಾದರಿಯಲ್ಲೇ ತುಸು ಭಿನ್ನವಾದದ್ದು. ಹೆಚ್ಚು ಮಾರ್ದವತೆಯಿಂದ ಕೂಡಿದ, ಮಕ್ಕಳ ಆಂತರಂಗಿಕ ಜಗತ್ತನ್ನು ವಿಸ್ತರಿಸುವ, ವಿಶ್ಲೇಷಿಸುವ, ಅವುಗಳನ್ನು ಭಾವಪೂರ್ಣವಾಗಿ ಪ್ರಕಾಶಿಸುವುದಕ್ಕೆ ಕಾರಣವಾಗುವ ನಾಟಕಗಳು ಈ ಮಾದರಿಯಲ್ಲಿ ಬರುತ್ತವೆ. ಪಂಜೆ ಮಂಗೇಶರಾಯರು ಮಕ್ಕಳ ಸಾಹಿತ್ಯದ ಕುರಿತು ತಮ್ಮ ಅನಿಸಿಕೆಯಲ್ಲಿ ''ಮನಸ್ಸಿನ ಒಳಗಿನ ಕ್ರಿಯೆಗಳಿಗಿಂತ ಹೆಚ್ಚಾಗಿ ಹೊರಗಿನ ಕ್ರಿಯೆಗೆ ಹೆಚ್ಚಿನ ಗಮನ ಕೊಡಬೇಕು'' ಎಂದಿದ್ದಾರೆ. ಆದರೆ ವೈದೇಹಿಯವರು ಬಹಳ ಪ್ರಭಾವಪೂರ್ಣವಾಗಿ ಒಳಮನಸ್ಸಿನ ಕ್ರಿಯೆಗಳನ್ನೂ ಅವರ ನಾಟಕಗಳಲ್ಲಿ ಅನಾವರಣಗೊಳಿಸುತ್ತಾರೆ.

ವೈದೇಹಿಯವರ 'ಝುಂಝುಂ ಆನೆ ಮತ್ತು ಪುಟ್ಟಿ' ನಾಟಕದಲ್ಲಿನ ಈ ಸಂಭಾಷಣೆಯನ್ನು ಗಮನಿಸಿ.

ಮೇಷ್ಟು : ಈ ಗುಹೆಗಳೇ ಬಹಳ ಡೇಂಜರು ಕಣ್ರಿ. ನೀವು ಪೋಲೀಸರು ಎಲ್ಲ ಕಡೆಗೂ ಈ ಗುಹೆಗಳನ್ನು ಸೀಲ್ ಮಾಡ್ಬಿಟ್ರೆ ಕಳ್ಳರಿಗೆ ಉಳ್ಕೊಳ್ಳೋದಿಕ್ಕೆ ಛಾನ್ಸೆ ಸಿಗಲ್ಲ.

ಆನೆ : .... ನನ್ನ ಪಾಯಿಂಟ್ ಏನು ಅಂದ್ರೆ ಗುಹೇನೆ ಇಲ್ದಿದ್ರೆ ಯಾರೇ ಆದ್ರೂ ಕತೆ ಕಟ್ಟೋದಕ್ಕೆ ಸಾಧ್ಯ ಇಲ್ಲ.

ಪುಟ್ಟ : ಗುಹೆ ಮುಚ್ಚಿಹೋದ್ರೆ ಕಳ್ರೇ ಬರಲ್ಲ. ಕಳ್ಳರು ಬರದೇ ಇದ್ರೆ ಆಲಿಬಾಬಾನೂ ಬರಲ್ಲ.

ಮಕ್ಕಳ ರಹಸ್ಯಮಯತೆಯನ್ನು ಅವರ ಒಳಪ್ರಪಂಚಕ್ಕೆ ಗೌರವ ಕೊಡುವಂಥ ಆ ಕಿರುದಾರಿಗಳನ್ನು ಬಹಳ ಮುಖ್ಯವಾಗಿ ಗಮನಿಸುತ್ತ ಬರುವ ನಾಟಕಗಳು ಈ ಮಾದರಿಯವು.

ಹೀಗೆ ಕನ್ನಡದ ಮಕ್ಕಳ ನಾಟಕಗಳಲ್ಲಿನ ಪರಿಕಲ್ಪನೆಗಳಲ್ಲಿ ಹಿಂದಿನ ಪರಿಕಲ್ಪನೆಗಳಲ್ಲಿಯೇ ಕೆಲವು ರೂಪಾಂತರಗಳಾಗಿದ್ದನ್ನು ನಾವು ಗಮನಿಸಬಹುದಾಗಿದೆ.

ಕನ್ನಡ ಮಕ್ಕಳ ನಾಟಕದ ವಾಹಿನಿಯಲ್ಲಿ ಇಷ್ಟು ಪರಿಕಲ್ಪನೆಗಳನ್ನು ಗುರುತಿಸಲು ಪ್ರಯತ್ನಿಸಿದ ಮೇಲೆ ಮಕ್ಕಳ ರಂಗಭೂಮಿಯ ದೃಷ್ಟಿಯಿಂದ ಮುಂದಿನ 'ನಡೆ'ಗೆ ಸಂಬಂಧಿಸಿದ ಹಾಗೆ ನನ್ನ ಅನಿಸಿಕೆಯನ್ನು ಸ್ಪಷ್ಟಪಡಿಸಲು ಬಯಸುತ್ತೇನೆ.

ಈಗ ನಾವು ಸೈದ್ಧಾಂತಿಕ ಖಚಿತತೆಯ ನಿರ್ದಿಷ್ಟ ಆಶಯಗಳ, ವಿಶಾಲಾರ್ಥದಲ್ಲಿ ಶೈಕ್ಷಣಿಕ ನಾಟಕ (ಔಪಚಾರಿಕ ಶಿಕ್ಷಣ ಕ್ರಮದ ಧಾರೆ) ಎನ್ನಬಹುದಾದ ಈ ಒಂದು ಪಂಥವನ್ನು ಸ್ವಲ್ಪ ಮುಕ್ತಗೊಳಿಸಬೇಕಾದ ಅನಿವಾರ್ಯತೆ ಇದೆ. ಇವುಗಳನ್ನು ಪುನಃ ಬೇರೆ ರೀತಿಯಲ್ಲಿ ಓದುವ ಮತ್ತು ಅದನ್ನು ಬೇರೆ ರೀತಿಯಲ್ಲಿ ಸಾದರಪಡಿಸಬೇಕಾದ ಅಗತ್ಯತೆ ಇದೆ. ಕನ್ನಡದ ಬಹುತೇಕ ಮಕ್ಕಳ ನಾಟಕಗಳು ಈ ಧಾರೆಯಲ್ಲಿ ಇರುವುದರಿಂದ ರಂಗಭೂಮಿಗೆ ಇಲ್ಲೊಂದು ಸವಾಲೇ ಇದೆ. ಏಕೆಂದರೆ ಕನ್ನಡದ ಬಹುತೇಕ ಮಕ್ಕಳ ನಾಟಕಗಳು ಈ ಧಾರೆಯಲ್ಲಿವೆ. ಅದನ್ನು ಅಲಕ್ಷಿಸುವಂತಿಲ್ಲ.

ಇನ್ನೊಂದು ಧಾರೆಯಲ್ಲಿ (ಅನೌಪಚಾರಿಕ ಶಿಕ್ಷಣ ಕ್ರಮದ ಧಾರೆ) ಬರುತ್ತಿರುವ ನಾಟಕಗಳ ಸಂಖ್ಯೆಯೇ ಕಡಿಮೆ ಆಗಿದೆ. ಈ ಭಾಗದಲ್ಲಿ ಹೆಚ್ಚಿನ ನಾಟಕಗಳು ಬರುವಂತೆ, ಬಂದ ನಾಟಕಗಳನ್ನು ಹೆಚ್ಚು ಹೆಚ್ಚು ಪ್ರಯೋಗಿಸಿ ಅವುಗಳನ್ನು ಪ್ರಚುರ ಪಡಿಸುವ ಅಗತ್ಯ ಇದೆ. ಏಕೆಂದರೆ ಈ ಬಗೆಯ ನಾಟಕಗಳಿಗೆ ಒಂದು ರೀತಿಯ ಹವ್ಯಾಸಿ ಚಟ ಇದೆ. ಅವು ನಿರಂತರ ಅಲ್ಲ. ಆದರೆ ಮುಂದಿನ ಭವಿಷ್ಯದ ಮಕ್ಕಳ ರಂಗಭೂಮಿಗಾಗಿ ಈ ಧಾರೆಯನ್ನು ಕಾಪಿಟ್ಟುಕೊಳ್ಳುವ ಅಗತ್ಯ ಇದೆ.

***

# ಮಕ್ಕಳ ರಂಗಭೂಮಿ ಶಿಕ್ಷಣ

- ಶಶಿಧರ ಭಾರಿಘಾಟ್

ಮಕ್ಕಳ ರಂಗಭೂಮಿ ಸಮಾಜದಲ್ಲಿ ಇಂದು ಮಹತ್ವದ ಸ್ಥಾನ ಪಡೆದಿದೆ. ಮಕ್ಕಳ ಮನೋವಿಕಾಸ ಹಾಗೂ ದೈಹಿಕ ಬೆಳವಣಿಗೆಗೆ ರಂಗಭೂಮಿ ವಿಶೇಷವಾಗಿ ಬಳಕೆಯಾಗುತ್ತಿದೆ. ಶಿಕ್ಷಣ ಕ್ಷೇತ್ರದಲ್ಲೂ ರಂಗಭೂಮಿಯನ್ನು ಒಂದು ವಿಶಿಷ್ಟ ಸಂವಹನ ಮಾಧ್ಯಮವನ್ನಾಗಿ ಬಳಸುವ ಪರಿಪಾಠ ಪ್ರಾರಂಭಗೊಂಡಿದೆ. ಶಿಕ್ಷಣದಲ್ಲಿ ರಂಗಭೂಮಿ, ರಂಗಭೂಮಿಯ ಮೂಲಕ ಶಿಕ್ಷಣ, ಶೈಕ್ಷಣಿಕ ರಂಗಭೂಮಿ ಮುಂತಾಗಿ ಇಂದು ರಂಗಭೂಮಿ ಹಾಗೂ ಶಿಕ್ಷಣ ನಡುವೆ ಒಂದು ಸಂಬಂಧ ಉಂಟಾಗುತ್ತಿದೆ. ಮುಖ್ಯವಾಗಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ರಂಗಭೂಮಿ ಒಂದು ಸಾಧನವಾಗುತ್ತಿದೆ. ಕಲಿಕೆಯನ್ನು ಒಂದು ಸಂತಸದಾಯಕ ಕ್ರಿಯೆಯನ್ನಾಗಿಸಲು ರಂಗಮಾಧ್ಯಮದ ಹಲವು ತಂತ್ರಗಳು ಬಳಕೆಯಾಗುತ್ತಿವೆ.

ಮಕ್ಕಳ ಮನೋವಿಕಾಸ, ಕಲ್ಪನಾಲೋಕದ ವಿಸ್ತರಣೆ, ಭಾಷೆ, ಸಂವಹನ, ನಾಯಕತ್ವ, ಸಹಬಾಳ್ವೆ, ವರ್ತನೆ, ಅಭಿವ್ಯಕ್ತಿ ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ಮುಂತಾದ ವಿಷಯಗಳನ್ನು ರಂಗಭೂಮಿಯ ಮೂಲಕ ಕಲಿಸುವ ಪ್ರಯತ್ನ ಯಶಸ್ವಿಯಾಗಿ ನಡೆದಿದೆ.

ದಿನನಿತ್ಯದ ಪಾಠ, ಪ್ರವಚನಗಳ ನಡುವೆ ಆಹ್ಲಾದಕರ ವಾತಾವರಣವನ್ನು ಉಂಟುಮಾಡಲು, ಚೇತೋಹಾರಿ ಶೈಕ್ಷಣಿಕ ಪರಿಸರವನ್ನು ಉಂಟು ಮಾಡಲು ರಂಗಭೂಮಿ ಬಳಕೆಯಾಗುತ್ತಿದೆ.

ಮಕ್ಕಳ ರಂಗಭೂಮಿ ಶಿಕ್ಷಣಕ್ಕೆ ಈ ಎಲ್ಲಾ ಕಾರಣದಿಂದ ಒಂದು ಮಹತ್ವ ಪ್ರಾಪ್ತವಾಗಿದೆ. ಶಾಲಾ ಹಂತದಲ್ಲಿ ತರಗತಿಗಳಲ್ಲೇ ರಂಗಭೂಮಿಯ ಮೂಲಭೂತ ತಿಳುವಳಿಕೆ ನೀಡುವ ಪ್ರಕ್ರಿಯೆ ಒಂದು ಬಗೆಯಾದರೆ, ಪಠ್ಯ ವಿಷಯಗಳನ್ನು ರಂಗಭೂಮಿಯ ಮೂಲಕ ಹೇಳುವ ಪ್ರಕ್ರಿಯೆ ಇನ್ನೊಂದು ಬಗೆಯದು.

ಮಕ್ಕಳ ರಂಗಭೂಮಿಗೆ ಕನ್ನಡದ ಸಂದರ್ಭದಲ್ಲಿ ಮಹತ್ವದ ತಿರುವು ಬಂದಿದ್ದು

ಬಿ.ವಿ. ಕಾರಂತರು 'ಪಂಜರ ಶಾಲೆ' ನಾಟಕವನ್ನು ಮಾಡಿದ ಸಂದರ್ಭದಿಂದ. ಮಕ್ಕಳ ರಂಗಭೂಮಿ ಎಂದರೇನು ಎಂಬುದಕ್ಕೆ ಈ ಪ್ರಯೋಗ ಅನೇಕ ಉತ್ತರಗಳನ್ನು ನೀಡಿತೆನ್ನಬಹುದು. ಅಲ್ಲಿಯವರೆಗೆ ಶಾಲಾ ರಂಗಭೂಮಿ ನಮ್ಮಲ್ಲಿ ಇತ್ತು, ಶಾಲಾ ವಾರ್ಷಿಕೋತ್ಸವಗಳಲ್ಲಿ ನಾಟಕಗಳನ್ನು ಪ್ರಯೋಗಿಸುವ ಪರಿಪಾಠ ನಮ್ಮಲ್ಲಿತ್ತು. ಶಿಕ್ಷಕರೇ ಒಂದಿಷ್ಟು ಮಕ್ಕಳನ್ನು ಸೇರಿಸಿಕೊಂಡು ಯಾವುದಾದರೂ ನಾಟಕ ಕಲಿಸುತ್ತಿದ್ದರು.

ಇಂದಿಗೂ ಈ ಪರಿಪಾಠ ಕೆಲವು ಶಾಲೆಗಳಲ್ಲಿ ಇದೆಯಾದರೂ, ಶಾಲೆಗಳಲ್ಲಿ ನಾಟಕದ ಸ್ಥಾನವನ್ನು ಚಲನಚಿತ್ರಗೀತೆಗಳ ನೃತ್ಯಗಳು ಆಕ್ರಮಿಸಿದೆ. ಮನರಂಜನೆಯಷ್ಟೇ ಮಕ್ಕಳ ನಾಟಕದ ಉದ್ದೇಶವಲ್ಲ, ರಂಗಪ್ರಯೋಗದ ಮುಖೇನ ಏಕಕಾಲಕ್ಕೆ ಅನೇಕ ವಿಷಯಗಳನ್ನು ಮಕ್ಕಳಿಗೆ, ತನ್ಮೂಲಕ ಸಮಾಜಕ್ಕೆ ತಿಳಿಸುವ ಪ್ರಯತ್ನ ಇಂದಿನ ಮಕ್ಕಳ ರಂಗಭೂಮಿಯಿಂದ ಸಾಧ್ಯತೆಯಾಗಿದೆ. ಆಶಯವೂ ಹಾಗೂ ಆದ್ಯತೆಯೂ ಆಗಿದೆ.

ಶಾಲೆಗಳಲ್ಲಿ ಮಕ್ಕಳಿಗೆ ರಂಗಶಿಕ್ಷಣ, ವಾರಾಂತ್ಯ ರಂಗಶಾಲೆಗಳು, ಬೇಸಿಗೆ ಶಿಬಿರಗಳು, ಪೂರ್ಣಾವಧಿ ರಂಗಶಾಲೆಗಳು, ರಂಗತರಬೇತಿ ಕಾರ್ಯಾಗಾರಗಳು ಇವೆಲ್ಲ ಮಕ್ಕಳ ರಂಗಭೂಮಿ ಬೆಳೆಯಲು ಕಾರಣವಾಗಿದೆ. ಈ ನಿಟ್ಟಿನಲ್ಲಿ ಹತ್ತು ಹಲವು ಸಂಸ್ಥೆಗಳು, ರಂಗತಜ್ಞರು ಕಾರ್ಯ ನಿರ್ವಹಿಸುತ್ತಿದ್ದಾರೆ. ಬಿ.ವಿ. ಕಾರಂತರ ಪ್ರಯತ್ನದ ನಂತರ, ನೀನಾಸಂ ತಿರುಗಾಟ ಪ್ರಾರಂಭಗೊಂಡ ಮೊದಲ ವರ್ಷಗಳಲ್ಲಿ 2 ಪೂರ್ಣಾವಧಿ ನಾಟಕ ಪ್ರಯೋಗಗಳ ಜೊತೆಗೆ ಒಂದು ಮಕ್ಕಳ ನಾಟಕ ಕಡ್ಡಾಯವಾಗಿ ಪ್ರದರ್ಶಿತವಾಗುತ್ತಿತ್ತು. ಡಾ. ಚಂದ್ರಶೇಖರ ಕಂಬಾರ, ವೈದೇಹಿ, ಕೆ.ವಿ. ಸುಬ್ಬಣ್ಣ, ಬಿ.ವಿ. ಕಾರಂತ, ಪ್ರೇಮಾ ಕಾರಂತ ಮುಂತಾದವರು ಮಕ್ಕಳ ನಾಟಕ ರಚನೆಗೆ, ಅನುವಾದಕ್ಕೆ ಕೈ ಹಾಕಿದ್ದು ಈ ರಂಗವನ್ನು ಮತ್ತಷ್ಟು ವಿಸ್ತರಿಸಲು ಕಾರಣವಾಯಿತು.

1981ರ ಸುಮಾರಿಗೆ ಮೈಸೂರಿನಲ್ಲಿ ಕಿನ್ನರ-ಕಿರಿಯರ ನಾಟಕರಂಗ-ಮಹಾದೇವಾನಂದಸ್ವಾಮಿ - ರಾಮೇಶ್ವರಿ ವರ್ಮಾ ಅವರ ನೇತೃತ್ವದಲ್ಲಿ ಪ್ರಾರಂಭಗೊಂಡು ಪ್ರತಿ ವರ್ಷ ಮಕ್ಕಳ ಶಿಬಿರವನ್ನು ನಡೆಸುವ ಪರಿಪಾಠವನ್ನು ಪ್ರಾರಂಭಿಸಿದ್ದು ಇಲ್ಲಿ ಉಲ್ಲೇಖಾರ್ಹ. ಮುಖವಾಡ ತಯಾರಿಕೆ, ಮೂಕಾಭಿನಯ, ಗೊಂಬೆಗಳ ತಯಾರಿಕೆ ಮುಂತಾದ ಚಟುವಟಿಕೆಗಳ ಜೊತೆಗೆ ನಾಟಕವನ್ನು ಸಿದ್ಧಪಡಿಸಿ ಪ್ರದರ್ಶಿಸುತ್ತಿದ್ದುದು ಅಂದಿಗೆ ಬಹಳ ಅಪರೂಪದ ಪ್ರಯತ್ನವೆನಿಸಿತ್ತು.

ಇಂದು ಕರ್ನಾಟಕದಾದ್ಯಂತ ರಂಗಶಿಕ್ಷಣ ಪಡೆದ ನೂರಾರು ಯುವಕ-ಯುವತಿಯರು ಬೇಸಿಗೆ ಶಿಬಿರಗಳನ್ನು ನಡೆಸುತ್ತಾರೆ. ಇವರೆಲ್ಲಾ ಮಕ್ಕಳ ರಂಗಭೂಮಿಯಲ್ಲಿ ವಿಶೇಷವಾಗಿ ತೊಡಗಿಸಿಕೊಂಡವರು.

ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲಾ ಕೇಂದ್ರ, ತಾಲ್ಲೂಕು ಹಾಗೂ ಹಳ್ಳಿಗಳಲ್ಲಿ ಅನೇಕ ಮಕ್ಕಳ ರಂಗಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ಬೆಂಗಳೂರಿನ

ವಿಜಯನಗರ ಬಿಂಬ, ಹನುಮಂತನಗರ ಬಿಂಬ, ಬೆನಕ ಮಕ್ಕಳ ನಾಟಕ ಕೇಂದ್ರ, ಸುಚಿತ್ರ ಬಾಲಜಗತ್, ಸಮುದಾಯ, ಕಲಾಸಂಕುಲ, ಅದಮ್ಯ, ರಂಗಕಹಳೆ, ರಂಗಾಭರಣ... ಹೀಗೆ ಕ್ರಿಯಾಶೀಲ ತಂಡಗಳನ್ನು ಹೆಸರಿಸಬಹುದು. ಇಕ್ಬಾಲ್ ಅಹಮದ್ ಅವರು 'ಚಿಣ್ಣಬಣ್ಣ'ದ ಮೂಲಕ ಮಾಡಿದ ಪ್ರಯತ್ನ, ತುಮುರಿಯ ಕೆ.ಜಿ. ಕೃಷ್ಣಮೂರ್ತಿ ಅವರ ಕಿನ್ನರಮೇಳ, ರಂಗಾಯಣ ವಾರ್ಷಿಕ ಚಟುವಟಿಕೆಯಾಗಿ ನಡೆಸುವ 'ಚಿಣ್ಣರ ಮೇಳ' ಕಿಂದರಿಜೋಗಿ - ಮಕ್ಕಳ ಕಾರ್ಯಾಗಾರ, ಮಂಡ್ಯ ರಮೇಶ್ ಅವರ 'ನಟನ', ರಂಗಶಂಕರ ಹೀಗೆ ನಿರಂತರವಾಗಿ ಮಕ್ಕಳ ರಂಗಭೂಮಿಯು ಚಟುವಟಿಕೆ ನಡೆಸುತ್ತಿರುವ ಸಂಸ್ಥೆ ಹಾಗೂ ರಂಗಾಸಕ್ತರ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಈ ನಿಟ್ಟಿನಲ್ಲಿ ರಾಮಕೃಷ್ಣ ಬಾಬು ನಡೆಸುತ್ತಿರುವ ಸೃಷ್ಟಿ ಕಲಾವಿದರು ಪ್ರತಿವರ್ಷ ಮಕ್ಕಳ ನಾಟಕ ಸ್ಪರ್ಧೆ ಏರ್ಪಡಿಸುವುದನ್ನು ಗಮನಿಸಬಹುದು.

ಕೋಟಗಾನಹಳ್ಳಿ ರಾಮಯ್ಯ ಸತತವಾಗಿ ಮಕ್ಕಳ ರಂಗಭೂಮಿಯಲ್ಲಿ ತೊಡಗಿಕೊಂಡರು. ನಾಟಕ ರಚನೆ ಪ್ರಯೋಗಗಳನ್ನು ತಮ್ಮ 'ಆದಿಮ' ಸಂಸ್ಕೃತಿ ಕೇಂದ್ರದ ಮೂಲಕ ನಡೆಸುತ್ತಿದ್ದಾರೆ. ಮಕ್ಕಳ ರಂಗಭೂಮಿ ವಿಶ್ವವಿದ್ಯಾಲಯದ ರೀತಿಯಲ್ಲಿ ಆದಿಮ ಬೆಳೆಯುತ್ತಿದೆ. ಈ ಕ್ಷೇತ್ರದಲ್ಲಿ ಹಿರಿಯರಾದ ಎಸ್.ಕೆ. ಮಾಧವರಾವ್, ಐ.ಕೆ. ಬೊಳುವಾರು, ಡಾ|| ಶ್ರೀಪಾದ ಭಟ್ಟ, ಕಿರಣ ಭಟ್, ಚನ್ನಕೇಶವ, ಮಂಗಳಾ ಎನ್., ಗಣಪತಿ ಹೆಗಡೆ, ರಾಮಕೃಷ್ಣ ಬೆಳತೂರು, ಶಾಂತಾ ನಾಗರಾಜ್, ಮಾಲತೇಶ ಬಡಿಗೇರ್, ಶ್ವೇತಾ, ಜಗುಚಂದ್ರ, ವಾಸುದೇವ ಗಂಗೇರ, ಜೀವನರಾಂ ಸುಳ್ಯ, ದಾಕ್ಷಾಯಿಣಿ ಭಟ್, ಶಂಕ್ರಯ್ಯ ಘಂಟಿ, ಸುಷ್ಮಾ ಪ್ರಶಾಂತ್, ಡಾ|| ಎಸ್.ವಿ. ಕಶ್ಯಪ್, ಸಿ. ಲಕ್ಷ್ಮಣ ಮುಂತಾದವರು ಅಲ್ಲದೆ ರಂಗಾಯಣದ ಕಲಾವಿದರು ನಿರಂತರ ಚಟುವಟಿಕೆಯಲ್ಲಿ ತೊಡಗಿದ್ದಾರೆ.

ಮುಖ್ಯವಾಗಿ ಮಕ್ಕಳ ಮನೋವಿಕಾಸಕ್ಕೆ ಈ ಮಾಧ್ಯಮದ ಮೂಲಕ ಪ್ರಯತ್ನ ಸಾಗಿದೆ. ಈ ಪ್ರಯತ್ನಕ್ಕೆ ಪೂರಕವಾಗಿ ಅನೇಕ ಸರ್ಕಾರಿ ಶಾಲೆಗಳಲ್ಲಿ ರಂಗಶಿಕ್ಷಣ ಪಡೆದ ಶಿಕ್ಷಕರು ಇದ್ದಾರೆ. ಅನೇಕ ಖಾಸಗಿ ಶಾಲೆಗಳಲ್ಲೂ ಮಕ್ಕಳ ರಂಗಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರತಿ ವರ್ಷವೂ ನಡೆಸುವ ಪ್ರತಿಭಾ ಕಾರಂಜಿ, ವಿಶ್ವೇಶ್ವರಯ್ಯ ವಸ್ತು ಸಂಗ್ರಹಾಲಯ ನಡೆಸುವ ರಾಷ್ಟ್ರೀಯ ವಿಜ್ಞಾನ ನಾಟಕ ಸ್ಪರ್ಧೆ, ಇಸ್ರೋ ಏರ್ಪಡಿಸುವ ವಿಜ್ಞಾನ ಕುರಿತ ಕಿರುನಾಟಕ ಸ್ಪರ್ಧೆಗಳು, ನೂರಾರು ಸಂಸ್ಥೆಗಳ ನಡೆಗಳು ನಗರಗಳ ಬಡಾವಣೆಗಳಲ್ಲಿ, ಪಟ್ಟಣ ಗ್ರಾಮಗಳಲ್ಲಿ ನಡೆಸುವ ರಂಗ ಕಾರ್ಯಾಗಾರಗಳು ಇಂದು ಮಕ್ಕಳ ರಂಗಭೂಮಿಯನ್ನು ಕ್ರಿಯಾಶೀಲವಾಗಿಟ್ಟಿವೆ. ಈ ಸಂದರ್ಭದಲ್ಲಿ ಇತ್ತೀಚೆಗೆ ಅಸ್ತಿತ್ವಕ್ಕೆ ಬಂದ ಕರ್ನಾಟಕ ಸರ್ಕಾರದ ಬಾಲವಿಕಾಸ ಅಕಾಡೆಮಿಯ ಚಟುವಟಿಕೆ ಗಮನಾರ್ಹ. ಹಿಂದಿನ ಅಧ್ಯಕ್ಷರಾದ ಶಂಕರ ಹಲಗತ್ತಿ ಅನೇಕ ಚಟುವಟಿಕೆ ನಡೆಸಿ ಅಕಾಡೆಮಿಯನ್ನು ಕ್ರಿಯಾಶೀಲವಾಗುವಂತೆ ಮಾಡಿದ್ದರು.

ಸಿದ್ಧ ಪ್ರೇಕ್ಷಕ ವೃಂದವನ್ನು ಹೊಂದಿರುವ ಮಕ್ಕಳ ರಂಗಭೂಮಿ ಇಂದು, ಕಿರುತೆರೆ ಮಾಧ್ಯಮಗಳಲ್ಲಿ ಯಾಂತ್ರಿಕವಾಗಿ, ಕೃತಕವಾಗಿ ನಡೆಯುತ್ತಿರುವ ರಿಯಾಲಿಟಿ ಶೋಗಳಿಗೆ ಪ್ರತಿಯಾಗಿ, ಆರೋಗ್ಯಪೂರ್ಣ ಪೈಪೋಟಿ, ಸ್ಪರ್ಧೆ, ಒಟ್ಟು ಸಮೂಹದ ಅಭಿವ್ಯಕ್ತಿ ಹಾಗೂ ಸದೃಢ ಸಮಾಜದ ನಿರ್ಮಾಣಕ್ಕೆ ಬುನಾದಿಯಾಗಿ ಬೆಳೆಯುತ್ತಿದೆ.

ಪ್ರಸಕ್ತ ಕರ್ನಾಟಕ ನಾಟಕ ಅಕಾಡೆಮಿ ಕೂಡ ಈ ನಿಟ್ಟಿನಲ್ಲಿ ಆಲೋಚಿಸಿ, ಶನಿವಾರದ ರಂಗಶಾಲೆಗಳ ಅಸ್ತಿತ್ವಕ್ಕೆ ಪ್ರೋತ್ಸಾಹ ಕೊಡುತ್ತಿರುವುದು ಉಲ್ಲೇಖನೀಯ.

ಮಕ್ಕಳ ಮಕ್ಕಳ ರಂಗಭೂಮಿಯಲ್ಲಿ ಮಕ್ಕಳಿಂದ ಮಕ್ಕಳಿಗೆ, ಹಿರಿಯರಿಂದ ಮಕ್ಕಳಿಗೆ, ಮಕ್ಕಳಿಂದ ಹಿರಿಯರಿಗೆ ನಾಟಕ ಪ್ರಯೋಗಗಳಾಗುತ್ತಿವೆ. ಪ್ರಪಂಚದ ಅದ್ಭುತ ನಾಟಕಗಳು ಮಕ್ಕಳ ಮನಸ್ಸಿಗೆ ನಾಟುವಂತೆ ಮರುಸೃಷ್ಟಿಯಾಗಿ ರಂಗಪ್ರಯೋಗವಾಗಿದೆ. ನಮ್ಮ ಜಾನಪದ ಕತೆಗಳು, ಪುರಾಣದ ಕತೆಗಳು, ಐತಿಹಾಸಿಕ ಘಟನೆಗಳು, ವರ್ತಮಾನದ ಅನೇಕ ವಿಷಯಗಳು, ಪರಿಸರ, ಆರೋಗ್ಯ, ನೈರ್ಮಲ್ಯ, ವಿಜ್ಞಾನ-ತಂತ್ರಜ್ಞಾನ ಹೀಗೆ ಎಲ್ಲ ವಿಷಯಗಳು ಈ ಮಾಧ್ಯಮದ ಮೂಲಕ ಮನರಂಜನಾತ್ಮಕವಾಗಿ ಹಾಗೂ ಮನೋವಿಕಾಸಕ್ಕೆ ಪೂರಕವಾಗಿ ಮಕ್ಕಳ ಮನಸ್ಸಿನಲ್ಲಿ ಹೂವರಳಿಸುತ್ತಿವೆ.

★★★

# ಮಕ್ಕಳ ರಂಗಭೂಮಿ – ಪ್ರಯೋಗ ಮತ್ತು ಸಾಧ್ಯತೆಗಳು

– ಕೆ.ಜಿ. ಕೃಷ್ಣಮೂರ್ತಿ

ವಾಸ್ತವವಾಗಿ, ನಾನು 'ಮಕ್ಕಳ ರಂಗಕರ್ಮಿ' ಎಂಬ ಹಣೆಪಟ್ಟಿ ಅಂಟಿಸಿಕೊಂಡು ರಂಗಕಾಯಕದಲ್ಲಿ ತೊಡಗಿಕೊಂಡಿದ್ದರೂ ಕೂಡಾ 'ಮಕ್ಕಳ ರಂಗಭೂಮಿ' ಹೇಳಬೇಕೆಂದರೆ ಗೊಂದಲವಾಗುತ್ತದೆ. ಹಾಗಿದ್ದರೂ 20–25 ವರ್ಷಗಳಿಂದ ಈ ಕ್ಷೇತ್ರದಲ್ಲಿ ಕೆಲಸ ಮಾಡಿದ ಅನುಭವದ ಮೇಲೆ ಒಂದಿಷ್ಟು ವಿಚಾರಗಳನ್ನು ಹಂಚಿಕೊಳ್ಳಲು ಪ್ರಯತ್ನಿಸುತ್ತೇನೆ. ಹಾಗೂ ಈ ಮೂಲಕ ನಾನು ಯಾವ ಸಿದ್ಧಾಂತವನ್ನೂ ಪ್ರತಿಪಾದಿಸುತ್ತಿಲ್ಲ.

ಮೊದಲನೇಯದಾಗಿ ಮಕ್ಕಳ ರಂಗಭೂಮಿ ಎಂಬ ಪ್ರತ್ಯೇಕ ಪ್ರಬೇಧವೇ ನನಗೆ ಕಿರಿಕಿರಿಯನ್ನುಂಟುಮಾಡುತ್ತದೆ. ರಂಗಭೂಮಿಯ ವ್ಯಾಕರಣ/ ಭಾಷೆ ಎಲ್ಲವೂ ಎಲ್ಲಾ ಪ್ರಕಾರದ ರಂಗಭೂಮಿಗೂ ಒಂದೇ ಆಗಿರುವಾಗ ಹೀಗೆ ಪ್ರತ್ಯೇಕವಾಗಿ ಗುರುತಿಸುವುದರ ಅಗತ್ಯವಿದೆಯೇ? ನನಗೆ ತಿಳಿದ ಮಟ್ಟಿಗೆ ನಮ್ಮ ಭಾರತೀಯ ಪರಂಪರೆಯಲ್ಲಂತೂ ಈ ಬಗೆಯ ವಿಂಗಡನೆ ಇರಲಿಲ್ಲ. ನಮ್ಮ ಸಂಸ್ಕೃತಯಲ್ಲಾಗಲೀ, ಸಾಹಿತ್ಯದಲ್ಲಾಗಲೀ ರಂಗಭೂಮಿಯಲ್ಲಾಗಲೀ ಅಷ್ಟೇಕೆ, ನಮ್ಮ ದೈನಂದಿನ ಜೀವನ ಪದ್ಧತಿಯಲ್ಲಿ ಕೂಡಾ ಮಕ್ಕಳನ್ನು ಪ್ರತ್ಯೇಕಿಸಿ ನೋಡುವ ಪರಿಪಾಠವಿರಲಿಲ್ಲ. ಹಾಗೆಂದಮಾತ್ರಕ್ಕೆ ನಮ್ಮ ಪರಮಪರೆ ಮಕ್ಕಳನ್ನು ಅಸಡ್ಡೆಮಾಡಿದೆ ಎಂದೇನೂ ಅರ್ಥವಲ್ಲ. ಎಲ್ಲ ಕ್ರಿಯಗಳಲ್ಲೂ ಏಕಕಾಲಕ್ಕೆ ಮಕ್ಕಳು ಹಾಗೂ ದೊಡ್ಡವರು ಪಾಲ್ಗೊಳ್ಳುವ, ಗ್ರಹಿಸುವ ಮತ್ತು ಆಪ್ತವಾಗುವ ಅಂಶಗಳಿದ್ದವು. ಹಾಗಿದ್ದರೆ ವ್ಯತ್ಯಾಸಗಳಿಲ್ಲವೇ? ವ್ಯತ್ಯಾಸವಿದೆ. ಅದು ಗ್ರಹಿಸುವ ಮಟ್ಟದಲ್ಲಿ ಮತ್ತು ಕೊಡುವ ಪ್ರಮಾಣದಲ್ಲಿ. ಆದರೆ ಮೂಲಸ್ವರೂಪದಲ್ಲಿಲ್ಲ. ಉದಾಹರಣೆಗೆ – ಡಾಕ್ಟರು ಮಕ್ಕಳಿಗೆ ಮತ್ತು ದೊಡ್ಡವರಿಗೆ ಔಷಧಕೊಡುವಾಗ ಪ್ರಮಾಣದಲ್ಲಿ ವ್ಯತ್ಯಾಸ ಮಾಡುತ್ತಾರೆಯೇ ಹೊರತು ಔಷಧದ ಗುಣದಲ್ಲಿ ಇಲ್ಲ. ಮಕ್ಕಳ ರಂಗಭೂಮಿ ಮತ್ತು ದೊಡ್ಡವರ ರಂಗಭೂಮಿಯ ಪ್ರತ್ಯೇಕತೆಯ ಬಗ್ಗೆ ಮಾತಾಡುವಾಗಲೆಲ್ಲಾ ನಾನೊಂದು

ಪ್ರಮೇಯ ಹೇಳುವುದಿದೆ. ಅದು 'ಅನ್ನ ಮತ್ತು ಗಂಜಿ' ಪ್ರಮೇಯ. ಹಾಗೆಂದರೆ – ನಾವು ಅಕ್ಕಿಯನ್ನು ಮೆದುವಾಗಿ ಬೇಯಿಸಿದರೆ ಅದು ಗಂಜಿಯಾಗಿ ಮಕ್ಕಳ ಆಹಾರವಾಗುತ್ತದೆ. ಗಟ್ಟಿಯಾಗಿ ಬೇಯಿಸಿದರೆ ಅನ್ನವಾಗಿ ದೊಡ್ಡವರ ಆಹಾರವಾಗುತ್ತದೆ. ಎರಡೂ ಸಂದರ್ಭದಲ್ಲಿ ಅಕ್ಕಿ ಮಾತ್ರಾ ಒಂದೇ, ಒಟ್ಟಾರೆಯಾಗಿ ನಾವು ಯಾವ ಪ್ರಮಾಣದಲ್ಲಿ ಮತ್ತು ಹೇಗೆ ಕೊಡುತ್ತೇವೆ ಎಂಬುದರ ಮೇಲೆ ಅದು ಯಾರಿಗೆ ಅನ್ನುವುದನ್ನು ನಿರ್ಧರಿಸಬಹುದಾಗಿದೆ. ಎಂಬುದು ನನ್ನ ಅಭಿಪ್ರಾಯ. ಮುಂದೆ ಮನೋ ವಿಜ್ಞಾನ ಬೆಳೆದಂತೆಲ್ಲಾ ಅವರವರ ವಯಸ್ಸಿಗೆ ಅನುಗುಣವಾಗಿ ಬೇರೆ ಬೇರೆ ಯಾದದ್ದನ್ನೇ ಕೊಡಬೇಕಾಗುತ್ತದೆ. ಎಂಬ ಪಾಶ್ಚಾತ್ಯ ಕಲ್ಪನೆ ಈ ಬಗೆಯ ವಿಂಗಡನೆಗೆ ಕಾರಣವಾಗಿರಬಹುದು.

ಇತ್ತೀಚೆಗೆ ಮಕ್ಕಳ ರಂಗಭೂಮಿಯ ಚಟುವಟಿಕೆಗಳು ಹಿಂದೆಂದಿಗಿಂತ ಹೆಚ್ಚು ಮುಂಚೂಣಿಗೆ ಬರುತ್ತಿದೆ. ಈ ಕ್ಷೇತ್ರಕ್ಕೆ ಹೆಚ್ಚಿನ ಮನ್ನಣೆ, ಗೌರವ ಮತ್ತು ಘನತೆ ಲಭಿಸುತ್ತಿದೆ. ಹಾಗೆಯೇ ಹಲವು ಬಗೆಯ ಪ್ರಯೋಗ/ಚಿಂತನೆಗಳು ನಡೆಯುತ್ತಿವೆ. ಮಕ್ಕಳೇ ಮಕ್ಕಳಿಗಾಗಿ ಅಭಿನಯಿಸುವ, ದೊಡ್ಡವರು ಮಕ್ಕಳಿಗಾಗಿ ಅಭಿನಯಿಸುವ ರಂಗಪ್ರಯೋಗಗಳು, ರಂಗ ಮುಖೇನ ಶಿಕ್ಷಣ, ಇತ್ಯಾದಿ.... ಇತ್ಯಾದಿ.... ಇಂತಹ ಪ್ರಯೋಗ/ಪದ್ಧತಿಯ ಉದ್ದೇಶ ಸ್ವರೂಪಗಳ ಕುರಿತು ಕೆಲವು ಅಭಿಪ್ರಾಯಗಳನ್ನು ಹೇಳಬಯಸುತ್ತೇನೆ.

ಮೊದಲನೇಯದಾಗಿ – 'ಮಕ್ಕಳಿಂದ, ಮಕ್ಕಳಿಗಾಗಿ ನಡೆಸುವ ಪ್ರಯೋಗಗಳ ಕುರಿತು ವಿಚಾರ ಮಾಡೋಣ. ನನ್ನ ಮೊದಲ ರಂಗ ಪ್ರವೇಶವಾದದ್ದು ಈ ಬಗೆಯ ಪ್ರಯೋಗಗಳಿಂದ. 1969–70ರಲ್ಲಿ ಬಿ.ವಿ. ಕಾರಂತರು ನೀನಾಸಮ್‌ಗಾಗಿ ನಿರ್ದೇಶಿಸಿದ 'ಪಂಜರಶಾಲೆ'. ನನ್ನ ಮುಂದಿನ ಎಲ್ಲಾ ಚಟುವಟಿಕೆಗಳಿಗೆ ತಳಪಾಯದ್ದರಿಂದ ಆ ಪ್ರಯೋಗ ಪ್ರಕ್ರಿಯೆಯನ್ನು ಒಂದಿಷ್ಟು ನೆನಪಿಸಿಕೊಳ್ಳುತ್ತೇನೆ.

ಮೊದಲ ದಿನ ನಾವು 100ಕ್ಕೂ ಹೆಚ್ಚು ಮಕ್ಕಳು ಸೇರಿದ್ದೆವು. ಕಾರಂರು ನಮಗೆಲ್ಲರಿಗೂ ಇಷ್ಟಬಂದಂತೆ ಏನನ್ನಾದರೂ ಮಾಡಲು ಹೇಳಿದ್ದರು. ನಾವು ಏನೇನೋ ಕಕ್ಕರುತನ ಮಾಡಿ ನಮ್ಮ ಪ್ರತಿಭೇಯನ್ನು ಪ್ರದರ್ಶಿಸಿದೆವು. ಆ ಮೇಲೆ ಒಂದೆರಡು ದಿನ ಏನೇನೋ ಆಟವಾಡಿಸುವುದರ ಜೊತೆಗೆ ಕಾರಂತರು ನಮಗೆ ಟ್ಯಾಗೋರರ ಕತೆಯೊಂದನ್ನು ಹೇಳಿದರು. ಅದೇ ನಾವು ಮಾಡುವ ನಾಟಕವೆಂದೂ ತಿಳಿಸಿದ್ದರು. ಅದಕ್ಕೆ ಬರೆದಿಟ್ಟ ಸ್ಕ್ರಿಪ್ಟ್ ಎಂಬುದಿರಲಿಲ್ಲ. ಕಾರಂತರು ಗುಂಪು ಗುಂಪು ದೃಶ್ಯ ಕಟ್ಟುತ್ತಿದ್ದರು. ಅದಕ್ಕೆ ಹೊಂದುವ ಮಾತುಗಳನ್ನು ಹೇಳಿಕೊಡುತ್ತಿದ್ದರು. ಜೊತೆ ಜೊತೆಗೇ ಸಂಗೀತವನ್ನೂ

ಸೇರಿಸುತ್ತಿದ್ದರು. ಆಯಾ ಸಂದರ್ಭಕ್ಕೆ ಮಕ್ಕಳನ್ನು ಕರೆದು ಪಾತ್ರ ಕೊಡುತ್ತಿದ್ದರು. ಯಾರೊಬ್ಬರನ್ನೂ ಬಿಟ್ಟರಲಿಲ್ಲ. ಕಾರಂತರು ಹೇಳಿಕೊಟ್ಟ ಮಾತು, ನಾವು ಸೇರಿಸಿದ ಮಾತು ಎಲ್ಲವನ್ನೂ ಕೂಡಿ ಕಳೆದು ಸುಬ್ಬಣ್ಣ ಬರೆದುಕೊಳ್ಳುತ್ತಿದ್ದರು. ಕಂಠಪಾಠವಿಲ್ಲ ಬರೆದುಕೊಳ್ಳುವ ಕಷ್ಟವಿಲ್ಲ. ಎಲ್ಲವೂ ಆಡಾಡುತ್ತಲೇ ನಡೆಯುತ್ತಿತ್ತು. ನಾವೆಲ್ಲಾ ಎಷ್ಟು ಖುಷಿಯಿಂದ ಪಾಲ್ಗೊಂಡಿದ್ದೆವೆಂದರೆ, ನಮಗೆ ನಾಟಕ ಮಾಡುವುದಕ್ಕಿಂತ ಅದೊಂದು ಸಂಭ್ರಮವಾಗಿತ್ತು. ನೋಡು ನೋಡುತ್ತಲೇ ನಾಟಕ ತಯಾರಾಗಿ ಹೋಗಿತ್ತು. ನಮ್ಮ ಶಾಲೆಯ ಹೊರಾಂಗಣ ವೇದಿಕೆಯಲ್ಲಿ ಮೊದಲ ಪ್ರದರ್ಶನ ನಡೆಯಿತು. ಮೊದಲ ಪ್ರದರ್ಶನದಲ್ಲಿ ನಾಟಕದ ಕೊನೆಗೆ ಕಾರಂತರು ಗಿಣೀಮರಿ ಸಾಯುವ ದೃಶ್ಯವನ್ನು ಹಾಕಿದ್ದರು. ಆದರೆ ಅಂದು ಮಕ್ಕಳ/ ಪ್ರೇಕ್ಷಕರ ಬೇಸರವನ್ನು ಗ್ರಹಿಸಿದ ಕಾರಂತರು ಮರು ಪ್ರದರ್ಶನದ ಹೊತ್ತಿಗೆ ಗಿಣಿ ಮರಿ ಸಾಯುವ ಬದಲು ನಿಧಾನವಾಗಿ ಚೇತರಿಸಿಕೊಂಡು ಮತ್ತೆ ತನ್ನ ಹಿಂಡನ್ನು ಸೇರಿಕೊಳ್ಳುವಂತೆ ದೃಶ್ಯವನ್ನು ಮಾರ್ಪಡಿಸಿದ್ದರು. ಮುಂದೆ ಈ ನಾಟಕದ ಪ್ರದರ್ಶನಗಳು ಬೆಂಗಳೂರಿನಲ್ಲೂ ನಡೆದವು. ಪ್ರೇಕ್ಷಕರ ಪ್ರತಿಕ್ರಿಯೆ ಎಷ್ಟೊಂದು ಅದ್ಭುತವಾಗಿತ್ತೆಂದರೆ, ಮಕ್ಕಳ ರಂಗಭೂಮಿಯಲ್ಲಿ ಅದೊಂದು ಮೈಲಿಗಲ್ಲಾಯಿತು. ಈ ಐತಿಹಾಸಿಕ ಘಟನೆಯಲ್ಲಿ ಪಾಲ್ಗೊಂಡ ನಾವು ಶಾಲೆಯ ಉಳಿದ ಮಕ್ಕಳಿಗಿಂತ ಬೇರೆಯಾಗಿದ್ದೆವು. ಆತ್ಮವಿಶ್ವಾಸ ಹಮ್ಮಿನಿಂದ ಬೀಗುತ್ತಿದ್ದೆವು.

'ಪಂಜರಶಾಲೆ' ರಂಗಪ್ರಯೋಗದ ಬಗ್ಗೆ ಇಷ್ಟೆಲ್ಲಾ ಬರೆದದ್ದು – ಇಂದು ಮಕ್ಕಳು ಅಭಿನಯಿಸುವ ರಂಗ ಪದ್ಧತಿಯ ಕುರಿತಾಗಿ ಮಾಡುವ ಬಹಳಷ್ಟು ವಿಚಾರಗಳಿಗೆ ಅಂದರೆ – 'ಅದೊಂದು ಸಂಭ್ರಮದ ಚಟುವಟಿಕೆ' 'ಪ್ರಕ್ರಿಯೆ ಪ್ರಧಾನವಾದದ್ದು' 'ಸ್ಕ್ರಿಪ್ಟ್‌ಗಿಂತ ಡ್ರಾಫ್ಟ್ ಮುಖ್ಯ' 'ಒಳಗೊಳ್ಳುವಿಕೆ' 'ಸುಖಾಂತ್ಯ' – ಮುಂತಾದ ಸೂತ್ರಗಳಿಗೆ ಕಾರಂತರು ಅಂದೇ ಅಡಿಪಾಯ ಹಾಕಿದ್ದರು ಎಂದು ಹೇಳುವ ಸಲುವಾಗಿ ಈ ಸೂತ್ರಗಳ ಕುರಿತು ಒಂದಿಷ್ಟು ವಿಚಾರ ಮಾಡೋಣ.

ಮಕ್ಕಳು ನೇರವಾಗಿ ಭಾಗವಹಿಸುವ ರಂಗಚಟುವಟಿಕೆಗಳು ಮುಖ್ಯವಾಗಿ 'ಪ್ರಕ್ರಿಯೆ ಪ್ರಧಾನವಾದುದು' ಇದು ಪೂರ್ಣ ಪ್ರಮಾಣದ ರಂಗಭೂಮಿ ಅನ್ನಿಸಿಕೊಳ್ಳುವುದಿಲ್ಲ. ಇಲ್ಲಿ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವುದು ಮುಖ್ಯವೇ ಹೊರತು ನಾಟಕ ಪ್ರದರ್ಶನದ ಯಶಸ್ಸು ಮುಖ್ಯವಲ್ಲ. ಹೇಗಿದ್ದರೂ ಮಕ್ಕಳು ರಂಗದ ಮೇಲೆ ಬಂದರೇ ಸಾಕು ರಂಗ ಕಳೆಗಟ್ಟುತ್ತದೆ. ಮಕ್ಕಳಿಗೆ ಈ ಪಾಲ್ಗೊಳ್ಳುವಿಕೆಯು ಒಂದು ಸಂಭ್ರಮವಾಗಬೇಕು. ರಂಗಭೂಮಿಯ ಶಕ್ತಿಯನ್ನು ಬಳಸಿಕೊಂಡು ಮಕ್ಕಳ ಮನಸ್ಸನ್ನು ಅರಳಿಸುವ, ಆತ್ಮವಿಶ್ವಾಸವನ್ನು ಬೆಳೆಸುವ ಪರಸ್ಪರ ಪ್ರೀತಿ ನಂಬುಗೆಯನ್ನು ಗಟ್ಟಿಗೊಳಿಸುವ,

ಅವರ ಅರಿವನ್ನು ವಿಸ್ತರಿಸುವ ಕೆಲಸ ಮಾಡಬೇಕಾಗುತ್ತದೆ. ಇನ್ನೂ ವಿಸ್ತರಿಸುವುದಾದರೆ ಇಂಥ ಚಟುವಟಿಕೆಗಳು ಮಕ್ಕಳನ್ನು ಕಲಾವಿದರು/ ನಟರನ್ನಾಗಿ ರೂಪಿಸುವ ಪ್ರಯತ್ನ ಮಾಡದೇ ರಂಗಭೂಮಿಯನ್ನು ನೆವವಾಗಿಟ್ಟುಕೊಂಡು ಮಕ್ಕಳ ವ್ಯಕ್ತಿತ್ವ ರೂಪಿಸಿ, ಅವರಿಗೆ ಉತ್ತಮ ಸಂಸ್ಕಾರ ಒದಗಿಸುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ನೆರವಾಗುವಂತಿರಬೇಕು. ಅಲ್ಲದೇ ಅವರನ್ನು ಕಲಾವಿದರನ್ನಾಗಿ ಮಾಡಬೇಕೆಂದು ಪ್ರಯತ್ನಿಸುವುದು ನಮ್ಮ ಮಕ್ಕಳು ಡಾಕ್ಟರೋ ಎಂಜಿನಿಯರೋ ಆಗಬೇಕೆಂದು ಎಳವೆಯಿಂದಲೇ ಅವರ ಮೇಲೆ ಒತ್ತಡ ಹೇರುವಷ್ಟೇ ಅಸಾಧುವಾದುದು. ಹಾಗಂತ ಈ ಪ್ರಕ್ರಿಯೆಯಲ್ಲಿ ಮುಂದೊಂದು ದಿನ ಅವರು ರಂಗಭೂಮಿಯನ್ನೇ ಆಯ್ಕೆ ಮಾಡಿಕೊಂಡರೆ ಅದೇನೂ ತಪ್ಪಲ್ಲ. ಮತ್ತು ಪ್ರದರ್ಶನ ಮುಖ್ಯವಲ್ಲ ಎಂದಾಕ್ಷಣ ಅದು ಯಶಸ್ವಿಯಾಗಬಾರದು ಎಂದೇನೂ ಅಲ್ಲ. ಆದರೆ, ಅದೇ ಮುಖ್ಯವಾದಾಗ ಇಂಥ ಚಟುವಟಿಕೆಗಳ ಉದ್ದೇಶ ಮತ್ತು ಮಹತ್ವ ಗೌಣವಾಗಬಹುದು. ಎಂಬುದಷ್ಟೇ ನನ್ನ ಅಭಿಪ್ರಾಯ. ಪ್ರಕ್ರಿಯೆ ಉತ್ತಮವಾಗಿದ್ದರೆ ಫಲಿತಾಂಶವೂ ಯಶಸ್ವಿಯಾಗಿರುತ್ತದೆ. ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ.

ಹೀಗೆ ಬರೆಯುತ್ತಿದ್ದಂತೆಯೇ – ಇತ್ತೀಚಿನ ದಿನಗಳಲ್ಲಿ ಶಾಲೆಗಳು ನಡೆಸುತ್ತಿರುವ ಪ್ರತಿಭಾ ಕಾರಂಜಿ, ಯಂತಹ ಕಾರ್ಯಕ್ರಮಗಳು – ಅವುಗಳ ಸಂಖ್ಯಾಮಿತಿ, ಸಮಯಮಿತಿ, ಹಾಗೂ ಸ್ಪರ್ಧಾತ್ಮಕ ನಿಯಮಗಳಿಂದಾಗಿ ಪ್ರದರ್ಶನದತ್ತ ಹೆಚ್ಚು ಒತ್ತುಕೊಟ್ಟು ಮೂಲ ಆಶಯವನ್ನು ಮರೆತುಬಿಡುತ್ತಿವೆಯೋ ಎಂದು ಅನುಮಾನಿಸುತ್ತಿದ್ದೇನೆ.

ಎರಡನೇಯದಾಗಿ – ದೊಡ್ಡವರು ಮಕ್ಕಳಿಗಾಗಿ ಅಭಿನಯಿಸುವ ರಂಗಪದ್ಧತಿಯ ಕುರಿತು. 1980ರಲ್ಲಿ ಕ್ಷೀಣವಾಗಿ ಆರಂಭಗೊಂಡ ಈ ರಂಗಪದ್ಧತಿಯು ಮುಂದೆ ವಿಸ್ತಾರವನ್ನು ಪಡೆದುಕೊಂಡು ಈಗೀಗ ಹೆಚ್ಚು ಪ್ರಚಲಿತಗೊಳ್ಳುತ್ತಿದೆ.

ಮಕ್ಕಳಿಗೆ ಗಂಭೀರವಾದ್ದೇನನ್ನಾದರೂ ಮಾಡಬೇಕೆಂದರೆ – ಅದು ಸಾಹಿತ್ಯವಿರಲಿ, ರಂಗಭೂಮಿ ಇರಲಿ – ಆ ಕೆಲಸವನ್ನು ದೊಡ್ಡವರೇ ಮಾಡಬೇಕಾಗುತ್ತದೆ. (ಮಕ್ಕಳು ಬರೆದ ಕತೆ/ ಕವನಗಳನ್ನು ನಾವು ಮಕ್ಕಳ ಸಾಹಿತ್ಯ ಎಂದು ಹೇಳುವುದಿಲ್ಲ) ಮಕ್ಕಳಿಗೆ ಪೂರ್ಣಪ್ರಮಾಣದ ರಂಗಾನುಭವವನ್ನು ಕೊಡುವುದು ಈ ಪದ್ಧತಿಯ ಮುಖ್ಯ ಉದ್ದೇಶ. ಒಂದರ್ಥದಲ್ಲಿ ಈ ಪ್ರಯೋಗಗಳು 'ಪ್ರದರ್ಶನ ಪ್ರಧಾನವಾದುದು'. ಎಂದು ಹೇಳಬಹುದು. ಈ ಬಗೆಯ ಪ್ರಯೋಗಗಳಲ್ಲಿ, ಅಭಿನಯ ಅಥವಾ ಯಾವುದೇ ತಾಂತ್ರಿಕ ವಿಷಯಗಳಲ್ಲಿ ರಿಯಾಯಿತಿ/ ರಾಜಿ ಮಾಡಿಕೊಳ್ಳದೆ, ಮಕ್ಕಳಿಗೆ ಉತ್ತಮ

ಗುಣಮಟ್ಟದ ವ್ಯವಸಾಯೀ ಶಿಸ್ತಿನ ಪ್ರದರ್ಶನವನ್ನು ಕೊಡಬೇಕಾಗುತ್ತದೆ. ಮಕ್ಕಳಿಗಾಗಿ ಪ್ರದರ್ಶಿಸುವ ಯಾವುದೇ ಉತ್ತಮ ರಂಗಪ್ರಯೋಗವು ಮಕ್ಕಳಿಗೆ ಶೈಕ್ಷಣಿಕ ಅರಿವು ವಿಸ್ತರಿಸುವ, ಉತ್ತಮ ಮನರಂಜನೆ ನೀಡುವ ಹಾಗೂ ಕಲಾತ್ಮಕ ಅಭಿರುಚಿ ಬೆಳೆಸುವ ಕೆಲಸವನ್ನು ಮಾಡಬೇಕಾಗುತ್ತದೆ.

ಆದ್ದರಿಂದ 'ಮಕ್ಕಳಿಂದ ಅಭಿನಯಿಸಲ್ಪಡುವ ಮತ್ತು ಮಕ್ಕಳಿಗಾಗಿ ದೊಡ್ಡವರು ಅಭಿನಯಿಸುವ ಪ್ರಯೋಗ ಪದ್ಧತಿಯ ವ್ಯತ್ಯಾಸವನ್ನು 'ಪ್ರಕ್ರಿಯೆ ಪ್ರಧಾನ' ಮತ್ತು 'ಪ್ರದರ್ಶನ ಪ್ರಧಾನ' ಎಂದು ಗುರುತಿಸಬಹುದಾಗಿದೆ.

ಕಳೆದ 22 ವರ್ಷಗಳಿಂದ 'ಕಿನ್ನರ ಮೇಳ' ಸಂಸ್ಥೆಯು ದೊಡ್ಡವರು ಮಕ್ಕಳಿಗಾಗಿ ಅಭಿನಯಿಸುವ ರಂಗಪದ್ಧತಿಯನ್ನು ನಡೆಸಿಕೊಂಡು ಬರುತ್ತಿದೆ. ಈ ಮೇಲೆ ಸೂಚಿಸಿದಂತೆ, ಈ ಪದ್ಧತಿಯು ಏನೆಲ್ಲ ಉದ್ದೇಶ ಆಶಯಗಳನ್ನಿಟ್ಟುಕೊಂಡರೂ ನಮ್ಮ ಅನುಭವದ ಮೇಲೆ ಹೇಳುವುದಾದರೆ, ಕೆಲವು ಇತಿಮಿತಿಗಳನ್ನು ಒಳಗೊಂಡಿದೆ. ಈ ನಾಟಕಗಳು ಹೆಚ್ಚು ಹೆಚ್ಚು ಮಕ್ಕಳಿಗೆ ತಲುಪುವ ಉದ್ದೇಶವನ್ನಿಟ್ಟುಕೊಂಡಿರುವುದರಿಂದ ಹಗಲು ಹೊತ್ತು ಶಾಲಾ ಆವರಣದಲ್ಲಿ ಪ್ರದರ್ಶನ ನೀಡುವುದು ಅನಿವಾರ್ಯವಾಗಿದೆ. ಹಾಗಾದಾಗ ಪ್ರದರ್ಶನಕ್ಕೆ ಅಗತ್ಯವಾದ ಸ್ಥಳಾವಕಾಶ ಲಭ್ಯವಾಗದೇ ಎಲ್ಲೆಂದರಲ್ಲಿ ಪ್ರದರ್ಶನ ನೀಡುವುದೆಂದರೆ ಹಲವು ಬಗೆಯಲ್ಲಿ ರಾಜಿ ಮಾಡಿಕೊಳ್ಳಬೇಕಾಗುತ್ತದೆ. ಇದರಿಂದ ಪ್ರದರ್ಶನ ಗುಣಮಟ್ಟ ಕಾಯ್ದುಕೊಳ್ಳುವುದು ಕಷ್ಟವಾಗುವುದರ ಜೊತೆಗೆ ಒಂದು ಬಗೆಯ ಕಲಾತ್ಮಕ ಅತೃಪ್ತಿಗೂ ಕಾರಣವಾಗುತ್ತದೆ. ಶಾಲೆಗಳಲ್ಲಿ ಸಾಂಸ್ಕೃತಿಕ ವಾತಾವರಣ ಇನ್ನೂ ಗಟ್ಟಿಯಾಗಿ ಬೆಳೆಯದಿರುವುದು ಈ ಯೋಜನೆಯ ಅನುಷ್ಠಾನಕ್ಕೆ ಹಿನ್ನಡೆಯಾಗುತ್ತಿದೆ.

ಹಾಗಿದ್ದೂ ಮಕ್ಕಳ ರಂಗಭೂಮಿಯೇ ಈ ಪದ್ಧತಿಯ ಪ್ರಯೋಗ ಸಾಧ್ಯತೆಗಳು ಇಂದು ವಿಸ್ತಾರಗೊಂಡಿದೆ. ಅವುಗಳಲ್ಲಿ ಶಿಕ್ಷಣಕ್ಕಾಗಿ ರಂಗಭೂಮಿ ಪ್ರಮುಖವಾದುದು. ಶಿಕ್ಷಣ ಪದ್ಧತಿಯು 'ಮಕ್ಕಳಿಗೆ ಕಲಿಕೆಯು ಒಂದು ಅನುಭವವವಾಗಬೇಕು' ಎಂಬ ನಿಟ್ಟಿನಲ್ಲಿ ರೂಪ ಪಡೆದುಕೊಳ್ಳುತ್ತಿದೆ. ಪಠ್ಯ ಬೋಧನೆಯನ್ನು ಆಕರ್ಷಕವಾಗಿಸಲು, ಬೋಧನಾಕ್ರಮದಲ್ಲಿ ರಂಗಭೂಮಿಯ ಅಂಶಗಳನ್ನು ಬಳಸಿಕೊಳ್ಳಬಹುದೇ ಎಂಬ ಪ್ರಯತ್ನ ಶಿಕ್ಷಣದಲ್ಲಿ ರಂಗಭೂಮಿ ಚಟುವಟಿಕೆಗಳ ಉದ್ದೇಶವಾಗಿದೆ. ಈ ದಿಶೆಯಲ್ಲಿ ಹಲವು ಬಗೆಯ ಪ್ರಯೋಗಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ಈ ಕುರಿತಾಗಿ ಸ್ಪಷ್ಟವಾದ ಮಾರ್ಗಸೂಚಿಯನ್ನು ಕಂಡುಕೊಳ್ಳಬೇಕಾಗಿದೆ. ಶಿಕ್ಷಣದಲ್ಲಿ ರಂಗಭೂಮಿ ಚಟುವಟಿಕೆಯನ್ನು ನಾವು ಯಾವ ರೀತಿಯಲ್ಲಿ ಅರ್ಥೈಸಿಕೊಂಡಿದ್ದೇವೆ. ಎಂಬುದರ

ಬಗ್ಗೆ ಚಿಂತನೆಗಳು ನಡೆಯಬೇಕಿದೆ. ಶಾಲಾ ಪಠ್ಯಕ್ರಮದಲ್ಲಿ ರಂಗಭೂಮಿಯ ವಿಷಯಗಳನ್ನು ಅಳವಡಿಸಿಕೊಳ್ಳುವುದೇ? ಪಠ್ಯ ಭೋದನೆಯಲ್ಲಿ ರಂಗತಂತ್ರಗಳನ್ನು ಸಾಧನವಾಗಿ ಬಳಸಿಕೊಳ್ಳುವುದೇ? ಅಥವಾ ರಮಗಚಟುವಟಿಕೆಗಳು ಮಕ್ಕಳಿಗೆ ಒಂದು ಅನುಭವವಾಗಿ ದಕ್ಕುವಂತೆ ಮಾಡುವುದೇ? ಈ ಕುರಿತಾಗಿ ಸ್ಪಷ್ಟತೆಯನ್ನು ಕಂಡುಕೊಳ್ಳಬೇಕಾಗಿದೆ. ಅದಲ್ಲದೇ, ಶಿಕ್ಷಣದಲ್ಲಿ ರಂಗಭೂಮಿ ಎಂದರೆ ಪಾಠಗಳನ್ನು ನಾಟಕೀಕರಣಗೊಳಿಸುವುದು ಚಟುವಟಿಕೆಯನ್ನು ಸರಳಗೊಳಿಸಿದಮತಾಗುತ್ತದೆ.

'ಶಿಕ್ಷಣದಲ್ಲಿ ರಂಗಭೂಮಿ'ಯ ಅನುಷ್ಠಾನಕ್ಕಾಗಿ ಮುಖ್ಯವಾಗಿ ಶಿಕ್ಷಕರಿಗೆ ತರಬೇತಿ ನೀಡುವುದು ಅಗತ್ಯವಾಗಿದೆ. ಹಾಗೆಯೇ ಈ ಹಿಂದೆಯೇ ತಿಳಿಸಿದಂತೆ ಶಿಕ್ಷಣ ಸಂಸ್ಥೆಗಳಲ್ಲಿ ಸಾಂಸ್ಕೃತಿಕ ವಾತಾವರಣ ನಿರ್ಮಿಸುವುದೂ ಅಗತ್ಯವಾಗಿದೆ.

ಒಟ್ಟಿನಲ್ಲಿ ಮಕ್ಕಳ ರಂಗಭೂಮಿಯ ಅಗತ್ಯವು ಈಗ ಹಿಂದೆಂದಿಗಿಂತ ಹೆಚ್ಚಾಗಿದೆ. ಹಾಗೂ ಸಾಧ್ಯತೆಗಳು ತೆರೆದುಕೊಳ್ಳುತ್ತಿವೆ. ಮಕ್ಕಳ ರಂಗಕರ್ಮಿಗಳು, ರಂಗಭೂಮಿಯು ಕೇವಲ ಕಲಾತ್ಮಕ/ ಮನರಂಜನಾತ್ಮಕ ಮಾಧ್ಯಮ ಎಂದು ಗ್ರಹಿಸದೇ ಅದೊಂದು ಸಾಮಾಜಿಕ ಚಟುವಟಿಕೆ ಎಂಬ ಉದ್ದೇಶದಿಂದ ಕಾರ್ಯ ನಿರ್ವಹಿಸಬೇಕಾಗಿದೆ. ಹಾಗೂ ಅಂತಹ ಜವಾಬ್ದಾರಿಯನ್ನು ಹೊರಬೇಕಾಗಿದೆ.

***

# ಮಕ್ಕಳ ರಂಗಭೂಮಿ : ಇಂದು-ನಾಳೆ

- ಮಂಡ್ಯ ರಮೇಶ್

'ಆಡಿ ಬಾ ನನ ಕಂದಾ
ಅಂಗಾಲ ತೊಳೆದೇನು,
ತೆಂಗಿನಕಾಯಿ ತಿಳಿನೀರ ತಕ್ಕೊಂಡು
ಬಂಗಾರ ಮೋರೆ ತೊಳೆದೇನು.'

- ಜನಪದ ಕಾವ್ಯ

ಆಡಿ ಬಂದ ಕಂದನಿಗೆ ಅಂಗಾಲು ತೊಳೆಯಲು ಕೆಸರಿನ ಕೆಮ್ಮಣ್ಣಿಲ್ಲ, ತೆಂಗಿನಕಾಯಿ ತಿಳಿನೀರ ಕೇಳುವವರಿಲ್ಲದೆ ಸೊರಗಿದೆ. ಬಂಗಾರ ಮೋರೆ ತೊಳೆಯಲು ಅಮ್ಮನಿಲ್ಲ, ಕ್ಲಬ್ಬಿಗೆ ಹೋಗಿದ್ದಾಳೆ, ಬಿಟ್ಟು ಹೋದ ಮಕ್ಕಳಿಗೆ ನಾಟಕ ಕಲಿಸಲು ನಾವಿದ್ದೇವೆ !

ಸ್ನೇಹಿತ್ರೇ -

ನಾನೇಕೆ ಮಕ್ಕಳ ರಂಗಭೂಮಿಯಲ್ಲಿ ತೊಡಗಿಕೊಳ್ತೇನೆ ಅಂತಾ ಮೊದಲು ಹೇಳ್ತೇನೆ ; ಮಕ್ಕಳೊಂದಿಗೆ ಆಟ ಆಡ್ತಾ ನಾನೂ ಒಂದಷ್ಟು ಹೊತ್ತು ಮಗುವಾಗಿ ಬಿಡೋ ಸಡಗರ, ಮತ್ತೆಲ್ಲೂ ಕಾಣದಷ್ಟು ನನಗೆ ಸಿಗೋ ಮಕ್ಕಳ ಕಲ್ಪನೆಯ ಲೋಕದ ಪರಿಚಯ, ವಿಹಾರಗಳಿಂದ ಸಿಗೋ ವಿಸ್ಮಯ ಮತ್ತು ದೀರ್ಘಕಾಲ ಅಂದ್ರೇ ಹಲ ವರುಷಗಳಷ್ಟು ಅವರನ್ನು ರಂಗಭೂಮಿಯಲ್ಲಿ ಉಳಿಯಲು ಪ್ರೇರೇಪಿಸಬಹುದೆಂಬ ಹಂಬಲ - ಯುವಕ-ಯುವತಿಯರಾದ್ರೇ ಎರಡನೇ ಪ್ರದರ್ಶನ ಹೊತ್ತಿಗೆ ಟಿ.ವಿ.ಗೆ ಪಲಾಯನ, ಕಟ್ಟಿಹಾಕೋದು ಕಷ್ಟ, ಮಧ್ಯವಯಸ್ಕರಾದ್ರೆ ಕುಟುಂಬ ತಾಪತ್ರಯಗಳು ಜಾಸ್ತಿ ! ವಯಸ್ಸಾದವರು ವಯಸ್ಸಿದ್ದಾಗ ಆಡಿದ ನಾಟಕಗಳ ಬಗ್ಗೆ ಹೇಳುತ್ತಾ - ಮುಂದಕ್ಕೆ ಹೋಗಲ್ಲ ಅಂತಾರೆ - ಹಠ ಬೇರೆ ! ಹೀಗಾಗಿ ಬಾಲ್ಯದಲ್ಲಿ ಬಂದವರು ರಂಗಭೂಮಿಗೆ ಅನೇಕ ವರ್ಷಗಳಾದರೂ ಉಳೀಬಲ್ಲರು ಅಂತಾ ಅನ್ನಿಸಿರೋದ್ರಿಂದ ಮಕ್ಕಳ ನಾಟಕ ಮಾಡಿಸ್ಲಿಕ್ಕೆ ಹೊರಡ್ತೇನೆ.

ಮಕ್ಕಳ ನಾಟಕದ ತಾಲೀಮು, ಪ್ರದರ್ಶನ, ಪ್ರವಾಸ, ಪ್ರತಿಕ್ರಿಯೆ, ಪರಿಣಾಮದ ಕುರಿತು ಬೇಕಾದಷ್ಟು ಮಾತನಾಡಬಹುದಾದರೂ - ನನಗೆ ವಿದ್ವತ್ಪೂರ್ಣವಾಗಿ ಮಂಡಿಸಲು ಬರುವುದಿಲ್ಲವಾದ್ದರಿಂದ - ನನ್ನ ಕೆಲ ಅನುಭವಗಳನ್ನು ಮಾತ್ರ ಹಂಚಿಕೊಳ್ಳುತ್ತೇನೆ. ಪೋಷಕರಾಗಲೀ, ಶಿಕ್ಷಕರಾಗಲೀ, ಸಹಪಾಠಿಗಳಾಗಲೀ ಸ್ವತಃ ಮಕ್ಕಳಿಗೇ, ತಾವಾಡುವ ನಾಟಕಗಳು ಹೇಗಿರಬೇಕೆಂದು ಗಂಭೀರವಾಗಿ ಚಿಂತಿಸಿದವರಲ್ಲ. ಬಹುತೇಕರು 'ಸಂತೆ ಹೊತ್ತಿಗೆ ಮೂರು ಮೊಳ ನೇಯ್ದಂತೆ' ನಾಟಕ ಆಡಿಸುವ ಆತುರ. ಇವತ್ತಿಗೂ ಶಾಲೆಗಳಲ್ಲಿ ಎಂತಹ ನಾಟಕ, ಯಾಕಾಗಿ ನಾಟಕ ಮಾಡಿಸಬೇಕೆಂದು ಆಧುನಿಕವಾಗಿ ಚಿಂತಿಸುವ ಕ್ರಮವೇನೂ ಇದ್ದಂತಿಲ್ಲ.

ಮಕ್ಕಳ ನಾಟಕಕ್ಕೆ ಆಕಾರ ಹೇಗಿರಬೇಕೆಂದು ವಿಚಾರ. ನನ್ನ ಪ್ರಕಾರ, ಒಟ್ಟೂ ರಂಗಭೂಮಿ ಹೀಗಿರಬೇಕೆಂದು ಕಾನೂನು ನಿಯಮಗಳ ಪದ್ಧತಿಗಳೇನೂ ಇರದೇ ಇರುವುದರಿಂದ ಇನ್ನು ಮಕ್ಕಳ ನಾಟಕಗಳಿಗೆ ಆಕಾರವೇ ಇರಬೇಕೆಂದಿಲ್ಲ, ಅದು ನಿರಾಕಾರ. ನೀವು ಎಲ್ಲಿ , ಯಾವ ತಂಡಕ್ಕೆ , ಯಾವ ಬಗೆಯ ಪ್ರೇಕ್ಷಕರೆದುರು ನಾಟಕವನ್ನಾಡುತ್ತಿದ್ದೀರಿ, ನೀವು ಮಕ್ಕಳ ಮೂಲಕ ಮಕ್ಕಳಿಗೇನು ಹೇಳುತ್ತಿದ್ದೀರಿ ಅಥವಾ ಮಕ್ಕಳ ಮೂಲಕ ಹಿರಿಯರಿಗೆ ಏನು ಹೇಳಬೇಕೆಂದಿದ್ದೀರಿ ? ಅಥವಾ ನಾಟಕದ ಅಭ್ಯಾಸದ ನೆಪದಲ್ಲಿ ಮಕ್ಕಳಿಗೆ ನಾಟಕದ ಅರ್ಥವನ್ನು ತಂಡಕ್ಕೆ ಮನವರಿಕೆ ಮಾಡಿಕೊಡುತ್ತಿದ್ದೀರೋ ಅನ್ನುವುದೇ ಮುಖ್ಯವಾಗುತ್ತದೆ. ವಸ್ತು ಮತ್ತು ಪ್ರಸ್ತುತಿ ಬಗ್ಗೆ ಮಾತ್ರ ಯೋಚಿಸೋದು ನನ್ನ ಪದ್ಧತಿ. ವಸ್ತು ತುಂಬ ಸಂಕೀರ್ಣವಾದರೂ ಅದರ ಪ್ರಸ್ತುತಿ ಮಾತ್ರ ಸರಳವಾಗಿದ್ದರೇ ಹೆಚ್ಚು ಸೂಕ್ತ. ನನ್ನ ಮುಂದೆ ಎರಡು ಬಗೆಯ ಮಕ್ಕಳ ರಂಗ ನಿರ್ದೇಶಕರನ್ನು ಹೆಚ್ಚು ಕಂಡಿದ್ದೇನೆ.

1. ಅತ್ಯಂತ ಸಂಕೀರ್ಣ ವಸ್ತುವನ್ನು ಅದಕ್ಕಿಂತಲೂ ಸಂಕೀರ್ಣವಾಗಿ ಮಕ್ಕಳಿಗೆ ಅರ್ಥ ಆಗಲಿ ಬಿಡಲಿ ಅವರೆದುರು ಇಟ್ಟು , ಭಯ ಮೂಡಿಸಿ ಅತಿ ಗಾಂಭೀರ್ಯದ ಸೋಗಿನಲ್ಲಿ ಪ್ರೇಕ್ಷಕರನ್ನು ರಂಗಮಂದಿರದ ಕಡೆ ಪುನಃ ತಲೆ ಹಾಕದಂತೆ ಮಾಡುವುದು.

2. ಅತಿರೇಕವಾಗಿ, ತೀರಾ ಅಂದರೆ ತೀರಾ ಕ್ಷುಲ್ಲಕ ವಿಷಯಗಳನ್ನು, ಅಷ್ಟೇ ಬೇಜವಾಬ್ದಾರಿಯಿಂದ, ಮಕ್ಕಳನ್ನು under estimate ಮಾಡಿ, ಮನರಂಜನೆ ಹೆಸರಿನಲ್ಲಿ 'ಅಭಿರುಚಿರಹಿತ' ನಾಟಕಗಳನ್ನು ಮಾಡಿಸುವ ಮಹಾನುಭಾವರು.

ಅತಿ ಅಥವಾ ವೈಭವಾತಿರೇಕದ ದೃಶ್ಯಗಳು, ಅರ್ಭಟದ ಸಂಗೀತ, ಮ್ಯಾಜಿಕ್, ಲೈಟ್ ಮುಂತಾದವುಗಳಲ್ಲಿ ವಸ್ತುವಿನ ಸೂಕ್ಷ್ಮತೆ ಕಾಣದ ಹಾಗೆ ನಾಟಕ ಮಾಡಿಸೋದು.

ನಾನು ನನ್ನ ನಾಟಕಗಳ ಆಕಾರವನ್ನು ನಿರ್ಮಿಸುವಾಗ ಈ ಎರಡೂ ಬಗೆಯನ್ನು ಬಿಟ್ಟು , ವಸ್ತು ಎಷ್ಟೇ ಸೂಕ್ಷ್ಮವಾದದ್ದಾದರೂ ಅದನ್ನು ಸರಳಗೊಳಿಸಿ ಸಂಗೀತ, ಹಾಸ್ಯ, ನೃತ್ಯಗಳ ಮೊರೆ ಹೋಗಿ ಅವುಗಳಿಂದಲೇ ಅನಾವರಿಸಿ, ನಾಟಕದ ತುದಿಯಲ್ಲಿ ಕ್ಷಣಕಾಲ

ಇಲ್ಲಿ ಬೇರೇನೋ ಇದೆ ಎನ್ನುವ ಹಾಗೆ ಮಾಡಲು ಪ್ರಯತ್ನಪಿಡುತ್ತೇನೆ. ಹಾಗೆ ಕೆಲವೊಮ್ಮೆ ತೀರಾ ತೆಳುವಾದ ನಾಟಕವೊಂದನ್ನು ನಾಟಕ, ನೃತ್ಯ, ವಾದ್ಯ ಸಂಗೀತ, ಚಟಪಟನೆ ಮಾತಿನ ಮಂಟಪದ ಮೂಲಕ ಕಟ್ಟಿ , ನಾಟಕಕಾರ ಹೇಳಿಲ್ಲದ ಅನೇಕ ವಿಷಯಗಳನ್ನು ನನ್ನದೇ ಅಭಿಪ್ರಾಯಗಳನ್ನು ಮಕ್ಕಳ ಕೈಲಿ ಆಡಿಸಿ ಸಮಾಧಾನ ಪಟ್ಟುಕೊಂಡಿದ್ದೇನೆ.

ಮಕ್ಕಳ ನಾಟಕ ಮಾಡಿಸುವಾಗ ಬಹಳ ಸಾರಿ ಮೂಲ ಪಠ್ಯವನ್ನು ಪೂರ್ಣವಾಗಿ, ಚಾಚೂ ತಪ್ಪದಂತೆ ಅನುಸರಿಸಲು ಸಾಧ್ಯವೇ ಆಗದು. ಅಲ್ಲಲ್ಲಿ ಬದಲಾಯಿಸಿ 'ರಂಗಕೃತಿ'ಯೊಂದನ್ನು ಸೃಷ್ಟಿಸಿಕೊಳ್ಳುವುದು ಅನಿವಾರ್ಯ. ತುಂಬ ಮುಖ್ಯವಾದದ್ದು ತಂಡವನ್ನು ನೋಡಿಯೇ ನಾಟಕವನ್ನು ನಿರ್ಧರಿಸೋದು. ನಾನು ನಾಗಮಂಗಲದ ತಂಡವಾದರೆ ಆರಿಸಿಕೊಳ್ಳುವ ನಾಟಕವೇ ಬೇರೆ, ಮಂಡ್ಯದ ಮಣ್ಣಿಗೆ ಬೇರೆ, ಉಡುಪಿಗಾದರೆ ಬೇರೆ, ನಮ್ಮ 'ನಟನ'ದ ಮಕ್ಕಳಿಗಾದರೆ ಬೇರೆಯೇ. ಆ ಊರಿನ, ಪರಿಸರದ ಮತ್ತು ಬದಲಾಗುತ್ತಿರುವ ಸನ್ನಿವೇಶಕ್ಕೆ ಪೂರಕವಾಗಿ, ಆ ಮಕ್ಕಳ ಅಭಿರುಚಿ, ಪೋಷಕರ ಆಸಕ್ತಿ , ಅಲ್ಲಿನ ಜನಸಮುದಾಯದ ಒಟ್ಟು ಧೋರಣೆ, ಸ್ಥಳೀಯ ಸಂಪನ್ಮೂಲದ ಸಾಧ್ಯತೆ, ಮಿತಿ ಈ ಎಲ್ಲವನ್ನು ಗಮನದಲ್ಲಿಟ್ಟುಕೊಂಡೇ ನಾಟಕವನ್ನು ಆರಿಸಿಕೊಳ್ಳಬೇಕಾಗುತ್ತದೆ. ಪಾಂಡವಪುರದ ಪಕ್ಕ ಚೆಲುವರಸನಕೊಪ್ಪಲಿನಲ್ಲಿ, ನಾಟಕವನ್ನೇ ಕಂಡಿರದ ಸರ್ಕಾರಿ ಶಾಲೆ ಮಕ್ಕಳಿಗೆ ಬೆಕೆಟ್‌ನ 'ಗಾಡೋ' ನಾಟಕವನ್ನು ಮಾಡಿಸುವ ಮುಠ್ಠಾಳತನಕ್ಕೆ ನಾನು ಕೈ ಹಚ್ಚೋದಿಲ್ಲ. ನಾಟಕ ಆಯ್ಕೆಯಲ್ಲಿ ತುಂಬಾ ಎಚ್ಚರ ವಹಿಸಿದರೇ ಮತ್ತು ಆರಿಸಿಕೊಂಡ ನಾಟಕದಲ್ಲಿ ತುಂಬಾ ಶಕ್ತಿ ಇದ್ದರೆ ನಾವು ಅರ್ಧ ಗೆದ್ದಂತೆ! ಇವತ್ತಿಗೂ ಹೊಸ ನಾಟಕದ ಕೊರತೆ ಇದೆ ಎನ್ನುವುದು ಹೌದಾದರೂ ಅರ್ಧ ಸತ್ಯ.

ಹಾಗೆಂದ ಮಾತ್ರಕ್ಕೆ ಮಕ್ಕಳ ನಾಟಕವೆಂದರೆ ಗಂಭೀರ ವಿಷಯಗಳನ್ನು ಚರ್ಚಿಸಬಾರದೆಂದಿಲ್ಲ, ಆದರೆ ಹೇಳುವಾಗ ಸರಳವಾಗಿ, ಲವಲವಿಕೆಯಿಂದ ಹೇಳಿದರೆ ಮಕ್ಕಳು ಮತ್ತೆ ನಾಟಕಕ್ಕೆ ಬರ್‍ತಾವೆ ಅನ್ನೋದು ನನ್ನ ಅಭಿಪ್ರಾಯ.

ಮಕ್ಕಳ ನಾಟಕ ಕಲಿಸುವ ಮುನ್ನ ಅವರ ನಿತ್ಯದ ಬದುಕಿನ ಚಲನವಲನಗಳನ್ನು ಗಮನದಲ್ಲಿಟ್ಟುಕೊಂಡು ಅವರು ಹೀಗಿರೋದ್ರಿಂದ ಅವರು ಈ ರೀತಿ ಪಾತ್ರಗಳನ್ನು ಅಭಿನಯಿಸಬಲ್ಲರು ಅನ್ನೋ ಭ್ರಮೆ ಬೇಡ ! ದಿನನಿತ್ಯ ಪಟಪಟನೆ ಮಾತನಾಡುವ ಹುಡುಗಿ ರಂಗದಲ್ಲಿ ಗರ ಬಡಿದವಳಂತೆ ನಿಂತು, ತುಂಬ ಮೃದು ಹುಡುಗನೊಬ್ಬ ನಾಟಕದ ಹೊತ್ತಿಗೆ ಲೀಲಾಜಾಲವಾಗಿ ಅಭಿನಯಿಸುವ ಪವಾಡಗಳನ್ನು ಕಣ್ಣಾರೆ ಕಂಡಿದ್ದೇನೆ. ಅವರೊಳಗೇ ಆ ಶಕ್ತಿ ಇರುತ್ತದೆ. ನಾವು ಅದಕ್ಕೆ ಕೊಂಚ ಇಂಬು ಕೊಟ್ಟರೆ ಸಾಕಷ್ಟೇ. ಕೆಲವೊಬ್ಬರು ಬೇಗ, ಮತ್ತೆ ಕೆಲವರು ಸ್ವಲ್ಪ ತಡ ಆದರೆ ಪ್ರತೀ ಮಗುವು Improve ಆಗೇ ಆಗುತ್ತದೆ. ಹಾಗೇ Improve ಆಗದ ಮಗುವೇನಾದರೂ ಇದ್ದರೆ ಅದು ಪೋಷಕರು ಮತ್ತು ಶಿಕ್ಷಕರ ದೆಸೆಯಿಂದ ಅಂತ ನನ್ನ ನಂಬಿಕೆ !

ತಾಲೀಮಿನಲ್ಲಿ ಎರಡು ಅಂಶವನ್ನು ಖಂಡಿತ ಗಮನಿಸಿಕೊಳ್ಳುತ್ತೇನೆ. ತಾಲೀಮಿನಲ್ಲಿ ಮಕ್ಕಳು ಪೂರ್ಣ ತೊಡಗಿಕೊಳ್ಳುವ ಹಾಗೇ ಮಾಡುವುದು, ಆ ಪ್ರಕ್ರಿಯೆಯೇ ಅತ್ಯಂತ ಮುಖ್ಯವಾದದ್ದು ಮತ್ತು ರಂಗಾಟಗಳ ಮೂಲಕವೇ ತಾಲೀಮಿನ ತಾಜಾತನವನ್ನು ಕಾಯ್ದಿಡುವುದು.

ನಾಟಕ ಪೌರಾಣಿಕವಾದರೂ ಆಧುನಿಕ ಪ್ರಜ್ಞೆಯನ್ನು ಸಂವಹಿಸುವ ಜಾಣ್ಮೆ ನಿರ್ದೇಶಕನಿಗಿದ್ದರೆ ಮೂಲತಃ ಪ್ರಗತಿಪರ ಚಿಂತನೆಗಳನ್ನಿಷ್ಟಪಡುವರಾದರೆ, ಎಂಥ ನಾಟಕಗಳಲ್ಲೂ ವಿಚಾರಗಳನ್ನು ಹೇಳಲು ಬರುತ್ತದೆ. ಹೇಳುವ ರೀತಿ ಹಿತವಾಗಿರಬೇಕಾಗುತ್ತದೆ ಅಷ್ಟೆ. ಮೈಸೂರಿನ ರಾಮಕೃಷ್ಣಾಶ್ರಮದ ಶಾಲೆಯಲ್ಲಿ ಅಪ್ಪಟ ಸಂಪ್ರದಾಯಸ್ಥ ನಿರ್ದೇಶಕಮಾಸ್ತರ ಪುಟ್ಟ ಮಕ್ಕಳಿಗೆ ಭೂಮಿ ಕಲುಷಿತಗೊಳ್ಳುತ್ತಿರುವ ಅಪಾಯದ ಬಗ್ಗೆ ತುಂಬಾ ಅಚ್ಚುಕಟ್ಟಾದ ವೈಚಾರಿಕ ನಾಟಕವನ್ನು ವಾರ್ಷಿಕೋತ್ಸವಕ್ಕೆ ನೀಡಿದ್ದ. ಎಲ್ಲರೂ ಬರೀ 'ಘೋಷಣೆ' ಅನ್ನಿಸದೇ 'ಅನುಭವ'ವಾಗುವ ಹಾಗೇ ಮಾಡುವುದು ನಿಜವಾದ ಕಲಾತ್ಮಕತೆ ಅಂತಾ ಭಾವಿಸ್ತೇನೆ.

ಮಕ್ಕಳಲ್ಲಿನ ಹಿಂಜರಿಕೆ, ಮುಖೇಡಿತನವನ್ನು ಕಳಚುವ ಸಂದರ್ಭದಲ್ಲಿ , ಅವರ ನಾಚಿಕೆ-ಸಂಕೋಚಗಳೆಂಬ ಭಾವವೂ ಓಡಿಹೋಗುವ ಹಾಗೆ ನೋಡಿಕೊಳ್ಳಬೇಕು. ಮೊದಲ ದಿನ ರಿಹರ್ಸಲ್‌ಗೆ ಬರಲು ಅಳುವ ಬಾಲಕ ನಾಟಕ ಮುಗಿದ ಘಳಿಗೆ ನಿಮ್ಮ ಕುತ್ತಿಗೆಗೂ ಕೈ ಹಾಕಬಾರದಲ್ಲಾ !? ಎಲ್ಲ ಪ್ರೀತಿ ಕೊಡುತ್ತಲೇ ರಂಗಶಿಸ್ತನ್ನೂ ರೂಢಿ ಮಾಡುತ್ತಾ ಹೋಗಬೇಕು.

ನನ್ನ ಶಿಬಿರಗಳ - ನಾಟಕ ತಯಾರಿಯಲ್ಲಿ concept and preparation, - ತಮಾಷೆ , ನಾಟಕಗಳಲ್ಲಿ ಹಾಸ್ಯ, ಮಾತಿನ ಚಟಪಟಿ ಮತ್ತು ಅಭಿನಯ ಕೇಂದ್ರವೇ ನನ್ನ ಹೂರಣ. ಒಬ್ಬೊಬ್ಬರದು ಒಂದೊಂದು ಶೈಲಿ. ನನ್ನ ಗೆಳೆಯರೇ ಇದ್ದಾರೆ, ಅದೆಂತಹ ಸೆಟ್ ಹಾಕ್ತಾನೆ ಎಂದರೆ ಮಕ್ಕಳ ನಾಟಕವಾದರೂ ಒಂದೂವರೆ ಲಕ್ಷ ಸೆಟ್‌ಗೆ ಖರ್ಚಾಗಿರುತ್ತೆ. ಆ ಉಡುಪು, ಆ ಸಂಗೀತ, ಅಬ್ಬಬ್ಬಾ - ನನಗೆ ಅವರ ಬಗ್ಗೆ ಮಿಶ್ರ ಭಾವ - ಮಕ್ಕಳ ನಾಟಕಕ್ಕೆ ಅಷ್ಟೊಂದು ದುಡ್ಡು ಹುಟ್ಟಿಸ್ತಾರಲ್ಲ ಅನ್ನುವ ಅಚ್ಚರಿ !

ರಂಗಭೂಮಿಯ ಸರಳತೆಯೇ ಅದರ ಸೌಂದರ್ಯ ಅನ್ನೋದನ್ನ ನಂಬಿಕೊಂಡವನು ನಾನು. ಹಾಗಂತ ತೀರಾ ಖಾಲಿಯಾಗೂ ಇರೋದಿಲ್ಲ. ವಸ್ತುವಿಗೆ ತಕ್ಕ ಹಾಗೆ ರಂಗಸಜ್ಜಿಕೆ, ಪರಿಕರ, ಸಂಗೀತ, ಉಡುಪು, ಬೆಳಕು ಎಲ್ಲ ವಿಭಾಗಗಳಲ್ಲೂ ಕೊಂಚ ರಂಗುರಂಗಾಗಿಯೇ ಇಡುವ ಪ್ರಯತ್ನ ಮಾಡ್ತೇನೆ. ಆದರೆ ಗಾಡಿ ಮಾಡೋದಿಲ್ಲ. ಅವಶ್ಯಕತೆಗಿಂತ ಜಾಸ್ತಿ ಬಣ್ಣ ತುಂಬೋದು ಕೂಡ ಮಕ್ಕಳಲ್ಲಿ ಅಭಿರುಚಿ ಕೆಡಿಸುತ್ತಾ ಹೋಗುವುದನ್ನು ಕಂಡಿದ್ದೇನೆ.

ತಮಾಷೆ, ಮಕ್ಕಳ ಲವಲವಿಕೆ, ಚೂಟಿತನದ ಮೂಲಕ ನಾಟಕ ನೋಡುವ ನನಗೆ ಮಿಕ್ಕವರ ಶೈಲಿ-ಆಕಾರಗಳೂ ಪ್ರಿಯವಾಗಬಾರದೆಂದಿಲ್ಲ. ದೈಹಿಕ ಕಸರತ್ತಿನ, ವಿಶಿಷ್ಟ ದೇಹ ಭಾಷೆಯ ಮೂಲಕ ನಾಟಕ ಕಟ್ಟುವ ಗುರು ಇಕ್ಬಾಲ್ ಸರ್, ಯಕ್ಷಗಾನದಂತ ಪ್ರಕಾರವನ್ನೂ ದುಡಿಸಿಕೊಳ್ಳೋ ಕವಾತ್ತಾರ್, ಅದರೊಟ್ಟಿಗೆ ಮ್ಯಾಜಿಕ್‌ನ್ನು ಬೆರೆಸಿ ವಿಸ್ಮಯ ಮೂಡಿಸುವ ಜೀವನ್‌ರಾಂ, ಸಾಹಿತ್ಯ ದೃಷ್ಟಿಯ ಪ್ರಬಲವಾದಿ ಡಾ॥ ಎಸ್.ವಿ. ಕಶ್ಯಪ್, ತಲ್ಲಣಗಳನ್ನೂ ಕುಣಿಸುತ್ತಾ ಹೇಳುವ ಕೋಟಗಾನಹಳ್ಳಿ, ಮಕ್ಕಳ ನಾಟಕವೆಂದರೇ ಸೆಟ್, ಪ್ರಾಪರ್ಟಿ, ಮುಖವಾಡ ಎನ್ನುವ ಮಾಲತೇಶ, ವೈಭವ ಅನ್ನುವ ಪ್ರೇಮಾ ಮೇಡಂ - ಹೀಗೆ ಒಬ್ಬೊಬ್ಬರದೂ ಒಂದೊಂದು ಬಗೆ. ಅವರ ಹಿನ್ನೆಲೆ, ಪರಿಸರ, ರೂಢಿಸಿಕೊಂಡದ್ದು ಎಲ್ಲವೂ ಅವರ ದೃಷ್ಟಿಯೇ.

ಮಕ್ಕಳ ನಾಟಕದಲ್ಲಿ ನೀತಿ ಬೇಡವೇ ಅಂತ ಪ್ರಶ್ನೆ. ನೀತಿಯೋ, ಸಂದೇಶವೋ, ಕಥೆಯೊಳಗೇ ಮಿಳಿತವಾಗಿದ್ದರೇ ಚೆಂದ. ನೀತಿಗಾಗಿಯೇ ನಾಟಕವಾದರೆ, ನನ್ನ ಅನೇಕ ಬುದ್ಧಿಜೀವಿ 'ಸೆಮಿನಾರ್ ಖಾಯಂ' ನಿರ್ದೇಶಕರು ಆಡಿಸುವ ಮಕ್ಕಳ ನಾಟಕಗಳಂತೆ- ನೀರಸವಾಗಿಬಿಡುತ್ತದೆ.

ಸಣ್ಣದೊಂದು ಅನುಭವ ಹೇಳಿಬಿಡ್ತೇನೆ :

ನಮ್ಮ ಮಕ್ಕಳ 'ನಾಯಿತಿಪ್ಪ' ಬುದ್ಧಿವಂತರ ನಾಡಿನ ರಂಗ ಅಧ್ಯಯನ ಕೇಂದ್ರವೊಂದರಲ್ಲಿ ಪ್ರದರ್ಶನ ನೀಡಿದಾಗ ಪ್ರೇಕ್ಷಕರು, ಪೋಷಕರು, ಮಕ್ಕಳು ಅಪಾರ ಸಂಭ್ರಮಿಸಿದರು. ನಂತರ ವಿದ್ಯಾರ್ಥಿಗಳು ನನ್ನ ಜೊತೆ ಸಂವಾದದಲ್ಲಿ ಸೆಟೆದುಕೊಂಡು ಕುಳಿತಿದ್ದರು. ಯಾಕಪ್ಪ ಅಂದೆ, ನಿಧಾನವಾಗಿ ಒಬ್ಬ 'ಸಾರ್ ನಮಗೆ ಹೇಳ್ಕೊಟ್ಟಿದ್ದಾರೆ, ಮಕ್ಕಳ ನಾಟಕ ಅಂದ್ರೆ ಮಕ್ಕಳು ಅಭಿನಯಿಸಬಾರದು, ಅವರಿಗೆ ಅರಿವಿರೋದಿಲ್ಲ - ದೊಡ್ಡವರು ಮಕ್ಕಳಿಗಾಗಿ ಮಾಡೋ ನಾಟ್ಕವೇ ಮಕ್ಕಳ ನಾಟ್ಕ' ಅಂದ. ಅಯ್ಯಪ್ಪಾ ! ಅಂದ್ಕೊಂಡೆ. ನಾನು ಹೇಳಿದೆ, 'ಗೆಳೆಯ, ನಿಮಗೆ ತಪ್ಪು ಮಾಹಿತಿ ನೀಡಿದ್ದಾರೆ. ಅದೂ ನಾಟಕವೇ - ಒಂದು ಶೈಲಿ. ಆದರೆ ಮಕ್ಕಳ ನಾಟಕ ಮಕ್ಕಳು ಮಾಡೋದು ತಪ್ಪಲ್ಲ' ಅಂತಾ ಅವರಿಗೆ ತಿಳಿಸಿ ಹೇಳೋವಲ್ಲಿ ಸಾಕೋ ಬೇಕಾಯಿತು !

ಮಕ್ಕಳ ನಾಟಕಗಳನ್ನೂ ದೊಡ್ಡವರೇ ಅಭಿನಯಿಸುವಾಗ ವಸ್ತುವನ್ನು ಮಂಡಿಸುವಾಗ ಶೈಲಿಯಲ್ಲಿ ಹೆಚ್ಚು ಎಚ್ಚರ ವಹಿಸಬೇಕು. ನಟರು ತುಂಬಾ ಕೌಶಲ್ಯಪೂರ್ಣವಾಗಿರಲೇಬೇಕು. ಮಕ್ಕಳನ್ನು ನಂಬಿಸುವುದು ಮೇಲ್ನೋಟಕ್ಕೆ ಸುಲಭವಾಗಿ ಕಂಡರೂ, ಮಕ್ಕಳ ಅನುಮಾನಗಳನ್ನು ಬಗೆಹರಿಸುವುದೂ ಕೆಲವೊಮ್ಮೆ ಕಷ್ಟವೂ ಆಗಿಬಿಡುತ್ತದೆ.

ಮಕ್ಕಳ ನಾಟಕಗಳನ್ನು ಕಟ್ಟುವಾಗ ಮಕ್ಕಳಲ್ಲಿ ಆಶುವಿಸ್ತರಣೆಯ ಮೂಲಕ ಸನ್ನಿವೇಶ ಸೃಷ್ಟಿಸುವುದು, ಪಾತ್ರ ಅರ್ಥೈಸುವಂತೆ ಮಾಡುವುದು ಹೆಚ್ಚು ಸೂಕ್ತ. ನೀವು ಆಯ್ದುಕೊಂಡ

ನಾಟಕವನ್ನು ಪಕ್ಕದಲ್ಲಿಟ್ಟು - ಮಕ್ಕಳಿಗಾಗಿ ಸರಳವಾಗಿ ಅದೇ ಕಥೆ ಹೇಳಿ ತಂಡಗಳನ್ನು ರಚಿಸಿ ಅವರಿಗೇ ಬಿಡಿ. ಆಮೇಲೆ ಪಾತ್ರ ಹಂಚುವುದು ನಿರ್ದೇಶಕನಿಗೂ ಸುಲಭವಾಗುತ್ತದೆ. ಮಕ್ಕಳ ಆಶು ವಿಸ್ತರಣೆ (improvisasion) ದಿಢೀರ್ ಸೃಷ್ಟಿ ಯಾವತ್ತೂ ಅದ್ಭುತವೇ. ಅದನ್ನೇ ಕೇಂದ್ರವಾಗಿಟ್ಟುಕೊಂಡು ನಾಟಕ ಕಟ್ಟಿದರೆ - ಭಯವಾಗಬಹುದು. ಆದರೆ, ಅವರ ಕಲ್ಪನೆಗಳನ್ನಾಧರಿಸಿಯೇ ಮುಂದುವರೆದರೆ ವಸ್ತುಕಥೆ, ಶೈಲಿ ಎಲ್ಲವೂ ಸೃಷ್ಟಿಯಾಗಿ ನಾವು-ನೀವು ಕಂಡಿರದ ಹೊಸ ಲೋಕ ಸೃಷ್ಟಿಯಾಗಿಬಿಡುತ್ತದೆ. ನಿರ್ದೇಶಕರು ಅತೀ ಬಿಗಿ ಇರಬಾರದು. ರಿಜಿಡ್ ಆದಷ್ಟು ಸಂಕಟವೇ. ಹುಡುಗ ಕೈ ಕೊಟ್ಟಾಗ ಪಕ್ಕದ ಹುಡುಗ ಸ್ವಲ್ಪಮಂದ ಆದರೂ ಪರವಾಗಿಲ್ಲ, ಅವನನ್ನು ಪ್ರೋತ್ಸಾಹಿಸಿ ನೋಡಿ, ಹಳಬನಿಗಿರದ ವಿಶಿಷ್ಟ ಪ್ರತಿಭೆಯೊಂದು ಇವನಲ್ಲಿ ಅಂತರ್ಗತವಾಗಿರುತ್ತದೆ. ಅದು ಫಕ್ಕನೆದ್ದು ನಾಟಕಕ್ಕೊಂದು ಮೆರುಗು ಬಂದುಬಿಡುತ್ತದೆ. ನಾನು ಈ ಬಗೆಯ 'ಕ್ಷಣದ ಸ್ಫುರಿತಕ್ಕೇ' ಹೆಚ್ಚು ತೆರೆದುಕೊಂಡಿರ್ತೇನೆ (ಎಲ್ಲ ಸಿದ್ಧತೆಗಳನ್ನು ಪಕ್ಕ ಮಾಡಿಕೊಟ್ಟುಕೊಂಡಿದ್ದಾಗಲೂ !).

ರಹಸ್ಯದ ಕಥೆಗಳನ್ನು ಭೂತ-ರಾಕ್ಷಸನ ಕಥೆಗಳನ್ನು ಚಮತ್ಕಾರಿಕ ತಂತ್ರಗಳಲ್ಲಿ ಮಕ್ಕಳಿಗೆ ಹೇಳುವಾಗ 'ಬ್ರೆಕ್ಟ್' ಶೈಲಿಯಲ್ಲಿ ಪ್ರದರ್ಶಿಸಿದರೆ ಒಳಿತು. ಇಲ್ಲದಿದ್ರೆ ಮನೆಯಲ್ಲೂ ಪ್ರಯೋಗ ಮಾಡಲು ಹೋಗಿ ಮಕ್ಕಳು ಎಡವಟ್ಟು ಮಾಡಿಕೊಳ್ಳುತ್ತವೆ. ಮಕ್ಕಳ ವಿಚಾರದಲ್ಲಿ ಅತೀ ನಿಗೂಢವೂ ಅಪಾಯವೇ. ಜಾನಪದ ಕಥೆಗಳ ವರ್ಣರಂಜಿತ್ವ, ಸಡಗರ ಇರಲಿ, ಮೂಢನಂಬಿಕೆಗಳು ನುಸುಳದಂತೆ ಜಾಗ್ರತೆ ವಹಿಸಬೇಕಷ್ಟೆ.

ಮಕ್ಕಳಿಗೆ ಪೂರ್ಣ ಮಾಡಿ ತೋರುವುದಕ್ಕಿಂತ ವರ್ಣಿಸಿದರೆ ಸಾಕೆಂದು ಬಹಳ ಸುಲಭ ಅನ್ನಿಸಿದರೂ ಮೊದಲ ಬಾರಿ ರಂಗಕ್ಕೆ ಹತ್ತಿದ ಮಕ್ಕಳಾದರೆ ಒಂದೆರಡು ಬಾರಿ ಮಾಡಿ ತೋರಿಸಿದರೆ ಅನುಕೂಲ. ಕ್ರಮೇಣ ಅವುಗಳ ಶಕ್ತಿ ನಿಮಗರಿವಾಗುತ್ತಿದ್ದಂತೆ ಬರೀ ಪ್ರಚೋದಿಸಿದರೂ ಸಾಕು ಗರಿ ಬಿಚ್ಚಿ ಹಾರುತ್ತವೆ. ಎಂಥದ್ದೇ ಸಂದರ್ಭದಲ್ಲಿ ಪರಸ್ಪರ ಹೋಲಿಸಲೇಬಾರದು. ಬಹುಬೇಗ ಕುಗ್ಗಿಬಿಡುತ್ತವೆ. ಆರಂಭದಲ್ಲೇ ಅವರ ಕೀಳರಿಮೆ ತೊಡೆದರೆ ಅರ್ಧ ಗೆದ್ದಂತೆ ! ಶಾಲೆ ವಾರ್ಷಿಕೋತ್ಸವಗಳಲ್ಲಿ, ಸ್ಪರ್ಧೆಗಳಲ್ಲಿ, ಉತ್ಸವಗಳಲ್ಲಿ, ಗಣಪತಿ ಪೆಂಡಾಲ್, ರಾಜ್ಯೋತ್ಸವ, ಎನ್.ಎಸ್.ಡಿ. ಉತ್ಸವಗಳು, ಕೊನೆಗೆ ಪ್ರತಿಷ್ಠಿತ ದೆಹಲಿಯ ಜಶ್ನೇ ಬಚ್‌ಪನ್ ಉತ್ಸವಗಳಲ್ಲಿ, ಬೇರೆ ಬೇರೆ ಸಮಯದಲ್ಲಿ ನಾಟಕ ತಯಾರಾಗಬೇಕಾದುದರಿಂದ ಸಂದರ್ಭಕ್ಕೆ ತಕ್ಕಂತೆ ಕುತೂಹಲ ಕಾಯ್ದುಕೊಳ್ಳುವ ಮಕ್ಕಳ ಮುಗ್ಧತೆಯನ್ನುಳಿಸಿಕೊಂಡು ಹೋಗುವ ಹಾಗೇ ನಾಟಕದ ಆಕಾರವನ್ನು ರೂಪಿಸಿಕೊಳ್ಳಬೇಕಾಗುತ್ತದೆ.

ರಾಷ್ಟ್ರೀಯತೆ, ಪರಿಸರ ಕಾಳಜಿ ಕುರಿತ ವಸ್ತುಗಳು ನಿಮಗೆ

ತೊಂದರೆಯಾಗಲಾರವು. ಜಾಗತೀಕರಣ, ವರ್ಣಭೇದ, ಲಿಂಗ ತಾರತಮ್ಯ, ಜಾತೀಯತೆ ಕುರಿತಾದ ವಸ್ತುಗಳನ್ನು ಮಕ್ಕಳಿಂದಲೇ ಹೇಳಿಸುವಾಗ ನಾವು ಹೆಚ್ಚು ಸ್ಪಷ್ಟವಾಗಿರಬೇಕಾಗುತ್ತದೆ. ಮಕ್ಕಳೆಸೆವ ಪ್ರಶ್ನೆಗೆ ಸಮರ್ಥನೆ ಇಲ್ಲದೇ ಮುಂದೆ ಸಾಗಲು ಆಗುವುದಿಲ್ಲ.

ಮಕ್ಕಳ ನಾಟಕದಲ್ಲಿ ಇವೆಲ್ಲ ಯಾಕೆ ? ಅಂತಾ ಉಪೇಕ್ಷೆಯೂ ಬೇಡ. ಅವುಗಳಿಂದ ಆಗುವ ಅನಾಹುತವನ್ನು ಸರಳವಾಗಿ ಅರ್ಥೈಸಿಕೊಟ್ಟರೆ ದೊಡ್ಡವರು ನಾಚುವಂತೆ ಮಕ್ಕಳು ಅಭಿನಯಿಸಿ ತೋರಿಸುತ್ತವೆ. ನಂಬಿಕೆಯ ಆಟಗಳು (trusl games), ದೈಹಿಕ ಕಸರತ್ತುಗಳು, ನಾಲ್ಕು ಮಂತ್ರಗಳಾದ ಏಕಾಗ್ರತೆ, ಗ್ರಹಣಶಕ್ತಿ, ಸ್ಮರಣಶಕ್ತಿ ಮತ್ತು ಕಲ್ಪನೆಗೆ ಸಂಬಂಧಿಸಿದಂತೆ ಆಟಗಳನ್ನು ಆಡಿಸುತ್ತಾ ರಿಹರ್ಸಲ್‌ಗೆ ಬೇಕಾದ ಆವರಣವನ್ನು ನೀವು ಒಮ್ಮೆ ಸೃಷ್ಟಿ ಮಾಡಿಕೊಂಡರೆ ಅಲ್ಲಿಂದಾಚೆ ಲೀಲಾಜಾಲ. ಪಾತ್ರಧಾರಿ ಗಟ್ಟಿಯಾದರೆ, ಹಾಡುಗಾರ್ತಿ ಗಟ್ಟಿಯಾದರೆ, ಉಳಿದಂತೆ ಸಣ್ಣಪುಟ್ಟ ತಾಂತ್ರಿಕ ದೋಷಗಳು ಅಮುಖ್ಯ. ಎಲ್ಲ ಮರೆತೂ ಪ್ರೇಕ್ಷಕರೂ ಮಕ್ಕಳಾಗಿ ಬಿಟ್ಟ ಸಂದರ್ಭಗಳನೇಕವಿವೆ.

ಮಕ್ಕಳಿಗೆ ಅಭಿನಯ ಪಾಠ ಮಾಡುವಾಗ ಸಂವಹನ ಕೌಶಲದೊಡನೆ ಪ್ರತಿ ಚಲನೆಯ 'ಅರ್ಥ' ಮಾಡಿಸಿದರೆ ಸಾಕು, ಕಾನೂನಿನ ಅಗತ್ಯವಿಲ್ಲ. ಬರೀ ಅಭಿನಯ ಮಾತ್ರ ಮಾಡಿಸದೆ ರಂಗಸಜ್ಜಿಕೆಯ ವೈವಿಧ್ಯ, ವಾಸ್ತು, ಉಡುಪು, ಪರಿಕರ ಬಳಕೆ ಮತ್ತು ಬೆಳಕಿನ ಮಹತ್ವ, ಸಂಗೀತ, ಶಬ್ದಗಳ ಬಗ್ಗೆ ವಿವರಣೆ ಕೊಟ್ಟು ಅದರ ಕಡೆಗೆ ಮನವೊಲಿಸಬೇಕಿದೆ. ಪ್ರಸಾದನ ಕಲೆಯ ಅಭ್ಯಾಸದಲ್ಲಿ ಮನುಷ್ಯ ದೇಹರಚನೆ ಅಧ್ಯಯನ ಎಷ್ಟು ಮುಖ್ಯ (Body anatomy) ಅನ್ನೋದು ಗೊತ್ತಾದರೆ ಮತ್ತು ಎಲ್ಲಕ್ಕೂ ವೈಜ್ಞಾನಿಕವಾಗಿ ಮಕ್ಕಳಲ್ಲಿ ಪರಿಜ್ಞಾನ ಮೂಡಿಸಿದರೆ ನಾಟಕದ ಬಂಧ ಕಟ್ಟಲನುಕೂಲಕರ ಅಂದುಕೊಳ್ತೇನೆ.

ನಿಸ್ಸಂದೇಹವಾಗಿ ಮಕ್ಕಳಲ್ಲಿ ಪೂರ್ಣರಂಗಭೂಮಿಯ (Total theatre concept) ಪರಿಕಲ್ಪನೆಯನ್ನು ಬೋಧಿಸುವ ಅವಶ್ಯವಿದೆ. ಬೆಳೆಯುತ್ತಾ ನಟ-ನಟಿಯೊಂದಿಗೆ ನಾಟಕಕಾರ, ಸಂಗೀತಕಾರ, ವಿನ್ಯಾಸಕರು, ಒಬ್ಬ ಒಳ್ಳೇ ಮ್ಯಾನೇಜರ್‌ರನ್ನು ಸೃಷ್ಟಿಸುವ ಅಗತ್ಯವಿದೆ. ಅವರ ಪರಾವಲಂಬಿತನ (parasite) ಗುಣವನ್ನು ತಪ್ಪಿಸಬೇಕಾಗಿದೆ.

ಮಕ್ಕಳ ನಾಟಕ ಮಾಡಿಸೋದ್ರಿಂದ ಮತ್ತೊಂದು ಲಾಭ ಏನಂದ್ರೆ, ನೀವು ಒಬ್ಬ ಹುಡುಗನಿಗೆ ಪಾತ್ರ ಹಾಕಿಸಿದ್ರೆ ಅವರಮ್ಮ, ಅವನಪ್ಪ ಅಂತೂ ನಾಟ್ಕ ನೋಡಲು ಬರೋದು ಗ್ಯಾರಂಟಿ. ಅಕ್ಕನೋ ತಂಗಿಯೋ ಜತೇಲಿ ಇದ್ರೆ ಅವೂ ಬರ್ತಾವೆ. ತಮ್ಮ ಮಕ್ಕಳ ಪ್ರತಿಭೆ ಮೆರೆಯಿಸಲು ತಮ್ಮ ಅಕ್ಕಪಕ್ಕ ಮನೆಯವ್ರು, ನೆಂಟ್ರು ಇಷ್ಟರನ್ನು ಕೂಡ

ಕರೆತರುವ ಸಾಧ್ಯತೆಗಳಿರುತ್ತವೆ. ಹೀಗಾಗಿ ಒಂದು ಮಗುವಿನಿಂದ ಹತ್ತಾರು ಮಂದಿ ರಂಗಮಂದಿರದ ಕಡೆಗೆ ಬರುವ ಹಾಗಾಗುತ್ತೆ.

ಹತಕ್ಕೆ ಬಿದ್ದಾದರೂ ಪುನರ್ ಪ್ರದರ್ಶನಗಳು ಹೆಚ್ಚಾಗಬೇಕು. ತಪ್ಪುಗಳನ್ನು ತಿದ್ದಿಕೊಳ್ಳಲು, ಗೆಳೆಯರನ್ನು, ಸಹಪಾಠಿಗಳನ್ನು ಹೆಚ್ಚು ರಂಗಕ್ಕೆ ಸೆಳೆಯಲು, ಬೇರೆ ಬೇರೆ ಬಗೆಯ ಪ್ರೇಕ್ಷಕರಿಂದ ಪ್ರಯೋಗಕ್ಕೆ ಸಿಗುವ ತಾಜಾತನಕ್ಕೆ ಪುಟಾಣಿ ಕಲಾವಿದ/ಕಲಾವಿದೆ ತಮ್ಮ ಬದಲಾವಣೆ, ಬೆಳವಣಿಗೆಗಳನ್ನು ಗುರುತಿಸಿಕೊಳ್ಳಲು ಪುನರ್ ಪ್ರದರ್ಶನಗಳಾದರೆ ಹೆಚ್ಚು ಅನುಕೂಲವಾಗುತ್ತದೆ. ನಮ್ಮ 'ಅಲೀಬಾಬಾ' 65 ಶೋ ಆದರೆ, 'ತುಂಟ ರಾಬಿನ್' 70 ಪ್ರದರ್ಶನ ಕಂಡಿದೆ, 'ನಾಯಿತಿಪ್ಪ' 50 ದಾಟಿದರೆ, 'ರತ್ನಪಕ್ಷಿ' 48 ಮುಗಿಸಿದೆ. 'ಸತ್ರೆ ಅಂದ್ರೆ ಸತ್ರಾ ?' ಒಂದೇ ವರ್ಷಕ್ಕೆ 26 ಪ್ರದರ್ಶನ ಕಂಡು ಮುನ್ನುಗ್ಗುತ್ತಿದೆ. ಪ್ರದರ್ಶನದಿಂದ ಪ್ರದರ್ಶನಕ್ಕೆ ಮಕ್ಕಳ ನಟನ ಕೌಶಲ್ಯ, ತಂತ್ರಜ್ಞ ಗುಣದ ಬೆಳವಣಿಗೆಯನ್ನು, ಬದಲಾವಣೆಯನ್ನು ಕಂಡು ವಿಸ್ಮಿತನಾಗಿದ್ದೇನೆ. ಮೂಲೆಯಲ್ಲಿ ಮುದುಡಿ ನಿಲ್ಲುವ ಮಗುವೊಂದು ಮುಖ್ಯಪಾತ್ರ ಮಾಡಿ ಸಂಭ್ರಮಿಸುವ ಘಳಿಗೆ ಸೃಷ್ಟಿಯಾಗುವುದು ಪುನರ್ ಪ್ರದರ್ಶನಗಳಿಂದ ಸಾಧ್ಯ.

ವಾರಗಟ್ಟಲೆ, ತಿಂಗಳುಗಟ್ಟಲೆ ಅನಿವಾರ್ಯವಾಗಿ ನೀವು ಮಕ್ಕಳ ನಾಟಕ ಮಾಡಿಸುವಾಗ ಈ ಎಳವೆಯಲ್ಲೇ ಅವಕ್ಕೆ ಕನ್ನಡ ಗಾದೆಗಳು, ಒಗಟುಗಳು, ನುಡಿಗಟ್ಟುಗಳು, ಸಾಹಿತ್ಯದ ಪರಿಚಯದ ಮೂಲಕ ಕನ್ನಡ ಭಾಷೆ, ಪರಂಪರೆಯ ಅಭ್ಯಾಸವೂ ಆಗುತ್ತದೆ. ಎಲ್ಲ ಶಾಲೆಗಳಲ್ಲಿ (ಕಾನ್ವೆಂಟ್ ಸೇರಿ) ಸಮಾರಂಭಕ್ಕೆ ಒಂದಾದರೂ ಕನ್ನಡ ನಾಟಕ ಇರ್ಲೇಬೇಕೂಂತ ಸರ್ಕಾರಿ ಆಜ್ಞೆ ಹೊರಬಿದ್ರೆ ಆರಂಭದಲ್ಲಿ ಭಯಕ್ಕೆ , ಆಮೇಲೆ ಚಟವಾಗಿ, ಮತ್ತೆ ಪ್ರೀತಿಯಿಂದ ನಾಟಕ ಬೆಳೆಯುತ್ತೆ. ಕಡ್ಡಾಯ ನಾಟಕ ಕಲಿಕೆಗೆ 'ಪೀರಿಯಡ್' ಇದ್ದರೆ ಇನ್ನೂ ಚಂದವೇ.

ನಾಟಕದ ಕಾರಣಕ್ಕಾಗಿಯಾದರೂ ಮಕ್ಕಳು ಒಂದೆಡೆ ಸೇರ್ತಾರಲ್ಲಾ, ಸಂಘಟನಾತ್ಮಕವಾಗಿ ಬದುಕುವ ಕಲೆಯನ್ನು ಮತ್ತು ಸಹಿಷ್ಣುತೆಯನ್ನು ಬೆಳೆಸಿಕೊಳ್ಳುವತ್ತ ಸಾಗ್ತಾರಲ್ಲಾ ಎನ್ನುವ ಸಮಾಧಾನವೂ ನನಗಿದೆ. ಸಕಾರಾತ್ಮಕ ಮನೋಭಾವ ರೂಪಿಸಲು ಸಾಧ್ಯವಾಗಿದ್ದು ಸ್ವತಃ ಅನುಭವವಾಗಿದೆ.

ಅವಕಾಶವಾದಾಗಲೆಲ್ಲಾ ಮಕ್ಕಳ ನಾಟಕವನ್ನು ಬೇರೆ ಬೇರೆ ವಯೋಮಾನದ, ಬೇರೆ ಬೇರೆ ಸಂಸ್ಕೃತಿಯ ಹಿನ್ನೆಲೆ, ಬಣ್ಣ, ಜಾತಿ, ಧರ್ಮ ಮತ್ತು ಬೇರೆ ಬೇರೆ ಕಸುಬಿನಲ್ಲಿರುವವರ ಮಕ್ಕಳನ್ನು ಸೇರಿಸಿ ನಾಟಕ ಕಲಿಸಿದರೆ ನಾಟಕ ಕಲಿಕೆಯ ಪ್ರಕ್ರಿಯೆ ಹೆಚ್ಚು ಧ್ವನಿಪೂರ್ಣವಾಗಿದ್ದನ್ನು ನನ್ನ ಅನುಭವದಿಂದ ಕಂಡುಕೊಂಡಿದ್ದೇನೆ. ರಜೆಯಲ್ಲಾಗುವ ಬೇಸಿಗೆ ಶಿಬಿರದಲ್ಲಿ ಇನ್ನೂ ಒಂದು ಹೆಜ್ಜೆ ಸಾಗಿ ಒಂದಷ್ಟು ಅನಾಥಾಶ್ರಮದ ಮಕ್ಕಳು, ಖೈದಿಗಳ ಮಕ್ಕಳು, ಕೊಳೆಗೇರಿಯ ಮಕ್ಕಳು, ವಿಶೇಷ

ಮಕ್ಕಳು, ವಿಕಲಚೇತನ ಪುಟಾಣಿಗಳು, ಬಾಲಾಪರಾಧಿ ಗೃಹ (Remand Home)ನಿಂದ ಕರೆತಂದವರನ್ನೂ ಸಾಮಾನ್ಯ ಮಕ್ಕಳೊಂದಿಗೆ ಮುಖ್ಯವಾಹಿನಿಯಲ್ಲಿ ತೊಡಗಿಸಿ ಕೊಂಚ ತಾಳ್ಮೆ ವಹಿಸಿ, ಗಮನಿಸಿದರೆ ವಿಶಿಷ್ಟ ರೂಪಕಗಳೇ ಸೃಷ್ಟಿಯಾಗಿಬಿಡುತ್ತವೆ.

ಅವರ ವರ್ತನೆ, ಸಂಕಟ, ಕಲಿಕೆ, ಸಂಭ್ರಮ ಎಲ್ಲವನ್ನು ಕಂಡಿದ್ದೇನೆ. ಕೆಲ ಐಟಿ-ಬಿಟಿ ಪೋಷಕರು ಮುನಿಸಿಕೊಂಡು ಹೋಗಿದ್ದು ಹೌದಾದರೂ - ಪ್ರಯೋಗಕ್ಕೆ ಹೊಸ ಝಲಕ್ ಮೂಡಿದ್ದು ಅಕ್ಷರಶಃ ಸತ್ಯ.

ಶಾಲಾಮಕ್ಕಳಿಗೆ ಪ್ರವಾಸ ಎಂದೊಡನೆ ತಿರುಪತಿ, ಧರ್ಮಸ್ಥಳ, ಜಿಆರ್‌ಎಸ್ ಪಾರ್ಕ್, ವಂಡರ್‌ಲಾಗೆ ಸಾಗುವ ಮಂದಿಗೆ ನನ್ನದೊಂದು ಮನವಿ ; ಆಗೀಗ ಹೆಗ್ಗೋಡಿಗೆ, ಆದಿಮಕ್ಕೆ, ಸುಳ್ಯದ ರಂಗಮನೆಗೆ, ರಂಗಾಯಣಕ್ಕೆ ಕರೆದೊಯ್ದು ಅಲ್ಲಿನ ಚಟುವಟಿಕೆ ಗಮನಿಸಲು ಹೇಳಿ ! ಮಕ್ಕಳ ಅಭಿರುಚಿ ಮತ್ತಷ್ಟು ಮಧುರವಾಗದಿದ್ದರೇ ನೋಡಿ !

ಮಕ್ಕಳ ರಂಗ ಪ್ರವಾಸದ ಪ್ರಯಾಸ ನಾನು ಬಲ್ಲೆ! ಆದರೆ ಪ್ರಯಾಣ, ಪರಿಸರ, ಪ್ರತೀ ಊರಿನ ಪ್ರೇಕ್ಷಕರೆದುರು ಮಕ್ಕಳು ಅರಳಿಕೊಳ್ಳುತ್ತಾವೆನ್ನುವುದೂ ಅಷ್ಟೇ ಸತ್ಯ !

ಅಕಸ್ಮಾತ್ ದೇಶಪ್ರೇಮದ ಬಗ್ಗೆಯೋ, ಗಾಂಧಿತಾತನ, ನಚಿಕೇತನನ ಬಗ್ಗೆಯೋ ಮಕ್ಕಳು ನಾಟಕ ಮಾಡುತ್ತೇವೆಂದು ಹೊರಟರೆ, ಮಾಡಲಿ ಬಿಡಿ - ಸಾಮಾಜಿಕ ಸಮಸ್ಯೆ, ಬಡತನ, ತಾರತಮ್ಯ, ಸಮಸ್ಯೆಗಳ ಕುರಿತು ಮಾಡ್ತೀವಂದ್ರೂ ಮಾಡಲಿ, ಬೆನ್ನು ತಟ್ಟಿಬಿಡಿ. ಈಗಲೇ 'ನಿಮ್ಮ ತಲೆ'ಯಲ್ಲಿರುವ 'ಇಸಂ' ತುಂಬಿ ಅವರ ನಾಟಕ ಮಾಡುವ ಉತ್ಸಾಹ ಕಳೆಯದಿದ್ದರೇ ಸಾಕೆನ್ನುವವ ನಾನು. ಪುಟ್ಟ ಸಲಹೆಯನ್ನು ಪ್ರೀತಿಯಿಂದ ನೀಡಬಹುದು ನೀವು. ಹೇರಬಾರದು ಅಷ್ಟೆ!

ನಾಟಕ ತಯಾರಿಯ ಪ್ರತೀ ಹಂತವನ್ನು ಕ್ರಮವಾಗಿ ತಾಲೀಮು ನಡೆಸಿಕೊಂಡು ಹೋದರೆ ಎಲ್ಲಕ್ಕೂ ನಾವು ಸ್ಪಷ್ಟವಾಗಿದ್ದರೆ, ಮಕ್ಕಳು ಅದನ್ನೇ ಅನುಸರಿಸುತ್ತವೆ. ನಮ್ಮ ಮಾತು, ಕ್ರಿಯೆ, ನಡವಳಿಕೆಗಳ ಕನ್ನಡಿ ಅವು. ಅದಕ್ಕಾಗಿ ಸಂತಸದ ಜೊತೆಗೆ ಭಯವೂ ಮೂಡಿದೆ.

ಅಷ್ಟೊಂದು ಸಂತೋಷ ಕೊಡುವ ಮಕ್ಕಳ ರಂಗಭೂಮಿಯ ಬಗ್ಗೆ ಹೊರಗಡೆ ಅವಜ್ಞೆ ಯಾಕಿದೆ ಅಂತ ನನಗೆ ಪೂರ್ಣ ಅರ್ಥವಾಗದಿದ್ದರೂ ಅದು ಮಕ್ಕಳ ರಂಗಭೂಮಿ ಮಾತ್ರ ಅಲ್ಲ ಅದು 'ಮಕ್ಕಳ ಬಗ್ಗೆಯೇ' ಇದೆ ಅನ್ನಿಸುತ್ತೆ !

ವಾಪಸ್ ನಮಗೆ ತಿರುಗಿ ತಂದುಹಾಕುವ ಯಂತ್ರ, ನಮ್ಮ ಪ್ರತಿಷ್ಠೆಯನ್ನು ಕಾಯಬೇಕಾದ ಸಾಧನ, ಅಂತೆಲ್ಲ ಬಲವಂತವಾಗಿ ನಂಬಿ ಮುನ್ನಡೆದ ವ್ಯಾಪಾರಿ ಜಗತ್ತಿನೆದುರು, ಆಟ-ನೋಟದ ಅಂತಃಕರಣ, ಭಾವದ ಪ್ರೀತಿಯ ನಡೆ-ಅಂತನ್ನುವ ಅನುಭಾವದ ತುರ್ತಿದೆ ಎಲ್ಲರಲ್ಲಿ ಅಂತ ಭಾವಿಸ್ತೇನೆ.

ಗುರು ಕಾರಂತರು ಹೇಳಿದ್ದು :

ಜಗತ್ತಿನ ನಕ್ಷೆಯಲ್ಲಿ ರಂಗಭೂಮಿ ಮಂದಿ ತೀರಾ ಅಲ್ಪಸಂಖ್ಯಾತರು, ಆಧುನಿಕ ರಂಗಭೂಮಿಯವರಂತೂ ಇನ್ನೂ ಕಮ್ಮಿ. ನಾವು ನಾಟಕ ಮಾಡಿಸದಿದ್ದರೆ ಯಾಕೆ ಮಾಡಿಸಿಲ್ಲ ಅಂತ ಯಾರೂ ಕೇಳಲ್ಲ, ಹೊರಗಿನ ಸಂಕಟಗಳೇ ಬೇಕಾದಷ್ಟಿವೆ. ಜನ ಕಳೆದು ಹೋಗಿದ್ದಾರೆ. ಸೌರಿಸಿಕೊಂಡು ನಾಟಕ ಮಾಡಿಸುತ್ತಾ ಹೋಗಿ –

ಮುಂದುವರೆದು ಹೇಳ್ತೇನೆ :

ಮಕ್ಕಳ ರಂಗಭೂಮಿ ಅದರಲ್ಲೂ ಕನ್ನಡ ಮಕ್ಕಳ ರಂಗಭೂಮಿ ಮಾಡ್ತಿರೋರು ಇನ್ನೂ ಅಲ್ಪಸಂಖ್ಯಾತರು. ನಮ್ಮದೇ ಪುಟ್ಟ ಪ್ರಪಂಚದಲ್ಲಿ ಒಬ್ಬರ ಕೆಲಸವನ್ನು ಮತ್ತೊಬ್ಬರು ಗೌರವಿಸುತ್ತಾ ಮಕ್ಕಳ ಮುಗ್ಧತೆಯ ಚೆರಗು ನಮ್ಮ ಕಣ್ಣಾಲಿಗಳಲ್ಲಿ ಮೂಡಲಿ ಅಂತಂದುಕೊಳ್ಳುತ್ತಾ ಪ್ರೀತಿಯಿಂದ ಎಲ್ಲರಿಗೂ ವಂದಿಸುತ್ತೇನೆ.

ದೊಡ್ಡವರೆಲ್ಲರ ಹೃದಯದಿ ಕಟ್ಟಿಹ
ತೊಟ್ಟಿಲ ಲೋಕದಲಿ
ನಿತ್ಯಕಿಶೋರತೆ ನಿದ್ರಿಸುತಿರುವುದು
ವಿಸ್ಮೃತ ನಾಕದಲಿ
ಮಕ್ಕಳ ಸಂಗದೊಳೆಚ್ಚರಗೊಳ್ಳಲಿ
ಆನಂದದ ಆ ದಿವ್ಯಶಿಶು
ಆಡಲಿ, ಹಾಡಲಿ, ಹಾರಲಿ, ಏರಲಿ
ದಿವಿಜತ್ವಕೆ ಈ ಮನುಜ ಪಶು.
(ಬೊಮ್ಮನಹಳ್ಳಿ ಕಿಂದರಜೋಗಿ)-ಕುವೆಂಪು

***

# ಮಕ್ಕಳ ರಂಗಭೂಮಿಯ ಕುರಿತು

– ಐಕೆ. ಬೊಳುವಾರು

ರಂಗಭೂಮಿ ಎಂದರೇನು? ಎನ್ನುವ ಸರಳ ಪ್ರಶ್ನೆಗೆ ಉತ್ತರ ಹುಡುಕಿಕೊಂಡಾಗ ನಾವು ಗಮನಿಸಬಹುದಾದ ಹೇಳಿಕೆಗಳು.

1. ರಂಗಭೂಮಿ ಎಂದರೆ ಬಿಡುಗಡೆಯ ಮಾರ್ಗ

2. ರಂಗಭೂಮಿ ಎಂದರೆ ಪ್ರತಿಭಟನೆಯ ಅಸ್ತ್ರ

3. ರಂಗಭೂಮಿ ಎಂದರೆ ಬದುಕಿನ ಪ್ರಯೋಗಾಲಯ

4. ಇವತ್ತು ಹೆಚ್ಚಿನ ಜನರು ದೇಹ ಮನಸ್ಸುಗಳ ಮೇಲಿನ ಬಂಧನದಿಂದ ಬಿಡುಗಡೆಹೊಂದಿ ವಾತಾವರಣವನ್ನು ಗ್ರಹಿಸುವ ಸೂಕ್ಷ್ಮತೆಯನ್ನೇ ಕಳೆದುಕೊಂಡಿದ್ದಾರೆ. ಮನಸ್ಸು, ದೇಹ, ಹೃದಯಗಳು ಜಡಕಟ್ಟಿವೆ. ಸಂವೇದನೆಗಳು ಮೊಂಡಾಗಿವೆ. ಸೂಕ್ಷ್ಮತೆ ಕಳೆದುಕೊಳ್ಳುತ್ತಿರುವ ಯುವಜನಾಂಗಕ್ಕೆ ಒಂದು ಹೊಸ ಮಾರ್ಗ ಇದೆ ಎಂದಾದರೆ ಅದು ರಂಗಭೂಮಿಯೇ ಆಗಿದೆ. ರಂಗಭೂಮಿ ಹೇಳಬೇಕಾದುದನ್ನೆಲ್ಲಾ ಅತ್ಯಂತ ಸ್ಪಷ್ಟವಾಗಿ, ನಿಖರವಾಗಿ, ನಿರ್ಭಿಡೆಯಿಂದ ಮಾತನಾಡುತ್ತದೆ. ಯಶಸ್ವೀ ಪ್ರಜಾಪ್ರಭುತ್ವದ ಸಮಾಜದಲ್ಲಿ ಮುಖ್ಯ ವಾಹಿನಿಯಾಗಿ ರಂಗಭೂಮಿ ಕೆಲಸ ಮಾಡಲು ಸಾಧ್ಯವಾಗುತ್ತದೆ.

ಹೀಗಿದ್ದರೂ ರಂಗಭೂಮಿಯ ಕೆಲಸಗಳನ್ನು 'ವಯಸ್ಕರ ರಂಗಭೂಮಿ', 'ಮಕ್ಕಳ ರಂಗಭೂಮಿ' ಎಂಬ ಪ್ರತ್ಯೇಕ ಗುರುತು ಚೀಟಿಗಳನ್ನು ನೀಡಿ ವಿಂಗಡಿಸಲಾಗಿದೆ. 'ಮಕ್ಕಳ ರಂಗಭೂಮಿ'ಯನ್ನು ರಂಗಭೂಮಿಯ ಮುಖ್ಯ ವಾಹಿನಿಯಿಂದ ಪ್ರತ್ಯೇಕವಾಗಿ ಹೆಸರಿಸಬೇಕಾದ ಅಗತ್ಯದ ಬಗ್ಗೆಯೇ ನನ್ನ ತಕರಾರುಗಳಿವೆ. ರಂಗಭೂಮಿ ಅಂದರೆ 'ಒಟ್ಟು ರಂಗಭೂಮಿ' ಎನ್ನುವ ನಂಬಿಕೆಯಿರುವ ನಾನು ಕೆಲವೊಂದು ಅನುಕೂಲತೆಗಳಿಗಾಗಿ ಸದ್ಯದ ವರ್ತಮಾನದಲ್ಲಿ 'ಮಕ್ಕಳ ರಂಗಭೂಮಿ' ಎಂಬ ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾಗಿದೆ ಎಂದೇ ನನ್ನ ಅಭಿಪ್ರಾಯಗಳನ್ನು ಹಂಚಿಕೊಳ್ಳಬಯಸುತ್ತೇನೆ.

ನನ್ನ ಪ್ರಮುಖ ತಕರಾರುಗಳಿರುವುದು 'ವಯಸ್ಕರ ರಂಗಭೂಮಿ'ಯ ವಕ್ತಾರರ 'ಮಕ್ಕಳ ಕುರಿತಾದ ಧೋರಣೆಗಳ ಬಗ್ಗೆ, ಏಕೆಂದರೆ ಸಾಮಾನ್ಯವಾಗಿ ಅವರು ಹೇಳುತ್ತಿರುವುದು 'ಮಕ್ಕಳ ರಂಗಭೂಮಿ ಎಂದರೆ 'ಬಾಲಿಶ ರಂಗಭೂಮಿ'. ಇವರು ಮಕ್ಕಳ ರಂಗಭೂಮಿಯ ಹೆಸರಿನಲ್ಲಿ ಚಟುವಟಿಕೆಗಳನ್ನು ನಡೆಸುತ್ತಾರೆಯೇ ಹೊರತು ಪ್ರಯೋಗಗಳನ್ನು ನಡೆಸಲಾಗುತ್ತಿಲ್ಲ. ಇದಕ್ಕೆ ಪೂರಕ ಉದಾಹರಣೆಯಾಗಿ 'ರಂಗಶಂಕರ' 'ರಂಗಾಯಣ'ದಂತಹ ರಂಗಮಂದಿರಗಳಲ್ಲಿ ಪ್ರದರ್ಶನಗಳು ನಡೆದಾಗ 10 ವರ್ಷದ ಕೆಳಗಿನ ಮಕ್ಕಳು ಟಿಕೆಟ್ ಪಡೆದುಕೊಂಡರೂ ಪ್ರವೇಶ ನಿರಾಕರಿಸಲಾಗುತ್ತಿದೆ.

ಇಂತಹ ಸಂಕಷ್ಟದ ಸಂದರ್ಭದಲ್ಲಿಯೂ ಶಿಕ್ಷಣದಲ್ಲಿ ರಂಗಭೂಮಿ, ರಂಗಶಿಕ್ಷಣ, ರಂಗಭೂಮಿಯ ಶೈಕ್ಷಣಿಕ ಸಾಧ್ಯತೆಗಳು ಮುಂತಾಗಿ ಚರ್ಚಿಸಲಾಗುತ್ತಿದೆ. ಮತ್ತು ಅಂತಹ ಪ್ರಯೋಗಗಳನ್ನು ಮಕ್ಕಳ ರಂಗಭೂಮಿಯಲ್ಲಿ ಮಾತ್ರ ನಡೆಸಲಾಗುತ್ತಿದೆ. ಹಾಗಾದರೆ 'ಶಿಕ್ಷಣದಲ್ಲಿ ರಂಗಭೂಮಿ ಎಂದರೇನು?' ಎನ್ನುವ ಪ್ರಶ್ನೆಯನ್ನು ವಿಸ್ತರಿಸಿಕೊಂಡಾಗ,

ಶಾಲಾ ಶಿಕ್ಷಣದಲ್ಲಿ ರಂಗಭೂಮಿಯನ್ನು ಅನ್ವಯಗೊಳಿಸುವುದೇ ಎಂದು ಕೇಳಬೇಕಾಗುತ್ತದೆ. ಎಷ್ಟೋ ಬಾರಿ ಶಾಲೆಯಲ್ಲಿ ಮಕ್ಕಳು ಯಾವುದಾದರೂ ಒಂದು ನಾಟಕವನ್ನು ಆಯ್ದುಕೊಂಡು ವಾರ್ಷಿಕೋತ್ಸವದ ಸಂದರ್ಭದಲ್ಲಿ ಅಥವಾ ಇನ್ಯಾವುದೋ ಸಮಾರಂಭದ ಸಂದರ್ಭದಲ್ಲಿ ಪ್ರದರ್ಶಿಸಿ ನಮ್ಮ ಶಾಲೆಯಲ್ಲಿ ನಿರಂತರ ರಂಗ ಚಟುವಟಿಕೆಗಳು ನಡೆಯುತ್ತಿವೆ ಎಂದು ಹೇಳುವುದನ್ನೂ ಕೇಳುತ್ತಿರುತ್ತೇವೆ. ಇನ್ನೂ ಕೆಲವೊಮ್ಮೆ ನಮ್ಮ ಮಕ್ಕಳ ಪಾಠಪುಸ್ತಕದಲ್ಲಿ ಬರುವ ಪಠ್ಯವನ್ನಾಧರಿಸಿ ನಾಟಕ ರಚಿಸುತ್ತೇವೆ. ಬಳಿಕ ಸೂಕ್ತ ಸಂದರ್ಭದಲ್ಲಿ ಅದನ್ನು ಪ್ರದರ್ಶಿಸುತ್ತೇವೆ ಎಂದು ಹೇಳುತ್ತಿರುವುದನ್ನೂ ನಾವು ಗಮನಿಸಬಹುದು.

ಇನ್ನೂ ಕೆಲವು ಬಾರಿ ರಂಗಭೂಮಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲೂ ವಿಶೇಷವಾಗಿ ಕೆಲಸ ಮಾಡಿರುವ ಪರಿಣಿತರನ್ನು ಕರೆದುಕೊಂಡು ಬಂದು ಅಭಿನಯ, ವೇಷಭೂಷಣ, ರಂಗಸಜ್ಜಿಕೆ, ಸಂಗೀತ, ನೇಪಥ್ಯ, ಪ್ರಸಾಧನ, ಮುಖವಾಡ ನಿರ್ಮಾಣ ಮುಂತಾದವುಗಳ ಕುರಿತು ತರಬೇತಿ ನೀಡಿ ತಿಂಗಳ ಕಾಲ ಶಿಬಿರ ನಡೆಸಿ ಕೊನೆಯದಿನ ಪರಿಪೂರ್ಣ ಎಂದು ಹೇಳುವಂತಹ ನಾಟಕ ಪ್ರದರ್ಶನ ನಡೆಸುವುದನ್ನು ನೋಡಿದ್ದೇವೆ. (ಇಂತಹ ಪರಿಣತರು ಸಾಮಾನ್ಯವಾಗಿ ವೃತ್ತಿ ಕಲಾವಿದರು. ಇವರು ನಡೆಸುವ ಉದ್ಯೋಗಕ್ಕೆ ನಗದಿತ ಮೊತ್ತದ ಸಂಭಾವನೆಯನ್ನು ಗೌರವ ಧನದ ಹೆಸರಿನಲ್ಲಿ ನೀಡಬೇಕಾಗುತ್ತದೆ.)

ಹಾಗಿದ್ದರೆ ಇವುಗಳಲ್ಲಿ ಯಾವುದನ್ನು 'ಶಿಕ್ಷಣದಲ್ಲಿ ರಂಗಭೂಮಿ' ಎಂದು ಪ್ರಶ್ನೆಯಾಗಿ ಇಟ್ಟುಕೊಂಡರೆ?

ರಂಗಭೂಮಿಯ ಬಗ್ಗೆ ಮಾತನಾಡುವಾಗ ನಾವು ಪದೇ ಪದೇ ಕೇಳುತ್ತಲಿರುವ ಕೆಲವು ವಿಚಾರಗಳನ್ನು ಗಮನಿಸೋಣ.

ರಂಗಭೂಮಿ ಒಂದು ಬೆರಗು. ರಂಗಭೂಮಿ ಒಂದು ವಿಸ್ಮಯ. ಅದು ಸೃಜನಶೀಲವಾದದ್ದು. ರಂಗಭೂಮಿಗೆ ಇರುವ ಪ್ರಬಲವಾದ ಶಕ್ತಿ ಎಂದರೆ ಅದು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆಯೇ ಆದ ಕೆಲಸಗಳನ್ನು ನಿರ್ವಹಿಸುತ್ತದೆ. ರಂಗಭೂಮಿ ಜನರನ್ನು ಒಗ್ಗೂಡಿಸುವ ಸಂಘಟನೆಯ ಕೆಲಸವನ್ನು ಮಾಡುತ್ತದೆ. ಯಾವುದೋ ಒಂದು ಸಣ್ಣ ಕಾರಣವನ್ನು ನೆಪವಾಗಿಸಿಕೊಂಡು ಜನರು ಒಗ್ಗೂಡಿ ನಿರ್ಮಿಸಿಕೊಂಡ ಸಂಘಟನೆಯನ್ನೇ ವಿಘಟಿಸುವ ಕೆಲಸವನ್ನೂ ಮಾಡುತ್ತದೆ.

ರಂಗಭೂಮಿ ನಟ, ನಟಿಯರನ್ನು ಸಿದ್ಧಗೊಳಿಸುತ್ತದೆ. ತಂತ್ರಜ್ಞರನ್ನು ತಯಾರು ಮಾಡುತ್ತದೆ. ನಾಟಕಕಾರರನ್ನು ನಿರ್ಮಿಸುತ್ತದೆ. ಕಲಾವಿದರನ್ನು ಒಟ್ಟುಗೂಡಿಸುತ್ತದೆ. ಮುಖ್ಯವಾಗಿ ಪ್ರೇಕ್ಷಕರನ್ನು ಅಪೇಕ್ಷಿಸುತ್ತದೆ. ಈ ಅಪೇಕ್ಷೆಯ ಪೇಕ್ಷಕರ ಎಲ್ಲ ಅಪೇಕ್ಷೆಗಳಿಗೂ ಕಾಲಕಾಲಕ್ಕೆ ತೀವ್ರವಾಗಿ ಸ್ಪಂದಿಸುತ್ತದೆ. ಕೆಲವೊಮ್ಮೆ ಏನೂ ಮಾಡದೇ ನಿಷ್ಕ್ರೀಯವಾಗಿ ಸುಮ್ಮನೆ ಕುಳಿತುಕೊಳ್ಳುವುದೂ ಉಂಟು.

ರಂಗಭೂಮಿ ಇವತ್ತು ಕೇವಲ ಮನರಂಜನೆಗೆ ಮಾತ್ರ ಮೀಸಲಾಗಿ ಉಳಿದಿಲ್ಲ. ಅದಕ್ಕೊಂದು ಪ್ರಜ್ಞಾಪೂರ್ವಕವಾದ ಶೈಕ್ಷಣಿಕ ಆಯಾಮವನ್ನು ಒದಗಿಸುತ್ತೇವೆ ಎಂದಾದರೆ ಇಂದಿನ ಕಲಿಕೆಯ ಸ್ವರೂಪದಲ್ಲಿನ ಹಲವು ಲೋಪದೋಷಗಳನ್ನು ತಿದ್ದುವ ಸಾಧ್ಯತೆಯ ಶಕ್ತಿಯನ್ನು ರಂಗಭೂಮಿ ತನ್ನ ಒಡಲೊಳಗೆ ಹುದುಗಿಸಿಕೊಂಡಿದೆ.

ಯಾವುದೇ ಒಂದು ವಿಚಾರ ದೀರ್ಘಕಾಲ ಅನುಭವದಲ್ಲಿ ಉಳಿಯಬೇಕೆಂದಿದ್ದರೆ ಅದು ಅರ್ಥವತ್ತಾಗಿರಬೇಕು. ಅರ್ಥವಿಲ್ಲದ ವಿಷಯವೂ ಕಲಿಕೆಯಾಗಬಹುದು ಆದರೆ ಅದರ ಧಾರಣೆ ದೀರ್ಘಕಾಲಿಕವಲ್ಲ. ನಿಜವಾದ ಕಲಿಕೆ ವಿಷಯವನ್ನು ಅರ್ಥಮಾಡಿಕೊಂಡಾಗ ಮಾತ್ರ ಸಾಧ್ಯವಾಗುತ್ತದೆ.

ಇಂತಹ ಸಂದರ್ಭದಲ್ಲಿ ಮಕ್ಕಳ ಜೊತೆ ರಂಗಭೂಮಿಯಲ್ಲಿ ಕೆಲಸಮಾಡುವ ಪ್ರಕ್ರಿಯೆಯನ್ನು, ನಾನು ಶೈಕ್ಷಣಿಕ ರಂಗಭೂಮಿ ಎಂದು ಕರೆಯಲು ಇಚ್ಛಿಸುತ್ತೇನೆ.

ಶೈಕ್ಷಣಿಕ ರಂಗಭೂಮಿಯ ಅನುಭವಗಳು, ವಿಧಾನಗಳು, ಎದುರಾಗುವ ಸಮಸ್ಯೆಗಳು, ಸಮಸ್ಯೆಗಳನ್ನು ಪರಿಹರಿಸಕೊಳ್ಳಬಲ್ಲ ಸುಲಭದಾರಿಗಳ ಬಗ್ಗೆ ಕೆಲವು ವಿವರಗಳನ್ನು ಹಂಚಿಕೊಳ್ಳಬೇಕು.

ನಾನು ನನ್ನ ಪರಿಚಯದ ಶಾಲಾ ಅಧ್ಯಾಪಕರೊಂದಿಗೆ ಮಾತನಾಡುತ್ತಾ ಶಾಲಾ ವಿದ್ಯಾರ್ಥಿಗಳನ್ನು ಶೈಕ್ಷಣಿಕ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳೋಣ ಎಂದಾಗಲೆಲ್ಲಾ ಅವರು ಕೇಳುತ್ತಿದ್ದ ಪ್ರಶ್ನೆಗಳನ್ನು ಗಮನಿಸಿ.

• ನೀವು ಶೈಕ್ಷಣಿಕ ರಂಗಭೂಮಿಯಲ್ಲಿ ಶಾಲಾ ಭಾಷಾ ಪಠ್ಯವನ್ನು ನಾಟಕ ರೂಪದಲ್ಲಿ ಕಲಿಸುತ್ತೀರಾ?

• ಕನ್ನಡ ಪಾಠವಾದರೆ ಮಾಡಬಹುದು. ಗಣಿತವನ್ನು ನಾಟಕವಾಗಿಸುವುದು ಹೇಗೆ?

• ಭೂಗೋಳವನ್ನು ನಾಟಕವಾಗಿಸುವುದು ಹೇಗೆ?

• ಪೌರನೀತಿಯನ್ನು ನಾಟಕವಾಗಿಸುವುದು ಹೇಗೆ?

• ಸಸ್ಯಶಾಸ್ತ್ರವನ್ನು ನಾಟಕವಾಗಿಸುವುದು ಹೇಗೆ?

• ಚರಿತ್ರೆಯನ್ನು ನಾಟಕವಾಗಿಸುವುದು ಹೇಗೆ?

• ಇದೆಲ್ಲವನ್ನೂ ಮಾಡಲು ನಿಮ್ಮಿಂದ ಸಾಧ್ಯವಿದೆಯೇ?

ಕೊನೆಯ ಪ್ರಶ್ನೆಗೆ ಮಾತ್ರ ನನ್ನ ಉತ್ತರ ಹೌದು ಎಂದಾಗಿತ್ತು. ಅದು ಆಗಿತ್ತು ಎಂದರೆ.........

ಹೌದು ಯಾವುದೇ ಪಠ್ಯವನ್ನು ನಾಟಕವಾಗಿಸಬಹುದು. ಆದರೆ ಅದು ಪ್ರೋಸಿನಿಯಂ ನಾಟಕವಾಗಿ ಮಾತ್ರ ಅಲ್ಲ, ಬದಲಿಗೆ ಅದು

ಬಯಲು ನಾಟಕವಾಗಿ

ಓದು ನಾಟಕವಾಗಿ

ವೇದಿಕೆ ನಾಟಕವಾಗಿ

ಆಟ ನಾಟಕವಾಗಿ

ಅಶು ವಿಸ್ತರಣಾ ನಾಟಕವಾಗಿ

ಸ್ತಬ್ಧ ನಾಟಕವಾಗಿಯೂ ಮಾಡಬಹುದು.

ಶೈಕ್ಷಣಿಕ ರಂಗಭೂಮಿಯ ಮುಖ್ಯ ಉದ್ದೇಶ ನಾಟಕ ಮಾಡುವುದು ಮಾತ್ರ ಅಲ್ಲ. ಒಟ್ಟು ಶಿಕ್ಷಣದ ಸಾಧ್ಯತೆಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಗುವಂತೆ ಮಾಡುವುದು.

ಶೈಕ್ಷಣಿಕ ರಂಗಭೂಮಿಯ ಬಗ್ಗೆ ಕೆಲಸಮಾಡುವವರು ಸಾಂಪ್ರದಾಯಿಕ ರಂಗಭೂಮಿ ಮತ್ತು ಕ್ರಿಯಾತ್ಮಕ ಮಕ್ಕಳ ರಂಗಭೂಮಿಯ ನಡುವಣ ವ್ಯತ್ಯಾಸಗಳನ್ನೂ ಸ್ಪಷ್ಟವಾಗಿ ಗುರುತಿಸಬೇಕಾಗುತ್ತದೆ.

ಸಾಂಪ್ರದಾಯಿಕ ರಂಗಭೂಮಿಯಲ್ಲಿ ಒಂದು ನಾಟಕವು ರಂಗಮಂದಿರದಲ್ಲಿ ಪ್ರದರ್ಶನದ ಮೂಲಕ ಘಟಿಸುತ್ತದೆ. ಅಲ್ಲಿ ನಾಟಕದ ಸಾಲುಗಳನ್ನು ಉರು ಹೊಡೆದು

ಕಲಿಯಲಾಗುತ್ತದೆ. (ಎಷ್ಟೋ ಬಾರಿ ಮಕ್ಕಳಿಗೆ ಇವುಗಳನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ).

ಒಬ್ಬ ನಿರ್ದೇಶಕ ಸಾಮಾನ್ಯವಾಗಿ ನಿರ್ದಿಷ್ಟ ಸಲಹೆ ಸೂಚನೆಗಳನ್ನು ನೀಡುತ್ತಾನೆ. ಮಕ್ಕಳ ಚಿಂತನೆಗಳಿಗಿಂತಲೂ ವಯಸ್ಕರ ಮನೋಭಾವಗಳಿಗೆ ಈ ಸೂಚನೆಗಳು ಹೊಂದಿಕೊಳ್ಳುತ್ತವೆ. ಪರಿಪೂರ್ಣವಾದ ವೇಷಭೂಷಣ ಮತ್ತು ರಂಗ ಪರಿಕರ ನಾಟಕದ ಅವಿಭಾಜ್ಯ ಅಂಗವಾಗಿರುತ್ತದೆ. ಎಷ್ಟೋ ಬಾರಿ ಇವು ನಿಜಸಂವಹನಕ್ಕೆ ತೊಡಕನ್ನೇ ಉಂಟು ಮಾಡುತ್ತದೆ. ಪ್ರೊಸೀನಿಯಂ ರಂಗಮಂದಿರದಲ್ಲಿ ಪ್ರದರ್ಶನಗೊಳ್ಳುವ ಸಾಂಪ್ರಾದಾಯಿಕ ನಾಟಕಗಳು ವ್ಯವಸ್ಥಿತ ರಂಗಸಜ್ಜಿಕೆಯನ್ನು ಹೊಂದಿರುತ್ತವೆ. ನಟರು ಮತ್ತು ಪ್ರೇಕ್ಷಕರನ್ನು ಪ್ರತ್ಯೇಕವಾಗಿ ಇರಿಸಲಾಗುತ್ತದೆ ಮತ್ತು ಪ್ರೇಕ್ಷಕರಿಗೋಸ್ಕರವೇ ನಟರು ನಾಟಕಗಳನ್ನು ಅಭಿನಯಿಸುತ್ತಾರೆ. ನಿರ್ದಿಷ್ಟ ಪರಿಣಾಮ ಬೀರಬೇಕೆನ್ನುವ ಉದ್ದೇಶದಿಂದಲೇ ರಿಹರ್ಸಲ್ ತರಬೇತಿಗಳನ್ನು ನೀಡಲಾಗುತ್ತದೆ. ನಿರ್ದೇಶಕ ಸಾಮಾನ್ಯವಾಗಿ ಅಸಂಖ್ಯಾತ ನಿರ್ದೇಶನ ಸೂಚನೆಗಳನ್ನು ತರಬೇತಿ ಸಂದರ್ಭದಲ್ಲಿ ನೀಡುತ್ತಾನೆ. ಆದರೆ,

ಶೈಕ್ಷಣಿಕ ರಂಗಭೂಮಿಯಲ್ಲಿ ನಿರ್ದಿಷ್ಟ ವೇದಿಕೆ ಇರುವುದಿಲ್ಲ. ಲಭ್ಯವಿರುವ ಪರಿಸರವನ್ನು ಮುಕ್ತವಾಗಿ ಬಳಸಿಕೊಳ್ಳಲಾಗುತ್ತದೆ. ಮಕ್ಕಳು ಸಹಜವಾಗಿ ಆಟ ಆಡುವ ಹಾದಿ ಇದಾಗಿದೆ. ಕಥೆ, ಸಂಭಾಷಣೆ ಮತ್ತು ಕ್ರಿಯೆಯನ್ನು ಆಶು ವಿಸ್ತರಣೆಯ ಮೂಲಕ ಕಟ್ಟಲಾಗುತ್ತದೆ. ಶೈಕ್ಷಣಿಕ ರಂಗಭೂಮಿಯು ಅವರ ನಡುವಣ ಒಬ್ಬ ನಾಯಕನ ನಾಯಕಿಯ ಸಲಹೆಯೊಂದಿಗೆ ಮಕ್ಕಳೊಂದಿಗಿನ ಚರ್ಚೆ ಮತ್ತು ಕೆಲಸಗಳ ಮೂಲಕ ಅವರ ಚಿಂತನೆಗಳನ್ನೇ ಹೊರತರುವ ಪ್ರಯತ್ನ ಮಾಡುತ್ತದೆ. ವೇಷಭೂಷಣ, ರಂಗಪರಿಕರಗಳು ಅಷ್ಟು ಮುಖ್ಯವಾಗುವುದಿಲ್ಲ. ಆದರೆ ಸುಲಭದಲ್ಲಿ ಸಿಗುವ ವಸ್ತುಗಳನ್ನೇ ಅತ್ಯುತ್ತಮ ವೇಷಭೂಷಣ, ಪರಿಕರಗಳಾಗಿ ಬದಲಾಯಿಸಿಕೊಳ್ಳುವ ಸೃಜನಶೀಲ ಶಕ್ತಿ ಶೈಕ್ಷಣಿಕ ರಂಗಭೂಮಿಗಿದೆ.

ಶರೀರದ ಚಲನೆ, ನಟನೆ ಮತ್ತು ಸೃಷ್ಟಿಸಲಾದ ಸಂಭಾಷಣೆಯ ಮೂಲಕ ನಾಟಕ ಬೆಳೆಯುತ್ತದೆ. ಲಭ್ಯ ವಸ್ತುಗಳು ಪರಿಣಾಮಕಾರಿ ರಂಗಸಜ್ಜಿಕೆಗಳಾಗುತ್ತವೆ. ನಟರು ಮತ್ತು ಪ್ರೇಕ್ಷಕರ ನಡುವೆ ಅಂತಹ ವಿಭಾಗವೇನೂ ಇರುವುದಿಲ್ಲ. ಅವರು ಆಟ ಆಡುತ್ತಲೇ ಅಭಿನಯಿಸುವುದರಿಂದ ಪ್ರೇಕ್ಷಕರ ಗಮನದಲ್ಲಿಯೇ ಪೂರ್ಣವಾಗಿ ತೊಡಗಿಸಿಕೊಳ್ಳುತ್ತಾರೆ. ಉದಾಹರಣೆಗೆ ಒಂದು ಘಟನೆಯನ್ನು ಒಂದು ಮಕ್ಕಳ ತಂಡ ಅಭಿನಯಿಸಿದಾಗ ಇನ್ನೊಂದು ತಂಡ ಪೂರಕವಾಗಿ ಸಂಗೀತ, ಶಬ್ಧ ಸಹಕಾರ, ಸ್ಥಳಾವಕಾಶ ಇತ್ಯಾದಿ ಒದಗಿಸುತ್ತಾರೆ ಮತ್ತು ಅವರ ಸರದಿ ಬಂದಾಗ ಅದೇ ಘಟನೆಯನ್ನು ಬೇರೆಯೇ ನಾಟಕವಾಗಿ ನಿರೂಪಿಸಬಲ್ಲರು. ಆ ಸಂದರ್ಭದಲ್ಲಿ ಅವರ

'ಸ್ಪರ್ಧಾ ವಿರೋಧಿಗಳು' ಯಾವುದೇ ತಡೆಯಿಲ್ಲದೆ ಸಂಗೀತ ಸಹಕಾರ ನೀಡಿ ಪ್ರದರ್ಶನದ ಯಶಸ್ಸಿಗೆ ಸಹಕರಿಸುವುದುದನ್ನು ಕಾಣಬಹುದು.

ಮಕ್ಕಳು ಕ್ರಿಯಾಶೀಲ ಅನುಭವಕ್ಕಾಗಿ ರಂಗಭೂಮಿಯನ್ನು ಬಳಸಿಕೊಳ್ಳುತ್ತಾರೆ. ಹಾಗಾಗಿ ಪ್ರತಿಯೊಂದು ಆಟ ಯಾ ಪ್ರದರ್ಶನವೂ ಪರಿಪೂರ್ಣವಾಗಿರುತ್ತದೆ. ಮಕ್ಕಳು ಹೊಸ ವ್ಯಾಖ್ಯಾನವನ್ನೇ ನಿರೂಪಿಸಬಲ್ಲವರಗಿರುತ್ತಾರೆ. ಇವರಿಗೆ ನಿರ್ದೇಶಕರ ಸಲಹೆಯಿಂದ ಯಾವುದೇ ತೊಂದರೆಯಾಗುವುದಿಲ್ಲ. ಮತ್ತು ಪ್ರಯೋಗ ಪ್ರದರ್ಶನದ ಬಳಿಕ ನಡೆಯುವ ಚರ್ಚೆಯಲ್ಲಿ ನಿರ್ದೇಶಕ ಮತ್ತು ಕಲಾವಿದ ಮಕ್ಕಳು ಹೊಸ ಬದಲಾವಣೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡುತ್ತಾರೆ.

ಹೀಗೆ ಶೈಕ್ಷಣಿಕ ರಂಗಭೂಮಿ ಎಂದರೆ ಪಠ್ಯವನ್ನು ನಾಟಕರೂಪದಲ್ಲಿ ಬದಲಾಯಿಸಿ ಅಭಿನಯಿಸುವುದು ಮಾತ್ರ ಅಲ್ಲ ಎಂಬುದನ್ನು ಗ್ರಹಿಸಬೇಕು. ರಂಗಭೂಮಿಯ ವಿಶಿಷ್ಠ ಸಾಧ್ಯತೆಗಳನ್ನು, ತಂತ್ರಗಳನ್ನು ಪ್ರಕ್ರಿಯೆಯಾಗಿ ಬಳಸಿಕೊಳ್ಳುವುದು ಶೈಕ್ಷಣಿಕ ರಂಗಭೂಮಿಯಾಗುತ್ತದೆ. ಶಿಕ್ಷಣ ಎಂದರೆ ಪ್ರಕ್ರಿಯೆಯೂ ಹೌದು, ಫಲವೂ ಹೌದು. ಗುರಿ ಈಡೇರಿಕೆಯಲ್ಲಿ ಶಿಕ್ಷಣದ ಪಾತ್ರ ಬಹಳ ಮುಖ್ಯವಾದದ್ದು. ಇದು ರಂಗಭೂಮಿಗೂ ಅನ್ವಯವಾಗುತ್ತದೆ.

ಪಠ್ಯ ಮತ್ತು ಪ್ರಕ್ರಿಯೆಗಳ ಸಂಬಂಧದಿಂದ ಮಾನವ ಸಂಪನ್ಮೂಲದ ಬೆಳವಣಿಗೆಯನ್ನು ಗುರುತಿಸಬಹುದು. ಬೆಳವಣಿಗೆ ಅಥವಾ ಅಭಿವೃದ್ಧಿ ಕುರಿತ ಚಿಂತನೆಗಳು ಮಾನವ ಸಂಪನ್ಮೂಲದ ಚಿಂತನೆಗಳಾಗುತ್ತವೆ. ವಿದ್ಯಾರ್ಥಿಗಳು ಪಡೆದುಕೊಳ್ಳುವ ಜ್ಞಾನ, ಕೌಶಲದ ಪರಿಪೂರ್ಣತೆಯ ಸಾಧ್ಯತೆಗಳು ಅಭಿವೃದ್ಧಿಯ ವ್ಯಾಖ್ಯಾನವಾಗುತ್ತವೆ. ಅಂತಸ್ಥವಾಗಿರುವ ಶಕ್ತಿಯನ್ನು ಹೊರಕ್ಕೆ ತರುತ್ತವೆ. ರಂಗಭೂಮಿ ಅದನ್ನು ಸಮರ್ಥವಾಗಿ ನಿಭಾಯಿಸುತ್ತದೆ.

ನಿರತನಿರಂತ
ಪುತ್ತೂರು (ದ.ಕ.)– 574 201
ಪೋನ್: 9448012267
Email:lkbolwar@gmail.com

# ಮಕ್ಕಳ ರಂಗ ತರಬೇತಿ ಕಾರ್ಯಾಗಾರ, ಮಕ್ಕಳ ಶಿಬಿರ – ಒಂದು ಪರಿಚಯ

- ಎಸ್.ವಿ. ಕಶ್ಯಪ್

ಇಚ್ಛಾಶಕ್ತಿ, ಕಲಿಸುವ ಮನಸ್ಸು, ಮಕ್ಕಳ ಮನಸ್ಸನ್ನು ಅರಿಯುವ ಸೂಕ್ಷ್ಮ ಮನಸ್ಸು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಮಕ್ಕಳೊಡನೆ ಮಕ್ಕಳಾಗುವ ತುಡಿತ , ಇವಿಷ್ಟಿದ್ದರೆ ಯಾರು ಬೇಕಾದರು ಶಿಬಿರವನ್ನು ಮಾಡಬಹುದು ಎಂದು ಹೇಳಿದರೆ ತಪ್ಪಾಗಲಾರದು. ಇದೇ ಕಾರಣಕ್ಕೆ ಮಕ್ಕಳ ಶಿಬಿರಗಳು ನಾಯಿಕೊಡೆಯ ಹಾಗೆ ಎಲ್ಲಂದರಲ್ಲಿ ತಲೆ ಎತ್ತುತ್ತಿವೆ. ಮಕ್ಕಳ ಸೃಜನಶೀಲತೆಯನ್ನು ಬೆಳೆಸದಿದ್ದರೂ ಪರವಾಗಿಲ್ಲ ಅದನ್ನು ಹದಗೆಡಿಸುವಂತೆ ಆಗದಿದ್ದರೆ ಸಾಕು ಎಂಬ ಎಚ್ಚರ ಆಯೋಜಕರಲ್ಲಿ ಇರಬೇಕಾಗುತ್ತದೆ. ಎಲ್ಲ ಕಡೆಗಳಲ್ಲೂ ಸಾಂಸ್ಕೃತಿಕ ಕಾಯಕ ನಡೆದೇ ತೀರುತ್ತವೆ ಎಂದು ಘಂಟಾಘೋಶವಾಗಿ ಹೇಳಲಾಗುವುದಿಲ್ಲ, ಹಾಗೆಯೆ ಏನು ನಡೆಯುವುದಿಲ್ಲ ಎಂದು ಹೇಳುವ ಉದ್ಧಟತನವನ್ನೂ ಮಾಡಲಾಗದು. ಅವರವರ ಭಾವಕ್ಕೆ ಅವರವರ ಭಕುತಿಗೆ ಎಂಬಂತೆ ಕೆಲಸಗಳು ನಡೆಯುತ್ತವೆ ಎಂದು ಮಾತ್ರ ಹೇಳಬಹುದು.

ನಮ್ಮ ನಾಡಿನ ಹಲವಾರು ಸೃಜನಶೀಲ ಮನಸ್ಸುಗಳು ನಮ್ಮ ಮಕ್ಕಳ ರಂಗಭೂಮಿಯನ್ನು ಒಂದು ಮಕ್ಕಳಾಟದ ಹಂತದಿಂದ ಹೊರಬಂದು, ತುಂಬ ಗಂಭೀರವಾದ ಪ್ರಯೊಗಾತ್ಮಕತೆಗೆ ತೆರೆದುಕೊಳ್ಳುವಂತೆ ಮಾಡಿದೆ ಎಂದರೆ ತಪ್ಪಗಲಾರದು. ಪ್ರಯತ್ನ ಗಂಭೀರವಾದರೂ; ಮಕ್ಕಳ ಒಡನಾಟ ಇರುವುದರಿಂದ ಸರಳವೂ ಹೌದು, ಮುಗ್ಧವೂ ಹೌದು. ಮಕ್ಕಳ ರಂಗ ಭೂಮಿ ಏಕಕಾಲಕ್ಕೆ ಸಂಕೀರ್ಣವೂ ಹೌದು, ಸರಳವೂ ಹೌದು. ಈ ಮಾತನ್ನು ನಾವು ಮಕ್ಕಳ ರಂಗ ತರಬೇತಿ ಕಾರ್ಯಾಗಾರದ ಬಗ್ಗೆಯೂ ಹೇಳಬಹುದು.

ನಮ್ಮ ವಿಜಯನಗರ ಬಿಂಬ ರಂಗ ಶಾಲೆ ಈ ಎರಡೂ ತರಹದ ಕಾರ್ಯಾಗಾರಗಳನ್ನು ಏರ್ಪಡಿಸಿದೆ. ಆ ನಮ್ಮ ಅನುಭವವನ್ನು ಎಲ್ಲರೊಂದಿಗೆ ಹಂಚಿಕೊಳ್ಳಲು ಇಚ್ಚಿಸುತ್ತೇನೆ. ಪ್ರಾಯಶಃ ನಮ್ಮ ಈ ಎರಡು ಮಾಡೆಲ್ ಗಳು ಮಕ್ಕಳ

ರಂಗ ಭೂಮಿಯಲ್ಲಿ ಈಗಾಗಲೇ ಕೆಲಸ ಮಾಡುತ್ತಿರುವವರಿಗೆ ಸಹಾಯವಾಗದಿರಬಹುದು. ಮಕ್ಕಳ ರಂಗ ಶಿಬಿರಗಳನ್ನು ಆಯೋಜಿಸಲು ಪ್ರಾರಂಭಿಸುತ್ತಿರುವವರಿಗೆ ಸಹಾಯಕವಾಗಬಹುದು. ಆ ಉದ್ದೇಶದಿಂದ ಈ ಲೇಖನವನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ.

## I. ರಂಗತರಬೇತಿ ಕಾರ್ಯಾಗಾರ –

ಇದರ ಸ್ವರೂಪ ಗಂಭೀರವಾದ್ದು. ರಂಗಭೂಮಿಯ ಹಲವಾರು ಆಯಾಮಗಳ ಬಗ್ಗೆ ಮಕ್ಕಳಿಗೆ ಪಾಠವನ್ನು ನುರಿತ ತಜ್ಞರಿಂದ ತುಂಬ ಅಕಾಡೆಮಿಕ್ ಆಗಿ ಮಾಡಿಸಿ, ನಂತರ ಅಯಾ ಪಾಠಗಳ ಪ್ರಾಕ್ಟಿಕಲ್ಸ್ ಎಂಬಂತೆ ಒಂದು ರಂಗಪ್ರಯೋಗವನ್ನು ಕೈಗೆತ್ತಿಕೊಂಡು ಮಕ್ಕಳ ಸಹಾಯದಿಂದಲೇ ನಾಟಕವನ್ನು ಕಟ್ಟುವುದು.

ತರಗತಿಗಳು – ಮಕ್ಕಳ ರಂಗ ಭೂಮಿಗೂ ರಂಗಾಟಗಳಿಗೂ ಅವಿನಾಭಾವ ಸಂಬಂಧ ಇದೆ. ಮಕ್ಕಳಿಗೆ ಆಟವೆಂದರೆ ಎಲ್ಲಿಲ್ಲದ ಪ್ರೀತಿ. ರಂಗಾಟಗಳ ಮೂಲಕ ಮಕ್ಕಳಿಗೆ ಬಹಳಷ್ಟನ್ನು ಹೇಳಿಕೊಡಬಹುದು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ. ಮತ್ತೊಂದು ಬಹು ಮುಖ್ಯವಾದ ವಿಷಯವೆಂದರೆ ನಟನೆ. ಆಟಗಳ ಮೂಲಕವೊ ಇಲ್ಲ ಇಂಪ್ರೊವೈಸೇಶನ್ ಮೂಲಕವೋ, ಇಲ್ಲ ಪ್ರಾತ್ಯಕ್ಷಿಕೆಯ ಮೂಲಕ ಮಕ್ಕಳಿಗೆ ನಟನೆಯ ಹಲವಾರು ವಿಷಯಗಳನ್ನು ತಿಳಿಸಬಹುದು. ಅಲ್ಲದೆ ನಾಟಕ ಸಂಕೀರ್ಣ ಕಲೆಯಾಗಿರುವುದರಿಂದ ಹಾಡು, ನೃತ್ಯ, ಚಿತ್ರಕಲೆ, ಮೌನಾಭಿನಯ, ಮುಖವಾಡ ಮುಂತಾದ ಹತ್ತು ಹಲವು ಕಲೆಗಳನ್ನು ಸೇರಿಸಿಕೊಂಡು ಕಾರ್ಯಾಗಾರವನ್ನು ರೂಪಿಸಬಹುದು. ಹಾಡು ಎಂದಾಗ ಸುಗಮ ಸಂಗೀತ ಕ್ಷೇತ್ರದ ಹಲವಾರು ಗಾಯಕ ಗಾಯಕಿಯರನ್ನೋ, ಅಥವ ರಂಗಭೂಮಿಯಲ್ಲಿ ತೊಡಗಿಸಿಕೊಂಡ ರಂಗ ಸಂಗೀತದ ಪರಿಣತರನ್ನೋ ಕರೆಸಿ ಮಕ್ಕಳಿಗೆ ಪಾಠ ಮಾಡಿಸಬಹುದು. ನೃತ್ಯಕ್ಕೆ ಜನಪದ ತಂಡವನ್ನೋ, ಹೆಸರಾಂತ ನೃತ್ಯಪಟುಗಳನ್ನೋ ಕರೆಸಬಹುದು. ಅಂತೆಯೇ ಮಿಕ್ಕ ಎಲ್ಲ ವಿಷಯಗಳು.

ರಂಗ ಪ್ರಯೋಗ – ಗಂಭೀರವಾಗಿ ನಡೆದ ಕಾರ್ಯಾಗಾರಕ್ಕೆ ಮೆರಗು ಬರುವುದು ರಂಗ ಪ್ರಯೋಗಕ್ಕೆ ಅಲ್ಲಿನ ಮಕ್ಕಳು ತೆರೆದುಕೊಂಡಾಗಲೆ. ಪೂರ್ಣಾವಧಿ ನಾಟಕಗಳನ್ನು ಪ್ರಯೋಗಿಸಬಹುದು. ಇಲ್ಲಿ ಹಲವಾರು ವಿಭಿನ್ನ ಪ್ರಯೋಗಗಳಿಗೂ ವೇದಿಕೆ ಕಲ್ಪಿಸಿ ಕೊಡಬಹುದು. ಉದಾ : ಮಂಕುತಿಮ್ಮನ ಕಗ್ಗಕ್ಕೆ ವಿಜಯನಗರ ಬಿಂಬದ ಹುಡುಗರು ಮಾಡಿದ ಮೌನಾಭಿನಯ, ಅಥವ ಮಾಸ್ತಿ ಸಣ್ಣಕಥೆಯನ್ನು ರಂಗ ರೂಪಕ್ಕೆ ತರುವುದು ಮುಂತಾದವು.

ಈ ರೀತಿಯ ಕಾರ್ಯಾಗಾರದ ಟೈಂಟೇಬಲ್ ಹೀಗಿರಬಹುದು.

ವಿಜಯನಗರ ಬಿಂಬದ ಮಕ್ಕಳರಂಗ ಕಾರ್ಯಾಗಾರದ ಮಾದರಿ ವೇಳಾಪಟ್ಟಿ

| | 9.30<br>10.00 | 10.00<br>11.00 | 11.00<br>12.00 | 12.00<br>1.00 | 1.30<br>2.30 | 2.30<br>3.30 | 3.30<br>4.30 |
|---|---|---|---|---|---|---|---|
| 1. ಮೇ<br>Sunday | | ಉದ್ಘಾಟನೆ | | ಆಟಗಳು | ಹಾಡು | | ಚಿತ್ರಕಲೆ |
| 2. ಮೇ<br>Monday | | ಆಟಗಳು | | ದೇಹ ಚಲನೆ | | ಹಾಡು | ಕ್ರಾಫ್ಟ್ |
| 3. ಮೇ<br>Tuesday | | ಆಟಗಳು | | ನಿಲುವು, ಭಂಗಿಗಳು | | ಹಾಡು | ಚಿತ್ರಕಲೆ |
| 4. ಮೇ<br>Wednesday | | ಆಟಗಳು | ಮೌನಾಭಿನಯ | | ಧ್ವನಿ | ರಂಗಗೀತೆಗಳು | |
| 5. ಮೇ<br>Thursday | | ಆಟಗಳು | ಮೌನಾಭಿನಯ | | ಧ್ವನಿ ಮತ್ತು ಉಸಿರು | | ಕ್ರಾಫ್ಟ್ |
| 6. ಮೇ<br>Friday | | ಆಟಗಳು | ಪಾತ್ರಗಳ ಹಂಚಿಕೆ | | ನವರಸಗಳು | | ಹಾಡು |
| 7. ಮೇ<br>Saturday | | ಆಟಗಳು | ನೃತ್ಯ | ನಾಟಕದ ಓದು | | ಸಂವಾದ | |
| 8. ಮೇ<br>Sunday | | ಆಟಗಳು | ನೃತ್ಯ | | ತಾಲೀಮು–ಬ್ಲಾಕಿಂಗ್ | | |
| 9. ಮೇ<br>Monday | | ತಾಲೀಮು–ಬ್ಲಾಕಿಂಗ್ | | | ತಾಲೀಮು–ಬ್ಲಾಕಿಂಗ್ | | |
| 10. ಮೇ<br>Tuesday | | ತಾಲೀಮು–ಬ್ಲಾಕಿಂಗ್ | | | ತಾಲೀಮು–ಬ್ಲಾಕಿಂಗ್ | | |
| 11. ಮೇ<br>Wednesday | | ವಸ್ತ್ರವಿನ್ಯಾಸ | | ನೇಪಥ್ಯ | ತಾಲೀಮು–ಬ್ಲಾಕಿಂಗ್ | | |
| 12. ಮೇ<br>Thursday | | ರಂಗಪರಿಕರ | | ಕ್ರಾಫ್ಟ್ | ತಾಲೀಮು–ಪಾಲಿಶಿಂಗ್ | | |

13. ಮೇ

Friday ತಾಲೀಮು–ರನ್ ಥ್ರೂ ತಾಲೀಮು–ರನ್ ಥ್ರೂ

14. ಮೇ

Saturday ತಾಲೀಮು–ರನ್ ಥ್ರೂ–ಸಂವಾದ ತಾಲೀಮು–ಟೆಕ್ನಿಕಲ್ ಶೋ

15. ಮೇ

Sunday ತಾಲೀಮು ಪ್ರದರ್ಶನ

ಇದು ನಾವು ವಿಜಯನಗರ ಬಿಂಬದಲ್ಲಿ ನಡೆದುಕಂಡು ಬಂದಿರುವ ಕ್ರಮ. ಇದೆ ಸರಿಯಾದ ದಾರಿ ಎಂದು ಹೇಳುತ್ತಿಲ್ಲ ಆದರೆ ಕಾರ್ಯಾಗಾರವನ್ನು ಹೀಗೂ ರೂಪಿಸಬಹುದು ಎಂದು ಹೇಳುವ ಒಂದು ಮಾದರಿ ಅಷ್ಟೆ.

**ಕೆಲವು ಉಪಯುಕ್ತ ಸೂಚನೆಗಳು**

ಅ. ಆಟಗಳ ಮೂಲಕ ಮಕ್ಕಳ ಶಾರೀರಿಕ ಮತ್ತು ಮಾನಸಿಕ ಬೆಳವಣಿಗೆ ಆದರೆ, ರಂಗಾಟಗಳ ಮೂಲಕ ಇವೆರಡರ ಜೊತೆ ಜೊತೆಗೆ ರಂಗಭೂಮಿಯ ಪ್ರವೇಶಕ್ಕೆ ಬೇಕಾದ ಮನಸಿನ ಹದವನ್ನು ಮಕ್ಕಳಲ್ಲಿ ಮೂಡಿಸುವಲ್ಲಿ ತುಂಬ ಸಹಕಾರಿ. ದೇಹ ಚಲನೆ, ಆಂಗಿಕ ಅಭಿನಯ, ಧ್ವನಿಯ ಏರಿಳಿತ ಮುಂತಾದ ರಂಗಭೂಮಿಯ ಹಲವು ಆಯಾಮಗಳನ್ನು ರಂಗಾಟಗಳ ಮೂಲಕ ಮಕ್ಕಳಿಗೆ ತಿಳಿಸಿಕೊಡಬಹುದು.

ಆ. ಯೋಗವನ್ನು ಆಂಗಿಕ ಅಭಿನಯದ ಜೊತೆ ಸೇರಿಸಿಕೊಳ್ಳಬಹುದು.

ಇ. ವಾಯ್ಸ್ ಕಲ್ಚರ್ ಅಥವ ವಾಚಿಕದ ಜೊತೆ ಜೊತೆಗೆ ಹಾಡನ್ನು ಸೇರಿಸಬಹುದು.

ಈ. ಕಚ್ಚೆ ಕಟ್ಟುವುದು, ಸೀರೆ ಉಟ್ಟುಕೊಳ್ಳುವುದು ಮುಂತಾದವನ್ನು ವಸ್ತ್ರವಿನ್ಯಾಸದ ಪಾಠವಾಗಿ ಮಕ್ಕಳಿಗೆ ಹೇಳಿಕೊಟ್ಟರೆ, ನಾಟಕ ಪ್ರದರ್ಶನಕ್ಕೆ ತಾವೆ ತಯಾರಾಗುತ್ತಾರೆ.

ಉ. ಪ್ರಸಾಧನದ ಪಾಠದಿಂದ ಮುಂದೆ ತಾವು ಅಂಟಿಸಿಕೊಳ್ಳುವ ಮೀಸೆ, ಹಾಕಿಕೊಳ್ಳುವ ವಿಗ್ಗು, ಮುಂತಾದವುಗಳ ಬಗ್ಗೆ ತಿಳಿದು ಸಂಭಾಳಿಸಿಕೊಳ್ಳುವ ಮನಸ್ಸು ಬರುತ್ತದೆ.

ಎ. ರಂಗಪರಿಕರಗಳನ್ನು ಮಕ್ಕಳೆ ಮಾಡಿಬಿಡುತ್ತಾರೆ. ಅದನ್ನು ಕಾರ್ಯಾಗಾರದ ಇತರ ಕ್ರಾಫ್ಟ್ ಗಳ ಜೊತೆ ಸೇರಿಸ ಬಹುದು.

ಏ. ನಾಟಕ ಪ್ರದರ್ಶನದ ಪ್ರಚಾರಕ್ಕೆ ಬೇಕಾದ ಭಿತ್ತಿಚಿತ್ರಗಳನ್ನು ರಚಿಸುವಲ್ಲಿಯೂ ಮಕ್ಕಳ ಸೃಜನಶೀಲತೆಯನ್ನು ಬಳಸಿಕೊಳ್ಳಬಹುದು.

ಹೀಗೆ ಒಂದು ಕಾರ್ಯಾಗಾರವನ್ನು ರೂಪಿಸಬಹುದು. ಮಕ್ಕಳ ಜೊತೆ ಆಟ ಆಡುತ್ತಲೆ ಗಂಭೀರವಾದ ರಂಗ ಕಾಯಕಕ್ಕೆ ನಾಂದಿ ಹಾಡಬಹುದು.

## 2. ಮಕ್ಕಳ ಶಿಬಿರ–

ಇದರ ಸ್ವರೂಪ ಅಷ್ಟೊಂದು ಅಕಾಡೆಮಿಕ್ ಅಲ್ಲ. ಗಂಭೀರವೂ ಅಲ್ಲ. ಇದು ಸಹಜ ಸುಂದರ.

ಇಲ್ಲಿಯೂ ರಂಗಾಟಗಳು ಮಹತ್ವ ಪಡೆದಿವೆ. ರಂಗಾಟಗಳ ಜೊತೆಗೆ ಜಾನಪದ ಆಟಗಳನ್ನು ಆಡಿಸಬಹುದು. ಕುಂಟು ಮುಟ್ಟಿಸುವ ಆಟ, ಜೂಟಾಟ, ಮುಂತಾದ ಆಟಗಳನ್ನು ಮಕ್ಕಳಿಗೆ ಆಡಿಸಿ ಅವರನ್ನು ರಂಜಿಸಬಹುದು. ನಂತರ ರಂಗಾಟಗಳ ಮೂಲಕ ಏಕಾಗ್ರತೆ, ಚುರುಕುತನ, ಮುಂತಾದವುಗಳನ್ನು ಮಕ್ಕಳಲ್ಲಿ ಮೂಡಿಸಬಹುದು. ಪ್ರಾದೇಶಿಕವಾಗಿ ದೊರೆಯುವ ಪ್ರಾಕೃತಿಕ ವಸ್ತುಗಳನ್ನು ಉಪಯೋಗಿಸಿಕೊಂಡು ಕ್ರಾಫ್ಟ್ ಮಾಡಿಸಬಹುದು. ಗಾಯನವನ್ನು ಹೇಳಿಕೊಡಲು ನುರಿತವರೇ ಆಗಬೇಕೆಂದಿಲ್ಲ ಹೇಳಿಕೊಡುವ ಮನಸ್ಸಿದ್ದು ಸುಮಾರಾಗಿ ಹಾಡಲು ಬಂದರೂ ಸಾಕು, ಮಕ್ಕಳಿಗೆ ಹೇಳಿಕೊಡಬಹುದು. ಹತ್ತಿರದಲ್ಲೆ ಇರುವ ಸಂಗೀತ ಶಿಕ್ಷಕರೋ, ಇಲ್ಲ ಶಾಲೆಯ ಡ್ರಾಯಿಂಗ್ ಮಾಸ್ತರರನ್ನೋ, ಬಳಸಿಕೊಳ್ಳಬಹುದು. ನಾಟಕವನ್ನು ಹೇಳಿಕೊಡಲು ಸ್ವಲ್ಪ ಮಟ್ಟಿಗೆ ನಟನೆ ಬಂದರೇ ಸಾಕು. ಪಂಚೆ, ಸೀರೆಗಳೇ ರಂಗ ಸಜ್ಜಿಕೆಗೆ ಸಹಾಯವಾಗಬಹುದು.

ಹೀಗೆ ಮಕ್ಕಳ ಶಿಬಿರಗಳನ್ನು ತುಂಬಾ ಸರಳವಾಗಿ ರೂಪಿಸಬಹುದು. ಅಂತ್ಯದಲ್ಲಿ ನಾಟಕ ಪ್ರದರ್ಶನ ಏರ್ಪಡಿಸುವುದು ಕಷ್ಟವಾದರೆ ವಿವಿಧ ವಿನೋದಾವಳಿ ಕಾರ್ಯಕ್ರಮವನ್ನು ಆಯೋಜಿಸಬಹುದು.

ಮಕ್ಕಳ ಕಾರ್ಯಾಗಾರದ ಹೆಸರಲ್ಲೊ ಇಲ್ಲ ಮಕ್ಕಳ ಶಿಬಿರದ ಹೆಸರಲ್ಲೋ ಒಟ್ಟಿನಲ್ಲಿ ಮಕ್ಕಳ ಮನೋವಿಕಾಸವಾಗುವಂಥ ಕೆಲಸಗಳು ಎಲ್ಲೆಡೆಯೂ ಆಗಬೇಕು. ಉಳ್ಳವರು, ಇಲ್ಲದವರು, ಗ್ರಾಮೀಣ ಮಕ್ಕಳು, ನಗರದ ಮಕ್ಕಳು, ಮುಂತಾದ ತಾರತಮ್ಯ ವಿಲ್ಲದೆ ಎಲ್ಲೆಡೆಯೂ ನಡೆಯುವಂತಾದರೆ ಸಾರ್ಥಕ.

ನಂ. 195, 5ನೇ ಮುಖ್ಯರಸ್ತೆ,
6ನೇ ಕ್ರಾಸ್, ಹಂಪಿನಗರ,
ವಿಜಯನಗರ 2ನೇ ಹಂತ,
ಬೆಂಗಳೂರು – 560 104
ಮೊಬೈಲ್ : 98441 52967

***

# ಮಕ್ಕಳ ರಂಗಭೂಮಿ

- ಎಸ್.ವಿ. ಕಶ್ಯಪ್

ರಂಗಭೂಮಿ ರಂಗಭೂಮಿ ಅಷ್ಟೆ ಅದರಲ್ಲಿ ದೊಡ್ಡವರ ರಂಗಭೂಮಿ, ಮಕ್ಕಳ ರಂಗಭೂಮಿ, ಮುದುಕರ ರಂಗಭೂಮಿ ಎಂದು ಬೇರೆ ವಿಭಾಗಗಳಿಲ್ಲ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಆದರೆ 'ಮಕ್ಕಳ ರಂಗಭೂಮಿ' ಎಂಬುದು ಒಂದು ಸ್ಪೆಷಲೈಸ್ಡ್ (specialised) ರಂಗ ಆಯಾಮ ಮತ್ತು ಅದಕ್ಕೆ ಅದರದ್ದೇ ಆದ ಅಸ್ತಿತ್ವವಿದೆ ಎಂಬುದು ನನ್ನ ಅಭಿಮತ.

ನಾಟಕ ಒಂದು ಸಂಕೀರ್ಣ ಕಲೆಯಾದರೆ, ಮಕ್ಕಳ ನಾಟಕ ಕಲಿಕೆಯ ಹಂತದಲ್ಲಿರುವ ಮುಗ್ಧ ಮನಗಳ ಕಟ್ಟುವಿಕೆಯನ್ನು ಒಳಗೊಂಡ ಇನ್ನೂ ಸಂಕೀರ್ಣ ಕಲೆ. ನಾಟಕದಲ್ಲಿ ಪಾತ್ರಗಳನ್ನು ಕಟ್ಟುವ ಹೊಣೆ ನಿರ್ದೇಶಕರದ್ದು , ಮಕ್ಕಳ ನಾಟಕದ ನಿರ್ದೇಶಕ ಪಾತ್ರಗಳ ಜೊತೆ ತನ್ನ ನಟರ ವ್ಯಕ್ತಿತ್ವವನ್ನು ಕಟ್ಟುತ್ತಿರುತ್ತಾನೆ ಎಂಬುದು ಗಮನಿಸಬೇಕಾದ ಅಂಶ. ನಿರ್ದೇಶಕ ಈ ರೀತಿಯ ಗುರುತರ ಜವಾಬ್ದಾರಿಯನ್ನು ಹೊತ್ತಿದ್ದರೆ, ಮಕ್ಕಳ ನಾಟಕ ಬರೆಯುವ ನಾಟಕಕಾರನ ಸವಾಲುಗಳೇ ಬೇರೆ. ಪ್ರೀತಿ, ಪ್ರೇಮ, ಪ್ರಣಯ, ಜಾತೀಯತೆ, ರಾಜಕೀಯ ಮುಂತಾದ 'ಅಮುಗ್ಧ' ಅಂಶಗಳು ನಾಟಕದಲ್ಲಿ ಬರದಂತೆ ನೋಡಿಕೊಳ್ಳಬೇಕಾಗುತ್ತದೆ. ಅವುಗಳು ಬಂದರೂ ಮಕ್ಕಳ ಮನಸ್ಸಿನ ಎಲ್ಲೆ ಮೀರದಂತಿದ್ದರೆ ಒಳಿತು. ಮಕ್ಕಳ ನಾಟಕ ರಚನೆ ಹಲವಾರು ಪದರಗಳಲ್ಲಿ ಪ್ರತಿಕ್ರಿಯೆಯನ್ನು ಹುಟ್ಟಿಸುವಂತಿದ್ದರೆ ಅದು ಇನ್ನೂ ಚೆನ್ನ , ಕಾರಣ ಮಕ್ಕಳು ಆಡುವ ನಾಟಕಗಳನ್ನು ಬರೀ ಮಕ್ಕಳೇ ನೋಡುವುದಿಲ್ಲ, ಅಷ್ಟೇ ಅಲ್ಲ ವಿವಿಧ ವಯೋಮಾನದ ಮಕ್ಕಳ ಗ್ರಹಿಕೆಯನ್ನು ತಣಿಸುವಂತಿರಬೇಕಾದ ಅನಿವಾರ್ಯತೆಯೂ ಇದೆ. ಹಾಗಾಗಿ ಮಕ್ಕಳ ನಾಟಕ ಏಕಕಾಲಕ್ಕೆ ಸರಳ ಹಾಗೂ ಸಂಕೀರ್ಣ ಎರಡೂ ಆಗಬೇಕಿರುವ ಸಾಧ್ಯತೆಯನ್ನು ಇಲ್ಲಿ ಮನಗಾಣಬೇಕು. ಇನ್ನು ನೇಪಥ್ಯದಲ್ಲಿ ದುಡಿಯುವ ವಿನ್ಯಾಸಗಾರರು, ಬೆಳಕು ತಜ್ಞರು, ಸಂಗೀತಗಾರರು ಮಕ್ಕಳಿಗೆ ಇಷ್ಟವಾಗುವ ಮಾಯಾಲೋಕವನ್ನು ಸೃಷ್ಟಿಸುವಲ್ಲಿ ಕ್ರಿಯಾಶೀಲರಾಗಬೇಕಾಗುತ್ತದೆ.

ಹೀಗಾಗಿಯೇ ಮಕ್ಕಳ ನಾಟಕ ಒಂದು ಪ್ರದರ್ಶಕ ಕಲೆ ಅಷ್ಟೇ ಆಗದೆ, ವ್ಯಕ್ತಿತ್ವ ವಿಕಸನದ ಜಾಡು ಹಿಡಿಯುತ್ತದೆ. ''ರಂಗಶಿಕ್ಷಣ'' ಅನಿವಾರ್ಯ ಅನಿಸುತ್ತದೆ. ತಮ್ಮ ಹೆಸರನ್ನೂ ಹೇಳಲು ಹಿಂದೆ ಮುಂದೆ ನೋಡುವ ಮಕ್ಕಳು ರಂಗಶಿಕ್ಷಣದ ಮಾಂತ್ರಿಕ ಸ್ಪರ್ಶದಿಂದ ವೇದಿಕೆಯ ಮೇಲೆ ಭಾಷಣ ಮಾಡುವ ಸ್ಥೈರ್ಯವನ್ನೂ ಪಡೆದುಕೊಳ್ಳಬಹುದು. ನಮ್ಮ 'ವಿಜಯನಗರಬಿಂಬ' ಮಕ್ಕಳ ರಂಗಶಾಲೆಯ 15 ವರ್ಷದ ಪಯಣದಲ್ಲಿ ಈ ರೀತಿಯ ನೂರಾರು ನಿದರ್ಶನಗಳನ್ನು ನಾವು ಕಂಡಿದ್ದೇವೆ. ಜೊತೆಗೆ ಭಾಷೆಯ ಬಗೆಗಿನ ಪ್ರೀತಿಯನ್ನೂ ನಮ್ಮ ವಿದ್ಯಾರ್ಥಿಗಳು ರಂಗಶಿಕ್ಷಣದ ಅವಧಿ ಯಲ್ಲಿ ಬೆಳೆಸಿಕೊಂಡಿರುವುದನ್ನು ಕಣ್ಣಾರೆ ಕಂಡಿದ್ದೇವೆ. ಕನ್ನಡವನ್ನು ಸ್ಪಷ್ಟವಾಗಿ ಮಾತಾಡುವ, ಮಕ್ಕಳಿಗೆ ನಿಲುಕಬಹುದಾದಂತಹ, ಸ್ಥಳಗಳು, ಆವರಣಗಳು ಕಡಿಮೆ ಆಗುತ್ತಿರುವ ಈ ಸಮಯದಲ್ಲಿ ರಂಗಶಿಕ್ಷಣ ಭಾಷೆಯ ಅಭಿಮಾನ ಹೆಚ್ಚಿಸುವಂಥಾ ಕೆಲಸವನ್ನು ಮಾಡುತ್ತದೆ ಎಂದರೆ ಅದು ಅಕ್ಷರಶಃ ಸತ್ಯ. ಒಟ್ಟು ಕುಟುಂಬಗಳು ಕಡಿಮೆ ಆಗುತ್ತಿರುವ ಇಂದಿನ ದಿನಗಳಲ್ಲಿ ಮಕ್ಕಳು ಮಕ್ಕಳ ಜೊತೆಗೆ ಬೆರೆಯುವ, ಎಲ್ಲ ಒಟ್ಟಿಗೆ ಕಲೆತು ಆಟ ಆಡುವ ಪ್ರಕ್ರಿಯೆಯೇ ಕಡಿಮೆ ಆಗುತ್ತಿರುವುದು ನಿಜಕ್ಕೂ ಶೋಚನೀಯ. ಮಕ್ಕಳ ರಂಗಭೂಮಿ ಅದಕ್ಕೆ ಪರಿಹಾರ ಮಾರ್ಗವಾಗಿಯೂ ರೂಪುಗೊಂಡಿದೆ ಎನ್ನುವುದು ಗಮನಿಸಬೇಕಾದ ಅಂಶ. ಬೇಸಿಗೆ ರಜೆಯಲ್ಲಿ ಊರಿಗೂ, ತಾತನ ಮನೆಗೂ ಹೋಗುತ್ತಿದ್ದ ಕಾಲ, ಕ್ರಮೇಣವಾಗಿ ಮರೆಯಾಗುತ್ತಿದೆ. ಬೇಸಿಗೆ ಶಿಬಿರಗಳೂ ಅದಕ್ಕೆ ಕಾರಣವಾಗುತ್ತಿರಬಹುದು. ಇನ್ನೊಂದು ನಿಟ್ಟಿನಿಂದ ನೋಡಿದಾಗ ಅಜ್ಜಿ-ತಾತಂದಿರ ಮನೆಗೆ ಅನಿವಾರ್ಯ ಕಾರಣದಿಂದ ಹೋಗಲಾರದಂಥ ಮಕ್ಕಳಿಗೆ ಬೇಸಿಗೆ ಶಿಬಿರಗಳು ಪರ್ಯಾಯವಾಗಿ ನಿಲ್ಲುತ್ತವೆ. ಇಂಥ ಬೇಸಿಗೆ ಶಿಬಿರಗಳನ್ನು ಆಯೋಜಿಸುವ ಸಂಸ್ಥೆಗಳು ಕಲಾಶಿಕ್ಷಣದ ಜೊತೆಗೆ ಮಕ್ಕಳ ಮಾನಸಿಕ ಬೆಳವಣಿಗೆಯನ್ನು ಪರಿಭಾವಿಸಿ ಮುನ್ನಡೆದರೆ ಚೆನ್ನ. ಬೇಸಿಗೆ ಶಿಬಿರದ ನಂತರ ನಿರಂತರತೆಯನ್ನು ಕಾಪಾಡುವಲ್ಲಿ ರಂಗಶಾಲೆಗಳ ಮಾದರಿ ಹೆಚ್ಚು ಸೂಕ್ತ. ವಿಜಯನಗರಬಿಂಬ ಕಳೆದ 15 ವರ್ಷದಿಂದ ಮಕ್ಕಳಿಗಾಗಿ ರಂಗತರಬೇತಿ ಕಾರ್ಯಾಗಾರಗಳನ್ನು ರಂಗಶಾಲೆಯನ್ನು ನಡೆಸುತ್ತಾ ಬಂದಿದೆ.

ಈಗಾಗಲೇ ಮಕ್ಕಳ ರಂಗಭೂಮಿಯ ಸೂಕ್ಷ್ಮ ವಿಷಯಗಳನ್ನು ಹಂಚಿಕೊಂಡಿದ್ದೇನೆ. ಈಗ ನಮ್ಮ ರಂಗಶಾಲೆ 'ವಿಜಯನಗರಬಿಂಬ'ದಲ್ಲಿ ಕಳೆದ 15 ವರ್ಷಗಳಲ್ಲಿ ಮಾಡಿದ ಕೆಲವು ಪ್ರಯೋಗಗಳನ್ನು ಹಂಚಿಕೊಳ್ಳಲು ಇಚ್ಛಿಸುತ್ತೇನೆ. ನಮ್ಮ ರಂಗಶಾಲೆ ಈ ವರೆಗೂ ಮಾಡಿದ ಎಲ್ಲ ಕಾರ್ಯಾಗಾರಗಳೂ ಮತ್ತು ಕೋರ್ಸ್‌ಗಳೂ production oriented ಆಗಿದ್ದವು ಎಂಬುದು ಹೆಮ್ಮೆ ಕೊಡುತ್ತದೆ. ಕಳೆದ ಒಂದೂವರೆ ದಶಕದಲ್ಲಿ ಹದಿನೈದಕ್ಕಿಂತ ಹೆಚ್ಚು ಮಕ್ಕಳ ಪೂರ್ಣಾವಧಿ ನಾಟಕಗಳನ್ನು ನಿರ್ಮಿಸಿದೆ. ಆ ಎಲ್ಲ ನಾಟಕಗಳೂ ಆಯಾ ಕಾಲಕ್ಕೆ ಪ್ರಸ್ತುತವೆನಿಸಿದ ವಿಚಾರಗಳನ್ನು ಹೊತ್ತು

ರಂಗಕ್ಕೇರಿದವು ಮತ್ತು ಅವೆಲ್ಲ ನಾಟಕಗಳು ಸಾರ್ವಕಾಲಿಕ ಪ್ರಸ್ತುತತೆಯನ್ನು ಹೊಂದಿರುವುದೂ ವಿಶೇಷ. ಪೂರ್ಣಾವಧಿ ನಾಟಕಗಳಷ್ಟೆ ಅಲ್ಲದೆ ಹಲವಾರು ಮಕ್ಕಳ ಬ್ಯಾಲೆಗಳನ್ನೂ ವಿಜಯನಗರ ಬಿಂಬ ರಂಗಶಾಲೆ ನಿರ್ಮಿಸಿದೆ. ಅಲ್ಲದೆ ಮೂಕಾಭಿನಯ, ಮಕ್ಕಳೇ ಆಡಿಸುವ ಬೊಂಬೆಯಾಟ, ಕಿರುನಾಟಕಗಳನ್ನು ನಮ್ಮ ಶಾಲೆ ನಿರ್ಮಿಸಿದೆ. ಅಲ್ಲದೆ ಹಲವಾರು ಸಂಘ ಸಂಸ್ಥೆಗಳ ಜೊತೆಗೂಡಿ; ಕೊಳಗೇರಿ ಮಕ್ಕಳಿಗೆ, ಅನಾಥಾಲಯಗಳಿಗೆ ಉಚಿತ ರಂಗತರಬೇತಿ ಕಾರ್ಯಾಗಾರಗಳನ್ನು ನಮ್ಮ ಶಾಲೆ ಹಮ್ಮಿಕೊಂಡಿರುವುದು ರಂಗಶಾಲೆಯ ಸಾಮಾಜಿಕ ಕಾಳಜಿಗೆ ಹಿಡಿದ ಕೈಗನ್ನಡಿ ಆಗಿದೆ. ಈ ಎಲ್ಲದರ ವಿವರಗಳನ್ನು ಲೇಖನದ ಕೊನೆಯಲ್ಲಿ ಸಂಕ್ಷಿಪ್ತವಾಗಿ ಉಲ್ಲೇಖಿಸಲಾಗಿದೆ.

ರಂಗಪ್ರಯೋಗಗಳ ಜೊತೆಜೊತೆಗೆ 'ವಿಜಯನಗರ ಬಿಂಬ' ನೀಡುವ ರಂಗಶಿಕ್ಷಣದಲ್ಲಿ ರಂಗಭೂಮಿಯ ಇತರ ಆಯಾಮಗಳಾದ ಸಂಗೀತ, ನೃತ್ಯ, ಮೂಕಾಭಿನಯ ಮುಂತಾದವುಗಳನ್ನು ಸಿಲಬಸ್‌ನಲ್ಲಿ ಹೊಸೆಯಲಾಗಿದೆ. ಇವೆಲ್ಲದರಿಂದ ಮಕ್ಕಳಿಗೆ ನಮ್ಮ ಸಂಸ್ಕೃತಿಯ ಪರಿಚಯ ಮಾಡಿಸುವುದು ನಮ್ಮ ಉದ್ದೇಶ. ಜೊತೆಜೊತೆಗೆ ಮಕ್ಕಳ ಮನೋವಿಕಾಸಕ್ಕಾಗಿ ಹಲವಾರು ವ್ಯಕ್ತಿತ್ವ ವಿಕಸನದ ಅಂಶಗಳನ್ನೂ ತರಬೇತಿಯಲ್ಲಿ ಅಳವಡಿಸಲಾಗಿದೆ. ಅವುಗಳನ್ನು ಹಂಚಿಕೊಂಡರೆ ಮಕ್ಕಳ ಜೊತೆ ಕೆಲಸ ಮಾಡುವ ಸಂಘ ಸಂಸ್ಥೆಗಳಿಗೆ ಉಪಯೋಗವಾಗಬಹುದು ಎಂದು ಅವುಗಳ ಬಗ್ಗೆ ಈಗ ಬೆಳಕು ಚೆಲ್ಲುತ್ತಿದ್ದೇನೆ.

**''ಚಿತ್ರಕಥನ''** : ಮಕ್ಕಳಲ್ಲಿ ಹುದುಗಿರುವ ಪ್ರಚಂಡ ಕಲ್ಪನಾ ಶಕ್ತಿಯನ್ನು ಬಿಂಬಿಸುವ ಕಾರ್ಯಕ್ರಮ 'ಚಿತ್ರಕಥನ'. ಇದು ಕಳೆದ ಐದು ವರ್ಷಗಳಿಂದ ರಂಗಶಾಲೆಯ 7 ತಿಂಗಳ ಕೋರ್ಸ್‌ನಲ್ಲಿ ನಡೆಸುತ್ತಿರುವ ಕಾರ್ಯಕ್ರಮ. ರಂಗಶಾಲೆಗೆ ಬಂದ ಮಕ್ಕಳನ್ನು ಹಲವು ಗುಂಪುಗಳನ್ನಾಗಿ ಮಾಡಲಾಗುತ್ತದೆ. ಪ್ರತಿ ಗುಂಪಿನವರೂ ತಲಾ ಒಂದೊಂದು ಮಿಶ್ರಮಾಧ್ಯಮದ ಕಲಾಕೃತಿಯನ್ನು ರಚಿಸುತ್ತಾರೆ. 'ಚಿತ್ರ' ತಯಾರಾಗುತ್ತದೆ. ಒಂದು ಗುಂಪು ಮಾಡಿದ ಚಿತ್ರವನ್ನು ಇನ್ನೊಂದು ಗುಂಪಿಗೆ ನೀಡಲಾಗುತ್ತದೆ. ಆ ಚಿತ್ರವನ್ನಿಟ್ಟುಕೊಂಡು ಮತ್ತೊಂದು ಗುಂಪು ಕಥೆಯನ್ನು ಹೆಣೆಯುತ್ತಾರೆ. ಕಥೆಯನ್ನು ಕಟ್ಟುವುದಷ್ಟೇ ಅಲ್ಲ ಅವನ್ನು ಕಥನದ ಮೂಲಕ ಪ್ರೇಕ್ಷಕರೆದುರು ಪ್ರಸ್ತುತ ಪಡಿಸುತ್ತಾರೆ. ಪ್ರತಿ ವರ್ಷ 6-10 ಕಥೆಗಳು ಪ್ರದರ್ಶಿತವಾಗುತ್ತದೆ. ಹಾಗಾಗಿಯೇ ಚಿತ್ರಕಥನ-ಕಥೆಗಳ ಹಬ್ಬವಾಗಿ ಮಾರ್ಪಡುತ್ತದೆ. ಮಕ್ಕಳ ಕಲ್ಪನೆಗಳು ಗರಿಗೆದರಿ ವಿಜೃಂಭಿಸುತ್ತವೆ.

**''ಬೊಂಬೆ ಹಬ್ಬ''** : ಇದು ನಮ್ಮ ವಿಜಯನಗರ ಬಿಂಬದ ಹೆಮ್ಮೆಯ ಪ್ರಯೋಗ. ಇದು ಮಕ್ಕಳೇ ನಾಟಕ ಬರೆದು, ಮಕ್ಕಳೇ ತಾಲೀಮು ಮಾಡಿ, ಅವರೇ ರಂಗಸಜ್ಜಿಕೆ ಮುಂತಾದವುಗಳನ್ನು ಮಾಡಿ, ಅವರೇ ಸ್ವಾಗತಭಾಷಣ, ವಂದನಾರ್ಪಣೆಗಳನ್ನು ಮಾಡಿ, ಅವರೇ ಅತಿಥಿಗಳನ್ನು ಕರೆದು, ಮಕ್ಕಳೇ ಎಲ್ಲವನ್ನೂ ಮಾಡಿ ಮಕ್ಕಳೇ ಆಯೋಜಿಸುವ

ಮಕ್ಕಳ ಕಿರುನಾಟಕೋತ್ಸವ. ಕಳೆದ ಎಂಟು ವರ್ಷಗಳಿಂದ ವಿಜಯನಗರ ಬಿಂಬ ವರ್ಷಕ್ಕೆ 6-7 ಕಿರುನಾಟಕಗಳಂತೆ ಸುಮಾರು 50ಕ್ಕೂ ಹೆಚ್ಚು ಕಿರುನಾಟಕಗಳಿಗೆ ವೇದಿಕೆ ಆಗಿದೆ. ಕಿರುನಾಟಕ ಪ್ರದರ್ಶನಕ್ಕೆ ಅಥವ ಕಿರುನಾಟಕೋತ್ಸವಕ್ಕೆ ಪೂರ್ವಭಾವಿ ತಯಾರಿಯ ಪ್ರೋಸೆಸ್ ನಿಜಕ್ಕೂ ತುಂಬ ವಿಶಿಷ್ಟವಾಗಿರುತ್ತದೆ. ಪುಟಾಣಿ ನಿರ್ದೇಶಕರ ಆಯ್ಕೆ ಚುನಾವಣೆಯ ಮೂಲಕ ನಡೆಯುತ್ತದೆ. ಚುನಾವಣೆಗೆ ಮುಂಚೆ ನಿರ್ದೇಶಕರು ತಮ್ಮನ್ನು ಯಾಕೆ ಆರಿಸಬೇಕು ಎಂದು ಭಾಷಣ ಮಾಡುತ್ತಾರೆ. ಈ ಸ್ವಾರಸ್ಯ ಪ್ರಕ್ರಿಯೆಯ ನಂತರ ನಡೆಯುವುದು ಚುನಾವಣೆ. 15 ನಿರ್ದೇಶಕರಲ್ಲಿ 7 ಅಥವಾ 8 ಜನ ನಿರ್ದೇಶಕರು ಆಯ್ಕೆ ಆಗುತ್ತಾರೆ. ಆಯ್ಕೆಯಾದ ನಿರ್ದೇಶಕರು ಮೊದಲು ತಮ್ಮ ಸಹಾಯಕರನ್ನು, ನಂತರ ತಮ್ಮ ತಂಡವನ್ನು ಆರಿಸಿಕೊಳ್ಳುತ್ತಾರೆ. ಹೀಗೆ 7-8 ತಂಡಗಳು ತಯಾರಾಗುತ್ತವೆ. ನಂತರ ತಮ್ಮ ತಮ್ಮ ತಂಡಗಳ ಜೊತೆ ಚರ್ಚಿಸಿ, ತಮಗೆ ಕೊಟ್ಟಿರುವ ವಿಷಯದ ಬಗ್ಗೆ ಕಥೆ ಹೆಣೆಯುತ್ತಾರೆ. ನಾಟಕ ರಚನೆಯ ಪ್ರತಿ ಹಂತದಲ್ಲೂ ಶಿಕ್ಷಕರ ಅನುಮತಿ ಅಗತ್ಯ. ಕಥೆಗೆ ಹಸಿರು ನಿಶಾನೆ ಸಿಕ್ಕ ನಂತರ ದೃಶ್ಯಗಳ ರಚನೆಯಾಗುತ್ತದೆ, ಸಂಭಾಷಣೆ ತಯಾರಾಗುತ್ತದೆ. ಓದುವ ಹಂತದಲ್ಲಿ ಹಸಿರು ನಿಶಾನೆ ಸಿಕ್ಕಿದ ಮೇಲೆ ತಾಲೀಮು ಆರಂಭವಾಗುತ್ತದೆ. ತಾಲೀಮು ಕೊಠಡಿ ಕಾಯ್ದಿರಿಸುವುದರಿಂದ ಹಿಡಿದು, ಯಾವ ಯಾವ ಮಕ್ಕಳು ಎಂದು ಬರಬೇಕು ಎನ್ನುವುದನ್ನು ಪುಟಾಣಿ ನಿರ್ದೇಶಕರೇ ನಿರ್ಧರಿಸುತ್ತಾರೆ. ತಾಲೀಮಿನ ಪ್ರಕ್ರಿಯೆಯ ಜೊತೆಗೆ ರಂಗಪರಿಕರಗಳನ್ನೂ ಸರಳವಾಗಿಯೇ ತಯಾರಿಸಿಕೊಳ್ಳುತ್ತಾರೆ. ಮುಖ್ಯ ಅತಿಥಿಗಳನ್ನು ಮಕ್ಕಳು ಸಂಪರ್ಕಿಸುತ್ತಾರೆ. ಅತಿಥಿಗಳು ಬರಲೊಪ್ಪಿದ ಮೇಲೆ ಶಿಕ್ಷಕರಿಗೆ ತಿಳಿಸುತ್ತಾರೆ. ನಂತರ ಎಲ್ಲ ಮುಖ್ಯ ಅತಿಥಿಗಳಿಗೂ ರಂಗಶಾಲೆಯ ವತಿಯಿಂದ ಔಪಚಾರಿಕವಾಗಿ ಕರೆಯೋಲೆಗಳು ಹೋಗುತ್ತವೆ. ತಾಲೀಮು ನಡೆದೇ ಇರುತ್ತದೆ. ನಂತರ ಎರಡು ದಿನಗಳ ಕಿರುನಾಟಕೋತ್ಸವವನ್ನು ಮಕ್ಕಳೇ ಆಯೋಜಿಸುತ್ತಾರೆ.

''ಚಿಲಿಪಿಲಿ'' ಮಕ್ಕಳ ಕವಿಮೇಳ : ಮಕ್ಕಳಲ್ಲಿ ಸಾಹಿತ್ಯಾಸಕ್ತಿ ಮೂಡಿಸಲು ನಮ್ಮ ಪ್ರಯತ್ನ ಈ ಚಿಲಿಪಿಲಿ. ಮಕ್ಕಳಿಗೆ ಕವನಗಳನ್ನು ಬರೆಯಿರಿ ಎಂದಾಗ ಕೆಲವು ಮಕ್ಕಳು ಹುಮ್ಮಸ್ಸಿನಿಂದಲೇ ಮುಂದೆ ಬರುತ್ತಾರೆ. ಇನ್ನು ಕೆಲವರು ಕವನ ಬರೆಯುವುದು ಹೇಗೆ ? ಎಂಬ ಪ್ರಶ್ನೆ ಮುಂದಿಡುತ್ತಾರೆ. ಕನ್ನಡದ ಕವಿ ಕಾವ್ಯ ಪರಿಚಯ ಮಾಡಿಸಿ, ಕವಿತೆಯ ಗುಣಲಕ್ಷಣಗಳನ್ನು ಮಕ್ಕಳಿಗೆ ತಿಳಿಸಿಕೊಡಲಾಗುತ್ತದೆ. ನಂತರ ಮಕ್ಕಳು ನಾ ಮುಂದು ತಾ ಮುಂದು ಎಂದು ಕವನಗಳನ್ನು ಬರೆದುಕೊಂಡು ಬರುತ್ತಾರೆ. ಪ್ರತಿವರ್ಷಕ್ಕೆ 40-50 ಮಕ್ಕಳು ಕವನಗಳನ್ನು ಬರೆದುಕೊಂಡು ಬರುತ್ತಾರೆ. ಕೆಲವರು ತಮ್ಮ ಪೋಷಕರ, ತಾತ ಅಜ್ಜಿಯರ ನೆರವು ಪಡೆದು ಬರೆದುಕೊಂಡು ಬಂದಿರುತ್ತಾರೆ. ಎಲ್ಲ ಕವನಗಳನ್ನು ಹಿರಿಯ ಪ್ರಖ್ಯಾತ ಕವಿಗಳ ಸಮ್ಮುಖದಲ್ಲಿ ಮಕ್ಕಳು ವಾಚಿಸುವ ಕಾರ್ಯಕ್ರಮವೇ ಚಿಲಿಪಿಲಿ ಮಕ್ಕಳ ಕವಿಮೇಳ. ಈ ಕಾರ್ಯಕ್ರಮದಿಂದ ಮಕ್ಕಳು ಕನ್ನಡ ಭಾಷೆಯ ಬಗ್ಗೆ ತೋರಿಸುವ ಕಾಳಜಿ, ಆಸ್ಥೆ ಅಚ್ಚರಿ ಹುಟ್ಟಿಸುತ್ತದೆ. ಒಟ್ಟಾರೆಯಾಗಿ ಹೇಳಬೇಕಾದರೆ ಮನೆ ಮನೆಗಳಲ್ಲಿ, ಚಿಣ್ಣರ

ಮನಗಳಲ್ಲಿ ಭಾಷೆಯ, ನಮ್ಮ ಸಂಸ್ಕೃತಿಯ ವಾತಾವರಣ ಸೃಷ್ಟಿಸುವಲ್ಲಿ ಚಿಲಿಪಿಲಿ ಮಕ್ಕಳ ಕವಿಮೇಳ ಸಫಲವಾಗಿರುವುದನ್ನು ಹಲವಾರು ವರ್ಷಗಳಿಂದ ಕಂಡಿದ್ದೇವೆ.

''ಮೀಡಿಯಾ ಹಬ್ಬ'' : ನಮ್ಮ ರಂಗಶಾಲೆಯ ಮುಕುಟಕ್ಕೆ ಮತ್ತೊಂದು ಗರಿ ಈ ಮೀಡಿಯಾ ಹಬ್ಬ. ಇಂದಿನ ದಿನಗಳಲ್ಲಿ 'ಮೀಡಿಯಾ' ಒಂದು ದೊಡ್ಡ ಅಭಿವ್ಯಕ್ತಿ ಮಾಧ್ಯಮವಾಗಿ ರೂಪುಗೊಳ್ಳುತ್ತಿದೆ. ಮಕ್ಕಳಿಗೆ ಪತ್ರಿಕಾ ಮಾಧ್ಯಮ, ಬ್ಲಾಗ್ ಮುಂತಾದ ವಿದ್ಯುನ್ಮಾನ ಮಾಧ್ಯಮಗಳ ಪರಿಚಯ ಮಾಡಲಾಗುತ್ತದೆ. ಬ್ಲಾಗ್ ಟ್ರೈನಿಂಗ್ ಕೂಡ ನೀಡಲಾಗುತ್ತದೆ. ಮಕ್ಕಳು ಗುಂಪುಗಳಲ್ಲಿ ತಮ್ಮದೇ ಬ್ಲಾಗ್ ಮಾಡುತ್ತಾರೆ. ಮೀಡಿಯ ಮಕ್ಕಳ ಮನಸ್ಸನ್ನು ಹಾಳು ಮಾಡುತ್ತಿವೆ ಎಂದು ಕೊರಗುತ್ತಾ, ಮಾಧ್ಯಮಗಳನ್ನು ದೂರುತ್ತಾ ಕೂಡುವುದರ ಬದಲು ಅದನ್ನು ಸದುಪಯೋಗ ಪಡಿಸಿಕೊಳ್ಳುವ ಸಕಾರಾತ್ಮಕ ಕ್ರಿಯೆ ಈ ಮೀಡಿಯಾ ಹಬ್ಬ. ಏನು ಮಾಡಿದರೂ ಮಕ್ಕಳು ಕಂಪ್ಯೂಟರ್ ಮುಂದೆ ಕುಳಿತುಕೊಳ್ಳುವುದನ್ನು ತಪ್ಪಿಸಲಾಗದಂಥ ದಿನಗಳಲ್ಲಿ, ಅದನ್ನೇ ಬಳಸಿ ಮಕ್ಕಳು ಸಾಂಸ್ಕೃತಿಕ ಲೋಕವನ್ನು ಹೇಗೆ ಕಟ್ಟಿಕೊಳ್ಳಬಹುದು ಎಂಬುದಕ್ಕೆ ಒಳ್ಳೆ ಉದಾಹರಣೆ ಈ ಮೀಡಿಯಾ ಹಬ್ಬ. ಕಂಪ್ಯೂಟರ್ ಮುಂದೆ ಕುಳಿತು ಆಟ ಆಡುವುದಕ್ಕಿಂತ, ಬ್ಲಾಗ್ ಮುಖಾಂತರ ತಮಗೆ ಅನ್ನಿಸಿದ್ದನ್ನು ಅಭಿವ್ಯಕ್ತಿಸುವ ಪ್ರಕ್ರಿಯೆ ಮಕ್ಕಳ ಮನೋವಿಕಾಸಕ್ಕೆ ಕಾರಣವಾಗುತ್ತದೆ.

''ನಮ್ಮಾತು ಸಂವಾದ'' : ಮಕ್ಕಳು, ಪೋಷಕರು ಮತ್ತು ತಮ್ಮ ತಮ್ಮ ಕ್ಷೇತ್ರಗಳಲ್ಲಿ ನುರಿತ ಸಾಧಕರು ಒಟ್ಟಾಗಿ ಒಂದೆಡೆ ಕುಳಿತು, ಮಕ್ಕಳ ಕುರಿತಾದ ವಿಷಯಗಳ ಬಗ್ಗೆ, ಸಮಸ್ಯೆಗಳ ಬಗ್ಗೆ ಚರ್ಚಿಸುವ ಕಾರ್ಯಕ್ರಮವೇ 'ನಮ್ಮಾತು' ಸಂವಾದ. ವಿಚಾರ ಸಂಕಿರಣದಲ್ಲಿ ಆಗುವ ಮಂಥನವೇ ಈ ಕಾರ್ಯಕ್ರಮದಲ್ಲೂ ಆಗುತ್ತದೆ. ಆದರೆ ಅದಕ್ಕೆ ಅನೌಪಚಾರಿಕತೆಯ ಲೇಪವಿರುವುದರಿಂದ ಮಕ್ಕಳಿಗೆ ಹೃದ್ಯವಾಗುತ್ತದೆ. ಆದ್ದರಿಂದ ಮಕ್ಕಳು ಭಾಗವಹಿಸುತ್ತಾರೆ, ಚರ್ಚಿಸುತ್ತಾರೆ, ಪ್ರಶ್ನೆ ಕೇಳುತ್ತಾರೆ. ಪೋಷಕರೂ ತಮ್ಮ ಅನಿಸಿಕೆಯನ್ನು ಹಂಚಿಕೊಳ್ಳಲು ಮುಕ್ತವಾದ ವೇದಿಕೆ ಕಲ್ಪಿಸಲಾಗಿರುತ್ತದೆ. ಪೋಷಕರು ಮತ್ತು ಮಕ್ಕಳು ಸಕ್ರಿಯರಾಗಿ ಪಾಲ್ಗೊಳ್ಳುತ್ತಾರೆ ಅಲ್ಲದೆ ಹಲವಾರು ವಿಷಯಗಳ ಮೇಲೆ ಬೆಳಕು ಚೆಲ್ಲುತ್ತಾರೆ.

ಇವುಗಳೇ ಅಲ್ಲದೆ, ನಮ್ಮ ರಂಗಶಾಲೆಯ ವತಿಯಿಂದ ಆಯ್ದ ವಿದ್ಯಾರ್ಥಿಗಳನ್ನು ಇತರ ತಂಡಗಳು ಮಾಡುವ ರಂಗಪ್ರದರ್ಶನಕ್ಕೆ ಕರೆದೊಯ್ಯುವ ವ್ಯವಸ್ಥೆಯನ್ನೂ ಮಾಡಲಾಗುತ್ತದೆ ಅಥವ ನಮ್ಮ ಸಭಾಂಗಣದಲ್ಲಿಯೇ ರಂಗಪ್ರದರ್ಶನ, ಸಂಗೀತ ಕಾರ್ಯಕ್ರಮ ಮುಂತಾದವುಗಳನ್ನು ಏರ್ಪಡಿಸಿ ಮಕ್ಕಳಿಗೆ ಒಟ್ಟಾರೆ ಸಾಂಸ್ಕೃತಿಕ ಲೋಕದ ಪರಿಚಯ ಮಾಡಿಸುವ ಪ್ರಯತ್ನ ಮಾಡುತ್ತೇವೆ.

ಈ ಎಲ್ಲ ಕಾರ್ಯಕ್ರಮಗಳು, ರಂಗಪ್ರದರ್ಶನಗಳು, ರಂಗಶಾಲೆ ಮುಂತಾದ ಎಲ್ಲ ಸೃಜನಶೀಲ ಚಟುವಟಿಕೆ ನಡೆಯುವಲ್ಲಿ ಪೋಷಕರ ಪಾತ್ರ ಬಹುದೊಡ್ಡದು. ಪೋಷಕರು

ತಮಗಿರವ ಒತ್ತಡಗಳಲ್ಲಿ ಮಕ್ಕಳ ಮನೋವಿಕಾಸವನ್ನು ಕಡೆಗಣಿಸದೆ, ಇಂತಹ ಸೃಜನಾತ್ಮಕ ಚಟುವಟಿಕೆಗಳಲ್ಲಿ ಮಕ್ಕಳು ಭಾಗವಹಿಸುವಂತೆ ನೋಡಿಕೊಳ್ಳುವುದು ಬಹು ಮುಖ್ಯ. ಮಕ್ಕಳ ವಿಷಯದಲ್ಲಿ ಪೋಷಕರೇ ನಿರ್ಧಾರಕರಾಗಿರುವುದರಿಂದ ಮಕ್ಕಳ ರಂಗಭೂಮಿ ಉಳಿಯುವಲ್ಲಿ ಬೆಳೆಯುವಲ್ಲಿ ಪೋಷಕರ ಪಾಲ್ಗೊಳ್ಳುವಿಕೆ ಅನಿವಾರ್ಯ.

ಮತ್ತೊಂದು ಮುಖ್ಯವಾದ ವಿಷಯವನ್ನು ಪ್ರಸ್ತಾಪಿಸಿ ಲೇಖನಕ್ಕೆ ಮಂಗಳ ಹಾಡುತ್ತೇನೆ. ರಂಗಭೂಮಿಯನ್ನು ಇಂದು ಆವರಿಸಿರುವ ದೊಡ್ಡ ಕೊರತೆ 'ವಿಮರ್ಶೆ'. ಅದರಲ್ಲೂ, ಮಕ್ಕಳ ರಂಗಭೂಮಿಯಲ್ಲಿ ನಾಟಕ ವಿಮರ್ಶೆ ಎಂದರೆ ಬರುವ ಸಾಲು ''ಮಕ್ಕಳು ಏನು ಮಾಡಿದರೂ ಚೆನ್ನ'' ಎಂಬುದು. ಮಕ್ಕಳ ರಂಗಭೂಮಿ ಹಲವಾರು ವರ್ಷಗಳಿಂದ 'ಏನು ಮಾಡಿದರೂ ಚೆನ್ನ' ಎನ್ನುವ ಹಂತ ದಾಟಿದೆ. ಇಲ್ಲೂ ಗಂಭೀರವಾಗಿ ಕೆಲಸ ಮಾಡುವ, ಪ್ರೌಢ ಪ್ರಯತ್ನಗಳನ್ನು ಮಾಡುವ ಸಂಘ ಸಂಸ್ಥೆಗಳು ಹುಟ್ಟಿಕೊಂಡಿವೆ. ಆದ್ದರಿಂದ ವಿಮರ್ಶಕರು, ಇತರ ರಂಗಕರ್ಮಿಗಳು ಮಕ್ಕಳ ರಂಗಭೂಮಿಗೆ ಸಲ್ಲಬೇಕಾದ ಗೌರವ ಸಲ್ಲಿಸುವಂತಾಗಲಿ ಎಂದು ಆಶಿಸುತ್ತೇನೆ.

★★★

# ಸಂಸ್ಕೃತ ನಾಟಕಗಳಲ್ಲಿ ಮಕ್ಕಳ ಪಾತ್ರಗಳು – ಒಂದು ಪ್ರವೇಶಿಕೆ

ಡಾ.ಹೆಚ್.ವಿ.ವೇಣುಗೋಪಾಲ್

'ನಾಟಕ ಬದುಕಿನ ಕನ್ನಡಿ' ಎಂದೊಡನೆಯೇ ಬದುನಲ್ಲಿನ ಎಲ್ಲ ಬಗೆಯ ಪಾತ್ರಗಳೂ ನಾಟಕದ ಅನಿವಾರ್ಯ ಅಂಗಗಳಾಗಿರುತ್ತವೆ. ದೊಡ್ಡವರಂತೆಯೇ ಮಕ್ಕಳೂ ನಾಟಕದ ಅಂಗಗಳಾಗಿರುತ್ತಾರೆ. ಮಕ್ಕಳ ನಾಟಕಗಳು ಎನ್ನುವುದು ಇತ್ತೀಚಿನ ಪರಿಕಲ್ಪನೆ, ಹಾಗು ಅದು ಪಾಶ್ಚಾತ್ಯ ಚಿಂತನೆಯಿಂದ ಪ್ರಭಾವಿತವಾದುದು. ಭಾರತೀಯ ನಾಟಕ ಪರಂಪರೆಯಲ್ಲಿ ಮಕ್ಕಳಿಗಾಗಿ ಬರೆಯಲಾದ ನಾಟಕಗಳು ಕಂಡುಬರುವುದಿಲ್ಲವಾದರೂ, ನಾಟಕಗಳಲ್ಲಿ ಮಕ್ಕಳು ಕಥೆಯ ತಿರುವಿನಲ್ಲಿ ಪ್ರಮುಖ ಪಾತ್ರ ವಹಿಸುವುದು ಕಂಡುಬರುತ್ತವೆ. ಉಪನಿಷತ್ತುಗಳಲ್ಲಿ ಕಲಿಯುವ ತುದಿಯಲ್ಲಿರುವ ಶಿಷ್ಯ ಬಾಲಕನೇ ಆಗಿದ್ದಾನೆ. ಕಲಿಸುವ ತುದಿಯುಲ್ಲಿರುವ ಗುರು ಕಥೆಯ ಫಲನಗಳನ್ನು ನಿರ್ವಚಿಸುತ್ತಾನಾದರೂ ಕಥೆಯ ಕೇಂದ್ರ ಮತ್ತು ಫಲಿತಗಳು ಶಿಷ್ಯನನ್ನೇ ಓಲೈಸುತ್ತವೆ. ಉಪನಷತ್ತುಗಳ ಈ ಅಂಶಗಳಿಂದ ಕಥನ ಕ್ರಿಯೆಯಲ್ಲಿ ಬಾಲಕರ ಪಾತ್ರದ ಗುರುತರತೆಯನ್ನು ಭಾವಿಸಿಕೊಳ್ಳಬಹುದು. ಇನ್ನಿತರೆ ಗದ್ಯ ಪದ್ಯಾದಿ ಕಾವ್ಯಗಳಲ್ಲಿಯೂ ಬಾಲಕರನ್ನು ಚಿತ್ರಿಸಿರುವ ರೀತಿಯು ವೀರಾವೇಶ ಕೂಡಿದವಾಗಿ, ನ್ಯಾಯ ನೀತಿಯನ್ನು ಅನುಸರಿಸುವವರಾಗಿ, ಗುರುಹಿರಿಯರಲ್ಲಿ ಗೌರವಭಾವನೆ ಹೊಂದಿದವರಾಗಿ ಚಿತ್ರಿಸಲಾಗಿದೆ. ಈ ಬಗೆಯ ಚಿತ್ರಣಗಳು ಭಾರತೀಯ ಸಂಸ್ಕೃತಿಯ ಬಹುಮುಖ್ಯ ಬಾಲಕ ಕೇಂದ್ರಿತ ಪಾತ್ರ ಪೋಷಣೆಯ ಅಗತ್ಯ ಅಭ್ಯಾಸವಾಗಿದೆ. ನಾಟಕಗಳ ಮೂಲವನ್ನು ಡಾ. ರಿಡ್ಜ್‌ವೇ ಗುರುತಿಸುವಂತೆ 'ಸಂಸ್ಕೃತ ನಾಟಕಗಳು ಮೂಲತಃ 'ವೀರಪೂಜೆ'ಗೆ ಸಂಬಂಧಿಸಿದ ಆಚರಣೆಯ ಅಂಗಗಳು. ರಾಮಲೀಲಾ ಹಾಗು ಕೃಷ್ಣಲೀಲಾ ಮುಂತಾದವುಗಳು (ಗ್ರೀಕ್ ನಾಟಕಗಳಂತೆ) ಗತಿಸಿದ ವೀರರುಗಳಿಗೆ ಗೌರವಸಲ್ಲಿಸುವ ಪ್ರವೃತ್ತಿ ಮತ್ತು ಸಿದ್ಧಾಂತಗಳನ್ನು ಪುಷ್ಟೀಕರಿಸುವ ಉಜ್ವಲ ದೃಷ್ಟಾಂತಗಳು'. (Dr. Ridgeway-Drama and Dramatic Dances of non European Race) ಇದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲಾಗದಿದ್ದರೂ ಈ ಚಿಂತನೆಗೆ ಪುಷ್ಟಿ ಕೊಡುವಂತೆ

ಕಥನಗಳಲ್ಲಿಯು ಬಾಲಕ ಪಾತ್ರಗಳಾದ ರಾಮ-ಲಕ್ಷ್ಮಣರು, ಲವ-ಕುಶರು, ಭೀಮಾರ್ಜುನರು, ಕೃಷ್ಣ, ಗಣೇಶ-ಸುಬ್ರಹ್ಮಣ್ಯ, ಮುಂತಾದವರುಗಳು ಬದುಕಿನ ವಿವಿಧ ಸನ್ನಿವೇಶಗಳಲ್ಲಿ ನಡೆದುಕೊಳ್ಳುವ ವೀರೋಚಿತ ಬಗೆಯನ್ನು ಮುಂಬರುವ ಯುವ ಜನಾಂಗ ಕಲಿಯಲಗತ್ಯವಾದ ಮಾದರಿ ಬಗೆಯಾಗಿ ಕಾಣಿಸಲಾಗಿದೆ.

ನಾಟಕಗಳಲ್ಲಿಯೂ ಇದೇ ಮಾದರಿ ಮುಂದುವರೆದಿದೆ. ಕಥನ ಶೈಲಿಯಲ್ಲೇ ಬಹುತೇಕ ನಾಟಕಗಳೂ ರಚಿತವಾಗಿರುವುದರಿಂದ ಕಾವ್ಯದಲ್ಲಿ ಸಾಧ್ಯವಾಗುವ ನಿರೂಪಣಾ ಅಂಶವು ನಾಟಕದ ಪಾತ್ರವಾಗಿ ಪರಿವರ್ತಿತವಾಗಿರುತ್ತವೆ. ಮೂಲ ಉದ್ದೇಶಗಳಲ್ಲಿ ಭಿನ್ನ ಆಲೋಚನೆ ಇರುವುದಿಲ್ಲವಾದ್ದರಿಂದ ಚರ್ಚಿತ ಮಾದರಿಯೇ ಮುಂದುವರೆದಿದೆ. ನಾಟಕಕಾರರುಗಳ ಉದ್ದೇಶವು ಕೇವಲ ಮನೋರಂಜನೆಯಾಗಿರದೇ ಜನತೆಯ ಚಾರಿತ್ರ್ಯವನ್ನು ಸುಧಾರಿಸುವ ಪ್ರಯತ್ನಗಳು ಇವಾಗಿರುವುದರಿಂದ ಸಿದ್ಧ ಮಾದರಿಯು ರಚಿತವಾಗಿದೆ. 'ಲೋಕವೃತ್ತ'ದ (ಮಾನವನ ಬದುಕಿನ ಒಳಗು ಹೊರಗುಗಳು) ಅನುಕರಣೆಯೇ ನಾಟಕ ಅಲ್ಲವೇ. ಸಂಸ್ಕೃತ ನಾಟಕಗಳ ವಾತಾವರಣವು ಅತ್ಯಂತ ಸಭ್ಯ, ಶಿಷ್ಟ ಮತ್ತು ಉದಾತ್ತವಾಗಿದೆ. ಆದುದರಿಂದಲೇ ಅಶ್ಲೀಲತೆ, ಜುಗುಪ್ಸೆ ಹಾಗು ಅರುಚಿಯನ್ನು ಉತ್ಪನ್ನಮಾಡುವ ದೃಶ್ಯಗಳೆನಿಸಿರುವ ವಧೆ, ಮೋಸ, ಭೋಜನ, ಸ್ನಾನ, ಸುರತ, ಅನುಲೇಪನ ಇತ್ಯಾದಿಗಳನ್ನು ನಿಷೇಧಿಸಲಾಗಿದೆ (ದಶರೂಪಕ 3-34, 35). ಈ ಎಲ್ಲ ವಿವರಗಳೂ ಸಂಸ್ಕೃತ ನಾಟಕಗಳಲ್ಲಿ ಬಾಲಕರ ಪಾತ್ರಗಳನ್ನು ವಿವೇಚಿಸಿರುವ ಬಗೆಯನ್ನು ಹಾಗು ಅದರ ಹಿಂದಿನ ಮೂಲ ಉದ್ದೇಶವನ್ನು ಗುರುತಿಸಬಹುದು. ಹಾಗೆ ನೋಡಿದರೆ ಸಂಸ್ಕೃತದಲ್ಲಿ ರಚಿತವಾದ ನಾಟಕಗಳಲ್ಲಿ ಬಾಲಪಾತ್ರಗಳನ್ನು ಚಿತ್ರಿಸಿರುವಲ್ಲಿ ರಾಮಾಯಣದ ಕಥೆಯನ್ನು ಆಯ್ದು ದೃಶ್ಯರೂಪವಾಗಿ ರಚಿಸಲಾದುದೇ ಹೆಚ್ಚು. ರಾಮನ ಬಾಲ್ಯ, ಲವ ಕುಶರ ಪಾತ್ರಗಳು ಸುಮಾರು 2000 ವರ್ಷಗಳ ಬಾಲಕರ ಮನಸ್ಸನ್ನು ಗೆದ್ದ ಪಾತ್ರಗಳಾಗಿವೆ. ಆದರೆ ಮಹಾಭಾರತವನ್ನು ಆಧರಿಸಿದ ನಾಟಕಗಳು ಬಾಲಕ ಪಾತ್ರದ ನಿರ್ವಚನೆಗಳು ಅತ್ಯಲ್ಪ. ಬಾಲ್ಯದ ಕಥೆಗಳು ಮಹಾಭಾರತದಲ್ಲಿ ಕಡಿಮೆ ಪ್ರಾಮುಖ್ಯತೆಯನ್ನು ಹೊಂದಿರುವುದರ ಕಾರಣವಿರಬಹುದೇನೋ.

ಸಂಸ್ಕೃತ ನಾಟಕಗಳಲ್ಲಿ ಬಿಂಬಿತವಾಗಿರುವ ಬಾಲಕ-ಬಾಲಕೀಯರ ಪಾತ್ರಗಳನ್ನು ಸ್ಥೂಲವಾಗಿ ಚರ್ಚಿಸುವುದಾದರೆ, ಅತಿ ಪ್ರಾಚೀನ ನಾಟಕಕಾರನೆನಿಸಿದ ಭಾಸ ರೂಪಿಸಿದ ಬಾಲಕರ ಪಾತ್ರಗಳು ವೀರೋಚಿತವಾದವುಗಳು. ಮಧ್ಯಮ ವ್ಯಾಯೋಗದ ಮೂರು ಮಕ್ಕಳ ಪಾತ್ರಗಳು ಕುಟುಂಬಕ್ಕಾಗಿ ಪ್ರಾಣತ್ಯಾಗಕ್ಕೆ ಸಿದ್ಧರಾಗಿ ನಿಂತ ಪಾತ್ರಗಳು. ಘಟೋದ್ಕಚನ ಪಾತ್ರವೂ ಸಹ ಬಾಲಭಾವದಲ್ಲಿಯೇ ಚಿತ್ರಿತವಾದರೂ ಯೌವನದ ಮೊದಲ ಹೆಜ್ಜೆಗಳ ಗುರುತುಗಳು ಬಿಂಬಿತವಾಗಿದೆ. ಬಾಲಚರಿತದಲ್ಲಿ ಕೃಷ್ಣನ ಪಾತ್ರದ ಮೂಲಕ ಅವನ ಬಾಲಲೀಲೆಗಳು, ಮತ್ತು ದೈವೀಕಚರ್ಯೆಗಳು ಬಿಂಬಿತವಾಗಿದೆ.

ಊರುಭಂಗದಲ್ಲಿನ ದುರ್ಜಯನ ಪಾತ್ರವು ನಾಟಕಕ್ಕೆ ದುರಂತದ ನೋಟವನ್ನು ದಕ್ಕಿಸಿಕೊಡುತ್ತದೆ. ಶೂದ್ರಕನ ಮೃಚ್ಛಕಟಿಕದ ರೋಹಸೇನನ ಪಾತ್ರ ಕನಸುಗಳನ್ನು ಕಸಿದುಕೊಳ್ಳುವ ಬಡತನದ ದಾರುಣತೆಯನ್ನು ತಿಳಿಸುತ್ತದೆ. ಕಾಳಿದಾಸನ ಮಾಲವಿಕಾಗ್ನಿಮಿತ್ರ ನಾಟಕದಲ್ಲಿನ ವಸುಮತಿಯ ಪಾತ್ರ ತನ್ನ ಬಾಲಭಾವದಿಂದಾಗಿ ಅಗ್ನಿಮಿತ್ರನಿಗೆ ತನ್ನ ಪ್ರಣಯವನ್ನು ಗುರುತಿಸಿಕೊಳ್ಳಲು ಉತ್ತಮ ಪುರಾವೆಯನ್ನೊದಗಿಸುವ ಪಾತ್ರವಾಗಿ ಬಳಕೆಯಾಗಿದೆ. ಕಾಳಿದಾಸನದೇ ಆದ ವಿಕ್ರಮೋರ್ವಶೀಯದ ಆಯುವಿನ ಪಾತ್ರ ವೀರ ಬಾಲಕನ ಮಾದರಿಯನ್ನು ಮುಂದಿಡುತ್ತದೆ. ಅಭಿಜ್ಞಾನ ಶಾಕುಂತಲ ನಾಟಕದ ಸರ್ವದಮನನ ಪಾತ್ರ ದುಷ್ಯಂತ ಶಕುಂತಲೆಯರ ಮಿಲನದ ದ್ಯೋತಕವಾಗಿದೆ. ಭವಭೂತಿ ಬರೆದ ಉತ್ತರ ರಾಮ ಚರಿತದಲ್ಲಿ ಕಂಡುಬರುವ ಲವ ಮತ್ತು ಕುಶರು ತಮ್ಮ ಪರಾಕ್ರಮವನ್ನು ತೋರಿ ಲಕ್ಷ್ಮಣನನ್ನು ಸೋಲಿಸುವ ಪ್ರಸಂಗ ಬಾಲಕರುಗಳಿಗೆ ಸ್ಫೂರ್ತಿದಾಯಿಯಾಗುವಂತೆ ಚಿತ್ರಿತವಾಗಿದೆ. 18ನೇ ಶತಮಾನದ ಕಲ್ಯದ ಲಕ್ಷ್ಮೀ ನೃಸಿಂಹನು ಸಹ ಇದೇ ವಸ್ತುವನ್ನಿಟ್ಟುಕೊಂಡು ಜನಕ ಜಾನಂದಮ್ ಎಂಬ ಪೂರ್ಣಪ್ರಮಾಣದ ನಾಟಕವನ್ನು ಬರೆದು ಲವ-ಕುಶ ಮತ್ತು ಶ್ರೀರಾಮಚಂದ್ರನ ವಾಗ್ವಾದದಲ್ಲಿ ತಂದೆ ಮಕ್ಕಳ ಭಿನ್ನ ಬಗೆಯನ್ನು ಮನೋಜ್ಞವಾಗಿ ವರ್ಣಿಸಿದ್ದಾನೆ. ವಿಶಾಖದತ್ತನ ಮುದ್ರಾರಾಕ್ಷಸ ನಾಟಕದಲ್ಲಿನ ಚಂದನದಾಸನ ಮನೆಯಲ್ಲಿ ಅಮಾತ್ಯರಾಕ್ಷಸನ ಮಗ ಚಿಕ್ಕಹುಡುಗನ ಪ್ರವೇಶ ನಾಟಕದ ಪ್ರಮುಖ ಘಟ್ಟವನ್ನು ತೆರೆದಿಡುತ್ತದೆ. ರಾಜಶೇಖರನು ಬಾಲ ರಾಮಾಯಣ ಹಾಗು ಬಾಲಭಾರತಗಳು ಬಾಲಕರಿಗೆ ಎಂದು ತಿಳಿಸುವಂತಿದ್ದರೂ ನಾಟಕ ಪ್ರೌಢವಾಗಿದೆ. ವಿದ್ಧಸಾಲಭಂಜಿಕೆಯಲ್ಲಿ ಬಳಸಿಕೊಳ್ಳಲಾದ ಮರದ ಬೊಂಬೆಗಳು ಮಾತನಾಡುವ ದೃಶ್ಯ ಬಾಲಕರಿಗೂ ಉತ್ತಮ ಮನರಂಜನೆಯನ್ನು ಒದಗಿಸುತ್ತದೆ. ಜಯದೇವನು ತನ್ನ ಪ್ರಸನ್ನ ರಾಘವ ನಾಟಕದ ಮೊದಲಿನಲ್ಲಿ ಬಾಲಕಾಂಡದ ಕಥೆಯ ನಾಟಕೀಯ ನಿರ್ವಚನೆಯಲ್ಲಿ ರಾಮನ ಆದರ್ಶ ಚಾರಿತ್ರ್ಯವನ್ನು ಬಹುವಾಗಿ ಪ್ರಶಂಸಿದ್ದಾನೆ.

ಸಂಸ್ಕೃತ ನಾಟಕಗಳಲ್ಲಿ ಪಾತ್ರಗಳಾದ ಮಕ್ಕಳು ಮುದ್ದುಮುದ್ದಾಗಿ ಕಾಣಿಸಿಕೊಳ್ಳುವುದು ಅಥವಾ ವೀರತ್ವದಲ್ಲಿ ಕಾಣಿಸಿಕೊಳ್ಳುವುದನ್ನು ಇನ್ನಷ್ಟು ಹೆಚ್ಚು ಆಳವಾಗಿ ಅಧ್ಯಯನ ಮಾಡಿ ಹೊರತೆಗೆದರೆ ಮಕ್ಕಳಿಗಾಗಿ ಬರೆದ ಎಲ್ಲವೂ ಅಧ್ಯಯನ ಮಾರ್ಗವನ್ನು ಬೋಧಿಸಲೆಂದೇ ಹೊರತು ಸಮಾಜದ ಪ್ರಮುಖ ಧಾರೆಗೆ ಮೌಲಿಕ ಕೊಡುಗೆಯನ್ನು ಕೊಡುವವರಂತೆ ಕಾಣಿಸಲಾಗಿಲ್ಲ ಎಂಬುದು ತಿಳಿದುಬರುತ್ತದೆ.

ಸಂಸ್ಕೃತ ಪ್ರಾಧ್ಯಾಪಕರು,
ನ್ಯಾಷನಲ್ ಪದವಿ ಕಾಲೇಜು

***

# 'ರಂಗ ಕಿಶೋರ' ಮಕ್ಕಳ ರಂಗಭೂಮಿ

- ಅರಸೀಕೆರೆ ಯೋಗಾನಂದ

ನಾಡಿನ ಪ್ರತಿಷ್ಠಿತ ನಾಟಕ ರೆಪರ್ಟರಿ ರಂಗಾಯಣ ಕಳೆದೆರಡು ದಶಕಗಳಿಂದ ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ತನ್ನ ರಂಗಚಟುವಟಿಕೆಗಳನ್ನು ನಡೆಸುತ್ತಿದೆ. ನಾಟಕ ಪ್ರಯೋಗಗಳು, ವಿಚಾರ ಸಂಕಿರಣ, ರಂಗಕಾರ್ಯಾಗಾರ, ರಾಷ್ಟ್ರೀಯ ನಾಟಕೋತ್ಸವ ಮುಂತಾದವುಗಳ ಮೂಲಕ ತನ್ನದೇ ಆದ ರೀತಿಯಲ್ಲಿ ರಂಗಭೂಮಿಯನ್ನು ಕ್ರಿಯಾಶೀಲವಾಗಿಟ್ಟಿದೆ.

ಇಂತಹ ರಂಗಾಯಣ ರೆಪರ್ಟರಿಗೆ ನಿರ್ದೇಶಕರಾಗಿ ಬಂದ ಪ್ರಸನ್ನರವರ ನಿರಂತರ ಪ್ರಯತ್ನದಿಂದಾಗಿ 2004ನೇ ಇಸವಿಯಲ್ಲಿ ರಂಗಾಯಣಕ್ಕೆ 'ಮಕ್ಕಳ ರಂಗಭೂಮಿ' ಯೋಜನೆಯೊಂದು ಕಾಲಿಟ್ಟಿತು. ಸ್ವೀಡನ್ ದೇಶದ ಸೀಡಾ-ಸ್ವೀಡಿಷ್ ಐಟಿಐ (ITI) ಜಗತ್ತಿನಾದ್ಯಂತ ನೂರಕ್ಕೂ ಹೆಚ್ಚು ದೇಶಗೊಳಟ್ಟಿಗೆ ಮಕ್ಕಳ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಜಾಗೃತಿ ಕುರಿತಂತೆ ಚಟುವಟಿಕೆಗಳನ್ನು ನಡೆಸುತ್ತಾ, ಈ ಎಲ್ಲಾ ದೇಶಗಳಿಗೆ ಆರ್ಥಿಕ ಸಹಾಯ ಕಲ್ಪಿಸುತ್ತಿದೆ. ಈ ನಿಟ್ಟಿನಲ್ಲಿ 'Children Voice' (ಮಕ್ಕಳ ದನಿ)' ಹೆಸರಿನಲ್ಲಿ ಏಷಿಯಾ ಖಂಡದ ಭಾರತ, ಚೀನಾ, ವಿಯೆಟ್ನಾಂ, ಲಾವೋಸ್ ಹಾಗೂ ಬಾಂಗ್ಲಾ ದೇಶಗಳಲ್ಲಿ 'ಮಕ್ಕಳ ರಂಗಭೂಮಿ' ಯೋಜನೆಯೊಂದನ್ನು ಸ್ವೀಡಿಷ್ ಐಟಿಐ ಪ್ರಾರಂಭಿಸಿತು. ಭಾರತದಲ್ಲಿ ಕೊಲ್ಕತ್ತಾದ ನಂದಿಕಾರ್ ಹಾಗೂ ಮೈಸೂರಿನ ರಂಗಾಯಣ ಸಂಸ್ಥೆಗಳಲ್ಲಿ ಈ ಯೋಜನೆ ಕಾರ್ಯರೂಪಕ್ಕೆ ಬಂತು.

2004ರಲ್ಲಿ ಈ ಯೋಜನೆ ಜಾರಿಗೆ ಬಂದಾಗ ರಂಗಾಯಣದ ನಿರ್ದೇಶಕರಾಗಿ ಚಿದಂಬರರಾವ್ ಜಂಬೆಯವರು ಅಧಿಕಾರ ವಹಿಸಿಕೊಂಡಿದ್ದರು. ಅವರ ಮಾರ್ಗದರ್ಶನದಲ್ಲಿ ಮಕ್ಕಳ ರಂಗಭೂಮಿ ಯೋಜನೆ 'ರಂಗ ಕಿಶೋರ' ತನ್ನ ಚಟುವಟಿಕೆಗಳನ್ನು ಪ್ರಾರಂಭಿಸಿತು. ರಂಗಕಿಶೋರಕ್ಕಾಗಿ ನೀನಾಸಂ ತರಬೇತಿ ಹೊಂದಿದ ಐದು ಹುಡುಗರು ಹಾಗೂ ಐದು ಜನ ಹುಡುಗಿಯರಲ್ಲದೆ ಕಾರ್ಯಕ್ರಮ ಸಂಯೋಜಕರೊಬ್ಬರನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಿಕೊಳ್ಳಲಾಯಿತು.

ನಂತರದಲ್ಲಿ ಈ ಕಲಾವಿದರುಗಳಿಗೆ ದೆಹಲಿ ರಾಷ್ಟ್ರೀಯ ನಾಟಕ ಶಾಲೆ TIE ಕಂಪನಿಯ ವಿಭಾ ಚಿಬ್ಬರ್, ವೀಣಾ ಶರ್ಮ, ಸುಭಾಷ್ ರಾವತ್ ಹಾಗೂ ತ್ರಿಪುರಾ ಕಶ್ಯಪ್ ಮುಂತಾದವರು 'ಶಿಕ್ಷಣದಲ್ಲಿ ರಂಗಭೂಮಿ' ಕುರಿತಂತೆ ತರಬೇತಿ ನೀಡಿದರು. ಅನಂತರದಲ್ಲಿ ಈ ತಂಡ ಪ್ರಾಯೋಗಿಕವಾಗಿ ಅನೇಕ ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ಆಶುವಿಸ್ತರಣೆ ಹಾಗೂ ನಾಟಕ ಪ್ರದರ್ಶನಗಳನ್ನು ನೀಡಿ ಮಕ್ಕಳು ಹಾಗೂ ಶಿಕ್ಷಕರ ಪ್ರತಿಕ್ರಿಯೆ ಪಡೆಯಿತು. ಇದೇ ಸಂದರ್ಭದಲ್ಲಿ ಕರ್ನಾಟಕದ ಇತರೆಡೆಯು ಮಕ್ಕಳ ರಂಗಭೂಮಿ ಚಟುವಟಿಕೆಗಳನ್ನು ವಿಸ್ತರಿಸುವ ಉದ್ದೇಶದಿಂದ ಈಗಾಗಲೇ ಸಕ್ರಿಯವಾಗಿದ್ದ ತುಮರಿಯ ಕೆ.ಜಿ. ಕೃಷ್ಣಮೂರ್ತಿಯವರ ಸಾರಥ್ಯದ 'ಕಿನ್ನರ ಮೇಳ', ಉ.ಕ. ಜಿಲ್ಲೆ ಹೊನ್ನಾವರದ ಕಿರಣ್ ಭಟ್ ಸಾರಥ್ಯದ 'ಚಿಂತನ ರಂಗ ಅಧ್ಯಯನ ಕೇಂದ್ರ', ಪುತ್ತೂರಿನ ಐ.ಕೆ. ಬೋಳುವಾರರ 'ನಿರತ ನಿರಂತ' ಹಾಗೂ ಹೊಸಪೇಟೆಯ ಅಬ್ದುಲ್ ಪಿಂಜಾರ್‌ಸಾಬ್ ರವರ ಭಾವೈಕ್ಯತಾ ವೇದಿಕೆಗಳನ್ನು ಪ್ರಾದೇಶಿಕ ತಂಡಗಳೆಂದು ಗುರುತಿಸಲಾಯಿತು. ಹೀಗೆ ರಂಗಾಯಣದಲ್ಲಿ ಪ್ರಾರಂಭವಾದ 'ರಂಗಕಿಶೋರ' ಮಕ್ಕಳ ರಂಗಭೂಮಿಯ ಯೋಜನೆಯಡಿಯಲ್ಲಿ ಈ ಐದೂ ತಂಡಗಳು ಮಕ್ಕಳ ನಾಟಕಗಳನ್ನು ಸಿದ್ಧಪಡಿಸಿಕೊಂಡು ಆಯಾ ಪ್ರದೇಶದ ಶಾಲೆಗಳಲ್ಲಿ ನಾಟಕ ಪ್ರದರ್ಶನಗಳ ಮೂಲಕ ಮಕ್ಕಳಲ್ಲಿ ರಂಗಾಭಿರುಚಿಯನ್ನು ಬಿತ್ತಲಾರಂಭಿಸಿದವು. ಈ ಹಿಂದೆಯೂ ಅನೇಕ ರಂಗತಂಡಗಳು ಮಕ್ಕಳ ರಂಗಭೂಮಿ ಚಟುವಟಿಕೆಗಳನ್ನು ತಮ್ಮದೇ ರೀತಿಯಲ್ಲಿ ನಡೆಸುತ್ತಿದ್ದುದು ಸರಿಯಷ್ಟೆ, ಬಿ.ವಿ. ಕಾರಂತರು ಸಹ ಮೂಕನ ಮಕ್ಕಳು, ಕಿಂದರ ಜೋಗಿಯಂತಹ ಮಕ್ಕಳ ನಾಟಕಗಳನ್ನು ರಂಗಾಯಣಕ್ಕಾಗಿ ಸಿದ್ಧಪಡಿಸಿ ಪ್ರದರ್ಶಿಸಿದರೂ, ಇವು ವಿಶೇಷವಾಗಿ ಮಕ್ಕಳಿಗೆಂದೇ ನಿರ್ದೇಶಿಸಿದವುಗಳಲ್ಲ. ಈ ನಿಟ್ಟಿನಲ್ಲಿ 'ರಂಗಕಿಶೋರ'ವನ್ನು ರಂಗಭಾಷೆಯನ್ನು ಅಳವಡಿಸಿಕೊಳ್ಳುವ ಮೂಲಕ ಮಕ್ಕಳಿಗೆ ಸಂತೋಷದಾಯಕವಾಗಿ ಹಾಗೂ ಪರಿಣಾಮಕಾರಿಯಾಗಿ ಬೋಧಿಸುವ ಅನೇಕ ಪ್ರಯೋಗಗಳು ರಂಗಕಿಶೋರದ ಮೂಲಕ ನಡೆದವು.

ಮಕ್ಕಳ ರಂಗಭೂಮಿಯ ಸಾಧ್ಯಾಸಾಧ್ಯತೆಗಳನ್ನು ಅವಲೋಕಿಸುವ ಕುರಿತಂತೆ 2004ರಲ್ಲಿ ರಂಗಾಯಣವು 'ಮಕ್ಕಳ ರಂಗಭೂಮಿ ಮುಖ್ಯವಾಹಿನಿಯೆಡೆಗೆ' ಎಂಬ ಎರಡು ದಿನಗಳ ವಿಚಾರ ಸಂಕಿರಣವೊಂದನ್ನು ಮೈಸೂರಿನಲ್ಲಿ ಆಯೋಜಿಸಿತು. ಚಂದ್ರಶೇಖರ ಕಂಬಾರರಿಂದ ಉದ್ಘಾಟಿಸಲ್ಪಟ್ಟ ವಿಚಾರ ಸಂಕಿರಣದಲ್ಲಿ ಸ್ವೀಡನ್ ದೇಶದ ಲೀನಾ ಫ್ರೆಡಲ್, ಝೂಕ್, ದೆಹಲಿಯ ವಿ.ಕೆ. ಶರ್ಮ, ಪ್ರೊ.ಎಚ್.ಎಸ್. ಉಮೇಶ್, ಪ್ರೊ. ಲಿಂಗದೇವರು ಹಳೆಮನೆ, ಪ್ರಸನ್ನ ಮುಂತಾದವರು ಮಕ್ಕಳ ರಂಗಭೂಮಿಯ ಸದ್ಯದ ಸ್ಥಿತಿಗತಿಗಳು ಹಾಗೂ ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳನ್ನು ಕುರಿತಂತೆ ವಿಚಾರ ವಿನಿಮಯ ನಡೆಸಿ, ನಿರ್ದಿಷ್ಟ ರೂಪುರೇಷೆಯೊಂದನ್ನು ಹಾಕಿಕೊಟ್ಟರು.

ಪ್ರಾರಂಭಕ್ಕೆ ಸ್ವೀಡನ್ ದೇಶದ ಪ್ರಸಿದ್ಧ ನಾಟಕ ನಿರ್ದೇಶಕ 'ಎರಿಕ್ ಬ್ರಾಸ್ಸರ್' ರಂಗಕಿಶೋರಕ್ಕಾಗಿ ರವೀಂದ್ರನಾಥ ಟಾಗೋರರ 'ಅಂಚೆ ಮನೆ' ನಾಟಕವನ್ನು ನಿರ್ದೇಶಿಸಿದರು. ಮೈಸೂರು ನಗರದ ಶಾಲೆಗಳ ಮಕ್ಕಳು ತಂಡೋಪತಂಡವಾಗಿ ರಂಗಾಯಣಕ್ಕೆ ಬಂದು ನಾಟಕವನ್ನು ವೀಕ್ಷಿಸಿ, ನಟರೊಡನೆ ಸಂವಾದ ನಡೆಸಿ ವಿಶಿಷ್ಟಾನುಭವವನ್ನು ಪಡೆದುಕೊಳ್ಳತೊಡಗಿದರು.

ಎರಡನೇ ವರ್ಷ ರಂಗಾಯಣದಲ್ಲಿ ನಡೆದ ಪ್ರಾದೇಶಿಕ ಸಭೆಯಲ್ಲಿ (Regional Meeting) ಭಾರತ, ಬಾಂಗ್ಲಾದೇಶ ಹಾಗೂ ಸ್ವೀಡನ್ ದೇಶದ ಪ್ರತಿನಿಧಿಗಳು ಭಾಗವಹಿಸಿ, ಮಕ್ಕಳ ರಂಗಭೂಮಿಯ ಮುಂದಿನ ಯೋಜನೆಗಳ ಕುರಿತು ಕಾರ್ಯಸೂಚಿಯೊಂದನ್ನು ರೂಪಿಸಿದರು. ಈ ನಿಟ್ಟಿನಲ್ಲಿ ರಂಗಕಿಶೋರ ಹಾಗೂ ಪ್ರಾದೇಶಿಕ ತಂಡಗಳು ಐದು ಹೊಸ ನಾಟಕಗಳನ್ನು ಸಿದ್ಧಪಡಿಸಿಕೊಂಡು ಒಟ್ಟು 126 ಶಾಲೆಗಳಿಗೆ ಭೇಟಿ ನೀಡಿ ನಾಟಕ ಪ್ರದರ್ಶಿಸಿ ಮಕ್ಕಳೊಡನೆ ಸಂವಾದ ನಡೆಸಿದರು. ಸುಮಾರು 60,000 ಮಕ್ಕಳು, ಶಿಕ್ಷಕರು, ಪೋಷಕರು ಈ ನಾಟಕಗಳನ್ನು ವೀಕ್ಷಿಸಿದರು.

ಪ್ರತಿಬಾರಿ ರಂಗಾಯಣದಲ್ಲಿ ನಡೆಯುತ್ತಿದ್ದ 'ಚಿಣ್ಣರಮೇಳ' ಬೇಸಿಗೆ ರಂಗತರಬೇತಿ ಶಿಬಿರವನ್ನು ಈ ವರ್ಷ ಗದಗ, ಧಾರವಾಡ, ಬಾಗಲಕೋಟೆ ಹಾಗೂ ಹೂವಿನ ಹಡಗಲಿಗಳಲ್ಲಿಯೂ ಏರ್ಪಡಿಸಲಾಯಿತು. ಸುಮಾರು 1500 ಮಕ್ಕಳು ಈ ಶಿಬಿರಗಳಲ್ಲಿ ಭಾಗವಹಿಸಿ 30 ಹೊಸ ನಾಟಕಗಳನ್ನು ಕಲಿತು ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ಶಿಬಿರದ ಮಕ್ಕಳ ಸ್ವರಚಿತ ಪದ್ಯಗಳ ಐದು ಪುಸ್ತಕಗಳನ್ನು ಪ್ರಕಟಿಸಲಾಯಿತು. ಹೀಗೆ ರಂಗಾಯಣ ಮಕ್ಕಳ ರಂಗಭೂಮಿ ಚಟುವಟಿಕೆ ಮೈಸೂರಿನಿಂದ ಹೊರಗೂ ವಿಸ್ತರಿಸಲ್ಪಟ್ಟಿತು.

ಮುಂದಿನ ದಿನಗಳಲ್ಲಿ ಶಿಕ್ಷಕರಿಗಾಗಿ ರಂಗತರಬೇತಿ ಕಾರ್ಯಾಗಾರಗಳನ್ನು ನಡೆಸಲಾಯಿತು. ಸ್ವೀಡನ್‌ನ ಪೆಡಗಾಗ್‌ಗಳಾದ ಶ್ರೀಮತಿ ಮರಿಯಾ ಹೆಡ್‌ಬರ್ಗ್ ಹಾಗೂ ಶ್ರೀಮತಿ ಎರಿಕಾರವರು 7 ದಿನಗಳ ಕಾಲ, ಬಾಗಲಕೋಟೆ, ಕಾರವಾರ, ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯ 75 ಶಿಕ್ಷಕರುಗಳಿಗೆ, ಶಿಕ್ಷಣದಲ್ಲಿ ರಂಗಭೂಮಿಯ ಸಾಧ್ಯತೆಗಳನ್ನು ಕುರಿತಂತೆ ತರಬೇತಿ ನೀಡಿದರು. ಅಂತೆಯೇ ರಂಗಭೂಮಿಯನ್ನು ಶಾಲಾ ಶಿಕ್ಷಣದಲ್ಲಿ ಒಂದು ಭಾಷೆಯನ್ನಾಗಿ ಬಳಸಿಕೊಳ್ಳುವುದರ ಕುರಿತು ಅನೇಕ ಪ್ರಯೋಗಗಳನ್ನು ನಡೆಸಿ ಕೃತಿಯೊಂದನ್ನು ರಚಿಸಿರುವ ಸ್ವೀಡನ್‌ನ ಜನೆಟ್ ರೂಸ್ ತೋಬರ್ಗ್‌ರವರು ಸಹ ಶಿಕ್ಷಕರ ತರಬೇತಿ ಕಾರ್ಯಾಗಾರವೊಂದನ್ನು ರಂಗಾಯಣದಲ್ಲಿ ನಡೆಸಿಕೊಟ್ಟರು. ಈ ಮೂಲಕ ಸ್ವೀಡನ್ ರಂಗಭೂಮಿಯ ಪರಿಚಯ ನಮ್ಮ ಶಿಕ್ಷಕರುಗಳಿಗೆ ದೊರೆತುದಲ್ಲದೆ, ತರಗತಿಯಲ್ಲಿ ರಂಗಭಾಷೆ ಬಳಸುವುದನ್ನು ಅರಿತುಕೊಳ್ಳಲು ಸಾಧ್ಯವಾಯಿತು. ಇದರಿಂದಾಗಿ ರಂಗಕಿಶೋರ ಹಾಗೂ ಪ್ರಾದೇಶಿಕ

ತಂಡಗಳು ಮುಂದಿನ ದಿನಗಳಲ್ಲಿ ಶಿಕ್ಷಕರ ರಂಗತರಬೇತಿಯನ್ನು ಪರಿಣಾಮಕಾರಿಯಾಗಿ ನಡೆಸಲು ಸಾಧ್ಯವಾಯಿತು. ಇದೇ ಸಂದರ್ಭದಲ್ಲಿ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೊಸ ನಾಟಕಗಳನ್ನು ರಚಿಸುವ ಕಾರ್ಯಾಗಾರವೊಂದನ್ನು ಸ್ವೀಡನ್‌ನ ಶ್ರೀಮತಿ ಲೀನಾ ಫ್ರಿಡಲ್ ಹಾಗೂ ಸಕರಿ ನೌಟಮಕಿ ಝೂಕ್‌ರವರ ಮಾರ್ಗದರ್ಶನದಲ್ಲಿ ನಡೆಸಲಾಯಿತು. ಹೆಚ್. ದುಂಡಿರಾಜ್, ಕೋಟಗಾನಹಳ್ಳಿ ರಾಮಯ್ಯ, ಕೆ.ವೈ. ನಾರಾಯಣ ಸ್ವಾಮಿ, ಎಸ್. ಮಾಲತಿ, ಅಭಿಲಾಷ, ಭುವನೇಶ್ವರಿ ಹೆಗ್ಗಡೆ ಮೊದಲಾದವರಿಂದ ಎರಡು ಹಂತಗಳಲ್ಲಿ ಹತ್ತು ಹೊಸ ಮಕ್ಕಳ ನಾಟಕಗಳನ್ನು ಬರೆಯಿಸಿ ಅವುಗಳಲ್ಲಿ 6 ನಾಟಕಗಳನ್ನು ರಂಗಾಯಣದಿಂದ ಪ್ರಕಟಿಸಲಾಯಿತು.

ಯುವಜನತೆಯನ್ನು ರಂಗಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸುವ ನಿಟ್ಟಿನಲ್ಲಿ ಒಂದು ತಿಂಗಳ ಉಚಿತ ವಸತಿ ಸಹಿತ ರಂಗತರಬೇತಿ ಶಿಬಿರವನ್ನು ಹಿರಿಯ ರಂಗಕರ್ಮಿ ರಘುನಂದನರವರ ನಿರ್ದೇಶಕತ್ವದಲ್ಲಿ ನಡೆಸಲಾಯಿತು. ಶಿಬಿರದುದ್ದಕ್ಕೂ ಪ್ರಸಿದ್ಧ ರಂಗತಜ್ಞರುಗಳು ರಂಗಭೂಮಿಯ ಎಲ್ಲಾ ಆಯಾಮಗಳನ್ನು ಶಿಬಿರಾರ್ಥಿಗಳಿಗೆ ಪರಿಚಯಿಸಿದರು. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ 30 ಯುವಕ ಯುವತಿಯರಿಗೆ ಒಂದು ತಿಂಗಳ ಪೂರ್ಣಾವಧಿ ರಂಗತರಬೇತಿ ನೀಡಿ 'ಶಂಭೂಕಾನುಸಂಧಾನ' ಎಂಬ ನಾಟಕದ ಪ್ರಾತ್ಯಕ್ಷಿತೆಯನ್ನು ಪ್ರದರ್ಶಿಸಲಾಯಿತು.

ದೆಹಲಿಯ ಶ್ರೀಮತಿ ವೀಣಾಶರ್ಮ ಹಾಗೂ ಸ್ವೀಡನ್ ದೇಶದ ಶ್ರೀಮತಿ ಮರಿಯಾ ವಿಸ್ಬಿ, ಇಕ್ಬಾಲ್ ಅಹಮದ್‌ರವರು 'ನಿಮ್ಮವಳು ಈ ಪುಟ್ಟಿ', 'ಕುದುರೆ ನೀರುಕುದುರೆ' ಹಾಗೂ 'ಪೋಲಿ ಕಿಟ್ಟಿ' ಎಂಬ ನಾಟಕಗಳನ್ನು ರಂಗಕಿಶೋರಕ್ಕಾಗಿ ನಿರ್ದೇಶಿಸಿಕೊಟ್ಟರು. ಹಿರಿಯ ಜನಪದ ಕಥೆಗಾರರಾದ ಬೋರಮಾರನಹಳ್ಳಿ ಸಾಕಮ್ಮ, ಕಾರಸವಾಡಿ ರಾಜಣ್ಣ ಮಳವಳ್ಳಿ ದುಂಡಯ್ಯ, ಹಿ.ಶಿ. ರಾಮಚಂದ್ರಗೌಡ ರವರು ಕಥಾ ಕಮ್ಮಟವೊಂದನ್ನು ನಡೆಸಿ, ಸುಮಾರು ಐವತ್ತು ಜನಪದ, ಐತಿಹಾಸಿಕ ಕಥೆಗಳನ್ನು ರಂಗಕಿಶೋರದ ಕಲಾವಿದರಿಗೆ ಕಲಿಸಿ, ಹೇಗೆ ಸ್ವಾರಸ್ಯವಾಗಿ ಮಕ್ಕಳಿಗೆ ಕಥೆ ಹೇಳಬಹುದೆಂಬುದನ್ನು ತಿಳಿಸಿಕೊಟ್ಟರು. ಈ ಕಥೆಗಳನ್ನು ಪುಸ್ತಕದ ರೂಪದಲ್ಲಿ ಪ್ರಕಟಿಸುವ ಪ್ರಯತ್ನದ ಅರ್ಧದಲ್ಲಿಯೇ ನಿಂತು ಹೋದದ್ದು ದುರದೃಷ್ಟಕರ.

ಕೇವಲ ಮೂರು ವರ್ಷಗಳಿಗೆ ಮಾತ್ರ ಆರ್ಥಿಕ ಸಹಾಯವನ್ನು ನೀಡುತ್ತೇವೆ. ನಂತರದ ವರ್ಷಗಳಲ್ಲಿ ಸಂಸ್ಥೆಯೇ ಸ್ವಾವಲಂಬನೆಯ ಮೂಲಕ 'ರಂಗಕಿಶೋರ' ಮಕ್ಕಳ ರಂಗಭೂಮಿ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗಬೇಕು ಎಂಬ ಅಲಿಖಿತ ನಿಯಮಾನುಸಾರ ಈ ಯೋಜನೆಗೆ 2006 ಕಡೆಯ ವರ್ಷ ಎಂಬ ಆತಂಕ ಕಾಡತೊಡಗಿತು. ಕಳೆದ ವರ್ಷದಂತೆ ಈ ವರ್ಷವೂ ಚಿಣ್ಣರ ಮೇಳವನ್ನು ರಂಗಾಯಣವು ಸಿದ್ದಾಪುರ, ಕೋಲಾರ, ಕಾಡಶೆಟ್ಟಿಹಳ್ಳಿ ಮುಂತಾದ ಏಳು ಕಡೆ ಆಯೋಜಿಸಿತ್ತು. ಈ ಬಾರಿ

ವಸತಿ ಸಹಿತ ಒಂದು ತಿಂಗಳ ಉಚಿತ 'ಯುವರಂಗ ತರಬೇತಿ' ಕಾರ್ಯಾಗಾರ ಸಿ. ಬಸವಲಿಂಗಯ್ಯನವರ ನಿರ್ದೇಶಕತ್ವದಲ್ಲಿ ರಂಗಾಯಣದಲ್ಲಿ ನಡೆಯಿತು. ನಾಡಿನ ಬೇರೆ ಬೇರೆ ಭಾಗಗಳಿಂದ ಆಗಮಿಸಿದ್ದ 34 ಯುವಕ ಯುವತಿಯರು 'ಲಂಕೇಶರಿಗೆ ನಮಸ್ಕಾರ' ಎಂಬ ನಾಟಕವನ್ನು ಮೈಸೂರು ಹಾಗೂ ಬೆಂಗಳೂರಿನಲ್ಲಿ ಪ್ರದರ್ಶಿಸಿದರು. ಈ ರೀತಿ ರಂಗತರಬೇತಿ ಪಡೆದ ಯುವಜನತೆ ಇಂದಿಗೂ ತಮ್ಮ ಪ್ರದೇಶಗಳಲ್ಲಿ ನಿರಂತರ ರಂಗಚಟುವಟಿಕೆ ನಡೆಸುತ್ತಿದ್ದು, ರಂಗಾಯಣದೊಂದಿಗೆ ನಿಕಟ ಸಂಪರ್ಕದಲ್ಲಿರುವುದು ಸಂತಸದ ವಿಷಯ. ಈ ಬಾರಿ ಕೂಡ ಶಿಕ್ಷಕರ ತರಬೇತಿ ಕಾರ್ಯಾಗಾರವನ್ನು ಮೈಸೂರು, ಚಾಮರಾಜನಗರಗಳಲ್ಲದೆ ಬೆಂಗಳೂರಿನಲ್ಲಿಯೂ ಆಯೋಜಿಸಲಾಗಿತ್ತು. ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಶಿಕ್ಷಕರ ರಂಗತರಬೇತಿ ಕಾರ್ಯಾಗಾರದಲ್ಲಿ ದಕ್ಷಿಣ ಭಾರತದ ಆಂಧ್ರ, ತಮಿಳುನಾಡು, ಕರ್ನಾಟಕ ಹಾಗೂ ಕೇರಳದ 169 ಶಿಕ್ಷಕ-ಶಿಕ್ಷಕಿಯರು ಭಾಗವಹಿಸಿದ್ದರು. ಅಂದಿನ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಶಿಕ್ಷಕರು ಹಾಗೂ ಆ ರಾಜ್ಯಗಳ ಮಾರ್ಗದರ್ಶಕರು ತಮ್ಮಲ್ಲಿಗೂ ಬಂದು ಈ ರೀತಿಯ ಕಾರ್ಯಾಗಾರಗಳನ್ನು ನಡೆಸಿಕೊಡಿ ಎಂದು ರಂಗಕಿಶೋರಕ್ಕೆ ಮನವಿ ಮಾಡಿಕೊಂಡರೂ, ಅವಕಾಶದ ಕೊರತೆಯಿಂದ ಈ ಪ್ರಯೋಗ ಕೈಗೂಡಲಿಲ್ಲ.

ಹಿಂದಿನ ವರ್ಷಗಳ ಚಟುವಟಿಕೆಗೆ ಈ ವರ್ಷ ಹೊಸದಾಗಿ ಸೇರ್ಪಡೆಯಾದವುಗಳೆಂದರೆ ಮೈಸೂರು ದಸರೆಗೆ ಆನೆಗಳೊಡನೆ ಆಗಮಿಸಿದ್ದ ಮಾವುತರ ಮಕ್ಕಳಿಗೆ ನಡೆಸಿದ ರಂಗಕಾರ್ಯಾಗಾರ. ಸ್ವಭಾವತಃ ನಾಚಿಕೆ ಪ್ರಕೃತಿಯವರಾದ ಮಕ್ಕಳನ್ನು ನಮ್ಮೆಡೆಗೆ ಆಕರ್ಷಿಸಿಕೊಂಡು ಅವರನ್ನು ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡಿದ್ದು ಒಂದು ವಿಶಿಷ್ಟ ಅನುಭವವೇ ಸರಿ. ಈ ವರ್ಷ ಜಂಬೆಯವರು ಬಿ.ವಿ. ಕಾರಂತರ ನೆನಪಿನಲ್ಲಿ ಮೈಸೂರಿನ 6 ಆಯ್ದ ಕಾಲೇಜುಗಳಲ್ಲಿ 45 ದಿನಗಳ ಕಾಲ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ಶಾಲಾ ಅವಧಿಯ ನಂತರದ ರಂಗತರಬೇತಿಯನ್ನು ಹಮ್ಮಿಕೊಂಡು, ಹೊಸ ನಾಟಕಗಳನ್ನು ಸಿದ್ಧಪಡಿಸುವ ಯೋಜನೆಯೊಂದನ್ನು ಕೈಗೆತ್ತಿಕೊಂಡರು. ಈ ನಿಟ್ಟಿನಲ್ಲಿ ರಂಗಾಯಣದ ಕಲಾವಿದರು ಪ್ರತಿದಿನ ಕಾಲೇಜುಗಳಿಗೆ ಭೇಟಿ ನೀಡಿ ನಾಟಕಗಳನ್ನು ಸಿದ್ಧಪಡಿಸಿದರು. ಈ ನಾಟಕಗಳನ್ನು ಬಿ.ವಿ. ಕಾರಂತ ಯುವರಂಗ ಸಂಸ್ಕೃತಿ-ನಾಟಕೋತ್ಸವ ಹಾಗೂ ಮೈಸೂರು ದಸರಾ ನಾಟಕೋತ್ಸವಗಳಲ್ಲಿ ಪ್ರತಿ ದಿನ ಎರಡು ಪ್ರದರ್ಶನಗಳಂತೆ ಪ್ರದರ್ಶಿಸಲಾಯಿತು. ಅಂದಿನಿಂದ ಕಾಲೇಜು ಹುಡುಗ-ಹುಡುಗಿಯರು ರಂಗಾಯಣದತ್ತ ಆಕರ್ಷಿತರಾಗಿ ರಂಗಚಟುವಟಿಕೆಗಳಲ್ಲಿ ಸ್ವಯಂ ಪ್ರೇರಣೆಯಿಂದ ತೊಡಗಿಸಿಕೊಳ್ಳತೊಡಗಿದರು.

'Global persuits of children theatre' ಹೆಸರಿನ ಎರಡು ದಿನಗಳ ಅಂತರರಾಷ್ಟ್ರೀಯ ವಿಚಾರ ಸಂಕಿರಣವನ್ನು ರಂಗಾಯಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಇದರಲ್ಲಿ ಸ್ವೀಡನ್, ದಕ್ಷಿಣ ಕೊರಿಯ, ದೆಹಲಿ, ಕೊಲ್ಕತ್ತಾ ಮುಂತಾದ ಭಾಗಗಳಿಂದ ಸುಮಾರು 400 ಜನ ಆಸಕ್ತ ಶಿಕ್ಷಕರು, ರಂಗಕರ್ಮಿಗಳು, ವಿದ್ಯಾರ್ಥಿಗಳು ಪೋಷಕರು ಭಾಗವಹಿಸಿ ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಹಂಚಿಕೊಂಡರು. ಈ ವಿಚಾರ ಸಂಕಿರಣದಲ್ಲಿ ಮಕ್ಕಳ ರಂಗಭೂಮಿ 'ರಂಗ ಕಿಶೋರ' ಯೋಜನೆಯಲ್ಲಿ ಈವರೆಗೆ ನಡೆಸಲಾದ ಚಟುವಟಿಕೆಗಳ ಬಗ್ಗೆಯೂ ಚರ್ಚಿಸಿ ಈ ವರದಿಯನ್ನು ಸ್ವೀಡಿಷ್ ಐಟಿಐಗೂ ಸಲ್ಲಿಸಲಾಯಿತು. 'ಮಕ್ಕಳ ದನಿ' ಯೋಜನೆಯ ಅಂತರರಾಷ್ಟ್ರೀಯ ಸಂಯೋಜಕಿ ಶ್ರೀಮತಿ ಕ್ರಿಸ್ಟಿನಾ ನೈಗ್ರಿನ್‌ರವರ ಅವಿರತ ಪ್ರಯತ್ನದಿಂದಾಗಿ ಸ್ವೀಡಿಷ್ ಐಟಿಐ ಭಾರತ ಹಾಗೂ ಬಾಂಗ್ಲಾದೇಶಗಳಲ್ಲಿ ನಡೆಯುತ್ತಿರುವ ಯೋಜನೆಯ ಪರಿವೀಕ್ಷಣೆಗಾಗಿ ಸ್ವೀಡನ್ ದೇಶದ ಹಿರಿಯ ರಂಗತಜ್ಞೆ ಶ್ರೀಮತಿ ಕಾರಿನ್ ಮಾರ್ಕಿನ್‌ಸ್ಟೆಸ್‌ರವರನ್ನು ಈ ದೇಶಗಳಿಗೆ ಕಳುಹಿಸಿಕೊಟ್ಟಿತು. ಇಲ್ಲಿನ ಚಟುವಟಿಕೆಗಳನ್ನು ಗಮನಿಸಿ, ಸಂತುಷ್ಟಳಾದ ಆಕೆ ಧನಾತ್ಮಕವಾದ ವರದಿಯೊಂದನ್ನು ಸ್ವೀಡಿಷ್ ಐಟಿಐಗೆ ಕಳುಹಿಸಿ ಮುಂದಿನ ಎರಡು ವರ್ಷಗಳಿಗೆ ಧನಸಹಾಯ ನೀಡಬಹುದೆಂಬ ಶಿಫಾರಸ್ಸು ಮಾಡಿದಳು. ನಂತರದಲ್ಲಿ 2007-2008ನೇ ಸಾಲಿಗೆ ಹೊಸ ಒಪ್ಪಂದವೊಂದು ಜಾರಿಯಾಗಿ ಯೋಜನೆ ಮುಂದುವರಿಯಿತು.

ಹೊಸ ಒಪ್ಪಂದದ ಪ್ರಕಾರ ಮುಂದಿನ ಎರಡು ವರ್ಷಗಳ ಕಾಲ ರಂಗಕಿಶೋರ ಹಾಗೂ ಪ್ರಾದೇಶಿಕ ತಂಡಗಳು ನಾಟಕ ಪ್ರದರ್ಶನದ ಜೊತೆ ಜೊತೆಗೆ ಶಿಕ್ಷಕರ ಕಾರ್ಯಾಗಾರ, ಮಕ್ಕಳ ರಂಗಶಿಬಿರ, ವಿಚಾರ ಸಂಕಿರಣ ಹಾಗೂ ನಾಟಕೋತ್ಸವಗಳನ್ನು ಪ್ರಾದೇಶಿಕವಾಗಿ ನಡೆಸಲು ಧನಸಹಾಯ ಪಡೆದುಕೊಂಡು ಕಾರ್ಯೋನ್ಮುಖವಾದವು. ವಿಶೇಷವಾಗಿ ಈ ಬಾರಿ ಮೈಸೂರು, ಹೊಸಪೇಟೆ, ಕುಮಟಾ, ಪುತ್ತೂರು ಮುಂತಾದ ಕಡೆಗಳಲ್ಲಿ ವಿಶೇಷ ಸಾಮರ್ಥ್ಯದ ಬುಡಕಟ್ಟು, ಬುದ್ಧಿಮಾಂದ್ಯ ಹಾಗೂ ಅಲೆಮಾರಿ ಮಕ್ಕಳಿಗಾಗಿ ರಂಗತರಬೇತಿ ಕಾರ್ಯಾಗಾರಗಳು ನಡೆದವು.

ನಾಡಿನ ಹೆಮ್ಮೆಯ ರಂಗಭೂಮಿ ಹಾಗೂ ಚಲನಚಿತ್ರ ನಿರ್ದೇಶಕ ಎಂ.ಎಸ್. ಸತ್ಯುರವರು ಒಂದು ತಿಂಗಳ ವಸತಿ ಸಹಿತ ರಂಗಕಾರ್ಯಾಗಾರವನ್ನು ರಂಗಾಯಣಕ್ಕೆ ಬಂದು ನಾಡಿನ ಯುವಜನತೆಗಾಗಿ ನಡೆಸಿಕೊಟ್ಟರಲ್ಲದೆ, 'ಲೀಲಾಂತ' ಎಂಬ ನಾಟಕವನ್ನು ನಿರ್ದೇಶಿಸಿ ಪ್ರದರ್ಶಿಸಿದರು.

ಮೈಸೂರು ಕೇಂದ್ರಿತವಾಗಿ ಈ ಎಲ್ಲಾ ಚಟುವಟಿಕೆಗಳನ್ನು ನಡೆಸುತ್ತಿದ್ದ 'ರಂಗಕಿಶೋರ' ಮಕ್ಕಳ ರಂಗಭೂಮಿ ತಂಡವನ್ನು ಯಾವುದೇ ಪೂರ್ವಸಿದ್ಧತೆಯಿಲ್ಲದೆ, ಧಾರವಾಡದಲ್ಲಿ ಹೊಸದಾಗಿ ಪ್ರಾರಂಭಿಸಲಾದ ರಂಗಾಯಣ ಘಟಕಕ್ಕೆ ಸ್ಥಳಾಂತರಿಸಿ, ಉತ್ತರ ಕರ್ನಾಟಕದಲ್ಲಿ ಮಕ್ಕಳ ರಂಗಭೂಮಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಯೋಜನೆ ರೂಪಿಸಲಾಯಿತು.

ಈ ಬಾರಿ ಧಾರವಾಡದ ನಾಲ್ಕು ಹಾಗೂ ಮೈಸೂರಿನ ಮೂರು ಕಾಲೇಜುಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ಬಿ.ವಿ. ಕಾರಂತರ ನೆನಪಿನ ರಂಗ ಶಿಬಿರ ನಡೆಸಲಾಯಿತು. ಶಿಬಿರದ ಕೊನೆಯಲ್ಲಿ ಸಿದ್ಧಗೊಂಡ ಏಳು ನಾಟಕಗಳನ್ನು ಧಾರವಾಡ ಹಾಗೂ ಮೈಸೂರಿನಲ್ಲಿ ಏಕಕಾಲದಲ್ಲಿ ಆಯೋಜಿಸಲಾಗಿದ್ದ ಬಿ.ವಿ. ಕಾರಂತ ಯುವರಂಗ ಸಂಸ್ಕೃತಿ ನಾಟಕೋತ್ಸವದಲ್ಲಿ ಪ್ರತಿದಿನ ಎರಡು ಪ್ರದರ್ಶನಗಳಂತೆ ಪ್ರದರ್ಶಿಸಲಾಯಿತು. ಅಲ್ಲದೆ ಈ ಬಾರಿ ದಸರಾ ಮಹೋತ್ಸವದ ಅಂಗವಾಗಿ ಧಾರವಾಡದಲ್ಲಿಯೂ 'ನವರಾತ್ರಿ ರಂಗೋತ್ಸವ'ವನ್ನು ಆಯೋಜಿಸಿ ಈ ಏಳೂ ನಾಟಕಗಳಲ್ಲಿ ಧಾರವಾಡ ಹಾಗೂ ಮೈಸೂರು ನವರಾತ್ರಿ ಉತ್ಸವಗಳಲ್ಲಿ ಒಂಭತ್ತು ದಿನಗಳ ಕಾಲ ಪ್ರದರ್ಶಿಸಲಾಯಿತು. ಮಕ್ಕಳ ರಂಗಭೂಮಿಗೆ ಸಂಬಂಧಿಸಿದಂತೆ ಕುಮಟಾ, ತುಮರಿ, ಪುತ್ತೂರುಗಳಲ್ಲಿ 3 ರಾಜ್ಯಮಟ್ಟದ ವಿಚಾರ ಸಂಕಿರಣಗಳು ಪ್ರಾದೇಶಿಕ ತಂಡಗಳ ಸಹಭಾಗಿತ್ವದಲ್ಲಿ ನಡೆದವು. ಅಂತೆಯೇ ಮೈಸೂರು, ಹೊಸಪೇಟೆ, ಪುತ್ತೂರು, ತುಮರಿ ಹಾಗೂ ಹೊನ್ನಾವರಗಳಲ್ಲಿ ಮಕ್ಕಳ ನಾಟಕೋತ್ಸವಗಳನ್ನು ನಡೆಸಲಾಯಿತು. ಧಾರವಾಡದ ರಂಗಾಯಣ ಘಟಕದಲ್ಲಿ ಸುಸಜ್ಜಿತ ವಾತಾವರಣ ಇಲ್ಲದೆ, ಮಕ್ಕಳ ರಂಗಭೂಮಿ ಸೊರಗಿದಂತೆ ಕಂಡರೂ, ಚಟುವಟಿಕೆಗಳು ಅವ್ಯಾಹತವಾಗಿ ನಡೆದವು. ಈ ವರ್ಷ ಸುಮಾರು ಲಕ್ಷಕ್ಕೂ ಅಧಿಕ ಮಕ್ಕಳೊಂದಿಗೆ ನಾಟಕ ಪ್ರದರ್ಶನ, ರಂಗಕಾರ್ಯಾಗಾರಗಳ ಮೂಲಕ ಸಂವಹನ ನಡೆಸಲಾಯಿತು.

ಈ ನಡುವೆ ಕೊಲ್ಕತ್ತಾದ 'ಉತ್ತರಪಾರಾ'ದಲ್ಲಿ ಆಯೋಜಿಸಿದ್ದ ರಂಗ ಕಾರ್ಯಾಗಾರದಲ್ಲಿ ನಾನು (ಅರಸೀಕೆರೆ ಯೋಗಾನಂದ) ಹಾಗೂ ಕಲಾವಿದರಾದ ಪ್ರಕಾಶ್ ಹಾಗೂ ಪದ್ಮಾ ಕೊಡಗು ಭಾಗವಹಿಸಿದ್ದೆವು. ಬಾಂಗ್ಲಾದೇಶದ 'ರೂಪಾಂತರ' ತಂಡದವರು ಬಾಂಗ್ಲಾದೇಶದ ಜನಪದ ಪ್ರಕಾರವಾದ 'ಪಾಂಟ್ ಸಾಂಗನ್ನು' ಕೊಲ್ಕತ್ತಾದ ನಂದಿಕಾರ್, ನಟನ, ಸಮತಾತ್ ಹಾಗೂ ನಮಗೆ ಕಲಿಸಿಕೊಟ್ಟರು. ಈ ಸಂಗೀತ ನಾಟಕವನ್ನು ಕಲಿತ ನಾವು ಕೊಲ್ಕತ್ತಾದ ಮೂರು ಶಾಲೆಗಳಿಗೆ ಭೇಟಿ ನೀಡಿ, ನಾಟಕ ಪ್ರದರ್ಶಿಸಿ, ಮಕ್ಕಳೊಂದಿಗೆ ಸಂವಾದ ನಡೆಸಿದೆವು. ಈ ಪ್ರಕಾರದ ನಾಟಕವೊಂದನ್ನು ಧಾರವಾಡದ ಮಕ್ಕಳಿಗೂ ಕಲಿಸಿ ನಾಟಕ ಪ್ರದರ್ಶನವನ್ನೂ ಮಾಡಿಸಲಾಯಿತು. ಯೋಜನೆಯ ಅನುಷ್ಠಾನಕ್ಕಾಗಿ ಬಿಡುಗಡೆಯಾಗಿದ್ದ ಉಳಿಕೆ ಹಣವನ್ನು ಬಳಕೆ ಮಾಡುವ ಉದ್ದೇಶದಿಂದ ಈ ವರ್ಷ ಹಿಂದೆಂದಿಗಿಂತಲೂ ಹೆಚ್ಚಿನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಹೊಸಪೇಟೆ, ಸಾಗರದ ಆಮಟಿಕೊಪ್ಪ, ಪುತ್ತೂರು, ಹೊನ್ನಾವರ, ಮೈಸೂರು ಹಾಗೂ ಬೆಂಗಳೂರಿನ ಕೆ.ವಿ. ಸುಬ್ಬಣ್ಣ ಆಪ್ತರಂಗಮಂದಿರದಲ್ಲಿ ನಾಟಕೋತ್ಸವವನ್ನು ಆಯೋಜಿಸಲಾಗಿತ್ತು. ತುಮರಿ, ಶಿರಸಿ ಹಾಗೂ ಧಾರವಾಡಗಳಲ್ಲಿ ಶಿಕ್ಷಕರ ಕಾರ್ಯಾಗಾರವನ್ನು ಆಯೋಜಿಸಿ ಸುಮಾರು ಮೂರು ನೂರು ಶಾಲಾ ಶಿಕ್ಷಕ-

ಶಿಕ್ಷಕಿಯರಿಗೆ ಶಿಕ್ಷಣದಲ್ಲಿ ರಂಗಭೂಮಿಯ ಅಳವಡಿಕೆ ಹಾಗೂ ಪರಿಣಾಮಕಾರಿ ಬೋಧನೆ ಎಂಬ ವಿಷಯವಾಗಿ ರಂಗಚಟುವಟಿಕೆ ನಡೆಸಲಾಯಿತು. ಸ್ವೀಡನ್ ದೇಶದ ಶಿಕ್ಷಣ ಹಾಗೂ ರಂಗತಜ್ಞರುಗಳಾದ ಬರ್ನ್‌ಟ್ ಹೂಗ್ಲಾಂಡ್ ಹಾಗೂ ಶ್ರೀಮತಿ ಲೀನಾ ಲಿಂಡೆಲ್‌ರವರು ಧಾರವಾಡದಲ್ಲಿ ಶಿಕ್ಷಕರ ರಂಗತರಬೇತಿ ಕಾರ್ಯಾಗಾರವನ್ನು ನಡೆಸಿ ಶಿಕ್ಷಕ-ಶಿಕ್ಷಕಿಯರಿಗೆ ತರಬೇತಿ ನೀಡಿದರು.

ಈ ಬಾರಿಯ ಬಿ.ವಿ. ಕಾರಂತರ ನೆನಪಿನ ಯುವರಂಗ ಸಂಸ್ಕೃತಿ ಶಿಬಿರದಲ್ಲಿ ಮೈಸೂರಿನ ನಾಲ್ಕು ಹಾಗೂ ಧಾರವಾಡದ ಮೂರು ಕಾಲೇಜುಗಳಿಂದ ಒಂದುನೂರಾ ಎಪ್ಪತ್ತು ವಿದ್ಯಾರ್ಥಿಗಳು ಭಾಗವಹಿಸಿ ನವರಾತ್ರಿ ರಂಗೋತ್ಸವದಲ್ಲಿ ಏಳು ನಾಟಕಗಳನ್ನು ಕಲಿತು ಪ್ರದರ್ಶಿಸಿದರು. ಅಲ್ಲದೆ ಕರ್ನಾಟಕ ನಾಟಕ ಅಕಾಡೆಮಿಯ ಸಹಯೋಗದಲ್ಲಿ ಬೆಂಗಳೂರಿನ ಎಸ್.ಕೆ.ಎಮ್. ಕಾಲೇಜು, ಮಲ್ಲೇಶ್ವರಂನ ಮಹಾರಾಣಿ ಕಾಲೇಜು ಹಾಗೂ ವರ್ತೂರಿನ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗಾಗಿಯೂ ರಂಗತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು.

ಸೀಡಾ-ಸ್ವೀಡಿಷ್ ಐಟಿಐ ಸ್ವೀಡನ್ ದೇಶದ ಲುಂಡ್ ನಗರದಲ್ಲಿ ASSITEJ ಸಂಸ್ಥೆ ಆಯೋಜಿಸಿದ್ದ "The Performing Arts Biennial for Chidren and Youth" ಹೆಸರಿನ ರಾಷ್ಟ್ರೀಯ ನಾಟಕೋತ್ಸವಕ್ಕೆ ರಂಗಾಯಣದಿಂದ ನಾನು (ಅರಸೀಕೆರೆ ಯೋಗಾನಂದ) ಹಾಗೂ ಇಬ್ಬರು ಕಲಾವಿದರಾದ ಪ್ರಕಾಶ್ ಹಾಗೂ ರಾಜೇಶ್ವರಿ ಭಾಗವಹಿಸಿದ್ದೆವು. ಸುಮಾರು 80 ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದ ನಾಟಕೋತ್ಸವದಲ್ಲಿ ನಾಟಕ ವೀಕ್ಷಣೆ, ನಾಟಕ ಕೃತಿಗಳ ವಾಚನ, ನಟನಾ ಕಾರ್ಯಾಗಾರ, ರಂಗ ಸಂಗೀತ ಮುಂತಾದ ತರಗತಿಗಳಲ್ಲದೆ ವಿಚಾರ ಸಂಕಿರಣಗಳನ್ನು ಏರ್ಪಡಿಸಿದ್ದರು. ನಾವುಗಳು ಇಲ್ಲಿ ಭಾಗವಹಿಸಿ ಇತರ ದೇಶಗಳ ರಂಗಕರ್ಮಿಗಳೊಡನೆ ಹಂಚಿಕೊಂಡ ವಿಚಾರಗಳು ತುಂಬಾ ಪ್ರಯೋಜನಕಾರಿಯಾಗಿದ್ದವು.

ಅಂತೂ ಇಂತೂ 2008ರ ಮೇ ತಿಂಗಳ ಹೊತ್ತಿಗೆ ಎರಡನೇ ಹಂತದ ಯೋಜನೆ ಮುಗಿಯುವಷ್ಟರಲ್ಲಿ ರಂಗಾಯಣದ ಪ್ರಭಾರ ನಿರ್ದೇಶಕರಾಗಿ ಕಾ.ತ. ಚಿಕ್ಕಣ್ಣನವರು ಅಧಿಕಾರ ವಹಿಸಿಕೊಂಡು ವರ್ಷ ಕಳೆದಿತ್ತು. ರಂಗಾಯಣಕ್ಕೆ ಹೊಸ ನಿರ್ದೇಶಕರಾಗಿ ಬಿ. ಜಯಶ್ರೀಯವರು ಬಂದ ಮೇಲೆ ಮಕ್ಕಳ ರಂಗಭೂಮಿ ಯೋಜನೆಯಲ್ಲಿ ಇನ್ನೂ ಸ್ವಲ್ಪ ಹಣ ಬಾಕಿ ಉಳಿದಿತ್ತು. ಸ್ವೀಡಿಷ್ ಐಟಿಐನವರೊಂದಿಗೆ ಚರ್ಚಿಸಿ ವಿನಂತಿಸಿದಾಗ ಉಳಿಕೆ ಹಣವನ್ನು 2009ರವರೆಗೆ ಬಳಸಿಕೊಳ್ಳಲು ಅನುಮತಿ ಸಿಕ್ಕಿತು. ಹಾಗಾಗಿ ಪ್ರಮೋದ್ ಶಿಗ್ಗಾಂರವರ ನಿರ್ದೇಶನದಲ್ಲಿ ಒಂದು ತಿಂಗಳ ವಸತಿ ಸಹಿತ ಕಾರ್ಯಾಗಾರ, ಮೈಸೂರಿನ ಐದು ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ತರಬೇತಿ ಶಿಬಿರ, ಐದು ದಿನಗಳ ನಾಟಕೋತ್ಸವ, ಪುತ್ತೂರು ಹಾಗೂ ಬೆಳಗಾವಿಯಲ್ಲಿ ಶಿಕ್ಷಕರ ರಂಗತರಬೇತಿ

ಕಾರ್ಯಾಗಾರ ನಡೆಸಲಾಯಿತು. ಇಲ್ಲಿಗೆ ಯೋಜನೆಗೆ ಬಿಡುಗಡೆಯಾಗಿದ್ದ ಅನುದಾನವೂ ಮುಗಿಯಿತು. 2004 ರಿಂದ 2009 ರವರೆಗೆ ಸತತವಾಗಿ ಮಕ್ಕಳು, ಯುವಜನತೆ, ಶಿಕ್ಷಕರು ಹಾಗೂ ಪೋಷಕರಿಗಾಗಿ ಇಷ್ಟೆಲ್ಲ ಕಾರ್ಯಚಟುವಟಿಕೆ ನಡೆಸುತ್ತಿದ್ದ ಮಹತ್ತರ ಯೋಜನೆಯನ್ನು ಸ್ವೀಡನ್ನಿನ ಆರ್ಥಿಕ ಸಹಾಯ ಸ್ಥಗಿತಗೊಂಡ ಕಾರಣಕ್ಕಾಗಿ ನಿಲ್ಲಿಸಲಾಯಿತು. ಆನಂತರದಲ್ಲಿ ಕರ್ನಾಟಕ ಸರ್ಕಾರಕ್ಕೆ ಅನುದಾನ ಬಿಡುಗಡೆಗೊಳಿಸುವಂತೆ ರಂಗಾಯಣವು ಕೇಳಿಕೊಂಡಿತು. ಅನುದಾನವನ್ನು ಘನಸರ್ಕಾರ ಬಿಡುಗಡೆಗೊಳಿಸುವಂತೆ ಮಾಡಿಯೂ ಬಿಟ್ಟಿತು. ಈ ಸಂದರ್ಭದಲ್ಲಿಯೇ ಈ ಹಿಂದೆ ರಂಗಕಿಶೋರದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಲಾವಿದರನ್ನು ಕೆಲಸದಿಂದ ಬಿಡುಗಡೆಗೊಳಿಸಲಾಯಿತು. ಸತತ ಆರುವರ್ಷಗಳಿಂದ ಮಕ್ಕಳ ಸಂತಸಕರ ಕಲಿಕೆಗೆ ನಾಡಿನಾದ್ಯಂತ ಪೂರಕ ವಾತಾವರಣ ಸೃಷ್ಟಿಗೊಳಿಸಲು ಸಫಲವಾಗಿದ್ದ , ಜಾಗತಿಕ ಮಟ್ಟದಲ್ಲಿ ಚಟುವಟಿಕೆ ನಡೆಸುತ್ತಿರುವ ದೇಶಗಳೊಟ್ಟಿಗೆ ವಿಚಾರ ವಿನಿಮಯ ಹಾಗೂ ಚಟುವಟಿಕೆಗಳ ಮೂಲಕ ಆಂತರಿಕ ಸಂಬಂಧವನ್ನು ಸಾಧಿಸಿದ್ದ ಮಹತ್ತರ ಯೋಜನೆಯೊಂದು ಒಮ್ಮೆಲೇ ಸ್ಥಗಿತಗೊಂಡಿತು. ಯಾರೋ ಕೆಲವರು ಹಣ್ಣುಗಳನ್ನು ಕಿತ್ತು ತಿಂದುಬಿಡಬಹುದೆಂಬ ಕಾರಣಕ್ಕೆ ನೂರಾರು ಜೀವಸಂಕುಲಕ್ಕೆ ಆಶ್ರಯತಾಣವಾಗಬಹುದಾಗಿದ್ದ ಹೆಮ್ಮರವೊಂದು ಉರುಳಿ ಬಿದ್ದದ್ದು ಅಂದಿನ ಸನ್ನಿವೇಶದ ವ್ಯಂಗ್ಯ.

★★★

# ಮಕ್ಕಳ ರಂಗಭೂಮಿ ನಡೆದು ಬಂದ ಬಗೆ

- ಕಿರಣ ಭಟ್

ಭರತನ ನಾಟ್ಯಶಾಸ್ತ್ರದ ಶ್ಲೋಕವೊಂದು ಹೀಗೆ ಹೇಳುತ್ತದೆ - ''....ಬಾಲಾ ಮುರ್ಖಾಃ ಸ್ತ್ರೀಯಶ್ಚೈವ ಹಾಸ್ಯ ನೈಪಥ್ಯಯೋಃ ಸದಾ ।....'' ''ಮಕ್ಕಳು ಹೆಂಗಸರು ಮತ್ತು ಮೂರ್ಖರು ಹಾಸ್ಯವನ್ನು , ವೇಷಭೂಷಣಗಳನ್ನು ಮೆಚ್ಚುತ್ತಾರೆ'' ಹೀಗೆ ಮೂರ್ಖರು, ಹೆಂಗಸರ ಮಧ್ಯೆಯೇ ಆದರೂ ಪ್ರೇಕ್ಷಕ ವರ್ಗದಲ್ಲಿ ಸ್ಥಾನ ಗಳಿಸಿದ 'ಪ್ರೇಕ್ಷಕ ಮಕ್ಕಳಿಂದ' ಮೊದಲುಗೊಂಡು ಇತ್ತೀಚೆಗೆ 'ಮಕ್ಕಳೇ ರಂಗಭೂಮಿಯನ್ನು ರಕ್ಷಿಸಿ' ಎಂಬ ಕರೆಯ ನಡುವಿನ ಮಕ್ಕಳ ರಂಗಭೂಮಿಯ ಕೆಲವು ಮುಖ್ಯ ಹಂತಗಳನ್ನು ಅವುಗಳ ವೈಶಿಷ್ಟ್ಯವನ್ನು ಈ ಲೇಖನದಲ್ಲಿ ದಾಖಲಿಸುತ್ತಿದ್ದೇನೆ.

**ಮೊದಲ ಹಂತ : ಗುಬ್ಬಿ ಮಕ್ಕಳ ಕಂಪನಿ**

ಹಾಗೆ ನೋಡಿದರೆ, ಪ್ರೇಕ್ಷಕರ ಮಧ್ಯೆ ಕುಳಿತು ನಾಟಕಗಳನ್ನು ನೋಡುತ್ತಿದ್ದ ಕನ್ನಡದ ಮಕ್ಕಳನ್ನು ರಂಗಕ್ಕೆ ಮೊದಲು ತಂದವರು ಗುಬ್ಬಿ ವೀರಣ್ಣನವರು. ಅವರದ್ದು ಒಂದು ದೊಡ್ಡ ಕಂಪನಿ. ನೂರಾರು ಕಲಾವಿದರು, ಹತ್ತಾರು ಕುಟುಂಬಗಳು, ಅಂತೆಯೇ ಹಲವಾರು ಮಕ್ಕಳು. ಹಗಲೂ ರಾತ್ರಿ ನಾಟಕಗಳ ಮಧ್ಯೆ ಬೆಳೆಯುತ್ತಿದ್ದ ಈ ಮಕ್ಕಳು ನಾಟಕಗಳ ಕುರಿತು ಆಸಕ್ತಿ ತೋರುತ್ತಿದ್ದುದು ಸಹಜವೇ. ಇಂಥ ಆಸಕ್ತಿಗೊಂದು ರೂಪ ಕೊಡುವುದರೊಂದಿಗೆ ಮುಂದಿನ ಕಲಾವಿದರನ್ನು ಸಿದ್ಧಪಡಿಸುವ ಇರಾದೆಯೊಂದಿಗೆ ಗುಬ್ಬಿ ವೀರಣ್ಣ ಮಕ್ಕಳದೇ ಆದ ಒಂದು ತಂಡ ಕಟ್ಟಿದರು. 'ಬಾಲಕಲಾವರ್ಧಿನೀ' ಎಂದು ಅದಕ್ಕೆ ಹೆಸರಿಟ್ಟರು.

1. ಮಕ್ಕಳಿಗಾಗಿಯೇ ಪ್ರತ್ಯೇಕವಾದ ನಾಟಕಗಳನ್ನು ಮಕ್ಕಳಿಂದಲೇ ಪ್ರದರ್ಶಿಸಬೇಕೆಂಬ ಆಸೆ ವೀರಣ್ಣನವರಿಗಿತ್ತು. ಅದಕ್ಕಾಗಿ ಭೀಮರಾಜು ಅವರಿಂದ 'ಸಾವಿತ್ರಿ' ಎಂಬ ನಾಟಕ ಬರೆಯಿಸಿ ಅಭ್ಯಾಸ ಮಾಡಿಸಿದ್ದರು. ಈ ಸಂಸ್ಥೆಯು ಕರ್ನಾಟಕಾದ್ಯಂತ ಪ್ರವಾಸ ಮಾಡಿತಲ್ಲದೆ ಮದರಾಸು ಪ್ರಾಂತ್ಯದಲ್ಲಿಯೂ ಯಶಸ್ಸು

ಗಳಿಸಿತು. ಹೀಗೆ ಪ್ರಾರಂಭವಾದ ಬಾಲಕಲಾವರ್ಧಿನಿಯ ನಟರೆಲ್ಲ ಮುಂದೆ ಹಿರಿಯರಾದ ಮೇಲೆ ಗುಬ್ಬಿ ಕಂಪನಿಯ ನಟರಾಗಿರಲಿಕ್ಕೆ ಸಾಕು. ವ್ಯವಹಾರಿಕ ಕಾರಣಗಳಿಗಾಗಿ ಕನ್ನಡದಲ್ಲಿ ಮಕ್ಕಳ ರಂಗಭೂಮಿಯೊಂದು ಹುಟ್ಟಿದ್ದು ಹೀಗೆ. ದೊಡ್ಡವರು ನೋಡುತ್ತಿದ್ದ ನಾಟಕಗಳನ್ನೇ ಮಕ್ಕಳು ಜೊತೆ ಜೊತೆಗೆ ಕುಳಿತು ನೋಡುತ್ತಿದ್ದ ಕಾಲ ಅದು. ಆಗ ರಂಗಭೂಮಿ ಮನರಂಜನೆಯ ಜೊತೆಗೆ ಸಮುದಾಯ ಶಿಕ್ಷಣದ ಮಾಧ್ಯಮ. ಇಂಥ ಸ್ಥಿತಿಯಲ್ಲಿ ಮಕ್ಕಳಿಗಾಗಿ ವೀರಣ್ಣ 'ಬೋಧಪ್ರದ'ವಾದ ನಾಟಕಗಳನ್ನು ಬರೆಸಿ ಆಡಿಸಿದರು. ಸಾವಿತ್ರಿ, ಕಬೀರ ಲೀಲೆ, ಶ್ರೀಕೃಷ್ಣ ಪಾರಿಜಾತ, ಜಲಂಧರ, ಕೃಷ್ಣಗಾರುಡಿ, ಭಾಮಾ ಪರಿಣಯ ಇತ್ಯಾದಿ. ಈ ನಾಟಕಗಳಲ್ಲೆಲ್ಲ ಮಕ್ಕಳು ಝಗ ಝಗ ವೇಷ ತೊಟ್ಟು, ದೊಡ್ಡವರನ್ನೂ ಮಕ್ಕಳನ್ನೂ ಏಕಕಾಲಕ್ಕೆ ರಂಜಿಸುತ್ತಿದ್ದರು. ಬಾಲಲೀಲೆಗಳ ಜೊತೆಯಲ್ಲಿ ಮಕ್ಕಳ ಮೇಲಿನ ಪ್ರೀತಿ ಕೂಡ, ಪ್ರೇಕ್ಷಕರು ಇಂಥ ನಾಟಕಗಳನ್ನು ಮೆಚ್ಚುವದಕ್ಕೆ ಕಾರಣವಾಗಿರಬಹುದು. ಆದರೆ ಇದರಿಂದ ಪ್ರೇಕ್ಷಕ ಮಕ್ಕಳಿಗಾದ ಲಾಭ ಸ್ವಲ್ಪವೇ. ಇಂಥ ನಾಟಕಗಳನ್ನು ದೊಡ್ಡವರು ಆಡಿದ್ದನ್ನು ಅವರು ಆಗಲೇ ನೋಡಿಬಿಟ್ಟಿದ್ದರು. ಏನೇ ಇರಲಿ, ವೀರಣ್ಣನವರ ಈ ಸಾಹಸ ಒಂದು ಬಗೆಯ ಮಕ್ಕಳ ರಂಗಭೂಮಿಯನ್ನು ಹುಟ್ಟು ಹಾಕಿದ್ದಂತೂ ಸತ್ಯ. ಈ ಘಟನೆ ಮಕ್ಕಳ ರಂಗಭೂಮಿಯ ಪ್ರಥಮ ಮತ್ತು ಮುಖ್ಯ ಹಂತ ಎನ್ನಬಹುದೇನೋ. ಅದುವರೆಗೂ ಹಿರಿಯರದಾಗಿದ್ದ 'ರಂಗ'ವನ್ನು ಪ್ರವೇಶಿಸಿದ್ದು ಮತ್ತು ತುಸು ಸರಳವಾದ ಮಾತುಗಳಿದ್ದ ಪೌರಾಣಿಕ ನಾಟಕಗಳು ಮಕ್ಕಳಿಗಾಗಿಯೇ ರಚಿತವಾದದ್ದು ಈ ಹಂತದ ವೈಶಿಷ್ಟ್ಯ.

**ಎರಡನೆಯ ಹಂತ : ಶಾಲಾ ನಾಟಕಗಳು**

ಇದಾದ ಹಲವು ವರ್ಷಗಳ ನಂತರ ಮಕ್ಕಳು ರಂಗ ಪ್ರವೇಶ ಮಾಡಿದ್ದು ಶಾಲಾ ನಾಟಕಗಳಲ್ಲಿಯೇ ಸ್ವಾತಂತ್ರ್ಯಾನಂತರ ಹಳ್ಳಿಗಳಲ್ಲಿ, ಚಿಕ್ಕಪುಟ್ಟ ಪಟ್ಟಣಗಳಲ್ಲಿ ಹೈಸ್ಕೂಲುಗಳು ಪ್ರಾರಂಭವಾದವು. ಅಂತೆಯೇ ವಾರ್ಷಿಕೋತ್ಸವಗಳೂ ಕೂಡ. ಆ ಕಾಲದಲ್ಲಿ ಶಾಲೆಯ 'ಗ್ಯಾದರಿಂಗ್' ಪ್ರಮುಖ ಮನರಂಜನಾ ಕಾರ್ಯಕ್ರಮ. ಪ್ರತಿ ಗ್ಯಾದರಿಂಗ್‌ನಲ್ಲೂ ಒಂದು ಏಕಾಂಕ ನಾಟಕವಿರುತ್ತಿತ್ತು. ಇವುಗಳಲ್ಲಿ ಹೆಚ್ಚಿನವು ಲಘು ಹಾಸ್ಯದ ಏಕಾಂಕಗಳು. ವರ್ಷಕ್ಕೊಮ್ಮೆ ಸೇರುತ್ತಿದ್ದ ಪ್ರೇಕ್ಷಕರನ್ನು ರಂಜಿಸುವುದು ಈ ನಾಟಕಗಳ ಗುರಿ. ಸರಳ ಮತ್ತು ಚಿಕ್ಕ ನಾಟಕಗಳು ಆಗಿನ ಅಗತ್ಯಗಳಾಗಿದ್ದವು. ಈ ಅಗತ್ಯಗಳನ್ನು ಪೂರೈಸುತ್ತಿದ್ದವರು ಕನ್ನಡದ ಪ್ರಹಸನಕಾರರು. ಗುಂಡಣ್ಣ, ಪರ್ವತವಾಣಿ, ಎ.ಎಸ್. ಮೂರ್ತಿ ಇವರೆಲ್ಲ ಪ್ರಮುಖರು. ಬಹುಪಾಲು ಸರಳ ಹಾಸ್ಯದ ವಸ್ತು, ಸುಲಭ, ಸರಳ ಮಾತುಗಳ ಇಂಥ ನಾಟಕಗಳನ್ನು ಆಡುವುದು ಮಕ್ಕಳಿಗೂ ಆಡಿಸುವುದು ಮಾಸ್ತರುಗಳಿಗೂ ಸುಲಭವಾಗಿತ್ತು. ಇಲ್ಲಿಯೂ ಮಕ್ಕಳು ಆಡುತ್ತಿದ್ದ ನಾಟಕಗಳು ದೊಡ್ಡವರ ಜಗತ್ತಿನ, ಸಂಸಾರದ ಕಥೆ ಹೇಳುತ್ತಿದ್ದವು. ಅಭಿನಯಿಸುತ್ತಿದ್ದವರು ಮಾತ್ರ

ಮಕ್ಕಳು ಅಷ್ಟೇ. ಈ ನಾಟಕಗಳು ಮಕ್ಕಳಿಗೆ ನೀಡಿದ್ದು ಸ್ವಲ್ಪವೇ ಆದರೂ ಅವು ಮಕ್ಕಳು ನಾಟಕಗಳನ್ನಾಡುವ ಸಾಧ್ಯತೆಗಳನ್ನು ತೆರೆದಿಟ್ಟವು. ಮಕ್ಕಳು ಮತ್ತು ರಂಗದ ನಂಟನ್ನು ಬಲಪಡಿಸಿದವು. ಅಭಿರುಚಿ ಬೆಳೆಸಿದವು.

ಈ ಹಂತದ ಮುಖ್ಯ ಬೆಳವಣಿಗೆಯೆಂದರೆ ಗುಬ್ಬಿ ವೀರಣ್ಣನವರ ಪೌರಾಣಿಕ ಪ್ರಪಂಚದಿಂದ ಹೊರ ಬಂದ ಮಕ್ಕಳ ನಾಟಕಗಳು ವಾಸ್ತವದ ಪ್ರಪಂಚವನ್ನು ಹೊಕ್ಕವು. ರಂಗದ ಮೂಲಕ ಮಕ್ಕಳು ವಾಸ್ತವ ಬದುಕಿಗೆ ಪ್ರವೇಶ ಪಡೆದರು.

## ಮೂರನೆಯ ಹಂತ : ಮಕ್ಕಳಿಗಾಗಿ ರಂಗಭೂಮಿ

ಎಪ್ಪತ್ತರ ದಶಕದ ಹೊತ್ತಿಗೆ ಕಾಣಿಸಿಕೊಂಡಿದ್ದು ಮಕ್ಕಳ ರಂಗಭೂಮಿಯ ಮಹತ್ವದ ಹಂತ. ಈ ಹಂತದಲ್ಲಿಯೇ ಮಕ್ಕಳ ರಂಗಭೂಮಿ ಮಹತ್ವದ ಬೆಳವಣಿಗೆಗಳನ್ನು ಕಂಡಿತು.

ಎಂದರೆ ಮಕ್ಕಳ ರಂಗಭೂಮಿಯ ಕೇಂದ್ರ ಪಲ್ಲಟವಾಯಿತು. ಮೊದಲ ಎರಡು ಘಟ್ಟಗಳಲ್ಲಿ ಅಲ್ಪಸಂಖ್ಯಾತ ಬಾಲ ನಟ/ನಟಿಯರ ಕೇಂದ್ರವಾಗಿದ್ದ ಮಕ್ಕಳ ರಂಗಭೂಮಿ ಈಗ ಬಹುಸಂಖ್ಯಾತ ಬಾಲಪ್ರೇಕ್ಷಕ ಕೇಂದ್ರವಾಯಿತು. ಎಂದರೆ ಮಕ್ಕಳ ರಂಗಭೂಮಿಯ ಕೇಂದ್ರ ರಂಗದಿಂದ ಪ್ರೇಕ್ಷಾಂಗಣಕ್ಕೆ Shift ಆಯಿತು. ಆ ಕಾರಣಕ್ಕಾಗಿಯೇ ಮಕ್ಕಳ ನಾಟಕಗಳ ವಸ್ತು ಮತ್ತು ವಿನ್ಯಾಸದಲ್ಲಿ ಭಾರೀ ಬದಲಾವಣೆ ಕಾಣಿಸಿಕೊಂಡಿತು. ನಾಟಕಗಳ ವಸ್ತು ಮಕ್ಕಳ ಬದುಕಿನಿಂದ ಬರತೊಡಗಿದಂತೆ ವಿನ್ಯಾಸವೂ ಅದಕ್ಕೆ ತಕ್ಕಂತೆ ಬದಲಾಗುತ್ತಾ ಸಾಗಿತು. ಬಿ.ವಿ. ಕಾರಂತರ ಪ್ರವೇಶವಾದದ್ದು ಇಲ್ಲಿಯೇ. 'ಮಕ್ಕಳಿಗಾಗಿಯೇ' ನಾಟಕಗಳು ಪ್ರಾರಂಭವಾದದ್ದು ಅವರಿಂದಲೇ. ಅವರು ಮಕ್ಕಳಿಗೆ ಹೊಸ ರಂಗ ಜಗತ್ತಿನ ಬಾಗಿಲು ತೆರೆದರು. ಇದಾದ ಹಲವು ವರ್ಷಗಳವರೆಗೂ ಮಕ್ಕಳೇ ಮಕ್ಕಳಿಗಾಗಿ ನಾಟಕಗಳನ್ನಾಡುವುದರ ಮೂಲಕ ಮಕ್ಕಳ ರಂಗಭೂಮಿ ಅಸ್ತಿತ್ವ ಪಡೆಯಿತು. ಕನ್ನಡದ ಅನೇಕ ಹಿರಿಯ ನಾಟಕಕಾರರು ಮಕ್ಕಳಿಗಾಗಿ ನಾಟಕಗಳನ್ನು ಬರೆದರು. ಕೆಲವು ಮಹತ್ವದ ನಿರ್ದೇಶಕರು ಮಕ್ಕಳ ನಾಟಕಗಳನ್ನಾಡಿಸಲು ಮುಂದಾದರು. ಇವರಿಂದ ಪ್ರೇರಿತರಾದ ಕೆಲವು ಹವ್ಯಾಸಿ ರಂಗಕಲಾವಿದರು ಮತ್ತು ರಂಗನಿರ್ದೇಶಕರು ಮಕ್ಕಳ ರಂಗ ಚಟುವಟಿಕೆಗಳನ್ನು ಅಲ್ಲಲ್ಲಿ ಪ್ರಾರಂಭಿಸಿದರು. ಈಗಲೂ ಇಂಥ ಚಟುವಟಿಕೆಗಳು ಮುಂದುವರೆದಿವೆ.

## ಹಂತ 4 : ಮಕ್ಕಳ ರೆಪರ್ಟರಿಗಳು

ಮಕ್ಕಳೇ ಅಭಿನಯಿಸುತ್ತಿದ್ದ ನಾಟಕಗಳು ಒಂದೋ ಎರಡೋ ಪ್ರಯೋಗಗಳಿಗೆ ನಿಂತು ಹೋಗುತ್ತಿದ್ದ ಕಾಲದಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳುತ್ತ , ಅರೆ ವೃತ್ತಿಪರ ತಂಡಗಳಾಗಿ ನಾಡಿನ ಹಳ್ಳಿ ಹಳ್ಳಿಗಳಿಗೆ ಮಕ್ಕಳ ನಾಟಕಗಳನ್ನು ಒಯ್ಯುವ ಕೆಲಸ ಮಾಡಿದ

ರೆಪರ್ಟರಿಗಳು. ಈ ಹಂತದ ಪ್ರಮುಖ ವೈಶಿಷ್ಟ್ಯವೆಂದರೆ ದೊಡ್ಡವರು ಮಕ್ಕಳಿಗಾಗಿ ನಾಟಕಗಳನ್ನಾಡಿದ್ದು, 'ನೀನಾಸಮ್ ತಿರುಗಾಟ' ಇಂಥ ಒಂದು ಪ್ರಯತ್ನ ಪ್ರಾರಂಭಿಸಿತು. ರಾಜ್ಯಾದ್ಯಂತ ಸಂಚರಿಸುತ್ತಿದ್ದ 'ತಿರುಗಾಟ' ಎಲ್ಲ ಕಡೆಗಳಲ್ಲೂ ಮಕ್ಕಳ ನಾಟಕಗಳನ್ನಾಡುತ್ತಿದ್ದುದರಿಂದ ಮಕ್ಕಳಿಗೆ ಅವರದೇ ಆದ ರಂಗಭೂಮಿಯೊಂದನ್ನು ಪರಿಚಯಿಸಲು ಸಾಧ್ಯವಾಯಿತು.

ಇದರ ಮುಂದುವರಿದ ಹಂತವಾಗಿ ಮಕ್ಕಳ ನಾಟಕಗಳಿಗಾಗಿಯೇ ಸಂಚಾರಿ ತಂಡಗಳು ಪ್ರಾರಂಭವಾದವು. 'ಚಿಣ್ಣ ಬಣ್ಣ' ಅಂಥ ಒಂದು ತಂಡ. ದೇಶದಲ್ಲಿ ಮಕ್ಕಳ ನಾಟಕಗಳಿಗಾಗಿ ಪ್ರಾರಂಭವಾದ ಮೊದಲ ರೆಪರ್ಟರಿ ಇದು. ಕೆಲವೇ ನಟರನ್ನೊಳಗೊಂಡ ಚಿಕ್ಕ ತಂಡ ಸರಳ ರಂಗ ಸಜ್ಜಿಕೆಗಳೊಂದಿಗೆ ನಾಟಕವಾಡುತ್ತಿತ್ತು. ನುರಿತ ನಟರನ್ನೊಳಗೊಂಡ ಈ ಹಂತದಲ್ಲಿ ಪ್ರಯೋಗ (experiment)ದ ಸಾಧ್ಯತೆಗಳು ಹೆಚ್ಚಾಗಿದ್ದವು. ಇಂಥ ಪ್ರಯತ್ನವನ್ನು ಮುಂದುವರೆಸಿದ 'ಕಿನ್ನರ ಮೇಳ' ಎರಡು ದಶಕಗಳಿಂದಲೂ ಮಕ್ಕಳ ನಾಟಕಗಳನ್ನಾಡುತ್ತ ಬಂದಿದೆ. 'ನಿರತ ನಿರಂತ' 'ಚಿಂತನ ಮಕ್ಕಳ ರೆಪರ್ಟರಿ'ಗಳು ಇಂಥ ಪ್ರಯತ್ನ ಮಾಡುತ್ತಿವೆ.

ಪ್ರಯೋಗಶೀಲತೆಗೆ ಸಾಕಷ್ಟು ಅವಕಾಶವಿರುವ ಕಾರಣಕ್ಕಾಗಿ ರೆಪರ್ಟರಿಗಳು ಮಕ್ಕಳಿಗೆ ಹಲವಾರು ವಿಶಿಷ್ಟ ನಾಟಕಗಳನ್ನು ನೀಡಲು ಸಾಧ್ಯವಾಗುತ್ತಿದೆ. ಮುಖ್ಯವಾಗಿ ಜಗತ್ತಿನ ಅನೇಕ 'ಕ್ಲಾಸಿಕ್'ಗಳ ಮಕ್ಕಳ ನಾಟಕ ರೂಪ ಪಡೆದುಕೊಂಡು ಪ್ರಯೋಗಿಸಲ್ಪಡುತ್ತಿವೆ.

**ಹಂತ 5 : 'ರಂಗಾಯಣ'ದ 'ಮಕ್ಕಳ ದನಿ' ಯೋಜನೆ :**

ಮಕ್ಕಳ ರಂಗಭೂಮಿ ಸ್ವತಂತ್ರ ಅಸ್ತಿತ್ವ ಪಡೆಯುತ್ತಿರುವಂತೆಯೇ 'ರಂಗಾಯಣ' ಸ್ವೀಡಿಷ್ಐಟಿಐನೊಂದಿಗೆ 'ಮಕ್ಕಳ ದನಿ' ಯೋಜನೆಯನ್ನು ಕೈಗೆತ್ತಿಕೊಂಡಿತು. 'ರಂಗಾಯಣ'ದಲ್ಲಿ ಮಕ್ಕಳ ನಾಟಕ ತಂಡ 'ರಂಗಕಿಶೋರ' ಹುಟ್ಟಿತು. ಜಗತ್ತಿನ ಬೇರೆ ಬೇರೆ ಭಾಗದ ಮಕ್ಕಳ ನಾಟಕ ನಿರ್ದೇಶಕರು ಬಂದು ಮಕ್ಕಳ ನಾಟಕಗಳನ್ನಾಡಿಸಿದರು. ಈ ನಾಟಕಗಳನ್ನು 'ರಂಗ ಕಿಶೋರ' ನಾಡಿನ ಬಹುಭಾಗಗಳಲ್ಲಿ ಹಾಡಿತು. ಈ ಮೂಲಕ ಜಗತ್ತಿನ ಬೇರೆ ಬೇರೆ ಭಾಗಗಳ ಮಕ್ಕಳ ನಾಟಕಗಳ ವಿವಿಧ ವಿನ್ಯಾಸಗಳನ್ನು ನಮ್ಮ ಮಕ್ಕಳು ಕಾಣುವಂತಾಯಿತು. 'ರಂಗಾಯಣ' ರಾಜ್ಯದ ವಿವಿಧ ಭಾಗಗಳ fellow travellersಗಳ ಮೂಲಕ ಮಕ್ಕಳ ರಂಗಚಟುವಟಿಕೆಗಳನ್ನು ವಿಸ್ತರಿಸಿತು.

ಅಂತರರಾಷ್ಟ್ರೀಯ ಮಟ್ಟದ ಈ ಸಾಂಸ್ಕೃತಿಕ ಕೊಡು-ಕೊಳ್ಳುವಿಕೆ ಮಕ್ಕಳ ರಂಗಭೂಮಿಗಾದ ಬಲು ದೊಡ್ಡ ಲಾಭ.

## ರಂಗಶಂಕರದ 'Theatre for Toddlers'

ಜರ್ಮನಿಯ Goethe Instituteನ ಸಹಯೋಗದೊಂದಿಗೆ ರಂಗಶಂಕರ ಒಂದು ವಿಶಿಷ್ಟ ರಂಗಶಿಬಿರ ನಡೆಸಿತು. ದೇಶದ ವಿವಿಧ ಭಾಗಗಳಿಂದ ಇಪ್ಪತ್ತು ರಂಗನಿರ್ದೇಶಕರು ಭಾಗವಹಿಸಿದ ಈ ಶಿಬಿರ ಮಕ್ಕಳ ರಂಗಭೂಮಿಗೆ ಹೊಸ ಆಯಾಮವೊಂದನ್ನು ನೀಡುವ ಪ್ರಯತ್ನ ಮಾಡಿತು. ಹದಿನೆಂಟು ತಿಂಗಳಿನಿಂದ ನಾಲ್ಕು ವರ್ಷದ ಮಕ್ಕಳಿಗಾಗಿ ನಾಟಕಗಳನ್ನಾಡುವ ಜರ್ಮನಿಯ ನಿರ್ದೇಶಕಿಯರು ಈ ಶಿಬಿರ ನಡೆಸಿಕೊಡುವವರೊಂದಿಗೆ ಪ್ರದರ್ಶನಗಳನ್ನೂ ನೀಡಿದರು. ಹೊಸ ಚಿಂತನೆಗೆ ಹಚ್ಚಿದರು. 'ರಂಗಶಂಕರ' ತನ್ನ ತಂಡದಿಂದ ಇಂಥ ನಾಟಕವೊಂದನ್ನು ಸಿದ್ಧಪಡಿಸಿ ಪ್ರದರ್ಶಿಸಿದೆ. ಕರ್ನಾಟಕದಲ್ಲಿ ಇಂಥ ಪ್ರಯತ್ನಗಳು ಇನ್ನೇನು ಪ್ರಾರಂಭವಾಗಬೇಕಿದೆ.

ಇಷ್ಟೆಲ್ಲ ಆದರೂ ನಾವು ಮಕ್ಕಳ ನಿಜ ಜಗತ್ತನ್ನು ಪ್ರವೇಶಿಸಿಯೇ ಇಲ್ಲ. ಮಕ್ಕಳ ಬದುಕಿನ ಒಳಹೊಕ್ಕು ಅವರ ಸಮಸ್ಯೆಗಳನ್ನು address ಮಾಡುವ ಕೆಲಸ ಅಷ್ಟಾಗಿ ನಡೆದಿಲ್ಲ. 'ಗ್ರಿಪ್ಸ್' ರಂಗಭೂಮಿ ಅಂಥ ಪ್ರಯತ್ನಗಳನ್ನು ಪ್ರಾರಂಭಿಸಿತಾದರೂ ಅದು ಮುಂದುವರಿಯಲಿಲ್ಲ. ಮಗು ಅತ್ಯಂತ ಒತ್ತಡ ಸ್ಥಿತಿಯಲ್ಲಿರುವ ಈ ದಿನಗಳಲ್ಲಿ ಇಂಥ ಅಗತ್ಯ ತುಂಬ ಇದೆ. ಬಹುಶಃ ಅಲ್ಲಲ್ಲಿ ಕೆಲಸ ಮಾಡುತ್ತಿರುವ ರೆಪರ್ಟರಿಗಳು ಇಂಥ ಪ್ರಯತ್ನವನ್ನು ಕೈಗೆತ್ತಿಕೊಳ್ಳಬಹುದೇನೋ. ಮಕ್ಕಳು ಸಮಸ್ಯೆಗಳ ನಡುವೆ ಸಿಕ್ಕು ಅನುಭವಿಸುತ್ತ ನೋವುಗಳನ್ನು ವ್ಯಕ್ತಪಡಿಸಲು ಕಷ್ಟಪಡುತ್ತಿರುವ ಈ ಸಂದರ್ಭದಲ್ಲಿ ಹಿರಿಯರೇ ಹಿರಿಯರಿಗೆ ಪಾಠ ಹೇಳಬೇಕಿದೆ. ಮಕ್ಕಳ ರಂಗಭೂಮಿ ಅದಕ್ಕೊಂದು ದನಿಯಾಗಬೇಕಿದೆ.

★★★

# ಮಕ್ಕಳ ಮನೋವಿಕಾಸಕ್ಕಾಗಿ ಹನುಮಂತನಗರ ಬಿಂಬ

- ಎ.ಎಂ. ಪ್ರಕಾಶ್, ನಿರ್ದೇಶಕ, ಹನುಮಂತನಗರ ಬಿಂಬ

ಮಕ್ಕಳಿಗೇಕೆ ರೆಕ್ಕೆ ಎಂದರೆ ಇಷ್ಟ? ಎಂದು ಪ್ರಶ್ನೆ ಮಾಡಿಕೊಂಡೆ. ನನ್ನ ನೆನಪಿನ ಬುತ್ತಿ ಬಾಲ್ಯಕ್ಕೆ ಹಾರಿತು. ಬಾಲ್ಯದ ನೆನಪು ಮಾಡಿಕೊಳ್ಳುವುದೆಂದರೆ ಏನೋ ಉತ್ಸಾಹ. ಎತ್ತರದ ಜಾರುಬಂಡೆಯಿಂದ ಜಾರಿದ ಹಿತವಾದ ಅನುಭವ. ಮನಸ್ಸಿನಾಳದ ತುಂಟುತನ, ಮುಗ್ಧತೆ, ವಿಸ್ಮಯ, ಸ್ವಾತಂತ್ರ್ಯ ಇವುಗಳೊಂದಿಗಿನ ಹರಟೆ. ಕನಸು, ಬಣ್ಣ, ಕಲ್ಪನೆಗಳೊಂದಿಗೆ ಹಾರಾಡುವ ಮನಸ್ಸುಗಳು. ಬಣ್ಣದ ಗಾಳಿಪಟವನ್ನು ನೀಲಿ ಆಗಸದಲ್ಲಿ ತೇಲಿ ಬಿಟ್ಟಾಗ, ಸೂತ್ರ ಹಿಡಿದ ಪುಟ್ಟ ಕೈಗಳಿಗೆ ಇಡೀ ಜಗತ್ತನ್ನೇ ನಿಯಂತ್ರಿಸುತ್ತಿದ್ದೀವೇನೋ ಎಂಬಂತಹ ಭಾವ. ಕಾಗದದ ಪುಟ್ಟ ವಿಮಾನಕ್ಕೆ ಗಾಳಿಯೂದಿ ಮೇಲೆ ಹಾರಿ ಬಿಟ್ಟಾಗ ಅಲೆ ಅಲೆಯಾಗಿ ತೇಲಿ ಸಾಗುವಾಗ ಮನಸ್ಸು ಅದರೊಳಗಿದೆಯೇನೋ ಎಂಬಂತಹ ಸುಂದರ ಅನುಭವ. ಬಿಳಿ ಕಾಗದ ಹರಡಿ ಬಣ್ಣ ಕುಂಚಗಳೊಂದಿಗೆ ಚಿತ್ರ ಬಿಡಿಸುವಾಗ ಹೊಸ ವಿಸ್ಮಯಲೋಕವನ್ನೇ ಅನಾವರಣಗೊಳಿಸುತ್ತಿದ್ದೇವೆಂಬ ಹೆಮ್ಮೆ. ಇಲ್ಲಿ ಸ್ವಚ್ಛಂದ ಮನಸ್ಸಿನ ವಿಹಾರಕ್ಕೆ ಅಡೆತಡೆ ಇಲ್ಲ.

**1971-72**

ಗಾಂಧಿ ಬಜಾರ್‌ನ ಕಲಾಮಂದಿರದ ಮಹಡಿಯ ಮೇಲೆ 25/30 ಮಕ್ಕಳ ಗುಂಪು ಯಾರಿಗೋ ಕಾಯುತ್ತಿದ್ದಾರೆ. ಅವರೊಳಗೆ ನಾನೂ ಒಬ್ಬ. ನನಗಾಗ 11 ವರ್ಷ. 6ನೇ ತರಗತಿ ಓದುತ್ತಿದ್ದೆನೆಂಬ ನೆನಪು (ಈ ಮಕ್ಕಳನ್ನೆಲ್ಲಾ ಒಂದೆಡೆ ಕಲೆ ಹಾಕಿದವರು ನನ್ನ ತಂದೆ ಎ.ಎಸ್. ಮೂರ್ತಿ). ಸ್ವಲ್ಪ ಹೊತ್ತಿನ ನಂತರ ಕನ್ನಡಕ ಧರಿಸಿದ ವ್ಯಕ್ತಿಯೊಬ್ಬರ ಆಗಮನ. ಈ ಕುತೂಹಲದ ವ್ಯಕ್ತಿ ಚಂದ್ರಶೇಖರ ಕಂಬಾರರು ಎಂದು ನಂತರ ತಿಳಿಯಿತು. ಅಂದು ತಾವು ರಚಿಸಿದ ಮಕ್ಕಳ ನಾಟಕ 'ಕಿಟ್ಟಿಯ ಕಥೆ'ಗೆ ಪಾತ್ರದ ಆಯ್ಕೆಗೆ ಬಂದಿದ್ದರು. ಎಲ್ಲ ಮಕ್ಕಳೊಂದಿಗೆ ಒಂದಷ್ಟು ಮಾತು-ತಮಾಷೆ. ಆ ಸಮಯದಲ್ಲಿ ನಾನೂ ಯಾವುದೋ ಹಾಡು ಹೇಳಿದ್ದ ನೆನಪು.

ಮಾರನೆಯ ದಿನವೇ ಪಾತ್ರದ ಹಂಚಿಕೆ. ಎಲ್ಲರಿಗೂ ಒಂದೊಂದು ಪಾತ್ರ ದೊರೆಯಿತು. ನನ್ನ ಸರದಿ ಬಂದಾಗ ನನಗೆ ಪ್ರಮುಖವಾದ ಕಿಟ್ಟಿಯ ಪಾತ್ರ ಎಂದು ತಿಳಿದಾಗ ನನಗೆ ಆಶ್ಚರ್ಯ. ಮೊದಲಿನಿಂದಲೂ ನನ್ನದು ನಾಚಿಕೆಯ ಸ್ವಭಾವ. ಇಂತಹ ದೊಡ್ಡ ಪಾತ್ರವನ್ನು ನಿರ್ವಹಿಸುವುದು ಹೇಗೆ ಎಂಬ ಆತಂಕ. ನಾಟಕದ ಪಾತ್ರಧಾರಿಗಳೆಲ್ಲ ನನ್ನ ಸ್ನೇಹಿತರು ಹಾಗೂ ನನ್ನ ಸಹೋದರಿಯರಿಬ್ಬರಾದ್ದರಿಂದ ವಾತಾವರಣ ಆತ್ಮೀಯವಾಗಿತ್ತು. ನಾಟಕದ ನಿರ್ದೇಶಕರಾದ ಕಂಬಾರರ ನಾಟಕವಾಚನ ರಂಜನೀಯವಾಗಿತ್ತು, ನಂತರ ರಂಗತಾಲೀಮು ಉತ್ಸಾಹದಿಂದ ತುಂಬಿತ್ತು. ಕಂಬಾರರ ಮೆಚ್ಚುಗೆ ನುಡಿಗಳ ಜೊತೆ ಅವರ ಉತ್ತರ ಕರ್ನಾಟಕದ ಭಾಷೆಯ ಬೈಗುಳ ಗಾಬರಿವುಂಟು ಮಾಡುತ್ತಿತ್ತು. ಪ್ರತಿದಿನ ರಿಹರ್ಸಲ್‌ಗಾಗಿ ಕಾಯುತ್ತಿದ್ದೆವು.

ಕಿಟ್ಟಿಕತೆ ನಾಟಕವು ಬೆಂಗಳೂರಿನ ಬಾಲಭವನದಲ್ಲಿ ಸುಮಾರು 25ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿತು. ಬೆಂಗಳೂರಿನ ಸಾಕಷ್ಟು ಶಾಲೆಗಳ ಮಕ್ಕಳು ಈ ನಾಟಕವನ್ನು ವೀಕ್ಷಿಸಿದರು.

ಕಿಟ್ಟಿಕಥೆ ನಾಟಕದ ತಿರುಳು ಹೀಗಿದೆ :

ಚಿಗುರು ಮೀಸೆ ಮೂಡದ ಪುಟ್ಟ ಬಾಲಕ ಕಿಟ್ಟಿಗೆ ಮದುವೆಯಾಗಬೇಕೆಂಬ ಹಂಬಲ. ತನ್ನ ಅಜ್ಜಿಗೆ ಬೇಗ ಮದುವೆ ಮಾಡೆಂದು ಗಂಟು ಬೀಳುವ. ಅಜ್ಜಿ ಇಷ್ಟು ಬೇಗ ಬೇಡ ಎನ್ನುವಳು. ಇದರಿಂದ ಮುನಿಸಿಕೊಂಡ ಕಿಟ್ಟಿ ಐದು ಪೈಸೆ ಹಿಡಿದು ಎಲ್ಲರಿಗೂ ಜಾಣತನದಿಂದ ಮೋಸ ಮಾಡಿ ಕೊನೆಗೆ ಆ ಊರಿನ ರಾಜಕುಮಾರಿಯನ್ನು ಮದುವೆಯಾಗುವ. ಕೊನೆಗೆ ಸುಖಾಂತ್ಯ.

ಹಾಸ್ಯ, ಚುರುಕು ಸಂಭಾಷಣೆ, ಹಾಡು, ಕುಣಿತ, ಅಭಿನಯದ ದೃಷ್ಟಿಯಿಂದ ಎಲ್ಲರನ್ನೂ ಮನರಂಜಿಸಿದ ನಾಟಕವೆನಿಸಿತು. ನನಗಂತೂ ಪ್ರೇಕ್ಷಕರ ಚಪ್ಪಾಳೆ, ಪ್ರಶಂಸೆಯ ಮಾತುಗಳು ನನ್ನ ಆತ್ಮವಿಶ್ವಾಸವನ್ನು ಇಮ್ಮಡಿಗೊಳಿಸಿತು. ಇದೇ ರಂಗಭೂಮಿಗಿರುವ ಅದ್ಭುತವಾದ ಶಕ್ತಿ.

ಈಗ ಈ ನಾಟಕದ ಕಥಾವಸ್ತುವನ್ನು ಗಮನಿಸಿದರೆ ಇದು ಮಕ್ಕಳ ನಾಟಕ ಎನ್ನುವುದಕ್ಕಿಂತಲೂ ದೊಡ್ಡವರಿಗಾಗಿ ಮಕ್ಕಳು ಅಭಿನಯಿಸಿದ ನಾಟಕವೆಂದು ಹೇಳಬಹುದು.

**1974-75**

ಎ.ಎಸ್. ಮೂರ್ತಿಯವರು ಮಕ್ಕಳಿಗಾಗಿಯೇ 'ಜಂಬೂಸವಾರಿ' ನಾಟಕವನ್ನು ಬರೆದಿದ್ದರು. ಈ ನಾಟಕ ಗೌರಿಸುಂದರ್‌ರವರಿಗೆ ಮೆಚ್ಚುಗೆಯಾಗಿ ಬಿ.ವಿ. ಕಾರಂತರೇ

ಇದಕ್ಕೆ ಸೂಕ್ತವಾದ ನಿರ್ದೇಶಕರೆಂದು ಅವರನ್ನು ಒಪ್ಪಿಸಿದರು. ಬಿ.ವಿ. ಕಾರಂತರು ಈ ಸಮಯದಲ್ಲಾಗಲೇ ಕನ್ನಡ ರಂಗಭೂಮಿಗೆ ಹೊಸ ಚೈತನ್ಯವನ್ನು ನೀಡಿದ್ದರು. 'ಪಂಚಮ' ರಂಗತಂಡದ ಹೆಸರಿನಲ್ಲಿ ನಾಟಕ ಪ್ರದರ್ಶಿಸಲು ಸುಂದರ್ ತೀರ್ಮಾನಿಸಿದರು.

ಗಾಂಧೀ ಬಜಾರ್‌ನ ಭವಾನಿ ಕಲ್ಯಾಣ ಮಂಟಪ ರಂಗತಾಲೀಮಿನ ತಾಣವಾಯಿತು. ಮಕ್ಕಳ ಗುಂಪು ಬಿ.ವಿ. ಕಾರಂತರಿಗಾಗಿ ಕಾಯುತ್ತಾ ಕೂತೆವು. ಕಾರಂತರು ಎಲ್ಲ ಮಕ್ಕಳನ್ನು ಗಮನಿಸಿ, ಅವರೊಂದಿಗೆ ರಂಗಾಟವನ್ನು ನಡೆಸಿ, ನಂತರ ಪಾತ್ರ ವಿಂಗಡಣೆ ಮಾಡಿದರು. ಈ ಬಾರಿಯೂ ಜಂಬೂಸವಾರಿ ನಾಟಕದ ಪ್ರಮುಖ ಪಾತ್ರಧಾರಿ 'ಸಾಂಬ'ನ ಪಾತ್ರ ನನ್ನ ಪಾಲಿಗೆ ದೊರಕಿತು. ಕಿಟ್ಟಿಯಾಗಿ ಅಭಿನಯಿಸಿದ್ದ ಅನುಭವ ಇಲ್ಲಿ ನೆರವಿಗೆ ಬಂತು. ಬಿ.ವಿ. ಕಾರಂತರ ಗುಂಪು ನಿರ್ವಹಣೆ, ಭಾವಾಭಿನಯ, ರಂಗಚಲನೆ, ರಾಗ ಸಂಯೋಜನೆ ಸುಂದರವಾಗಿ ಮೂಡಿಬಂತು. ನಮಗೂ ಬಿ.ವಿ. ಕಾರಂತರ ನಿರ್ದೇಶನದಲ್ಲಿ ನಟಿಸಿದ ಹೆಮ್ಮೆ. ರವೀಂದ್ರ ಕಲಾಕ್ಷೇತ್ರದಲ್ಲಿ ಈ ನಾಟಕ ಐದಾರು ಪ್ರದರ್ಶನಗಳನ್ನು ಕಂಡು ಯಶಸ್ವಿಯಾಯಿತು.

ಮಕ್ಕಳ ನಾಟಕಕ್ಕೆ ಸೂಕ್ತ ಕಥಾವಸ್ತು ಇದರಲ್ಲಿತ್ತು.

ಆಕಸ್ಮಿಕವಾಗಿ ಒಂದು ರೂಪಾಯಿಗೆ ಲಾಟರಿ ಕೊಂಡುಕೊಂಡ ಹುಡುಗ ಸಾಂಬನಿಗೆ ಜೀವಂತ ಆನೆ ಬಹುಮಾನವಾಗಿ ಬಂದುಬಿಡುತ್ತದೆ. ಮೊದಮೊದಲಿಗೆ ಸ್ನೇಹಿತರೊಂದಿಗೆ, ಊರಿನವರೊಂದಿಗೆ, ಮನೆಯವರೊಂದಿಗೆ ಸಂಭ್ರಮ ಹಂಚಿಕೊಳ್ಳುವ ಸಾಂಬ ನಂತರದಲ್ಲಿ ಆನೆಯನ್ನು ಸಾಕಲಾರದೆ ಸರ್ಕಸ್ ಕಂಪನಿಗೆ ಮಾರಿಬಿಡುವ ಮಾರ್ಮಿಕ ಸನ್ನಿವೇಶವೇರ್ಪಡುತ್ತದೆ. ಮುಗ್ಧ ಹುಡುಗನ ಮತ್ತು ಮೂಕಪ್ರಾಣಿಯ ನಡುವಿನ ಭಾವನಾತ್ಮಕ ಸಂಬಂಧ ನಾಟಕದ ತಿರುಳು. ಕನ್ನಡ ರಂಗಭೂಮಿಗೆ ಈ ಮಕ್ಕಳ ನಾಟಕ ಹೊಸ ತಿರುವನ್ನೇ ನೀಡಿತು. ಮುಂದೆ ಇದೇ ನಾಟಕವನ್ನಾಧರಿಸಿ ಕೆ.ಎಸ್.ಎಲ್. ಸ್ವಾಮಿ (ರವಿ) ಮಕ್ಕಳ ಸಿನಿಮಾವನ್ನು ತಯಾರಿಸಿದರು. ಶ್ರೇಷ್ಠ ಮಕ್ಕಳ ಚಿತ್ರವೆಂದು ರಾಷ್ಟ್ರೀಯ ಸ್ವರ್ಣ ಕಮಲ ಪ್ರಶಸ್ತಿಯನ್ನು ಗಳಿಸಿತು.

**1989**

ಈ ಹೊತ್ತಿಗಾಗಲೇ ನಮ್ಮ ಅಜ್ಜ ಕಲಾಮಂದಿರದ ಅ.ನ. ಸುಬ್ಬರಾಯರು ನಮ್ಮನ್ನಗಲಿ ಎಂಟು ವರ್ಷಗಳಾಗಿತ್ತು. ಅ.ನ.ಸು. ಅವರ ನೆನಪಿನಲ್ಲಿ ಅಭಿನಯತರಂಗ ಭಾನುವಾರದ ರಂಗಶಾಲೆ ಪ್ರಾರಂಭವಾಗಿತ್ತು. ಅದಲ್ಲದೇ ಎ.ಎಸ್. ಮೂರ್ತಿಯವರ ನೇತೃತ್ವದಲ್ಲಿ ಬೀದಿನಾಟಕ ಚಳುವಳಿ ಕರ್ನಾಟಕದುದ್ದಕ್ಕೂ ಹೊಸ ಸಂಚಲನವನ್ನುಂಟು ಮಾಡಿತ್ತು. ಅಲ್ಲದೇ ಪಪೆಟ್ ಲ್ಯಾಂಡಿನ ಬೊಂಬೆಯಾಟ ಮನೆಮನೆ ಮಾತಾಗಿತ್ತು.

1989ರಲ್ಲಿ ದೂರದರ್ಶನಕ್ಕಾಗಿ 'ಜಗಿ ಜಗಿ ಬೊಂಬೆಯಾಟ'ದ ಪಪೆಟ್‌ಸೀರಿಯಲ್ 50 ಕಂತುಗಳಲ್ಲಿ ಮೂಡಿ ಬಂದು ಜನಪ್ರಿಯವಾಯಿತು. ಕರ್ನಾಟಕದಲ್ಲಿ ಮೊಟ್ಟ ಮೊದಲಬಾರಿಗೆ ಮೂಡಿಬಂದ ಈ 'ಪಪೆಟ್ ಸೀರಿಯಲ್' ಮಕ್ಕಳ ಅಚ್ಚುಮೆಚ್ಚಿನ ಕಾರ್ಯಕ್ರಮವಾಗಿತ್ತು. ಪೋಷಕರು ಹಾಗೂ ಮಕ್ಕಳು ಮಕ್ಕಳಿಗಾಗಿಯೇ ಏನಾದರೂ ಕಾರ್ಯಕ್ರಮವನ್ನು ರೂಪಿಸಬೇಕೆಂದು ಒತ್ತಾಯ ಹಾಕುತ್ತಲೇ ಇದ್ದರು.

ಚಲನಚಿತ್ರ, ರಂಗಭೂಮಿ, ಟಿ.ವಿ. ಇವೆಲ್ಲವೂ ದೊಡ್ಡವರಿಗಾಗಿಯೇ ಮೀಸಲಿದ್ದು ಮಕ್ಕಳಿಗಾಗಿ ಏನೊಂದು ಇಲ್ಲದಿರುವುದು, ಮಕ್ಕಳಿಗಾಗುತ್ತಿರುವ ಅನ್ಯಾಯದ ಬಗ್ಗೆ ನಮಗೆ ಕೊರಗಿತ್ತು.

ಈ ಕಾರಣಗಳಿಂದಾಗಿಯೇ 1989ರಲ್ಲಿ 'ಚಿತ್ರಾ' ಮಕ್ಕಳ ಶಿಬಿರವನ್ನು ರೂಪಿಸಿತು. ಅತ್ಯಂತ ಯಶಸ್ವಿಯಾದ ಈ ಶಿಬಿರದಿಂದ ಪೋಷಕರು ಉತ್ತೇಜನಗೊಂಡು ನಿರಂತರವಾಗಿ ಮಕ್ಕಳಿಗಾಗಿಯೇ ತರಬೇತಿ ನೀಡಿರೆಂಬ ಒತ್ತಾಯ ಬಂತು. ಈ ಕಾರಣಗಳಿಂದ ಮಕ್ಕಳಿಗಾಗಿಯೇ ವಿಶೇಷವಾದ ಸಂಸ್ಥೆ ಹುಟ್ಟುಹಾಕಬೇಕೆಂಬ ಮನ ಮಾಡಿದೆವು. ಆಗ ಹುಟ್ಟಿದ ಮಕ್ಕಳ ಸಂಸ್ಥೆ ಬಿಂಬ ! ಎ.ಎಸ್. ಮೂರ್ತಿಯವರೊಂದಿಗೆ ಗೌರಿದತ್ತು ಹಾಗೂ ವನಮಾಲಾ ಪ್ರಕಾಶ್ ಇದರ ನೇತೃತ್ವವನ್ನು ವಹಿಸಿಕೊಂಡರು. ಪ್ರತಿ ವರ್ಷದ ಬಿಂಬ ಶಿಬಿರದಲ್ಲಿ ಕಲೆಯ ಎಲ್ಲಾ ಪ್ರಕಾರಗಳಲ್ಲಿ ಸೃಜನಾತ್ಮಕೆಯಿಂದ ಹಾಡು, ನಾಟಕ, ಚಿತ್ರಕಲೆ, ಮೂಕಾಭಿನಯ, ನೃತ್ಯ ಕಾರ್ಯಕ್ರಮಗಳು ರೂಪುಗೊಂಡವು. ಎ.ಎಸ್. ಮೂರ್ತಿಯವರು ರಚಿಸಿದ ಮಂತ್ರವಾಗಿ, ಓ ನನ್ನ ಮರವೇ ಮಕ್ಕಳ ನಾಟಕಗಳನ್ನು ಗೌರಿದತ್ತು ನಿರ್ದೇಶಿಸಿದರು. ಬಿಂಬದ ಮಕ್ಕಳ ಶಿಬಿರ, ರಂಗ ತರಬೇತಿ ಕೋರ್ಸುಗಳು ಅತ್ಯಂತ ಜನಪ್ರಿಯವಾಗತೊಡಗಿತು. ಬೆಂಗಳೂರಿನ ಬೇರೆ ಬೇರೆ ಬಡಾವಣೆಗಳಲ್ಲಿ ಬಿಂಬದ ಶಾಖೆಗಳನ್ನು ಪ್ರಾರಂಭಿಸಬೇಕೆಂಬ ಪೋಷಕರ ಒತ್ತಾಸೆಯ ಮೇರೆಗೆ 1995ರಲ್ಲಿ ವಿಜಯನಗರದಲ್ಲಿ ಬಿಂಬದ ಮತ್ತೊಂದು ಶಾಖೆ ಆರಂಭವಾಯಿತು. ಇದರ ನೇತೃತ್ವವನ್ನು ಶೋಭಾ ವೆಂಕಟೇಶ್ ವಹಿಸಿಕೊಂಡರು. ಆಗಿನಿಂದಲೂ ವಿಜಯನಗರ ಬಿಂಬ ಮಕ್ಕಳ ರಂಗಭೂಮಿಗೆ ಕೊಡುಗೆ ನೀಡುತ್ತಾ ಬಂದಿದೆ.

**1997**

ಕಲಾಮಂದಿರ ಕಲಾಶಾಲೆಯ ಪ್ರಾಂಶುಪಾಲರಾಗಿ ಚಿತ್ರಕಲಾ ಕ್ಷೇತ್ರದಲ್ಲಿ ಸಂಪೂರ್ಣವಾಗಿ ಮುಳುಗಿದ್ದ ನನಗೆ 1997ರಿಂದ ಮಕ್ಕಳಿಗಾಗಿ ವಿನೂತನ ಕಾರ್ಯಕ್ರಮಗಳನ್ನು ರೂಪಿಸಬೇಕೆಂಬ ಮನಸ್ಸಾಯಿತು. ಇಂದಿನ ಯಾಂತ್ರಿಕ ಬದುಕು, ಶಿಕ್ಷಣದ ಹೊರೆಯಿಂದ ಬಳಲಿದ ಮಕ್ಕಳ ಮನಸ್ಸನ್ನು ಮುದಗೊಳಿಸಬೇಕೆಂಬ ಮನ

ಮಾಡಿ ಅವರ ಬಾಲ್ಯವನ್ನು ಹಸಿರಾಗಿಸಬೇಕೆಂಬ ಆಶಯದಿಂದ 'ಹನುಮಂತನಗರ ಬಿಂಬ'ದಲ್ಲಿ ತೊಡಗಿಸಿಕೊಂಡೆ. ಕಲಾಭಿರುಚಿ ಶಿಬಿರ ಪ್ರಾರಂಭವಾಯಿತು.

ಕವಿ ನಿಸಾರ್ ಅಹ್ಮದ್ ಹಾಗೂ ಲಕ್ಷ್ಮೀನಾರಾಯಣ ಭಟ್ಟರ ಒಂದೊಂದು ಕವಿತೆಯನ್ನಾಧರಿಸಿ ಮಕ್ಕಳಿಗೆ ಕವಿತಾ ವಾಚನ ವಿಧಾನ, ಅದರ ಅರ್ಥ, ಇದೇ ಕವಿ ಹಾಡಾಗಿ, ಚಿತ್ರವಾಗಿ, ನಾಟಕ, ಮೂಕಾಭಿನಯವಾಗಿ ಅಭಿವ್ಯಕ್ತಿಗೊಳಿಸಬಹುದಾದ ಸಾಧ್ಯತೆಗಳನ್ನು ಮಕ್ಕಳು ಈ ಕವಿಗಳ ಸಮ್ಮುಖದಲ್ಲಿ ಪ್ರಸ್ತುತಪಡಿಸಿ ಮೆಚ್ಚುಗೆ ಗಳಿಸಿದರು.

ಹೀಗೆ ನಿರಂತರವಾಗಿ 22 ವರ್ಷಗಳ ಕಾಲ ಹನುಮಂತನಗರ ಬಿಂಬ ಮಕ್ಕಳ ಮನೋವಿಕಾಸಕ್ಕಾಗಿ ಕಲಾಭಿರುಚಿ ಶಿಬಿರ, ಪ್ರತಿ ಶನಿವಾರದ ಆರು ತಿಂಗಳ ಕೋರ್ಸ್‌ಗಳನ್ನು ನಡೆಸುತ್ತಾ ಬಂದಿದೆ. ಇದುವರೆಗೂ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಮಕ್ಕಳು ಇಲ್ಲಿಂದ ತರಬೇತಿ ಪಡೆದಿದ್ದಾರೆ. ಈ ಮಕ್ಕಳು ರಂಗಭೂಮಿ, ಚಲನಚಿತ್ರ, ಕಿರುತೆರೆ, ರೇಡಿಯೋಗಳಲ್ಲಿ ಕಲಾವಿದರಾಗಿ, ನಿರೂಪಕರಾಗಿ, ತಂತ್ರಜ್ಞರಾಗಿ, ನಿರ್ದೇಶಕರಾಗಿ, ಕಲಾನಿರ್ದೇಶಕರುಗಳಾಗಿ ಕ್ರಿಯಾತ್ಮಕವಾಗಿ ಕಾರ್ಯ ನಿರ್ವಹಿಸುತ್ತಿರುವುದು ಹನುಮಂತನಗರ ಬಿಂಬಕ್ಕೆ ಹೆಮ್ಮೆ ಎನಿಸಿದೆ. ಇದಲ್ಲದೇ ಲೇಖಕರಾಗಿ, ಛಾಯಾಗ್ರಾಹಕರಾಗಿ, ಡಾಕ್ಟರ್, ಇಂಜಿನಿಯರ್, ಸಾಫ್ಟ್‌ವೇರ್ ಇಂಜಿನಿಯರ್‌ಗಳಾಗಿ ಹೆಸರಾಗಿದ್ದಾರೆ. ಇವರೆಲ್ಲರೂ ತಮ್ಮ ಬಾಲ್ಯ ಜೀವನದಲ್ಲಿ ಹನುಮಂತನಗರ ಬಿಂಬದ ಪಾತ್ರದ ಬಗ್ಗೆ, ಅದರ ಹಸಿರು ನೆನಪಿನ ಬಗ್ಗೆ ಮಾತನಾಡುವಾಗ ನಮ್ಮ ಕಾರ್ಯ ಸಾರ್ಥಕವಾಯಿತೆಂಬ ಭಾವ ಹೊಂದುತ್ತೇವೆ.

ಈ 22 ವರ್ಷಗಳ ಅನುಭವದ ಕೆಲವು ಸಂಗತಿಗಳನ್ನು ಹೇಳಲಿಚ್ಛಿಸುತ್ತೇನೆ

- 2001ರಲ್ಲಿ ಹನುಮಂತನಗರ ಬಿಂಬದ ಆರು ತಿಂಗಳ ಕೋರ್ಸ್‌ನ ಸಮಾರೋಪದಂದು 'ಬೆಳಕು' ನಾಟಕವನ್ನು ಮಕ್ಕಳಿಗಾಗಿ ಆಡಿಸಿದೆವು. ರವೀಂದ್ರ ಕಲಾಕ್ಷೇತ್ರದಲ್ಲಿ ಇದು ಪ್ರದರ್ಶನಗೊಂಡಿತು. ಪೋಷಕರಿಗೆ ಈ ನಾಟಕ ಬಹಳ ಹಿಡಿಸಿತು. ಇದರಲ್ಲಿನ ಸಂದೇಶ ಮನಮುಟ್ಟಿತು. ಇದೇ ಸಮಯಕ್ಕೆ ಗುಜರಾತಿನಲ್ಲಿ ಘೋರವಾಗಿ ಭೂಕಂಪ ಸಂಭವಿಸಿ ಸಾವಿರಾರು ಜನರ ಸಾವು ನೋವಿನಿಂದ ಎಲ್ಲರ ಮನ ಕಲಕಿತು. ಹನುಮಂತನಗರ ಬಿಂಬದ ಪೋಷಕರು, ಮಕ್ಕಳು ಸಭೆ ಸೇರಿ ಈ ಒಂದು ದುರಂತಕ್ಕೆ ಹೇಗಾದರೂ ನೆರವಾಗಬೇಕೆಂದು ನಿರ್ಧಾರ ಮಾಡಿದರು.

ಭೂಕಂಪ ಪರಿಹಾರ ನಿಧಿಗಾಗಿ 'ಬೆಳಕು' ನಾಟಕವನ್ನು ಪ್ರದರ್ಶಿಸಿ ಹಣ ಸಂಗ್ರಹಿಸಬೇಕೆಂದು ನಿರ್ಧರಿಸಲಾಯಿತು. ಮಾರನೇ ದಿನದಿಂದ ಹನುಮಂತನಗರ ಬಿಂಬದ ಪೋಷಕರು ಅತಿ ಉತ್ಸಾಹದಿಂದ ಓಡಾಡಿದರು. ಟಿಕೇಟು ಮುದ್ರಣ, ಮಾರಾಟ,

ಅದಕ್ಕೆ ಬೇಕಾದ ಪ್ರಚಾರ ಎಲ್ಲವನ್ನೂ ಮಕ್ಕಳೊಂದಿಗೆ ಪೋಷಕರೇ ಮುಂದೆ ನಿಂತು ನಡೆಸಿಕೊಟ್ಟರು.

ರಂಗಪ್ರದರ್ಶನದ ದಿನದಂದು ರೆಡ್‌ಕ್ರಾಸ್ ಸಂಸ್ಥೆಯವನ್ನು ಆಹ್ವಾನಿಸಿ ಸಂಗ್ರಹಗೊಂಡ (ಒಂದು ಲಕ್ಷದ ಹನ್ನೊಂದು ಸಾವಿರ ನೂರ ಹನ್ನೊಂದು ರೂಪಾಯಿಯ) ಚೆಕ್ಕನ್ನು ಸಂದಾಯ ಮಾಡುವಾಗ ಮಕ್ಕಳು ಮತ್ತು ಪೋಷಕರು ಮಾಡಿದ ಉದ್ಗಾರ ಇನ್ನೂ ನಮ್ಮ ಕಿವಿಯಲ್ಲಿ ಗುಯ್‌ಗುಡುತ್ತಿದೆ. ಈ ಒಂದು ಘಟನೆ ಎಂದೂ ಮರೆಯಲಾರದಂತಹದ್ದು. 'ಬೆಳಕು' ಬರಿಯ ರಂಗಪ್ರದರ್ಶನವಾಗಿರಲಿಲ್ಲ, ಮಾನವೀಯ ಸಂಬಂಧಗಳಿಗೆ ಹಿಡಿದ ಕನ್ನಡಿಯಾಗಿತ್ತು. ರಂಗಭೂಮಿ ಮೂಲಕ ಪೋಷಕರು ಮತ್ತು ಮಕ್ಕಳಲ್ಲಿ ಸಾಮಾಜಿಕ ಕಳಕಳಿ, ಜವಾಬ್ದಾರಿಯನ್ನು ಮೂಡಿಸಿದ ಕಾರ್ಯಕ್ರಮವೆನಿಸಿತು.

- ಏಳೆಂಟು ವರ್ಷಗಳ ಹಿಂದೆ ಸಾರಾ ಎನ್ನುವ ಆರು ವರ್ಷದ ಹುಡುಗಿ ಹನುಮಂತನಗರ ಬಿಂಬದ ಶಿಬಿರಕ್ಕೆ ಬರುತ್ತಿದ್ದಳು. ''ಇವಳ ಬಗ್ಗೆ ಸ್ವಲ್ಪ ಎಚ್ಚರ ವಹಿಸಿ. ಈ ಹುಡುಗಿ hyperactive. ಶಾಲೆಯಲ್ಲಿ ಆಟ ಆಡುವಾಗ ಮಹಡಿ ಮೇಲಿನಿಂದ ಒಬ್ಬ ಹುಡುಗನನ್ನು ತಳ್ಳಿಬಿಟ್ಟಿದ್ದಳು. ಒಂದು ನಿಮಿಷವೂ ಸುಮ್ಮನೆ ಕೂರದ, concentration ಎನ್ನುವುದೇ ಇಲ್ಲ. ಈಗಾಗಲೇ ಮನಶಾಸ್ತ್ರಜ್ಞರನ್ನು ಭೇಟಿ ಮಾಡಿ ಈ ಬಗ್ಗೆ ತಿಳಿಸಿದ್ದೇವೆ. ಅವರು ಇಲ್ಲಿಗೆ refer ಮಾಡಿದ್ದಾರೆ'' ಎಂಬಿತ್ಯಾದಿ ಮಾತುಗಳನ್ನು ಹೇಳಿದ್ದರು. ನಾವೂ ಕೂಡ ಈ ಹುಡುಗಿಯನ್ನು ಗಮನಿಸುತ್ತಿದ್ದೆವು. ಪೋಷಕರು ಹೇಳಿದ ಮಾತುಗಳಲ್ಲಿ ಉತ್ಪ್ರೇಕ್ಷೆಯೇನಿರಲಿಲ್ಲ. ದಿನ ಕಳೆದಂತೆ ಈ ಹುಡುಗಿಯ ಬಗ್ಗೆ complaintಗಳು ಹೆಚ್ಚಾದವು. ನಾವು ಇನ್ನಿಲ್ಲದ ರೀತಿಯಲ್ಲಿ ಇದನ್ನು ನಿಯಂತ್ರಿಸಲು ಪ್ರಯತ್ನಪಡುತ್ತಿದ್ದೆವು. ಒಂದು ದಿನ ಸಾರಾಳ ಬಗ್ಗೆ ಯಾವ complaintಗಳು ಬರಲೇ ಇಲ್ಲ. ನಾವು ಈ ಹುಡುಗಿ ಈ ದಿನ ಶಿಬಿರಕ್ಕೆ ಬಂದಿಲ್ಲವೆಂದುಕೊಂಡೆವು. ಇಲ್ಲ, ಈ ಹುಡುಗಿ ಹಾಜರಾಗಿದ್ದಾಳೆ. ಮಕ್ಕಳ ಗುಂಪಿನಲ್ಲಿ ಕಷ್ಟಪಟ್ಟು ಅವಳನ್ನು ಹುಡುಕಿದ್ದಾಯಿತು. ಆಶ್ಚರ್ಯ ! ಸಾರಾ ಡ್ರಾಯಿಂಗ್ ಹಾಳೆಯನ್ನು ಹರಡಿ, ಸುತ್ತಲೂ ಬಣ್ಣ, ಬ್ರಶ್‌ಗಳನ್ನು ಇಟ್ಟುಕೊಂಡು ಚಿತ್ರಕ್ಕೆ ಬಣ್ಣ ತುಂಬುವುದರಲ್ಲಿ ಮಗ್ನಳಾಗಿದ್ದಾಳೆ. ದೂರದಿಂದಲೇ ಅವಳನ್ನು ಗಮನಿಸಿದೆ. ಅವಳಿಗೆ ಸುತ್ತಮುತ್ತ ಯಾರಿದ್ದಾರೆ, ಏನಾಗುತ್ತಿದೆ ಎಂಬ ಪರಿವೇ ಇರಲಿಲ್ಲ. ಬಣ್ಣ ಹಚ್ಚುವ ಕ್ರಮವನ್ನು ಗಮನಿಸಿದೆ. ಎಂತಹ ಅಚ್ಚುಕಟ್ಟು, ಸುಂದರವಾದ ವರ್ಣ ಸಂಯೋಜನೆ, ತಾಳ್ಮೆಯಿಂದ ಎಲ್ಲವನ್ನೂ ನಿರ್ವಹಿಸುತ್ತಾ ಸಂತೋಷಪಡುತ್ತಿದ್ದಳು. ಉಳಿದ ಎಲ್ಲ ಮಕ್ಕಳು ತಮ್ಮ ಕೆಲಸ ಬೇಗ ಮುಗಿಸಿ ಆಟಕ್ಕೆ ಸಿದ್ಧವಾಗುತ್ತಿದ್ದರು. ಸಾರಾ ಮಾತ್ರ ಚಿತ್ರಕಲೆ ತರಗತಿ ಮುಗಿದರೂ ಸಂಜೆಯವರೆಗೆ ತನ್ನ ಕೃತಿಯನ್ನು ಸಂಪೂರ್ಣಗೊಳಿಸುವುದರಲ್ಲಿ ಮಗ್ನಳಾಗಿದ್ದಳು.

ಸಾರಾಳ ಪೋಷಕರಿಗೆ ಇದನ್ನು ತೋರಿಸಿ, ''ಇವಳಿಗೆ painting ಬಗ್ಗೆ ಬಹಳ ಆಸಕ್ತಿ ಇದೆ. ಇದರಿಂದ ಇವಳ concentration ಅದ್ಭುತವಾಗಿ ಬೆಳೆಯುತ್ತದೆ. ಇದನ್ನೇ ಇವಳು ಮುಂದುವರೆಸಲಿ'' ಎಂದು ಸೂಚಿಸಿದೆವು. ಪೋಷಕರು ಅದನ್ನು ಅಕ್ಷರಶಃ ಪಾಲಿಸಿದರು. ತಾನಿರುವ ಶಾಲೆಗೆ ಹೆಸರು ತಂದಿರುವ ಸಾರಾಗೆ ಈಗ 15 ವರ್ಷ. ಆಗಾಗ ಬಂದು ತಾನು ಬರೆದಿರುವ ಚಿತ್ರಕಲಾಕೃತಿಗಳನ್ನು, ತನಗೆ ಬಂದಿರುವ ಪ್ರಶಸ್ತಿಗಳನ್ನು ಹೆಮ್ಮೆಯಿಂದ ತೋರಿಸುತ್ತಾಳೆ. ಅವಳೊಂದಿಗೆ ಬಂದ ಪೋಷಕರು ಧನ್ಯತಾಭಾವದಿಂದ ಬಿಂಬಕ್ಕೆ ಕೃತಜ್ಞತೆ ಸಲ್ಲಿಸುತ್ತಾರೆ. ಒಂದು ಸಂಸ್ಥೆಗೆ ಇದಕ್ಕಿಂತ ದೊಡ್ಡ ಪ್ರಶಸ್ತಿ ಇನ್ನೇನು ಬೇಕು ?

- ಕಳೆದ ನಾಲ್ಕು ವರ್ಷಗಳ ಹಿಂದೆ ಆರು ತಿಂಗಳ ಕೋರ್ಸ್‌ಗೆ 7 ವರ್ಷದ ಹುಡುಗ ಗೌರವ್ ಎಲ್ಲೂರ್ ಎಂಬ ವಿದ್ಯಾರ್ಥಿ ಸೇರಿದ. ಅವನು ನಾಚಿಕೆಯ ಮುದ್ದೆ. ಮನೆಯಲ್ಲಿ ಅವರ ತಂದೆ ತಾಯಿಯರನ್ನು ಬಿಟ್ಟು ಯಾರೊಡನೆಯೂ ಮಾತನಾಡಿದವನಲ್ಲ, ಆರು ತಿಂಗಳ ತರಬೇತಿಯಲ್ಲಿ ಒಂದು ದಿನವೂ ಬಾಯಿ ಬಿಡಲಿಲ್ಲ ಮಿಕ್ಕ ಎಲ್ಲ ಮಕ್ಕಳು ಇವನನ್ನು ಮೂಕನೆಂದೇ ತಿಳಿದು ಕೈ ಸಂಜ್ಞೆಯ ಮೂಲಕವೇ ತಿಳಿಹೇಳುತ್ತಿದ್ದರು. ಇನ್ನೇನು ಕೋರ್ಸ್ ಮುಗಿಯುವ ಸಮಯ ಬಂತು. ನಾಟಕದ ರಿಹರ್ಸಲ್ಸ್ ಪ್ರಾರಂಭವಾಯಿತು. ಇವನಿಗೂ ಒಂದು ಪಾತ್ರ ದೊರೆಯಿತು. ಏನೇ ಮಾಡಿದರೂ ಬಾಯಿ ಬಿಡುತ್ತಿರಲಿಲ್ಲ. ಒಂದು ದಿನ ರಿಹರ್ಸಲ್ಸ್‌ಗೆ ಮುಂಚೆ theatre games ಆಡಿಸುವಾಗ ಗೌರವ್ ಗುಂಪಿನವರು ಸೋಲುವ ಸ್ಥಿತಿ ಬಂತು. ಎಲ್ಲ ಮಕ್ಕಳಿಗೂ ಆತಂಕ ಶುರುವಾಯಿತು. ಔಟಾಗದೆ ಉಳಿದ ಗೌರವ್‌ನನ್ನು ಮಿಕ್ಕ ಹುಡುಗರು ಹುರಿದುಂಬಿಸಲು ಪ್ರಾರಂಭಿಸಿದರು. ಕೊನೆಗೆ ಪರಿಸ್ಥಿತಿ ಏನಾಯಿತೆಂದರೆ ಗೌರವ್ ವಿಧಿ ಯಿಲ್ಲದೆ ಪ್ರಶ್ನೆಗೆ ಉತ್ತರ ಹೇಳಲೇಬೇಕಾದ ಸಂದರ್ಭ ಬಂತು. ಉತ್ತರ ಹೇಳಿ ತಂಡವನ್ನು ಗೆಲ್ಲಿಸಿದ. ಇಡೀ ಬಿಂಬದ ಮಕ್ಕಳಿಗೆ ಗೆದ್ದ ಸಂಭ್ರಮಕ್ಕಿಂತ ಇವನು ಮಾತನಾಡಿದ ಬಗ್ಗೆ ದಿಗ್ಭ್ರಮೆ ಉಂಟಾಗಿ ''ಮೂಕನಿಗೆ ಮಾತು ಬಂತು'' ಎಂಬ ಉದ್ಗಾರ ತೆಗೆದರು. ಅಂದಿನಿಂದ ಗೌರವ್ ಎಲ್ಲರ ಕಣ್ಮಣಿಯಾದ. ಗೌರವ್ ಈಗ ಹನುಮಂತನಗರ ಬಿಂಬದ ಖಾಯಂ ವಿದ್ಯಾರ್ಥಿಯಾಗಿದ್ದಾನೆ. ರಂಗದ ಮೇಲೆ ಬಂದಾಗ ಉದ್ದುದ್ದ ಸಂಭಾಷಣೆಯನ್ನು ಸುಲಲಿತವಾಗಿ ಹೇಳಿ ಎಲ್ಲರ ಮನ ಗೆಲ್ಲುತ್ತಾನೆ. ಕಡಿಮೆ ಸಂಭಾಷಣೆ ಇರುವ ಪಾತ್ರ ಸಿಕ್ಕಾಗ ಕಿವಿಯ ಬಳಿ ಬಂದು, ''ಸಾರ್, ಇಷ್ಟೇನಾ ಮಾತು. ಇನ್ನೂ ಕೊಡಿ ಸಾರ್'' ಎಂದು ಕೇಳುತ್ತಾನೆ. ಆಗ ಆಶ್ಚರ್ಯದಿಂದ ಮೂಕನಾಗುವ ಸರದಿ ನನ್ನದಾಗುತ್ತದೆ.

- ಕಳೆದ ವರ್ಷ ಆರು ತಿಂಗಳ ಕೋರ್ಸ್ ಪ್ರಾರಂಭವಾಗಿ ಒಂದು ತಿಂಗಳಾದ ಮೇಲೆ ನಮಗೆ ಆತ್ಮೀಯರಾದ ಬಿಂಬದ ಹಿರಿಯ ವಿದ್ಯಾರ್ಥಿಯ ಪೋಷಕರಿಂದ

ದೂರವಾಣಿ ಕರೆ ಬಂತು. ''ನಿಮ್ಮ ಬಿಂಬ ಕೋರ್ಸಿಗೆ ಒಂದು ಮಗುವನ್ನು ಸೇರಿಸಿಕೊಳ್ಳಿ. ಇಲ್ಲ ಎನ್ನಬೇಡಿ. ಇದನ್ನು special case ಎಂದು ಪರಿಗಣಿಸಿ. ಮಗುವಿನೊಂದಿಗೆ ತಾಯಿಯನ್ನೂ ಕಳುಹಿಸುವೆ'' ಎಂದರು. ಏನೂ ಮಾತನಾಡಲಾಗದೇ ಆಯಿತೆಂದೆ. ಮಾರನೆಯ ದಿನ ಮಗುವಿನೊಂದಿಗೆ ಬಂದರು. ಆ ಪುಟಾಣಿಗೆ ಐದು ವರ್ಷ. ಹೆಸರು ಗೌರಿ. ಚುರುಕು ಮಾತಿನ, ದೊಡ್ಡ ಕಣ್ಣಿನ ಮುದ್ದಾದ ಚೂಟಿ ಹುಡುಗಿ ತನ್ನ ಪಾಡಿಗೆ ತಾನು ಆಟವಾಡುತ್ತಿದ್ದಳು. ಮಗುವಿನ ತಾಯಿ ಆತಂಕದಿಂದಿದ್ದರು. ''ಮಗುವಿನ ಮನಸ್ಸಿನ ಮೇಲೆ ಏನೋ ಆಘಾತವಾಗಿದೆ. ಅಮ್ಮ ಸತ್ತು ಹೋಗುತ್ತಾಳೆಂಬ ಭಯ ಯಾವಾಗಲೂ ಕಾಡುತ್ತಿರುತ್ತದೆ ಅವಳಿಗೆ. ಕತ್ತಲೆಂದರೆ ಆಗುವುದಿಲ್ಲ, ಶಾಲೆಯಲ್ಲಿ ಏನಾದರೊಂದು ಇವಳ ಬಗ್ಗೆ complaint ಇದ್ದೇ ಇರುತ್ತದೆ. ಬೇಗ ಎಲ್ಲದಕ್ಕೂ ಸಿಡಿಮಿಡಿಗೊಳ್ಳುತ್ತಾಳೆ. ಮನಶಾಸ್ತ್ರಜ್ಞರ ಬಳಿ ತೋರಿಸಿದೆ. ಆದರೆ ಏನೂ ಪ್ರಯೋಜನವಾಗಲಿಲ್ಲ'' ಎಂದು ಕಣ್ಣೀರಿಟ್ಟರು. ಮಗುವಿನ ತಂದೆಗೆ ಇತ್ತೀಚೆಗೆ ಬೇರೆ ಊರಿಗೆ ವರ್ಗವಾಗಿದೆ. ತಿಂಗಳಿಗೊಮ್ಮೆ ಬಂದು ಹೋಗುತ್ತಾರೆ ಎಂಬ ವಿಷಯ ತಿಳಿಯಿತು. ಆಯಿತು, ಮುಂದಿನ ವಾರದಿಂದ ಗೌರಿಯನ್ನು ಕಳುಹಿಸಿ ಎಂದೆವು.

ಪುಟಾಣಿ ಗೌರಿ ಬಿಂಬಕ್ಕೆ ಬರತೊಡಗಿದಳು. ಎಲ್ಲ ಮಕ್ಕಳೊಂದಿಗೆ ನಿಧಾನವಾಗಿ ಹೊಂದಿಕೊಂಡಳು. ಎಲ್ಲರ ಪ್ರೀತಿಯ ಮಗುವಾದಳು. ಈ ವಾತಾವರಣಕ್ಕೆ ಒಗ್ಗಿಕೊಂಡಳು. ಮಕ್ಕಳೇ ರೂಪಿಸಿದ puppet showಗೆ ತುಂಬಾ ಚೆನ್ನಾಗಿ ಬೊಂಬೆಗೆ ಮಾತು ಜೋಡಿಸಿದಳು. ಕಿರುನಾಟಕಗಳಲ್ಲಿ ಮುದ್ದಾಗಿ ನಟಿಸಿದಳು. ಕೋರ್ಸ್‌ನ ಮುಕ್ತಾಯದ ವೇಳೆಗೆ ಅವಳ ತಾಯಿ ''ಮಗಳು ತುಂಬಾ ಬದಲಾಗಿದ್ದಾಳೆ. ಹಿಂದೆ ಇದ್ದ ಎಲ್ಲ ತೊಂದರೆಗಳು ಮಾಯವಾಗಿ ಬಹಳ ಸಹಜವಾಗಿ ವರ್ತಿಸುತ್ತಿದ್ದಾಳೆ'' ಎಂದು ಹೇಳುವಾಗ ಅವರ ಕಣ್ಣಂಚಿನಲ್ಲಿ ನೀರು ತುಂಬಿತ್ತು. ಕೋರ್ಸ್‌ದ ಸಮಾರೋಪ ಪ್ರಮುಖ ನಾಟಕಕ್ಕೆ ಇವಳಿಗೂ ಒಂದು ಪಾತ್ರ ಸೃಷ್ಟಿಯಾಯಿತು. ರಿಹರ್ಸಲ್‌ಗೂ ಎಲ್ಲರಿಗಿಂತ ಮುಂಚೆ ಬಂದು ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದಳು. ರಂಗಪ್ರದರ್ಶನಕ್ಕೆ ಇನ್ನೆರಡು ದಿನವಿದ್ದಾಗ ಗೌರಿಗೆ 'ಅಮ್ಮ' ಎದ್ದಿತ್ತು. ಅತಿಯಾದ ಜ್ವರದಿಂದ ಬಳಲಿದಳು. ನಾಟಕದಲ್ಲಿ ಭಾಗವಹಿಸಲಾಗಲಿಲ್ಲ, ನಮಗೂ ಬಿಂಬ ಮಕ್ಕಳಿಗೂ ಬಹಳ ಬೇಸರವೆನಿಸಿತು. ಪ್ರದರ್ಶನದ ದಿನ ದೂರವಾಣಿ ಕರೆ ಬಂತು. ''ಸಾರ್, ನಂಗೆ ಹುಷಾರಿಲ್ಲ, ನಂಗೆ ಬರಕ್ಕೆ ಆಗಲ್ಲ. ಮುಂದಿನ ಸಲ ನಾನು ಬಂದೇ ಬರ್ತೀನಿ. ನಂಗೆ ಅದೇ ರೋಲ್ ಕೊಡಬೇಕು'' ಎಂದು ಗೌರಿ ಹೇಳಿದಾಗ ನಾವೆಲ್ಲ ಗದ್ಗದಿತರಾದೆವು.

- 12 ವರ್ಷದ ಹನುಮಂತನಗರ ಬಿಂಬದ ವಿದ್ಯಾರ್ಥಿನಿಗೆ ಹುಟ್ಟುಹಬ್ಬದ ಸಂಭ್ರಮ. ಹುಡುಗಿಯ ತಂದೆ ತಾಯಿ ಏನು ಉಡುಗೊರೆ ಬೇಕೆಂದು ಕೇಳಿದ್ದಾರೆ. ಅದಕ್ಕೆ

ಆ ಹುಡುಗಿ ''ನಾನು ಕೇಳಿದ್ದನ್ನು ಕೊಡ್ತೀರಾ promise'' ಎಂದಿದ್ದಾಳೆ. ಪೋಷಕರು 'yes' ಎಂದಿದ್ದಾರೆ. ''ನಾನು ಹನುಮಂತನಗರ ಬಿಂಬಕ್ಕೆ ಹೋಗುತ್ತಲೇ ಇರುತ್ತೇನೆ. ದೊಡ್ಡವಳಾದ ಮೇಲೆ volunteer ಆಗುತ್ತೇನೆ. ಅಲ್ಲಿಯವರೆಗೆ ಬಿಂಬದ ಜೊತೆ ಇರುತ್ತೇನೆ. ಇದೇ ನನಗೆ GIFT'' ಎಂದಿದ್ದಾಳೆ. ಅದರಂತೆ ಕಳೆದೆರಡು ವರ್ಷದ ಹಿಂದೆ ಅವಳ ಆಸೆ ಪೂರೈಸಿತು.

● ಒಬ್ಬ ಪೋಷಕರು ಬಿಂಬಕ್ಕೆ 6 ವರ್ಷದ ಮಗುವನ್ನು ಸೇರಿಸಲು ಕರೆತಂದಿದ್ದರು. ''ಸಾರ್ ನನ್ನ ಮಗ ಏನು ನೋಡಿದ್ರೂ ಹಾಗೇ ಚಿತ್ರ ಬರೆದುಬಿಡ್ತಾನೆ. ಎಲ್ಲಿಂದ ಕಲಿತ್ಕೋತಾನೋ ಗೊತ್ತಿಲ್ಲ. ಸೇರಿಸಿಕೊಳ್ಳಿ'' ಎಂದರು. ಆ ಚೂಟಿ ಹುಡುಗನಿಗೆ ''ಚಿತ್ರ ಬರೆಯೋದು ಇಷ್ಟಾನಾ ?'' ಅಂದೆ. ''ಹ್ಞೂಂ'' ಅಂದ. ಪೇಪರ್, ಪೆನ್ಸಿಲ್ ಕೊಟ್ಟು, ಕುದುರೆ ಚಿತ್ರ ಬರಿ ಅಂದೆ. ಹಿಂದು ಮುಂದು ನೋಡದೆ ಕ್ಷಣಾರ್ಧದಲ್ಲಿ ಪೆನ್ಸಿಲ್‌ನಿಂದ ರಭಸವಾಗಿ ಗೆರೆಗಳನ್ನ ಎಳೆದು ನನ್ನ ಎದುರಿಗೆ ಹಿಡಿದ. ಅವರ ತಂದೆಗೆ ಅವಮಾನ ಆದ ಹಾಗೆ ಆಯಿತು. ಮಗನನ್ನು ಕುರಿತು ಗದರುವ ದನಿಯಲ್ಲಿ''ಕುದುರೆ ಹೀಗಿರುತ್ತೇನೋ. ಅದರ ಬಾಲ ಹೀಗಿರುತ್ತೆ, ಮುಖ ಹೀಗಿರುತ್ತೆ, ಕಾಲುಗಳು ಹೀಗಿರುತ್ತೆ'' ಎಂದು ಅವರು ನೋಡಿದ ಕುದುರೆಯನ್ನು ವಿವರಿಸತೊಡಗಿದರು. ಆ ಮಗು ಒಂದೇ ಮಾತಿನಲ್ಲಿ ಇದು ''ನನ್ನ ಕುದುರೆ'' ಎಂದಿತು. ತಕ್ಷಣ ನಾನು ಆ ಗೀಚಿದ ಗೆರೆಗಳಲ್ಲಿ ಕುದುರೆಯನ್ನು ಹುಡುಕಲು ಪ್ರಾರಂಭಿಸಿದೆ. ಆ ಮಗುವನ್ನು ಕೇಳಿದೆ, ''ನಿಂಗೆ ಕುದ್ರೆ ಅಂದ್ರೆ ಇಷ್ಟಾನಾ?'' ಆ ಮಗು ಹೌದೆಂದಿತು. ಯಾಕೆ ಕುದುರೆ ಅಂದ್ರೆ ಇಷ್ಟ? ಅಂದೆ. ಆ ಮಗು ''ಕುದುರೆ ತುಂಬಾ ಜೋರಾಗಿ ಓಡುತ್ತೆ, ಅದಕ್ಕೇ ಇಷ್ಟ'' ಎಂದಿತು. ಆ ಮಗು ಚಿತ್ರದಲ್ಲಿ ಕುದುರೆಯ ವೇಗವನ್ನು, ಕುದುರೆಯ ವ್ಯಕ್ತಿತ್ವವನ್ನು ಗ್ರಹಿಸಿತ್ತು. ಇನ್ನೊಮ್ಮೆ ಆ ಚಿತ್ರವನ್ನು ಗಮನಿಸಿದೆ. ಆ ದಟ್ಟವಾದ ರೇಖೆ, ಸುಲಲಿತ ಗೆರೆಗಳು ಯಾವ ಪಿಕಾಸೋವಿನ ಚಿತ್ರಕ್ಕಿಂತ ಕಡಿಮೆ ಇಲ್ಲವೆನಿಸಿತು. ಈಗಲೂ ಈ ಚಿತ್ರ ಸೃಜನಶೀಲತೆಯ ಉದಾಹರಣೆಯಾಗಿ ನನ್ನ ಬಳಿ ಇದೆ.

## ನಮ್ಮನಿಸಿಕೆಗಳು

● ಪುರಾತನ ಕಾಲದಿಂದ ಬರಿಯ ಪ್ರೇಕ್ಷಕರಾಗಿಯೇ ಉಳಿದಿದ್ದ ಮಕ್ಕಳು ಈಗ ರಂಗಪ್ರವೇಶ ಮಾಡಿದ್ದಾರೆ. ಅವರ ಬೇಕು ಬೇಡಗಳಿಗೆ ರಂಗಭೂಮಿ ಅತ್ಯುತ್ತಮ ಅಭಿವ್ಯಕ್ತಿಯಾಗಿದೆ.

● ರಂಗಶಿಸ್ತಿಗೆ ಒಳಪಟ್ಟ ಮಕ್ಕಳು ಮುಂದೆ ಭವಿಷ್ಯದಲ್ಲಿ ಉತ್ತಮ ಪ್ರಜೆಗಳಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಮನೆ, ಶಾಲೆಗಳಲ್ಲಿ ದೊರೆಯದ ಜೀವನದ ಅನುಭವಗಳನ್ನು, ಮಾನವೀಯ ಅಂಶಗಳನ್ನು, ಸಂವೇದನೆಗಳನ್ನು ಮುಕ್ತ

ಚಿಂತನೆಗಳನ್ನು, ತಮ್ಮ ಅಭಿಪ್ರಾಯಗಳನ್ನು ಖಚಿತಪಡಿಸಿಕೊಂಡು, ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ರಂಗಭೂಮಿ ನಿಜಕ್ಕೂ ಅತ್ಯುತ್ತಮ ಮಾಧ್ಯಮವಾಗಿದೆ.

- ಮಕ್ಕಳ ನಾಟಕಗಳನ್ನು ಹಿಂದಿನಂತೆ ಉದಾರ ಮನಸ್ಸಿನಿಂದ ನೋಡುವ ಅಗತ್ಯವಿಲ್ಲ. 'ಮಕ್ಕಳು ಏನು ಮಾಡಿದರೂ ಚೆನ್ನ' ಎಂಬ ಉಡಾಫೆಯ ಮಾತುಗಳಿಗೀಗ ಪೂರ್ಣವಿರಾಮ ಹಾಕಬೇಕಿದೆ. ಹಿರಿಯರ ರಂಗಭೂಮಿಗೆ ಕಡಿಮೆ ಇಲ್ಲದಂತೆ ಮಕ್ಕಳು ಅದ್ಭುತವಾಗಿ ಅಭಿನಯಿಸುತ್ತಿದ್ದಾರೆ. ಮಕ್ಕಳ ನಾಟಕಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

- ಹನುಮಂತನಗರಬಿಂಬ ಇದುವರೆಗೂ 20ಕ್ಕೂ ಹೆಚ್ಚು ಮೇಜರ್ ನಾಟಕಗಳನ್ನು ಮಕ್ಕಳಿಗಾಗಿ ರೂಪಿಸಿ ಆಡಿಸಿದೆ. ಅದರಲ್ಲಿ ಕೆಲವು ನಾಟಕಗಳ ಕಿರು ಪರಿಚಯ.

- ಬೆಳಕು : ಪರಲೋಕದ ಮಂದಿ ಸತ್ಯವನ್ನು ಅರಸುತ್ತಾ ಭೂಮಿಗೆ ಬಂದಾಗ ಇಲ್ಲಿ ಅವರಿಗಾಗುವ 'ಸತ್ಯ'ದ ಪರಿಚಯ. ಆಳುವ ದೊರೆಗೆ ಸಾಮಾನ್ಯ ಹುಡುಗನೊಬ್ಬ ನೀಡುವ ಜ್ಞಾನದ ಬೆಳಕು. ಇದು ಬೆಳಕು ನಾಟಕದ ತಿರುಳು.

- ತಥಾಸ್ತು : ಮಹಾತ್ಮ ಗಾಂಧೀಜಿಯವರ ಮೂರು ಕೋತಿಗಳು, ಗಾಂಧಿ ತೀರಿ ಹೋದ ನಂತರದಲ್ಲಿ ಏನು ಮಾಡುತ್ತವೆ ಎಂಬುದರ ಬಗ್ಗೆ ವಿಡಂಬನಾತ್ಮಕವಾಗಿ ರೂಪಿಸಿದ ನಾಟಕ.

- ಪುಟ್ಟಿ: ಯಾಂತ್ರಿಕತೆಯ ಕಾಂಕ್ರೀಟ್ ಕಾಡಿನಲ್ಲಿ ಕ್ಷಣವೂ ಬಿಡುವಿರದ ಮಂದಿಯ ಮಧ್ಯೆ ಪ್ರೀತಿಯನ್ನರಸುವ ಮುಗ್ಧ ಪುಟ್ಟಿಯು ಪಡುವ ಪಾಡು ಪುಟ್ಟಿ ನಾಟಕದ ಕಥಾವಸ್ತು.

- ನೆರಳುಗೊಂಬೆ : ಸಾಂಪ್ರದಾಯಿಕ, ಜಾನಪದ ಕಲೆಗಳು ಆಧುನಿಕ ಅಲೆಯಲ್ಲಿ ಕೊಚ್ಚಿಹೋಗುತ್ತಿರುವ ಸಂದರ್ಭದಲ್ಲಿ ಅದನ್ನು ಉಳಿಸಿ ಬೆಳೆಸಿ ಎಂದು ತಿಳಿಹೇಳುವ ಬಾಲಕನ ಕಥೆಯೇ ನೆರಳುಗೊಂಬೆ. ತೊಗಲು ಬೊಂಬೆಯಾಟ ಬಳಸಿ ಸಾಂಕೇತಿಕ ಅರ್ಥ ಮೂಡಿಸುವ ಪ್ರಯತ್ನ ಈ ನಾಟಕದಲ್ಲಿದೆ.

- ಪ್ರಶ್ನೆ : ಎಲ್ಲವನ್ನೂ ಪ್ರಶ್ನೆ ಮಾಡುವ, ಉತ್ತರಕ್ಕಾಗಿ ಹಾತೊರೆಯುವ ಮಗು - ಕೊನೆಗೆ ಪ್ರಶ್ನೆಗಳೇ ಉತ್ತರವಾಗುವ ಕ್ರಿಯೆ ಈ ನಾಟಕದಲ್ಲಿದೆ.

- ಜಾಸೂಸ್ : ಇಬ್ಬರು ಪ್ರಚಂಡ ಪತ್ತೇದಾರರು. ಅನೇಕ ಕ್ಲಿಷ್ಟ ಸಮಸ್ಯೆಗಳನ್ನು ಬಿಡಿಸುವರು. ಹಳ್ಳಿಯಿಂದ ಪೇಟೆಗೆ ಬಂದ ಹುಡುಗನಿಗೆ ಕನಸೇ ಬೀಳದ ಸಮಯದಲ್ಲಿ ಸೂಕ್ಷ್ಮವಾದ ಪತ್ತೇದಾರಿಕೆಯಿಂದ ಹುಡುಗನಿಗೆ ಕನಸು ಬೀಳುವ ಹಾಗೆ ಮಾಡುವ ಜಾಸೂಸ್‌ಗಳು.

• ಅಜ್ಜ : ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ, ಭಾವನಾತ್ಮಕ ಸಂಬಂಧವನ್ನು ಇಟ್ಟುಕೊಂಡಿದ್ದ ಪುರಾತನ ಗಡಿಯಾರ ಒಂದು ದಿನ ಕಳುವಾದಾಗ ರಜಾದಿನಕ್ಕೆಂದು ಅಮೆರಿಕಾದಿಂದ ಮೊಮ್ಮಕ್ಕಳು ಅಜ್ಜನಿಗೆ ಮರಳಿ ಉಡುಗೊರೆಯಾಗಿ ಗಡಿಯಾರ ನೀಡುವರು. ರಾಮಾಯಣದ ಹಾಡು ಈ ನಾಟಕದ ವಿಶೇಷ.

• ಹೀಗೊಂದ್ಕತೆ : ವೃತ್ತಿಯಿಂದ ಹುಲಿ ವೇಷ ಕುಣಿಯುವವರ ಮನೆಯಲ್ಲಿ ನಡೆಯುವ ಒಂದು ಕತೆ. ಜಾನಪದ ಕಲೆ ನಶಿಸಿಹೋಗುತ್ತಿರುವ ಸಂದರ್ಭದಲ್ಲಿ ಅದನ್ನು ಮುಂದಿನ ಯುವಜನಾಂಗ ಮುಂದುವರೆಸುವುದು ಅವಶ್ಯ ಎನ್ನುವ ಆಶಯ ಹೊಂದಿದ ನಾಟಕ.

ಪುಣ್ಯಕೋಟಿ ಹಾಡು ಮತ್ತು ಬೊಂಬೆಯಾಟದ ದೃಶ್ಯಕಲ್ಪನೆ ಈ ನಾಟಕದ ವಿಶೇಷ.

• ಬಂದಾ ಕೋಡಂಗಿ : ರಾಜರ ಆಸ್ಥಾನದಲ್ಲಿ (ಕೋಡಂಗಿ) ಹಾಸ್ಯಗಾರನಾದವನಿಗೆ ವಯಸ್ಸಾಗುತ್ತಿದ್ದಂತೆ ತನ್ನ ಮಕ್ಕಳೇ ಈ ವೃತ್ತಿ ಮುಂದುವರಿಸಲೇಬೇಕೆಂಬ ಆಸೆ - ಹಳೆ ತಲೆಮಾರು, ಹೊಸ ತಲೆಮಾರಿನ ಸಂಘರ್ಷ ಈ ನಾಟಕದ ತಿರುಳು. ಮತ ಗುರುಪ್ರಸಾದ್ ಅವರು ಈ ನಾಟಕವನ್ನಾಧರಿಸಿ ಕನ್ನಡದ ಪ್ರಪ್ರಥಮ ಅನಿಮೇಶನ್ ಚಿತ್ರ ರೂಪಿಸುತ್ತಿರುವುದು ಬಿಂಬಕ್ಕೆ ಹೆಮ್ಮೆಯ ವಿಷಯವಾಗಿದೆ.

• ನಮ್ಮಲ್ಲಿ ಒಂದು ಬಾರಿ ಶಿಬಿರಕ್ಕೊ, ಆರು ತಿಂಗಳ ಕೋರ್ಸ್‌ಗೋ ಸೇರಿದವರು ನಿರಂತರವಾಗಿ ಏಳೆಂಟು ವರ್ಷ ವಿದ್ಯಾರ್ಥಿಗಳಾಗಿ ಬಂದವರಿದ್ದಾರೆ. ಇದಲ್ಲದೇ ಪ್ರತಿಭಾವಂತ ಹಿರಿಯ ವಿದ್ಯಾರ್ಥಿಗಳು ಬಿಂಬದಲ್ಲಿ volunteerಗಳಾಗಿ ಮುಂದುವರೆಯುತ್ತಾರೆ. ಇಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಿಗೆ ಎಲ್ಲಾ ವಿಭಾಗಗಳಲ್ಲಿಯೂ ನೆರವಾಗುತ್ತಾರೆ. ಹಾಗೆಯೇ ಅನುಭವ ಗಳಿಸುತ್ತಾರೆ.

• ಅದಲ್ಲದೇ ಈ ಹಿರಿಯ ವಿದ್ಯಾರ್ಥಿಗಳೇ ಈಗ ಪ್ರಮುಖ ನಾಟಕಗಳಿಗೆ ಹಾಡಿನ ರಚನೆ, ಬೊಂಬೆ ನಾಟಕಕ್ಕೆ, ಕಿರುನಾಟಕಕ್ಕೆ scriptಗಳನ್ನ, ಸಂಭಾಷಣೆಗಳನ್ನ ರಚಿಸಬಲ್ಲವರಾಗಿದ್ದಾರೆ. ಸಾಹಿತ್ಯದ ಅಭಿರುಚಿ ಬೆಳೆಸಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಇಲ್ಲಿನ ಹಿರಿಯ ವಿದ್ಯಾರ್ಥಿಗಳಾದ ಕೆ.ಎಲ್. ಹರ್ಷ, ಪುನೀತ್ ಬಿ.ಎ., ಕುಮಾರ್ ಪ್ರಮುಖರೆನಿಸಿದ್ದಾರೆ.

• ಬಿಂಬದ ಎಲ್ಲಾ ನಾಟಕಗಳಿಗೆ ಅತ್ಯುತ್ತಮವಾಗಿ ಸಂಗೀತ ನಿರ್ದೇಶನ ನೀಡುತ್ತಾ ಇಲ್ಲಿನ ಹಿರಿಯ ವಿದ್ಯಾರ್ಥಿ ರೋಹಿತ್ ಭಟ್ ಭರವಸೆ ಮೂಡಿಸಿದ್ದಾನೆ.

• ಮೂಕಾಭಿನಯ, ನಾಟಕ ನಿರ್ದೇಶನದಲ್ಲಿ ಹಿರಿಯ ವಿದ್ಯಾರ್ಥಿನಿ ಅನ್ವಿತಾ ಪ್ರಕಾಶ್ ಪ್ರಮುಖಳೆನಿಸಿದ್ದಾಳೆ.

• ಕಿರಣ್ ಭಟ್, ಸ್ವಾತಿ ಭಟ್, ಅನೂಪ್ ಸಿಂಹ ಇವರುಗಳೆಲ್ಲಾ ರಂಗದ ಹಿನ್ನೆಲೆಯಲ್ಲಿ, ವಸ್ತ್ರ ವಿನ್ಯಾಸದಲ್ಲಿ, ಸಂಗೀತಕ್ಕೆ ಸಹಾಯಕರಾಗಿ ದುಡಿಯುತ್ತಾ ಗಮನ ಸೆಳೆದಿದ್ದಾರೆ.

• ಈ ಎಲ್ಲಾ ಕಾರ್ಯದ ಹಿಂದೆ ಹನುಮಂತನಗರ ಬಿಂಬದ ಸಂಘಟಕಿಯಾಗಿ, ಸಂಚಾಲಕಿಯಾಗಿ ವನಮಾಲಾ ಪ್ರಕಾಶ್ ಮುಖ್ಯರೆನಿಸಿದ್ದಾರೆ. ಹನುಮಂತನಗರ ಬಿಂಬದ ಬೆನ್ನೆಲುಬಾಗಿ, ಅಧ್ಯಕ್ಷರಾಗಿ ಎ.ಎಸ್. ಮೂರ್ತಿಯವರಿದ್ದಾರೆ. ಬಿಂಬದ ನಿರ್ದೇಶಕರಾಗಿ ಕಲಾವಿದ ಎ.ಎಂ. ಪ್ರಕಾಶ್ ಅವರಿದ್ದಾರೆ.

• ಬಿಂಬದ ಹಿರಿಯ ವಿದ್ಯಾರ್ಥಿಗಳು 'ಸಂಭ್ರಮ' ಎನ್ನುವ ತಂಡವನ್ನು ರೂಪಿಸಿಕೊಂಡು ರಂಗಭೂಮಿಯಲ್ಲಿ ಹೆಚ್ಚು ಚಟುವಟಿಕೆಯಿಂದಿರಲು ರಂಗಪ್ರದರ್ಶನಗಳನ್ನು ನೀಡಲು ಮುಂದಾಗಿರುವುದು ಹನುಮಂತನಗರಬಿಂಬಕ್ಕೆ ಹೆಮ್ಮೆ ತರುವ ವಿಷಯವಾಗಿದೆ.

• ಹನುಮಂತನಗರಬಿಂಬ ಈವರೆಗೂ ಆಡಿದ ನಾಟಕಗಳ ಪಟ್ಟಿ:

ಕಾಸೀಕಿಟ್ಟಿ, ಭೂಮಿಕಾ, ಅಕಾರ, ಬೆಳಕು, ತಥಾಸ್ತು, ಪುಟ್ಟಿ ಕತೆಯೊಳಗಿನ ಕತೆ, ಪ್ರಶ್ನೆ, ನೆರಳುಗೊಂಬೆ, ಜಾಸೂಸ್, ಕನಸಿನಾಟ, ಬಂದಾ ಕೋಡಂಗಿ, ಅಜ್ಜ ಹೀಗೊಂದ್ಕತೆ.

***

# ಪ್ರಸ್ತುತ ಮಕ್ಕಳ ರಂಗಭೂಮಿಯ ಅವಶ್ಯಕತೆ

– ಸಿ.ಟಿ. ಬ್ರಹ್ಮಾಚಾರ್

ಬೆಳೆಯ ಸಿರಿ ಮೊಳಕೆಯಲ್ಲಿ, ಇಂದಿನ ಪುಟಾಣಿಗಳು ನಾಳಿನ ಪ್ರಜೆಗಳು – ಒಂದು ಪ್ರಚಲಿತ ಮಾತುಗಳನ್ನು ನೋಡಿದಾಗ – ಮಕ್ಕಳಲ್ಲಿ ಸೃಜನಶೀಲತೆ, ಪ್ರತಿಭೆ, ಕಲ್ಪನೆಗಳಿಗೆ ಕೊರತೆಯಿಲ್ಲ. ಈ ಎಲ್ಲಾ ಕಲ್ಪನೆ, ಅನುಭವಗಳಿಗೆ ಒಂದು ಮೂರ್ತರೂಪವನ್ನು ನೀಡಬೇಕಾದರೆ, ನಾವುಗಳು ಮಕ್ಕಳ ರಂಗಭೂಮಿಯ ಬೆಳವಣಿಗೆಯತ್ತ ದೃಷ್ಟಿಹರಿಸಬೇಕಾಗಿದೆ.

ರಂಗ ನಿರ್ದೇಶನದಲ್ಲಿ ಸಮರ್ಥರ ಕೊರತೆ, ಪ್ರಾಥಮಿಕ ಹಂತದಲ್ಲಿ ಕೊರತೆಯಿಂದಾಗಿ 8–10 ವರ್ಷಗಳಿಂದ ಸೊರಗುತ್ತಿದ್ದ ಮಕ್ಕಳ ರಂಗಭೂಮಿಗೆ ಸಮರ್ಥ ನಿರ್ದೇಶಕರಿಂದ ರಂಗದ ಸರ್ವಾಂಗೀಣ ಪ್ರಗತಿ ಸಾಧ್ಯ ಎಂದು ಹಿಂದೂ ರೂಪಿಸಿಕೊಟ್ಟಿದೆ. ಎಂದರೆ ತಪ್ಪಾಗಲಾರದು.

ಶಾಲೆ ರಜೆ ದಿನಗಳಲ್ಲಿ ಶಿಬಿರಗಳು ಪ್ರಾರಂಭವಾಗುವುದು, ರಂಗ ನಿರ್ದೇಶಕರು ಅಥವಾ ರಂಗ ಕರ್ಮಿಗಳು ಮಾಡಿಸುವ ನಾಟಕಗಳು ಸಾಂಸ್ಕೃತಿಕ ಕ್ರಿಯಾಶೀಲತೆಯಿಂದ ತೊಡಗಿಸಿಕೊಂಡು ಮಕ್ಕಳ ಸಂವೇದನೆಗಳಲ್ಲಿ ಜಾಗೃತಗೊಳಿಸುವುದರ ಜೊತೆಗೆ ಪೌರಾಣಿಕ, ರಾಮಾಯಣ, ಮಹಾಭಾರತ, ಪ್ರಾಣಿ ಪಕ್ಷಿಗಳು, ಪರಿಸರದಲ್ಲಿ ಸಿಗುವಂತಹ ರಂಗ ಪೌಷ್ಟಿಕ ಅಂಶಗಳು, ವಿಚಾರಗಳ ಬಗ್ಗೆ ನಾಟಕ ಪ್ರಯೋಗಗಳೂ ಮನರಂಜನೆಯಾಗಿ ಮಕ್ಕಳ ಮನಸ್ಸಿನ ಉದ್ದೇಶಗಳು ಬೆಳೆಯುತ್ತವೆ. ಆಗ ಮಕ್ಕಳ ರಂಗ ಭೂಮಿಗೊಂದು ಹೊಸ ಚೇತನ, ಶಕ್ತಿ ಸಿಗುವುದರಿಂದ ಮಕ್ಕಳ ಮುಗ್ಧ ಮನಸ್ಸಿನ ಬೆಳವಣಿಗೆಗೆ ಸಾಧ್ಯವಾಗುತ್ತದೆ. ಬೇಸಿಗೆ ಶಿಬಿರಗಳು ಅರ್ಥಪೂರ್ಣವಾಗುವವು.

ಮಕ್ಕಳ ಆಟ–ಪಾಠ ನೋಟಗಳನ್ನು ನೋಡಿದಾಗ ಮಕ್ಕಳ ಅನುಕರಣೆಯು. ಸಹಜವಾಗಿ ಮಾಡುವ ಅಭಿನಯ, ದೃಶ್ಯಗಳು ನಮಗೆ ಒಂದು ಪುಟ್ಟ ರಂಗಭೂಮಿಕ ಅನುಭವವನ್ನು ತಂದುಕೊಡುತ್ತದೆ. ಮಕ್ಕಳು ತಾವು ನೋಡಿದುದನ್ನು ಸಹಜವಾಗಿ ಮಾಡಿತೋರಿಸುವ ಶಕ್ತಿ ಸಾಮರ್ಥ್ಯವುಳ್ಳವರಾಗಿರುವುದರಿಂದ ಅವರಿಗೆ ಅಭಿನಯ

ಕಲೆ ಬಹಳ ಸುಲಭ. ಅಂತೆಯೇ ಅವರ ಆಟದಲ್ಲಿ– ನೋಟದಲ್ಲಿ ಎಷ್ಟೆಷ್ಟು ಸಾರಿ ಹಿರಿಯರನ್ನು ಅನುಕರಿಸಿ ಎಲ್ಲರಿಗೂ ಸಂತೋಷವನ್ನುಂಟುಮಾಡುತ್ತಾರೆ, ನಗೆ ತರಿಸುತ್ತಾರೆ.

ಕರ್ನಾಟಕದಲ್ಲಿ ಈ ದಶಕದಲ್ಲಿ ಸಾಕಷ್ಟು ಮಕ್ಕಳ ರಂಗಭೂಮಿ ರಂಗ ಕರ್ಮಿಗಳಿಂದ ವಿಸ್ತರಿಸಿಕೊಂಡಿದೆ. ಮಕ್ಕಳ ರಂಗಭೂಮಿಯಲ್ಲಿ ಒಟ್ಟಿಗೆ ಸೇರಿ ಕಲೆತು, ಸಾಂಸ್ಕೃತಿಕ ಕ್ರಿಯಾಶೀಲತೆಯಿಂದ ತೊಡಗಿಕೊಂಡು ಮಕ್ಕಳ ಸಂವೇದನೆಗಳನ್ನು ಜಾಗೃತಗೊಳಿಸಿ ಕೊಳ್ಳುವುದು. ಮಕ್ಕಳಿಗೆ ಶಿಕ್ಷಣದಲ್ಲಿ ರಂಗಭೂಮಿ, ಪ್ರಧಾನ ಪಾತ್ರ ಬಹಳ ಮುಖ್ಯವಾದಾಗ – ಮಕ್ಕಳ ಮನಸ್ಸಿನ ಉದ್ದೇಶಗಳು ಚಿಗುರುತ್ತವೆ. ಮನರಂಜನೆ ನೀಡುತ್ತದೆ.

ನಾಡಿನಲ್ಲಿ ಮಕ್ಕಳ ರಂಗಭೂಮಿಯ ಚಟುವಟಿಕೆಗಳು ಅಲ್ಲಲ್ಲಿ, ಆಗಾಗ್ಗೆ, ವರ್ಷಕ್ಕೆ ಒಮ್ಮೆ ನಡೆಯುತ್ತಿರುವುದು ನಿಜ, ಆದರೆ ನಿರಂತರತೆ ಇಲ್ಲ. ಮಕ್ಕಳ ರಂಗಭೂಮಿಯ ವಿಷಯದಲ್ಲಿ ಸರ್ಕಾರಕ್ಕೆ ನಿರ್ಧಿಷ್ಟವಾದ ಧೋರಣೆ, ಯೋಜನೆಗಳು ಇಲ್ಲ. ಮಕ್ಕಳ ರಂಗಭೂಮಿಗೆ ಸಿಗಬೇಕಾದ ಮಾನ್ಯತೆ ಸರ್ಕಾರದಿಂದ ಸಿಗುತ್ತಿಲ್ಲ.

ಶಾಲೆಗಳಲ್ಲಿ ಮಕ್ಕಳ ಶಿಕ್ಷಣ ಸರಿಯಾಗಿ ಬೇಕು, ಮಕ್ಕಳ ಕನಸಿನ ಲೋಕವನ್ನು ಹೊಸ ಅನುಭವವನ್ನು ಕಾಣಬೇಕಾದರೆ, ನಾವುಗಳು ಲಕ್ಷ್ಯವಹಿಸಿದಾಗ ಮಾತ್ರಾ ಮಕ್ಕಳ ಲೋಕವನ್ನು ಸೃಷ್ಟಿಸಬಹುದು.

"ಕಾವ್ಯೇಷು ನಾಟಕಂ ರಮ್ಯಂ", ಕಾವ್ಯ ಪ್ರಾಕಾರಗಳಲ್ಲಿ ನಾಟಕವೇ ಅತ್ಯಂತ ರಮ್ಯವಾದುದು, ನಾಟಕ, ಸಂಗೀತ, ನೃತ್ಯ, ಸಾಹಿತ್ಯ ಚಿತ್ರಕಲೆ, ಮುಂತಾದವುಗಳ ಸಮನ್ವಯತೆಯಿಂದ ಮೂಡಿಬಂದ ಒಂದು ಸಂಕೀರ್ಣ ಕಲೆ. ಮಕ್ಕಳ ಮೇಲೆ ಬಹಳವಾಗಿ ಪರಿಣಾಮ ಬೀರಬಲ್ಲಂಥದ್ದೂ, ಮಾಧ್ಯಮಗಳು. ಇಂಥಹ ಮಾಧ್ಯಮಗಳು ಶಾಲೆಯಲ್ಲಿ ಮಕ್ಕಳ ಪಠ್ಯ ಪುಸ್ತಕಗಳ ಜೊತೆಗೆ ಪ್ರಯೋಗಗಳ ಮೂಲಕ ಮಕ್ಕಳ ಮನಸ್ಸನ್ನು ಮುಟಗೊಳಿಸುವುದರ ಜೊತೆಗೆ ಮಕ್ಕಳಿಗೆ ವ್ಯಾಕರಣ, ವಿಜ್ಞಾನ, ಇತಿಹಾಸದ ಘಟನೆಗಳು, ಗಣಿತ, ಭೂಗೋಲದ ವಿಷಯಗಳು, ನೀತಿಬೋಧಕ ಸಿದ್ಧಾಂತಗಳು, ಜಾನಪದ ಕಲ್ಪನೆಗಳನ್ನು ಮನಮುಟ್ಟುವಂತೆ ಮಾಡಬಹುದು. ಮಕ್ಕಳೇ ಆಡಬಹುದಾದ ಆಟಗಳನ್ನೆ ಪ್ರಯೋಗಗಳಾಗಿ ಪರಿವರ್ತಿಸುವ ಮೂಲಕ ಮಕ್ಕಳ ರಂಗಭೂಮಿಯಾಗಿ ನಿಲ್ಲುವುದಕ್ಕೆ ಸಾಧ್ಯ.

ಶಾಲಾ ಪ್ರತಿಭಾಕಾರಂಜಿ ಕಾರ್ಯಕ್ರಮಗಳಲ್ಲಿ ಮಕ್ಕಳಿಗೆ ಸಂತೋಷ ಹಾಗೂ ಆರೋಗ್ಯಕರವಾದ ಆಲೋಚನೆಗಳನ್ನು ಉದ್ದೀಪಿಸುವುದು ಶಿಕ್ಷಣದ ಕಲಿಕೆಯ ಪ್ರಕ್ರಿಯೆಗಳಲ್ಲಿ ರಂಗಭೂಮಿಯ ಪಾತ್ರ ಬಹಳ ದೊಡ್ಡದು. ಈ ದಿಶೆಯಲ್ಲಿ ಮಕ್ಕಲ ರಂಗಭೂಮಿಯಲ್ಲಿ ಕೆಲಸಮಾಡುವಾಗ ಶಿಭಿರಗಳ ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ಪಡೆದು, ಪ್ರೀತಿ ಪ್ರೇಮಗಳ ಸಂಗಮಗಳ ಮೂಲಕ ಅವರಲ್ಲಿರುವ ಪ್ರತಿಭೆಗಳನ್ನು ನಾವು ಕಂಡು

ಅವುಗಳ ಮೂಲಕ ಆಟ–ಪಾಠ – ನೋಟ, ಕೈಕೆಲಸಗಳು ಅಂದರೆ. ಮುಖವಾಡಗಳ ತಯಾರಿ, ಪ್ರಸಾಧನ ಕಲೆಯ ಬಗ್ಗೆ, ವೇಷಭೂಷಣಗಳ ಬಗ್ಗೆ, ಫ್ಯಾಂಟಸಿಯ ಮೂಲಕ ಹಾಡು ಕುಣಿತಗಳ ಮೂಲಕ ಮನಸೆಳೆದು ಅವರ ಕ್ರಿಯಾಶೀಲತೆಗಳನ್ನು ನೋಡಿಕೊಂಡು ರಂಗಪ್ರಯೋಗಗಳ ಮೂಲಕ ಅವರನ್ನು ಎಲ್ಲರೂ ಗುರುತಿಸುವ ಹಾಗೆ ಮಾಡುವುದು ಮಕ್ಕಳ ರಂಗಭೂಮಿ. ಇದು ನನ್ನ ಮಕ್ಕಳ ರಂಗಭೂಮಿ ಶಿಬಿರಗಳಲ್ಲಾದ ಅನುಭವಗಳು.

ಪಟ್ಟಣಗಳಲ್ಲದೇ ಮಕ್ಕಳ ರಂಗಭೂಮಿ ಗ್ರಾಮೀಣ ಪ್ರದೇಶಗಳಲ್ಲಿ ಸಿಗುವಂತಾಗಬೇಕು. ಅಲ್ಲಿಯ ಮಣ್ಣಿನ ವಾಸನೆ, ಮತ್ತು ಪರಿಸರದ ಜಾಡಿನಲ್ಲಿ ಅಲ್ಲಿನ ರಂಗಭೂಮಿಯು ಬೆಳೆದು ಬರಬೇಕಾಗಿದೆ.ಹಾಗೆ ಕರ್ನಾಟಕದ ಎಲ್ಲಾ ರಂಗ ಕರ್ಮಿಗಳೂ ಸಹ ಮಕ್ಕಳ ರಂಗಭೂಮಿಯಡೆಗೆ ಹೆಚ್ಚು ಹೆಚ್ಚು ಕಾರ್ಯಪ್ರವೃತ್ತರಾದಲ್ಲಿ ಆಲದ ಮರದಂತೆ ವಿಶಾಲವಾಗಿ ವ್ಯಾಪಿಸಿಕೊಳ್ಳುವುದು. ಈ ಎಲ್ಲಾ ದೆಸೆಯಿಂದ ಶಾಲಾ ಶಿಕ್ಷಕರ ಮೂಲಕ ಮಕ್ಕಳ ರಂಗ ತರಬೇತಿಗಳು ನಡೆಯುವುದರಿಂದ ಶಾಲಾ ಮಕ್ಕಳಿಗೆ ಹೆಚ್ಚಿನ ರಂಗಭೂಮಿ ಅನುಭವ ದೊರೆಯುತ್ತದೆ.

ಒಟ್ಟು ಮಕ್ಕಳ ರಂಗಭೂಮಿಗೆ ಒಂದು ಸ್ಪಷ್ಟ ಸ್ವರೂಪವನ್ನು ನಾಟಕ ಅಕಾಡೆಮಿ ಮಾಡಬೇಕಾಗಿದೆ. ಮಕ್ಕಳಿಗಾಗಿಯೆ ಒಂದು ಪ್ರತ್ಯೇಕ ರಂಗಭೂಮಿ ಅವಶ್ಯಕತೆ ಇದ್ದೇ ಇದೆ.

***

# ಮಕ್ಕಳ ರಂಗಭೂಮಿಯಲ್ಲಿ ನಿರ್ದೇಶಕರು ಎದುರಿಸುವ ಸವಾಲುಗಳು

ಎಸ್.ಕೆ. ಮಾಧವರಾವ್.

ಮಕ್ಕಳ ರಂಗಭೂಮಿಯಲ್ಲಿ ಮಕ್ಕಳಿಂದ ಮಕ್ಕಳಿಗೋಸ್ಕರ ಆಡುವ ನಾಟಕಗಳು. ಮಕ್ಕಳಿಗಾಗಿ ಹಿರಿಯರ ತಂಡದಿಂದ ಪ್ರದರ್ಶಿಸಲ್ಪಡುವ ನಾಟಕಗಳು ಇರುತ್ತವೆ.

ಮಕ್ಕಳ ನಾಟಕಗಳಲ್ಲಿ ಮನೋರಂಜನೆಗೆ ಅವಕಾಶವಿರಬೇಕು. ಸಂಗೀತ ನೃತ್ಯಗಳಿಗೂ ಅವಕಾಶವಿರಬೇಕು.

ರಂಗಸಜ್ಜಿಕೆಯಲ್ಲಿ ಉಪಯೋಗಿಸುವ ರಂಗ ಪರಿಕರಗಳ ಪರಿಚಯವಿರಬೇಕು.

ನಾಟಕಕ್ಕೆ ಬೇಕಾದ ವೇಷಭೂಷಣಗಳು ಕಾಲಕ್ಕೆ ತಕ್ಕ ಹಾಗೆ ಇರಬೇಕು.

ನಾಟಕದಲ್ಲಿ ಬಳಸುವ ಭಾಷೆ ಪಾತ್ರಗಳು ಸ್ಥಾನಮಾನಕ್ಕೆ ತಕ್ಕಂತೆ ಇರಬೇಕು.

ನಾಟಕಗಳಲ್ಲಿ ಶರೀರ ಭಂಗಿಗಳನ್ನು ಉಪಯೋಗಿಸಿಕೊಂಡು ಮೂಕಾಭಿನಯ ಬಳಸಿಕೊಳ್ಳಬೇಕು.

ಪ್ರದರ್ಶನದಲ್ಲಿ ಮೇಳವನ್ನೇ ಸೂತ್ರಧಾರ, ಮರ, ಬೆಟ್ಟ, ಗುಡ್ಡ, ಕೊಳವನ್ನು ನಿರ್ಮಿಸಲು ಉಪಯೋಗಿಸಬೇಕು.

ಆರಿಸಿದ ನಾಟಕದಲ್ಲಿ ಒಂದು ನೀತಿ, ಸಂದೇಶ, ವಿಷಯ ಪ್ರತಿಪಾದನೆ, ವೈಚಾರಿಕತೆ ಸೃಜನಶೀಲತೆ ಇರಬೇಕು. ಈ ಅಂಶಗಳನ್ನು ತಿಳಿದಿರುವ ನಿರ್ದೇಶಕ ಒಂದು ತಂಡಕ್ಕೆ ನಾಟಕವನ್ನು ತೆಗೆದುಕೊಂಡಾಗ ಅವನಿಗೆ ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ.

ನಾಟಕ ನಿರ್ದೇಶನ ಮಾಡುವುದಕ್ಕಿಂತ ಮುಂಚೆ ತನ್ನಲ್ಲಿರುವ ಪ್ರತಿಭೆಯ ಬಗ್ಗೆ ಆತ್ಮವಿಶ್ವಾಸವಿರಬೇಕು. ನನಗೂ ಮಕ್ಕಳ ರಂಗಭೂಮಿಗೂ ಸುಮಾರು ಮೂರು ದಶಕಗಳ ಸಂಬಂಧ ಇದೆ. ಅದರ ಅನುಭವದಿಂದ ನನಗೆ ಭಾಸವಾದ ಕೆಲವು ಸವಾಲುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ನನ್ನ ಅನಿಸಿಕೆ ಪಂಡಿತರಿಗೆ ಪಾಮರರಿಗೆ ಬೇರೆ ಬೇರೆ ಅರ್ಥವನ್ನು ಕೊಡಬಹುದು. ನನ್ನ ದೃಷ್ಟಿಕೋನ ತಪ್ಪಿದ್ದಲ್ಲಿ ತಿದ್ದುಕೊಳ್ಳಬಹುದು. ನಿಮ್ಮ ಅಭಿಪ್ರಾಯ ನನ್ನ ಅಜ್ಞಾನವನ್ನು ಹೋಗಲಾಡಿಸಿ ನನ್ನಲ್ಲಿ ಜ್ಞಾನವೃದ್ಧಿಯಾಗಬಹುದು, ಯಾವುದೂ ನನಗೆ ಲಾಭದಾಯಕ ಫಲವನ್ನೇ ನೀಡುವುದು

ಎಂಬ ಭರವಸೆ ನನಗಿದೆ. ಮಕ್ಕಳ ತಂಡ ಯಾವುದೇ ಇರಲಿ ಅವರನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಸಾಮರ್ಥ್ಯ ಇರಬೇಕು. ಮಕ್ಕಳು ಹತೋಟಿ ಮೀರಿ ಹೋಗದಿರುವಷ್ಟು ಅವರಿಗೆ ಸ್ವಾತಂತ್ರ ನೀಡಬೇಕು. ನಿರ್ದೇಶಕ ಮಕ್ಕಳಿಗೆ ಮಾರ್ಗದರ್ಶಿಯಾಗಿ ಇರಬೇಕೇ ಹೊರತು ಶಿಸ್ತು ಸಂಯಮ ಹೇರುವ ಉಪಾಧ್ಯಾಯ ಆಗಬಾರದು. ಇಲ್ಲಿ ಮಕ್ಕಳ ಜೊತೆಗೇ ತಾನೂ ಒಂದು ಮಗುವಾಗಿ ಅವರ ಮಟ್ಟಕ್ಕೆ ಇಳಿದು ಅವರ ಅಂತಃಶಕ್ತಿಯನ್ನು ಕಂಡುಹಿಡಿದುಕೊಳ್ಳಬೇಕು.

ಇದನ್ನು ತಿಳಿದ ನಿರ್ದೇಶಕನಿಗೂ ಕೂಡ ಒಂದೊಂದು ನಾಟಕ ತಾಲೀಮು ಕೊಡುವಾಗಲೂ ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಸಹನೆ ತಾಳ್ಮೆ ಶ್ರದ್ಧೆ ಇದ್ದರೂ ಕಾರ್ಯಾಗಾರ ಆರಂಭವಾದ ಮೇಲೆ ಒಂದೊಂದಾಗಿ ಸಮಸ್ಯೆಗಳು ಸಾಲುಗಟ್ಟಿ ನಿಲ್ಲುತ್ತವೆ. ಅದನ್ನೆಲ್ಲಾ ನಿವಾರಿಸಿಕೊಂಡು ನಾಟಕವನ್ನು ರಂಗದ ಮೇಲೆ ಯಶಸ್ವಿಯಾಗಿ ಪ್ರದರ್ಶಿಸಿ ಪ್ರೇಕ್ಷಕ ವರ್ಗದಿಂದ, ರಂಗಾಸಕ್ತರ ಅಭಿಪ್ರಾಯದಿಂದ ವಿಮರ್ಶಕರ ಪ್ರಶಂಸೆಯಿಂದ, ಮಾಧ್ಯಮದ ಪ್ರಚಾರದಿಂದ ಪ್ರಶಂಸೆಯನ್ನು ಪಡೆದರೆ ನಿರ್ದೇಶಕ ಮಗಳ ಮದುವೆ ಮಾಡಿ ಮುಗಿಸಿದ ತಂದೆಯಂತೆ ನಿರಾತಂಕದ ಉಸಿರನ್ನು ಬಿಡಬಹುದು. ಆಗ ಪಟ್ಟ ಪರಿಶ್ರಮದ ಫಲ ಸಿಗುವಂತೆ ಆಗುತ್ತದೆ. ನೋವು ಚಿಂತೆಗಳು ಮರೆಯಾಗಿ ಮತ್ತೊಂದು ನಾಟಕದ ಕಡೆ ಮುಖ ಮಾಡುವ ಧೈರ್ಯ ಬರುತ್ತದೆ. ಒಂದು ವೇಳೆ ಪ್ರೇಕ್ಷಕರ ಮನ ಮುಟ್ಟದೆ ಹೋದರೆ ನಿರರ್ಥಕ ನಿರ್ದೇಶಕ ಎನ್ನಿಸಿಕೊಳ್ಳುವಂತೆ ಆಗುತ್ತದೆ.

ನಾಟಕದ ತಯಾರಿಯಲ್ಲಿ ಮೊದಲ ಸಮಸ್ಯೆ ಎಂದರೆ ಸಂಘಟನೆ, ಪಾತ್ರಧಾರಿಗಳನ್ನ ಕೂಡಿಹಾಕಿ ಒಂದೆಡೆ ಗಟ್ಟಿಯಾಗಿ ನಿಲ್ಲಿಸಬಹುದು. ತಂಡ ಯಾವುದೇ ಇರಲಿ ಪ್ರದರ್ಶನ ನೀಡುವ ನಾಟಕ ಗುಂಪು ಉತ್ಸಾಹದಿಂದ ಕಲಿಯುವ ಆಸಕ್ತಿಯಿಂದ ಹೆಸರನ್ನು ಪಡೆಯುವ ಆಸೆಯಿಂದ ತಾಲೀಮು ತೆಗೆದುಕೊಂಡರೆ ನಿರ್ದೇಶಕನ ಕೆಲಸ ಸುಲಭವಾಗುತ್ತದೆ. ಆದರೆ ಹಾಗಾಗುವುದು ಅತಿ ವಿರಳ. ತಂಡದಲ್ಲಿ ಇರುವ ಪ್ರತಿಯೊಂದು ಮಗುವಿನ ಪ್ರತಿಭೆಯ ಮಟ್ಟ ಬೇರೆ ಬೇರೆ ಇರುತ್ತದೆ. ಮುಖಲಕ್ಷಣ ಚೆನ್ನಾಗಿದ್ದರೆ ಪ್ರತಿಭೆ ಇರುವುದಿಲ್ಲ. ದೇಹದಾರ್ಢ್ಯ ಇದ್ದವರಿಗೆ ಕಂಠ ಇರುವುದಿಲ್ಲ. ಎರಡೂ ಚೆನ್ನಾಗಿ ಇದ್ದರೆ ಅಹಂ ಇರುತ್ತದೆ. ನಟನೆ ಇರುವುದಿಲ್ಲ. ಪಾತ್ರಕ್ಕೆ ಸೂಕ್ತವಾದ ನಟ ಸಿಗುವುದಿಲ್ಲ. ನಾಟಕದಲ್ಲಿ ಬರುವ ಪಾತ್ರಗಳಿಗೆ ಬೇಕಾಗುವ ಆಕಾರ ಎತ್ತರ ನಿಲುವು, ಮುಖಭಾವ ಸಿಗುವ ಇಲ್ಲದೆ ಚಡಪಡಿಸಬೇಕಾಗಬಹುದು. ಗಂಡ ಹೆಂಡತಿಯ ಈಡುಜೋಡು, ಹಾಸ್ಯಗಾರನ ನಗುಮುಖ, ಸಾಹುಕಾರನ ದರ್ಪ ನಾಯಕನ ಸರ್ವಗುಣ, ಖಳನಾಯಕನ ಶರೀರ ಸಿಗದೆ ನಿರ್ದೇಶಕ ತಲೆಯ ಮೇಲೆ ಕೈಕಟ್ಟಿ ಕೂಡಬಹುದು. ನಿಯಮಿತ ಅವಧಿಯಲ್ಲಿ ನಾಟಕದ ತಯಾರಿ ಮುಗಿಸಬೇಕಾದುದರಿಂದ ಕುರುಡರಲ್ಲಿ ಮೆಳ್ಳಗಣ್ಣ ಶ್ರೇಷ್ಠ ಎಂಬ ತತ್ವವನ್ನು ಅನುಸರಿಸಿ ನಿರ್ದೇಶಕ ತಂಡದ ಜೊತೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ನಿರ್ದೇಶಕರ ಮೆಚ್ಚಿಗೆ ಗಳಿಸಿದ ಉತ್ತಮ ನಟರುಗಳು

ಪ್ರದರ್ಶನ ಹತ್ತಿರ ಬರುತ್ತಿದ್ದ ಹಾಗೆ ತಂದೆ ತಾಯಿಗಳ ಒತ್ತಡಕ್ಕೆ ಮಣಿದು ತನ್ನ ಪಾತ್ರವನ್ನು ಬಿಟ್ಟು ಸ್ವಕಾರ್ಯಕ್ಕೆ ಪ್ರಯಾಣ ಬೆಳೆಸಿದಾಗ ನಿರ್ದೇಶಕನಿಗೆ ಆಗುವ ಕಷ್ಟ ಸಂಕಟ ಅಷ್ಟಿಷ್ಟಲ್ಲ. ಅಂತಹ ಇನ್ನೊಬ್ಬ ನಟನನ್ನು ಹುಡುಕಿ ಅಲ್ಪಕಾಲದಲ್ಲಿ ಅವನಿಗೆ ತಾಲೀಮು ಕೊಡುವ ಸಂದರ್ಭ ಬರಬಹುದು.

ಇದರ ಮೇಲೆ ತಂದೆ ತಾಯಿಯರ ಪೋಷಕರ ಹಠವನ್ನು ಎದುರಿಸಬೇಕಾಗಬಹುದು. ಅವರ ಇಚ್ಛೆಗೆ ಮಣಿದು ನಟನಾ ಶಕ್ತಿ ಇಲ್ಲದವನಿಗೆ ಮುಖ್ಯ ಪಾತ್ರವನ್ನು ಕೊಟ್ಟು ನಾಟಕದ ಸೋಲನ್ನು ಅಪ್ಪಿಕೊಳ್ಳಬೇಕಾಗಬಹುದು. ನಾಟಕ ಮಾಡುವಾಗ ಪಾತ್ರ ವಿತರಣೆಯ ಕೆಲಸ ಬಹಳ ಕ್ಲಿಷ್ಟಕರವಾದದ್ದು. ನಟರ ಆಯ್ಕೆಯ ದಿವಸ ನಿರ್ದೇಶಕನ ಮುಂದೆ ಎಲ್ಲರೂ ಹಾಜರಾಗದ ಕಾರಣ ಉತ್ತಮ ಪಾತ್ರಗಳು ಬೇರೆಯವರ ಪಾಲು ಆದಾಗ ನಂತರ ಬಂದ ನಟರಿಗೆ ಸೂಕ್ತವಾದ ಪಾತ್ರ ಸಿಗದೆ ಅಸಮಾಧಾನ ಅಸೂಯೆ ಅತೃಪ್ತಿಯನ್ನು ನಿರ್ದೇಶಕ ಎದುರಿಸಬೇಕಾಗುವುದು. ಎಲ್ಲ ನಟರನ್ನ ಆಯಾ ಪಾತ್ರಗಳಿಗೆ ಹಂಚಬಹುದು. ಇಲ್ಲದಿದ್ದಲ್ಲಿ ಅಸಮರ್ಥ ನಟರಿಗೆ ಮುಖ್ಯ ಪಾತ್ರಗಳೂ ಸಿಕ್ಕಿ ನಾಟಕ ಸಿಕ್ಕುಸಿಕ್ಕಾಗಬಹುದು.

ಇಂತಹ ಪ್ರಸಂಗ ಬಂದಾಗ ನಿರ್ದೇಶಕ ಎಷ್ಟು ಜಾಣ್ಮೆಯಿಂದ ವ್ಯವಹರಿಸುತ್ತಾನೋ ಅಷ್ಟೂ ಉತ್ತಮ ನಿರ್ದೇಶಕನಾಗುತ್ತಾನೆ. ನಾಟಕದ ಆಯ್ಕೆಯ ಸಮಯದಲ್ಲಿ ನಿರ್ದೇಶಕ ಬಹಳ ಜಾಗರೂಕನಾಗಿರಬೇಕು. ಆ ನಾಟಕದಲ್ಲಿ ಬರುವ ತನ್ನ ತಂಡದಲ್ಲಿರುವ ನಟರುಗಳಿಗೆ ಸೂಕ್ತವಾದ ಅವಕಾಶ ಇದೆಯೋ ನೋಡಬೇಕು. ಅದರಲ್ಲಿ ಬರುವ ಮುಖ್ಯಪಾತ್ರಗಳನ್ನು ನಿರ್ವಹಿಸಲು ತಕ್ಕ ನಟರುಗಳು ಇದ್ದಾರ ನೋಡಬೇಕು. ನಾಟಕದ ನೀತಿಯನ್ನು ಸಂದೇಶವನ್ನು ಜನಗಳಿಗೆ ಮುಟ್ಟಿಸಲು ಆಗುತ್ತದೆಯೋ ಇಲ್ಲವೋ ನೋಡಬೇಕು. ಸಂಗೀತ ನೃತ್ಯಗಳೂ ಇದ್ದಲ್ಲಿ ಸುಶ್ರಾವ್ಯವಾಗಿ ಹಾಡುವ ಹಿಮ್ಮೇಳ ಆ ತಂಡದಲ್ಲಿ ಸಿಗುತ್ತದೆಯೋ ನೋಡಬೇಕು. ಆ ಸಂಗೀತದ ಅಲೆಗೆ ಹೊಂದಿಕೊಳ್ಳುವ ನೃತ್ಯ ಸಂಯೋಜನೆಗೆ ತಂಡದಲ್ಲಿ ಅವಕಾಶ ಇದೆಯೇ ನೋಡಬೇಕು.

ನಾಟಕದಲ್ಲಿ ಸಂಗೀತ ಕಂಡಾಗ ಅದನ್ನು ಬಳಸುವ ರೀತಿಯನ್ನು ಮನದಟ್ಟುಮಾಡಿಕೊಳ್ಳಬೇಕು. ಸಂಗೀತವನ್ನು ಹಿನ್ನಲೆಯಿಂದ ಒದಗಿಸಬೇಕೋ ಮೇಳವನ್ನು ರಂಗಭೂಮಿಯ ಮೇಲೆ ಬಳಸುವುದೋ ಎಂದು ರಂಗದ ಮೇಲೆ ಗೀತೆಗಳನ್ನು ಹೇಳಿಕೊಂಡು ನಟನೆ ಮಾಡುವುದಾದರೆ ಮಕ್ಕಳಿಗೆ ಹೇಳಲು ಅನುಕೂಲವಾಗುವಂತಹ ಲಯಬದ್ಧವಾದ ಸರಳ ಸಾಹಿತ್ಯವನ್ನು ಉಪಯೋಗಿಸಬೇಕು. ತಂಡದಲ್ಲಿರುವ ಮಕ್ಕಳಿಗೆ ತಾಲೀಮು ಕೊಡುವಾಗ ಸ್ವರ ಶೃತಿ ತಾಳದ ಪರಿಚಯಮಾಡಿಕೊಡಬೇಕು. ಗೀತೆಗಳನು ಹೇಳುವ ಮೇಳಕ್ಕೆ ಅಗಾಧವಾದ ಸ್ಮರಣಶಕ್ತಿ ಇರಬೇಕು. ಹಾಡಬೇಕಾದ ಮೇಳದಲ್ಲಿ ಸಾಮರ್ಥ್ಯ ಇರದೇ ಹೋದಾಗ ವೃತ್ತಿಗಾಯಕರ ತಂಡವನ್ನು ಬಳಸಬೇಕಾಗುವುದು.

**ಮಕ್ಕಳ ತಂಡ ಸಿಗುವುದೇ ಕಷ್ಟ :** ಆ ಮಕ್ಕಳು ತಂದೆ ತಾಯಿಗಳ ನಿಯಂತ್ರಣದಲ್ಲಿ ಇರುತ್ತಾರೆ. ನಿರ್ದೇಶಕನ ಬೇಕು ಬೇಡಗಳನ್ನು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿ ಇರುವುದಿಲ್ಲ. ಅವರಿಗೆ ಮಕ್ಕಳಿಗೆ ಹೇಗೋ ಏನೋ ಪ್ರಚಾರ ಸಿಕ್ಕರೆ ಸಾಕು ಎನ್ನುವ ಭಾವವಿರುತ್ತದೆ. ಹಾಗಾಗಿ ಮಕ್ಕಳನ್ನು ತಾಲೀಮಿಗೆ ತೊಡಗಿಸುವ ಬಗ್ಗೆ ಕಾಳಜಿ ವಹಿಸುವುದಿಲ್ಲ. ಇಲ್ಲೇ ಇರುವುದು ನಿರ್ದೇಶಕನ ಸವಾಲು.

**ಮಕ್ಕಳ ಹಾಜರಾತಿ :** ನಿರ್ದೇಶಕನು ನಿರ್ದಿಷ್ಟ ಅವಧಿಯಲ್ಲಿ ನಾಟಕ ತಯಾರಿಸಬೇಕಾಗಿ ಇರುವುದರಿಂದ ದೃಶ್ಯಗಳಿಗೆ ಅವಶ್ಯಕವಾದ ನಟರುಗಳು ಇರಲೇಬೇಕು. ಹಾಗೆ ಆಗುವುದಿಲ್ಲ. ಬೇರೆ ಬೇರೆ ಕಾರಣ ಅಂದರೆ ಹಬ್ಬದ ಸಡಗರ, ಖಾಯಿಲೆ, ಧಿಡೀರ್ ಪ್ರಯಾಣ, ತೀರ್ಥಯಾತ್ರೆ, ನೆಪಕೊಟ್ಟು ಅನಿರ್ದಿಷ್ಟ ಕಾಲ ಗೈರು ಆಗುತ್ತಾರೆ. ಎಷ್ಟೋ ವೇಳೆ ಪ್ರದರ್ಶನಕ್ಕೆ ಇನ್ನು ಕೆಲವೇ ದಿನ ಇದೆ ಎನ್ನುವಾಗ ಮುಖ್ಯಪಾತ್ರ ಮಾಡುತ್ತಿದ್ದ ನಟ ನಟಿಯರು ತಾಲೀಮನ್ನು ಬಿಟ್ಟು ಹೋಗುತ್ತಾರೆ. ಆಗ ನಿರ್ದೇಶಕನಿಗೆ ಪೀಕಲಾಟ. ಬೇರೆಯವರನ್ನ ಆ ಜಾಗಕ್ಕೆ ಹಾಕಿ ಮಾತುಗಳನ್ನ ಬಲಾತ್ಕಾರದಿಂದ ತೂರಿಸಿ ಹೇಗೋ ನಾಟಕ ಮುಗಿಸಿರಯ್ಯ ಎನ್ನುವ ಪರಿಸ್ಥಿತಿ ಬರುತ್ತದೆ.

ಇನ್ನು ನಾಟಕದ ಸಂಭಾಷಣೆ ಅಲ್ಲಿ ಭಾಷಾ ಸಮಸ್ಯೆ ಸಾಮಾನ್ಯ ಭಾಷೆ ತಿಳಿದಿದ್ದರೂ ಸರಾಗವಾಗಿ ಓದಲು ಆಗದ ಅಸಹಾಯಕತೆ ಮಾತುಗಳನ್ನು ಉರು ಹಚ್ಚಿ ಪಾಠ ಒಪ್ಪಿಸುವ ಯಾಂತ್ರಿಕ ಅಭ್ಯಾಸ ನಾಟಕದ ಸಂಭಾಷಣೆಗಳಿಗೆ ಬೇಕಾದ ಏರು – ಇಳಿತ ತಾಲೀಮು ಕೊಡುವುದೇ ಒಂದು ಸವಾಲು ಆಗುತ್ತದೆ. ಎಷ್ಟೋ ವೇಳೆ ಅದಕ್ಕೆ ಅವಕಾಶ ಸಿಗದೆ ಕೃತಿಯಲ್ಲಿರುವುದನ್ನು ಬಿಟ್ಟು ಮಕ್ಕಳಿಗೆ ಸರಾಗವಾಗಿ ಮಾಡಲು ಅನುಕೂಲ ಆಗುವಂತೆ ಪದೇ ಪದೇ ಹೇಳಿಕೊಟ್ಟು ಪುನಃ ಪುನಃ ಮಾಡಿಸುವ ವಿಧಾನ ಅಂದರೆ Tell and do system ಅನುಸರಿಸಬೇಕಾಗುತ್ತದೆ. ನಾಟಕದ ಸಂಭಾಷಣೆಗಳಲ್ಲಿ ನವರಸಗಳಿರುತ್ತವೆ. ಅದನ್ನ ಗ್ರಹಿಸಿ ಮಾತನಾಡಿದರೆ ಪಾತ್ರ ಸೃಷ್ಟಿಯಾಗುತ್ತದೆ. ರಂಗದ ಮೇಲೆ ಚೆನ್ನಾಗಿ ಮೂಡಿ ಬರುತ್ತದೆ. ಅದಕ್ಕೆ ಅವರ ನೆನಪಿನ ಶಕ್ತಿ ನಟನಾ ಸಾಮರ್ಥ್ಯ ಅವಲಂಬಿಸುತ್ತದೆ.

**ಪಾತ್ರಗಳನ್ನ ಆರಿಸುವಾಗ ಬರುವ ಸಮಸ್ಯೆ** ಎಂದರೆ ಆಕಾರ, ಅಂಗಸೌಷ್ಟವ ಶರೀರ ಶಾರೀರ. ಶಾರೀರ ಇದ್ದರೆ ಪಾತ್ರಕ್ಕೆ ಬೇಕಾದ ಎತ್ತರ ಇರುವುದಿಲ್ಲ. ಒಳ್ಳೆ ದೃಢಕಾಯನಾಗಿದ್ದರೂ ನಟನಾ ಸಾಮರ್ಥ್ಯ ಇರುವುದಿಲ್ಲ. ಸ್ತ್ರೀ ಪಾತ್ರಗಳಲ್ಲಿ ಮುಖಲಕ್ಷಣ ಉಳ್ಳವನಿಗೆ ನಟನಾ ಸಾಮರ್ಥ್ಯ ಇರುವುದಿಲ್ಲ.

ನೃತ್ಯ ಬಲ್ಲವಳಿಗೆ ಮುಖಲಕ್ಷಣ ಇರುವುದಿಲ್ಲ. ಶರೀರ ಜೋರಾಗಿರುತ್ತದೆ. ಕಂಠ ಪೀಚಾಗಿರುತ್ತದೆ. ಇದೆಲ್ಲವೂ ತೊಂದರೆಗಳೇ. ಒಂದು ನಾಟಕ ಮಾಡಲು ಅಡ್ಡಗಾಲುಗಳು. ಇದನ್ನೆಲ್ಲಾ ನಿವಾರಿಸಿಕೊಂಡು ನಾಟಕ ತಯಾರಿಸುವುದೆ ನಿರ್ದೇಶಕನ ಸವಾಲು. ಮಕ್ಕಳ ರಂಗಭೂಮಿಯಲ್ಲಿ ನಿರ್ದೇಶಕರ ಸವಾಲು ಎಂದರೆ ಮಕ್ಕಳೇ ಒಂದು ಸವಾಲು.

ಭಿನ್ನವಾದ ದೃಷ್ಟಿಕೋನಗಳನ್ನು ಹೊಂದಿರುವ ಮಕ್ಕಳನ್ನು ತಲುಪುವುದು. ಅವರನ್ನು ನಮ್ಮ ಕಡೆ ಆಕರ್ಷಿಸುವುದು, ಅದರಲ್ಲಿ ಹೊಂದಾಣಿಕೆ ಮಾಡಿಕೊಂಡು ಅವರನ್ನು ಕ್ರಿಯಾಶೀಲರನ್ನಾಗಿ ಮಾಡುವುದು. ಅವರಲ್ಲಿ ಉತ್ಸಾಹ ತುಂಬಿ ಅಭಿರುಚಿಯನ್ನು ಬೆಳೆಸುವುದು. ಇವೆಲ್ಲಾ ನಿರ್ದೇಶಕನ ಸವಾಲು. ಪಾಂಡಿತ್ಯದ ಸಿಂಹಾಸನದಲ್ಲಿ ಕುಳಿತು ಕನಸನ್ನು ಕಾಣುತ್ತ ಕೂಡದೆ ಮಕ್ಕಳ ಸಮಕ್ಕೆ ಇಳಿದು ಅವರನ್ನು ಅರ್ಥಮಾಡಿಕೊಳ್ಳುವುದು ಒಂದು ಸವಾಲು.

ಮಕ್ಕಳ ಕ್ರಿಯಾಶೀಲತೆಯನ್ನು ರಂಗಪರಿಕರಣ ಮಾಡಲು ಮತ್ತು ಇತರ ರಂಗಭೂಮಿಯ ನೇಪಥ್ಯದ ಕೆಲಸಗಳನ್ನು ಮಾಡಿಸಲು ಉಪಯೋಗಿಸಬೇಕು. ಇದು ಕೂಡ ನಿರ್ದೇಶಕನ ಸವಾಲು.

ಮಕ್ಕಳನ್ನು ಶಿಸ್ತು ಸಂಯಮದ ಬಂದನದಿಂದ ಕಟ್ಟಿ ಹಾಕುವುದು. ವಿಚಾರ ವಿನಿಮಯಗಳನ್ನು ಮಾಡಿಸುವುದು ಅವರಿಗೆ ಹೊಸ ಹೊಸ ರಂಗಪ್ರಜ್ಞೆಯನ್ನು ನೀಡುವುದು. ಆ ಗುಂಪಿನಲ್ಲಿ ನಾಯಕನನ್ನು ಸೃಷ್ಟಿಸುವುದು ನಿರ್ದೇಶಕನ ಕರ್ತವ್ಯ ಮತ್ತು ಸವಾಲು.

ಸವಾಲುಗಳನ್ನು ಎದುರಿಸುವ ಅಭ್ಯಾಸ ಈ ಮಕ್ಕಳಿಗಾದರೆ ಭವಿಷ್ಯದಲ್ಲಿ ಉತ್ತಮ ನಿರ್ದೇಶಕರುಗಳನ್ನು ನಟರನ್ನು ನೇಪಥ್ಯ ಕಲಾವಿದರನ್ನು ಕಾಣುವ ಆಸೆ ಇಟ್ಟುಕೊಳ್ಳಬಹುದು.

ಇತ್ತೀಚೆಗೆ ಹುರುಪುಗೊಂಡಿರುವ ಹರಡಿಕೊಂಡಿರುವ ಮಕ್ಕಳ ನಾಟಕ ತಂಡಗಳು ನಿರಂತರವಾಗಿ ಕಾರ್ಯನಿರತರಾಗಿದ್ದರೇ ಮಕ್ಕಳ ರಂಗಭೂಮಿ ಉಳಿಯುವುದು. ಮಕ್ಕಳು ಹಿರಿಯರಾಗಿ ಮುಂದೆ ನಡೆಯುತ್ತಿದ್ದಂತೆ ತಮ್ಮ ಜಾಗಕ್ಕೆ ಒಂದು ಮಗುವನ್ನು ತಂಡಕ್ಕೆ ಸೇರಿಸಿದ್ದಲ್ಲಿ ಮಕ್ಕಳ ರಂಗಭೂಮಿ ಉಳಿಯುತ್ತದೆ. ಮಕ್ಕಳ ರಂಗಭೂಮಿಯ ಭವಿಷ್ಯದ ನಟ ನಿರ್ದೇಶಕ ನಾಟಕಕಾರರ ಉಗಮಸ್ಥಾನವಾಗಬೇಕು. ಹಾಗೆ ಮಾಡುವ ಜವಾಬ್ದಾರಿ ಇಂದಿನ ರಂಗ ನಿರ್ದೇಶಕರದು.

ಮಕ್ಕಳ ರಂಗಭೂಮಿಯ ಉಳಿವಿಗೆ ಕಾಳಜಿ ವಹಿಸುತ್ತಿರುವ ರಂಗಕರ್ಮಿಗಳು ಬೆರಳು ಎಣಿಸುವಷ್ಟು ಜನ ಇದ್ದಾರೆ. ಎಂದಮೇಲೆ ಅಪಾಯ ಸ್ಥಿತಿಯಲ್ಲಿ ಇದೆ ಎಂದಂತಾಯಿತು. ಪ್ರೈಮರಿ ಶಾಲಾ ನಾಟ್ಯದಲ್ಲಿ ರಂಗ ಶಿಕ್ಷಣ ಕಡ್ಡಾಯವಾಗಬೇಕು ಎಂಬ ಕೂಗು ಕೂಗಳತೆಯಲ್ಲೇ ನಿಂತಿದೆ. ಇದನ್ನು ಉಳಿಸುವುದು ಬೆಳೆಸುವುದು ರಂಗಕರ್ಮಿಗಳಿಗೆ, ನಿರ್ದೇಶಕರಿಗೆ ಸವಾಲಾಗಿ ನಿಂತಿದೆ.

ಉತ್ತಮ ಭವಿಷ್ಯಕ್ಕೆ ಸವಾಲು ಎದುರಿಸುವುದೇ ಪರಿಹಾರ ಎದುರಿಸುವುದು, ಎಂದರೆ ಪೋಷಕರು, ತಂದೆತಾಯಿಗಳು, ರಂಗಕರ್ಮಿಗಳು ನಾಟಕಕಾರರು ಕಲಾವಿದರೂ ಶಿಕ್ಷಣ ಸಂಸ್ಥೆಗಳು ಕೈಗೆ ಕೈಗೂಡಿಸಿ ರಂಗಶಿಕ್ಷಣವನ್ನು ಕಡ್ಡಾಯ ಮಾಡುವಂತೆ ಸರ್ಕಾರಕ್ಕೆ ಒತ್ತಡ ತರುವುದು.

ಮಕ್ಕಳ ರಂಗಭೂಮಿಯಲ್ಲಿ ನಿರ್ದೇಶಕರ ಸವಾಲು ಮೊದಲು.

1. ಮಕ್ಕಳ ರಂಗಭೂಮಿಯಲ್ಲಿ ನಿರ್ದೇಶಕನಿಗೆ ಮಕ್ಕಳೇ ಸವಾಲು.

2. ಅವರೊಡನೆ ಹೊಂದಿಕೊಳ್ಳುವುದು.

3. ಅವರ ಮಟ್ಟಕ್ಕೆ ಇಳಿದು ಅವರನ್ನು ಅರ್ಥಮಾಡಿಕೊಳ್ಳುವುದು

4. ಅವರ ಪ್ರತಿಭೆಯ ಪರಿಚಯ ಮಾಡಿಕೊಳ್ಳುವುದು.

5. ಅವರನ್ನು ಹುರಿದುಂಬಿಸಿ ಅವರಲ್ಲಿ ಅಭಿರುಚಿ ಮೂಡಿಸುವುದು.

6. ಅವರ ಸೃಜನಶಕ್ತಿಗೆ ಅವಕಾಶ ಕೊಡುವುದು.

7. ಅವರ ಊಹಾಶಕ್ತಿಯನ್ನು ಉದ್ದೀಪನಗೊಳ್ಳುವುದು

8. ಮಕ್ಕಳ ಮನೋವೈಜ್ಞಾನವನ್ನು ಅರಳಿಸುವ ಮನೋರಂಜನೆ.

9. ಉಲ್ಲಾಸ ನೀಡುವ ಹಾಡುಗಳು, ಮುದ ನೀಡುವ ಅರ್ಥಪೂರಿತ ಚಲನವಲನಗಳು

10. ಕುತೂಹಲ ಕೆರಳಿಸುವ ಕಥೆಯುಳ್ಳ ನಾಟಕ

11. ರಂಗಸಜ್ಜಿಕೆ – ರಂಗಪರಿಕರಗಳು – ವೇಷಭೂಷಣಗಳು.

12. ಬೆಳಕಿನ ಸಂಯೋಜನೆ.

ನಾಟಕದ ತಾಲೀಮು – ಸಮಯಪ್ರಜ್ಞೆ, ಶಿಸ್ತು ಸಂಯಮ

ಪಾತ್ರ ವಿತರಣೆಯಲ್ಲಿ ಜಾಣ್ಮೆ

ಸಂಭಾಷಣೆ ಬಲ್ಲವರು

ಮುಖಭಾವಗಳು

ಆಂಗಿಕ ಅಭಿನಯ

ಹಿನ್ನೆಲೆ ಸಂಗೀತ

ನಿರೂಪಣೆ

ನಿಯಮಿತ ಸಮಯದಲ್ಲಿ ನಾಟಕ ತಯಾರಾಗಬೇಕು ಎಂದರೆ ನಿಗದಿತ ವೇಳೆಯಲ್ಲಿ ತಾಲೀಮು ಆಗಬೇಕು. ನಾಟಕದ ದೃಶ್ಯಗಳನ್ನು ನಿರ್ದೇಶಿಸಬೇಕಾದರೆ ನಟರುಗಳ ಹಾಜರಿ ಇರಬೇಕು. ಗೈರು ಹಾಜರಾತಿ ನಾಟಕದ ಪ್ರಗತಿಯನ್ನು ಹಿಂದೆ ಎಳೆಯುತ್ತದೆ.

ಹಾಜರಾತಿ ಇಲ್ಲದಿದ್ದರೆ ಒಂದೇ ದೃಶ್ಯವನ್ನು ಅನೇಕ ಸಾರಿ ಪುನಃ ನಿರ್ದೇಶನ ಮಾಡಬೇಕಾಗುತ್ತದೆ. ಅದರಿಂದ ನಾಟಕದ ತಯಾರಿ ವಿಳಂಬವಾಗುತ್ತದೆ.

ನಟರ ಅಸಮರ್ಥತೆ ದೃಶ್ಯವನ್ನು ಮುಗಿಸುವುದಕ್ಕೆ ಬಿಡುವುದಿಲ್ಲ., ಪೋಷಕರ

ತಂದೆ ತಾಯಿಯರ ಒತ್ತಡದಿಂದಲೂ ನಿರ್ದೇಶಕ ತನ್ನ ಯೋಜನೆಯಂತೆ ಕೆಲಸ ಮಾಡಲಾರ.

ಅವರಿಗೆ ಅಸಮಾಧಾನವಾದರೆ ಮಕ್ಕಳನ್ನು ತಾಲೀಮಿಗೆ ಕಳುಹಿಸದೇ ಇರಬಹುದು.

ನಟರ ಸ್ಮರಣಶಕ್ತಿ ಕಡಿಮೆ ಇದ್ದರೂ ನಾಟಕದ ಓಟ ಕಡಿಮೆ ಆಗುತ್ತದೆ.

ಸಂಗೀತ ನೃತ್ಯವನ್ನು ನಾಟಕದಲ್ಲಿ ಅಳವಡಿಸಿದಾಗ ಲಯ ಜ್ಞಾನ, ಶೃತಿ ಜ್ಞಾನ ಹೊಂದಿರುವ ನಟರ ಅವಶ್ಯಕತೆ ಇರುತ್ತದೆ. ಆಯ್ಕೆ ಮಾಡಲಾದ ನಾಟಕ ನಟರ ಪ್ರತಿಭೆಗೆ ಬೆಂಬಲ ಕೊಡುವಂತೆ ಇರಬೇಕು. ವಿಚಾರ ಪ್ರತಿಪಾದನೆ ಸರಳ ರೀತಿಯಲ್ಲಿ ಇರಬೇಕು. ನಟ ತಾನು ಅರ್ಥಮಾಡಿಕೊಂಡರೆ ಬೇರೆಯವರಿಗೆ ಅರ್ಥ ಮಾಡಿಸಬಲ್ಲ.

ಪ್ರತಿಭೆ ಇದ್ದರೆ ಅತಿ ಸಣ್ಣ ಪಾತ್ರದಿಂದ ಜನರನ್ನು ಆಕರ್ಷಿಸಬಹುದು. ನಿರ್ದೇಶಕರ ಆತ್ಮವಿಶ್ವಾದಿಂದ ಜಾಣ್ಮೆಯಿಂದ ಕೆಲಸ ಮಾಡಿದರೆ ಯಾವುದೂ ಸಮಸ್ಯೆ ಆಗುವುದಿಲ್ಲ– ಸವಲು ಆಗುವುದಿಲ್ಲ.

ಚಿಕ್ಕ ಮಕ್ಕಳಿಗಾಗಿ ರಂಗಯೋಗ್ಯ ನಾಟಕ ಬರೆಯುವುದು ಅಥವಾ ಮಕ್ಕಳ ನಾಟಕ ಆಡಿಸುವುದು ಅನೇಕರು ಭಾವಿಸಿರುವಂತೆ ಸುಲಭದ ಕೆಲಸವೇನಲ್ಲ.

ಮಹತ್ತರವಾದ ಆಕಾಂಕ್ಷೆ ಇಟ್ಟು ಬರೆದ ನಾಟಕ ರಂಗದ ಮೇಲೆ ಪ್ರದರ್ಶಿಸಿದಾಗ ಅದು ಪ್ರೇಕ್ಷಕರ ಮನವನ್ನು ಗೆಲ್ಲದೇ ಇರಬಹುದು. ಹಾಗೆಯೇ ಸಾಧಾರಣ ದರ್ಜೆಯ ನಾಟಕಗಳು ಮಕ್ಕಳ ಮನಸ್ಸನ್ನು ಸೂರೆಗೊಂಡು ಖುಷಿ ಕೊಡಬಹುದು. ಗೆದ್ದ ನಾಟಕಕ್ಕೆ ಪರಿಣತಿ ಪಡೆದ ಒಬ್ಬ ತಂತ್ರ ಕೌಶಲ್ಯ ಗೋಚರವಾಗುತ್ತದೆ ತಂತಮ್ಮ ನಾಟಕದ ಮೂಲ ಉದ್ದೇಶವನ್ನು ಸ್ಪಷ್ಟೀಕರಿಸಲು ಅದರ ಅರ್ಥವನ್ನು ಪ್ರೇಕ್ಷಕರಿಗೆ ಮುಟ್ಟಿಸಲು ಸಹಾಯಕವಾಗುತ್ತದೆ.

ರಂಗಪ್ರದರ್ಶನವು ವಿವಿಧ ಕಲಾ ಸಮಾವೇಶದಿಂದ ಮಾತ್ರ ಸಾಧ್ಯ. ನಾಟಕ ರಚನೆ ವಿನ್ಯಾಸ, ನಿರ್ದೇಶನ ದೃಶ್ಯ ಸಂಯೋಜನೆ ನಟನೆ ಇತ್ಯಾದಿ.

ಲಿಖಿತ ನಾಟಕವನ್ನು ರಂಗದ ಮೇಲೆ ಸಾಕಾರಗೊಳಿಸಲು ಅನೇಕರು ಸಹಾಯ ಸಹಕಾರ ಅಗತ್ಯ. ನಾಟಕವನ್ನು ಅರ್ಥಮಾಡಿಕೊಂಡು ನಾಟಕದ ಮೂಲ ಅಂಶವನ್ನು ಮಕ್ಕಳ ಮನಸ್ಸಿಗೆ ತಟ್ಟುವಂತೆ ಮಾಡುವವನು ನಿರ್ದೇಶಕ. ನಿರ್ದೇಶಕ ಮಕ್ಕಳೊಡನೆ ಮಕ್ಕಳಿಗಾಗಿ ನಾಟಕ ಆಡಿಸುವಾಗ ಎದುರಿಸುವ ಸಮಸ್ಯೆ ಹಲವಾರು.

ಪ್ರೇಕ್ಷಕ ಅಂಗಳದಲ್ಲಿ ಕುಳಿತು ನೋಡುತ್ತಿರುವ ಪ್ರತಿಯೊಬ್ಬ ಮಗುವಿಗೂ ನಾಟಕದ ಪ್ರತಿ ಭಾಗಗಳನ್ನು ದೃಶ್ಯ ರೂಪದಲ್ಲಿ ಅರ್ಥವಾಗುವಂತೆ ಚಲನೆ ವಲನ, ಹಾವ ಭಾವ, ಕ್ರಿಯೆ ಪ್ರತಿಗಳಿಸುತ್ತಾ ಮಕ್ಕಳ ಗಮನ ಸೆಳೆಯುತ್ತಾ ಹೋಗುವುದು ಸುಲಭದ ಕೆಲಸವಲ್ಲ. ಅದೊಂದು ಸವಾಲೇ ಸರಿ.

ನಾಟಕ ಆಡುವ ಮತ್ತು ನೋಡುವವರ ಅನುಭವದ ವ್ಯಾಪ್ತಿ, ಹಿನ್ನೆಲೆ

ವಯೋಮಾನ ಭಾಷಾ ಸಾಮರ್ಥ್ಯ ಗಮನ ಸಾಮರ್ಥ್ಯ ಇವುಗಳನ್ನು ಲಕ್ಷದಲ್ಲಿಟ್ಟುಕೊಂಡಾಗ ಮಾತ್ರ ನಾಟಕ ಮಕ್ಕಳ ಮೇಲೆ ಪರಿಣಾಮ ಬೀರುವುದು.

ಮಕ್ಕಳಿಗಾಗಿ ಪ್ರಿಯವಾದ ಕಥೆಗಳು ರಂಗದ ಮೇಲೆ ಸಾಕಾರ ಪಡೆದು ಬಂದಾಗ ಆಗುವ ಸಂತೋಷ. ಬಾಲ್ಯದ ಸುಂದರ ಅನುಭವಗಳು ಕ್ಷಣಿಕವಲ್ಲ. ಜೀವಮಾನ ಪರ್ಯಂತ ಉಳಿಯುವಂತಹುದು. ಮಕ್ಕಳಲ್ಲಿ ಉತ್ತಮ ಅಭಿರುಚಿ ಬೆಳೆಸುವ, ನಾಟಕದ ಮೂಲಕ ಲೋಕ ನೀತಿ – ರೀತಿಯ ಕಲಿಕೆಯ ಮೂಲಕ ಮನೋವಿಕಾಸ ಆಗುತ್ತದೆ.

ಮಕ್ಕಳಿಂದ – ಹಿರಿಯರ ದರ್ಜೆಗೆ ಬರುವಷ್ಟರಲ್ಲಿ ಭವಿಷ್ಯ ತಲುಪಿರುತ್ತಾರೆ.

10 ವರ್ಷದ ಮಕ್ಕಳಿಗೆ ರಾಮಾಯಣ, ಮಹಾಭಾರತ, ಪಂಚತಂತ್ರ, ಕಿನ್ನಾರಲೋಕರ ಕಾಲ್ಪನಿಕ ಕಥೆಗಳು ಪ್ರಿಯವಾಗಬಹುದು. ಪ್ರಾಸಬದ್ಧ ಸಣ್ಣ ಪುಟ್ಟ ಪದ್ಯಗಳು ಅವರನ್ನು ಆಕರ್ಷಿಸಬಹುದು. ಆ ಪ್ರಾಸಕ್ಕೆ ಸರಿಯಾಗಿ ಕುಣಿಯುವ ಮೋಜನ್ನೂ ನೀಡಿದರೆ ಅವಕ್ಕೆ ಇಷ್ಟವಾಗಬಹುದು.

14 ವರ್ಷದ ವಯೋಮಿತಿಯವರಿಗೆ ಕಟ್ಟುಕತೆಗಳನ್ನು ನೀಡಿದರೆ ಇಷ್ಟ ಆಗಬಹುದು. ನಂತರದ ವಯಸ್ಸಿನ ಮಕ್ಕಳಿಗೆ ತಾವು ನೋಡಿದ ವ್ಯಕ್ತಿಯ ಬಗ್ಗೆ ತಮ್ಮ ಸುತ್ತಮುತ್ತ ನಡೆಯುತ್ತಿರುವ ಘಟನಾವಳಿಗಳನ್ನು ನಾಟಕ ಮೂಲಕ ರಂಗದ ಮೇಲೆ ತಂದರೆ ಕುತೂಹಲ ಹೆಚ್ಚಿ ಆಸಕ್ತಿ ಮೂಡಬಹುದು. ಆಗ ನಾಟಕ ಹೆಚ್ಚು ಪ್ರಭಾವಕಾರಿಯೂ ಪ್ರಯೋಜನಕಾರಿಯೂ ಆಗಬಹುದು.

10 ವರ್ಷದ ಮಕ್ಕಳ ತಂಡಕ್ಕೆ ನಿರ್ದೇಶಕ ಶಿಸ್ತು ಸಂಯಮ ಪಾಲಿಸುವ ಅಧಿಕಾರಿಯಂತಿರಬೇಕು.

12 ರಿಂದ 14 ವರ್ಷದ ಮಕ್ಕಳೊಡನೆ ಸ್ನೇಹ ಪೂರ್ವಕವಾಗಿ ಪ್ರೀತಿಯಿಂದ ನಡೆದುಕೊಳ್ಳಬೇಕು.

14ರ ಮೇಲ್ಪಟ್ಟು ಇದ್ದರೆ ಸ್ವತಂತ್ರ ಅಭಿವ್ಯಕ್ತಿಗೆ ಮುಕ್ತ ಅವಕಾಶ ನೀಡಿ ಅವರ ಎಲ್ಲಾ ಚಟುವಟಿಕೆಗಳಲ್ಲೂ ತಾನೂ ಭಾಗವಹಿಸಿ ಅವರಿಗೆ ಪ್ರೋತ್ಸಾಹ ಕೊಡಬೇಕು.

ಮಕ್ಕಳ ನಾಟಕದ ಭಾಷೆ ಅತ್ಯಂತ ಸರಳವಾಗಿರಬೇಕು. ನಾಟಕದ ಪ್ರತಿಯೊಂದು ಮಾತನ್ನು ಮಕ್ಕಳಿಂದಲೇ ಆಡಿಸಿ ಕೇಳಿದಾಗ ಅವರ ಕಲ್ಪನೆಗೆ ಅವಕಾಶ ಕೊಟ್ಟು ಸಹನೆಯಿಂದ ನೋಡಿದಾಗ ಮಕ್ಕಳ ಬಗ್ಗೆ ತಾವೆಷ್ಟು ಕಡಿಮೆ ತಿಳಿದಿದ್ದೇವೆ ಎಂದು ಅನ್ನಿಸಿದರೆ ಆಶ್ಚರ್ಯವಿಲ್ಲ.

ಮಕ್ಕಳ ನಾಟಕ ಗಮನ ಸಾಮರ್ಥ್ಯಕ್ಕೆ ತಕ್ಕಂತಿರಬೇಕು ಮತ್ತು ತಾಲೀಮು ನೀಡುವ ಜಾಗ ಜನ ಸಮೂಹದ ಗದ್ದಲದಿಂದ ದೂರ ಇರಬೇಕು. ಅವರ ಏಕಾಗ್ರ ಚಿತ್ತಕ್ಕೆ ಭಂಗ ಬರಬಾರದು. ಮಕ್ಕಳಿಗೆ ತಾವು ಪ್ರದರ್ಶನ ಕೊಡುವ ರಂಗಭೂಮಿಯ ಪರಿಚಯವಾಗಬೇಕು. ಆ ನಾಟಕದ ಪ್ರದರ್ಶನ ದಿನ ರಂಗದ ಮೇಲೆ ಏನೇನೂ

ಇರುತ್ತದೆ ಏರುಪೇರು ಮಹಡಿ ಕಿಟಕಿ ಎಲ್ಲಿ ಇರುತ್ತದೆ ಎಂಬುದನ್ನು ತಾಲೀಮಿನ ಸಮಯದಲ್ಲೇ ಮನಗಾಣಿಸಬೇಕು. ಅವರ ಮನದಲ್ಲಿರುವ ಕಾತುರ, ಸಂದೇಹ ಸಂಶಯಗಳನ್ನು ತಾಲೀಮಿನಲ್ಲೇ ಪರಿಹರಿಸಬೇಕು. ವೇಷಭೂಷಣ ಮುಖವಾಡ ತೊಡಗಿಸಿದ ಮೇಲೆ ಮಕ್ಕಳ ಓಡಾಟಕ್ಕೆ ನೋಡುವುದಕ್ಕೆ ತೊಂದರೆ ಆಗದಂತೆ ಎಚ್ಚರಿಕೆ ವಹಿಸಬೇಕು.

ನಾಟಕದ ಅಗತ್ಯಕ್ಕೆ ಅನುಗುಣವಾಗಿ ಮೆಟ್ಟಲುಗಳನ್ನು ಜಾರಿಗಳನ್ನೂ ಉಪಯೋಗಿಸುವ ಮುಂಚೆ ಆಡುತ್ತಿರುವ ಮಕ್ಕಳಿಗೆ ಸುಲಭವಾಗಿ ಹತ್ತಿ ಇಳಿಯಲು ಎತ್ತರ ಅನುಕೂಲವಾಗಿದೆಯೇ ನೋಡಿಕೊಳ್ಳಬೇಕು.

ನಿರ್ದೇಶಕ ನಾಟಕಕಾರ ತಂತ್ರಜ್ಞ ಪ್ರಸಾದನ ಕಲಾವಿದ ವೇಷಭೂಷಣ ಎಲ್ಲರೊಡನೆ ಎಷ್ಟು ಬೆರೆತು ಅವರ ಅಭಿಪ್ರಾಯಗಳನ್ನು ತಿಳಿದು ತನ್ನ ಕೆಲಸ ಮಾಡುತ್ತಾನೋ ಅಷ್ಟು ನಾಟಕ ಪ್ರಯೋಗ ಫಲಕಾರಿಯಾಗಿ ಬರುತ್ತದೆ.

ಮೇಲೆ ಹೇಳಿದ ಅನುಭವಗಳಿಂದ ಹೊರತಾದ ನಿರ್ದೇಶಕನಿಗೆ ಎಲ್ಲವೂ ಸಮಸ್ಯೆ ಅದರಿಂದಾಗುವ ಪರಿಣಾಮ ಎದುರಿಸುವುದು ಒಂದು ದೊಡ್ಡ ಸವಾಲು.

ಮಕ್ಕಳ ತಂಡದಿಂದ ಬರುವ ಸಮಸ್ಯೆ ಒಂದು ಕಡೆ, ಕ್ಲಿಷ್ಟ ನಾಟಕಕ್ಕೆ ಸಾಕಾರ ಕೊಡುವಾಗ ಅಗತ್ಯ ವಿಭಾಗಗಳ ಆಸರೆ ತಪ್ಪಿದರೆ ಅದು ನಾಟಕ ಪ್ರದರ್ಶನ ಮಾಡಲು ಸಮಸ್ಯೆ ಉಂಟಾಗುವುದು.

ನಾಟಕದ ಪ್ರಯೋಗದ ಕ್ಲಿಷ್ಟವಾದ ಸನ್ನಿವೇಶಕ್ಕೆ ರೂಪ ಹೇಗೆ ಕೊಡುವುದು ಎಂದು ತಲೆ ಕೆಡಿಸಿಕೊಂಡು ಅದನ್ನು ಮಾಡೇ ಮಾಡುತೀನಿ ಎಂಬ ಸವಾಲು ಹಾಕುವುದು ಮತ್ತೊಂದು ರೀತಿಯದು. ಎಲ್ಲಕ್ಕಿಂತ ಹೆಚ್ಚಾಗಿ ಅನೇಕರ ಅಭಿಪ್ರಾಯಗಳನ್ನು ಕೇಳಿದ ಮೇಲೆ ಸ್ವಂತ ನಿರ್ಧಾರ ತೆಗೆದುಕೊಂಡು ಕಾರ್ಯವನ್ನು ಮುಂದುವರಿಸುವುದು ಹೆಚ್ಚಿನ ಸವಾಲಿನ ಕೆಲಸ ಆಗುವುದು.

ಎಲ್ಲಾ ಆಯೋಜಿಸಿದಂತೆ ನೆನೆದುಕೊಂಡಂತೆ ನಡೆದರೆ ಪ್ರೇಕ್ಷಕರ ಮೆಚ್ಚಿಗೆ ಸಿಕ್ಕರೆ ವಿಮರ್ಶಕರ ರಕ್ಷೆ ಸಿಕ್ಕರೆ ಆ ನಿರ್ದೇಶಕ ಧನ್ಯ.

***

# ಸಮಕಾಲೀನ ರಂಗಭೂಮಿ – ಪ್ರಯೋಗಗಳು ಮತ್ತು ಸಾಧ್ಯತೆಗಳು

ವಿನಯ್ ಕೆ. ಸುವರ್ಣ.

ಸಮಕಾಲೀನ ರಂಗಭೂಮಿ ಮತ್ತೆ ಮತ್ತೆ ನನ್ನಲ್ಲಿ ಅಚ್ಚರಿ ಹುಟ್ಟಿಸುವುದು, ಬೆರಗು ಹುಟ್ಟಿಸುವುದು ಅದರೊಳಗಿನ ಅಗಾಧವಾದ ನಿರ್ಭಿಡೆಯ ಅಭಿವ್ಯಕ್ತಿ ಸಾಧ್ಯತೆಗಳಿಗಾಗಿ ಮತ್ತು ಅದಕ್ಕಿಂತಲೂ ಮುಖ್ಯವಾಗಿ ಸಮಕಾಲೀನ ರಂಗಭೂಮಿ ಹೆಚ್ಚು ಆಪ್ತವಾಗುವುದು. ಅದು ಕಟ್ಟಿ ಬೆಳೆಸಿಕೊಂಡಿರುವ ಒಂದು ಬಗೆಯ ಸಮಾಜಮುಖಿ ವ್ಯಕ್ತಿತ್ವಕ್ಕಾಗಿ ಹಾಗೂ ಅದರ ಜೀವನ್ಮುಖಿ ಲಯಕ್ಕಾಗಿ. ಒಂದು ಕಡೆ ಸಂಕೀರ್ಣವಾದ ಮನುಷ್ಯ ಮನಸ್ಸಿನ, ಇನ್ನೊಂದು ಕಡೆ ಅದರದ್ದೇ ವಿಸ್ತೃತರೂಪವಾಗಿರುವ ಚಲನಶೀಲ ಸಮಾಜದ ಎಲ್ಲ ಸೂಕ್ಷ್ಮನಾಡಿ ಮಿಡಿತಗಳನ್ನು ಗ್ರಹಿಸಬಲ್ಲ ಒಂದು ಮಾನವೀಯ ಅಂತಃಕರಣ. ಸಂವೇದನಾಶೀಲತ್ವ ಸಮಕಾಲೀನ ರಂಗಭೂಮಿಗಿದೆ ಎಂಬ ಬಲವಾದ ನಂಬಿಕೆಯನ್ನಿಟ್ಟುಕೊಂಡೇ ನಾವು ಅದರ ಪ್ರಯೋಗ ಮತ್ತು ಸಾಧ್ಯತೆಗಳ ಕುರಿತು ಯೋಚಿಸಬಹುದು.

**ಹೊಸ ರಂಗಪಠ್ಯಗಳ ಕಟ್ಟಿಕೊಳ್ಳುವಿಕೆ ಮತ್ತು ಹೊಸ ಒಳನೋಟಗಳ ದರ್ಶಿಸುವಿಕೆ....?**

ಸಾಮಾಜಿಕ ಸ್ಥಿತ್ಯಂತರಗಳ ಕುರಿತಾದ ಸೂಕ್ಷ್ಮ ಅವಲೋಕನ, ಯಾವ ಬಗೆಯ ಹೊಸ ಮೌಲ್ಯವ್ಯವಸ್ಥೆ ನಮ್ಮ ಇಂದಿನ ಜೀವನಕ್ರಮವನ್ನು ಸೆಳೆಯುತ್ತಿದೆ. ಪ್ರಭಾವಿಸುತ್ತಿದೆ ಎಂಬ ವಿಶ್ಲೇಷಣೆ ಆಧುನಿಕ ನಾಟಕಕಾರನಿಗೆ ಬಹಳ ಮುಖ್ಯ. ಇಡೀ ದೇಶದ ಸಾಮಾಜಿಕ, ಸಾಂಸ್ಕೃತಿಕ ನಡೆಯನ್ನು ಗಮನಿಸಿದರೆ ಇಂದು ಪಾರಂಪರಿಕ ಸಾಂಸ್ಕೃತಿಕ ಮೌಲ್ಯಗಳು ಪಲ್ಲಟಗೊಳ್ಳುತ್ತಿವೆ. ಅಪ್ರಾಮಾಣಿಕತೆ, ಭ್ರಷ್ಟಾಚಾರಗಳು ಸಾಮಾಜಿಕವಾಗಿ ಒಪ್ಪಿತವಾಗುವಷ್ಟರ ಮಟ್ಟಿಗೆ ಸರ್ವೆ ಸಾಮಾನ್ಯವಾಗುತ್ತಿದೆ. ಹಣ, ಭೋಗ, ಅಧಿಕಾರಗಳೇ ಸರ್ವಸಮ್ಮತ ಮೌಲ್ಯಗಳಾಗಿಬಿಡುವಷ್ಟರ ಮಟ್ಟಿಗೆ ಅಪಾಯಕಾರಿಯಾಗಿ ಬೆಳೆಯುತ್ತಿವೆ. ಭಯ, ಹಿಂಸೆ ಅತೃಪ್ತಿ, ಅಸ್ಥಿರತೆ, ದಂಗೆ, ಅಸಹಾಯಕತೆ, ಅನಾಥಪ್ರಜ್ಞೆ, ಸ್ವೇಚ್ಛಾಚಾರ

– ಇವುಗಳಿಗೆಲ್ಲಾ ನಾವು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಬಲಿಪಶುಗಳಾಗುತ್ತಿದ್ದೇವೆ ಅಥವಾ ಅದು ನಮ್ಮೊಳಗೆ ಒಂದು ಚಿಕ್ಕ ಅಸುರಕ್ಷಿತ ಭಾವವನ್ನಾದರೂ ಹುಟ್ಟಿಸಿಯೇ ಹುಟ್ಟಿಸಿರುತ್ತದೆ. ಇಂತಹ ಪ್ರಕ್ಷುಬ್ಧ ಹೊರಳುಹಾದಿಯಲ್ಲಿ ನಿಂತಿರುವಾಗ ಯಾವ ಬಗೆಯ ಹೊಸ ರಂಗಪಠ್ಯಗಳನ್ನು ಕಟ್ಟಿಕೊಳ್ಳಬೇಕು ಎಂಬುದೇ ನಾಟಕಕಾರನಿಗೆ ಒಂದು ದೊಡ್ಡ ಸವಾಲಿನ ಸಂಗತಿಯಾಗಿ ಕಾಡುತ್ತದೆ. ನಾಟಕದ ವಸ್ತು ಯಾವುದೇ ಇರಲಿ ಅದರೊಳಗೆ ನಮಗೆ ನಾವು ಉಸಿರಾಡುತ್ತಿರುವ ವರ್ತಮಾನದ ಬಿಕ್ಕಟ್ಟುಗಳನ್ನು, ಆತಂಕಗಳನ್ನು, ಗೊಂದಲಗಳನ್ನು, ಸವಾಲುಗಳನ್ನು ದರ್ಶಿಸಿಕೊಳ್ಳಲು ಮತ್ತು ಅನುಸಂಧಾನ ನಡೆಸಲು ಸಾಧ್ಯವಾಗಬೇಕು ಎನ್ನುವುದು ಸಮಕಾಲೀನ ರಂಗಭೂಮಿಯ ಮುಖ್ಯ ತುಡಿತ. ಪುರಾಣ ಮತ್ತು ಐತಿಹಾಸಿಕ ಪಾತ್ರಗಳಲ್ಲಿ, ಘಟನೆಗಳಲ್ಲಿ ಆಧುನಿಕ ಸಂವೇದನೆಯನ್ನು ತುಂಬಿ ಅದನ್ನು ಪುನರ್‌ವಿಮರ್ಶೆಗೆ ಒಳಪಡಿಸುವ ಚಿಂತನಾಕ್ರಮ ನಮ್ಮಲ್ಲಿ ಈಗಾಗಲೇ ಇದೆ.

ಕಾರ್ನಾಡರು ಯಯಾತಿ, ತುಘಲಕ್ ಪಾತ್ರಗಳಲ್ಲಿ ವ್ಯಕ್ತಿ ಮತ್ತು ಸಮಾಜದ ನಡುವಿನ ಬಿರುಕುಗಳನ್ನು, ಮನುಷ್ಯನ ಮೂಲಭೂತ ವಾಂಛೆಗಳ ಅದಮ್ಯತನ ಮತ್ತು ಒಳತೋಟಿಗಳನ್ನು ಕಂಡುಕೊಂಡರು. ಕುವೆಂಪು ಶೂದ್ರತಪಸ್ವಿಯ ರಾಮನಲ್ಲಿ ಸಮಾಜವಾದಿ ಆದರ್ಶಗಳ ಹೊಸ ಪ್ರಭುವನ್ನು, ಪ್ರಭುತ್ವವನ್ನು ಕಂಡುಕೊಂಡರು – ಹೀಗೆ ಈ ನಮೂನೆಯ ಯೋಚನಾಕ್ರಮದಲ್ಲಿ ಅಂದರೆ ಒಂದು ಪಠ್ಯವನ್ನು ಸಾಂಸ್ಕೃತಿಕ ಪಠ್ಯವಾಗಿ ನೋಡುವ ಕ್ರಮದಲ್ಲೇ ಒಂದು ವಿಚಿತ್ರತೆರನಾದ ಶಕ್ತಿಯಿದೆ. ಏಕೆಂದರೆ ಇದಕ್ಕೆ ಕಾಲದ ಬೃಹತ್ ಅಂತರಗಳನ್ನು ಕಡಿದುಹಾಕಬಲ್ಲ ಚಮತ್ಕಾರೀ ಸಾಮರ್ಥ್ಯವಿದೆ. ಈ ಅಂತರಗಳು ಕಿರಿದಾದಾಗ ಸಹಜವಾಗಿಯೇ ವರ್ತಮಾನ ಮತ್ತು ಐತಿಹಾಸಿಕ ಸ್ಮೃತಿಗಳ ನಡುವೆ ಒಂದು ಅದ್ಭುತ ಸಾಂಗತ್ಯ, ಸಾಹಚರ್ಯ ಏರ್ಪಡುತ್ತದೆ. ಹೀಗಾದಾಗ ನಾವು ಏಕಕಾಲಕ್ಕೆ ನಮ್ಮ ಸಾಂಸ್ಕೃತಿಕ ಪರಂಪರೆಯ ಮತ್ತು ಆಧುನಿಕ ಜೀವನದೃಷ್ಟಿಗಳ ಅರೆಕೊರೆಗಳನ್ನು ಹಾಗೆಯೇ ಔನ್ನತ್ಯವನ್ನು ಅನುಭವವೇದ್ಯಗೊಳಿಸಲಿಕ್ಕೆ ಸಾಧ್ಯವಾಗುತ್ತದೆ. ಈ ಮಾನಸಿಕ ವ್ಯಾಪಾರಸ್ಥಿತಿ ಮತ್ತು ಅದರ ಶಕ್ತಿಯನ್ನೇ ಮುಂದಿನ ದಿನಗಳಲ್ಲಿ ಇನ್ನಷ್ಟು ನಾಜೂಕಾಗಿ, ಕಲಾತ್ಮಕವಾಗಿ ದುಡಿಸಿಕೊಳ್ಳಬೇಕಾದ ತುರ್ತು ಆಧುನಿಕ ರಂಗಭೂಮಿಯ ಮುಂದಿದೆ. ಏಕೆಂದರೆ ಸಾಮುದಾಯಿಕ ನಂಬಿಕೆಗಳ ಮತ್ತು ನಮ್ಮ ಸೂಕ್ಷ್ಮಭಾವಕೋಶಗಳ ಭಾಗವಾಗಿರುವ ಕೆಲವ್ಯಕ್ತಿಗಳು ಮತ್ತು ಘಟನೆಗಳು ಸಮಾಜಕಟ್ಟುವ ಕಾಯಕಕ್ಕೆ ಹೊಸ ಶಕ್ತಿ ಕೇಂದ್ರಗಳಾಗಬಲ್ಲರು. ಈ ಬಗೆಯ ಶಕ್ತಿಕೇಂದ್ರಗಳ ಆವಿಷ್ಕಾರ ಹೊಸ ರಂಗಪ್ರಯೋಗಗಳಲ್ಲಿ ಹೆಚ್ಚು ಹೆಚ್ಚು ಕಾಣಿಸಿಕೊಳ್ಳಬೇಕು. (ಉತ್ತರ ಮತ್ತು ದಕ್ಷಿಣ ಭಾರತದ ಎರಡು ಭಿನ್ನ ಜನಸಮುದಾಯಗಳ ನಡುವೆ ಸಾಮರಸ್ಯದ ಕೊಂಡಿ ಬೆಸೆದ) ರಾಮಾಯಣದ ರಾಮನ ವ್ಯಕ್ತಿತ್ವನ್ನು ಅವನ ಸುತ್ತ ನಡೆಯುವ ತ್ಯಾಗ, ಸ್ನೇಹ, ಭಕ್ತಿಯ, ಸಾಂಸ್ಕೃತಿಕ ಕೊಡುಕೊಳ್ಳುವಿಕೆಗಳ ಚಿತ್ರಣವನ್ನು, ಹಳ್ಳಿ ಬದುಕಿನ

ಮುಗ್ಧ, ಆಪ್ತ, ಪ್ರೇಮ ಸ್ನೇಹ, ವಿರಹಗಳ ಭಾವತಪ್ತ ಜಗತ್ತಿನಲ್ಲೇ ಮುಳುಗಿ ಎದ್ದು ಮನುಷ್ಯ ಸಂಬಂಧಗಳನ್ನೇ ತೀರಾ ಗಾಢವಾಗಿ ಬದುಕಿದ ಗೋಕುಲದ ಕೃಷ್ಣ ವ್ಯಕ್ತಿತ್ವವನ್ನು ಜೆರುಸಲೆಮ್, ಅರೇಬಿಯಾಗಳ ಸಾಮಾಜಿಕ ವೈಷಮ್ಯದ, ವರ್ಗತಾರತಮ್ಯಗಳ ಸ್ವೇಚ್ಛಾಚಾರದ, ಅಮಾನುಷ ಮಾನವ ವಿಕೃತಿಗಳ ವಿರುದ್ಧ ಧ್ವನಿಯೆತ್ತಿ ಅನಂತವಾದ, ಅಸೀಮವಾದ ಮಾನವ ಪ್ರೇಮದ ಸಾಕ್ಷಾತ್ಕಾರ ಮಾಡಿಸಿಕೊಟ್ಟ ಏಸು, ಪೈಗಂಬರರ ಘನ ಔದಾರ್ಯದ ವ್ಯಕ್ತಿತ್ವವನ್ನು, ಮನುಷ್ಯ ಕ್ರೌರ್ಯ ಮತ್ತು ಅದರ ಪೈಶಾಚಿಕತೆಯ ಬಗ್ಗೆ ವೈರಾಗ್ಯತಾಳಿದ ಬಾಹುಬಲಿಯ ಕಥೆಯನ್ನು, ಹಿಂಸೆ ದಬ್ಬಾಳಿಕೆಗಳ ಎದುರು ಸತ್ಯ, ತ್ಯಾಗ, ಪ್ರಾಮಾಣಿಕತೆಗಳನ್ನೇ ಆಪ್ತವಾಗಿ ಒಡ್ಡಿದ ಹೆಬ್ಬುಲಿಯ ಕಲ್ಲೆದೆಯನ್ನೂ ಕರಗಿಸಿದ ನಮ್ಮ ಪುಣ್ಯಕೋಟಿಯ ಕಥೆ, ಕುಲದ ಚೌಕಟ್ಟುಗಳನ್ನೂ ಮೀರಿ ಪರಸ್ಪರ ಹತ್ತಿರವಾಗುವ ಪಂಪನ ಕರ್ಣ, ದುರ್ಯೋಧನರ ವ್ಯಕ್ತಿತ್ವಗಳು – ಇಂತಹವುಗಳನ್ನೆಲ್ಲಾ ಮತ್ತೆ ಮತ್ತೆ ರಂಗದ ಪ್ರಖರ ಬೆಳಕಿನ ಅಡಿಯಲ್ಲಿ ಕಣ್ಣಿಗೆ ಕಟ್ಟುವ ಹಾಗೆ, ನಾಟುವ ಹಾಗೆ, ಮೂರ್ತಿಗಟ್ಟುವ ಹಾಗೆ ಚಿತ್ರಿಸಿ, ಕೆತ್ತಿ ಬಣ್ಣತುಂಬಿ ಹೇಳಬೇಕಾದ, ದಾಟಿಸಬೇಕಾದ ಅನಿವಾರ್ಯತೆ ನಮ್ಮ ಮುಂದೆ ಇದೆ. ಯಾಕೆಂದ್ರೆ ಈ ಎಲ್ಲಾ ಪಾತ್ರಗಳು ನಮ್ಮ ಸಮುದಾಯದ ಭಾವಲೋಕವನ್ನು ಸಮೃದ್ಧವಾಗಿ ಆಳುವ ಪಾತ್ರಗಳು. ನಮ್ಮ ಭಕ್ತಿಯಲ್ಲಿ ನಂಬಿಕೆಯಲ್ಲಿ ಆದರ್ಶಗಳಲ್ಲಿ ನಿತ್ಯ ಜೀವಂತವಾಗಿರುವವು. ಹೀಗೆ ಸಾಮರಸ್ಯದ ಶಾಂತಿಯ, ಸಹನೆಯ ಹಳೆಯ ಕಥೆಗಳನ್ನೇ ಹೊಸದಾಗಿ ಕಟ್ಟುವ ಮೂಲಕ ನಮ್ಮ ರಂಗಭೂಮಿ ಕೋಮುವೈಷಮ್ಯದ, ಯುದ್ಧಭೀತಿಯ, ಅಪನಂಬುಗೆಗಳ ಅಪ್ರಾಮಾಣಿಕತೆಗಳ ಮಡುವಾಗಿರುವ ಸಮಾಜದ ಮನಸ್ಸು ಕರಗಿಸುವ ಪ್ರಯತ್ನ ಮಾಡಬೇಕು. ಈ ಉದ್ದೇಶಕ್ಕಾಗಿ ರಂಗ ಪ್ರಯೋಗಗಳು ಒಂದಿಷ್ಟು ವಾಚ್ಯವೇ ಆದರೂ, ತುಸು ಜಾಸ್ತಿಯೇ ಅನ್ನುವಷ್ಟು ಭಾವುಕತೆ ಆದರೂ ಅದು ಒಪ್ಪಿತವಾಗಬೇಕು ಅನ್ನುವುದು ನನ್ನ ಅಭಿಪ್ರಾಯ. ಯಾಕೆಂದ್ರೆ ನಾಟಕಗಳು ತೀರಾ ಬೌದ್ಧಿಕ ವಲಯದ ಕಸರತ್ತುಗಳಾಗಿ ಉಳಿದರೆ, ಸಂಕೀರ್ಣ ಸಾಂಕೇತಿಕತೆಗಳ ಬಂಧಿಯಾಗಿ ಬಿಟ್ಟರೆ ತಲುಪಬೇಕಾದ ಮನಸ್ಸುಗಳಿಗೆ ಅದು ಆಳವಾಗಿ ಆಪ್ತವಾಗಿ ತಲುಪುವುದು ಕಷ್ಟಸಾಧ್ಯವಾಗಬಹುದು ಅನ್ನುವುದು ನನ್ನ ಪ್ರಶ್ನೆ. ಅತ್ಯಂತ ಜಟಿಲ, ಸಂಕೀರ್ಣ ಬದುಕನ್ನೂ ಸಹ ಸರಳವಾಗಿ ಬದುಕುವ, ಯೋಚಿಸುವ, ಅರ್ಥೈಸುವ, ನಿರಾಶೆ, ಆತಂಕ ಮತ್ತು ಗೊಂದಲಗಳಿಂದ ಛಿದ್ರಗೊಂಡ ಸಾಮಾನ್ಯ ನೋಡುಗ ಒಂದು ಕಡೆ ಇದ್ರೆ, ತುಸುದರ್ಪದ ಬಿಗುಮಾನದ ಮೂಲಭೂತವಾದಿ ಮನಸ್ಸುಗಳು ಇನ್ನೊಂದು ಕಡೆ ಇವೆ. ರಂಗದ ಎದುರು ಖುಷಿಯ ಹುಡುಕಾಟಕ್ಕೋ, ರಸಾಸ್ವಾದನೆಗೋ, ಇಲ್ಲಾ ಸೈದ್ಧಾಂತಿಕ ವಾಗ್ವಾದಕ್ಕೋ ಬರುವ ಇಂತಹ ದೊಡ್ಡ ಪ್ರೇಕ್ಷಕ ವರ್ಗವನ್ನು ತಲುಪಲು ರಂಗಪಠ್ಯಗಳು ಇನ್ನಷ್ಟು ಲಾಲಿತ್ಯದ, ಮಾಧುರ್ಯದ, ನಿಶಿತವಾದ ನೇರ ಭಾಷೆಯ ಮೂಲಕ ವ್ಯವಹರಿಸಬೇಕು ಎನ್ನುವುದು ನನ್ನ ಆಶಯ.

## ಹೊಸ ರಂಗಭಾಷೆಯ ಕಟ್ಟಿಕೊಳ್ಳುವಿಕೆ

ರಂಗಭಾಷೆ ಅಂದ್ರೆ ಸಂಭಾಷಣೆ, ರಂಗಕ್ರಿಯೆ, ವಿನ್ಯಾಸ, ತಂತ್ರ ಇವೆಲ್ಲವುಗಳ ಹಿತಮಿತವಾದ ಒಂದು ಜಾಣ್ಮೆಯ ನೇಯ್ಗೆ, ಇವು ಒಂದಕ್ಕೊಂದು ಸಂಧಿಸುವುದು, ಬೆಸೆದುಕೊಳ್ಳುವುದು ಪೂರಣಕಟ್ಟುವುದು ಅಪರೂಪಕ್ಕೆ ಒಲಿಯುವ ಒಂದು ಅದ್ಭುತ ಸಿದ್ಧಿ. ಹಾಗಾಗಿ ರಂಗಭಾಷೆ ಯಾವತ್ತೂ ಬುದ್ಧಿ ಭಾವಗಳ ಲಗಾಮನ್ನು ಔಚಿತ್ರಪೂರ್ಣವಾಗಿ ಜಗ್ಗಬಲ್ಲ, ಬೇಕಾದಲ್ಲಿ ಸಡಿಲಗೊಳಿಸಬಲ್ಲ, ಕಥೆಯ ಆಳಗರ್ಭದಲ್ಲಿರುವ ಅದರ ನಾಡಿಮಿಡಿತಕ್ಕೂ ಕಿವಿಯಾನಿಸಬಲ್ಲ ಚುರುಕು ಸಂವೇದನಾಶೀಲ ನಿರ್ದೇಶಕನಿಗೆ ದಕ್ಕುವ ಪರಮತಾಳ್ಮೆಯ ಕುಸುರಿಕೆಲಸ ಅಂತ ನನ್ನ ಅಭಿಪ್ರಾಯ. ಆದರೆ ಅನೇಕ ಸಲ ರಂಗಸಜ್ಜಿಕೆಗಳ ಅಬ್ಬರ, ಶ್ರೀಮಂತಿಕೆ; ಇನ್ನು ಕೆಲವು ಸಲ ವಿದ್ಯುತ್ ಮತ್ತು ವಿದ್ಯುನ್ಮಾನ ಸಲಕರಣೆಗಳ ಅತಿಯಾದ ಬಳಕೆ, ವೇಷಭೂಷಣಗಳ ಬೆಡಗು, ಮೆರುಗು; ವಿಸ್ಮಯ ಹುಟ್ಟಿಸುವಂತಹ ರಂಗತಂತ್ರಗಳು; ಬಿಂಕ ಬಿಗುಮಾನಗಳಿಂದ ಕೂಡಿದ ಮಡಿವಂತ ಭಾಷೆ; ಅತ್ಯಂತ ವಿಲಾಸ ರಂಗ ವಿನ್ಯಾಸಗಳು – ಇವುಗಳೇ ಮೇಲುಗೈ ಸಾಧಿಸಿ, ಅವೇ ರಂಗಪ್ರಯೋಗದ ಯಶಸ್ಸಿನ, ಹೆಗ್ಗಳಿಕೆಯ ಮಾನದಂಡವೂ ಆಗಿಬಿಡುವ ಅಪಾಯವಿರುತ್ತದೆ. ಸಮಕಾಲೀನ ರಂಗಭೂಮಿ ಆರಂಭದ ದಿನಗಳಿಂದಲೂ ಶೋಷಿತರ, ನೊಂದವರ, ಕಳೆದುಕೊಂಡವರ, ಕಷ್ಟಜೀವಿಗಳ ನೋವು, ಹತಾಶೆ, ಅಸಹಾಯಕತೆಗಳಿಗೆ ಧ್ವನಿಯಾಗುತ್ತಾ ಬಂದಿದೆ. ಹೀಗಾಗಿ ವಸ್ತುರೂಪದ ಹಾಗೂ ತಾಂತ್ರಿಕ ಸ್ವರೂಪದ ಶ್ರೀಮಂತಿಕೆಗಳಿಂದ ಮುಕ್ತವಾದಷ್ಟೂ ಅದು ನೋಡುಗನ ನೋಟಕ್ಕೆ, ಅನುಭವಲೋಕಕ್ಕೆ, ಸ್ಪರ್ಶ, ರುಚಿ, ಗ್ರಹಿಕೆಗಳಿಗೆ ಹತ್ತಿರವಾಗಲಿಕ್ಕೆ ಸಾಧ್ಯ. ಹೀಗೆ ಮುಕ್ತವಾದಷ್ಟೂ ರಂಗದ ಮೇಲಿನ ಪಾತ್ರಗಳ ವ್ಯವಹಾರ, ಮೌಲ್ಯ ಸಂಘರ್ಷ, ಸೋಲು ಗೆಲುವುಗಳಲ್ಲಿ ಸಾಮಾನ್ಯ ನೋಡುಗನಿಗೆ ನಿತ್ಯ ಜೀವಿತದ ಬೇಗುದಿಗಳ ಬಿಂಬ ಹೆಚ್ಚು ನಿಚ್ಚಳವಾಗಿ ಕಾಣಲು ಸಾಧ್ಯ. ರಂಗದ ಮೇಲೆ ಇರುವ ಪಾತ್ರಗಳ ಮೌಲ್ಯ ಶ್ರೀಮಂತಿಕೆ, ಅವುಗಳ ಮಾನವೀಯ ಸದ್ವರ್ತನೆಗಳು, ಸಕಾರಾತ್ಮಕ ಮನೋಧರ್ಮಗಳು, ನೈತಿಕ ಗೆಲುವು. ಇವು ನಾವೂ ಕೂಡ ಏರಬಹುದಾದ ಕೈಗೆಟುಕುವ ಎತ್ತರದಲ್ಲಿದೆ ಎಂಬ ವಿಶ್ವಾಸವನ್ನು ಕಟ್ಟಿಕೊಡಬೇಕಾದದ್ದು ಮುಂದಿನ ದಿನಗಳಲ್ಲಿ ಸಮಕಾಲೀನ ರಂಗಭೂಮಿಯ ಪ್ರಮುಖ ಹೊಣೆಗಾರಿಕೆ. ವಸ್ತುರೂಪದ, ತಾಂತ್ರಿಕ ರೂಪದ ಶ್ರೀಮಂತಿಕೆಗಳೇ ಪಾತ್ರಗಳ ಒಳಗೆ ಇಣುಕಿ ನಮ್ಮ ಸಾಮಾಜಿಕ ಬದುಕಿನ ಗತಿಬಿಂಬಗಳನ್ನು ನೋಡಲಿಕ್ಕೆ ಒಂದು ಮಾನಸಿಕ ತೊಡಕಾಗುತ್ತದೋ ಏನೋ ಎಂಬುದು ಪ್ರೇಕ್ಷಕನಾಗಿ ನನ್ನ ಅನುಭವ. ಆಧುನಿಕ ರಂಗಭೂಮಿ ತನ್ನ ದೈಹಿಕ ಸ್ವರೂಪ, ವ್ಯಕ್ತಿತ್ವಗಳಲ್ಲಿ ಆದಷ್ಟು ಸರಳವಾಗುತ್ತಾ ಆದರೆ ಅದರ ಮಾನಸಿಕ ವ್ಯಕ್ತಿತ್ವದಲ್ಲಿ ಇನ್ನಷ್ಟು ಪಕ್ವವಾಗುತ್ತಾ ನಿರಂಹಕಾರಿಯಾಗುತ್ತಾ, ಸೂಕ್ಷ್ಮಸಂವೇದಿಯಾಗುತ್ತಾ ಬೆಳೆದರೆ ಅದು ನಿಜಕ್ಕೂ

ಸ್ವಾಗತಾರ್ಹ ಭಾರತೀಯ ಸಂಸ್ಕೃತಿಯ ತಾತ್ವಿಕತೆಯಲ್ಲೇ, ಒಟ್ಟು ಮನೋಧರ್ಮದಲ್ಲೇ ಒಂದು ಸರಳಿಕೆಯ ಮೆಲುನುಡಿಯಿದೆ. ಅದು ವೈಭೋಗಕ್ಕೆ ಕಟ್ಟು ಬಿದ್ದದ್ದಲ್ಲ. ಹೀಗಾಗಿ ಸಮಕಾಲೀನ ರಂಗಭೂಮಿ ತನ್ನ ರಂಗಭಾಷೆಯನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಲ್ಲೇ ಒಂದು ಸರಳ, ಗಂಭೀರ ನೇಯ್ಗೆಯ ಕೆಲಸ ನಡೆಯಬೇಕು. ಅದು ನಟನಟಿಯರ ದೈಹಿಕ ಕಸುವಿನಲ್ಲಿ, ಬಾಗು ಬಳುಕುವಿಕೆಗಳಲ್ಲಿ ಪ್ರಜ್ಞಾವಂತ ಮಾತುಗಾರಿಕೆಯ ಓಘ, ವೇಗಗಳಲ್ಲಿ, ಲವಲವಿಕೆಯಲ್ಲಿ, ಮೌನದಲ್ಲಿ ನಾಟಕದ ತಾರ್ಕಿಕ ಅಂತ್ಯವನ್ನು ಸಮರ್ಥಿಸುವಂತಹ ರಂಗಚಲನೆಗಳ ಸರಳ ಗತಿಯಲ್ಲಿ, ಮುಖ್ಯವಾಗಿ ನಾಟಕಕಾರನ ಸಾಮಾಜಿಕ ಕಳಕಳಿಯಲ್ಲಿ ಹೆಚ್ಚಿ ನಂಬಿಕೆಯಿಡಬೇಕು. ಆಪ್ತ ರಂಗಭೂಮಿ, ರಿಕ್ತರಂಗಭೂಮಿಗಳ ಸೈದ್ಧಾಂತಿಕ ಒಳನೋಟಗಳು ಹಾಗೂ ಬೀದಿನಾಟಕಗಳ ನಿರೂಪಣಾ ವೈಖರಿಗಳು ಮೇಳೈಸಿದ ಸಮಾಜಮುಖಿ ರಂಗಪ್ರಯೋಗಗಳು ಮುಂದಿನ ದಿನಗಳಲ್ಲಿ ಒಂದು ಆಂದೋಲನೋಪಾದಿಯಲ್ಲಿ ಬೆಳೆದು ಸುಪುಷ್ಟಿಗೊಳ್ಳಬೇಕು.

## ಮಕ್ಕಳರಂಗಭೂಮಿ ಎಂಬ ಅತಿಸೂಕ್ಷ್ಮವಲಯ

ಇಂದು ಅತ್ಯಂತ ಗಂಭೀರವಾಗಿ ಮತ್ತು ಭಾವ ಸೂಕ್ಷ್ಮತೆಗಳೊಂದಿಗೆ ಕಟ್ಟಬೇಕಾಗಿರುವುದು ಮಕ್ಕಳ ರಂಗಭೂಮಿಯನ್ನು. ರಂಗಭೂಮಿ ಮಕ್ಕಳ ಪಾಲಿಗೆ ಅವರ ಮೋಜಿನ ಲೋಕದ, ಕನಸಿನ ಲೋಕದ, ಅದಮ್ಯ ಉತ್ಸಾಹಗಳ, ಕೊನೆಯಿಲ್ಲದ ಕುತೂಹಲಗಳ, ಗ್ರಹಣಸೂಕ್ಷ್ಮತೆಗಳ ಒಂದು ವಿಸ್ತರಣಾ ರೂಪವಾಗಬೇಕು. ಹೇಗಾದರೂ ಮಾಡಿ ಎಲ್ಲರ ಗಮನ ಸೆಳೆದುಕೊಂಡು ಮುದ್ದಿನ, ಪ್ರೀತಿಯ, ಆಕರ್ಷಣೆಯ ಕೇಂದ್ರವಾಗುವ ಹಂಬಲ, ರಚ್ಚೆ ಹಿಡಿದು ಹಠ ಸಾಧಿಸಿಕೊಳ್ಳುವ ತುಂಟತನ, ಅನುಕರಣೆ ಮೂಲಕ ತನ್ನದಲ್ಲದ ಬೇರೆ ವ್ಯಕ್ತಿತ್ವದ ಪೋಷಾಕಿನೊಳಗೆ ನುಸುಳಿ ಮಜಾ ನೋಡುವ ಸ್ವಭಾವ, ಆದಷ್ಟು ಬೇಗ ತೀರಾ ದೊಡ್ಡವರಾಗಿ ಬಿಡುವ ಕಾತುರ, ಹಿರಿಯ ತಲೆಮಾರನ್ನು ಒಲಿಸಿಕೊಳ್ಳುವ ಪರಿ ಮತ್ತು ಅದಕ್ಕಾಗಿ ಅವರು ರೂಢಿಸಿಕೊಂಡಿರುವ ವೈಯ್ಯಾರ, ಬಿನ್ನಾಣ – ಇವುಗಳಲ್ಲೇ ನಾಟಕೀಯತೆಯ ಒಂದು ರಮ್ಯ ಲಯದ ಕಂಪನ ಹುದುಗಿರುತ್ತದೆ. ಹೀಗಾಗಿ ಇಂತಹ ಬಾಲ್ಯ ಸಹಜ ಜೀವಂತಿಕೆಯ ಪ್ರವಾಹಕ್ಕೆ ಒಂದು ಸರಿಯಾದ ದಿಕ್ಕು ತೋರಿಸುವ ಸೃಜನಶೀಲ ಕೆಲಸ ಮಕ್ಕಳ ರಂಗಭೂಮಿಯಲ್ಲಿ ನಡೆಯಬೇಕು. ಆದ್ರೆ ಅನೇಕ ಸಲ ಮಕ್ಕಳು ಸ್ಪರ್ಧೆಗಳ ಮತ್ತು ಹಿರಿಯ ತಲೆಮಾರಿನ ಪ್ರೌಢಯೋಚನಾಕ್ರಮಗಳ ಬಲಿಪಶುಗಳಾಗಿ ಬಿಡುತ್ತಾರೆ. ಅದೇ ದುರಂತ. ಆಕರ್ಷಕವಾಗಬೇಕು, ವಿಸ್ಮಯ ಹುಟ್ಟಿಸಬೇಕು. ರೋಮಾಂಚಿತಗೊಳಿಸಬೇಕು ಮತ್ತು ಇವೆಲ್ಲದರ ಮೂಲಕ ಸ್ಪರ್ಧೆಗೆಲ್ಲಬೇಕು ಎಂಬ ತರಾತುರಿಯಲ್ಲಿ ಮಕ್ಕಳು ಅನೇಕ ಸಲ ನಿರ್ದೇಶಕರ ಕೈಗೊಂಬೆಗಳಾಗಿ ಉಳಿದುಬಿಡುತ್ತಾರೆ. ತಮ್ಮ ಅನುಭವಲೋಕಕ್ಕೆ,

ವಯೋಸಹಜಲಯಕ್ಕೆ ಮೀರಿದ ಮಾತುಗಳಿಗೆ ರಂಗಚಲನೆಗಳಿಗೆ ಮಕ್ಕಳು ಜೀವತುಂಬುವಾಗ ಅದರಿಂದ ಒಂದು ಬಗೆ ಅಸಹನೀಯ ರಸನಿಷ್ಪತ್ತಿಯಾಗುತ್ತದೆ. ರಂಗಭೂಮಿ ಮಕ್ಕಳ ಒಳಗನ್ನು, ಅಂತರ್ಯವನ್ನು ಇನ್ನಷ್ಟು ಆರ್ದ್ರಗೊಳಿಸಲಿಕ್ಕೆ, ಸಮೃದ್ಧಗೊಳಿಸಲಿಕ್ಕೆ, ಶಕ್ತಿ ದೌರ್ಬಲ್ಯಗಳ ಅಂತರವಲೋಕನಕ್ಕೆ ಒಂದು ಆಟದ ಬಯಲಿನಂತಹಾ ನಿರಾಳ ನಿರುಮ್ಮಳ ವೇದಿಕೆಯಾಗಬೇಕು. ನಾಟಕದೊಳಗಿರುವ democracyಯನ್ನು ಮಕ್ಕಳು ಒಪ್ಪಿಕೊಳ್ಳುವ, ಅದಕ್ಕೆ ನಿರ್ವಂಚನೆಯಿಂದ ಬದ್ಧರಾಗುವ ಪರಿಯೇ ಒಂದು ಅತ್ಯಂತ ರಂಜನೀಯ ಶಿಕ್ಷಣ ಮಾಧ್ಯಮ ಅಂತ ನನ್ನ ಭಾವನೆ. ನಾಟಕದೊಳಗೆ ಒಂದು ಚಿಕ್ಕಪಾತ್ರಕ್ಕೂ ಅದರದ್ದೇ ಆದ ಘನತೆ ಇದೆ ಎಂಬ ಪಾಠ, ಭಿನ್ನತೆಗಳನ್ನು ಸಹಿಸಿಕೊಳ್ಳುವ ಸಹನೆಯ ಪಾಠ, ಇತರರ ಅನನ್ಯತೆಗಳನ್ನು ಪ್ರಶಂಸಿಸುವ ಪಾಠ. ಪರಸ್ಪರ ತಾರ್ಕಿಕ ಸಂಬಂಧವಿರುವ ಮಾತು, ದೃಶ್ಯಗಳನ್ನು ಕಟ್ಟುವ, ನೇಯುವ ಸಂರಚನಾ ಕೌಶಲ್ಯದ ಪಾಠ – ಯಾವುದೋ ಒಂದು ಉದ್ದೇಶ ಸಾಧನೆಗೆ ಅಂತರಗಳನ್ನು ಮರೆತು ಕೈಜೋಡಿಸುವ ಹೃದಯ ವೈಶಾಲ್ಯದ ಪಾಠ – ಇವೆಲ್ಲವನ್ನು ಕಲಿಸಿಕೊಡುವ ರಂಗಭೂಮಿ ಶಿಕ್ಷಣದ ಒಂದು ಸೃಜನಶೀಲ ಮೂಲ ಅಥವಾ ಅದೇ ಒಂದು ಸಶಕ್ತ ಶಿಕ್ಷಣ ಮಾಧ್ಯಮ ಅಂದರೂ ಅತಿಶಯೋಕ್ತಿಯಾಗಲಾರದು. ಈ ಎಲ್ಲಾ ಕಾರಣಗಳಿಗಾಗಿ ಮಕ್ಕಳ ರಂಗಭೂಮಿಯನ್ನು ಮುಂದಿನ ದಿನಗಳಲ್ಲಿ ಅದರ ಎಲ್ಲಾ ಮುಗ್ಧ, ಸ್ನಿಗ್ಧ ನಯ ನಾಜೂಕು ಸೂಕ್ಷ್ಮಗಳೊಂದಿಗೆ ದುಡಿಸಿಕೊಳ್ಳುವ ಅಪಾರ ಸಾಧ್ಯತೆಗಳ ಕಡೆಗೆ ನಾವು ಯೋಚಿಸಬೇಕು. ಗಾಂಧಿತಾತ, ಭಗತ್‌ಸಿಂಗ್, ನೇತಾಜಿ, ಬುದ್ಧ, ಬಸವಣ್ಣ, ಮಹಾಭಾರತದ ಭೀಮ, ಅರ್ಜುನ, ಕೃಷ್ಣ ರಾಮಾಯಣದ ರಾಮ, ಸೀತೆ, ಹನುಮಂತ– ಹೀಗೆ ಹೆಚ್ಚಿನ ಎಲ್ಲಾ ಪಾತ್ರಗಳಿಗೆ ಮಕ್ಕಳ ರಂಗಭೂಮಿಗೆ ಒಗ್ಗಿಕೊಳ್ಳುವ, ಮೊಣಕಾಲೂರಿ ಮಕ್ಕಳ ಮಟ್ಟಕ್ಕೆ ಇಳಿಯಬಲ್ಲ ಆಯಾಮವಿದೆ ಮತ್ತು ಮಕ್ಕಳು ಹೆಚ್ಚಿನಬಾರಿ ನಿರ್ವಂಚನೆಯಿಂದ ನಾಟಕದ ಪಾತ್ರಗಳ ಸತ್ಯ, ಕರುಣೆ, ಅಹಿಂಸೆಯಂತಹ ಆದರ್ಶಗಳನ್ನು ಅಪ್ರಜ್ಞಾಪೂರ್ವಕವಾಗಿ ನಿಜ ಬದುಕಿನಲ್ಲಿ ಬದುಕುವ ಮುದ್ದು ಮುದ್ದು ಸಾಹಸಕ್ಕೆ ಕೈಹಾಕುತ್ತಾರೆ. ಇದು ಮಕ್ಕಳ ರಂಗಭೂಮಿಯ ಬಲು ದೊಡ್ಡ ಹೆಗ್ಗಳಿಕೆ. ಏಕೆಂದರೆ ಒಳ್ಳೆಯ ಸಂಸ್ಕಾರಗಳು ವ್ಯಕ್ತಿತ್ವದೊಳಕ್ಕೆ ಇಳಿದು ಪುಟ್ಟ ವ್ಯಕ್ತಿತ್ವಗಳು ಕಳೆಗಟ್ಟುವ ಈ ದೈವಿಕ ಕ್ರಿಯೆ ಸಶಕ್ತವಾಗಿ ನಡೆಯುವುದು ನಾಟಕದ ವೇದಿಕೆಯಲ್ಲಿ ಇದು ಹೆಚ್ಚು ಹೆಚ್ಚು ಘಟಿಸಬೇಕಾದರೆ ಮಕ್ಕಳ ರಂಗಪಠ್ಯಗಳಿಗೆ ಮಾನವೀಯ ಸ್ಪರ್ಶ ನೀಡುವುದು ಮುಖ್ಯವಾಗುತ್ತದೆ. ಇಂದಿನ ಸಿನೆಮಾ, ಟೆಲಿವಿಷನ್ ನಂತಹ ದೃಶ್ಯಮಾಧ್ಯಮಗಳು ಹಿಂಸೆ, ಯುದ್ಧ, ಕುತಂತ್ರ, ಸಾವು, ಸ್ಪರ್ಧೆ, ರಕ್ತಪಾತಗಳನ್ನೂ ರಂಜನೀಯ ಎಂಬಂತೆ, ನಾಲಗೆ ಚಪ್ಪರಿಸುವಂತೆ ಬಿಂಬಿಸುತ್ತಿರುವಾಗ, ಮಕ್ಕಳ ಹಸಿಮನಸ್ಸು ಬಲುಬೇಗ ಅದರ ಸೆಳವಿಗೆ ಬೀಳುತ್ತಿರುವ ವಿಕ್ಷಿಪ್ತ ಕಾಲಘಟ್ಟದಲ್ಲಿ ಅದಕ್ಕೆ ಪ್ರತಿಯಾಗಿ ಹಿಂಸೆಯಿಂದ

ಮುಕ್ತವಾದ, ಮಾನವೀಯ ಹೃದಯವಂತ ಕಥಾನಕಗಳನ್ನು ಸಿಹಿಲೇಪಿಸಿ, ರಂಗುಹಚ್ಚಿ ಅವರ ಮನೋವೇದಿಕೆಯತ್ತ ಸ್ವಚ್ಛಂದವಾಗಿ ವಿಹರಿಸಲು ಬಿಡುವ ಪ್ರಜ್ಞಾವಂತ ಪ್ರಯತ್ನಗಳು ಮಕ್ಕಳ ರಂಗಭೂಮಿಯಲ್ಲಿ ನಡೆಯಬೇಕು.

ನಾಟಕದ ಕೊನೆಯ ದೃಶ್ಯದಲ್ಲಿ ವಿಷದ ಹಲ್ಲಿನ ಭಯಂಕರ ರಾಕ್ಷಸನನ್ನೂ ಕ್ಷಮಿಸಿಬಿಡುವ ಬಿಳಿಕುದುರೆ ರಾಜಕುವರಾರರು, ಕಾಡಿನಲ್ಲಿ ದಾರಿತಪ್ಪಿದ ರಾಜಕುಮಾರಿಯನ್ನು ಸಹ ಬೆಚ್ಚಗೆ ಗುಹೆಯೊಳಗೆ ಮಲಗಿಸಿಕೊಳ್ಳುವ ಹುಲಿ, ಸಿಂಹ, ಕರಡಿಗಳು; ಕೊಕ್ಕು ಮುರಿದ ಕಾಗೆಯ ಬಗ್ಗೆ 'ಪಾಪ' ಎಂದೆನಿಸಿ ಗೂಡೊಳಗೆ ಕರೆಯುವ ಗುಬ್ಬಚ್ಚಿಗಳು ಹೆಚ್ಚು ಹೆಚ್ಚಾಗಿ ಮಕ್ಕಳ ರಂಗಪಠ್ಯದಲ್ಲಿ ಹುಟ್ಟಿಕೊಳ್ಳಬೇಕು. ಗಾಂಧಿ ಭಗತ್‌ಸಿಂಗ್ ಬಸವಣ್ಣನಂತವರು ನಾಟಕಗಳಲ್ಲಿ ಸಾಯದೆ ನಿತ್ಯಚಿರಂಜೀವಿಗಳಾಗಿ ಉಳಿದುಬಿಡಬೇಕು. ಆಯುಧಗಳಿಲ್ಲದೆ ಸಮಸ್ಯೆ ಬಗೆಹರಿಸಿಕೊಳ್ಳುವ, ಯುದ್ಧಗೆಲ್ಲುವ ಬದಲು ಮನಸ್ಸು ಗೆಲ್ಲುವ ಹಠಕ್ಕಿಂತಲೂ ಸೋಲುವ ಸುಖ ಕಲಿಸುವ, ಬಾಚಿಕೊಳ್ಳುವ ಹಪಹಪಿಗಿಂತ ಬಿಟ್ಟುಕೊಡುವ ಸಂಯಮ ಕಲಿಸುವ, ಸಿಟ್ಟಿನ ಬಿಗುಮಾನ ಬಿಟ್ಟು ನಗುವಿನ ಕಚಗುಳಿ ಕಲಿಸುವ , 'Means should justify the ends' ಅಂದ ಗಾಂಧಿತಾತ ನೆನಪಾಗುವ ಹೊಸ ಹೊಸ ಕಥಾನಕಗಳ ದೈವಿಕ ಮಾನವೀಯ ಲೋಕ ರಂಗಪ್ರಯೋಗಗಳಲ್ಲಿ ಗೆದ್ದು ಬರಬೇಕು, ಮಕ್ಕಳ ಹಿತಕ್ಕಾಗಿ, ಸಮಷ್ಟಿಯ ಸೌಖ್ಯಕ್ಕಾಗಿ, ಸಮಾಜದ ಆರೋಗ್ಯಕ್ಕಾಗಿ, ಭವಿಷ್ಯದ ನಗುವಿಗಾಗಿ ನಾವದನ್ನು ಗೆಲ್ಲಿಸಲೇಬೇಕು. ಬೀದಿಬದಿಯ ಒಂದು ಮರಕಡಿದಾಗ, ಬೇಟೆಗೆ ಬಲಿಯಾಗಿ ಪ್ರಾಣಿ ಪಕ್ಷಿಗಳು ಸತ್ತಾಗ, ಕೊನೆಗೆ ಸುಖಾಸುಮ್ಮನೆ ಒಂದು ಚಿಟ್ಟೆ ಸತ್ತರೂ ಮಕ್ಕಳು ತಾವಾಡಿದ ನಾಟಕದ ಒಂದು ಪಾತ್ರವೇ ಸತ್ತಷ್ಟು ಭಾವುಕರಾಗುವುದನ್ನು ಅವರ ಕರುಳುಕಿವಿಚಿ ಬರುವುದನ್ನು ನಾನು ತೀರಾ ಹತ್ತಿರದಿಂದ ನೋಡಿದ್ದೇನೆ. ಈಗಿನ ದಿನಗಳಲ್ಲಿ ಆ ಬಗೆಯಲ್ಲಿ ನಿಸರ್ಗವನ್ನು ತಬ್ಬಿಕೊಳ್ಳಲು ಮಕ್ಕಳಲ್ಲದೆ ಬೇರೆ ಯಾರಿಗೆ ಸಾಧ್ಯ? ಈ ಬಗೆಯ ಸಂಸ್ಕಾರ ಕಲಿಸಿಕೊಡುವ ಮಕ್ಕಳ ರಂಗಭುಮಿಯ ಅನಂತ ಸಾಧ್ಯತೆಗಳ ಕುರಿತು ಯೋಚಿಸುವಾಗ ಅದರೆಡೆಗಿನ ಸೆಳವು ಇನ್ನಷ್ಟು ಜಾಸ್ತಿಯಾಗುತ್ತದೆ. ಹಾಗಾಗಿ ಯಾರೇ ಆಗಲಿ ಮಕ್ಕಳ ನಗುವನ್ನು ಸ್ವಾತಂತ್ರ್ಯವನ್ನು ಮುಕ್ಕಾಗದಂತೆ ಉಳಿಸಿಕೊಂಡೇ ಅದರ ಸಾಹಸಕ್ಕೆ ಕೈಹಾಕಬೇಕು. ಈ ಮಕ್ಕಳ ರಂಗಭೂಮಿಯಿಂದ ದೊಡ್ಡವರ ಘನಗಂಭೀರ ಜಗತ್ತಿಗೆ ಕಲಿಸಿಕೊಡುವುದೂ ಸಾಕಷ್ಟಿದೆ. ತಮ್ಮ ಪಾಲಿನ ದೊಡ್ಡ ದೊಡ್ಡ ಸೋಲು, ಅವಮಾನಗಳನ್ನೂ ಮರೆತು ಮಕ್ಕಳು ಮರುಕ್ಷಣದಲ್ಲೇ ಹೊಸ ಖುಷಿಯ ಹುಡುಕಾಟಕ್ಕೆ ಅಣಿಯಾಗಿ ಬಿಡುತ್ತಾರೆ. ಕೈ ಎತ್ತಿ ನಿಂತ Laughing Budhaನ ಮೂರ್ತಿಯ ಹಾಗೆ. ಮಕ್ಕಳ ರಂಗಭೂಮಿ ನಮ್ಮೆಲ್ಲರ ಬದುಕಿನಲ್ಲಿ ಅಮೃತವಾಹಿನಿಯಾಗಿ ಹರಿಯಬೇಕಾದ ಅಲ್ಪತೃಪ್ತಿಯ ಸಣ್ಣ ಖುಷಿಗಳ ಚುಂಬಕಲೋಕದತ್ತ ಮತ್ತೆ ಮತ್ತೆ ಬೊಟ್ಟು ಮಾಡಿ ತೋರಿಸುತ್ತದೆ.

## ದೃಶ್ಯಮಾಧ್ಯಮಗಳು ಮತ್ತು ರಂಗಭೂಮಿಯ ಮುಖಾಮುಖಿ

ಕಳೆದ ಸುಮಾರು ಒಂದು ದಶಕದ ಈಚೆಗೆ ನಮ್ಮ ಯೋಚನೆಗಳ ಸಾಚಾತನವನ್ನು, ಜೀವನದೃಷ್ಟಿಯ ವೈಶಾಲ್ಯತೆಯನ್ನು, ಮತ್ತು ನಂಬಿಕೆಗಳ ಮೌಲ್ಯ ಸಂಪನ್ನತೆಯನ್ನು ದಿಕ್ಕುತಪ್ಪಿಸುವ ಮಟ್ಟಿಗೆ ಟಿ.ವಿ. ಸಿನೇಮಾದಂತಹ ದೃಶ್ಯ ಮಾಧ್ಯಮಗಳು ಬೆಳೆದುಬಿಟ್ಟಿವೆ. ಒಂದು ದೊಡ್ಡ ಯುಗಧರ್ಮವೇ ಟಿ.ವಿ. ಪರದೆಯ ಎದುರು ಅವಾಕ್ಕಾಗಿ ನಿಂತು. ಸಮ್ಮೋಹನಗೊಂಡು ಕ್ರಮೇಣ ಜಡ್ಡುಗಟ್ಟಿ ಛಿದ್ರವಾಗಿ ಹೋಗುತ್ತಿರುವ ದುರಂತ ಚಿತ್ರ ಇದು. ಟಿ.ವಿ. ಪರದೆಯ ಮೂಲಕ ನಿರೂಪಿತವಾದ ವಿಕೃತಗೊಂಡ ಅಸಹಜ ಜಗತ್ತೊಂದು ನಿಧಾನಕ್ಕೆ ನಮ್ಮೊಳಗೆ ಇಳಿದು, ಹಬ್ಬಿ ಹರಡಿ ನಮ್ಮನ್ನೇ ಆಳುವ ಪರಿ, ಅರಿವಿಗೇ ಬಾರದ ಹಾಗೆ ಆವರಿಸಿಕೊಳ್ಳುವ ಪರಿ ವಿಸ್ಮಯ ಹುಟ್ಟಿಸುವಂತದ್ದು. ಪ್ರತಿನಿತ್ಯ ಸಮಾಜದ ಹಿಂಸೆಯನ್ನು, ದಾರಿದ್ರ್ಯವನ್ನು, ಲಂಪಟತನವನ್ನು, ವಿಲಾಸವನ್ನು, ಲೋಲುಪತೆಯನ್ನು, ಕೊನೆಗೆ ವಿರಕ್ತಿಯನ್ನೂ ಸಹ ಅತಿವಿಜೃಂಭಿತ, ಉತ್ಪ್ರೇಕ್ಷಿತ ನಿರೂಪಣೆಗಳ ಜೊತೆಗೆ, ಕಣ್ಣಿಗೆ ರಾಚುವ ಬಣ್ಣಗಳೊಂದಿಗೆ ಸಮಾಜದ ಮನಸ್ಸಿಗೆ ದಾಟಿಸುವ ಕೆಲಸವನ್ನು ಟಿ.ವಿ. ಸಿನೇಮಾ ಮಾಧ್ಯಮಗಳು ವ್ಯವಸ್ಥಿತವಾಗಿ ನಡೆಸಿಕೊಂಡು ಬರುತ್ತಿವೆ. ಇಲ್ಲಿ ಪ್ರೇಮ, ಕಾಮ, ಸಿಟ್ಟು, ಸ್ವೇಚ್ಛೆ, ಔದಾರ್ಯ ಸಜ್ಜನಿಕೆ ಇವೆಲ್ಲವುಗಳೂ ಉನ್ಮತ್ತ, ಉದ್ರೇಕಿತ ಅತಿರೇಕದ ಸ್ಥಿತಿಯಲ್ಲೇ ಇರುತ್ತವೆ. ಏಕೆಂದರೆ ಇವೆಲ್ಲವುಗಳಿಗೆ ಒಂದು ಮಾರುಕಟ್ಟೆ ಇದೆ. ಒಂದು ದರ ಇದೆ. ಹಾಗಾಗಿ ಅವುಗಳನ್ನು ಅಲಂಕರಿಸಿ ಹಸಿಬಿಸಿಯಾಗಿಯೇ ಉಣಬಡಿಸಬೇಕಾಗುತ್ತದೆ. ಕೆಲವು ಬಾರಿ ಟಿ.ವಿ. ರಿಯಾಲಿಟಿ ಷೋಗಳಲ್ಲಿ ತೀರ್ಪುಗಾರರು ತೋರಿಸುವ ಸಿಟ್ಟು, ಅಹಂಕಾರ, ಅಸೂಯೆ, ಲಜ್ಜೆಗೇಡಿತನಗಳೂ ಕೂಡ ನಿರ್ವಿವಾದವಾಗಿ ಪುರಸ್ಕರಿತಗೊಂಡು ಸ್ವೀಕಾರಾರ್ಹವಾಗಿ ಬಿಡುವುದು ಮತ್ತು ಅದೆಷ್ಟೋ ವೀಕ್ಷಕರಿಗೆ ಅದೇ 'ಒಪ್ಪಿತವಾದದ್ದು' ಎಂದೆನಿಸಿ ಬಿಡುವುದು ಅದರ ಅತಿರೇಕಕ್ಕೆ ಒಂದು ಉದಾಹರಣೆ. ಹೀಗೆ ಹಿಂಸೆಯ ಮತ್ತು ಸ್ವೇಚ್ಛೆಯ ರುಚಿ ಹತ್ತಿಸಿಕೊಂಡ ಮನಸ್ಸುಗಳಿಗೆ ಭಗ್ನಸಂಬಂಧಗಳ ಒಡಕಲು ಸಮಾಜವೇ ಸಹಜ ಮತ್ತು ಸಾಮಾನ್ಯ ಸ್ಥಿತಿಯಾಗಿ ಕಾಣುವ ಅಪಾಯವಿದೆ ಹಾಗೂ ಜಗತ್ತು ಹೀಗೆ ವಿಸ್ತರಣೆಗೊಳ್ಳುವುದನ್ನೇ ಅವರು ಮತ್ತೆ ಮತ್ತೆ ಎದುರು ನೋಡುವ ಸ್ಥಿತಿಗೆ ತಲುಪಿಬಿಡುತ್ತಾರೆ. ಇಂತಹ ಒಂದು ದೊಡ್ಡ ಜೀವಾವಧಿ ಗ್ರಾಹಾಕ ಸಮುದಾಯವನ್ನು, ಹೊಂದಿರುವ ಟಿ.ವಿ. ತನ್ನ ಹೊಸತಂತ್ರಗಾರಿಕೆಗಳಿಂದ ಭಯವನ್ನು ಮಾರಿ ಅದನ್ನೇ ನಗದು ಮಾಡಿಕೊಳ್ಳುವ ವ್ಯಾಪಾರವನ್ನು ಇನ್ನಷ್ಟು ಬಲಗೊಳಿಸುತ್ತಿದೆ. ಇಂತಹ ಹುನ್ನಾರಗಳ ಒಂದು ದೊಡ್ಡ ವಿಷವರ್ತುಲದ ಮಧ್ಯೆ ರಂಗಭೂಮಿ ಇಲೆಕ್ಟ್ರಾನಿಕ್

ದೃಶ್ಯ ಮಾಧಯಮಕ್ಕೆ ಒಂದು ಪ್ರತಿವ್ಯವಸ್ಥೆಯಾಗಿ ತನ್ನನ್ನು ತಾನು ಕಟ್ಟಿಕೊಳ್ಳುವ ಅನಿವಾರ್ಯತೆ ಇದೆ.

ಬದುಕಿನ ಸಹಜ ಪ್ರಾಮಾಣಿಕ ಚಿತ್ರಗಳನ್ನು ಕಟ್ಟಿಕೊಡುವ ಭರವಸೆಯನ್ನು ಸಮಕಾಲೀನ ರಂಗಭೂಮಿ ನೀಡಬೇಕು. ಪ್ರಗತಿ ಅಂದ್ರೆ ಶ್ರೀಮಂತಿಕೆ, ಶ್ರೀಮಂತಿಕೆ ಅಂದ್ರೆ ಆಧುನಿಕತೆ, ಆಧುನಿಕತೆ ಅಂದ್ರೆ ವೈಭೋಗ, ವೈಭೋಗಕ್ಕಾಗಿ ಅಧಿಕಾರ, ಅಧಿಕಾರಕ್ಕಾಗಿ ಯುದ್ಧ ಎನ್ನುವ ಹಣಕೇಂದ್ರಿತ ಮಾನದಂಡಗಳ ಮೌಲ್ಯವ್ಯವಸ್ಥೆಯನ್ನೇ ರಂಗಭೂಮಿ ತರಾಟೆಗೆ ತೆಗೆದುಕೊಳ್ಳಬೇಕು. ಮನುಷ್ಯ ತನ್ನ ಆದಿಮ ಹಿಂಸಪ್ರವೃತ್ತಿಗಳನ್ನು ನಿಯಂತ್ರಿಸಿಕೊಳ್ಳಬಲ್ಲ, ಆತನಿಗೂ ಮನಸ್ಸು ಮಾಡಿದರೆ ತನ್ನ ಆಳ ಅಂತರ್ಯದಲ್ಲಿರುವ ಶಾಂತಿಯ ಲೋಕವನ್ನು ಕಠಿಣ ಉತ್ಖನನದಿಂದ ಸಾಕಾತ್ಕರಿಸಿಕೊಳ್ಳುವ ತಾಕತ್ತಿದೆ ಎಂಬ ನಂಬಿಕೆ ಹುಟ್ಟಿಸುವ ಹೊಸ ರಂಗ ಪಠ್ಯಗಳನ್ನು ನೇಯುವ ಕೆಲಸ ಇಂದು ನಡೆಯಬೇಕು. ಮನುಷ್ಯ ಮನುಷ್ಯನನ್ನು ದೇಶ, ಭಾಷೆ, ವರ್ಣ, ವರ್ಗಾತೀತವಾಗಿ ನೆಚ್ಚಿಕೊಳ್ಳುವುದೇ ನಾಗರಿಕತೆಯ ಅತ್ಯುನ್ನತ ಶಿಷ್ಟಾಚಾರ ಎಂಬುದನ್ನು ರಂಗಭೂಮಿ ಸಾಧಿಸಿ ತೋರಿಸಬೇಕು. ನಮ್ಮ ಅರೆಕೋರೆಗಳ ಅಂತರಾವಲೋಕನಕ್ಕೆ ಒಂದು ಕೈಗನ್ನಡಿಯಾಗಿ ಜೊತೆಜೊತೆಗೆ ನಾವು ಮಾನವೀಯವಾಗಿ ಏರಬಹುದಾದ ಭಾವಶ್ರೀಮಂತಿಕೆಯ ಹೊಸ ಎತ್ತರಗಳನ್ನು ದರ್ಶಿಸುವ ಮಾಧ್ಯಮವಾಗಿ ನಾವು ರಂಗಭೂಮಿಯನ್ನು ದುಡಿಸಿಕೊಳ್ಳಬೇಕು. ಸಮಾಜದ ದಾರಿದ್ರ್ಯಕ್ಕೆ, ಹಿಂಸೆಗೆ, ಭಾವಶುಷ್ಕತೆಗೆ, ಸಂವೇದನಾರಾಹಿತ್ಯ ಸ್ಥಿತಿಗೆ ಕಾರಣಗಳನ್ನು ಶೋಧಿಸುವ ಕಥಾನಕಗಳನ್ನು ರಂಗಭೂಮಿ ಕಟ್ಟಿಕೊಳ್ಳಬೇಕು.

## ಮಕ್ಕಳ ಅಭದ್ರತೆಗಳು ಮತ್ತು ರಂಗಭೂಮಿಯ ಹೊಣೆಗಾರಿಕೆ

ಕಳೆದ ಕೆಲವರ್ಷಗಳಲ್ಲಿ ಮಕ್ಕಳು ಅನುಭವಿಸುತ್ತಿರುವ ಅಭದ್ರತೆಗಳ, ಗೊಂದಲಗಳ ಮತ್ತು ಶೋಷಣೆಗಳ ಸ್ವರೂಪ ಬದಲಾಗಿದೆ. ನಮ್ಮ ನಗರಗಳಲ್ಲಿ ಚಿಕ್ಕ ಕುಟುಂಬಗಳ ಒಳಗೆ ಅತೀವ ಒಂಟಿತನ ಅನುಭವಿಸುತ್ತಾ ಬೆಳೆಯುವ ಮಕ್ಕಳಿದ್ದಾರೆ. ತಂದೆ ತಾಯಿಯರ ಜಗಳ ವೈಮನಸ್ಸುಗಳನ್ನು ಅದರ ಎಲ್ಲಾ ತೀವ್ರತೆ ತೀಕ್ಷ್ಣತೆಗಳೊಂದಿಗೆ ತೀರ ಹತ್ತಿರದಿಂದ ನೋಡಿ ಬೆಳೆಯುವ ಮಕ್ಕಳಿದ್ದಾರೆ. ತರಗತಿ ಕೋಣೆಗಳೊಳಗೆ ಉಸಿರುಗಟ್ಟುವ ಪಾಠಗಳು ಶಿಕ್ಷೆ ಎಂದೆನಿಸಿ ಪದೇ ಪದೇ ಸೋಲನುಭವಿಸುವ, ಅವಮಾನವನ್ನೇ ರೂಢಿಯಾಗಿಸಿಕೊಂಡ ಮಕ್ಕಳಿದ್ದಾರೆ. ಯಾರದ್ದೋ ಒತ್ತಾಯಕ್ಕೆ ತುತ್ತಾಗಿ ಅಂಕಗಳಿಕೆಯ ಸ್ಪರ್ಧೆಗೆ ತಳ್ಳಲ್ಪಟ್ಟ ಮಕ್ಕಳಿದ್ದಾರೆ. ತಮ್ಮ ಅನಂತ ಕುತೂಹಲಗಳಿಗೆ ಪ್ರಶ್ನೆಗಳಿಗೆ ಉತ್ತರ

ಸಿಗದೆ ಬಾಯಿಕಟ್ಟಹೋದ ಮಕ್ಕಳಿದ್ದಾರೆ. ಇನ್ನು ಟಿ.ವಿ. ಪರದೆಯ ಮುಂದೆ ಕೂತು ಅವಧಿಗೆ ಮುನ್ನವೇ ಮುಗ್ಧತೆ ಕಳೆದುಕೊಂಡ ಪ್ರೌಢಮಕ್ಕಳಿದ್ದಾರೆ. ಮತ್ತು ವಿಷಾದ ಅಂದ್ರೆ ಈ ಎಲ್ಲಾ ಭಿನ್ನ ಮಾನಸಿಕತೆಯ ಮಕ್ಕಳು ಸಮವಸ್ತ್ರಗಳ ಒಳಗೆ ಒಂದೇ ರೀತಿಯಾಗಿ ಕಾಣುತ್ತಾರೆ. ಇನ್ನೊಂದು ಕಡೆ ಗ್ರಾಮೀಣ ಪ್ರದೇಶಕ್ಕೆ ಬಂದರೆ ತಂದೆ ತಾಯಿಯ ಕಡುಬಡತನವನ್ನು ಅದರ ಎಲ್ಲಾ ಅಸಹಾಯಕತೆಗಳೊಂದಿಗೆ ಬಿಕ್ಕಿ ಬಿಕ್ಕಿ ಅನುಭವಿಸುತ್ತಿರುವ ಮಕ್ಕಳಿದ್ದಾರೆ. ಶ್ರೀಮಂತ ಖಾಸಗಿ ಶಾಲೆಗಳ ಮಕ್ಕಳ ಅದ್ದೂರಿತನವನ್ನು, ವಿಲಾಸಿತನವನ್ನು, ಅದರ ಗತ್ತು ಗೈರತ್ತುಗಳನ್ನು ಕಂಡು ಒಳಗೊಳಗೇ ಕೀಳರಿಮೆಗೆ ತುತ್ತಾಗಿ ತಗ್ಗಿ ಕುಗ್ಗಿ ಕಮರಿಹೋದ ಮಕ್ಕಳಿದ್ದಾರೆ. ಮತ್ತು ಈ ಎರಡೂ ಭಿನ್ನ ಸಾಮಾಜಿಕ ಹಿನ್ನೆಲೆಯ ಮಕ್ಕಳು ಪರಸ್ಪರ ಸಂಧಿಸದ ಸಮಾನಾಂತರ ರೇಖೆಗಳಾಗಿಯೇ ಉಳಿದುಬಿಡುತ್ತಾರೆ. ನಡುವಿನ ಆ ತರತಮದ ಕಂದಕ ಭವಿಷ್ಯದ ದಿನಗಳಲ್ಲಿ ಒಂದು ದೊಡ್ಡ ಅತೃಪ್ತಿಗೆ, ಅಸಹನೆಗೆ, ವೈಷಮ್ಯಕ್ಕೆ ವೇದಿಕೆಯಾಗುವ ಅಪಾಯ ಕೂಡಾ ಇದೆ. ಇಂತಹ ಒಂದು ಸಂದಿಗ್ಧ ಸವಾಲಿನ ಸಿಕ್ಕನ್ನು ಎಳೆಎಳೆಯಾಗಿ ಬಿಡಿಸುವ ಗುರುತರ ಜವಾಬ್ದಾರಿಯನ್ನು ಮಕ್ಕಳ ರಂಗಭೂಮಿ ಹೊರಬೇಕಿದೆ. ಭಯ, ಲಜ್ಜೆ, ಕೀಳರಿಮೆಗಳ ಬೇಲಿಯೊಳಗಿಂದ ಮಕ್ಕಳ ಸಮೃದ್ಧ ಒಳಗನ್ನು ಹೊರಸೆಳೆದು ಅರಳಿಸಿ ಅನಾವರಣಗೊಳಿಸಬಲ್ಲ ಒಂದು ಮಾಂತ್ರಿಕಶಕ್ತಿ ರಂಗಭೂಮಿಗಿದೆ. ನಾಟಕದ ಪಾತ್ರಗಳ ಮೂಲಕ ಮಕ್ಕಳು ತಮಗೇ ಅರಿವಿಲ್ಲದ ಹಾಗೆ ತಮ್ಮದೇ ಆದ ಒಂದು ಸ್ವತಂತ್ರ ಅಸ್ಮಿತೆಯನ್ನು ಕಟ್ಟಿಕೊಂಡು ಬಿಡುತ್ತಾರೆ. ಅದರ ಹಂತಗಳೇ ಅದ್ಭುತವಾದದ್ದು. ಅದುವರೆಗೆ ಸಾಂದ್ರಗೊಂಡಿದ್ದ, ಮಂಜುಗಟ್ಟಿದ್ದ ಮಕ್ಕಳ ಅದೆಷ್ಟೋ ಸುಪ್ತಭಾವಗಳಿಗೆ ಗೆಳೆಯರ ಆಪ್ತ ಸಾಂಗತ್ಯ ಸಿಕ್ಕಿಬಿಡುತ್ತದೆ. ನಾಟಕ ತಂಡದ ಮಕ್ಕಳು ಪರಸ್ಪರ ಅಂತರಗಳನ್ನು, ತರತಮಗಳನ್ನು ಮರೆತು ಎಲ್ಲರನ್ನು ನಿರ್ವಂಚನೆಯಿಂದ ಒಪ್ಪಿಕೊಂಡುಬಿಡುತ್ತಾರೆ. ಮನಸ್ಸು ಸಂಬಂಧಗಳ ಆ ಜೆನುಗು ಜೀವದ್ರವದಲ್ಲಿ ತೊಯ್ದು ಬಿಡುತ್ತಾರೆ. ಮಕ್ಕಳು ರಂಗಭೂಮಿಯೊಳಗಿನ ಸ್ವಾತಂತ್ರ್ಯವನ್ನು ನಿರಾಳತೆಯನ್ನು ಘನತೆಯಿಂದ ಬಳಸಿಕೊಳ್ಳುತ್ತಾರೆ. ಹಾಗೆ ನಿಯಮಪಾಲನೆಯನ್ನೂ ಸಹ ಪ್ರೀತಿಯಿಂದ ಪಾಲಿಸುತ್ತಾರೆ. ರಿಹರ್ಸಲ್‌ಗಳಲ್ಲಿ ರಿಹರ್ಸಲ್ ನಡುವಿನ ಹಾಡು ಹರಟೆಗಳಲ್ಲಿ ಅವರು ಒಬ್ಬರಿಗಿನ್ನೊಬ್ಬರು ನಿಚ್ಚಳವಾಗಿ ಅರ್ಥವಾಗುತ್ತಾ ಹೋಗುತ್ತಾರೆ. ಆ ಗುಂಪಿನಲ್ಲಿ ಪ್ರತಿಯೊಂದು ಮಗುವಿನ ವೈಯಕ್ತಿಕ ಚಾಳಿಗಳು. ಸಿಟ್ಟು, ಸೆಡವು ದರ್ಪಗಳು ವಿನೋದದ ವಸ್ತುವಾಗುತ್ತವೆ. ಮಗು ಬೆಳೆಸಿಕೊಂಡ ಸಜ್ಜನಿಕೆಗೆ, ತ್ಯಾಗಗುಣಕ್ಕೆ, ನಿಷ್ಠೆಗೆ, ಅನುಕಂಪಕ್ಕೆ, ಪ್ರಾಮಾಣಿಕತೆಗೆ ದೈವಿಕವೆಂಬಂತ ಮನ್ನಣೆ ದೊರೆಯುತ್ತದೆ. ಒಟ್ಟಿನಲ್ಲಿ ರಂಗಭೂಮಿಗೆ ಆತುಕೊಂಡ

ಮಕ್ಕಳೆಲ್ಲಾ ಸಹಕುಟುಂಬಿಗಳಾಗಿ ಬಿಡುತ್ತಾರೆ. ಆ ಬಗೆಯ ನಂಟಿನ, ಸಖ್ಯದ ಗೀಳು ಹತ್ತಿಸಿಕೊಂಡ ಬೆಳೆದು ದೊಡ್ಡವರಾದ ಮೇಲೂ ವರ್ಗರಹಿತ, ಅಂತರರಹಿತ, ನಿರಾಹಂಕಾರಿ ಸಮುದಾಯವನ್ನು ಕಟ್ಟಿಬೆಳೆಸುತ್ತಾರೆ ಎಂಬ ಭರವಸೆ ಹುಟ್ಟಿಸುತ್ತಾರೆ. ಹೀಗೆ ಮಕ್ಕಳ ಬಾಲ್ಯವನ್ನು ಅದರ ಅಭದ್ರತೆಗಳಿಂದ, ಅಸ್ಥಿರತೆಗಳಿಂದ ಮುಕ್ತಗೊಳಿಸಬಲ್ಲ ದೊಡ್ಡ ತಾಕತ್ತು ರಂಗಭೂಮಿಗಿದೆ. ಇದನ್ನು ಸಶಕ್ತವಾಗಿ ಬಳಸಿಕೊಂಡರೆ ನಗು ಸತ್ತುಹೋದ ನಮ್ಮ ಸುತ್ತಮುತ್ತಲಿನ ಅನೇಕ ಚಿಣ್ಣರ ಎಳೆಯರ ಮುಖದಲ್ಲಿ ಜೀವಕಳೆಯ ಕುಡಿ ಕೊನರುವ ಹಾಗೆ ಮಾಡಬಹುದು. ತರಗತಿ ಕೋಣೆಯೊಳಗಿನ ಕಲಿಕೆಯಲ್ಲಾಗಲಿ, ರಂಗಪ್ರದರ್ಶನಗಳಲ್ಲಾಗಲೀ ನಿರ್ಲಕ್ಷಿತ ಮಕ್ಕಳೂ ಸಹ ಹೊಸ ವಿಕ್ರಮಗಳನ್ನು ಸಾಧಿಸಬಹುದು.

***

# ಮಕ್ಕಳ ರಂಗದ ಮೇರು ಶಿಖರ

– ಜಿ.ಎನ್. ಮೋಹನ್

ಮಕ್ಕಳೆಲ್ಲಾ ಆಗಲೇ ಬಣ್ಣ ಬಳಿದುಕೊಂಡು ಸಿದ್ಧವಾಗಿದ್ದಾರೆ. ದೊಡ್ಡ ಮೀಸೆ, ಉದ್ದ ಕೂದಲಿನ ರಾಕ್ಷಸ, ವಿಕಾರ ಮುಖದ ಭೂತಗಳು, ಗಿರಿಜಾ ಮೀಸೆಯ ಗೌಡ ಇನ್ನೇನು ವೇದಿಕೆ ಏರಬೇಕು ಅಷ್ಟರಲ್ಲಿ ಭೋರೆಂದು ಮಳೆ ಸುರಿಯಿತು. ಇನ್ನು ನಾಟಕ ಸಾಧ್ಯವೇ ಇಲ್ಲ ಎಂಬ ನಿರಾಸೆ ಮಕ್ಕಳಿಗೆ. ಒಂದು ತಿಂಗಳಿಂದ ಆಡಿ, ಹಾಡಿ ಕಲಿತ ನಾಟಕ ಪ್ರದರ್ಶಿಸಲು ಆಗುವುದಿಲ್ಲ ಎಂಬ ನಿರಾಸೆ ಮಕ್ಕಳ ಮುಖದಲ್ಲಿ ಕಂಡದ್ದೇ ತಡ ನಾಟಕ ನಡೆಯಲೇ ಬೇಕು ಎಂದು ಪಣ ತೊಟ್ಟ ಅವರು ಹಳ್ಳಿಯಲ್ಲಿ ಇದ್ದ ದೊಡ್ಡ ದನದ ಕೊಟ್ಟಿಗೆಯನ್ನೇ ಶುಚಿ ಮಾಡಿ ರಂಗಮಂದಿರವಾಗಿಸಿದರು !

ಪಂಜುಗಳೇ ಸ್ಪಾಟ್‌ಲೈಟ್, ಫ್ಲಡ್ ಲೈಟ್ ಎಲ್ಲವೂ ಆದವು, ಕೇವಲ ಒಂದು ಗಂಟೆಯ ಹಿಂದೆ ಸಾಧ್ಯವೇ ಇಲ್ಲ ಎನ್ನುವಂತಿದ್ದ ನಾಟಕ ಪ್ರದರ್ಶನ ನಡೆದೇ ಹೋಯಿತು. ಮಕ್ಕಳು ಉತ್ಸಾಹದಿಂದ ವೇದಿಕೆಯ ಮೇಲೆ ರೆಕ್ಕೆ ಬಿಚ್ಚಿದ ಹಕ್ಕಿಗಳಾದರು. ಕಾಡುಗೋಡಿ ಗ್ರಾಮದ ಮಕ್ಕಳು 'ಬಂಗಾರದ ಗಿಣಿ' ನಾಟಕವನ್ನು ಅಭಿನಯಿಸಿದ್ದು ಹೀಗೆ.

ಇದನ್ನು ಸಾಧಿಸಿದವರು ಎನ್.ಎಸ್. ವೆಂಕಟರಾಂ. ಮಕ್ಕಳ ರಂಗಭೂಮಿಯ ಮೇರು ಶಿಖರ ಎನ್ನಬಹುದಾದ ವೆಂಕಟರಾಂ ನಮ್ಮಿಂದ ಮರೆಯಾಗಿದ್ದಾರೆ. ತಮ್ಮ ಬದುಕಿನುದ್ದಕ್ಕೂ ನಾಟಕ ಆಡಿ, ಆಡಿಸಿ, ನಾಟಕ ಬರೆದು, ರಂಗಕ್ಕೇರಿಸಿ ನಾಟಕವೇ ಉಸಿರಾಗಿದ್ದ ಎನ್.ಎಸ್. ವೆಂಕಟರಾಂ ರಂಗಭೂಮಿಯ ಬೆಳಕಿನ ಮಧ್ಯೆ ಓಡಾಡುತ್ತಾ ಇರುವಾಗಲೇ ಕತ್ತಲೆಯ ಒಡಲು ಸೇರಿದ್ದಾರೆ.

ಎನ್.ಎಸ್. ವೆಂಕಟರಾಂ ಎಂದೂ ಪ್ರಚಾರ ಬಯಸದ ಪ್ರತಿಭಾವಂತ. ಮಾಧ್ಯಮಗಳ ಸ್ಪಾಟ್‌ಲೈಟ್ ವೆಂಕಟರಾಂ ಅವರ ಮೇಲೆ ಬಿದ್ದದ್ದು ತೀರಾ ಕಡಿಮೆ. ಆದರೆ ಅವರು ರಂಗಭೂಮಿಯ ಜತೆ ಒಡನಾಡುತ್ತಲೇ ಎಲ್ಲರ ಸಂಗಾತಿಯಾಗಿ ಹೋಗಿದ್ದರು.

ಮಕ್ಕಳ ರಂಗಭೂಮಿ ಆ ಮೂಲಕ ಕನ್ನಡ ಹವ್ಯಾಸಿ ರಂಗಭೂಮಿಯನ್ನು ಜೀವಂತವಾಗಿಟ್ಟ ಹೆಮ್ಮೆ ಜವಾಹರ ಬಾಲಭವನಕ್ಕೆ ಸಲ್ಲಬೇಕು. ಕನ್ನಡ ರಂಗಭೂಮಿಯ ಮಹತ್ವದ ಪ್ರತಿಭೆಗಳು ಜವಾಹರ ಬಾಲಭವನದ ಗರಡಿಯಲ್ಲಿ ಪಳಗಿದವರೆಂಬುದು ಈ ಕೊಡುಗೆಯ ಮಹತ್ವವನ್ನು ಸೂಚಿಸುತ್ತದೆ. ಜವಾಹರ ಬಾಲಭವನದ ಸೂತ್ರಧಾರರಾಗಿದ್ದರು ಎನ್.ಎಸ್. ವೆಂಕಟರಾಂ.

ದೆಹಲಿ ರಾಷ್ಟ್ರೀಯ ಶಾಲೆ (ಎನ್.ಎಸ್.ಡಿ.)ಯಲ್ಲಿ ನಿರ್ದೇಶನದಲ್ಲಿ ವಿಶೇಷ ತರಬೇತಿ ಪಡೆದ ವೆಂಕಟರಾಂ ಅವರು 1970ರಲ್ಲಿ ನಾಟಕ ಶಾಲೆಯ ಅತ್ಯುತ್ತಮ ವಿದ್ಯಾರ್ಥಿ ಎನಿಸಿಕೊಂಡು 'ಭಾರತ್ ಪುರಸ್ಕಾರ್' ಪಡೆದು ತಾವು ಮುಂದೆ ನಡೆಯುವ ಹಾದಿಯ ಹೆಜ್ಜೆ ಗುರುತನ್ನು ಮೂಡಿಸಿದ್ದರು. ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿ ನಡೆಸಿದ ನಾಟಕ ತರಬೇತಿ ಶಿಬಿರವನ್ನು ನಡೆಸಿಕೊಟ್ಟ ವೆಂಕಟರಾಂ ಶ್ರೀರಂಗರ 'ಗಣೇಶಾಯ ನಮಃ' ನಾಟಕವನ್ನು ನಿರ್ದೇಶಿಸಿದ್ದರು.

**ರಂಗಸೇತುವೆ**

ಎನ್.ಎಸ್. ವೆಂಕಟರಾಂ ಕನ್ನಡ ಮತ್ತು ಇತರ ರಂಗಭೂಮಿಯ ಮಧ್ಯೆ ಸೇತುವೆ ಕಟ್ಟಿದವರು. ಬಾದಲ್ ಸರ್ಕಾರ ಅವರನ್ನು ಕನ್ನಡ ರಂಗಭೂಮಿಗೆ ತಂದದ್ದಕ್ಕಾಗಿ ಕನ್ನಡ ರಂಗಭೂಮಿ ಅವರನ್ನು ಇಂದಿಗೂ ಸ್ಮರಿಸುತ್ತದೆ. ಬಾದಲ್ ಸರ್ಕಾರ ಅವರ 'ಬಾಕಿ ಇತಿಹಾಸ್' 'ಪಗ್ಲಾ ಗೋಡಾ'ವನ್ನು ಅನುವಾದಿಸಿ ರಂಗಕ್ಕೇರಿಸಿದರು. ಅಂತೆಯೇ ವಿಜಯ್ ತೆಂಡುಲ್ಕರ್, ಬಿ.ಎಂ. ಷಾ, ಜ್ಞಾನದೇವ ಅಗ್ನಿ ಹೋತ್ರಿ, ಮೋಹಿತಾ ಚಟರ್ಜಿ, ಭರತೇಂದು ಹರಿಶ್ಚಂದ್ರ, ಬಟ್ರೋಲ್ಟ್ ಬ್ರೆಕ್ಟ್ ನಾಟಕವನ್ನು ಕನ್ನಡಕ್ಕೆ ತಂದರು. ವಿಜಯ್ ತೆಂಡುಲ್ಕರ್ ಅವರ ಮರಾಠಿ ನಾಟಕ 'ಚಾರ್ ದಿವಸ್' ಬಿ.ಎಂ. ಷಾ ಅವರ ಹಿಂದಿ ನಾಟಕ 'ತ್ರಿಶಂಕು', ಜ್ಞಾನದೇವ ಅಗ್ನಿಹೋತ್ರಿ ಅವರ ಹಿಂದಿ ನಾಟಕ 'ಶುತುರ್‌ಮುರ್ಗ್' ಭರತೇಂದು ಹರಿಶ್ಚಂದ್ರ ಅವರ ಹಿಂದಿ ನಾಟಕ 'ಅಂಧೇರ್ ನಗರಿ' ಬಟ್ರೋಲ್ಟ್ ಬ್ರೆಕ್ಟ್‌ರ 'ಥ್ರೀ ಪೆನ್ನಿ ಅಪೇರ' 'ಗುಡ್ ವುಮೆನ್ ಆಫ್ ಸೆಟ್ಜುವಾನ್' 'ದಿ ಎಲಿಫೆಂಟ್ ಕಾಫ್' 'ಎಕ್ಸೆಪ್ಶನ್ ಆಂಡ್ ದಿ ರೂಲ್' ನಾಟಕವನ್ನು ಕನ್ನಡಕ್ಕೆ ಅನುವಾದಿಸಿ ನಿರ್ದೇಶಿಸಿದ್ದರು.

ಹವ್ಯಾಸಿ ರಂಗಭೂಮಿಯಲ್ಲಿಯೇ ಉಳಿದುಹೋಗಿಬಿಡಬಹುದಾಗಿದ್ದ ವೆಂಕಟರಾಂ ಅವರನ್ನು ಮಕ್ಕಳ ರಂಗಭೂಮಿ ಸೂಜಿಗಲ್ಲಿನಂತೆ ಆಕರ್ಷಿಸಿತು. ಮಕ್ಕಳ ಮಧ್ಯೆ ಮಗುವಾಗಿ ಹೋಗುತ್ತಿದ್ದ ವೆಂಕಟರಾಂ ಅವರು ಒಮ್ಮೆ ಜವಾಹರ ಬಾಲಭವನ ಪ್ರವೇಶಿಸಿದವರು ಮತ್ತೆ ಇತರ ರಂಗಭೂಮಿಯತ್ತ ತಿರುಗಿ ನೋಡಲಿಲ್ಲ. 1971ರಲ್ಲಿ

ದೆಹಲಿಯ ಬಾಲಭವನದಲ್ಲಿ ಸೃಜನಾತ್ಮಕ ಕಲೆಗಳ ಬಗ್ಗೆ ತರಬೇತಿ ಪಡೆದದ್ದೇ ವೆಂಕಟರಾಂ ಅವರು ಮಕ್ಕಳ ರಂಗಭೂಮಿಗೆ ದಕ್ಕಿದರು. ಮಕ್ಕಳನ್ನು ನಾಟಕಗಳಿಗೆ ಕರೆತಂದರು. ಮಕ್ಕಳ ಬಳಿಗೇ ನಾಟಕಗಳನ್ನು ಕೊಂಡೊಯ್ದರು. ಬೆಂಗಳೂರು ಮಾತ್ರವಲ್ಲದೇ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಮಕ್ಕಳ ರಂಗಭೂಮಿ ಕುಡಿಯೊಡೆಯುವಂತೆ ಯೋಜನೆಗಳನ್ನು ರೂಪಿಸಿದರು. ಮಕ್ಕಳ ನಾಟಕಗಳನ್ನು ಜಿಲ್ಲೆಯಿಂದ ಜಿಲ್ಲೆಗೆ ಕೊಂಡೊಯ್ದರು. ಉಳ್ಳವರ ಮಕ್ಕಳಿಗೆ ಮಾತ್ರ ಎಟುಕುತ್ತಿದ್ದ ರಂಗಭೂಮಿಯನ್ನು ಇಲ್ಲದವರ ಮಕ್ಕಳ ಕೈ ಎತ್ತರಕ್ಕೆ ಇಳಿಸಿದರು.

ವೆಂಕಟರಾಂ ಮಕ್ಕಳ ಮನೋಲೋಕದ ಒಳಗೆ ಸರಾಗವಾಗಿ ನುಗ್ಗಬಲ್ಲವರಾಗಿದ್ದರು. ಮಕ್ಕಳ ಕೌತುಕದ ಲೋಕಕ್ಕೆ ಸುಲಭವಾಗಿ ಲಗ್ಗೆ ಹಾಕುತ್ತಿದ್ದುದೇ ವೆಂಕಟರಾಂ ಅವರ ಯಶಸ್ಸಿನ ಗುಟ್ಟು. ಮಕ್ಕಳ ನಾಟಕ ಎಂದರೆ ಮಕ್ಕಳು ಮಾಡುವ ನಾಟಕ ಮಾತ್ರವಾಗಿದ್ದ ದಿನಗಳಲ್ಲಿ ಮಕ್ಕಳ ಮನಸ್ಸು ತಣಿಯುವಂತೆ ಮಾಡುವ, ಮಕ್ಕಳಲ್ಲಿ ಪ್ರಶ್ನೆಗಳು ಗರಿಗೆದರುವಂತೆ ಮಾಡುವ ಕಲೆ ವೆಂಕಟರಾಂ ಅವರಿಗೆ ಗೊತ್ತಿತ್ತು. ಇದು ಸಾಕಷ್ಟು ಯಶಸ್ಸನ್ನೂ ನೀಡಿತು. ಇದರೊಂದಿಗೆ ವೆಂಕಟರಾಂ ಅವರಿಗೆ ದೊಡ್ಡ ಗೆಳೆಯರ ಬಳಗವೇ ಇತ್ತು. ಇದೂ ಸಹಾ ಅವರ ನಾಟಕಗಳ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದವು. ವೆಂಕಟರಾಂ ಮತ್ತು ಎಸ್.ಕೆ. ಮಾಧವರಾವ್ ಜೋಡಿ ಮಕ್ಕಳ ರಂಗಭೂಮಿಯನ್ನು ವಸಂತದ ಹಾದಿಯಂತೆ ಮಾಡಿತು. ಬಸವರಾಜ್, ಎನ್.ಎ. ಸೂರಿ, ಗಂಗಾಧರ್ ಇವರೆಲ್ಲರೂ ವೆಂಕಟರಾಂ ಕಲ್ಪನೆಗೆ ರಂಗು ತೊಡಿಸಿದರು.

## ಗೃಹರಂಗದಲ್ಲಿ ತರಬೇತಿ

ವೆಂಕಟರಾಂ ಅವರಿಗೆ ಸಾಕಷ್ಟು ಕುಮ್ಮಕ್ಕು ಸಿಕ್ಕಿದ್ದು ಅವರ ಕುಟುಂಬದಿಂದ ಖ್ಯಾತ ನೃತ್ಯಪ್ರವೀಣೆ, ಮಾನವಸಂಪನ್ಮೂಲ ಕೇಂದ್ರದ ಫೆಲೋಶಿಪ್ ವಿಜೇತೆ, ಸಂಗೀತ ನೃತ್ಯ ಅಕಾಡೆಮಿಯ ಪ್ರಶಸ್ತಿ ಪಡೆದ ಪತ್ನಿ ವಸಂತಲಕ್ಷ್ಮಿ ಅವರು ವೆಂಕಟರಾಂ ಅವರ ಎಲ್ಲಾ ಕೆಲಸಗಳ ಹಿಂದಿನ ಚೈತನ್ಯದ ಚಿಲುಮೆ. ವೆಂಕಟರಾಂ ಅವರ ಮಗಳು ವಿದ್ಯಾ ಸಹಾ ನೃತ್ಯಗಾರ್ತಿ, ಮಾವ, ನೃತ್ಯಕ್ಷೇತ್ರದ ಮಹತ್ವದ ವ್ಯಕ್ತಿ ಎಚ್.ಆರ್. ಕೇಶವ ಮೂರ್ತಿ ಅವರ ಕುಟುಂಬವಂತೂ ವೆಂಕಟರಾಂ ಅವರ ಎಲ್ಲಾ ಚಟುವಟಿಕೆಗಳಿಗೆ ಉತ್ಸಾಹದ ನೀರೆರೆಯುವ ತಾಣವಾಗಿತ್ತು. ಕೇಶವ ಮೂರ್ತಿ ಅವರ ಮನೆ ಎಷ್ಟೋ ಬಾರಿ ವೆಂಕಟರಾಂ ಅವರ ನಾಟಕಗಳ ರಿಹರ್ಸಲ್ ತಾಣವಾಗಿ ಹೋಗುತ್ತಿತ್ತು. ವೆಂಕಟರಾಂ ಅವರ ಕುಟುಂಬವೂ ಸಾಕಷ್ಟು ಪ್ರೋತ್ಸಾಹ ನೀಡಿತ್ತು. 'ಅರಾನಿ' (ಚಿನ್ನ)

ಎಂದೇ ವಿದೇಶದಲ್ಲಿ ಖ್ಯಾತರಾಗಿದ್ದ ಇವರ ಸಹೋದರಿ ಉಷಾ ಸಹಾ ಮಕ್ಕಳ ರಂಗಭೂಮಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವರು.

ಬಂಗಾರದ ಗಿಣಿ, ಹಿಮಾನಿ ಮತ್ತು ಏಳುಜನ ಕುಳ್ಳರು, ಕತ್ತೆ ಬಾಲ ಕುದುರೆ ಜುಟ್ಟು, ಹುಲಿ ಬಂತು ಹುಲಿ, ಕಳಸಾಪುರದ ಹುಡುಗರು, ಸಿಂದಾಬಾದ್, ಕಪ್ಪೆಯ ಕಾಶಿಯಾತ್ರೆ ನಾಟಕಗಳನ್ನು ವೆಂಕಟರಾಂ ಬರೆದು ನಿರ್ದೇಶಿಸಿದರೆ, ಕೆ.ವಿ. ಸುಬ್ಬಣ್ಣ ಅವರ 'ಕಾಡಿನಲ್ಲಿ ಕಥೆ' ಪಂಚತಂತ್ರದ ಅಪಕಾರಿಯ ಕತೆ, ಪ್ರಸನ್ನ ಅವರ 'ಒಂದಾನೊಂದು ಕಾಡಿನಲ್ಲಿ' ನಾಟಕಗಳನ್ನು ನಿರ್ದೇಶಿಸಿದರು.

ಮಕ್ಕಳ ರಂಗಭೂಮಿಯಲ್ಲಿ ಮಾತ್ರವೇ ಅಲ್ಲದೆ ಮಕ್ಕಳ ಗೊಂಬೆಯಾಟ ಕ್ಷೇತ್ರದಲ್ಲಿಯೂ ವೆಂಕಟರಾಂ ದೊಡ್ಡ ಹೆಸರು. ಕೋಣವೇ ಗೌಡ, ಚಿನ್ನದ ತಟ್ಟೆ, ಕಪ್ಪೆಯ ಕಾಶೀಯಾತ್ರೆ, ಮುರುಕು ತಟ್ಟೆ ನಾಟಕಗಳನ್ನು ಗೊಂಬೆಯಾಟಕ್ಕಾಗಿ ಬರೆದು ಹಲವು ಗೊಂಬೆಯಾಟವನ್ನು ನಿರ್ದೇಶಿಸಿದ್ದರು.

ಕಥೆ ಹೇಳುವ ಕಲೆ ವೆಂಕಟರಾಂ ಅವರಿಗೆ ಚೆನ್ನಾಗಿ ದಕ್ಕಿತ್ತು. ಕಥೆಯನ್ನು ಜಾದೂವಿನಂತೆ ಬಿಡಿಸಿಡುವ ರೀತಿ ಹಲವು ಕಥೆಗಳನ್ನು ಒಂದರೊಡನೊಂದು ಬೆರೆಸಿ ಮತ್ತೊಂದು ಕಥೆ ಹುಟ್ಟು ಹಾಕುವ ರೀತಿ ಅವರ ವಿಶೇಷತೆ. ಸಿಂದಬಾದ್ ನಾವಿಕನ ಕಥೆಗೆ ಫ್ಯಾಂಟಸಿ ಒದಗಿಸಲು ಜೀಮೂತವಾಹನನ್ನು, ರಾಬಿನ್ ಸನ್ ಕ್ರೂಸೋನ ಕಥೆಯನ್ನು ಎಷ್ಟು ಚೆನ್ನಾಗಿ ಪೋಣಿಸುತ್ತಿದ್ದರೆಂದರೆ ಮಕ್ಕಳು ಒಂದು ಅದ್ಭುತ ಜಗತ್ತನ್ನು ಪ್ರವೇಶಿಸಿ ಹೊರಗೆ ಬರುತ್ತಿದ್ದರು. ನಾಟಕವನ್ನು ದೃಶ್ಯವಾಗಿಸುವಾಗ ಅವರು ಹುಟ್ಟಿಹಾಕುತ್ತಿದ್ದ ಫ್ಯಾಂಟಸಿ ಲೋಕ ಅಬ್ಬಾ ಎನ್ನುವಂತೆ ಮಾಡುತ್ತಿದ್ದವು.

ವೆಂಕಟರಾಂ ಅವರ ಬಗ್ಗೆ ಬಹಳ ಜನರಿಗೆ ಗೊತ್ತಿಲ್ಲದಿರುವುದು ಅವರ ಸಿನೆಮಾ ಜೀವನ. 'ಋಷ್ಯ ಶೃಂಗ' 'ಸಂಕಲ್ಪ' ಮಾಡಿ ಮಡಿದವರು' ಎನ್ ಲಕ್ಷ್ಮೀನಾರಾಯಣ್ ಅವರ ಸಾಕ್ಷ್ಯ ಚಿತ್ರದಲ್ಲಿ ವೆಂಕಟರಾಂ ಅಭಿನಯಿಸಿದ್ದರು. 'ಮಾಡಿ ಮಡಿದವರು' ಚಿತ್ರಕ್ಕೆ ಕಂಠದಾನ, 'ಸಂಕಲ್ಪ' ಚಿತ್ರಕ್ಕೆ ನಿರ್ದೇಶನ ಸಹಾಯ ಮಾಡಿದ್ದರು.

ಎನ್.ಎಸ್. ವೆಂಕಟರಾಂ ಕೊನೆಯವರೆಗೂ ಒಂದಿಲ್ಲೊಂದು ಕೆಲಸದಲ್ಲಿ ತೊಡಗಿಸಿಕೊಂಡಿದ್ದರು. ಸೃಜನಶೀಲ ಕಲೆಗಳ ಪ್ರಸಾರಕ್ಕಾಗಿ 'ಕಲಾಕೇಂದ್ರ' ಆರಂಭಿಸಿದ್ದ ಅವರು ಇತ್ತೀಚೆಗೆ ಅದರ ಜಾಗದಲ್ಲಿ 'ವಿಶ್ರುತ' ಟ್ರಸ್ಟ್ ಆರಂಭಿಸಿದ್ದರು. ನವಕರ್ನಾಟಕ ಪ್ರಕಾಶನದ ಮಹತ್ವದ ಯೋಜನೆ ರಂಗಕರ್ಮಿಗಳ ಕೈಪಿಡಿಯನ್ನು ಸಿದ್ಧ ಮಾಡಿಕೊಟ್ಟಿದ್ದರು. ಇತ್ತೀಚೆಗೆ ತಾನೇ ಮಾನವ ಸಂಪನ್ಮೂಲ ಕೇಂದ್ರದ ಫೆಲೋಶಿಪ್ ಗೌರವಕ್ಕೆ ಪಾತ್ರರಾಗಿದ್ದ ವೆಂಕಟರಾಂ ಅದಕ್ಕಾಗಿ ಮಕ್ಕಳ ರಂಗಭೂಮಿಯನ್ನೇ

ಆರಸಿಕೊಂಡು ಛಾಯಾಗ್ರಾಹಕ ಗುರುಮೂರ್ತಿ. ಟಿ. ಹೆಗಡೆ, ನವಕರ್ನಾಟಕದ ಆರ್.ಎಸ್. ರಾಜಾರಾಂ, ಇತಿಹಾಸ ತಜ್ಞ ಎಚ್.ಎಸ್. ಗೋಪಾಲ ರಾವ್, ಪತ್ನಿ ವಸಂತಲಕ್ಷ್ಮಿ ಅವರೊಂದಿಗೆ ದಕ್ಷಿಣಕನ್ನಡದ ಕಾಡುಮೇಡುಗಳನ್ನೆಲ್ಲಾ ಅಲೆದು ಬಂದಿದ್ದರು.

ವೆಂಕಟರಾಂ ಅವರ ಉತ್ಸಾಹಕ್ಕಂತೂ ದಣಿವೇ ಇರಲಿಲ್ಲ. ಎನ್.ಎಸ್. ವೆಂಕಟರಾಂ ಅವರು ಇಲ್ಲವಾದದ್ದು ಅಂದಿನ ಮಕ್ಕಳಾಗಿದ್ದು ಇಂದಿನ ಪ್ರಜೆಗಳಾಗಿರುವ ಅನೇಕರಿಗೂ, ಇಂದಿನ ಮಕ್ಕಳಿಗೂ ದೊಡ್ಡ ನಷ್ಟ. ಮಕ್ಕಳಿಗೆ ಕಥೆ ಹೇಳುವವರೇ ಇಲ್ಲವಾಗುತ್ತಿರುವ ಇಂದಿನ ಸ್ಯಾಟಲೈಟ್ ದಿನಗಳಲ್ಲಿ ವೆಂಕಟರಾಂ ಅವರಿಗೆ ಸಾಕಷ್ಟು ಕೆಲಸವಿತ್ತು.

***

# ಮಕ್ಕಳ ರಂಗತರಬೇತಿ ಚಟುವಟಿಕೆಗಳು

- ಕೆ. ಜಗುಚಂದ್ರ

## ಪ್ರಸ್ತಾವನೆ

ರಂಗ ತರಬೇತಿ ಅಂದ ಕೂಡಲೇ ನಮಗೆ ನೆನಪಿಗೆ ಬರುವುದು, ಆಧುನಿಕ ರಂಗಭೂಮಿಯ ಭೀಷ್ಮ ಎಂದೇ ಹೆಸರಾದ ಶ್ರೀ ಬಿ.ವಿ. ಕಾರಂತರು. ಕನ್ನಡ ರಂಗಭೂಮಿಗೆ ಇವರು ನೀಡಿದ ಕೊಡುಗೆ ಅಪಾರ. ಅದರಲ್ಲೂ ಮಕ್ಕಳ ರಂಗಭೂಮಿಗೆ ಇವರಿಂದ ದೊರೆತ ಹೊಸ ಕಲ್ಪನೆ, ಎಪ್ಪತ್ತರ ದಶಕದಿಂದ ಇಂದಿನವರೆಗೂ ಮರೆಯಲಾಗದ ನೆನಪಾಗಿರುವುದು ಒಂದು ಇತಿಹಾಸವೇ ಸರಿ. ಮಕ್ಕಳ ರಂಗಲೋಕವನ್ನು ಕನ್ನಡದ ಕುವರ ಕುವರಿಯರಿಗೆ ಪರಿಚಯಿಸಿದ ಪರಿ, ಪ್ರೇರಣಾತ್ಮಕವಾಗಿ ಪ್ರೇರಕ ಶಕ್ತಿಯಾಗಿ ನಿಂತಿರುವುದು, ಇತ್ತೀಚಿನ ದಿನಮಾನಗಳಲ್ಲಿ ನಮ್ಮ ಕ್ರಿಯಾಶೀಲತೆಗೆ, ಸೃಜನಾತ್ಮಕ ಚಟುವಟಿಕೆಗಳಿಗೆ ಸುಗಮವಾಗಿ ಸಾಗಿ ಬರಲು ಅನುಕೂಲವಾಗಿದೆ. ಇದರಿಂದಲೇ ರಂಗಭೂಮಿ ಒಂದು ಭಾಷೆಯಾಗಿ ಹೊರಹೊಮ್ಮಿದೆ.

ಜಾಗತೀಕರಣದ ಪ್ರಭಾವ, ಎಲ್ಲ ರಂಗದ ಮೇಲೂ ಪ್ರಭಾವ ಬೀರಿದಂತೆ, ಮಕ್ಕಳ ರಂಗದಲ್ಲೂ ಹೊಸತನ ಮತ್ತು ರಸತನಕ್ಕೆ ಹಾದಿಯನ್ನು ಹಾಕಿಕೊಟ್ಟಿದೆ. The theatre in education. the theatre for education and the theater education ಜೊತೆಗೆ the theatre for development ಅನ್ನುವುದನ್ನು ಸಾಬೀತು ಪಡಿಸಿದೆ. ಇದರಲ್ಲಿ ಮಕ್ಕಳ ವ್ಯಕ್ತಿತ್ವ ವಿಕಸನ ಮನೋವಿಕಾಸವೂ ಕೂಡಾ ಅಡಗಿರುವುದರಿಂದ, ತಾತ್ವಿಕ ಮತ್ತು ಸಾತ್ವಿಕ ವಿಚಾರಗಳು ಹರಿದು ಬಂದು, ವಿವಿಧ ಆಯಾಮದ ಚಟುವಟಿಕೆಗಳು ರಂಗ ತರಬೇತಿಯಂಥ, ಕಾಯಕದಲ್ಲಿ ಹಾಗೂ ಸಮಯದಲ್ಲಿ ಎಂಥವರನ್ನೂ ಬೆರಗುಗೊಳಿಸದೇ ಇರಲಾರದು. ಕಸದಲ್ಲಿ ರಸ ಅನ್ನುವ ಮಾತೊಂದಿದೆ. ಇದು ಮಕ್ಕಳಿಗೆ ರಂಗತರಬೇತಿಯ ವಿಷಯಕ್ಕೆ ತೀರಾ ಹತ್ತಿರವಾಗಿದೆ. ಆದ್ದರಿಂದ ನಾನು ನನ್ನ ಮೂರು ದಶಕದ ಅನುಭವದ ಆಧಾರದ ಮೇಲೆ ರಂಗ ಕೈಂಕರ್ಯದಲ್ಲಿ ಕಂಡುಕೊಂಡದ್ದು ಇದೇ ಆಗಿರುವುದರಿಂದ ರಂಗ ತರಬೇತಿ ಚಟುವಟಿಕೆಗಳನ್ನು ಐದು

ಬಗೆಯಲ್ಲಿ ವಿಂಗಡಿಸಿ, ಪ್ರತಿ ಅಂಗದಲ್ಲೂ ರಂಗ ಸಂಘವನ್ನು ಬೆಸೆಯುವ ಪ್ರಯತ್ನ ಮಾಡಿದ್ದೇನೆ. ಇಲ್ಲಿ ವಿಶಾಲವಾದ ವಿಷಯ, ಅನೇಕ ಅವಕಾಶವು ಮಕ್ಕಳಿಗೆ ದೊರೆಯುವುದರಿಂದ, ಕಾರಂತರ ಕಲ್ಪನೆಯ ಕೂಸಿಗೆ ಪುಷ್ಟಿಕೊಟ್ಟಂತೆ ಎಂದು ಭಾವಿಸಿ, ಮಕ್ಕಳ ರಂಗ ತರಬೇತಿ ಚಟುವಟಿಕೆಗಳನ್ನು ಪಂಚೇಂದ್ರಿಯಗಳ ಮೇಲೆ ಪರಿಣಾಮ ಬೀರುವಂತೆ ಐದು ವಿಧದಲ್ಲಿ ಪರಿಚಯಿಸಲು ಪ್ರಯತ್ನಪಟ್ಟಿದ್ದೇನೆ.

**ಚಟುವಟಿಕೆಗಳು :**

ಕೇಳುವ, ಹೇಳುವ, ನೋಡುವ, ಆಡುವ ಮತ್ತು ಮಾಡುವ ಚಟುವಟಿಕೆಗಳು. ಇವೆಲ್ಲವೂ ಏಕಾಗ್ರತೆಯನ್ನು ಬಯಸುವುದರಿಂದ ಈ ಚಟುವಟಿಕೆಗಳಿಂದ, ಮಕ್ಕಳ ಮನಸ್ಸು ಹಗುರವಾಗಿ, ಗಿರಿ ಗಿರಿ ತಿರುಗುವ ಬುಗುರಿಯಾಗಿ, ಮಕ್ಕಳ ಕುತೂಹಲವನ್ನು ಕೆರಳಿಸಿ, ಮನಸ್ಸನ್ನು ಅರಳಿಸಿ, ಪ್ರತಿಯೊಂದರಲ್ಲೂ ತಮ್ಮ ಕೌಶಲ್ಯವನ್ನು ಹೊರಹಾಕಲು ಸಾಧ್ಯವಾಗುತ್ತದೆ. ಪ್ರತಿಭೆಯನ್ನು ಪ್ರಚುರ ಪಡಿಸಲು ಸರಳವಾಗುತ್ತದೆ.

ಈ ಮೇಲಿನ ಐದು ಬಗೆಯ ಚಟುವಟಿಕೆಗಳಲ್ಲಿ ಸಂವೇದನೆ ಮತ್ತು ಸೃಜನಶೀಲ ಶಕ್ತಿ ಅಡಗಿರುವುದರಿಂದ ರಂಗಚಟುವಟಿಕೆಯ ಸಾಧನವು, ಸುಲಭ ಮತ್ತು ಸಹಜ ಕಲಿಕೆಗೆ ಸಮರ್ಥ ವೇದಿಕೆಯಾಗುವುದರಿಂದ ಏಕಕಾಲಕ್ಕೆ ಎಲ್ಲರಿಗೂ ಪರಿಣಾಮ ಬೀರುವಂತೆ ನಿರಂತರವಾಗಿ ಚಟುವಟಿಕೆಗಳು ನಡೆಯಲು ಸಾಧ್ಯವಾಗುತ್ತದೆ. ಇದರಿಂದ ವ್ಯಕ್ತಿಗೆ ಒಂದು ಮುಖವಾದರೆ, ವ್ಯಕ್ತಿತ್ವಕ್ಕೆ ಹತ್ತು ಹಲವು ಮುಖಗಳು ಅನ್ನುವುದನ್ನು, ಮಕ್ಕಳು ಆಡುವ ಮತ್ತು ಮಾಡುವ ಚಟುವಟಿಕೆಗಳಿಂದ, ಅವರವರ ಆಸಕ್ತಿಗನುಗುಣವಾಗಿ, ನಮ್ಮ ಗಮನಕ್ಕೆ ಬರುವಂಥದ್ದು. ಹೀಗಾಗಿ ಮಕ್ಕಳ ಕ್ರಿಯಾಶೀಲತೆ ಮತ್ತು ಕಲ್ಪನಾಶಕ್ತಿ, ಪ್ರಪಂಚಕ್ಕೆ ಪರಿಚಯವಾಗಬೇಕಾದರೆ, ರಂಗ ತರಬೇತಿಯಂಥ ಶಿಬಿರಗಳು ಸಾಕ್ಷಿ ಆಗುತ್ತವೆ. ಅದಕ್ಕಾಗಿ ನಾನು, ಮಕ್ಕಳ ಪ್ರತಿಭಾಕ್ತಿಗೆ ಸರಿ ಹೊಂದುವ ರೀತಿಯಲ್ಲಿ ವಿಂಗಡಿಸಿದ ಚಟುವಟಿಕೆಗಳ ವಿಚಾರಗಳನ್ನ ನೋಡೋಣ.

**1. ಕೇಳುವ ಚಟುವಟಿಕೆಗಳು :**

ಕೇಳುವ ಆಲಿಸುವ ಕ್ರಿಯೆಗೆ ಬಾನುಲಿಯು ಪ್ರಬಲ ಮಾಧ್ಯಮವಾಗಿದೆ. ಇಲ್ಲಿ ಪ್ರತಿಕ್ರಿಯೆಗೆ ಅವಕಾಶವಿಲ್ಲವಾದರೂ, ಏಕಾಗ್ರತೆಯಿಂದ ಕರ್ಣಗಳನ್ನು ತೆರೆದು, ಕೇವಲ ಕೇಳುವುದೊಂದೇ ಉದ್ದೇಶವಾಗಿರುತ್ತದೆ. ಇನ್ನು ಅನುಭವಸ್ಥರಿಂದ ಕಥೆ ಹೇಳುವುದು, ಕಥೆ, ಕವನ ಎಂದರೆ ಮಕ್ಕಳಿಗೆ ಎಲ್ಲಿಲ್ಲದ ಪ್ರೀತಿ. ಎರಡೂ ಭ್ರಮೆಯನ್ನು ಹುಟ್ಟಿಸಿ ಮಕ್ಕಳ ಮನಸ್ಸನ್ನು ಕೇಂದ್ರೀಕರಿಸುವಂಥವುಗಳಾಗಿರುವುದರಿಂದ, ಇಲ್ಲಿ ಪ್ರಶ್ನೆ, ವಾದ, ಸಂವಾದಕ್ಕೆ ಹೆಚ್ಚಿನ ಅವಶ್ಯಕತೆ ಇರುವುದರಿಂದ, ಮಕ್ಕಳು ಕಥೆ, ಕವನದಲ್ಲಿ ಭಾಗಿಯಾಗಿರುತ್ತಾರೆ.

ರಂಗದ ಪಾಠ, ಪ್ರಬುದ್ಧರ ಪ್ರವಚನ, ಹಕ್ಕಿ ಪಕ್ಷಿಗಳ ನಿನಾದ, ಸುಂದರ ಸಂಗೀತ, ಹೀಗೆ ಹತ್ತು ಹಲವು ಕೇಳುವ ಚಟುವಟಿಕಾ ಪ್ರಕಾರಗಳು ಶಿಬಿರದಲ್ಲಿ ಮಕ್ಕಳನ್ನು ಕೇಂದ್ರೀಕರಿಸುತ್ತವೆ.

**2. ಹೇಳುವ ಚಟುವಟಿಕೆಗಳು :**

ಹೇಳುವ ಚಟುವಟಿಕಾ ಕ್ರಮವೂ ಕೂಡಾ, ಮಕ್ಕಳ ಶಿಬಿರದ ಒಂದು ಭಾಗವಾಗಿರುವುದರಿಂದ, ಮಕ್ಕಳು ಕಥೆ, ಕವನ ಹೇಳುತ್ತಾರೆ. ಅನೇಕ ಘಟನೆಗಳನ್ನು ಹೇಳುತ್ತಾರೆ. ಜೊತೆಗೆ ಹಾಡು ಪ್ರಮುಖ ಅಂಗ. ಬಹು ಭಾಷಾ ಹಾಡುಗಳನ್ನೂ ಹೇಳುತ್ತಾರೆ. ಈ ಚಟುವಟಿಕೆಗಳಲ್ಲಿ ಭಾಗಿಯಾಗುವ ಮಕ್ಕಳ ಮನಸ್ಸನ್ನು ಸುಲಭವಾಗಿ ತಿಳಿಯಬಹುದು. ಅವರ ಧ್ವನಿ, ತಾಳ, ಲಯ, ಗತ್ತು ಇವೆಲ್ಲವನ್ನು ಅರಿಯುವ ಮತ್ತು ಅಳೆಯುವ ವಿಧಾನ ಇದಾಗಿದೆ. ವಿವಿಧ ಪ್ರಶ್ನಾವಳಿಯಿಂದ ಮಕ್ಕಳು ಹೇಳುವ ಉತ್ತರದಿಂದ, ಮಕ್ಕಳ ಜಾಣ್ಮೆಯನ್ನೂ ಗುರುತಿಸಬಹುದು. ಹೀಗೆ ಹೇಳುವ ಚಟುವಟಿಕೆಯಲ್ಲಿ ಮಕ್ಕಳ ಮನಸ್ಸನ್ನು ನಿರ್ಧರಿಸಲು ಸಹಾಯವಾಗುವುದರಿಂದ, ರಂಗ ಶಿಬಿರದಲ್ಲಿ ಹೇಳುವ ಚಟುವಟಿಕೆಗಳು ಹೆಚ್ಚಿನ ಮಹತ್ವ ಪಡೆಯುತ್ತವೆ.

**3. ನೋಡುವ ಚಟುವಟಿಕೆಗಳು :**

ಕೇಳುವ ಮತ್ತು ಹೇಳುವ ಚಟುವಟಿಕೆಗಿಂತ ಭಿನ್ನವಾದದ್ದು ನೋಡುವ ಚಟುವಟಿಕೆಗಳು. ಇದರಿಂದ ಮಕ್ಕಳ ಗ್ರಹಿಕಾ ಶಕ್ತಿ ಹೆಚ್ಚುತ್ತದೆ. ಏಕೆಂದರೆ ನೋಡಿ ತಿಳಿ, ಮಾಡಿ ಕಲಿ ಅನ್ನುವಂತೆ, ದೇಶ ಸುತ್ತು ಕೋಶ ಓದು ಅಂದಿದ್ದಾರೆ ಹಿರಿಯರು. ಅದಕ್ಕಾಗಿ ಶಿಬಿರದಲ್ಲಿ ಮಕ್ಕಳು ಪ್ರದರ್ಶನ ಕಲೆಯನ್ನು ನೋಡುತ್ತಾರೆ. ಉದಾ : ಸಮರ ಕಲೆ, ಚಿತ್ರಕಲೆ, ಚಲನಚಿತ್ರ, ಜಾದು/ಪವಾಡ ಪ್ರದರ್ಶನ, ಜಾನಪದದ ವಿವಿಧ ಪ್ರಕಾರಗಳು, ರೂಪ್ ಮಲ್ಲಕಂಬ, ಶ್ವಾನದಳ, ಅಗ್ನಿಶಾಮಕ ದಳ, ಟ್ರಾಫಿಕ್ ಪೋಲೀಸ್, ವಿಜ್ಞಾನದ ಅನೇಕ ಆವಿಷ್ಕಾರಗಳು ಹೀಗೆ ಇನ್ನೂ ಅನೇಕ ವಿಧದ ಕಲಾ ಪ್ರಕಾರದ ಚಟುವಟಿಕೆಗಳು ಮಕ್ಕಳ ರಂಗ ತರಬೇತಿ ಶಿಬಿರದಲ್ಲಿ ನೋಡುವ ಚಟುವಟಿಕೆಗಳಲ್ಲಿ ಬರುತ್ತವೆ.

**4. ಮಾಡುವ ಚಟುವಟಿಕೆಗಳು :**

ಮಕ್ಕಳ ಕ್ರಿಯಾಶೀಲತೆಯು ಅಡಗಿರುವುದು ಈ ಮಾಡುವ ಚಟುವಟಿಕೆಗಳಲ್ಲಿ ಅಡಗಿದೆ ಅಂದರೆ ತಪ್ಪಾಗಲಾರದು. ಏಕೆಂದರೆ... ಮಾಡು ಅನ್ನುವುದು ಅಭಿನಯದಿಂದ ಆರಂಭವಾಗುತ್ತದೆ. ಅಭಿನಯದ ಎಲ್ಲಾ ಮಜಲುಗಳನ್ನು ಒಳಗೊಂಡು ಮಾಡುವ ಕ್ರಿಯೆಯು, ಕುಣಿತಾ, ಮಣಿತಾ ಮತ್ತು ಕರಕುಶಲ ಕೆಲಸವನ್ನು, ಸ್ವತಃ ಪ್ರಯೋಗಶೀಲರಾಗಿ

ಮಾಡಿದಾಗಲೇ ಅದಕ್ಕೊಂದು ಅರ್ಥ. ಹೀಗಾಗಿ ನೋಡಿದ್ದನ್ನು ಮಾಡುವ ಮೂಲಕ ಸಿದ್ಧಗೊಳಿಸಬೇಕಾಗುತ್ತದೆ. ಉದಾ : ನೃತ್ಯ, ಅಡುಗೆ, ಗಡುಗೆ (ಮಣ್ಣಿನ ಕೆಲಸ), ಅಗೆತ (ಕೆಲಸ), ಒಗೆತ (ಕುಸ್ತಿ), ಕೆತ್ತುವುದು (ಶಿಲ್ಪ), ಮೆತ್ತುವುದು (ಬಣ್ಣ) ಇವುಗಳೆಲ್ಲವನ್ನು ಮಾಡುವ ಚಟುವಟಿಕೆಗಳಾಗಿ ಬಳಸಿಕೊಳ್ಳಬಹುದು.

**5. ಆಡುವ ಚಟುವಟಿಕೆಗಳು :**

ನೆನಪಿದೆಯಾ ಗೆಳತಿ ನೆನಪಿದೆಯಾ, ಮರಳು ಮನೆಗಳ ಕಟ್ಟಿ, ಆಟವಾಡಿದ ದಿವಸ? ಅನ್ನುವ ಅಂಬಿಕಾತನಯದತ್ತರ ಈ ಕವನದ ಸಾಲು, ನಮ್ಮ ನಮ್ಮ ಬಾಲ್ಯವನ್ನ ನೆನಪಿಸುವಂಥದ್ದು. ಉದಾ : ಮರಳು, ಮಣ್ಣು, ಕಲ್ಲು, ಚಿನ್ನಿ, ದಾಂಡು, ಬಿಲ್ಲು, ಬಾಣ, ಗಾಳಿ, ತೇರು, ಹೀಗೇ ಒಳಾಂಗಣ ಮತ್ತು ಹೊರಾಂಗಣದ ಸುತ್ತ ಆಡುವ ಚಟುವಟಿಕಾ ಆಟಗಳಾಗಿ ನಮ್ಮ ಸ್ಮೃತಿಪಟಲದಲ್ಲಿ ಆಳವಾಗಿ ಬೇರೂರುವಂಥವುಗಳು. ಕುಂಟಲಿಪಿ, ಕಣ್ಣಾ ಮುಚ್ಚಾಲೆ, ರಂಗದಾಟಗಳು, ಲಗೋರಿ, ಬಣ್ಣದಾಟ, ಸಂಜ್ಞೆಯಾಟ, ಶಬ್ದದಾಟ, ಬುಗರಿಯಾಟ, ಗಾಳಿಪಟ, ಸಂತೆ, ಜಾತ್ರೆ, ಜಾಥಾದಂತಹ ಮಕ್ಕಳನ್ನು ಆಕರ್ಷಿಸಿ, ಆನಂದಿಸಿ, ಇಡೀ ದಿನವನ್ನ ಸಂತಸದ ಕಲಿಕೆಯಲ್ಲಿ ತೊಡಗಲು/ತೊಡಗಿಸಲು ಸಹಕಾರಿ ಆಗಿವೆ.

**ರಂಗ ತರಬೇತಿ ಚಟುವಟಿಕೆಗಳ ಮಹತ್ವ**

ರಂಗ ತರಬೇತಿ ಶಿಬಿರವೆಂದರೆ, ಇದೊಂದು ಪಾಕಶಾಲೆ ಇದ್ದಂತೆ. ಮಕ್ಕಳು ಸದಾ ಕ್ರಿಯಾಶೀಲರಾಗಿ, ಒಂದಿಲ್ಲೊಂದು ಚಟುವಟಿಕೆಗಳ ಆಗರವಾಗಿ, ನಿರಂತರ ನಡೆಸುವಂಥದ್ದು. ಒಂದು ಪ್ರದರ್ಶನದ ತಯ್ಯಾರಿಗೆ, ಹತ್ತಾರು ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆ, ಮುಖಾಮುಖಿ ಗಣ್ಯರ ಭೇಟಿ, ವಿವಿಧ ಚಟುವಟಿಕೆಗಳು, ಜನಪದ ರಂಗದಾಟಗಳು, ಶಿಬಿರಕ್ಕೆ ಪೂರಕವಾಗಿ ಕೆಲಸ ಮಾಡುವುದರಿಂದ, ನಾನು ವಿಂಗಡಿಸಿ ವಿಸ್ತರಿಸಿದ ಐದು ಬಗೆಯ ವಿಧಾನಗಳು ರಂಗ ತರಬೇತಿ ಚಟುವಟಿಕೆಗಳ ಮಹತ್ವವನ್ನು ಸಾರುತ್ತವೆ ಎಂದು ಭಾವಿಸಿದ್ದೇನೆ. ಕಾರಣ ಇಷ್ಟೇ, ಕೇಳುವ, ಹೇಳುವ, ನೋಡುವ, ಮಾಡುವ ಮತ್ತು ಆಡುವ ಚಟುವಟಿಕೆಗಳು ಮಕ್ಕಳ ಮನಸ್ಸನ್ನು ಸಂತಸದಿಂದ ಇರಲು, ಶಿಬಿರಕ್ಕೆ ಬರಲು, ಹೊಸದನ್ನು ತರಲು, ರಂಗಭೂಮಿಯನ್ನು ಪ್ರೀತಿಸಲು ಹಚ್ಚುತ್ತದೆ. ಇಂಥ ಮಹತ್ಕಾರ್ಯವನ್ನು ಯಾವ ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳೂ ಮಾಡಲಾರವು. ಅದಕ್ಕಾಗಿ ಚಟುವಟಿಕೆ ಆಧಾರಿತ ಶಿಬಿರಗಳು ಸಾರ್ಥಗೊಳ್ಳುವುದರಲ್ಲಿ ಎರಡು ಮಾತಿಲ್ಲ. ಆದ್ದರಿಂದ ಸತತ ಸಂತಸಕ್ಕೆ ಎಡೆ ಮಾಡಿಕೊಡುವ ರಂಗ ತರಬೇತಿಗಳು ನಾಡಿನಾದ್ಯಂತ ನಡೆಯಬೇಕೆಂಬುದೇ ನನ್ನ ಆಶಯ.

★★★

# ಮಕ್ಕಳ ರಂಗಭೂಮಿಯ ಕುರಿತು ....

– ಮೂರ್ತಿ ದೇರಾಜೆ

ನಾನು ರಂಗಭೂಮಿಯ ತಜ್ಞ ಅಲ್ಲ, ಲೇಖಕನೂ ಅಲ್ಲ, ವಿಮರ್ಶಕನೂ ಅಲ್ಲ.

ಆದರೂ, ಒಂದಷ್ಟು ಮಕ್ಕಳ ನಾಟಕ ಆಡಿಸಿದ್ದಕ್ಕಾಗಿ ಏನಾದರೂ ಬರೆಯಲೇ ಬೇಕಾದ ಅನಿವಾರ್ಯತೆ ಇದೆ.

ನನ್ನಲ್ಲಿ ಕೆಲವು ಜನ ಆಗಾಗ ಕೇಳುತ್ತಿರುವ ಮತ್ತು ನನ್ನಲ್ಲೇ ಹುಟ್ಟಿಕೊಳ್ಳುವ ಕೆಲವು ಪ್ರಶ್ನೆಗಳಿವೆ.

ಕಳೆದ ಕೆಲವು ವರ್ಷಗಳ, ಮಕ್ಕಳೊಂದಿಗಿನ ನನ್ನ ಒಡನಾಟದಲ್ಲಿ,

ನಾನು ಕಂಡುಕೊಂಡದ್ದನ್ನು, "ಇಂದಿಗೆ ಹೀಗೆ....." ಎಂದು ಹೇಳುವ ಪ್ರಯತ್ನ ಇದು....

**(01) ನಾಟಕ ಎಂದರೆ ಏನು?**

* ಹೌದು ಏನು....!    ಏನು ಅಂತ ಹೇಳುವುದು......!

ನಾಟಕ ಎಂದರೆ ಒಂದು ಕಲೆ, ನಾಟಕ ಎಂದರೆ ಒಂದು ಭಾಷೆ, ನಾಟಕ ಎಂದರೆ ಶಿಕ್ಷಣ, ನಾಟಕ ಎಂದರೆ ವ್ಯಕ್ತಿತ್ವ ವಿಕಸನ,

ನಾಟಕ ಎಂದರೆ ಬದುಕು, ನಾಟಕ ಎಂದರೆ ಆಧ್ಯಾತ್ಮ.....

–ಹೀಗೆ ಏನು ಹೇಳಿದರೂ, ಪೂರ್ತಿ ಹೇಳಿದ ಹಾಗೆ ಆಗುವುದಿಲ್ಲವೋ ಏನೋ...!

**(02) ಮಕ್ಕಳ ನಾಟಕ, ಹಿರಿಯರ ನಾಟಕಕ್ಕಿಂತ ಭಿನ್ನವೇ..?**

* ಭಿನ್ನ ಹೌದು;

"ಮಕ್ಕಳು ಏನು ಮಾಡಿದರೂ ಚೆಂದ, ಅವರು ಅವರಷ್ಟಕ್ಕೇ ನಾಟಕ ಮಾಡಿಕೊಂಡಿರಲಿ"–ಎನ್ನುವ ಕಾರಣಕ್ಕಾಗಿ ಅಲ್ಲ.

ಈ ಮಾತು ಹೆಚ್ಚಿನಸಂದರ್ಭಗಳಲ್ಲಿ ತೀರಾ ಅಪಕ್ವವಾದದ್ದು. ಮಕ್ಕಳ ನಾಟಕ– ಹಗುರವಾದ, ತೇಲಿಬಿಡುವ ವಿಷಯ ಅಲ್ಲ.

ಮಕ್ಕಳ ನಾಟಕ– 'ಪ್ರಕ್ರಿಯೆ'ಹಾಗೂ 'ಪ್ರದರ್ಶನ'–ಎರಡರಲ್ಲೂ ಹಿರಿಯರ ನಾಟಕದ ನಕಲು ಅಲ್ಲ.

ಮಕ್ಕಳ ನಾಟಕದ–ಮಾತುಗಳು, ಚಲನೆ, ದೃಶ್ಯ ಯಾವುದೂ 'ರೆಡಿಮೇಡ್' ಆಗಿರಬಾರದು.

ಅದು 'ರಂಗನಾಟಕ'. ರಂಗದಲ್ಲೇ ಹುಟ್ಟಬೇಕು, ರಂಗದಲ್ಲೇ ಬೆಳೆಯಬೇಕು. ರಸಭಾವವನ್ನು ಉಂಟುಮಾಡಬೇಕಾದದ್ದು ಅಪೇಕ್ಷಣೀಯ.

ಕುತೂಹಲ, ಬೆರಗು, ಮುಗ್ಧತೆ, ತುಂಟತನ, ಸಂಭ್ರಮಗಳೇ ಮಕ್ಕಳ ನಾಟಕದ ಜೀವಾಳ.

**(03) ಮಕ್ಕಳಿಗೆ ನಾಟಕ ಯಾಕೆ ?**

* ನಾಟಕವನ್ನು ಒಂದು 'ಪ್ರದರ್ಶನ'ವಾಗಿ ಮಾತ್ರ ನೋಡಿದಾಗ ಇಂತಹ ಪ್ರಶ್ನೆ ಹುಟ್ಟಬಹುದೋ ಏನೋ !

ಆದರೆ ಅದು ಹಾಗಲ್ಲ. ಇಲ್ಲಿ 'ಫಲಿತಾಂಶ'ಕ್ಕಿಂತ 'ಪ್ರಕ್ರಿಯೆ' ಮುಖ್ಯವಾಗುತ್ತದೆ.

ಅಂದರೆ, ನಾಟಕ 'ಪ್ರದರ್ಶನ'ಕ್ಕಿಂತ, ನಾಟಕದ 'ತಯಾರಿ ಹೇಗೆ ನಡೆಯಿತು' ಎನ್ನುವುದು ಮುಖ್ಯ.

"ಪ್ರಕ್ರಿಯೆ ಸುಂದರವಾಗಿದ್ದರೆ, ಫಲಿತಾಂಶವೂ ಸುಂದರವಾಗಿರುತ್ತದೆ" ಎನ್ನುವುದು ಸರಳವಾದ ಸತ್ಯ.

ನಾಟಕವು, ಮಕ್ಕಳ ಸೃಷ್ಟಿಶೀಲ ಚಟುವಟಿಕೆಗಳಿಗೆ–

ಪ್ರೇರಣೆ ನೀಡುವ, ಅವಕಾಶ ನೀಡುವ, ಪ್ರೋತ್ಸಾಹಿಸುವ, ಬೆಳೆಸುವ, ಕ್ಷೇತ್ರ; ಆತ್ಮವಿಶ್ವಾಸವನ್ನು ಹೆಚ್ಚಿಸುವ ಕ್ಷೇತ್ರ – ಎನ್ನಬಹುದು.

**(04) ಶಾಸ್ತ್ರೀಯವಾದ ನೃತ್ಯ, ಸಂಗೀತ, ಯಕ್ಷಗಾನಗಳ ತರಬೇತಿಗಳು; ಮಕ್ಕಳ ಬೆಳವಣಿಗೆಗೆ ಸಹಕಾರಿಯಲ್ಲವೆ ?**

* ಇಂತಹ ತರಬೇತಿ ಬೇಡವೆಂದಲ್ಲ, ಆದರೆ, ಅವೆಲ್ಲಾ ಮಕ್ಕಳ ಅಭಿವ್ಯಕ್ತಿ ಮಾಧ್ಯಮ ಎಂದು ನನಗನಿಸುವುದಿಲ್ಲ.

ಮಕ್ಕಳಿಗೇ ಆಸಕ್ತಿ ಇದ್ದಲ್ಲಿ; ಹತ್ತು, ಹನ್ನೆರಡನೇ ವಯಸ್ಸಿನ ನಂತರ ಸಾಕೋ ಏನೋ !

ಹಿರಿಯರು ತಮ್ಮ ಪ್ರತಿಷ್ಠೆ, ಚಪಲಕ್ಕಾಗಿ ಆಸಕ್ತಿಯನ್ನು ಮಕ್ಕಳ ಮೇಲೆ ಹೇರುವುದು ಎಷ್ಟು ಸರಿ !!

ಆ ವಿಷಯುಗಳನ್ನೂ, ಪರೀಕ್ಷೆ ಗುರಿಂಯಾಗಿಸಿಕೊಂಡು ಕಲಿಸುವುದು ಸರಿಯಾದೀತೇ!! ಕಲಿಯುತ್ತಿರುವಾಗಲೇ ಪ್ರದರ್ಶನ ಸರಿಯಲ್ಲ.

ಶಾಸ್ತ್ರೀಯ ಕಲೆಯ ಪ್ರದರ್ಶನಕ್ಕೆ ಅನೇಕ ವರ್ಷಗಳ ಅದ್ಯಯನ-ತಯಾರಿ ಬೇಕಾಗುತ್ತದೆ.

ಪ್ರದರ್ಶನಕ್ಕೆ ಅವಸರ ಮಾಡಿದಲ್ಲಿ, ಪ್ರದರ್ಶನ ಚಪಲ, ಹೊಗಳಿಕೆಯ ಬಯಕೆ ಹೆಚ್ಚುತ್ತಾ ಹೋಗಿ,

ಕಲಿಕೆ, ಬೆಳವಣಿಗೆ ನಿಂತು ಬಿಡುತ್ತದೆ.

ಪ್ರದರ್ಶನದೊಂದಿಗೇ ಬೆಳೆಯುವ ಕಲೆ- ನಾಟಕ ಮಾತ್ರ.

ನಾಟಕದಲ್ಲಿಇರುವುದು ಸಮೂಹ ಚಟುವಟಿಕೆ; ವೈಯುಕ್ತಿಕ ಪ್ರತಿಭೆಯ ವೈಭವೀಕರಣ ಅಲ್ಲ.

ಇಲ್ಲಿ, ನಾನು ಹೇಳುತ್ತಿರುವುದು ರಂಗ ನಾಟಕದ ಕುರಿತು; ಪ್ರದರ್ಶನವೇ ಗುರಿಯಾಗಿರುವ ನಾಟಕದ ಬಗ್ಗೆ ಅಲ್ಲ.

**(05) ಕತೆ-ಕವನ ರಚನೆಯುಂತಹ ಸಾಹಿತ್ಯ ಚಟುವಟಿಕೆ; ಮಕ್ಕಳ ಸಾಹಿತ್ಯಸಮ್ಮೇಳನ-**

**ಇವೆಲ್ಲ ಮಕ್ಕಳ ಬೆಳವಣಿಗೆಗೆ ಪೂರಕ ಅಲ್ಲವೇ ?**

* ಸಾಮಾನ್ಯವಾಗಿ ಇಲ್ಲೆಲ್ಲಾ ಹಿರಿಯರ ಚಪಲಗಳೇ ಹೆಚ್ಚಾಗಿ ಕೆಲಸ ಮಾಡುವಂತೆ ಕಂಡು ಬರುತ್ತದೆ.

ಮಕ್ಕಳದ್ದೇ ಕಲ್ಪನೆ,ಮಕ್ಕಳದ್ದೇ ಚಿಂತನೆ,ಮಕ್ಕಳದ್ದೇ ಭಾವನೆ, ಮಕ್ಕಳದ್ದೇ ಭಾಷೆ- ಅಲ್ಲಿದ್ದರೆ ಚಂದವೇ ಹೊರತು,

ಹಿರಿಯರು ಬರೆದುಕೊಟ್ಟದ್ದನ್ನು ಉರುಹೊಡೆದು,

ವೇದಿಕೆಯಲ್ಲಿಭಾಷಣಬಿಗಿಯುವ ಮಕ್ಕಳನ್ನು ಕಂಡು 'ಧನ್ಯ'ರಾಗುವುದು ನನಗೆ ಅರ್ಥವೇ ಆಗುವುದಿಲ್ಲ.

ಕತೆ, ಕವನ ರಚನೆಯು ಮಕ್ಕಳಲ್ಲಿಪ್ರಕಟಣೆಯ,ಪ್ರದರ್ಶನದ, ಹುಚ್ಚನ್ನು ಬೆಳೆಸುವಂತಿರಬಾರದು.

ಎಷ್ಟೋ ಸಾರಿ, 'ಇದು ಮಕ್ಕಳ ಕಲ್ಪನೆ' ಎಂದು ನಾವು ಬೀಗುವುದು ನಮ್ಮ ಸಮರ್ಥನೆಗಾಗಿ, ನಮ್ಮ ಲಾಭಕ್ಕಾಗಿ.

**(06) ಹಾಗಾದರೆ, ಮಕ್ಕಳ ಬೆಳವಣಿಗೆಗೆ ನಾಟಕ ಮಾತ್ರ ಸಾಕೇ ? ಬೇರೆ ಯಾವುದೂ ಬೇಕಾಗಿಲ್ಲವೇ ?**

* ಮಕ್ಕಳ ಬೆಳವಣಿಗೆಗೆ ನಾಟಕ ಮುಖ್ಯ ಎಂದರೆ, ಉಳಿದ ಯಾವುದೂ ಬೇಡ ಎಂಬ ಅರ್ಥವಲ್ಲ.

ನಾಟಕ ಮನುಷ್ಯನ ಮೂಲಭೂತ ಪ್ರವೃತ್ತಿ, ಹುಟ್ಟಿನೊಂದಿಗೇ ಇದೆ. **ನಾಟಕದಲ್ಲಿ ಎಲ್ಲವೂ ಸೇರಿಕೊಂಡಿದೆ**

ಪ್ರಾಯಷಃ, 'ನಾಟಕ' ಎನ್ನುವುದಕ್ಕಿಂತ 'ರಂಗಭೂಮಿ' ಎಂದರೆ ಹೆಚ್ಚು ಸ್ಪಷ್ಟವಾದೀತೋ ಏನೋ !

ರಂಗಭೂಮಿ ಚಟುವಟಿಕೆಯಲ್ಲಿ–ಸಾಹಿತ್ಯ,ಸಂಗೀತ, ನೃತ್ಯ, ಚಿತ್ರ ಆಟ, ಪಾಟ, ಹುಡುಕಾಟ ಎಲ್ಲಾ ಇರುತ್ತದೆ.

ಶಾಸ್ತ್ರೀಯವಾದದ್ದು, ಅಶಾಸ್ತ್ರೀಯವಾದದ್ದು ಎರಡೂ ಇದೆ.

'ಎರಡು' ಅಂದರೆ 'ದ್ವಂದ್ವ' ಇರುವುದರಿಂದ, ಮನಸ್ಸು ಸೃಷ್ಟಿಶೀಲವಾಗುತ್ತದೆ.

ಶಾಸ್ತ್ರವನ್ನು ಕಲಿತು ಅದನ್ನು ಮೀರುವ ಗುಣ ನಾಟಕದ ಒಡಲಲ್ಲೇ ಇದೆ.

ನಾಟಕ ಅನೇಕ ವಿಷಯಗಳಿಗೆ ಮುಖಾಮುಖಿ ಆಗುವುದರಿಂದ

ಆಯ್ಕೆಗೆ ಅವಕಾಶ ಹೆಚ್ಚು ಇರುತ್ತದೆ, ಆಸಕ್ತಿಯನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗುತ್ತದೆ.

ನಾಟಕವು ಒಂದು ಆಟವಾಗುವುದರಿಂದ ಆನಂದದಾಯಕವಾಗಿರುತ್ತದೆ, 'ಕಲಿಕೆ' ಅವರ ಅರಿವಿಗೆ ಬಾರದಂತೆ ನಡೆದಿರುತ್ತದೆ.

ಇಲ್ಲಿ ಕಲಿಸುವುದು ಅಲ್ಲ, ಕಲಿಯುವಂತೆ ಮಾಡುವುದು. ಕಲಿಕೆಯ ಪರಿಸರ–ಸಾಮಾಗ್ರಿ ಒದಗಿಸುವುದು.

ಇನ್ನೂ ಸರಳವಾಗಿ ಹೇಳುವುದಿದ್ದರೆ–

ರಂಗಭೂಮಿ ಚಟುವಟಿಕೆಯಲ್ಲಿ ಮಕ್ಕಳನ್ನು 'ನಟ'ರನ್ನಾಗಿ ಮಾಡುವುದೇ ಉದ್ದೇಶ ಅಲ್ಲ.

ಮಕ್ಕಳ ಆತ್ಮವಿಶ್ವಾಸ ಹೆಚ್ಚಾಗುವಂತೆ ಮಾಡಿ, ಮಕ್ಕಳು ತಮ್ಮ ದಾರಿಯನ್ನು ತಾವೇ ಕಂಡುಕೊಳ್ಳುವಂತೆ ರೂಪಿಸುವುದು.

***'ರಂಗತರಬೇತಿ' ಎನ್ನುವುದು ಎಲ್ಲದಕ್ಕೂ ಅಡಿಪಾಯ ಇದ್ದಂತೆ.***

ಮಕ್ಕಳು ನಿಧಾನವಾಗಿ ತಮ್ಮದಾರಿಯನ್ನು ಕಂಡುಕೊಳ್ಳುತ್ತಾರೆ. ಬಂದದ್ದನ್ನು ಎದುರಿಸುವ ಛಲ ಬೆಳೆಯುತ್ತದೆ.

ತಮ್ಮ ಆಸಕ್ತಿಯ ದಾರಿಯಲ್ಲಿ, ಸಹಜವಾಗಿ ಏಕಾಗ್ರತೆ ಮೂಡಿ, ಯಾವುದೇ ಸಾಧನೆಗೆ ನೆರವಾಗುತ್ತದೆ.

'ಶಿಕ್ಷಣ ರಂಗಭೂಮಿಯ ಮೂಲಕ ಆಗಬೇಕು' ಎನ್ನುವುದು ಈ ಕಾರಣಕ್ಕಾಗಿ ಎಂದು ಭಾವಿಸಿದ್ದೇನೆ.

**(07) 'ಶಿಕ್ಷಣ– ರಂಗಭೂಮಿಯ ಮೂಲಕ ನಡೆಯಬೇಕು'–ಎಂದಾದಲ್ಲಿ ಮಕ್ಕಳಿಗೂ, ಶಿಕ್ಷಕರಿಗೂ ಅನಾವಶ್ಯಕ ಹೊರೆ ಅಲ್ಲವೆ ?**

* ಆಲಸೀ ಶಿಕ್ಷಕರಿಗೆ ಹೊರೆ ಎಂದು ಅನಿಸಲೂ ಬಹುದು.

ಮಕ್ಕಳಿಗೆ ಖಂಡಿತಾ ಹೊರೆಯಲ್ಲ. ಭಾರ ಇಳಿದು ಹಗುರವಾಗುತ್ತಾರೆ. ಒತ್ತಡಗಳು ಇರುವುದಿಲ್ಲ.

'ಹೊರೆ' ಎಂದು ಅನಿಸುವುದೇ, "ಇದು ನೀನು ಕಲಿಯಬೇಕಾದ್ದು" ಎಂದು ಗೊತ್ತುಮಾಡಿದಾಗ.

ಕಲಿಕೆ ಗೊತ್ತಿಲ್ಲದೇ ನಡೆದರೆ ಅದು ಆನಂದ. ಆನಂದದಾಯಕವಾದ್ದರಿಂದ ಕಲಿತದ್ದು ನೆನಪಲ್ಲಿ ಉಳಿಯುತ್ತದೆ.

ಮಕ್ಕಳ ಜೊತೆ ಸೃಜನಶೀಲ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಶಿಕ್ಷಕನೂ ಬೆಳೆಯುತ್ತಾನೆ.

'ತಾನು ಬೆಳೆದಾಗಿದೆ' ಎಂದು ತಿಳಿದಿರುವವನನ್ನು ಏನು ಮಾಡಲೂ ಸಾದ್ಯವಿಲ್ಲ.

ಅಲ್ಲದೇ ಇದೇನೂ ಹೊಸಾ ವಿಷಯ ಅಲವಲ್ಲಾ ! ಒಬ್ಬ ಒಳ್ಳೆಯ ಶಿಕ್ಷಕನ ಪಾಠಕ್ರಮದಲ್ಲಿ,

ಒಂದಲ್ಲ ಒಂದು ರೀತಿಯಲ್ಲಿ ರಂಗಭೂಮಿ ಚಟುವಟಿಕೆ ಸೇರಿಕೊಂಡೇ ಇರುತ್ತದೆ.

**(08) ಮಕ್ಕಳ ನಾಟಕವನ್ನು,– 'ಶಿಕ್ಷಣ' ಎಂದು ಮಾತ್ರ ತಿಳಿಯ ಬೇಕೇ ? ಅಥವಾ ಒಂದು ಕಲೆಯಾಗಿ ನೋಡಬಹುದೇ ?**

* ಮಕ್ಕಳನಾಟಕದಲ್ಲಿ 'ಪ್ರಕ್ರಿಯೆ' ಒಂದು ಶಿಕ್ಷಣವಾಗಬೇಕು; 'ಪ್ರದರ್ಶನ' ಒಂದು ಕಲೆಯಾಗಬೇಕು.

ಪ್ರದರ್ಶನವಿದ್ದಲ್ಲಿ, ಪ್ರಕ್ರಿಯೆಯನ್ನು ಅದಕ್ಕಾಗಿ ಹೊಂದಿಸಿಕೊಳ್ಳಬೇಕು. ಮಕ್ಕಳ ಮಾತು, ಚಲನೆ ಎಲ್ಲಾಸಹಜವಾಗಿರುವಂತೆ, ಅವರನ್ನು ಪ್ರೇರೇಪಿಸಿ ಅಭ್ಯಾಸ ನಡೆಸಿದರೆ, 'ರಸ' ಸೃಷ್ಟಿಯಾಗಿ, ಪ್ರದರ್ಶನವು ಕಲೆಯ ರೂಪ ಪಡೆಯಲು ಸಾದ್ಯ. ಅಲ್ಲಿಯೂ ಕಲಿಕೆ ಇದೆ. ರಸಗ್ರಹಣಶಕ್ತಿ ಬೆಳೆಯುತ್ತದೆ.

ಸೌಂದರ್ಯ ಪ್ರಜ್ಞೆ, ನಡಿಗೆಯ ಲಯ,ಮಾತಿನ ಏರಿಳಿತ,ಪಾತ್ರದ ಸ್ವಭಾವ– ಇತ್ಯಾದಿ ತಿಳಿಯುತ್ತಾ ಬರುತ್ತದೆ.

ಮಕ್ಕಳ ನಾಟಕವನ್ನು 'ಕಲಾಪ್ರಕಾರ'ದಿಂದ ಹೊರಗಿಡುವುದು ಸರಿಯಲ್ಲ.

**(09) ಮಕ್ಕಳ ನಾಟಕ ಪ್ರದರ್ಶನ ಹೇಗಿರಬೇಕು ?**

* ಮಕ್ಕಳ ವಯೋಮಾನಕ್ಕೆ ಅನುಗುಣವಾಗಿ; ಅವರು ಬೆಳೆದ ಊರು,ಪರಿಸರಕ್ಕೆ ಅನುಗುಣವಾಗಿ ಇರಬೇಕಾಗುತ್ತದೆ. ಸಂಭಾಷಣೆಯ ಭಾಷೆ– ಅವರು ದಿನ ನಿತ್ಯ ಬಳಸುವ ಶೈಲಿಯೇ ಚಂದ; ಕಾವ್ಯಮಯವಾಗಿಸುವ ಚಪಲ ಸರಿಯಲ್ಲ. ಮೇಲ್ನೋಟಕ್ಕಂತೂ ಸರಳವಾಗಿಯೇ ಇರಬೇಕು, ಹಿರಿಯರ ಯೋಚನೆಯನ್ನು ಕೆದಕುವ 'ಧ್ವನಿ'ಅದರಲ್ಲಿದ್ದರೆ ಅದು 'ಪ್ಲಸ್ ಪಾಯಿಂಟ್.'

ನಾಟಕದಲ್ಲಿ ಹಾಡು,ಕುಣಿತಕ್ಕೆ ಅವಕಾಶ ಇರಬೇಕು, ವರ್ಣಮಯವಾಗಿರಬೇಕು. ಹೆಚ್ಚು ಮಕ್ಕಳು ಭಾಗವಹಿಸುವಂತಿದ್ದರೆ ಒಳ್ಳೆಯದು.

ಮಕ್ಕಳ ಕುತೂಹಲ, ಬೆರಗು, ಮುಗ್ಧತೆ, ತುಂಟತನ–ಇವೆಲ್ಲಾ ಸಹಜವಾಗಿ ಪ್ರಕಟವಾಗಿ ರಸ ಸೃಷ್ಟಿಯಾಗಬೇಕು.

ಮುಖವಾಡ, ಮೇಕಪ್ಪು, ವೇಷಭೂಷಣಗಳು ಮಕ್ಕಳಿಗೆ ಹೊರೆ ಆಗಬಾರದು; ಮಕ್ಕಳ ಮುಖ ಸರಿಯಾಗಿ ಕಾಣಿಸುವಂತಿರಬೇಕು.

ಸಾಂಪ್ರದಾಯಿಕ ವೇದಿಕೆಯ ಜೊತೆ; ಮರಗಿಡಗಳ ನಡುವೆ, ಏರು ತಗ್ಗುಗಳ ನಡುವೆ ಮಕ್ಕಳು ನಾಟಕವಾಡುವ ಖುಶಿಯೇ ಬೇರೆ.

ಮಕ್ಕಳ ನಾಟಕ ಹಬ್ಬ ಆಗಬೇಕು, ಸಂಭ್ರಮ ಆಗಬೇಕು ಎನ್ನುವುದು ನನ್ನ ಅನಿಸಿಕೆ.

**(10) ಮಕ್ಕಳ ನಾಟಕದಲ್ಲಿ; ನೀತಿ, ಸಂದೇಶ ಬೇಕೇ...... ಬೇಡವೇ ?**

* ಎಲ್ಲಾ ನಾಟಕಗಳಲ್ಲೂ, ಏನಾದರೂ ಒಂದು ಸಂದೇಶ ಇದ್ದೇ ಇರುತ್ತದಲ್ಲ! 'ನೀತಿ, ಸಂದೇಶ ಹೇಳಿಸುವುದೇ' ಮಕ್ಕಳ ನಾಟಕದ ಗುರಿಯಲ್ಲ.

ಎಷ್ಟೋಕಡೆ–ನಾಟಕ ಚೆನ್ನಾಗಿ ಸಂವಹನ ಸಾಧಿಸಿದ್ದರೂ,

"ಕೊನೆಯಲ್ಲಿ ನೀತಿ ಏನೆಂದು ಹೇಳಿಲ್ಲ" ಎನ್ನುವ ಕಾರಣ ಮುಂದಿಟ್ಟು ಅಂಕ ಕಳೆಯುವ ತೀರ್ಪುಗಾರರೂ ಇರುತ್ತಾರೆ.

**(11) ಮಕ್ಕಳಿಗೆ ಅಭಿನಯ ಕಲಿಸಿ ಕೊಡಬೇಕೇ... ಬೇಡವೇ ?**

* ಸಾಮಾನ್ಯವಾಗಿ ಎಲ್ಲಾಕಡೆ, ಒಂದು ಪ್ರದರ್ಶನವನ್ನು ಗಮನದಲ್ಲಿಇಟ್ಟುಕೊಂಡೇ

ನಾಟಕ ತಯಾರಿ ನಡೆಯೋದು. ಅಂತಹ ಸಂದರ್ಭಗಳಲ್ಲಿ ಮಕ್ಕಳಿಗೆ ಅಭಿನಯವನ್ನು ಕಲಿಸಿಕೊಡಬೇಕಾಗುತ್ತದೆ.

ಮಕ್ಕಳು ಎಲ್ಲವನ್ನೂ ಅನುಕರಣೆ ಮಾಡ್ತಾರೆ, ತಮ್ಮದನ್ನೂ ಅಭಿನಯಿಸುತ್ತಾರೆ, ತಮ್ಮದಲ್ಲದ್ದನ್ನೂ ಅಭಿನಯಿಸುತ್ತಾರೆ. ಯಾಕೆಂದರೆ, ಇವತ್ತು ಮಕ್ಕಳಿಗೆ ಮಾದರಿಗಳಿರುವುದು–ಕೆಟ್ಟದಾದ ಸಿನಿಮಾಗಳು, ಸಿನಿಮಾ ಮಾದರಿಯ ನಾಟಕಗಳು,

ಅಭಿನಯದ ಹೆಸರಿನಲ್ಲಿ ವಿಕಾರ ಅಂಗಚೇಷ್ಟೆಗಳನ್ನು ಪ್ರದರ್ಶಿಸುವ ಹಿರಿಯರ ನಾಟಕಗಳು,

ಕೆಟ್ಟದಾದ ಟಿ.ವಿ. ಧಾರಾವಾಹಿಗಳು, ಟಿ.ವಿ. ಕಾರ್ಯಕ್ರಮ ನಿರ್ವಾಹಕರು, ಆರ್ಕೆಸ್ಟ್ರಾ ನಿರ್ವಾಹಕರು–ಇತ್ಯಾದಿ.

'ಇದೇ ಅಭಿನಯ' ಎಂದು ತಿಳಿದ ಮಕ್ಕಳಿಗೆ–

"ಇದು ನಿಮ್ಮದಲ್ಲಾ, ನಿಮ್ಮ ಅಭಿನಯ ಬೇರೆ....." ಎಂದು ಕಲಿಸಿಕೊಡಬೇಕಾಗುತ್ತದೆ.

ಮಕ್ಕಳನ್ನು ಬೇಗ 'ದೊಡ್ಡವರ'ನ್ನಾಗಿಸುವ ಭರದಲ್ಲಿ, ಮಕ್ಕಳ ಬಾಲ್ಯವನ್ನು ನಾವೇ ಹೊಸಕಿ ಹಾಕುತ್ತಿದ್ದೇವೆ.

"ಮಕ್ಕಳ ಸಹಜತೆ, ಕೊನೇಪಕ್ಷ ನಾಟಕದಲ್ಲಿ ಆದರೂ ಕಾಣಲಿ",

ಎನ್ನುವ ಕಾರಣಕ್ಕಾಗಿಯಾದರೂ, ಅಭಿನಯವನ್ನು ಕಲಿಸಿಕೊಡುವುದು ಒಳ್ಳೆಯದು.

ಮಕ್ಕಳ ಸಹಜ ಅಭಿನಯವನ್ನು ಹೊರಗೆಳೆಯಬೇಕಾದ್ದು ನಿರ್ದೇಶಕನ ಹೊಣೆ.

ಆದರೆ, ನಾಟಕ 'ಪ್ರದರ್ಶನ' ಇಲ್ಲ ಎಂದಾದರೆ, ನಾಟಕ ಎನ್ನುವುದು ದಿನನಿತ್ಯದ ಪ್ರಕ್ರಿಯೆ ಎಂದಾದರೆ, ಅಭಿನಯವನ್ನು ನೇರವಾಗಿ ಕಲಿಸ ಬೇಕಿಲ್ಲ. ಕೊರತೆಗಳನ್ನು ಎತ್ತಿ ತೋರಿಸದೇ, 'ಚೆನ್ನಾಗಿದೆ' ಎಂದು ಬೆನ್ನು ತಟ್ಟುತ್ತಾ, ಮಕ್ಕಳೇ ಯೋಚಿಸಿ ಕಲಿಯುವಂತೆ ಮಾಡಬೇಕಾದ್ದು ನಿರ್ದೇಶಕನ ಜವಾಬ್ದಾರಿ.

ನಿರ್ದೇಶಕ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಾ, ಮಕ್ಕಳು ತನ್ನ ಕೈ ಕೂಸುಗಳಾಗದಂತೆ ಎಚ್ಚರ ವಹಿಸಬೇಕು. ಮಕ್ಕಳ ಕಲ್ಪನೆಗಳಿಗೆ ಅವಕಾಶ ನೀಡಿ,ಅವರ ಸಾಮರ್ಥ್ಯವನ್ನು ಬೆಳೆಸ ಬೇಕು. ಶಾಲೆಗಳಲ್ಲಿ ದಿನ ನಿತ್ಯ ನಡೆಯಬೇಕಾದ್ದು ಹೀಗೆ. 'ಫಲಿತಾಂಶ ಮುಖ್ಯ' ಎನ್ನುವ ಭ್ರಮೆ ಹೋಗಿ, 'ಪ್ರಕ್ರಿಯೆ ಮುಖ್ಯ' ಎನ್ನುವ ಅರಿವು ಎಲ್ಲಾ ಹಿರಿಯರಲ್ಲೂ ಮೂಡಬೇಕು.

**(12) ಕನ್ನಡದಲ್ಲಿ ಮಕ್ಕಳ ನಾಟಕ ಪಠ್ಯದ ಕೊರತೆ ಇದೆ ಎನ್ನುತ್ತಾರಲ್ಲ...!!**

* ನನಗಂತೂ ಹಾಗನಿಸಿಲ್ಲ..... ಮಕ್ಕಳ ನಾಟಕಕ್ಕೆ 'ರೆಡಿಮೇಡ್ ಸ್ಕ್ರಿಪ್ಟ್' ಯಾಕೆ...?

ಎಷ್ಟೋ ವರ್ಷಗಳಿಂದ ಬರುತ್ತಿರುವ 'ಚಂದಮಾಮ' ಇದೆ, 'ಪಂಚತಂತ್ರ' ಇದೆ. ಅನೇಕ ಮಕ್ಕಳಕತೆ ಪುಸ್ತಕಗಳಿವೆ, ಇದಲ್ಲದೇ ಮಕ್ಕಳ ಬಾಯಿ ಬಿಡಿಸಿದರೆ ಅದ್ಭುತವೆನಿಸುವ ಕತೆಗಳೂ ಹುಟ್ಟಿಕೊಳ್ಳುತ್ತವೆ.

ಮಕ್ಕಳಿಗೆ ಎಂದೂ ನಾಟಕದ ಕೊರತೆ ಕಂಡುಬರುವುದಿಲ್ಲ.

ಮಕ್ಕಳ ಮೂಲಕ ಸಂಭಾಷಣೆ ಬೆಳೆದಾಗಲೇ, ಅದು ಮಕ್ಕಳ ನಾಟಕ ಆಗೋದು ಎನ್ನುವುದು ನನ್ನನಂಬಿಕೆ.

***-"ಪೌರಾಣಿಕ, ಐತಿಹಾಸಿಕ ನಾಟಕಗಳು, ನೀತಿಯುತವಾದ ನಾಟಕಗಳು ಮಾತ್ರ- ಮಕ್ಕಳ ನಾಟಕಗಳು......."***

***–"ಮಕ್ಕಳ ನಾಟಕದಲ್ಲಿ,ಅದ್ಭುತ ರಮ್ಯ ಕಲ್ಪನೆಗಳು ಇರಬಾರದು.ವಾಸ್ತವತೆಯ ಅರಿವು ಮೂಡಿಸುವ ಕೆಲಸ ಅಗಬೇಕು....."***

-ಇಂತಹ ಭ್ರಮೆಗಳನ್ನು ಬಿಟ್ಟು, ಮಕ್ಕಳಾಗಿಯೇ ಯೋಚಿಸಿದಾಗ, ಮಕ್ಕಳ ನಾಟಕಪಠ್ಯದ ಕೊರತೆ ಕಂಡುಬರಲಾರದು.

**(13) ನಾಟಕದ ಸಂಭಾಷಣೆ ಮಕ್ಕಳೇ ರಚಿಸಿಕೊಂಡರೆ ಅದು ಸರಿಯಾದೀತೇ ? ರಸ ಸೃಷ್ಟಿಯಾದೀತೇ ?**

* "ಮಕ್ಕಳೇ" ಅಲ್ಲ, "ಮಕ್ಕಳ ಮೂಲಕ" ಸಂಭಾಷಣೆ.

ಅಂದರೆ ನಿರ್ದೇಶಕ ಅಥವಾ ನಾಟಕಕಾರ ಅಯಾಯ ಮಗುವಿನ ಸಾಮರ್ಥ್ಯಕ್ಕೆ ಅನುಗುಣವಾಗಿ, ಮಗುವಿನ ಅರಿವಿಗೆ ನಿಲುಕುವಂತಾ ಮಾತುಗಳನ್ನು ಕಟ್ಟುತ್ತಾ ಸಂಭಾಷಣೆ ಬೆಳೆಸುವುದು ಮುಖ್ಯ.

ಆಗ ಈ ಮಾತು, ತನ್ನದೇ ಸ್ವಂತದ್ದು ಎಂದು ಮಗು ನಂಬುವಂತಾಗುತ್ತದೆ, ಮಗುವಿಗೆ ಪಾತ್ರದೊಳಗೆ ಪ್ರವೇಶ ಸುಲಭವಾಗುತ್ತದೆ.

ನಿರ್ದಿಷ್ಟ ಭಾವ ಮನಸ್ಸಿನಲ್ಲಿ ಮೂಡಿ, ಮಾತು ಸಹಜವಾಗುತ್ತದೆ.

**(14) ಮಕ್ಕಳ ರಂಗಭೂಮಿ ಎಂದರೆ, ಹಿರಿಯರು ಮಕ್ಕಳಿಗಾಗಿ ಅಭಿನಯಿಸುವಂತಾದ್ದು; ಮಕ್ಕಳೇ ಅಭಿನಯಿಸುವುದು ಅಲ್ಲ,**

**ಮಕ್ಕಳೇ ಅಭಿನಯಿಸಿದರೆ ಅದು 'ಸೃಜನಾತ್ಮಕ ರಂಗಭೂಮಿ' ಎನ್ನುವ ವಾದ ಇದೆಯಲ್ಲ!**

* ವಾದ ಇಲ್ಲದೇ ಇರುವುದು ಯಾವುದಕ್ಕೆ ! ವಾದದ ಜೊತೆಗೇ ಪ್ರತಿವಾದವೂ ಹುಟ್ಟಿಕೊಳ್ಳುತ್ತದಲ್ಲ.

ಇರಲಿ ಬಿಡಿ....! ಸೃಜನಾತ್ಮಕ ರಂಗಭೂಮಿ ಅಂದರೆ ತಪ್ಪಲ್ಲ. ನಿಜವಾಗಿ ಸೃಜನಶೀಲತೆ ಮಕ್ಕಳಲ್ಲೇ ಹೆಚ್ಚಲ್ಲವೇ !

ದೊಡ್ಡವರಾದಂತೆ ನಮ್ಮ 'ಖಚಿತ ನಂಬಿಕೆ'ಯೇ ನಮ್ಮ ಸೃಜನಶೀಲತೆಗೆ ಅಡ್ಡಿಯಾಗುತ್ತದಲ್ಲ!

.........ಹೆಸರು ಏನು ಬೇಕಾದರೂ ಕೊಡಲಿ, ಮಕ್ಕಳು ನಾಟಕ ಮಾಡುತ್ತಾ ಇರಲಿ.

**(15) ಹಾಗಲ್ಲ..... ಈಗ ಮಕ್ಕಳ ಸಾಹಿತ್ಯ ಎಂದರೆ, ಮಕ್ಕಳಿಗಾಗಿ ಅನೇಕ ಹಿರಿಯರು ಬರೆದ ಸಾಹಿತ್ಯ,**

**ಮಕ್ಕಳೇ ಬರೆದದ್ದನ್ನು ಮಕ್ಕಳ ಸಾಹಿತ್ಯ ಎನ್ನಲು ಸಾಧ್ಯವೇ ?**

* ವಾದ ಚೆನ್ನಾಗಿದೆ........ ಆದರೆ ದಯವಿಟ್ಟು ಇನ್ನೊಮ್ಮೆ ಗಮನಿಸಬೇಕು;

ಸಾಹಿತ್ಯವನ್ನೂ, ನಾಟಕವನ್ನೂ ಹೋಲಿಸಿ ಹೇಳುವುದು ಸರಿಯೇ ..... !

ಊಟ, ನಿದ್ರೆ, ಆಟ ದಂತೆ. ನಾಟಕ ಎನ್ನುವುದೂ ಮಕ್ಕಳ ಮೂಲಭೂತ ಪ್ರವೃತ್ತಿ,

ಆದರೆ ಸಾಹಿತ್ಯ ಹಾಗೆ ಅಲ್ಲವಲ್ಲಾ!............

ಆದರೆ...... ಹೀಗೆಂದು ನನ್ನ ವಾದ ಏನೂ ಇಲ್ಲ.

ಆ ನಿಲುವನ್ನು ಇನ್ನೊಮ್ಮೆ ಪರಿಶೀಲಿಸಬೇಕು ಎನ್ನುವುದಷ್ಟೇ ನನ್ನ ಕೇಳಿಕೆ.

**(16) ಒಂದು ಮಕ್ಕಳನಾಟಕ ಎಂದರೆ ತುಂಬಾ ಖರ್ಚು ಬರುವುದಿಲ್ಲವೇ ! ಎಲ್ಲರಿಗೂ ಹೇಗೆ ಸಾಧ್ಯವಾದೀತು ?**

* ಈ ಅಭಿಪ್ರಾಯ ಹುಟ್ಟಿಸಿದ್ದು ನಮ್ಮ ದೊಡ್ಡ ದೊಡ್ಡ ರಂಗಕರ್ಮಿಗಳೇ ಇರಬಹುದೇನೋ !

ಸೆಟ್ಟಿಂಗ್, ಪ್ರಾಪರ್ಟಿ, ಕಾಸ್ಟ್ಯೂಮ್, ಮೇಕಪ್, ಮ್ಯೂಸಿಕ್, ಲೈಟಿಂಗ್ ಅಂತ ವಿಪರೀತ ಖರ್ಚು ಮಾಡಿಸಬೇಕೆಂದೇ ಇಲ್ಲ.

ಮಕ್ಕಳಿಂದಲೇ ಬಟ್ಟೆ ಬರೆಗಳನ್ನೂ, ಇನ್ನಿತರ ಸಾಮಾಗ್ರಿಗಳನ್ನೂ ಹೊಂದಿಸಿಕೊಂಡು ಸುಂದರವಾಗಿ ನಾಟಕ ಆಡಿಸಬಹುದು.

ಮಕ್ಕಳ ಸಹಜ ಅಭಿನಯವೇ ಮುಖ್ಯ. ಉಳಿದುದೆಲ್ಲಪೂರಕ ಅಷ್ಟೆ.

'ದೃಶ್ಯವೈಭವ'ಮುಖ್ಯವಾದರೆ ಸ್ವಲ್ಪಮಟ್ಟಿನ ಖರ್ಚು ಅನಿವಾರ್ಯ.

ಮಕ್ಕಳ ನಾಟಕದ ಗಂಭೀರತೆಯ ಅರಿವು ಎಲ್ಲರಲ್ಲೂ ಮೂಡಿದರೆ,ಈ 'ಖರ್ಚು' ದೊಡ್ಡ ಸಮಸ್ಯೆಯಾಗಲಾರದು.

**(17) ಮಕ್ಕಳ ನಾಟಕ ಸಂಗೀತ ಹೇಗಿರಬೇಕು ?**

* ನಾಟಕ ನಿರ್ದೇಶಕನಿಗೆ ಲಯ-ಶೃತಿಗಳ ಅರಿವು ಸ್ವಲ್ಪವಾದರೂ ಇದ್ದಲ್ಲಿ, ಮಕ್ಕಳ ನಡೆ-ನುಡಿಗಳಲ್ಲಿ ಲಯವನ್ನು ಉಳಿಸಿಕೊಳ್ಳಬಹುದು. ಹಾಗಿದ್ದರೆ ಮಾತ್ರ, ಬೇಕಾದಲ್ಲಿ ಬಾಹ್ಯಸಂಗೀತವನ್ನು ಸೇರಿಸಿಕೊಳ್ಳಲು ಸಾಧ್ಯ. ಇಲ್ಲವಾದರೆ ಸಂಗೀತ ನಾಟಕಕ್ಕಿಂತ ಬೇರೆ ಉಳಿದು ಬಿಡುತ್ತವೆ. ಸಂಗೀತ ಹೀಗೆಯೇ ಇರಬೇಕೆಂದು ಹೇಳುವುದು ಕಷ್ಟ. ನಾಟಕ ಪ್ರದರ್ಶನಕ್ಕೆ ಸಂಬಂಧ ಪಟ್ಟಂತೆ ಸಂಗೀತ ಎಂದರೆ,

ಹಾಡುಗಳು ಮಾತ್ರ ಅಲ್ಲ. ಧ್ವನಿಗಳೂ ಸಂಗೀತವೆ. ನಿಶ್ಶಬ್ಧವೂ ಸಂಗೀತವೆ. ವಾದ್ಯಗಳು ಮಾತ್ರವಲ್ಲ, ಅವಾದ್ಯಗಳೂ ಸಂಗೀತವೆ.

ಮಕ್ಕಳನಾಟಕದಲ್ಲಿ-ಸಂಗೀತ, ಅಂದರೆ ಈ ಹಾಡು ಇತ್ಯಾದಿ ಬಾಹ್ಯ ಸಂಗೀತ ಇರಲೇಬೇಕೆಂಬ ಹಠ ಬೇಕಾಗಿಲ್ಲ.

ಇದ್ದರೂ ಶೃತಿ-ಲಯ ಗಳನ್ನು ನಿರ್ಲಕ್ಷಿಸಬಾರದು. ಹಾಗೆಂದು ಶೃತಿ, ರಾಗ, ಲಯ, ತಾಳ ಎನ್ನುತ್ತಾ,

ಶಾಸ್ತ್ರೀಯ ಚೌಕಟ್ಟಿನಿಂದ ಹೊರಬರಲಾರದವರು ಹಾಡುವುದೂ, ಸಂಗೀತ ವಿನ್ಯಾಸ ಮಾಡುವುದು, ಸ್ವಲ್ಪ ಕಿರಿಕಿರಿ ಮತ್ತು ಅಪಾಯ ಕೂಡಾ.

'ಮಕ್ಕಳನಾಟಕಕ್ಕೆ ಮಕ್ಕಳಿಂದಲೇ ಸಂಗೀತ ಮಾಡಿಸಬೇಕು' ಎನ್ನುವ ಹಠ ಇದ್ದರೆ, ನಾಟಕ ಒಂದು 'ಸಂತೆ'ಯಾಗದಂತೆ,

ಕಲೆಯ ಚೌಕಟ್ಟನ್ನು ಮೀರದಂತೆ ನೋಡಿಕೊಳ್ಳಲೇ ಬೇಕು. ಇಲ್ಲವಾದಲ್ಲಿ ಪ್ರೇಕ್ಷಕರಿಗೆ ದೊಡ್ಡ ಹಿಂಸೆಯೇ ಸರಿ.

'ಪ್ರಕ್ರಿಯೆ'ಯಲ್ಲಿ ಮಕ್ಕಳೇ, ಕೈಗೆ ಸಿಕ್ಕಿದ ಅವಾದ್ಯಗಳಿಂದ ಸಂಗೀತ ನೀಡುವಂತೆ ಪ್ರೇರೇಪಿಸಬಹುದು. ಮತ್ತು ಒಳ್ಳೆಯದು ಕೂಡಾ.

**(18) ಮಕ್ಕಳಿಗೆ ರಜೆಯಲ್ಲೂ ಏನಾದರೂ ಕೆಲಸ ಕೊಡಬೇಕು....., ಕಡ್ಡಾಯವಾಗಿ ಬೇಸಿಗೆ ಶಿಬಿರಗಳಿಗೆ ಕಳುಹಿಸಬೇಕು.....,**

**ಹೆಚ್ಚು ಹೆಚ್ಚು ವಿಷಯಗಳನ್ನು ಕಲಿಸಬೇಕು ಎನ್ನುವುದು ಸರಿಯೇ ?**

* ಖಂಡಿತಾ ಸರಿಯಲ್ಲ ಎಂದು ಕಾಣುತ್ತಾ ಇದೆ. ಇವತ್ತು ರಜಾ ಶಿಬಿರಗಳು 'ಒಂದು ದಂದೆ' ಯಾಗಿದೆ. ಹೆತ್ತವರಿಗೂ ಭ್ರಮೆ.

ಶಿಬಿರದಲ್ಲೂ ಮಕ್ಕಳು ಹೆಚ್ಚು ಖುಷಿಯಲ್ಲಿರುವುದು – ನಿರ್ದೇಶಕನ ಸೂತ್ರವಿಲ್ಲದೇ ಇದ್ದಾಗ. ಅವರಷ್ಟಕ್ಕೇ ಅವರಿದ್ದಾಗ.

ಕಟ್ಟು ಪಾಡಿನ ಶಿಬಿರಗಳಿಗಿಂತ, ರಜದಲ್ಲಿ ಮಕ್ಕಳು ಅವರಿಷ್ಟ ಬಂದಂತೆ ಅಜ್ಜಿ ಮನೆ ಇತ್ಯಾದಿ ತಿರುಗಾಡುವುದು ಒಳ್ಳೆಯದು.

ಪ್ರಕೃತಿಯನ್ನು ನೋಡಿ ಮಕ್ಕಳು ತುಂಬಾ ಕಲಿಯುತ್ತಾರೆ, ಆ ಕಲಿಕೆ ಬಹು ಕಾಲ ಉಳಿದೂ ಉಳಿಯುತ್ತದೆ.

ಫುಕುವೊಕಾನ ಸಹಜ ಕೃಷಿಯ ತತ್ವವೇ ಇಲ್ಲೂ ಸರಿ ಎಂದು ಅನಿಸುವುದಿಲ್ಲವೇ!

ಶಾಲೆಗಳಲ್ಲಿ ನಿಜವಾದ ಅರ್ಥದಲ್ಲಿ, ಶಿಕ್ಷಣ ನಡೆದರೆ, ರಜೆಯಲ್ಲಿ ಮಕ್ಕಳನ್ನು ಗೋಳು ಹೊಯ್ದುಕೊಳ್ಳುವುದನ್ನು ತಪ್ಪಿಸ ಬಹುದು.

**(19) ಹೆತ್ತವರು ಮಕ್ಕಳೊಂದಿಗೆ ಹೆಚ್ಚು ಸಮಯವನ್ನು ಕಳೆಯಬೇಕು ಎನ್ನುವುದು ನಿಜ ತಾನೇ !**

* ನಿಜ ಅಲ್ಲವೆಂದಲ್ಲ ...... ಆದರೆ, ಆ ಸಿದ್ಧಾಂತವೂ ಸ್ವಲ್ಪ 'ಅತಿ' ಆಯ್ತೇನೋ ಎಂದು ಕಾಣುತ್ತಾ ಇದೆ.

***" ನಿನ್ನ ಒಂದು ದಿನದ ಸಂಬಳ ನನ್ನ ಪಾಕೆಟ್ ಮನಿಯಿಂದ ಕೊಡುತ್ತೇನೆ, ನಿನ್ನ ಒಂದು ದಿನ ನನಗೆ ಕೊಡುತ್ತಿಯಾ ಅಪ್ಪಾ "***

ಎಂದು ಮಗು ಕೇಳುವ ಜಾಹೀರಾತು ಚೆನ್ನಾಗಿದೆ ನಿಜ. ಮತ್ತು ಸ್ವಲ್ಪ ಮಟ್ಟಿನ 'ಮೆಲೋಡ್ರಾಮಾ'ಎಂದೂ ಅನಿಸುವುದಿಲ್ಲವೇ?

ಅಂತಾ ಚಿಂತನೆ "ಮಕ್ಕಳದ್ದೇ.." ಎನ್ನಲು ಸಾಧ್ಯವೇ ?

ಎಷ್ಟೋ ಸಾರಿ "... ಇದು ಮಕ್ಕಳ ಚಿಂತನೆ,.... ಮಕ್ಕಳ ಯೋಚನೆ ......" ಎಂದು ನಮಗೆ ನಾವೇ ಮೋಸ ಮಾಡಿಕೊಳ್ಳುವುದಿಲ್ಲವೇ!

ತನ್ನ ವಯಸ್ಸಿನ ಗೆಳೆಯರ ಒಡನಾಟ ಮಗುವಿಗೆ ಸದಾ ಸಿಗುವಂತಾ ವಾತಾವರಣವನ್ನು ಗಮನಿಸಿದರೆ, ಇದು ಸ್ವಲ್ಪ ಸ್ಪಷ್ಟವಾದೀತು.

ಮಗುವಿಗೆ ಆಟ ಬೇಕು, ಆಟಕ್ಕೆ ಜನ ಸಿಕ್ಕಿದರೆ, ಮಕ್ಕಳಿಗೆ ಅಪ್ಪ ಅಮ್ಮನೂ ಬೇಡ ಏನೂ ಬೇಡ.

ಮತ್ತೆ – ಈ ಸಮಸ್ಯೆ, ಅವಿಭಕ್ತಕುಟುಂಬದ ಮನೆಯಲ್ಲಿ, ಆರ್ಥಿಕವಾಗಿ ಕೆಳಸ್ತರದಲ್ಲಿರುವ ಮನೆಗಳಲ್ಲಿ ಇದೆಯೇ ?

**(17) ಹೆಚ್ಚು ಸ್ಪರ್ದೆಗಳನ್ನು ಏರ್ಪಡಿಸುವ ಮೂಲಕ, ಮಕ್ಕಳನ್ನು ಚುರುಕಾಗಿಸಿ, ಪ್ರತಿಭೆಗಳನ್ನು ಬೆಳಕಿಗೆ ತರಬಹುದಲ್ಲ...!**

* ಸರಿಯಲ್ಲ. ಎಲ್ಲಾ ಅಶಾಂತಿಗೂ ಸ್ಪರ್ಧೆಯೇ ಕಾರಣ. ಹಿರಿಯರಲ್ಲಿರುವ ಸ್ಪರ್ಧೆಗೆ ಮಕ್ಕಳು ಬಲಿ ಅಷ್ಟೆ.

ಆಟೋಟಗಳಲ್ಲಾದರೆ ಸ್ಪರ್ಧೆ ಸರಿ. ಅಲ್ಲಿ ಸೊಲು–ಗೆಲುವು ಎಲ್ಲರಿಗೂ ನಿಚ್ಚಳವಾಗಿ ಕಾಣಿಸುತ್ತದೆ.

ಸೋತ ಮಕ್ಕಳಿಗೆ 'ತಮ್ಮದೇ ಅಸಾಮರ್ಥ್ಯದಿಂದಾದ ಸೋಲು' ಎನ್ನುವುದು ಅರಿವಾಗಿ ಛಲ ಬೆಳೆಯುತ್ತದೆ.

ಕಲೆ, ಶಿಕ್ಷಣದಲ್ಲಿ- ತಮ್ಮ ಸೋಲಿಗೆ ಕಾರಣ ತಿಳಿಯದೇ, ಕೀಳರಿಮೆ ಉಂಟಾದೀತೇ ಹೊರತು ಬೆಳವಣಿಗೆ ಸಾಧ್ಯವಾಗಲಾರದು.

ಕಲೆ, ಶಿಕ್ಷಣ ಹಾಗೂ ಬದುಕಿನಲ್ಲಿ ಸ್ಪರ್ಧೆ ಇರಬೇಕಾದ್ದು ತನ್ನಲ್ಲೇ ತನಗೆ ಹೊರತು ಇನ್ನೊಬ್ಬರಲ್ಲಿ ಅಲ್ಲ.

"ಸ್ಪರ್ಧೆಯ ಬದಲು ಉತ್ಸವಗಳಾಗಲಿ" ಎಂದರೂ ಅಪಾಯ ಇದ್ದೇ ಇದೆ. ಉತ್ಸವದಲ್ಲೂ ಸ್ಪರ್ಧೆ.

ಇವತ್ತಿನ ಸಾರ್ವಜನಿಕ ಉತ್ಸವಗಳೇ ಮಕ್ಕಳ ಉತ್ಸವಕ್ಕೂ ಪ್ರೇರಣೆ.

ಆದರೆ, ಸ್ಪರ್ಧೆ ಇವತ್ತು ಅನಿವಾರ್ಯವಾಗಿರುವುದರಿಂದ,

**ಮಕ್ಕಳಿಗೆ 'ಸೋಲುವುದನ್ನು ಕಲಿಸುವುದು' ಒಳ್ಳೆಯದು ಎಂದು ಕಾಣುತ್ತಾ ಇದೆ.**

ಸಮಸಾಂಪ್ರತಿ
ವಿಟ್ಲ, ದ.ಕ. – 574243
ಮೊಬೈಲ್ : 9448239519

***

# ಮಕ್ಕಳ ರಂಗಭೂಮಿ

- ಸುಷ್ಮ ಎಸ್.ವಿ.

'ರಂಗಭೂಮಿ' ಎಂದರೆ ನನಗೆ ಪ್ರೀತಿ. ರಂಗಭೂಮಿ ಎಂದರೆ ಒಂದು ತೆರನಾದ ಆನಂದ, ಸೆಳೆತ. ಎಲ್ಲ ಕೆಲಸವನ್ನು ಬಿಟ್ಟು ರಂಗಭೂಮಿಯ ಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ತಯ್ಯಾರು. ಬಹುಶಃ ಈ ಭಾವನೆ ನನಗೆ ಬರಲು ಕಾರಣ ನಾನು ನನ್ನ ಬಾಲ್ಯವನ್ನು ರಂಗಭೂಮಿಯ ಕ್ರಿಯೆಯಲ್ಲಿ, ನಾಟಕದ ತಾಲೀಮುಗಳಲ್ಲಿ ಕಳೆದದ್ದರಿಂದಲೇ ಇರಬೇಕು. 'ರಂಗಭೂಮಿ ಸಂಕೀರ್ಣ ಕಲೆ' ರಂಗಭೂಮಿಯಲ್ಲಿ ಎಲ್ಲವೂ ಅಡಕವಾಗಿದೆ- ನಟನೆ, ಪ್ರದರ್ಶನದಿಂದ ಹಿಡಿದು ಜೀವನ, ಬದುಕಿನವರೆಗೂ...

## ಮಕ್ಕಳ ರಂಗಭೂಮಿ ಎಂದರೆ ?

ಮಕ್ಕಳಿಗಾಗಿ ಅಥವಾ ಮಕ್ಕಳಿಂದ ನಾಟಕ. ಮಕ್ಕಳ ರಂಗಭೂಮಿ ಜೀವಂತಿಕೆ, ಉತ್ಸಾಹ, ಲವಲವಿಕೆ ತುಂಬಿರುವ ಮಾಯಾಲೋಕ ಎಂದೇ ಹೇಳಬಹುದು. ಮಕ್ಕಳಿಗೆ ಕಲಿಸುವುದಕ್ಕಿಂತ ನಾವು ಕಲಿಯುವುದೇ ಹೆಚ್ಚಿರುತ್ತದೆ.

## ಮಕ್ಕಳಿಗಾಗಿ ಮಾಡುವ ನಾಟಕಗಳು

ಇಲ್ಲಿ ನಾಟಕವನ್ನು ಮಾಡುವವರು ದೊಡ್ಡವರು. ಮಕ್ಕಳು ಬರೀ ಪ್ರೇಕ್ಷಕರು. ಇದು ಬಹಳಾ ಪ್ರಯಾಸದ ಕೆಲಸ. ಇಂಥಾ ಪ್ರದರ್ಶನಗಳನ್ನು ಮಾಡುವಾಗ ನಾವು ಯಾವ ವಯೋಮಾನದ ಮಕ್ಕಳಿಗೆ ಪ್ರದರ್ಶನ ನೀಡುತ್ತಿದ್ದೇವೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ನಾಟಕದ ಕಥಾವಸ್ತುವನ್ನು ಬಹಳ ಎಚ್ಚರಿಕೆಯಿಂದ ಆಯ್ದುಕೊಳ್ಳಬೇಕು. ಸರಳವಾದ ಸಂಭಾಷಣೆಯಿರಬೇಕು. ಮಕ್ಕಳ ಮುಗ್ಧ ಮನಸ್ಸನ್ನು ಕಲುಷಿತಗೊಳಿಸದಂತಾ ಪ್ರದರ್ಶನವಾಗಿರಬೇಕು. ಬಾಲ್ಯದ ಅನುಭವಗಳು ಮಾಸದೇ ಇರುವುದು ನಮ್ಮೆಲ್ಲರಿಗೂ ಅನುಭವವಾಗಿರುವಂಥದ್ದು, ಆದ್ದರಿಂದ ಮಕ್ಕಳಿಗೆ ನಾಟಕವನ್ನು ಪ್ರದರ್ಶಿಸಬೇಕಾದರೆ ಬಹಳ ಎಚ್ಚರಿಕೆಯಿಂದ, ಜವಾಬ್ದಾರಿಯುತವಾಗಿರಬೇಕಾಗುತ್ತದೆ.

ಮಕ್ಕಳಿಗೆ ನಾಟಕ ಬರಿಯ ಮನರಂಜನಾ ಪ್ರದರ್ಶನ ಮಾತ್ರವಲ್ಲದೆ ಅವರ ವಯೋಮಾನಕ್ಕೆ ತಕ್ಕಂತಾ ಚಿಂತನೆಗೆ ಹಚ್ಚುವುದಕ್ಕೆ ಪ್ರಯತ್ನಿಸಬೇಕು.

ಮಕ್ಕಳಿಗೆ ನಾಟಕ ಪ್ರದರ್ಶಿಸುವಾಗ ನಟನಿಗೆ ಭಾರಿ ಸವಾಲು. ಅವನ ನಟನೆ ಸಹಜವಾಗಿರಬೇಕು. ಬಹಳ ಸಲ ಅವನ ನಟನೆ ಹಾಸ್ಯಾಸ್ಪದ, ಕ್ಲೀಶೆ ಆಗುವ ಸಾಧ್ಯತೆಗಳುಂಟು.

ಮಕ್ಕಳ ನಾಟಕಗಳ ರಚನೆ ಹೆಚ್ಚು ಜವಾಬ್ದಾರಿಯುತವಾಗಿ ಆಗಬೇಕಾಗಿದೆ. ಅಲ್ಲದೆ ಮಕ್ಕಳು ಹೆಚ್ಚು ಹೆಚ್ಚು ಬುದ್ಧಿವಂತರಾಗುತ್ತಿದ್ದಾರೆ. ಅವರಿಗೆ ಆ ಕಾಲಕ್ಕೆ ತಕ್ಕನಾದ ನಾಟಕಗಳು ಹೊರಬರಬೇಕು.

## ಮಕ್ಕಳಿಂದ ನಾಟಕ ಪ್ರದರ್ಶನ

ಸಾಮಾನ್ಯವಾಗಿ 'ಮಕ್ಕಳು ರಂಗದ ಮೇಲೆ ಹೇಗೆ ಮಾಡಿದರೂ ಚೆಂದ' ಎಂಬ ಮಾತನ್ನು ನಾವು ಕೇಳುತ್ತೇವೆ. ಹೀಗೆ ಲಘುವಾಗಿ ಮಕ್ಕಳನ್ನು ವಿಶ್ಲೇಷಿಸುವುದರಿಂದ ಮಕ್ಕಳ ಶ್ರಮಕ್ಕೆ, ಮಕ್ಕಳ ಪ್ರತಿಭೆಗೆ ಅವಮಾನ ಮಾಡಿದಂತಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಇದೇ ವಯಸ್ಸಿನ ಮಕ್ಕಳು ವೇದಿಕೆಯ ಮೇಲೆ ಶಾಸ್ತ್ರೀಯ ಸಂಗೀತವನ್ನೋ ಶಾಸ್ತ್ರೀಯ ನೃತ್ಯವನ್ನೋ ಪ್ರದರ್ಶಿಸಿದಾಗ ನಾವು ಗಂಭೀರವಾಗಿ ವಿಮರ್ಶೆ ಮಾಡುತ್ತೇವೆ, ಪ್ರಶಂಸಿಸುತ್ತೇವೆ, ಪ್ರತಿಭೆಯನ್ನು ಗುರುತಿಸುತ್ತೇವೆ. ಆದರೆ ಈ ಮಾನದಂಡವನ್ನು ನಾಟಕಕ್ಕೆ ಮಾತ್ರ ಅಳವಡಿಸುವುದಿಲ್ಲ. 'ಮಕ್ಕಳು ಏನು ಮಾಡಿದರೂ ಚಂದ' ಎಂಬ ಲೇಬಲ್ ಹಾಕುವುದರಿಂದ ಇಡೀ ಪ್ರಯತ್ನವನ್ನು ಲಘುವಾಗಿಸಿಬಿಡುವಂತಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಇದು ಪ್ರೇಕ್ಷಕರ ಮನಃಸ್ಥಿತಿಯಾದರೆ ನಿರ್ದೇಶಕನ ತೊಳಲಾಟಗಳು ಬೇರೆಯೇ ಆಗಿರುತ್ತದೆ.

**1. ನಾಟಕದ ಆಯ್ಕೆ :** ಮಕ್ಕಳಿಗೆ ಅರ್ಥವಾಗುವ, ಮಕ್ಕಳಿಂದ ಹೇಳಿಸಬಹುದಾದಂತಹ ಸಂಭಾಷಣೆಯುಳ್ಳ, ಮಕ್ಕಳು ಭಾವಪೂರ್ವಕವಾಗಿ ಅಭಿನಯಿಸಬಲ್ಲ, ಮಕ್ಕಳ ಮನೋವಿಕಾಸವಾಗುವಂತಹ ಹಾಗೂ ಮಕ್ಕಳನ್ನು ಚಿಂತನೆಗೆ ಹಚ್ಚುವಂತಾ ನಾಟಕವನ್ನು ಆಯ್ದುಕೊಳ್ಳಬೇಕು.

**2. ನಾಟಕದ ತಾಲೀಮು/ನಿರ್ದೇಶನ :** ಮಕ್ಕಳ ಬಗ್ಗೆ ನಿರ್ಧಾರಗಳನ್ನು ಪೋಷಕರೇ ತೆಗೆದುಕೊಳ್ಳುವುದರಿಂದ, ಮಕ್ಕಳನ್ನು ನಾಟಕದ ತಾಲೀಮಿಗೆ ಕರೆಯಬೇಕೆಂದರೆ ಪೋಷಕರ ಅಪ್ಪಣೆ ಪಡೆಯಬೇಕು. ಮಕ್ಕಳ ಶೈಕ್ಷಣಿಕ ಜೀವನಕ್ಕೆ ಅಡೆತಡೆಯಾಗದಂತೆ ನೋಡಿಕೊಳ್ಳಬೇಕು. ದೈಹಿಕ ಚಲನೆಗಳು ಹಾಗೂ ಮಾನಸಿಕ ಭಾವನೆಗಳು ಮಕ್ಕಳ ವಯೋಮಾನಕ್ಕೆ ಸರಿಹೊಂದುವಂತಿರಬೇಕು. ಮಕ್ಕಳಲ್ಲಿರುವ ಸ್ಫುಟಯುವ ಉತ್ಸಾಹವನ್ನು ಸರಿಯಾದ ದಿಕ್ಕಿನಲ್ಲಿ ಚಲಿಸುವಂತೆ ಮಾಡಬೇಕು. ನಾಟಕದಲ್ಲಿ ನೃತ್ಯ, ಸಂಗೀತ

ಅಳವಡಿಸಿಕೊಂಡರೆ ಮಕ್ಕಳು ಮಾಡುವ ನಾಟಕ ಚೆನ್ನಾಗಿ ಮೂಡಿಬರುತ್ತದೆ. ಅಲ್ಲದೆ ಮಕ್ಕಳಲ್ಲಿರುವ ನಾನಾ ಪ್ರತಿಭೆಗಳನ್ನು ಗುರುತಿಸಿದಂತಾಗುತ್ತದೆ.

**3. ರಂಗ ಪರಿಕರ ಹಾಗೂ ವಸ್ತ್ರವಿನ್ಯಾಸ :** ಮಕ್ಕಳಿಗೆ ಅನುಕೂಲಕರವಾಗುವಂತಹ ವೇಷಭೂಷಣಗಳನ್ನು ವಿನ್ಯಾಸ ಮಾಡಬೇಕಾಗುತ್ತದೆ. ರಂಗಸಜ್ಜಿಕೆ, ರಂಗಪರಿಕರ ನಾಟಕಕ್ಕನುಗುಣವಾಗಿದ್ದರೂ ಮಕ್ಕಳ ವಯಸ್ಸಿಗೆ ತಕ್ಕಂತೆ ಕಡಿಮೆ ಭಾರವಿದ್ದು, ಮಕ್ಕಳೇ ಪರಿಕರಗಳನ್ನು ಹ್ಯಾಂಡಲ್ ಮಾಡುವಂತಿದ್ದರೆ ಪ್ರದರ್ಶನ ಚೆನ್ನಾಗಿ ಮೂಡಿ ಬರುತ್ತದೆ.

ಹೀಗೆ ಮಕ್ಕಳನಾಟಕಗಳನ್ನು ಎರಡು ವಿಧವಾಗಿ ವಿಂಗಡಿಸಿದರೂ ಇನ್ನೊಂದು ವಿಧವಿದೆ. ಮಕ್ಕಳೇ ನಾಟಕ ರಚಿಸಿ, ನಿರ್ದೇಶಿಸುವುದು. ಇದು ಕಷ್ಟಕರವಾದರೂ ಅಪರೂಪದ ಪ್ರಯತ್ನ. ಈ ಅಪರೂಪದ ಪ್ರಯತ್ನವನ್ನು 'ವಿಜಯನಗರ ಬಿಂಬ' ಹಲವು ವರ್ಷಗಳಿಂದ ನಡೆಸಿಕೊಂಡು ಬಂದಿದೆ. ಮಕ್ಕಳೇ ರಚಿಸಿ, ನಿರ್ದೇಶಿಸುವ ನಾಟಕಗಳನ್ನು ರಂಗಮಂದಿರದಲ್ಲಿ ಪ್ರದರ್ಶಿಸುತ್ತಾರೆ. ಮಕ್ಕಳು ರಚಿಸಿರುವ ನಾಟಕಗಳನ್ನು 'ವಿಜಯನಗರ ಬಿಂಬ' ಪ್ರಕಟಿಸುತ್ತಾರೆ.

ಕೆಲವೊಮ್ಮೆ ಮಕ್ಕಳು ರಚಿಸುವ ನಾಟಕಗಳು ಬಾಲಿಶವೆಂದೆನಿಸಿದರೂ, ಮಕ್ಕಳಿಗೆ ನಾಟಕವನ್ನು ಬರೆಯಲು ಉತ್ತೇಜಿಸುವುದು ಅತ್ಯಗತ್ಯ.

ಹೀಗೆ ಪ್ರತಿಯೊಂದು ಹಂತದಲ್ಲೂ ಮಕ್ಕಳಿಗೆ ರಂಗಭೂಮಿಯ ಬೇರೆ ಬೇರೆ ಆಯಾಮಗಳನ್ನು ತಿಳಿಸಿಕೊಟ್ಟರೆ ಮಕ್ಕಳ ಮನೋವಿಕಾಸವಾಗುತ್ತದೆ. ಮಕ್ಕಳ ಆತ್ಮವಿಶ್ವಾಸ, ನಾಯಕತ್ವ ಗುಣ ಹೆಚ್ಚುತ್ತದೆ.

## ಮಕ್ಕಳಿಗೆ ರಂಗಭೂಮಿ ಬೇಕೆ ?

ಈ ಆಧುನಿಕ ದಿನಗಳಲ್ಲಿ ಮಕ್ಕಳು ಬಹಳೆ ಚುರುಕಾಗಿ, ತುಂಟತನದಿಂದ ಹಲವಾರು ವಿಷಯಗಳನ್ನು ಅಂತರ್ಜಾಲದ ಮೂಲಕ ತಿಳಿದುಕೊಳ್ಳಲು ಅವಕಾಶವಿದೆ. ಹೀಗಿರುವಾಗ ಈ ಸ್ಪರ್ಧಾತ್ಮಕ ಯುಗದಲ್ಲಿ ಕ್ರಿಯಾಶೀಲವಾಗಿ, ಎಲ್ಲರಿಗಿಂತ ವಿಭಿನ್ನವಾಗಿ ಯೋಚಿಸುವುದು ಅನಿವಾರ್ಯ ಹಾಗೂ ಅವಶ್ಯಕ.

ವ್ಯಕ್ತಿತ್ವ ವಿಕಸನಗೊಳ್ಳಲು ಮಕ್ಕಳು ರಂಗಭೂಮಿಗೆ ಬರಬೇಕು. ಬಾಲ್ಯದಲ್ಲಿ ಕ್ರಿಯಾತ್ಮಕವಾಗಿ ಆಲೋಚಿಸುವ, ಮಾಯಾ ಲೋಕ ಸೃಷ್ಟಿಸುವ ಆತ್ಮವಿಶ್ವಾಸ, ಧೈರ್ಯದಿಂದ ನಡೆದುಕೊಳ್ಳುವ ದಾರಿ ತೋರಿಸಿಕೊಡುತ್ತದೆ ಈ ಮಕ್ಕಳ ರಂಗಭೂಮಿ. ಒಂದು ಸಾರಿ ಈ ದಾರಿಯಲ್ಲಿ ನಡೆದರೆ ಜೀವನದ ದಾರಿ ಸುಗಮ ಹಾಗೂ ಸಂತಸದಾಯಕವೆನಿಸುತ್ತದೆ.

ಇಂದಿನ ದಿನಗಳಲ್ಲಿ ಒಟ್ಟು ಕುಟುಂಬಗಳು ಬಹಳಾ ವಿರಳ. ಅಲ್ಲದೆ ಒಂದೆ ಮಗು

ಸಾಕೆಂದುಕೊಳ್ಳುವ ಪೋಷಕರು. ಮಕ್ಕಳಿಗೆ ಸಂಘ ಜೀವನದ ಅರಿವೇ ಇರುವುದಿಲ್ಲ. ಮನೆಯಲ್ಲಿ ಮುದ್ದು ಮಾಡಿ ಮಕ್ಕಳ ವ್ಯಕ್ತಿತ್ವ ವಿಕಸನಗೊಳ್ಳಲು ಅವಕಾಶವೆ ಕಲ್ಪಿಸಿರುವುದಿಲ್ಲ. ಹಾಗಾಗಿ ಮಗು ಏಕಾಂಗಿ ಆಗಿಬಿಡುತ್ತದೆ. ರಂಗಭೂಮಿಯಿಂದ ಮಕ್ಕಳು ಆತ್ಮವಿಶ್ವಾಸ, ಸಂಘಜೀವನ, ನಾಯಕತ್ವ ಗುಣ, ಆತ್ಮಸ್ಥೈರ್ಯ, ಶಿಸ್ತು, ಸಮಯ ನಿರ್ವಹಣೆ, ಪ್ರಾಮಾಣಿಕತೆ, ಅಭಿವ್ಯಕ್ತಿಸುವುದನ್ನು ಕಲಿಯುತ್ತಾರೆ.

## ಮಕ್ಕಳ ರಂಗಭೂಮಿಯಲ್ಲಿ ನನ್ನ ಅನುಭವ

ನಾನು ಮಕ್ಕಳ ರಂಗಭೂಮಿಗೆ ಬಂದದ್ದು ವಿದ್ಯಾರ್ಥಿನಿಯಾಗಿ. ನನಗೆ ಆಗ 11 ವರ್ಷ. ಬೇಸಿಗೆ ರಜೆಯಲ್ಲಿ ಅಜ್ಜಿ ಮನೆಯಲ್ಲಿ ಎಲ್ಲಾ ಹುಡುಗರು ಸೇರಿ ಗಲಾಟೆ ಮಾಡುತ್ತಿದ್ದೆವು. ಆಗ ನಮ್ಮೆಲ್ಲರನ್ನು ಕ್ರಿಯಾಶೀಲರನ್ನಾಗಿಸಬೇಕೆಂದು 'ಚಿತ್ರಾ ಮಕ್ಕಳ ಶಿಬಿರ' ಏರ್ಪಡಿಸಿದರು. ಮೊದಲ ವರ್ಷ ವಿದ್ಯಾರ್ಥಿನಿಯಾಗಿ ಸೇರಿದ ನಾನು ನಂತರ ವಾಲೆಂಟೀರ್ ಆಗಿ ಕೆಲಸ ಮಾಡಿದೆ. ನಂತರ ಶಿಕ್ಷಕಿಯಾದೆ. ನಾಟಕಗಳಿಗೆ ನೃತ್ಯ ಸಂಯೋಜನೆ, ನಿರ್ದೇಶನ ಮಾಡಿದೆ. ಹೀಗೆ ಶುರುವಾಯ್ತು ಮಕ್ಕಳ ರಂಗಭೂಮಿಯಲ್ಲಿ ನನ್ನ ಪಯಣ.

ನನಗೆ ಹತ್ತು ವರ್ಷವಿದ್ದಾಗಲೆ ಮ್ಯಾಕ್‌ಬೆತ್ ನಾಟಕದಲ್ಲಿ ಲೇಡಿ ಮ್ಯಾಕ್‌ಬೆತ್ ಪಾತ್ರ ಮಾಡಿದ್ದೆ. ನಾವು ಮಕ್ಕಳೆಲ್ಲಾ ಸೇರಿ ಮಾಡಿದ ನಾಟಕ. ನಂತರ ಎರಡು ವರ್ಷದ ಕೆಳಗೆ ಅದೇ ಮ್ಯಾಕ್‌ಬೆತ್ ನಾಟಕದ ಲೇಡಿ ಮ್ಯಾಕ್‌ಬೆತ್ ಪಾತ್ರ ಮಾಡಿದ್ದೆ. ಆಗ ಬಾಲ್ಯದ ಸವಿ ಸವಿ ನೆನಪಾಯಿತು.

## ನಾನು ಮಹಿಳೆಯಾಗಿ

ಮಹಿಳೆಯರಿಗೆ ಸಹನೆ, ಲಾಲನೆ, ಪಾಲನೆ ಸಹಜವಾದ ಸ್ವಭಾವ. ಈ ಗುಣಗಳು ಮಕ್ಕಳೊಂದಿಗೆ ಒಡನಾಡುವಾಗ ಅತ್ಯವಶ್ಯಕ. ಪ್ರಕೃತಿದತ್ತವಾಗಿ ಮಹಿಳೆ ತಾಯ್ತನದ ಅನುಭವ ಪಡೆದಿರುತ್ತಾಳೆ. ಮಕ್ಕಳು ತಯ್ಯಾರು ಮಾಡುವುದು, ಮಕ್ಕಳಿಗೆ ತಿಳಿ ಹೇಳುವುದು ಅವಳಿಗೆ ಸುಲಭ. ನಿರ್ದೇಶಕಿಯಾಗಿ ಹೆಣ್ಣು ಮಕ್ಕಳು, ಗಂಡು ಮಕ್ಕಳು ಇಬ್ಬರಿಗೂ ರಂಗಭೂಮಿಯ ಪಾಠ ಮಾಡಲು ಸುಲಭ ಏಕೆಂದರೆ ನಿರ್ದೇಶಕಿಯ ಬಳಿ ಹೆಣ್ಣು ಮಕ್ಕಳು ತಮ್ಮ ಸಮಸ್ಯೆಯನ್ನು ಹಂಚಿಕೊಳ್ಳಲು ಸಂಕೋಚ ಪಡುವುದಿಲ್ಲ. ಮಹಿಳೆಯರು ಮಲ್ಟಿಸ್ಕಿಲ್ಡ್ ಆಗಿರುತ್ತಾರೆ. ಒಂದೇ ಬಾರಿ ಹಲವು ಕೆಲಸಗಳನ್ನು ಮಾಡುವ ಗುಣವಿರುತ್ತದೆ. ಹಾಗಾಗಿ ಈ ಗುಣವನ್ನು ರಂಗಭೂಮಿಯಲ್ಲಿ ಅಳವಡಿಸಿಕೊಂಡರೆ ಆಕೆ ಕ್ರಿಯಾತ್ಮಕವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಮಹಿಳೆಯರು ಕಸೂತಿ ಕೆಲಸದಲ್ಲಿ, ಕೈಗೆಲಸದಲ್ಲಿ ನಿಪುಣರು. ಮಕ್ಕಳ ಗಮನ ತಮ್ಮ ಕಡೆ ಸೆಳೆಯಲು, ಅವರ ನಂಬಿಕೆ ಗಳಿಸಲು ಇವು ಬಹಳ ಉಪಯುಕ್ತ ಸಾಧನಗಳು.

ಮಕ್ಕಳ ಮುಗ್ಧ ಮನಸ್ಸು ಹಲವಾರು ಪ್ರಶ್ನೆಗಳನ್ನು ಹೊತ್ತು ತರುತ್ತದೆ, ಕ್ರಿಯಾತ್ಮಕವಾಗಿ ಯೋಚಿಸುತ್ತದೆ, ಹುಮ್ಮಸ್ಸು ಉತ್ಸಾಹಭರಿತವಾಗಿರುತ್ತದೆ. ಮಕ್ಕಳ ರಂಗಭೂಮಿಯಲ್ಲಿ ಕೆಲಸ ಮಾಡಲಿಚ್ಛಿಸುವವರು ಮಕ್ಕಳಿಗಿಂತ ದುಪ್ಪಟ್ಟು ಹುಮ್ಮಸ್ಸು, ಉತ್ಸಾಹ, ಶಿಸ್ತು ಅಳವಡಿಸಿಕೊಳ್ಳಬೇಕಾಗುತ್ತದೆ. ಮಕ್ಕಳೊಂದಿಗೆ ನಾವು ಮಕ್ಕಳಂತಾದರೆ ಅವರ ನಂಬಿಕೆ ಗಳಿಸುವುದು ಸುಲಭ. ಮಕ್ಕಳಿಗೆ ಹೇಳಿಕೊಡುವುದಕ್ಕಿಂತ, ಮಕ್ಕಳಿಂದ ಕಲಿಯುವುದೇ ಹೆಚ್ಚು.

## ಮಕ್ಕಳ ರಂಗಭೂಮಿಯಲ್ಲಿ ನನ್ನ ಒಡನಾಟ

ಸುಮಾರು 20 ವರ್ಷಗಳಿಂದ ಮಕ್ಕಳ ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದೇನೆ. ವಿಜಯನಗರಬಿಂಬ ಕಳೆದ 15 ವರ್ಷಗಳಿಂದ ಮಕ್ಕಳ ರಂಗಭೂಮಿಯಲ್ಲಿ ತೊಡಗಿಸಿಕೊಂಡಿದೆ. ನಾನು ವಿಜಯನಗರ ಬಿಂಬದಲ್ಲಿ ಹಲವಾರು ಮಕ್ಕಳ ನಾಟಕಗಳನ್ನು , ಬ್ಯಾಲೆಗಳನ್ನು ನಿರ್ದೇಶಿಸಿದ್ದೇನೆ. ಹಲವು ಶಾಲೆಗಳಲ್ಲಿ ಮಕ್ಕಳಿಗೆ ನಾಟಕ ಶಿಬಿರ ಮಾಡಿ ಮಕ್ಕಳಿಗೆ ನಾಟಕ ಮಾಡಿಸಿದ್ದೇನೆ. ಸೇವಾಸದನದ ಹೆಣ್ಣು ಮಕ್ಕಳಿಗೆ ರಂಗ ಶಿಬಿರ ಮಾಡಿ ನಾಟಕ ನಿರ್ದೇಶಿಸಿದ್ದೇನೆ. ಹೀಗೆ ಮಕ್ಕಳೊಂದಿಗೆ ಹಲವಾರು ಅನುಭವ ಹೊಂದಿದ್ದೇನೆ. ಅದರಲ್ಲಿ ಕೆಲವನ್ನು ನಿಮ್ಮ ಮುಂದಿಡುತ್ತೇನೆ.

1. ಒಂದನೆ ತರಗತಿಯ ಮಗು ವಿಜಯನಗರ ಬಿಂಬದಲ್ಲಿ ಏಳು ತಿಂಗಳ ಕೋರ್ಸ್ ಮುಗಿಸಿದ ನಂತರ ಸ್ಕೂಲಿನಲ್ಲಿ ತನ್ನ ವಯಸ್ಸಿಗೆ ತಕ್ಕಂತೆ ಕ್ರಿಯಾತ್ಮಕವಾಗಿ ಎಲ್ಲಾ ಪ್ರದರ್ಶನ ಕಲೆಗಳಲ್ಲೂ ತೊಡಗಿಸಿಕೊಂಡಿತು.

2. ಹೆಸರನ್ನು ಹೇಳಲು ಅಂಜುತ್ತಿದ್ದ ಮಗು ಕೋರ್ಸ್‌ನ ಅಂತ್ಯದಲ್ಲಿ ನಾಟಕದ ಉದ್ದುದ್ದ ಸಂಭಾಷಣೆಯನ್ನು ಹೇಳಿತು.

3. ಸಮಯ ನಿರ್ವಹಣೆಯನ್ನು ಕಲಿತು, ಒದಿನಲ್ಲೂ ಮುಂದುಬಂದದ್ದನ್ನು ಕಂಡಿದ್ದೇನೆ.

4. ಮಕ್ಕಳು ತಮ್ಮ ಅನಿಸಿಕೆಗಳನ್ನು , ಅಭಿಪ್ರಾಯವನ್ನು ಮುಕ್ತವಾಗಿ ಎಲ್ಲರ ಜೊತೆ ಹಂಚಿಕೊಳ್ಳುವುದನ್ನು ಕಲಿತವು.

ವಿಜಯನಗರಬಿಂಬ ಮಕ್ಕಳಿಗೆ ನಟನೆ ಮಾತ್ರವಲ್ಲದೆ, ಸಂಘಟಿಸುವುದು ಹೇಗೆ ಎಂಬುದರ ಅರಿವಾಗಲೆಂದು ಚಿತ್ರಕಥನ, ಬೊಂಬೆ ಹಬ್ಬದಂತ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ.

ನಾಟಕ ಮಾಡುವುದು ಮಾತ್ರವಲ್ಲದೆ ನಾಟಕ ನೋಡುವುದನ್ನು ವಿಜಯನಗರಬಿಂಬ ಮಕ್ಕಳಿಗೆ ಕಲಿಸುತ್ತದೆ. ಅಂದರೆ ಮಕ್ಕಳಿಗೆ ಬೇರೆ ಬೇರೆ ನಾಟಕಗಳನ್ನು ನೋಡಲು ಪ್ರೋತ್ಸಾಹಿಸಬೇಕು.

ಮಕ್ಕಳ ರಂಗಭೂಮಿಯಲ್ಲಿ ಹಲವಾರು ಜನ ದುಡಿಯುತ್ತಿದ್ದಾರೆ ಆದರೆ ಅದರ ಅರಿವು ಮಾತ್ರ ಎಲ್ಲರಿಗೂ ಇಲ್ಲ. ಮಕ್ಕಳರಂಗಭೂಮಿಯ ಬಗ್ಗೆ ದಾಖಲೆಗಳೂ ಇಲ್ಲ. ಮಕ್ಕಳ ರಂಗಭೂಮಿಯಲ್ಲಿ ಕೆಲಸ ಮಾಡುತ್ತಿರುವವರು ಯಾರೆಂದು ದಾಖಲಾಗಿ, ಎಲ್ಲರಿಗೂ ಸಿಗುವಂತಾದರೆ ಉಪಯುಕ್ತವಾಗಿರುತ್ತದೆ. ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ಮಕ್ಕಳು ಬೀಜದ ಹಾಗೆ. ಅವುಗಳನ್ನು ಒಳ್ಳೆಯ ಮಣ್ಣಿನಲ್ಲಿ ಬಿತ್ತಿ, ನೀರೆರೆದು, ಗೊಬ್ಬರ ಹಾಕಿದರೆ ಚಿಗುರೊಡೆದು ಹೆಮ್ಮರವಾಗುತ್ತವೆ. ರಂಗಭೂಮಿಯೆಂಬ ಸತ್ವಯುತವಾದ ಗೊಬ್ಬರ ಹಾಕಿದರೆ ನಮ್ಮತನವನ್ನು ಉಳಿಸಿಕೊಂಡಿರುವ, ನಮ್ಮ ಸೊಗಡಿನ ಸುಗಂಧ ಬೀರುವ ಪುಷ್ಪಗಳನ್ನು ಬಿಡುವ ಹೆಮ್ಮರವಾಗುತ್ತವೆ. ಬನ್ನಿ ಎಲ್ಲರು ಕೈಜೋಡಿಸಿ ಮಕ್ಕಳ ರಂಗಭೂಮಿಯನ್ನು ಉಳಿಸಿ, ಬೆಳೆಸೋಣ.

***

# ಮಕ್ಕಳ ರಂಗಭೂಮಿ : ನಾ ಕಂಡಂತೆ

- ದಾಕ್ಷಾಯಿಣಿ ಭಟ್

''ನೋಡೊ ಆನಂದ ಅವ್ರಿಗೆ ಏನೂ ಕಾಣ್ತಾನೆ ಇಲ್ವಂತೆ ಪಾಪ'' ಈ ಮಾತನ್ನಾಡಿದ್ದು 2011ರ ಬಾಲಭವನದ ಬೇಸಿಗೆ ಶಿಬಿರದಲ್ಲಿ ನಮ್ಮ ನಾಟಕಕ್ಕೆ ಕೀಬೋರ್ಡ್ ನುಡಿಸಲು ಬಂದ ಅಂಧ ಹುಡುಗ, ತಬಲ ನುಡಿಸುತ್ತಿದ್ದ ಅಂಧ ಹುಡುಗನಿಗೆ. ನಾವು ಕರೆಂಟು ಹೋಗಿ ಪರದಾಡುತ್ತಿದ್ದಾಗ ಹೇಳಿದ ಮಾತು. ತಮ್ಮದೇ ಸ್ವಂತ ನೋವನ್ನು ಒಡಲಲ್ಲಿ ಇರಿಸಿಕೊಂಡು ಮತ್ತೊಬ್ಬರ ನೋವಿಗೆ ಅವನು ಸ್ಪಂದಿಸುತ್ತಿದ್ದ. ನಾಟಕವೆಂದರೆ ಇದೇ ಅಲ್ಲವೇ ? ಮತ್ತೊಬ್ಬರ ನೋವು ನಲಿವನ್ನು ನಮ್ಮದಾಗಿಸಿಕೊಂಡು ಅಭಿವ್ಯಕ್ತಿಸುವುದು. ಮನುಷ್ಯ ಸಂಸ್ಕಾರದ ಪರಮಗುರಿ ನನಗಂತೂ ಇದೇ ಹೌದು ಅನಿಸುತ್ತದೆ. ಇದನ್ನು ಕಲಿಯದೇ ಹೋದರೆ ನಾವು ಆಂತರಿಕವಾಗಿ ಅಂಧರಾಗುತ್ತೇವೆ.

ರಂಗಭೂಮಿಯಲ್ಲಿ ತೊಡಗಿಕೊಳ್ಳುವುದರ ಮೂಲಕ ಮಕ್ಕಳು ಮುಂದೆ ಸಮಾಜಕ್ಕೆ, ಬದುಕಿಗೆ ಮುಖಾಮುಖಿಯಾದಾಗ ಎದುರಾಗುವ ಸಮಸ್ಯೆಗಳಿಗೆ ಹೇಗೆ ಉತ್ತರ ಕಂಡುಕೊಳ್ಳುತ್ತಾರೆ ಎಂಬುದು ಮುಖ್ಯ. ನಾಟಕದ ಮೂಲಕ ಮಕ್ಕಳಲ್ಲಿ ಸಾಮಾಜಿಕ ಅರಿವು, ಜವಾಬ್ದಾರಿಯನ್ನು ಬೆಳೆಸಿ, ಅವರ ವ್ಯಕ್ತಿತ್ವ ಹಾಗೂ ಕಲ್ಪನಾ ಶಕ್ತಿಯನ್ನು ವಿಕಾಸಗೊಳಿಸಬೇಕು. ಕೆಲ ನಿರ್ದೇಶಕರಿಗೆ ದೊಡ್ಡವರ ಜೊತೆ ಕೆಲಸ ಮಾಡುವುದಕ್ಕಿಂತ ಮಕ್ಕಳ ಜೊತೆ ರಂಗಚಟುವಟಿಕೆಯಲ್ಲಿ ತೊಡಗಿಕೊಳ್ಳುವುದು ಹೆಚ್ಚು ಖುಷಿಕೊಡುತ್ತದೆ. ಹೀಗೆ ಖುಷಿಯಿಂದ ತೊಡಗಿಕೊಂಡ ನಿರ್ದೇಶಕರು ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದನ್ನು ಒಂದು ಸಾಮಾಜಿಕ ಜವಾಬ್ದಾರಿಯಾಗಿಯೂ ಸ್ವೀಕರಿಸುತ್ತಾರೆ.

ಬಾಲ್ಯದ ಅನುಭವ ಮತ್ತು ಕಲ್ಪನೆಗಳೇ ಮುಂದಿನ ಭವಿಷ್ಯವನ್ನು ರೂಪಿಸುತ್ತಾ ಹೋಗುತ್ತದೆ. ಮಕ್ಕಳಲ್ಲಿ ಕಲಾಸಕ್ತಿ ಹಾಗೂ ಸಹಜ ಪ್ರತಿಭೆಗಳು ಸುಪ್ತವಾಗಿ ಅಡಗಿರುತ್ತವೆ; ಹೊಸದನ್ನು ತಿಳಿದುಕೊಳ್ಳುವ ಹುಮ್ಮಸ್ಸು, ರಹಸ್ಯಗಳನ್ನು ಕೆದಕುವ ಕುತೂಹಲ ಮತ್ತು ಕಲಿಯುವ ಅದಮ್ಯ ಉತ್ಸಾಹ ಅವರಲ್ಲಿರುತ್ತವೆ. ಸೂಕ್ತ ಅವಕಾಶ ಮತ್ತು ತಕ್ಕ ಪ್ರೋತ್ಸಾಹಗಳು ಸಿಕ್ಕಾಗ ಅವು ತಾವಾಗಿಯೇ ಹೊರಹೊಮ್ಮುತ್ತವೆ.

ನಮ್ಮ ನಾಡು ಕಥೆಗಳ ಕಣಜ. ನಮ್ಮ ದೇಶದಲ್ಲಿ ನಾಟಕ ಸಾಹಿತ್ಯ ಕಥೆ ಕಾದಂಬರಿಗಳನ್ನು ರಚಿಸಿರುವ ಪೂರ್ವಸೂರಿಗಳ ಬದುಕನ್ನು ಅವಲೋಕಿಸಿದಾಗ ಇವರ ಹುಟ್ಟು ಬಾಲ್ಯ ಗ್ರಾಮೀಣ ಪ್ರದೇಶದಲ್ಲಿ, ನಂತರದ ಓದು ತಾಲ್ಲೂಕು, ಜಿಲ್ಲೆ ಜೀವನ ನಗರ ಪ್ರದೇಶದತ್ತ ಬದಲಾಗುತ್ತಾ ಹೋಗುತ್ತದೆ. ಇವರ ಬರವಣಿಗೆಯ ವಿಷಯ ದೇವರು ಕೊಟ್ಟ ವರದಂತೆ, ಥಟ್ಟನೆ ಒದಗಿ ಬಂದದ್ದಲ್ಲ, ಗ್ರಾಮೀಣ ಭಾಗದ್ದೇ ಆಗಿರುತ್ತದೆ.

ತಾತ ಮುತ್ತಾತಂದಿರು ಹೇಳುತ್ತಿದ್ದ ಕಥೆಗಳು, ಕೂಡು ಕುಟುಂಬದಲ್ಲಿ ನಡೆಯುತ್ತಿದ್ದ ರೀತಿಗಳನ್ನೇ ಮಕ್ಕಳು ದನದ ಕೊಟ್ಟಿಗೆ, ಹೊಳೆದಂಡೆ, ಮಾವಿನ ತೋಪುಗಳಲ್ಲಿ ತಮ್ಮದೇ ಆದ ರೀತಿಯಲ್ಲಿ ಅಪ್ಪ, ಅಮ್ಮನ ಆಟ ಆಡಿ, ಗೊಂಬೆಗಳಿಗೆ ಮದುವೆ ಮಾಡಿ, ಮಣ್ಣಿನ ಅಡಿಗೆ ಮಾಡಿ ಪುನರಭಿನಯಿಸುತ್ತಿದ್ದರು. ಕೆಲವೊಮ್ಮೆ ದನಕಾಯಲು ಕುರಿಕಾಯಲು ಹೋದ ಮಕ್ಕಳು ಕೃಷ್ಣಪಾರಿಜಾತದ ಮಾತುಗಳನ್ನು ಅಥವಾ ತಮ್ಮ ಗೌಡರ ಗತ್ತು ಗಮ್ಮತ್ತುಗಳನ್ನು ಅನುಕರಿಸುತ್ತಿದ್ದರು. ಅಲ್ಲದೆ ಹಳ್ಳಿಯ ಜಾನಪದ ಸೊಗಡಿನ ಸಂಸ್ಕಾರ ಅವರನ್ನು ಇನ್ನಷ್ಟು ಗಟ್ಟಿಯನ್ನಾಗಿ ಮಾಡಿತು ಎಂದರೆ ತಪ್ಪಾಗಲಾರದು. ಇಂದು ಈ ಸಾಧ್ಯತೆಗಳು ಮರೆಯಾಗಿ ಹೋಗುತ್ತಿರುವುದರಿಂದ ಮಕ್ಕಳಿಗೆ ರಂಗಶಿಕ್ಷಣ ಅನಿವಾರ್ಯವಾಗುತ್ತದೆ.

ನಾಟಕ ಅಂದರೆ ಭಾವನೆಗಳನ್ನು ಅಭಿವ್ಯಕ್ತಿಸುವ, ವಿವರಣೆಗೆ ಮೀರಿದ ಸಂಗೀತಾನುಭವದ, ಭಾಷಾ ಬಳಕೆಯ ತಂತ್ರದ, ಕತ್ತಲು, ಬೆಳಕಿನ ಆಟದ, ಸದ್ದು ಮೌನಗಳ ದೃಶ್ಯ ಸಂಕಲನ. ಇದನ್ನು ಕಲಿಯಲು ಹೆಚ್ಚಿನ ಸಮಯ, ಸಂಯಮ ಬೇಕು. ಇದರಲ್ಲಿ ಪಾಲ್ಗೊಳ್ಳುವುದರಿಂದ ನಮಗೆ ಸಮಾಧಾನ, ರಂಜನೆ, ಜತೆಗೆ ವಿಚಾರಗಳನ್ನು ಸ್ಪಷ್ಟಗೊಳಿಸುವುದಕ್ಕೆ, ನಾಯಕತ್ವ ರೂಢಿಸಿಕೊಳ್ಳುವುದಕ್ಕೆ ಸಹಕಾರಿಯಾಗುತ್ತದೆ. ನಮ್ಮ ಭಾವನೆಗಳನ್ನೂ, ತಲುಪಿಸಬೇಕಾದ ವಿಚಾರಗಳನ್ನು ಪರಿಣಾಮಕಾರಿಯಾಗಿ ವ್ಯಕ್ತಗೊಳಿಸಲು, ತಲುಪಿಸಲು ಬಳಸಬಹುದಾದ ತಂತ್ರಗಳನ್ನು ರಂಗಭೂಮಿ ಕಲಿಸುತ್ತದೆ.

ಕರ್ನಾಟಕದಲ್ಲಿ ಮಕ್ಕಳ ರಂಗಭೂಮಿ ವೃತ್ತಿ ರಂಗಭೂಮಿಯ ಕಾಲದಲ್ಲೇ ಅಸ್ತಿತ್ವದಲ್ಲಿದ್ದದ್ದು ತಿಳಿದು ಬರುತ್ತದೆ. ಆದರೆ ಅದರ ಸ್ವರೂಪ ಈಗಿನದಕ್ಕಿಂತ ಭಿನ್ನವಾಗಿತ್ತೆನ್ನಬಹುದು. ಮಕ್ಕಳಿಗೆ ನಿರ್ದಿಷ್ಟವಾಗಿ ಮಕ್ಕಳ ರಂಗಭೂಮಿ ಎಂದು ತಿಳಿಯದಿದ್ದರೂ ಅವರು ನೋಡಿದ ನಾಟಕದ ದೃಶ್ಯಗಳು ನೆನಪಾಗಿ, ವಿಚಾರಗಳನ್ನೂ ಎದುರಾಗಿಸಿ ಹುಡುಕಾಟ ನಡೆಸುತ್ತ ಮನಸ್ಸನ್ನು ಜಾಗೃತಗೊಳಿಸುತ್ತಿರುತ್ತದೆ. ಇದಕ್ಕೆ ಉದಾಹರಣೆ : ಗಾಂಧೀಜಿಯುವರು ಸತ್ಯಹರಿಶ್ಚಂದ್ರ ನಾಟಕವನ್ನು ನೋಡಿ ಆದ ಬದಲಾವಣೆ. ಮತ್ತೊಂದು ನೆನಪು ; ನಾನು 5ನೇ ತರಗತಿಯಲ್ಲಿದ್ದಾಗ ಭಾರಿ ರೇಶಿಮೆ ಸೀರೆ ಉಟ್ಟು ಕುಂತಿಯ ಪಾತ್ರ ಮಾಡಿದ್ದು , 6ನೇ ತರಗತಿಯಲ್ಲಿ ದಪ್ಪ ಮೀಸೆಯ

ರಾಕ್ಷಸನಾಗಿ 'ಇದು ನನ್ನ ಕಾಡು' ಎಂದು ಅರಣ್ಯವನ್ನು ಮನುಷ್ಯರಿಂದ ರಕ್ಷಿಸುವ ಪಾತ್ರ ಪಾಠಕ್ಕಿಂತ ಚೆನ್ನಾಗಿ ನೆನಪಿದೆ.

ಇಂದು ಮಕ್ಕಳ ರಂಗಭೂಮಿ ತನ್ನೆಲ್ಲಾ ಅಂಗಗಳಿಂದಲೂ ಬೆಳವಣಿಗೆ ಹೊಂದುತ್ತಿದೆ. ಕಳೆದುಹೋಗುತ್ತಿರುವ ಮಕ್ಕಳ ನಿಜ ಬಾಲ್ಯವನ್ನು ಅದು ಮರಳಿಸುತ್ತದೆ; ಆದರೆ ಇದು ನಿರಂತರವಾದಾಗ ಮಾತ್ರ. ಇಂದು ಮಕ್ಕಳು ಮತ್ತು ರಂಗಭೂಮಿಯ ಒಂದು ಸಂಬಂಧ ಶೈಕ್ಷಣಿಕವಾದದ್ದು ಶಿಕ್ಷಣನೀತಿ ಮತ್ತು ವಿಧಾನದಲ್ಲಿ ಬದಲಾವಣೆ ಆದ ಹಾಗೆ ಈ ಸಂಬಂಧದ ಸ್ವರೂಪದಲ್ಲೂ ಬದಲಾವಣೆ ಆಗುತ್ತದೆ. ಮತ್ತೊಂದು ಸಂಬಂಧ, ಬೇಸಿಗೆ ಶಿಬಿರ, ಮಕ್ಕಳ ನಾಟಕೋತ್ಸವ, ಚಿಣ್ಣರ ಮೇಳ, ಮಕ್ಕಳ ನಾಟಕಸ್ಪರ್ಧೆ ಇತ್ಯಾದಿ. ಬದಲಾವಣೆ ರೂಪವನ್ನು ಪಡೆಯುತ್ತಿರುವ ಮಕ್ಕಳ ರಂಗಭೂಮಿಯಲ್ಲಿ ನಾನು ಕೆಲವರ್ಷಗಳಿಂದ ಕೆಲಸ ಮಾಡುತ್ತಿರುವಾಗ ಒದಗಿ ಬಂದ ವಿಭಿನ್ನ ಅನುಭವಗಳಲ್ಲಿ ಕೆಲವನ್ನು ವ್ಯಕ್ತಪಡಿಸುತ್ತೇನೆ.

''ನೋಡು ಈ ವರ್ಷ ನೀನು ಫಸ್ಟ್ ಕ್ಲಾಸ್ ಬರ್ಬೇಕು, ಇಲ್ಲಾಂದ್ರೆ ನಿನ್ನ ಕಾಲ್ ಮುರ್ದುಬಿಡ್ತೀನಿ'' ಅಂತ ನಮ್ಮಮ್ಮ ಹೇಳಿದಾರೆ. ಆದಕ್ಕೆ ನಾವು ಇಲ್ಲಿಂದ್ಲೇ ಆಡ್ತಾ ಇದೀವಿ ಎಂದು 8 ವರ್ಷದ ಮಗು ದಾರಿಹೋಕನಿಗೆ ಮೇಲಿ ಕೆಳಗೆ ಬಿದ್ದ ಬಾಲ್ ತೆಗೆದುಕೊಡಲು ಹೇಳಿತು. ಇದು ನಡೆದದ್ದು 2003ರಲ್ಲಿ ಸಮುದಾಯದ ವತಿಯಿಂದ ಕೆ.ಹೆಚ್.ಬಿ. ಕಾಲೋನಿಯ ಮಕ್ಕಳ ಶಿಬಿರ ಮಾಡಲು ದಿನವೂ ನಾನು ನಡೆದುಹೋಗುತ್ತಿದ್ದ ದಾರಿಯ ಪಕ್ಕದ ಮನೆಯ ಮಗು ಬಾಲ್ಕನಿಯಿಂದ ಎದುರು ಮನೆ ಬಾಲ್ಕನಿಯ ಮಕ್ಕಳೊಂದಿಗೆ ಬಾಲ್ ಆಡುವಾಗ, ಅದು ಕೆಳಗೆ ಬಿದ್ದು ಅದನ್ನು ದಾರಿಯಲ್ಲಿ ಹೋಗುವವರ ಹತ್ತಿರ ಮೇಲೆ ಬಿಸಾಡಲು ಹೇಳುತ್ತಿದ್ದರು. ಆಗ ಬಾಲನ್ನು ವಾಪಾಸ್ ಕೊಡುವಾಗ ವ್ಯಕ್ತಿ ಕೇಳಿದ ಪ್ರಶ್ನೆಗೆ ಮಗು ಉತ್ತರಿಸಿದ್ದು ಹೀಗೆ. ಈ ಮಕ್ಕಳ ತಂದೆ ತಾಯಿ ಶಾಲೆಗೆ ರಜೆ ಇದ್ದದ್ದರಿಂದ ಮಕ್ಕಳನ್ನು ಮನೆಯಲ್ಲಿ ಬಿಟ್ಟು ಕೀ ಹಾಕಿಕೊಂಡು ಕೆಲಸಕ್ಕೆ ಹೋಗಿದ್ದರು. ಆಚೆ ಮತ್ತು ಈಚೆ ಮನೆಯ ಮಕ್ಕಳು ಬಾಲ್ಕನಿಯಿಂದ ಆಟ ಆಡುತ್ತಿದ್ದರು.

ಇದೇ ಘಟನೆಯನ್ನು ಇಟ್ಟುಕೊಂಡು ನಾನು ನಾಟಕವನ್ನು ಕಟ್ಟುತ್ತಾ ಹೋದೆ. ಅಲ್ಲಿಯ ದಾರಿಹೋಕ ನಮ್ಮ ನಾಟಕದ ಅಜ್ಜನಾದ. ಅದೇ ಅಜ್ಜನಿಂದ ದಾರಿಹೋಕ ಮಕ್ಕಳಿಗೆ ಕೇಳಿದ ಪ್ರಶ್ನೆ, ಆ ಮಕ್ಕಳಿಂದ ಬಂದ ಉತ್ತರ, ಇದರ ಜೊತೆ ಸಾಗಿದ ಅಜ್ಜನ ಕತೆ. ಹೀಗೆ ನಾಟಕ ಬೆಳೆಯಿತು. ಶಿಬಿರದಲ್ಲಿದ್ದ ಮಕ್ಕಳೆಲ್ಲಾ 'ಕ್ಲಾಸ್‌ಒನ್' ಆಫೀಸರ್ಸ್ ಮಕ್ಕಳು. ಅದರಲ್ಲಿ ಒಬ್ಬ ಮಾತ್ರ ಮನೆಕೆಲಸಕ್ಕೆ ಹೋಗುವಾಕೆಯ ಮಗ. ಇಲ್ಲಿ ನಾನು ಮುಖ್ಯವಾಗಿ ಗಮನಿಸಿದ ಅಂಶ, ಎಲ್ಲರಿಗಿಂತ ಈ ಹುಡುಗ ಎಲ್ಲಾ ಪಾತ್ರಗಳನ್ನು ಲೀಲಾಜಾಲವಾಗಿ ಮಾಡುತ್ತಿದ್ದ. ಪಾತ್ರಗಳನ್ನು ಬದಲಾಯಿಸಿದರೆ ತಕ್ಷಣ ವಿಶೇಷ ರೀತಿಯಲ್ಲಿ ಆ ಪಾತ್ರವನ್ನು ಕಟ್ಟಿಕೊಂಡು ಬಿಡುತ್ತಿದ್ದ. ಉಳಿದೆಲ್ಲರಿಗಿಂತ ಹೆಚ್ಚು ಜನರ ಬಳಕೆ, ಒಡನಾಟಗಳೆ ಇವನಿಗೆ ವಿವಿಧತೆ ಕಂಡುಕೊಳ್ಳಲು ಸಾಧ್ಯವಾಗಿತ್ತು.

2004ರಲ್ಲಿ ಎಂ.ಇ.ಎಸ್. ಕಿಶೋರ ಕೇಂದ್ರದ ಮಕ್ಕಳಿಗೆ ಮಾಡಿದ 'ಒಳ್ಳೇದು ಒಳ್ಳೇದು !?' ನಾಲ್ಕು ಜನಪದ ಕಥೆಗಳೊಂದಿಗೆ ಹೆಣೆದ ಒಂದು ವಿನೂತನ ವಿನ್ಯಾಸದ ನಾಟಕ. ಮಕ್ಕಳಲ್ಲಿ ಹುದುಗಿರುವ ಚೈತನ್ಯ, ಮಾತು ಅನಿಸಿಕೆಗಳನ್ನು ಯಾವುದೇ ಚೌಕಟ್ಟಿನ ಬಂಧನವಿಲ್ಲದೆ ನಾಟಕದ ಮೂಲಕ ಹೊರಹಾಕಿದ ಪ್ರಯೋಗ. ಮಕ್ಕಳಿಂದಲೇ ಸೃಷ್ಟಿಗೊಂಡನಾಟಕ ಕಟ್ಟುವ ಆ ಪ್ರಕ್ರಿಯೆ ಆರಂಭದಲ್ಲಿ ದಿನದ 2 ತಾಸು ಮಾತ್ರ ಸಿಗುತ್ತಿದ್ದ ಮಕ್ಕಳ ಆಟಪಾಠಗಳ ಆಧಾರದ ಮೇಲೆ ರೂಪುಗೊಂಡ ಒಂದು ಸೃಜನಾತ್ಮಕ ನಾಟಕ. ಆರಂಭದ ದಿನ ನೂರಕ್ಕೂ ಹೆಚ್ಚು ಮಕ್ಕಳು ಹೆಸರುಕೊಟ್ಟರು. ಅಬ್ಬಾ ಇಷ್ಟು ಮಕ್ಕಳನ್ನು ನಿಭಾಯಿಸುವುದು ಹೇಗೆ ? ಎಂಬ ಪ್ರಶ್ನೆ ಕಾಡಿದ್ದು ನಿಜ. ಶಿಬಿರ ಆರಂಭವಾಯ್ತು. ಮೊದಲದಿನ... ಅವರ ಹೆಸರನ್ನು ಹೇಳಲು ಸಮಯವಾಯ್ತು. ನಾನು ಮಾರನೆಯ ದಿನ ಹೆಸರು ಹೇಳುವುದನ್ನೇ ಧ್ವನಿ ಬದಲಾಯಿಸಿ, ಉಚ್ಚಾರದಲ್ಲಿ ಎಲ್ಲಿ ಒತ್ತು ನೀಡಿದರೆ ಅರ್ಥವ್ಯತ್ಯಾಸವಾಗುತ್ತದೆ ? ಎಲ್ಲಿ ಒತ್ತು ನೀಡಿದರೆ ಅರ್ಥಗರ್ಭಿತವಾಗುತ್ತದೆ ? ಒತ್ತು ನೀಡದೆ ಹೇಳಿದಾಗ ಪರಿಣಾಮಗಳೇನು ? ಮಾತಾಡುವಾಗ ಉಸಿರಿನ ಹಿಡಿತ ಸಾಧಿಸಲು ಏನು ಮಾಡಬೇಕು ? ರಂಗದಲ್ಲಿದ್ದಾಗ ದೃಷ್ಟಿ ಎಲ್ಲಿರಬೇಕು, ನಿಲ್ಲುವುದು ಹೇಗೆ, ಕೂರುವುದು ಹೇಗೆ ? ಹೀಗೆ ನನ್ನ ಮಾರ್ಗದರ್ಶನ ಆರಂಭವಾಯ್ತು. ಇದು ಶಿಸ್ತುಬದ್ಧವಾಗಿದ್ದರಿಂದ ಟೈಂಪಾಸ್‌ಗೆ ಬಂದ 8-9ನೇ ತರಗತಿಯ ಮಕ್ಕಳು ಹಿಂದೆ ಸರಿದರು. 9ರ ಒಂದೇ ಹುಡುಗ, ಒಂದೇ ಹುಡುಗಿ ಉಳಿದರು. ಉಳಿದಂತೆ ಎಲ್.ಕೆ.ಜಿ.ಯಿಂದ 7ನೇ ತರಗತಿಯ ಮಕ್ಕಳು. ವಯಸ್ಸಿನ ವ್ಯತ್ಯಾಸ ಇದ್ದದ್ದರಿಂದ ಬೇರೆ ಬೇರೆ ತರಗತಿಯ ಮಕ್ಕಳಾದ್ದರಿಂದ ನಿಂತಲ್ಲಿ ನಿಲ್ಲದೆ, ಕೂತಲ್ಲಿ ಕೂರದೆ ಥೇಟ್ ಮಂಗಣ್ಣಗಳೇ ಕೆಲವರಾದರೆ, ಹೆಣ್ಣುಮಕ್ಕಳು ನಾಚಿಕೆಯಿಂದ ಮುದುಡಿ ನಿಂತಿದ್ದರು. ಇವರನ್ನೆಲ್ಲಾ ವೃತ್ತಾಕಾರದಲ್ಲಿ ಕೂರಿಸಿ ವೃತ್ತಾಕಾರದ ಸಾಧ್ಯತೆಗಳನ್ನು ವಿವರಿಸಿ ಪುನಹ ಅವರ ಹೆಸರಿನ ಆಟದೊಂದಿಗೆ ಥಿಯೇಟರ್ ಗೇಮ್ಸ್ ಆಡಿಸಿದಾಗ ಮಕ್ಕಳು ಮೈಚಳಿ ಬಿಟ್ಟು ಆಡಿದರು. ನಂತರ ಅದು ಯಾವ ರೀತಿಯ ಆಟ, ಅದರ ಉದ್ದೇಶಗಳೇನು, ಅದರಿಂದುಂಟಾಗುವ ಉಪಯೋಗಗಳೇನು ? ಎಂದು ವಿವರಿಸಿದಾಗ ಅವರಿಗೆ ಆತ್ಮವಿಶ್ವಾಸ ಹುಟ್ಟಿ ಖುಷಿಯಿಂದ ರಂಗಚಟುವಟಿಕೆಯಲ್ಲಿ ತೊಡಗಿಕೊಳ್ಳಲಾರಂಭಿಸಿದರು. ಮಾರನೆಯ ದಿನ ಹಿಂದಿನ ದಿನದ ಆಟದ ಜತೆಗೆ ಹೊಸ ಆಟವನ್ನು ಆಡಿಸಿ ಅದರ ವಿವರಗಳನ್ನು ಕೊಟ್ಟಾಗ ಎಲ್ಲರೂ ಪರಸ್ಪರ ಆತ್ಮೀಯವಾಗಿ ಸಹಜವಾಗಿ ವರ್ತಿಸತೊಡಗಿದರು. ನಂತರ ಕಥೆಯ ಒಂದು ಸಾಲನ್ನು ಹೇಳಿ ಅದನ್ನು ಒಬ್ಬೊಬ್ಬರೇ ಮುಂದುವರೆಸಲು ಹೇಳಿ ನಮ್ಮ ಈ ಆಟ ಮುಗಿಯುವಾಗ ಹೀಗೆ ಹಲವಾರು ಕಥೆಗಳು ಹುಟ್ಟಿಕೊಂಡವು.

ಕ್ರಮೇಣ ಸಮಯವನ್ನು ವಿಸ್ತರಿಸಿಕೊಳ್ಳುತ್ತಾ ಒಂದಷ್ಟು ಕಥೆಗಳನ್ನು ಹೇಳಿ

ಅವುಗಳಲ್ಲಿ ಅವರಿಗೆ ಇಷ್ಟವಾದ ನಾಲ್ಕು ಕಥೆಗಳು ನಮ್ಮ ಪ್ರಯೋಗದ ವಸ್ತುವಾಯಿತು. ಒಂದೊಂದೇ ಕಥೆಯನ್ನೇ ಮತ್ತೆ ಮತ್ತೆ ಹೇಳಿ ಹೇಳಿಸಿ ನಾಲ್ಕು ಗುಂಪುಗಳಾಗಿ ಮಾಡಿ ಅವರ ಕೈಯಲ್ಲಿ ಆಶುವಿಸ್ತರಣೆ ಮಾಡಲು ಹೇಳಿದಾಗ ಉತ್ಸುಕರಾದ ಮಕ್ಕಳು ವಿಭಿನ್ನ ಪಾತ್ರಗಳನ್ನು ಗ್ರಹಿಸಿ, ಸೃಷ್ಟಿಸಿ ಅದರಲ್ಲೇ ತಲ್ಲೀನರಾಗಿ ಆಶುವಿಸ್ತರಣೆ ಆರಂಭಿಸಿಯೇ ಬಿಟ್ಟರು. ಒಂದು ತಂಡ ಪ್ರದರ್ಶನ ಮಾಡುತ್ತಿರುವಾಗ ಉಳಿದ ಮೂರು ತಂಡಗಳು ಗಮನವಿಟ್ಟು ನೋಡುತ್ತಾ, ಜೊತೆಗೆ ಅವರಲ್ಲಾಗುತ್ತಿರುವ ತಪ್ಪುಗಳು ತಾವು ಮಾಡಬಾರದೆಂದುಕೊಳ್ಳುತ್ತಾ ತಾವು ಪ್ರದರ್ಶನಕ್ಕೆ ಸಿದ್ಧರಾದರು. ಇದರಲ್ಲಿ ಅವರಿಗೆ ಇಷ್ಟವಾದ ಪಾತ್ರಗಳನ್ನು ಅವರೇ ಹಂಚಿಕೊಂಡಿದ್ದರು. ಎಲ್ಲರ ಪ್ರದರ್ಶನ ಮುಗಿದು ವೃತ್ತಾಕಾರಕ್ಕೆ ಬಂದದ್ದೆ ಗೋಡೆಗಳದುರಿಹೋಗುವಂತೆ ವಾದ, ವಿಮರ್ಶೆಗಳು ಆರಂಭವಾಗಿ ಯಾವ ವಿಧಾನಸೌಧದ ಕಲಾಪಕ್ಕೂ ಕಡಿಮೆ ಇಲ್ಲದಂತೆಯೂ, ಒಳ್ಳೆಯ ಪತ್ರಿಕಾ ವಿಮರ್ಶಕರಂತೆಯೂ ಭಾರಿ ವಿಮರ್ಶೆಗಳು ನಡೆದವು. ಈ ತಂಡಗಳಲ್ಲಿ ತಟ್ಟನೆ ನಾಯಕರುಗಳೂ ಹುಟ್ಟಿಕೊಂಡುಬಿಟ್ಟರು. ಮಕ್ಕಳಲ್ಲಿ ಅಭಿಯನದ ಪೈಪೋಟಿ ಇದ್ದದ್ದರಿಂದ ನಾನು ಏನು ಹೇಳುತ್ತೇನೆ ಎಂದು ನನ್ನ ಮುಖ ನೋಡಿದರು. ಒಂದು ನಿಮಿಷ ಮೌನವಾದಾಗ, ಮಿಸ್ ಹ್ಯಾಗಾಯ್ತು ಮಿಸ್, ಯಾವ ಟೀಮ್ ಚೆನ್ನಾಗ್ ಮಾಡ್ತು? ನಾನ್ ಚನ್ನಾಗ್ ಮಾಡಿದ್ನ ಎಂಬ ಪ್ರಶ್ನೆಗಳ ಸುರಿಮಳೆ ಶುರುವಾಯ್ತು. ಅವರು ಪರಸ್ಪರ ವಾದ ಮಾಡುವಾಗ ಅವರ ಮುಖಭಾವಗಳನ್ನು, ಅವರ ಎನರ್ಜಿ ಗಮನಿಸುತ್ತಿದ್ದೆ. ಇದು ನನಗೆ ಪಾತ್ರ ಹಂಚಲು ಅನುಕೂಲವಾಗುತ್ತಿತ್ತು.

ಮಾರನೆಯ ದಿನ ನಡೆದ ಆಶುವಿಸ್ತರಣೆಯಲ್ಲಿ ರಾಮ-ರಾವಣರಿದ್ದು ಎರಡೂ ತಂಡದ ಮಕ್ಕಳು ಎರಡೂ ತಂಡದ ಸೈನ್ಯಕ್ಕೂ ಜೈ ಅಂದದ್ದುಂಟು. ರಾಮನ ಕಡೆಯ ಸೈನಿಕರು ರಾಮನ ಸೈನಿಕರಿಗೇ ಗುದ್ದಿ 'ಸಾರಿ' ಎಂದದ್ದುಂಟು. ಇವರು ಬಳಸಿದ ಪರಿಕರಗಳು ಹೆಚ್ಚು ಕಡಿಮೆ ಒಂದೇ ರೀತಿಯವು. ಆದರೆ ಬಳಕೆಯ ರೀತಿ ಬದಲಾಗುತ್ತದೆ. ಟೇಬಲ್, ಚಾಕ್‌ಪೀಸ್, ಡಸ್ಟರ್, ಮೇಸ್ಟ್ರ ಬೆತ್ತ ಇವರಿಗೆ ಏರೋಪ್ಲೇನ್ ಅಥವಾ ಪಿಸ್ತೂಲ್ ಆಗಿ, ಟೇಬಲ್ ತಬಲವೂ ಆಗಿ ಒಂದು ನಾಟಕ ಸಿದ್ಧ. ಆದರೆ ಸಂಪೂರ್ಣ ನಾಟಕ ಸ್ವಯಂಸ್ಫೂರ್ತ. ಇದನ್ನು ನಾವು ನೆನಪಿಟ್ಟುಕೊಳ್ಳಬೇಕು. ಇಷ್ಟರ ಮಧ್ಯೆ ಅವರಿಗೆ ಇಷ್ಟವಾದ ಹಾಗೂ ದ್ವೇಷಿಸುವ ಶಿಕ್ಷಕರ ಪಾತ್ರವೂ ಯಾವುದೋ ಮಾಯದಲ್ಲಿ ಆಶುವಿಸ್ತರಣೆಯಲ್ಲಿ ಪಾತ್ರವಾಗಿ ಬಂದಿತ್ತು. ಎಲ್ಲ ಮುಗಿದ ನಂತರ ಮತ್ತೆ ನಿನ್ನೆಗಿಂತ ಇವತ್ತು ಚೆನ್ನಾಗ್ ಮಾಡಿದ್ವ ಮಿಸ್? ಹೀಗೆ ಕೇಳುತ್ತಾ ತಪ್ಪುಗಳನ್ನು ತಿದ್ದಿಕೊಳ್ಳುತ್ತಿದ್ದರು.

ಒಂದು ಮುಖ್ಯಸಂಗತಿ ಎಂದರೆ ಬೇರೆ ಬೇರೆ ಶಿಬಿರಗಳಲ್ಲಿ ಮಕ್ಕಳು ತಮಗೆ ಇಷ್ಟವಾದ, ಇಷ್ಟವಾಗದ ಶಿಕ್ಷಕರ ಬಗ್ಗೆ ಚರ್ಚಿಸಿದ್ದಿದೆ. ಹಾಗೆ ಮಾತಾಡಬಾರದೆಂದಾಗ 'ನೀವು ಮಿಸ್ಸು, ಅವ್ರು ಮಿಸ್ಸು ಆದ್ರೆ ಅವ್ಯಾಕೆ ನಿಮ್ಮ ಹಾಗೆ ನಮ್ಮ ಹತ್ತಿರ ಮಾತಾಡೊಲ್ಲ' ಎಂದು ಪ್ರಶ್ನಿಸಿದ್ದಿದೆ.

ನಾವು ಅವರೊಂದಿಗೆ ಆತ್ಮೀಯವಾಗಿ ನಡೆದುಕೊಂಡು ಅವರಿಗೆ ತೋರುವ ಪ್ರೀತಿ ವಿಶ್ವಾಸಗಳು ಅವರ ಆತ್ಮವಿಶ್ವಾಸ ಹಾಗೂ ಆಸಕ್ತಿಯ ತೀವ್ರತೆಯನ್ನು ಹೆಚ್ಚಿಸುತ್ತಾ ಹೋಗುತ್ತದೆ. ಹಾಗಾಗಿ ಮಕ್ಕಳು ನಮ್ಮೊಂದಿಗೆ ಅವರ ಎಲ್ಲಾ ಕಷ್ಟ ಸುಖಗಳನ್ನೂ ಅವರ ಸ್ನೇಹಿತರ ಬಗ್ಗೆ, ಅವರ ಮನೆಯ ಬಗ್ಗೆ, ಕಡೆಗೆ ಅವರ ಇಷ್ಟದ ತಿಂಡಿ, ಬಟ್ಟೆಗಳ ಬಗ್ಗೆಯೂ ಹೇಳಿಕೊಳ್ಳುತ್ತಾರೆ.

ಈ ನಾಟಕ ಕಟ್ಟುವ ಕ್ರಿಯೆಯಲ್ಲಿ ಮಕ್ಕಳ ಒಟ್ಟು ವ್ಯಕ್ತಿತ್ವ ಅರ್ಥವಾಗುತ್ತಾ ಹೋಗುತ್ತದೆ. ಹೀಗೆ ನಾಟಕ ಒಂದು ರೂಪಕ್ಕೆ ಬರುವಂತೆ ಆಟಗಳ ಜೊತೆಜೊತೆಗೆ ಪ್ರಯಾಣಿಸಿ, ನಾಟಕಕ್ಕೆ ಬೇಕಾದ ಸಂಗೀತವನ್ನು ತಬಲ ಕಲಿಯುತ್ತಿದ್ದ 5ನೇ ತರಗತಿಯ ಅಭಿಷೇಕ, ಸಂಗೀತ ಕಲಿಯುತ್ತಿದ್ದ ಸ್ಫೂರ್ತಿಯರನ್ನು ಬಳಸಿಕೊಂಡು ರಂಗಸಂಗೀತ ಮಾಡಲಾಯ್ತು. ರಂಗಸಜ್ಜಿಕೆ, ಪರಿಕರಗಳನ್ನು ಮಕ್ಕಳೇ ಆಟವಾಡುತ್ತಾ ಮಾಡಿ ಮುಗಿಸಿದರು.

ನಾಟಕ ಕಟ್ಟಲಿಕ್ಕಾದ ಸಹಾಯ ಮತ್ತು ಮಕ್ಕಳ ವ್ಯಕ್ತಿತ್ವದಲ್ಲುಂಟಾದ ಬದಲಾವಣೆಗಳನ್ನು ಅವರಿಗೆ ಮನಗಾಣಿಸಲಾಯ್ತು. ನಂತರ ಈ ನಾಟಕ ರವೀಂದ್ರ ಕಲಾಕ್ಷೇತ್ರ, ಬಾಲಭವನ ರಂಗಮಂಡಲದ ಸ್ಪರ್ಧೆ, ಸ್ಫೂರ್ತಿ ಕಲಾವಿದರು ನಡೆಸಿದ ಸ್ಪರ್ಧೆಗಳಲ್ಲಿ ಸಾಕಷ್ಟು ಪ್ರಶಸ್ತಿ ಗಳಿಸಿದ್ದಲ್ಲದೆ, ಕಿಶೋರ ಕೇಂದ್ರದಲ್ಲೇ ಮೂರ್‍ನಾಲ್ಕು ಪ್ರದರ್ಶನ ಕಂಡು ಪ್ರೇಕ್ಷಕರ ಮೆಚ್ಚುಗೆ ಗಳಿಸಿದ್ದಲ್ಲದೆ, ಪತ್ರಿಕೆಗಳಲ್ಲಿ ಉತ್ತಮ ವಿಮರ್ಶೆಯು ಬಂದಿತು. ಈ ನಾಟಕದ ಮತ್ತೊಂದು ವಿಶೇಷ ಎಂದರೆ 2ನೇ ತರಗತಿಯ ಹುಡುಗ ನಾಟಕದ ಹೀರೋ, 9ನೇ ತರಗತಿ ಹುಡುಗಿ ಹೀರೋಯಿನ್. ಈತ ಎಷ್ಟು ಸೂಕ್ಷ್ಮಗಳನ್ನು ಹಿಡಿಯುತ್ತಿದ್ದನೆಂದರೆ 9ನೇ ತರಗತಿಯ ಹುಡುಗನಿಗೂ ಸಾಧ್ಯವಾಗಲಿಲ್ಲ. ನಾಟಕ ಮುಗಿಯುತ್ತಿದ್ದಂತೆ ಪ್ರೇಕ್ಷಾಂಗಣ ತುಂಬುವಂತೆ ಈತನಿಗೆ ಚಪ್ಪಾಳೆ ಬೀಳುತ್ತಿದ್ದವು.

ಮಕ್ಕಳ ಮನಸ್ಸು ಎಂದರೆ ಸ್ವಾತಂತ್ರ್ಯ, ಅನಿರ್ಬಂಧಿತ ಸ್ವಚ್ಛಂದತೆ, ಜಗತ್ತನ್ನು ವಿಸ್ಮಯದಿಂದ ನೋಡುವ ವಯಸ್ಸದು. ಹಾಗಾಗಿ ಸಣ್ಣ ಪ್ರಮಾಣದಲ್ಲಿ ಏನನ್ನೂ ಕಲ್ಪಿಸಿಕೊಳ್ಳಲು ಬಯಸುವುದಿಲ್ಲ. ಅವುಗಳಿಗೆ ಯಾವುದನ್ನು ವಿವರಿಸಬೇಕಾದರೂ ಉತ್ಪ್ರೇಕ್ಷೆ ಬೇಕು. ಫ್ಯಾಂಟಸಿಯಿಂದಾಗಿ ಪ್ರಪಂಚದ ಜನರ, ಪ್ರಾಣಿ-ಪಕ್ಷಿಗಳ, ಗಿಡಮರಗಳ, ಬೆಟ್ಟ -ಗುಡ್ಡಗಳ ಕುರಿತಾದ ಪ್ರೀತಿ ಆಕರ್ಷಣೆಗಳು ಮನದಲ್ಲಿ ಅಚ್ಚೊತ್ತಲ್ಪಡುತ್ತದೆ. ಮಕ್ಕಳಲ್ಲಿ ಕುತೂಹಲ ಕೆರಳಿಸಲು, ಸಾಹಸ ಮಂತ್ರಮುಗ್ಧರನ್ನಾಗಿಸಲು ದಿಗ್ಭ್ರಮೆ ಮೂಡಿಸಲು ಫ್ಯಾಂಟಸಿಯನ್ನು ಬಳಸಿಕೊಳ್ಳಬೇಕು. ಅದು ಅವರ ಇಂದ್ರಿಯಗಳ ಗ್ರಹಣಶಕ್ತಿಯನ್ನು ಬೆಳೆಸುವುದಲ್ಲದೆ ಅವರಲ್ಲಿ ಸ್ವತಂತ್ರ ವಿಚಾರಶಕ್ತಿಯನ್ನು ಹೆಚ್ಚಿಸಲು ಸಹಾಯಕವಾಗಿ ಅವರ ವ್ಯಕ್ತಿತ್ವವನ್ನು ರೂಪಿಸುತ್ತದೆ.

''ಪಂಜರಶಾಲೆ'' ಟಾಗೂರರ ಸಣ್ಣ ಕಥೆಯನ್ನಾಧರಿಸಿದ ಈ ನಾಟಕವು ಪ್ರಸ್ತುತ

ಶಿಕ್ಷಣ ಪದ್ಧತಿಯನ್ನು ತೀವ್ರವಾಗಿ ವಿಡಂಬಿಸುತ್ತಲೇ ಮಕ್ಕಳ ರಂಗಭೂಮಿಯ ಅಸಾಧಾರಣ ಸಾಧ್ಯತೆಗಳನ್ನು ಪ್ರಾಯೋಗಿಕವಾಗಿ ಪರೀಕ್ಷಿಸುವ ಅಸಾಮಾನ್ಯ 'ಮಕ್ಕಳ ನಾಟಕ'. ನೂರಾರು ಮಕ್ಕಳು ಹಾಡಿ ನಲಿಯಬಹುದಾದ ಈ ನಾಟಕ ಮಕ್ಕಳ ರಂಗಪ್ರಯೋಗದಲ್ಲಿ ಪ್ರಾಧಾನ್ಯತೆಯಿರುವ ದೃಶ್ಯಗುಣ ಹೊಂದಿ, ಸರಳವಾಗಿ ಕತೆ ಹೇಳುತ್ತಲೇ ಮಕ್ಕಳನ್ನು ಹಿಡಿದಿಡಬಲ್ಲ ಹಾಗೂ ಚೇತೋಹಾರಿಯಾದ ಸಂಗೀತ, ಚುರುಕಾದ ನೃತ್ಯಗಳು ಮತ್ತು ನಿರಂತರ ರಂಗಕ್ರಿಯೆಗಳು, ಗುಂಪು ದೃಶ್ಯಗಳಿಂದ ಕೂಡಿದ್ದಾಗಿದ್ದು, ಪಾತ್ರಗಳಿಗೆ ತಕ್ಕಂತೆ ಮುಖವಾಡಗಳು, ರಂಗಾದ ವೇಷಭೂಷಣಗಳಿದ್ದ ಪ್ರಯೋಗ. ಇದನ್ನು ಧಾರವಾಡದ ನವೋದಯ ಶಾಲೆಗೆ 2007ರಲ್ಲಿ ಮಾಡಿಸಿದ್ದ, ನನ್ನನ್ನು ಅಲ್ಲಿಗೆ ಕಳಿಸಿದವರು ಪ್ರೇಮಾ ಕಾರಂತರು. ಇದಕ್ಕೆ ಕಾರಂತರೇ ಮಾಡಿದ್ದ ಸಂಗೀತದ ಕ್ಯಾಸೆಟ್ ಕೊಟ್ಟು ಅದೇ ಸಂಗೀತ ಬಳಸಿಕೊಳ್ಳಲು ಹೇಳಿದ್ದರು. ಈ ನಾಟಕವಾದದ್ದೇ ಒಂದು ವಿಶೇಷ. ಪಂಜರಶಾಲೆಯೇ ಆಗಬೇಕೆಂದು ಅಲ್ಲಿಯ ಶಿಕ್ಷಕರು ಹೇಳಿದ್ದರಿಂದ, ಮೊದಲೇ ತಯಾರಿ ನಡೆಸಿಕೊಂಡು ಹೋಗಬೇಕಾಯ್ತು. ಸರಿ, ಬೆಂಗಳೂರಿನಿಂದ ಹೋಗಿ ಬೆಳಗಿನ ಜಾವ ಶಾಲೆ ಮುಂದೆ ಇಳಿಯುತ್ತಿದ್ದಂತೆ ಅದೇ ಶಿಕ್ಷಕಿ ನಾಟಕ ಹಿಂದಿಯಲ್ಲಾಗಬೇಕು ಎಂದರು. ನಾನು ವಾಪಾಸ್ ಹೊರಡೋಣವೆಂದು ಒಂದು ಕ್ಷಣ ಯೋಚಿಸಿದೆ. ತಕ್ಷಣ ಇಲ್ಲ ಎಂದು ನನಗೆ ಒಂದು ರೀತಿಯ ಚಾಲೆಂಜ್ ಎಂದು, ತಕ್ಷಣವೇ ಒಂದು ಉಪಾಯ ಮಾಡಿದೆ. ಮೊದಲು ಕನ್ನಡದಲ್ಲಿ ಮಾಡಿ, ಅದನ್ನೇ ಹಿಂದಿಯಲ್ಲಿ ಮಾಡೋಣವೆಂದೆ. ಅವರು ಒಪ್ಪಿದರು. ಕಷ್ಟ ಶುರುವಾದದ್ದೆ ಇಲ್ಲಿ. ಹಿಂದಿಗೆ ಅನುವಾದ ಮಾಡುವವರ್‍ಯಾರು ? ಕಾರಂತರ ಹಿಂದಿ ಸ್ಕ್ರಿಪ್ಟ್ ಭೂಪಾಲ್‌ನಲ್ಲಿದೆ. ನನಗೆ ಸಮಯವಿರುವುದು ಹದಿನೈದು ದಿನಗಳು ಮಾತ್ರ. ಏನು ಮಾಡುವುದು ? ಸರಿ, ಒಂದು ವಾರದಲ್ಲೇ ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 10ರ ತನಕ ಮಕ್ಕಳ ಸಂಪೂರ್ಣ ಸಹಕಾರದಿಂದ ನಾಟಕ ಕಟ್ಟಿ ಪ್ರದರ್ಶನವನ್ನು ಮಾಡಲಾಯ್ತು. ನಂತರ ಅವರವರ ಪಾತ್ರಗಳನ್ನು ಅವರವರಿಗೆ ಹಿಂದಿಯಲ್ಲಿ ಅನುವಾದಿಸಿಕೊಳ್ಳಲು ಬಿಟ್ಟು ಕೆಲಕಡೆ ತಿದ್ದುತ್ತಾ... ಹೀಗೆ ಒಂದು ವಾರದಲ್ಲೇ ನಮ್ಮ ಮಕ್ಕಳು ಆಡುತ್ತಾ ನಾಟಕ ಸಿದ್ಧಗೊಳಿಸಿಬಿಟ್ಟರು. ಈ ಹಿಂದಿ ನಾಟಕ ದೆಹಲಿಯಲ್ಲಿ ಯಶಸ್ವಿ ಪ್ರದರ್ಶನ ಕಂಡು ಒಳ್ಳೆಯ ವಿಮರ್ಶೆ ಕೂಡ ಬಂತು.

ಮಕ್ಕಳ ನಾಟಕಗಳಾದರೂ ಅದು ಶಾಲೆಯಲ್ಲಿ ನಡೆಯುವುದಕ್ಕೂ ಬೇಸಿಗೆ ಶಿಬಿರದಲ್ಲಿ ನಡೆಯುವುದಕ್ಕೂ ಸಾಕಷ್ಟು ವ್ಯತ್ಯಾಸ ಕಂಡುಬರುತ್ತದೆ. ಎಚ್.ಎಸ್. ವೆಂಕಟೇಶ ಮೂರ್ತಿಯವರ ಕವನದ ಸಾಲಿನಂತೆ, ''ಎಲೆಗಳು ನೂರಾರು... ಎಲೆಗಳು ನೂರಾರು ಎಲೆಗಳ ಬಣ್ಣ ಒಂದೇ ಹಸಿರು'' ಈ ಹಸಿರಲ್ಲಿ ಎಷ್ಟು ವ್ಯಾತ್ಯಾಸ ಕಾಣಸಿಗುತ್ತದೊ ಅಷ್ಟೇ ವಿವಿಧ ಜಾತಿ, ಭಾಷೆ, ಬಣ್ಣ, ಪರಿಸರ, ಮನಸ್ಸಿನ ಮಕ್ಕಳು ಕಾಣಸಿಗುತ್ತಾರೆ. ಇದು ಶಿಬಿರಗಳಲ್ಲಿ ಹೆಚ್ಚು. ಕೆಲಕಡೆ ಸೇರಿ ಎರಡೇ ದಿನದಲ್ಲಿ ತಮ್ಮ

ಅಭಿರುಚಿಗನುಗುಣವಾಗಿ ಸ್ನೇಹ ಬೆಳೆಸಿಕೊಂಡು ಸಣ್ಣಗುಂಪುಗಳಾಗಿರುತ್ತಾರೆ. ಕೆಲಬಾರಿ ನಾಲ್ಕೇ ದಿನಗಳಲ್ಲಿ ಜಗಳ ದೂರುಗಳ ತನಕ ಮುಟ್ಟುತ್ತದೆ. ಇಂತಹ ಸಂದರ್ಭದಲ್ಲಿ ಗೊತ್ತಿಲ್ಲದೆ ಒಬ್ಬ ಲೀಡರ್ ಕೂಡ ಹುಟ್ಟಿಬಿಟ್ಟಿರುತ್ತಾನೆ. ಇದೆಲ್ಲವನ್ನು ಗಮನಿಸಿ ಶಿಬಿರ ಮತ್ತೆ ತರಗತಿ ಕೋಣೆಯಾಗದಂತೆ ನಮ್ಮ ಪ್ರಕ್ರಿಯೆಯನ್ನು ನಿಧಾನವಾಗಿ ಆರಂಭಿಸಬೇಕು. ಹೆಚ್ಚು ತರಲೆ ಮಾಡುವ ಮಗುವನ್ನು ಹೊಡೆಯದೆ, ಬಯ್ಯದೆ, ಸರ್ಕಲ್‌ನಿಂದ ಹೊರಗಿಟ್ಟು ಉಳಿದವರಿಗೆ ಆಟವಾಡಿಸಿದರೆ, ಆ ಮಗು ತಾನು ಆ ಖುಷಿಯಿಂದ ವಂಚಿತನಾಗುತ್ತಿರುವುದರ ಅರಿವಾಗಿ ಓಡಿಬಂದು ಕ್ಷಮೆ ಕೇಳಲಾರಂಭಿಸುತ್ತದೆ.

2010 ರಂಗಾಯಣ ಹಾಗೂ ಬಾಲಭವನದ ಸಹಯೋಗದಲ್ಲಿ ನಡೆದ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ್ದ ಮಕ್ಕಳಲ್ಲಿ ಹಲವರು ಬಾಲಾಪರಾಧಿಗಳು, ಉಳಿದವರು ಮನೆಯಿಂದ ಬರುವ ಮಕ್ಕಳಿದ್ದರು. ವೈದೇಹಿಯವರು ರಚಿಸಿದ ''ಹಕ್ಕಿ ಹಾಡು'' ನಾಟಕವನ್ನು ಪ್ರಯೋಗಕ್ಕೆ ತೆಗೆದುಕೊಂಡಿದ್ದೆ. ಈ ಬಾಲಾಪರಾಧಿ ಮಕ್ಕಳಲ್ಲಿ ಕೆಲವರು ತಪ್ಪಿಸಿಕೊಂಡು ಓಡಿದ್ದರು ಆದರೆ ಕೆಲವರು ಇಷ್ಟು ಒಳ್ಳೆಯ ಮಕ್ಕಳಿರಲು ಸಾಧ್ಯವೇ ! ಎನ್ನುವಷ್ಟು ಇದ್ದುದಲ್ಲದೇ ಅಭಿನಯದಲ್ಲೂ ಒಂದು ಕೈ ಮೇಲೆ. ಯಾವ ದೃಶ್ಯವನ್ನು ಆಶುವಿಸ್ತರಣೆಗೆ ಬಿಟ್ಟರೂ ಇವರದೇ ಮೈಲುಗೈ. ಎಲ್ಲ ಪಾತ್ರವನ್ನು ಎಲ್ಲ ಮಕ್ಕಳೂ ತಾನು ಮಾಡುತ್ತೇನೆ, ತಾನು ಮಾಡುತ್ತೇನೆಂದು ಕಾಡಿಸುತ್ತಿದ್ದರು. ನಿಮ್ಮ ದೃಶ್ಯ ಸರಿಯಾಗಲಿಲ್ಲವೆಂದರೆ ಊಟದ ಸಮಯದಲ್ಲಿ ಅವರೇ ತಯಾರಿ ನಡೆಸಿ ಬಂದು ನನಗೆ ತೋರಿಸಿ ಸರಿ ಮಾಡಿಕೊಳ್ಳುತ್ತಿದ್ದರು. ಮನೆಯಿಂದ ಬರುವ ಮಕ್ಕಳಲ್ಲಿ ಇಬ್ಬರು ಕನ್ನಡ ಬಾರದ ಪಂಜಾಬಿ ಮಕ್ಕಳಿದ್ದು, ತಮ್ಮ ಮಾತುಗಳನ್ನು ಹಿಂದಿಯಲ್ಲಿ ಬರೆದು ಕಲಿತುದ್ದಲ್ಲದೆ. ನಾವು ಹೇಳುವುದನ್ನೆಲ್ಲಾ ಗಮನವಿಟ್ಟು ಕೇಳಿಸಿಕೊಳ್ಳುತ್ತಿದ್ದರು. ಶಿಬಿರ ಮುಗಿವ ಸಮಯಕ್ಕೆ ಎಲ್ಲ ಮಕ್ಕಳೂ ಸ್ನೇಹಿತರಾಗಿದ್ದಲ್ಲದೆ, ಬಾಲಾಪರಾಧಿ ಮಕ್ಕಳಲ್ಲಿ ಸ್ವಲ್ಪ ಹಿರಿಯನಾದ ಹರೀಶನನ್ನು ಎಲ್ಲರೂ ಲೀಡರ್ ಮಾಡಿಕೊಂಡು ಬಿಟ್ಟಿದ್ದರು. ಅವನನ್ನು ಬಿಟ್ಟು ಹೋಗಲು ಎಲ್ಲ ಮಕ್ಕಳೂ ಜೋರಾಗಿ ಅಳುತ್ತಿದ್ದರು.

ಕರ್ನಾಟಕ ಅಂಧರ ಕ್ಷೇಮಾಭ್ಯುದಯ ಸಂಸ್ಥೆಯ ಶಾಲೆಗೆ 'ಮಾಯವಾದ ಮೊಲ' ಎಂಬ ನಾಟಕವನ್ನು 2009ರಲ್ಲಿ ಮಾಡಿಸಿದ್ದು ವಿಶೇಷ ಅನುಭವ ತಂದಿತು. ಉತ್ಸಾಹ ಹಾಗೂ ಚಿಂತೆಯೊಂದಿಗೆ ಕೆಲಸ ಶುರು ಮಾಡಿದೆ. ಅವರ ಪರಿಚಯ ಮಾಡಿಕೊಂಡು ನನ್ನ ಹೆಸರು ಹೇಳಿದಾಗ, ''ನಿಮ್ಮ ಹೆಸರು ತುಂಬಾ ಚೆನ್ನಾಗಿದೆ'' ಎಂದು ನನ್ನ ಹತ್ತಿರ ಬಂದು ನನ್ನ ಕೈ ಮತ್ತು ಜಡೆಯನ್ನು ಮುಟ್ಟಿ ''ನೀವು ನೋಡಲು ಚೆನ್ನಾಗಿದ್ದೀರ ಮಿಸ್'' ಎಂದು, ನಿಮ್ಮ ಧ್ವನಿ ಚೆನ್ನಾಗಿದೆ, ಎಂದರು. ಸರಿ ಸರಿ, ಸಮಯ ಕಡಿಮೆ ಇದೆ. ನಾಟಕ ಶುರು ಮಾಡೋಣವೆಂದೆ. ನಾಟಕದ ಕಥೆ ಹೇಳಿದೆ. ಕಥೆ ಎಲ್ಲರಿಗೂ ಇಷ್ಟವಾಯ್ತು. ಹಾಡಲು ತುಂಬಾ ಮಕ್ಕಳಿದ್ದರು. ಅದ್ಭುತವಾಗಿ ಹಾಡುತ್ತಿದ್ದರು. ಆದರೆ

ಅಭಿನಯಿಸುವವರು ? ಒಂದು ದಿನ ಇವರು ಓಡಾಡುವ ರೀತಿಯನ್ನು ಗಮನಿಸಿದೆ. ಮಾರನೇ ದಿನದಿಂದ ಸುಮ್ಮನೆ ನಿಂತು ಡೈಲಾಗ್ ಹೇಳಿಸುವುದು, ಮಾತನ್ನು ತಿದ್ದುವುದು ಮಾಡುತ್ತಾ ಹಂತಹಂತವಾಗಿ ನಮ್ಮ ವಿನ್ಯಾಸ ಆರಂಭವಾಯ್ತು. ನಾಲ್ಕು ಹೆಜ್ಜೆ ಬಲ, ನಾಲ್ಕು ಹೆಜ್ಜೆ ಹಿಂದೆ ಹೀಗೆ ನಮ್ಮ ರಂಗಭೂಮಿಯ ವ್ಯಾಕರಣ ವಿವರಿಸುತ್ತಾ ಹೋದಂತೆ ಅವರು ರಂಗಸಜ್ಜಿಕೆಯನ್ನು ಬದಲಿಸುವುದನ್ನು ಕಲಿತರು. ತಮ್ಮ ಪ್ರವೇಶದ ಮಾರ್ಗಗಳನ್ನು ನೆನಪಿಟ್ಟುಕೊಂಡು ಪರಿಕರಗಳನ್ನು ಅಲ್ಲಿಯೇ ಇಟ್ಟುಕೊಳ್ಳುತ್ತಿದ್ದರು. ಒಂದು ವಾರದಲ್ಲಿ ಹುಡುಗರು ನಾಟಕದ ಗಮಲನ್ನು ಹಿಡಿದು ಬಿಟ್ಟಿದ್ದರು. ಮುಖ್ಯಪಾತ್ರಧಾರಿ ನೃತ್ಯವನ್ನೂ ಮಾಡುತ್ತಿದ್ದ. ಈ ನಾಟಕ ಹಲವು ಪ್ರದರ್ಶನ ಕಂಡಿತಲ್ಲದೆ ಸ್ವೀಡಿಷ್ ಹಾಗೂ ರಂಗಾಯಣ, ಕರ್ನಾಟಕ ನಾಟಕ ಅಕಾಡೆಮಿ ಇವರ ಸಹಯೋಗದಲ್ಲಿ ನಡೆದ ಮಕ್ಕಳ ನಾಟಕೋತ್ಸವದಲ್ಲಿ ಎಲ್ಲ ನಾಟಕಗಳಿಗಿಂತ ಹೆಚ್ಚು ಪ್ರಶಂಸೆಗೆ ಪಾತ್ರವಾಯ್ತು. ನಾಟಕ ಮುಗಿದ ಮೇಲೆ ಸಂವಾದದಲ್ಲಿ ಪ್ರೇಕ್ಷಕರಾಗಿ ಬಂದ ಮಕ್ಕಳೇ ಹೆಚ್ಚು ಪ್ರತಿಕ್ರಿಯಿಸಿದರು.

ಈ ನಾಟಕದಲ್ಲಿ ಮತ್ತೊಂದು ಚಾಲೆಂಜಿಂಗ್ ಎಂದರೆ ಹಾಡುಗಳಿಗೆ ವಾದ್ಯ ನುಡಿಸುವುದು. ಆ ಕೆಲಸವನ್ನು ಅಲ್ಲಿಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳೇ ನಿಭಾಯಿಸಿದ್ದರು. ಅವರು ಸಂಗೀತಕ್ಕೆ ವಾದ್ಯ ನುಡಿಸಿ ಬಲ್ಲರು. ಆದರೆ ನಾಟಕಕ್ಕೆ ನುಡಿಸುವುದು ಹೇಗೆ ? ಅವರ ಚಲನೆ ಇವರಿಗೆ ಗೊತ್ತಾಗುವುದು ಹೇಗೆ ? ಇದಕ್ಕೂ ಒಂದು ಉಪಾಯ ಮಾಡಿ, ಮಾತಿನ ಮಧ್ಯದ ಸೌಂಡ್‌ಗೆ ಈ ಮಾತಿನ ನಂತರ ಇಷ್ಟು ಕೌಂಟ್ ಬಿಟ್ಟು ಕೊಡಿ ಎಂದಾಗ ಇದು ಸಾಧ್ಯವಾಯ್ತು.

2005ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯಿಂದ ಬೆಂಗಳೂರಿನ ಬಡಾವಣೆಯ ಕೊಳಚೆ ಮಕ್ಕಳಿಗೆ ನಾಟಕ ಮಾಡಿಸುವ ಒಂದು ಉತ್ತಮ ಅವಕಾಶ ನನಗೆ ಒದಗಿತ್ತು. ಈ ಹಿಂದೆ ನಾನು ಮಾಡಿಸಿದ್ದ ಮಕ್ಕಳ ನಾಟಕವನ್ನು ನೋಡಿದ್ದ ಮಹಾಮನೆಯವರು ನನ್ನ ಹೆಸರನ್ನು ಈ ಯೋಜನೆಗೆ ಸೂಚಿಸಿದಾಗ ಅಕಾಡೆಮಿ ಅಧ್ಯಕ್ಷರು ಸ್ವಲ್ಪ ಯೋಚಿಸಿ, 'ಈ ಬ್ರಾಹ್ಮಣ ಹುಡುಗಿ ಕೊಳಚೆ ಪ್ರದೇಶದಲ್ಲಿ ಹೋಗಿ ಕೆಲಸ ಮಾಡಲು ಸಾಧ್ಯವೇ' ಎಂದರು. 'ನೀವು ಕೊಟ್ಟು ನೋಡಿ' ಎಂದೆ. ನನ್ನನ್ನು ಕಾವೇರಿನಗರದ ಕೆಲಜನರಿಗೆ ಮಹಾಮನೆಯವರು ಪರಿಚಯಿಸಿ ನಾಳೆಯಿಂದ ಇವರಿಲ್ಲಿಗೆ ಬಂದು ನಾಟಕ ಮಾಡಿಸುತ್ತಾರೆಂದು ಹೇಳಿದರು. ನಾವು ಸೇರಿದ್ದು ಅಂಗನವಾಡಿಯ ಒಂದು ಚಿಕ್ಕ ಕೋಣೆ. ಮಾರನೆ ದಿನ ಹೇಳಿದವರಾರೂ ಬರಲಿಲ್ಲ, ತಮ್ಮ ಮಕ್ಕಳನ್ನು ಕಳಿಸಲಿಲ್ಲ. ಒಂದಿಬ್ಬರು ಹುಡುಗರು ಮಾತ್ರ ಬಂದಿದ್ದರು. ಅವರಿಗೇ ಹೇಳಿ, ಆಟವಾಡುತ್ತಿದ್ದ ಮಕ್ಕಳನ್ನು ಕರೆದು ಮಾತಾಡಿ ನಾಟಕದಲ್ಲಿ ಭಾಗವಹಿಸುವಂತೆ ಕೇಳಿಕೊಂಡೆ. ಅವರು ತಮಗೆ ಗೊತ್ತಿರುವ ಒಂದಷ್ಟು ಮಕ್ಕಳನ್ನು ಕರೆತರಲು ಓಡಿದರು. ಮೂವತ್ತರಷ್ಟು ಮಕ್ಕಳು ಬಂದು ಸೇರಿದರು. ಮಕ್ಕಳನ್ನು ನೋಡಿ ಖುಷಿಪಡುವಷ್ಟರಲ್ಲೇ ಬಂತಲ್ಲ ಒಂದು ಅಬ್ಬರದ ಧ್ವನಿ ! ಒಂದು

ಹುಡುಗನ ತಂದೆ ಕಂಠಮಟ್ಟ ಕುಡಿದು ಬಂದು ಆ ಹುಡುಗನನ್ನು ಬಯ್ದು, ಆ ಹುಡುಗನನ್ನೂ ಅವನ ಅಕ್ಕನನ್ನೂ ಎಳೆದೊಯ್ದರು. ಹಾಗೇ ಈ ಸ್ಥಿತಿ ಮುಂದುವರೆದು ಕಡೆಗೆ ಮಕ್ಕಳುಳಿದದ್ದು 5 ಜನ ಮಾತ್ರ. ಇವರನ್ನಿಟ್ಟುಕೊಂಡೇ ನನ್ನ ಕೆಲಸ ಆರಂಭವಾಯ್ತು. ಇಲ್ಲೂ ಕಥೆಯನ್ನಿಟ್ಟುಕೊಂಡು ನಮ್ಮ ಆಶುವಿಸ್ತರಣೆ ಶುರುಮಾಡಿದೆ. ಆದರೆ ಮಕ್ಕಳ ಸಮಸ್ಯೆ ಜೊತೆಗೆ ಬಡಾವಣೆಯ ಪೋಲಿ ಹುಡುಗರ ಸಮಸ್ಯೆಯೂ ಆರಂಭವಾಯ್ತು. ಈ ಹುಡುಗರು ಸತ್ತ ಕಪ್ಪೆಗಳನ್ನು ಕಿಟಕಿಯಿಂದ ಎಸೆಯುವುದು, ದೂರದಿಂದ ಕೋಣೆಯೊಳಕ್ಕೆ ಕಲ್ಲೆಸೆಯುವುದು, ಬಾಗಿಲು ಹಾಕಿದರೆ ಬಾಗಿಲು ತಟ್ಟಿ ಓಡುವುದು ಹೀಗೆ ನಾನಾ ರೀತಿಯ ಕಿರುಕುಳ ಕೊಡುತ್ತಿದ್ದರು. ಇದನ್ನು ಮಾಡುತ್ತಿದ್ದವರು 12-13 ವಯಸ್ಸಿನ ಮಕ್ಕಳು. ಇದರ ಜೊತೆ ವರುಣ ದೇವನು ಮುನಿದು ಆ ಚಿಕ್ಕ ಕೋಣೆಯ ತುಂಬ ನೀರು ನುಗ್ಗುತ್ತಿತ್ತು. ಅಧ್ಯಕ್ಷರ ಮಾತು ನೆನಪಾಯ್ತು. ಆದರೆ ಕೆಲಸ ನಿಲ್ಲಿಸಲಿಲ್ಲ. ನೀರಲ್ಲೇ ನಿಂತು ತಾಲೀಮು ನಡೆಸುತ್ತಿದ್ದೆವು. ನಾಟಕದ ದಿನ ಹತ್ತಿರ ಬರುತ್ತಿದ್ದಂತೆ ಕೆಲ ಮಕ್ಕಳು ಕೆಲಸಕ್ಕೆ ಹೋಗಬೇಕೆಂದು ಬಾರದೆ ಹೋದಾಗ ಏನು ಮಾಡುವುದೆಂದು ಚಿಂತೆಯಾಗಿ 'ನಿಲ್ಲಿಸಿ ಬಿಡೋಣ' ಎಂದೆ. ಆಗ ಒಬ್ಬ ಹುಡುಗ 'ಬೇಡ ಮಿಸ್, ನಾನು ಹುಡುಗರನ್ನು ಕರೆತರುತ್ತೇನೆ' ಎಂದವನೇ ಓಡಿ ಹೋಗಿ ನಾಲ್ಕು ಜನರನ್ನು ಕರೆತಂದ. ಇಬ್ಬರು ಮೊದಲ ದಿನ ತಂದೆ ಬಂದು ಕರೆದೊಯ್ದವರು. ನಾನು ಆ ಮಕ್ಕಳು ಬೇಡವೆಂದೆ. ಅದಕ್ಕೆ ಅದರಲ್ಲಿದ್ದ ಹುಡುಗಿ 'ನಮಗೆ ನಾಟ್ಕ ಮಾಡಕ್ ಇಷ್ಟ, ನಾನು ಮನೆಕೆಲಸ ಮುಗಿಸಿ ಬೇಗ ಬರುತ್ತೇನೆ. ನಮ್ಮಪ್ಪ ಬರೋದ್ರೊಳಗೆ ಬಿಡಿ ನನ್ನ' ಎಂದಳು. ಆ ಹುಡುಗಿ ಮನೆಕೆಲಸಕ್ಕೆ ಹೋಗುತ್ತಿತ್ತು, 5ನೇ ತರಗತಿ, ಜತೆಗೆ 'ರ' ಉಚ್ಚರಿಸಲು ಬರುತ್ತಿರಲಿಲ್ಲ, ಇವನೇ ನಮ್ಮ ನಾಟಕದ ಹೀರೋ ಆದ. ಕಲಾಕ್ಷೇತ್ರದ ಕಟ್ಟೆ ಹತ್ತಿದ ಈ ಮಕ್ಕಳು ಕಣ್ಣೀರು ಸುರಿಸುತ್ತಾ ''ಮಿಸ್, ನಾಟಕದ ಮೂಲಕ ನಾವು ಇಲ್ಲಿವರೆಗ್ ಬರೋಕಾಯ್ತು, ನಮಗೆ ಯಾವಾಗ್ಲೂ ನಾಟ್ಕ ಮಾಡ್ಸಿ'' ಎಂದರು. ಆದರೆ ಈ ಮಕ್ಕಳ ತಂದೆ ತಾಯಿಯರು ಕೊಟ್ಟ ಕಷ್ಟ, ಆಡಿದ ಸಂಸ್ಕೃತ ಶಬ್ದಗಳನ್ನು ನೆನಪಿಸಿಕೊಂಡರೆ... ನಮ್ಮ 'ಲ'ಕಾರದ ಹೀರೋ ಕಲಾಕ್ಷೇತ್ರದ ಸ್ಟೇಜ್‌ದ ಆಟದ ಅಂಗಳದಷ್ಟೇ ಲೀಲಾಜಾಲವಾಗಿ ಬಳಸಿ ಕಿವಿಗಡಚಿಕ್ಕುವಂತೆ ಕರತಾಡನದ ಮೆಚ್ಚುಗೆ ಪಡೆದ. ರಂಗಭೂಮಿಯ ಹಿರಿಯ ನಟಿಯೊಬ್ಬರು ನಾಟಕ ನೋಡುತ್ತಾ ಕಣ್ಣೀರು ಸುರಿಸಿದರು. ''ಈ ರೀತಿ ಅಭಿನಯದಲ್ಲಿ ಅನುಭವ ನೀಡಿದ ಮಕ್ಕಳ ಪ್ರತಿಭೆ ನೋಡಿದಾಗ ಮನಸ್ಸಿಗೆ ಒಂದು ರೀತಿಯ ರೋಮಾಂಚನ ಜತೆಗೆ ವೇದನೆ ಕೂಡ ಆಗುತ್ತಿದೆ'' ಎಂದ ಈಕೆ ನಾಟಕದ ಮಧ್ಯೆಯೇ ಅಧ್ಯಕ್ಷರಿಗೆ ಕರೆ ಮಾಡಿ, ''ಎಲ್ಲಿದೀರ, ಈ ರೀತಿಯ ಮಕ್ಕಳ ನಾಟಕವನ್ನು ನೋಡಬೇಕಿತ್ತು ನೀವು'' ಎಂದರಂತೆ. ಅದೇ ವಿಶ್ವಾಸದ ಮೇಲೆ ಮುಂದೆ ಸಾಕಷ್ಟು ಅವಕಾಶಗಳು ಒದಗಿಬಂದವು.

ಕೆಲವು ಶಾಲೆಗಳಿಗೆ ಕಾಲಿಟ್ಟರೆ ಅಮೆರಿಕಾಕ್ಕೆ ಹೋದ ಅನುಭವ. 2011ರ

ಬಾಲಭವನದ ಶಿಬಿರದ ಆರಂಭದ ಒಂದು ವಾರ ಇದೇ ಅನುಭವ. ನಾಟಕದ ಪತ್ರ ಓದುವಾಗ ಪ್ರತಿ ಪದಕ್ಕೂ ಅರ್ಥ ಕೇಳುತ್ತಿದ್ದರು ಹಲವರು. ಇನ್ನು ಇಲ್ಲಿಯೇ ಇದ್ದು ಕನ್ನಡದ ಒಂದಕ್ಷರವೂ ಬಾರದ ಹಲವರನ್ನು ಕಂಡಾಗ 'ಎತ್ತ ಹಾರುತಿದೆ ಕನ್ನಡ' ಎಂದು ದಿಗಿಲಾಗುತ್ತಿದೆ. ತಂದೆತಾಯಿಗಳು ಕನ್ನಡಕ್ಕೆ ಒತ್ತು ಕೊಡದಿದ್ದರೆ ಬೆಂಗಳೂರಿನ ಈ ಮಿನಿ ಅಮೆರಿಕಾ ಪೂರ್ಣ ಅಮೆರಿಕವಾಗುತ್ತದೆ.

ವರ್ಷಕ್ಕೆ ಒಂದಾದರೂ ಮಕ್ಕಳ ನಾಟಕ ಮಾಡಿಸುತ್ತಾ ಬಂದಿದ್ದೇನೆ. ಒಂದೊಂದು ಕಡೆ ಒಂದೊಂದು ರೀತಿಯ ಅನುಭವ. ನಾಟಕ ಕಟ್ಟುವ ವಿಧಾನವೂ ವಿಭಿನ್ನ. 2008ರಲ್ಲಿ ದಾವಣಗೆರೆಯಲ್ಲಿ ನಾಟಕ ಶಿಬಿರ. ಒಂದೇ ಮನೆಯ ನಾಲ್ಕು ಮಕ್ಕಳು ಶಿಬಿರದಲ್ಲಿ ಭಾಗವಹಿಸಿದರು. ಮೂರು ಹೆಣ್ಣು ಮಕ್ಕಳು ತಪ್ಪದೆ ಬರುತ್ತಿದ್ದರೆ, ನಾಲ್ಕನೇ ಮಗು ಎಲ್.ಕೆ.ಜಿ. ಹುಡುಗನಾದ್ದರಿಂದ ಪೂರ್ಣ ದಿನ ತೊಡಗಿಸಿಕೊಳ್ಳಲಾರದೆ ತನಗೆ ಸಾಧ್ಯವಾದಷ್ಟು ಇದ್ದು ನಿದ್ದೆ ಬಂದಾಕ್ಷಣ ಮಲಗಿ ಬಿಡುತ್ತಿದ್ದ. ಆದರೆ ಪ್ರತಿದಿನ ಮನೆಗೆ ಹೋಗಿ ಎಲ್ಲರ ಅಭಿನಯವನ್ನು ಮಾಡಿ ತೋರಿಸುತ್ತಿದ್ದ. ಶಿಬಿರ ಮುಗಿವ ಹೊತ್ತಿಗೆ ಇಡೀ ನಾಟಕವನ್ನು ಅಭಿನಯಿಸಿ ತೋರಿಸುತ್ತಿದ್ದ. ಅಲ್ಲದೆ ಈ 2ನೇ ಮತ್ತು 3ನೇ ಮಗುವಿಗೆ ಶಾಲೆಯಲ್ಲಿ ಮೊದಲು ಅವಕಾಶ ಸಿಗುತ್ತಿರಲಿಲ್ಲವಂತೆ. ಶಿಬಿರ ಮುಗಿದ ನಂತರ ಇವರೇ ಮುನ್ನುಗ್ಗಿ ಎಲ್ಲದರಲ್ಲೂ ಬಹುಮಾನ ಪಡೆಯತೊಡಗಿದರು. ಪ್ರತಿ ಬಹುಮಾನ ಬಂದಾಗ ತಕ್ಷಣ ಫೋನಾಯಿಸಿ ಮಿಸ್ ನಮಗೆ ನಾಟಕದಿಂದಾಗಿ ಪ್ರಶಸ್ತಿಗಳು ಬರುತ್ತಿವೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಜತೆಗೆ ಅವರು ಓದು, ಕಥೆ ಬರೆಯುವುದು ನೃತ್ಯ ಎಲ್ಲದರಲ್ಲೂ ಮುಂದೆ ಬಂದರಂತೆ. ಆಗ ನನಗೆ ಶಿಬಿರ ಮಾಡಿದ್ದು ಸಾರ್ಥಕ ಎನಿಸುತ್ತದೆ. ಲಕ್ಷ ಗಳಿಸಿದಷ್ಟು ಸಂತೋಷ.

ಎಲ್ಲಾ ಶಿಬಿರದ ಅನುಭವ ಹೇಳಲು ಇಲ್ಲಿ ಅಸಾಧ್ಯ. ಇಷ್ಟಂತೂ ಸತ್ಯ, ಏಕಾಗ್ರತೆ, ನಾಯಕತ್ವ, ಆಶುಪಟುತ್ವ... ಹೀಗೆ ಏನೆಲ್ಲಾ ಸಾಧ್ಯವಿರುವ ರಂಗಭೂಮಿಯನ್ನು ನಾವು ಕ್ರಿಯಾಶೀಲವಾಗಿಟ್ಟು ಸಾಧ್ಯತೆಗಳನ್ನು ಹುಡುಕುವುದರೊಂದಿಗೆ ಮಕ್ಕಳು ಇಂದು ದೂರದರ್ಶನದ ಒಳಗೆ ಮುಖವಿರಿಸುವ ಕ್ರಮವನ್ನು ತಡೆಯಬಹುದು. ಅನಿಮೇಟೆಡ್ ಸಿನಿಮಾವನ್ನು ಚಿಕ್ಕವರಿಂದ ದೊಡ್ಡವರ ತನಕ ಆಸಕ್ತಿಯಿಂದ ನೋಡುತ್ತಾರೆ. ಅದಕ್ಕೆ ಅದರ ಕ್ರಿಯಾಶೀಲತೆಯ ಕಾರಣವಿರಬಹುದು. ರಂಗಭೂಮಿಯೂ ಅಷ್ಟೇ ಕ್ರಿಯಾಶೀಲವಾದರೆ ಮಾತ್ರ ತಂದೆತಾಯಿ ಮಕ್ಕಳು ಪ್ರೇಕ್ಷಕರನ್ನು ನಮ್ಮತ್ತ ಸೆಳೆಯಲು ಸಾಧ್ಯ. ಮಕ್ಕಳಿಗೆ ಚಿಕ್ಕಂದಿನಿಂದ ನಾಟಕ ಗೊತ್ತಿದ್ದರೆ ಒಳ್ಳೆಯದು. ಇದರಿಂದ ಸಮಾಜ ಆರೋಗ್ಯಕರವಾಗಿರುತ್ತದೆ. ಪ್ರೀತಿಸುವ ಗುಣ ಬರುತ್ತದೆ. ಯೋಚಿಸುವ ಗುಣ, ಬೆಳವಣಿಗೆ, ಸೌಹಾರ್ದತೆ ಸಮಾಜದಲ್ಲಿ ಬೆಳೆಯುತ್ತದೆ.

ನಾಟಕದಲ್ಲಿ ಬಾಹ್ಯ ಸೌಂದರ್ಯಕ್ಕಿಂತ ಆಂತರಿಕ ಸೌಂದರ್ಯಕ್ಕೆ ಹೆಚ್ಚು

ಪ್ರಾಮುಖ್ಯತೆ. 'ಹಕ್ಕಿ ಹಾಡ'ಲ್ಲಿ ಹರೀಶನೆಂಬ ಹುಡುಗ ರಾಜನ ಪಾತ್ರದಲ್ಲಿ ತನ್ನ ಅಭಿನಯದಿಂದ ತನ್ನ ಕಪ್ಪನ್ನೇ ಮರೆಸಿಬಿಟ್ಟ. ಈ ರೀತಿಯ ಉದಾಹರಣೆಗಳು ಹಲವು.

ಇತ್ತೀಚೆಗೆ ಅವಕಾಶವಂಚಿತರಾದ ಹಿಂದುಳಿದ ಸರ್ಕಾರಿ ಶಾಲೆಯ ಮಕ್ಕಳಿಗೆ ನಾಟಕ ಮಾಡಿಸಬೇಕೆಂದು ಒಂದು ಶಾಲೆಗೆ ಹೋಗಿ ಮುಖ್ಯೋಪಾಧ್ಯಾಯರೊಂದಿಗೆ ಮಾತಾಡಿದಾಗ ಅವರು 'ದಾಖಲೆಗೆ ಏನು ಬೇಕೋ ಅದನ್ನು ಮಾಡಿಕೊಂಡು ಹೋಗಿ ಆದರೆ ನಾಟಕ ಮಾಡಿಸಲು ಆಗುವುದಿಲ್ಲ' ಎಂದರು. ಇದಕ್ಕೆ ಒಪ್ಪದೆ ಕೋಣನಕುಂಟೆ ಶಾಲೆಗೆ ಹೋಗಿ, ಮಾತಾಡಿ, ಅವರು ಒಪ್ಪಿ, ಕೆಲಸ ಆರಂಭಿಸಿದೆ. ಆದರೆ ಇದಕ್ಕೆ ಬಿ.ಇ.ಓ. ಅವರ ಒಪ್ಪಿಗೆ ಬೇಕಿತ್ತು. ಆದರೆ ಅವರು, ''ಅಲ್ಲಮ್ಮ , ಮಕ್ಕಳು ನಾಟಕ ಮಾಡ್ತ ಕೂತರೆ ಅವರ ಪಾಠಕ್ಕೆ ತೊಂದರೆ. ಅವರ ತಂದೆತಾಯಿಗಳು ನಮ್ಮನ್ನು ಪ್ರಶ್ನಿಸುತ್ತಾರೆ, 'ನಮ್ಮ ಹುಡುಗರನ್ನು ಕಳಿಸೋದು ಓದೋದುಕ್ಕೋ, ನಾಟಕ ಆಡೋದುಕ್ಕೋ ?' ಅಲ್ಲದೆ ಏನಾದರೂ ತೊಂದರೆ ಆದರೆ ನಮ್ಮ ಕುತ್ತಿಗೆಗೆ ಬರುತ್ತದೆ. ಸುಮ್ಮನೆ ಇಲ್ಲದ ರಗಳೆ ಯಾಕೆ?'' ಎಂದು ತಲೆ ಕೊಡವಿಬಿಟ್ಟರು. ನಾನು ಜಗ್ಗದೆ ನಾಟಕದ ಸಾಧ್ಯತೆಗಳನ್ನು ವಿವರಿಸಿ ಅಲ್ಲೇ ನಿಂತೆ. ''ಸರಿ ನೋಡೋಣವಂತೆ. ನೀವು ಯಾವ ಕಡೆಯಿಂದ ಬಂದಿದ್ದೀರ, ಒಂದು ಪತ್ರ ತನ್ನಿ, ಆಮೇಲೆ ನೋಡೋಣ'' ಎಂದರು. ನಾನು ಬಾಲವಿಕಾಸ ಅಕಾಡೆಮಿಯಿಂದ ಒಂದು ಲೆಟರ್ ತರಿಸಿಕೊಟ್ಟೆ, ಮತ್ತೂ ಅವರು ಒಪ್ಪದೆ. ''ಸರ್ಕಾರವೆಂದ ಮಾತ್ರಕ್ಕೆ ಒಪ್ಪಬೇಕಾ ? ನಾನೂ ಸರ್ಕಾರವೇ?'' ಎಂದುಬಿಟ್ಟರು. ನಾನು ಕಾರ್ಯಕ್ರಮದ ಸ್ವರೂಪ ವಿವರಿಸಿ, ಇದು ಕರ್ನಾಟಕದ ಎಲ್ಲಾ ಕಡೆ ನಡೆಯುತ್ತಿದೆ, ಎಲ್ಲಾ ಕಡೆ ಬಿ.ಇ.ಓ. ಒಪ್ಪಿದ್ದಾರೆ, ಎಂದೆ. ''ಸರಿ ಮಾಡಿ. ಆದರೆ ಯಾವುದೇ ತೊಂದರೆ ಬಂದರೆ ಅದು ನಿಮ್ಮ ಜವಾಬ್ದಾರಿ'' ಎಂದು ಒಪ್ಪಿದರು. ಮುಖ್ಯೋಪಾಧ್ಯಾಯರು ಒಳ್ಳೆಯವರಾದ್ದರಿಂದ ಅವರ ಮತ್ತು ಮಕ್ಕಳ ಸಂಪೂರ್ಣ ಸಹಕಾರ ದೊರೆತು ತಾಲೀಮು ನಡೆಯುತ್ತಿತ್ತು. ಒಂದು ದಿನ ಕೆಲ ಮಕ್ಕಳ ತಂದೆತಾಯಿಗಳು ಬಂದು ಗಲಾಟೆ ಎಬ್ಬಿಸಿದರು. ಮಕ್ಕಳ ಒಳ್ಳೆಯತನ ಅಂದು ನನ್ನನ್ನು ಕಾಪಾಡಿತು. ಮಕ್ಕಳೇ ಮುಂದೆ ನಿಂತು ಅಪ್ಪ ಅಮ್ಮಂದಿರನ್ನು ಸಮಾಧಾನಿಸಹೊರಟರು. ಕಡೆಗೆ ನಾನು, 'ಈಗ ನೀವು ಮಾತಾಡಬೇಡಿ. ಪ್ರದರ್ಶನದ ದಿನ ಬಂದು ನಿಮ್ಮ ಮಕ್ಕಳ ಅಭಿನಯ, ಅವರಲ್ಲುಂಟಾದ ಬದಲಾವಣೆ ಗಮನಿಸಿ' ಎಂದು ಸಮಾಧಾನಿಸಿ ಕಳುಹಿಸಿದೆ. ಬಲು ದೂರದವರೆಗೂ ಬಯ್ಗುಳಗಳು ಕೇಳಿಸುತ್ತಿತ್ತು. ನಾಳೆ ಮಕ್ಕಳು ಬರುವುದಿಲ್ಲವೆಂದುಕೊಂಡೆ. ಮಕ್ಕಳು ಬಂದರು. ''ಕುಣಿ ಕುಣಿ ನವಿಲೇ'' ನಾಟಕವನ್ನು ಖುಷಿಯಿಂದ ಕುಣಿಯುತ್ತ ಅವರ ಶಾಲೆಯ ಆವರಣದಿಂದ ಹಿಡಿದು ನಯನದ ತನಕ ಹಲವು ಪ್ರದರ್ಶನಗಳನ್ನು ಮಾಡಿದರು. ನಮ್ಮ ಮಕ್ಕಳು ಒಂದೊಂದು ಶಾಲೆಯಲ್ಲಿ ಸ್ಥಳಕ್ಕನುಗುಣವಾಗಿ ವಿನ್ಯಾಸವನ್ನು ಬದಲಾಯಿಸಿಕೊಂಡು ಬಿಡುತ್ತಿದ್ದರು. ನಾನು ಗಾಬರಿಯಲ್ಲಿ ನೋಡುತ್ತಿರುವಾಗಲೇ ಆ ವಿನ್ಯಾಸ

ಸರಿಮಾಡಿಕೊಂಡು ಬಿಡುತ್ತಿದ್ದರು. ಇದೆಲ್ಲಾ ಮಾತಾಡಿಯಂತೂ ಅಲ್ಲ, ದೃಶ್ಯ ನಡೆಯುವಾಗಲೇ ಸಮಯಸ್ಫೂರ್ತಿಯಿಂದ ಆಗಿಬಿಡುತ್ತಿತ್ತು. ನಾಟಕ ಮುಗಿಯುತ್ತಿದ್ದಂತೆ ಬೇರೆಯ ಶಾಲೆಯ ಮಕ್ಕಳೆದುರೇ 'ಮಿಸ್ಸ್, ಇವತ್ ಹ್ಯಾಗ್ ಮಾಡಿದ್ವಿ ?' ಎಂದು ಖುಷಿಯಿಂದ ಕೇಳುತ್ತಿದ್ದರು. ಪ್ರೇಕ್ಷಕರಾಗಿದ್ದ ಮಕ್ಕಳೇ ಇದಕ್ಕೆ ಉತ್ತರಿಸುತ್ತಿದ್ದರು. ಹಲ ಮಕ್ಕಳು ಅಲ್ಲಿಯೇ ವಿಮರ್ಶೆ ಬರೆದುಕೊಟ್ಟರು.

ಶಿಕ್ಷಣದಲ್ಲಿ ರಂಗಭೂಮಿಯ ಬಗ್ಗೆ ಸರ್ಕಾರ ಮಾತನಾಡುತ್ತಲೇ ಇದೆ. ಆದರೆ ಹಲವು ಅಧಿಕಾರಿಗಳಿಗೆ ಇದರ ಕುರಿತು ಏನೂ ತಿಳಿದಿಲ್ಲ. ಅವರಿಗೇ ಒಂದು ರಂಗತರಬೇತಿ ಶಿಬಿರ ಮಾಡಿದರೆ ಹೇಗೆ ?

***

# ರಂಗ ಮುಖೇನ ಶಿಕ್ಷಣ
# ವ್ಯಕ್ತಿತ್ವ ವಿಕಸನಗೊಳಿಸುವ ಮಕ್ಕಳ ರಂಗಭೂಮಿ

- ಸಿ. ಲಕ್ಷ್ಮಣ

ಮಕ್ಕಳ ಮುಗ್ಧ ಮನಸ್ಸುಗಳಲ್ಲಿ ಕನಸುಗಳನ್ನು ಚಿಗುರಿಸಿ ಅವರ ಕಲ್ಪನೆಗಳಿಗೆ ಗರಿ ಮೂಡಿಸಿ ಬಾನಂಗಳದಲ್ಲಿ ಸ್ವಚ್ಛಂದವಾಗಿ ಹಾರಾಡಿಸುವ ಜವಾಬ್ದಾರಿ ಯಾರದು ? ತಂದೆ ತಾಯಂದಿರದೋ ಶಿಕ್ಷಕರದ್ದೋ ಎಂದೊಡನೆ ಬರುವ ಮೊದಲ ಉತ್ತರವೇ ಬ್ರಹ್ಮ, ವಿಷ್ಣು, ಮಹೇಶ್ವರ ಎಂದೆಲ್ಲಾ ಕರೆಸಿಕೊಳ್ಳುವ ಶಿಕ್ಷಕನೆ. ಇದರಲ್ಲಿ ಎರಡು ಮಾತಿಲ್ಲ.

ಸಮಕಾಲೀನ ಮಕ್ಕಳ ರಂಗಭೂಮಿಯಲ್ಲಿ ಹಲವಾರು ವಿಭಿನ್ನ ಪ್ರಯೋಗ ಪ್ರದರ್ಶನಗಳನ್ನೊಳಗೊಂಡ ರೆಪರ್ಟರಿಗಳು ಬೆಳೆಯುತ್ತಿದ್ದರೂ, ಮಕ್ಕಳ ರಂಗಭೂಮಿಯಲ್ಲಿನ ಬೆಳವಣಿಗೆಗೆ ಪ್ರಮುಖ ಆಯಾಮವಾಗಬಲ್ಲಂತಹ ರಂಗಕಲೆಗಳ ರೆಪರ್ಟರಿ ನಮ್ಮ ನಾಡಿನಲ್ಲಿ ಇಲ್ಲದಿರುವುದು (ಒಂದೆರಡು ಸಂಸ್ಥೆಗಳನ್ನು ಬಿಟ್ಟು) ಒಂದು ಪ್ರಮುಖ ಕೊರತೆ. ಈ ಕೊರತೆಯನ್ನು ನೀಗಿಸಲು ಈ ಸುಂದರ ಭೂಗ್ರಹದ ಜೀವಿಯಾದ ಮಾನವ ಶತಶತಮಾನಗಳಿಂದ ಪ್ರಯತ್ನಿಸುತ್ತಲೇ ಬಂದಿದ್ದಾನಾದರೂ; ಗಟ್ಟಿಯಾಗಿ ನೆಲೆಯೂರುವಂತಹ ಪ್ರಯತ್ನ ಇದುವರೆವಿಗೂ ಸಾಧ್ಯವಾಗದೆ ಇರಲು ಕಾರಣವೇನು ?

ಪ್ರಕೃತಿದತ್ತವಾಗಿ ಬಂದಿರುವ ಮಕ್ಕಳಲ್ಲಿನ ಕಲೆಯನ್ನು ಸಮಕಾಲೀನ ಅಗತ್ಯಕ್ಕೆ ತಕ್ಕಂತೆ ಶಾಸ್ತ್ರೀಯವಾಗಿ ಹಾಗೂ ಪ್ರಾಯೋಗಿಕವಾಗಿ ಅಭ್ಯಸಿಸಲು ಕಲಾಶಾಲೆಗಳಿದ್ದರೂ ಕಲಿಸುವವರ ಕೊರತೆ ಎದ್ದು ಕಾಣುತ್ತದೆ. ಬೆರಳೆಣಿಕೆಯಷ್ಟಿರುವ ಮಕ್ಕಳ ರಂಗಕರ್ಮಿಗಳು ರಾಜ್ಯದಲ್ಲಿಯ ಆಸಕ್ತ ಮಕ್ಕಳೆಲ್ಲರಿಗೂ ಕಲಿಸಿ ರಂಗಕ್ಕೆ ತರುವುದಾದರೂ ಹೇಗೆ ? ಇದಕ್ಕೆ ಉತ್ತರವೂ ಲಭ್ಯವಿದೆ. ಪ್ರತಿ ಶಾಲೆಗೆ ವಿಷಯವಾರು ಹೇಗೆ ಶಿಕ್ಷಕರನ್ನು ನೇಮಿಸುತ್ತಾರೋ ಹಾಗೆಯೇ ರಂಗತರಬೇತಿ ಪಡೆದ ಶಿಕ್ಷಕರನ್ನು ನೇಮಿಸಿದರೆ, ಸಾರ್ವಜನಿಕ ಶಿಕ್ಷಣ ಇಲಾಖೆಯು ರಂಗಮುಖೇನ ಶಿಕ್ಷಣಕ್ಕೆ ಒತ್ತು ನೀಡಿರುವುದರಲ್ಲಿ ಅರ್ಥವಿದೆ. ಇದರಿಂದ ಮಕ್ಕಳು ಸರ್ವತೋಮುಖವಾಗಿ ಬೆಳೆಯುವುದರಲ್ಲಿ ಅನುಮಾನಗಳಿಲ್ಲ.

ರಾಜ್ಯದ ಕೆಲವು ಕ್ರಿಯಾಶೀಲ ತಂಡಗಳಾದ ಗುಬ್ಬಿ ಬಾಲಮಂಡಲಿ, ಹಿಮಾಂಶು ಶಿಶುವಿಹಾರ, ವಿವೇಕಾನಂದ ಬಾಲಕ ಮಂಡಳಿ ಮಕ್ಕಳ ನಾಟಕಗಳ ಕಾರಸ್ಥಾನಗಳಾಗಿದ್ದವು. ಆದರೆ ಅದರಲ್ಲಿ ಪ್ರೌಢ ವಿಷಯಗಳೇ ಇದ್ದುದ್ದರಿಂದ ಮಕ್ಕಳಿಗೆ ಯಾವ ರೀತಿ ಸಹಾಯವಾಗುತ್ತಿತ್ತು ಎಂಬುದು ಪ್ರಶ್ನಾರ್ಹಿತ.

ನೂರಾರು ಮಕ್ಕಳು ಏಕಕಾಲದಲ್ಲಿ ರಂಗದ ಮೇಲೆ ಬರುವಂತೆ ಮಾಡಿದವರು ಪ್ರೊಫೆಸರ್ ಬಿ. ಚಂದ್ರಶೇಖರ್, ಬೆನಕ ತಂಡದ ಪ್ರೇಮಾ ಕಾರಂತರು, ಶ್ರೀ ಎ.ಎಸ್. ಮೂರ್ತಿ ಅವರ ಬಿಂಬ ತಂಡಗಳು ಶ್ರಮಿಸಿದ್ದಾರೆ.

ಭದ್ರಾವತಿಯ ಧನಲಕ್ಷ್ಮಿ ನಾಟಕ ಮಂಡಳಿಯ ಶ್ರೀ ಬಿ.ವಿ. ಲಕ್ಷ್ಮಣ್ ಅವರು, ಹನುಮಂತನಗರದ ಭಾರತಮಾತಾ ವಿದ್ಯಾಮಂದಿರದ ಪಾರ್ವತಮ್ಮ, ಪ್ರಭಾತ್‌ನ ಟಿ.ವಿ. ಕರಿಗಿರಿ ಆಚಾರ್ಯ, ಮಕ್ಕಳ ಕೂಟದ ಬನಶಂಕರಮ್ಮ, ಮಕ್ಕಳ ಮಂಟಪದ ಶ್ರೀ ಬಿ.ಎಸ್. ಪಾಂಡುರಂಗರಾಯರು, ಕೇಶವ ನೃತ್ಯ ಶಾಲೆಯ ಕೇಶವ ಮೂರ್ತಿ ಅವರು, ಸಮಯ ಯಕ್ಷಗಾನ ಸಮಾಜದ ಶ್ರೀ ಮಂಜುನಾಥ ಭಾಗವತರು, ಪಾಂಚಜನ್ಯ ಬಾಲವಿಹಾರದ ಡಾ|| ಬಿ.ಎಸ್. ಗಣಪತಿ ಮತ್ತು ಡಿ.ಎಸ್. ಗಜಾನನ, ಧಾರವಾಡದ ಕರ್ನಾಟಕ ಕಲೋದ್ಧಾರಕ ಸಂಘ, ಬೆಂಗಳೂರಿನ ಜಯನಗರದ ಮಾಡೆಲ್ ಎಜುಕೇಶನ್ ಸೊಸೈಟಿ, ಬ್ರಹ್ಮಾವರದ ಬಿ.ಎಂ.ಎ. ಹರಿಜನ ಗಿರಿಜನ ಪ್ರೌಢಶಾಲೆಯ ಶ್ರೀ ಜೆ. ಸೀತಾರಾಮ ಶೆಟ್ಟಿ, ಹುಬ್ಬಳ್ಳಿಯ ವಿಶ್ವನಾಥ ಕುಲಕರ್ಣಿ, ಬೆಂಗಳೂರಿನ ರಂಗಕಹಳೆ ಮಕ್ಕಳ ರಂಗಭೂಮಿ ಕೇಂದ್ರದ ಸಿ. ಲಕ್ಷ್ಮಣ, 1939 ರಲ್ಲಿ ಅಸ್ತಿತ್ವಕ್ಕೆ ಬಂದ ಬೆಂಗಳೂರಿನ ಮಕ್ಕಳ ಕೂಟದ ಬನಶಂಕರಮ್ಮ, ಕಲ್ಯಾಣಮ್ಮ.

★★★

# ಮಕ್ಕಳ ರಂಗಶಿಬಿರಗಳು

– ಪ್ರತಿಭಾ ಎಂ.ವಿ. ಸಾಗರ

ಮಕ್ಕಳ ರಂಗಶಿಬಿರಗಳು ಮಕ್ಕಳ ಮುಗ್ಧತೆಯನ್ನು ಉಳಿಸಿಕೊಳ್ಳುವ ಜೊತೆಯಲ್ಲಿಯೇ ಅವರ ಕನಸುಗಳಿಗೆ ಬಣ್ಣ ತುಂಬುವ ಹಬ್ಬಗಳಾಗಬೇಕು. ಸಮಾಜದ ಬಿಕ್ಕಟ್ಟುಗಳು, ಹೊಸ ಹೊಸ ತಂತ್ರಜ್ಞಾನಗಳು ಮಕ್ಕಳ ಸಂವೇದನೆಗಳನ್ನು ನಿರ್ಲಕ್ಷಿಸುತ್ತಿರುವ, ಕುಬ್ಜಗೊಳಿಸುತ್ತಿರುವ ಈ ಸಂದರ್ಭದಲ್ಲಿ ರಂಗಭೂಮಿಯ ನೆಲೆಯಲ್ಲೇ ಮತ್ತೆ ಮುಗ್ಧ ಆಶಯಗಳನ್ನು ಕಂಡುಕೊಳ್ಳಬೇಕಾಗಿರುವುದೇ ರಂಗಶಿಬಿರಗಳ ಉದ್ದೇಶವಾಗಿರಬೇಕು. ನಮ್ಮ ಸಂಸ್ಥೆ ನಡೆಸುವ "ಚೈತ್ರಮೇಳ" ಮಕ್ಕಳ ರಂಗಶಿಬಿರವನ್ನು ಆಧಾರವಾಗಿಟ್ಟುಕೊಂಡೇ ಕೆಲವು ಅಂಶಗಳನ್ನು ಸೂಕ್ಷ್ಮವಾಗಿ ತಿಳಿಸಬಯಸುತ್ತೇನೆ.

**ರಂಗಶಿಬಿರಗಳು,**

* ಮಗುವಿನ ದೈನಂದಿನ ಸಂಪ್ರದಾಯ ಅಥವಾ ರೂಢಿಗಳಿಗಿಂತ ಭಿನ್ನವಾಗಿರುತ್ತವೆ.

* ಹೋಂವರ್ಕ್, ಯುನಿಫಾರಂ, ಇರದ ವಾತಾವರಣ

* ಕೂರುವ ಜಾಗ, ಓಡಾಟ, ಕುಣಿದಾಟ, ಕೂಗಾಟ, ಯಾವುದಕ್ಕೂ ಮುಕ್ತ ಅವಕಾಶ

* ಯಾವುದೇ ಹಿಂಜರಿಕೆಗೆ ಅವಕಾಶವಿರದ ತನಗನ್ನಿಸಿದ್ದನ್ನು ನೇರವಾಗಿ ಮನಬಿಚ್ಚಿ ಹೇಳಿಕೊಳ್ಳಬಹುದಾದ ಅವಕಾಶ

* ಭಿನ್ನ ಭಿನ್ನ ಅಭಿರುಚಿಗಳ ಪರಿಚಯ, ಓಡನಾಟ

* ನೋಡುವುದರ ಜೊತೆ ಗಮನಿಸುವುದನ್ನು ರೂಢಿಸಿಕೊಳ್ಳುತ್ತಾರೆ.

* ನಾಯಕತ್ವದ ಗುಣವನ್ನು ಬೆಳೆಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ.

* ಒಂದು ವಿಷಯವನ್ನು ಚರ್ಚಿಸಿ, ಸಮಗ್ರ ಅಭಿಪ್ರಾಯ ಸಂಗ್ರಹಿಸುತ್ತಾರೆ.

* ವಾಸ್ತವವನ್ನು ಮೀರಿ ಚಿಂತಿಸುವ ಸಾಧ್ಯತೆ ಬೆಳೆಸಿಕೊಳ್ಳುತ್ತಾರೆ.

* ಮಾತೃಭಾಷೆಯನ್ನು ಪ್ರೀತಿಸುವುದರ ಜೊತೆ, ನಮ್ಮ ಭಾಷೆಯನ್ನು ಗಮನವಿಟ್ಟು ಓದುವ ರೆಯುವ ಅಭ್ಯಾಸ ಮಾಡುತ್ತಾರೆ

* ಪಠ್ಯಪುಸ್ತಕದ ಜೊತೆಯಲ್ಲೇ ಪತ್ರಿಕೆ, ಕಥೆ, ಕವನ, ಇತ್ಯಾದಿ ಓದುವ ಆಸಕ್ತಿ ತಳೆಯುತ್ತಾರೆ.

* ಸಂಗೀತ, ನೃತ್ಯ, ಚಿತ್ರಕಲೆ, ಗಮಕ, ಜಾನಪದ, ಹೀಗೆ ಹತ್ತು ಹಲವರು ತೆರೆನಾದ ಅಭಿರುಚಿಗಳ ಸಣ್ಣ ಪರಿಚಯ ಶಿಬಿರದ ಮೂಲಕ ಪರಿಚಯವಾಗುತ್ತದೆ.

* ಟಿ.ವಿ.ನೋಡುವುದು, ಸಿನಿಮಾ ಹಾಡುಗಳನು ಗುನುಗುವುದನ್ನು ಕಡಿಮೆ ಮಾಡುತ್ತಾರೆ. ಹೆಚ್ಚಾಗಿ ಬದಲಿಗೆ ಶಿಬಿರದಲ್ಲಿ ಕಲಿಸಿದ ಹಾಡುಗಳನ್ನು ಯಾವಾಗಲೂ ಗುನುಗುಡುತ್ತಿರುತ್ತಾರೆ. ವರ್ಷಪೂರ್ತಿ ಶಾಲೆಗಳಲ್ಲಿ, ಬೇರೆಕಡೆ ಹಾಡುವ ಸಂದರ್ಭ ಬಂದರೆ ಶಿಬಿರದಲ್ಲಿ ಕಲಿತ ಹಾಡನ್ನೇ ಹಾಡುತ್ತಾರೆ. ಇದು ಅನೇಕ ಪೋಷಕರಿಂದ ನನಗೆ ತಿಳಿದುಬಂದ ಮಾಹಿತಿ,

* ನಾಟಕ ನೋಡಲು ಬರುತ್ತಾರೆ. ಜೊತೆಗೆ ತಂದೆ ತಾಯಿಗಳನ್ನು ಕರೆತರುತ್ತಾರೆ. ಇದರಿಂದಾಗಿ ನಾಟಕ ನೋಡಲು ಬರುವವರ ಸಂಖ್ಯೆ ಹೆಚ್ಚಾಗುತ್ತದೆ. ಇದು ನಮ್ಮ ಅನುಭವ.

* ಶಿಬಿರದ ಪ್ರತಿ ಮಗುವು ಮುಕ್ತವಾಗಿ ಸ್ಪಷ್ಟವಾಗಿ ನಿರ್ಭಿಡೆಯಿಂದ ಮಾತನಾಡುತ್ತದೆ. ಮೊದಲ ದಿನಗಳಲ್ಲಿ ಬಾಯೇ ಬಿಡದ ಮಗು ಶಿಬಿರ ಮುಗಿವ ಹೊತ್ತಿಗೆ ಹರಟೆಗೆ ಸಿದ್ದವಾಗಿರುತ್ತದೆ.

* ಮಗು ಒಬ್ಬ ಕತೆಗಾರನಾಗಿ ಪರಿವರ್ತನೆಗೊಳ್ಳುತ್ತಾನೆ

* ಅವನ ಪಂಚೇಂದ್ರಿಯಗಳು ಕ್ರಿಯಾಶೀಲವಾಗುತ್ತವೆ

* ಸಂಬಂಧಗಳ ಸೂಕ್ಷ್ಮತೆ ತಿಳಿಯುತ್ತಾರೆ. ಸಂಬಂಧಗಳನ್ನು ಗೌರವಿಸುವುದನ್ನು ಕಲಿಯುತ್ತಾರೆ

* ನಾವು ಶಿಬಿರದಲ್ಲಿ ಮಕ್ಕಳಸಂತೆ ಮಾಡ್ತೀವಿ. ಅವರೇ ವ್ಯಾಪಾರ ಮಾಡ್ತಾರೆ ಲಾಭನಷ್ಟದ ಬಗ್ಗೆ ಅರಿವು ಮೂಡುತ್ತೆ, ಅದೊಂದು ನಿಜವಾದ ಮಾರುಕಟ್ಟೆ ಹಾಗೆ ಭಾಸವಾಗುತ್ತೆ.

* ಅಗ್ನಿಶಾಮಕ ದಳದಿಂದ ಉಪನ್ಯಾಸ ಮತ್ತು ಪ್ರಾತ್ಯಕ್ಷಿತೆ ಇರುತ್ತದೆ. ಬೆಂಕಿ ಆಕಸ್ಮಿಕಗಳ ಬಗ್ಗೆ ಚರ್ಚೆ ಮಾಡ್ತಾರಿ, ನೀರಲ್ಲಿ ಕುಣಿದಾಡುತ್ತಾರೆ.

*ಚಲನಚಿತ್ರ ಪ್ರದರ್ಶನವಿದ್ದಾಗ ನೋಡಿ ಆದನಂತರ ವಿಮರ್ಶೆ ಮಾಡ್ತಾರೆ

* ಮುಖ್ಯವಾಗಿ ನಾವು ಇಂಪ್ರವಿಶೇನ್‌ಗೆ ಬಿಟ್ಟಾಗ ಅವರವರೇ ನಿರ್ದೇಶಕರುಗಳಂತೆ ಓಡಾಡಿ ಸಣ್ಣ ಸಣ್ಣ ನಾಟಕಗಳನ್ನು ಸಿದ್ಧಮಾಡ್ತಾರೆ.

* ಗಮಕ ಸಂಗೀತ ಇತ್ಯಾದಿ ಕಾರ್ಯಕ್ರಮಗಳ ನಂತರ ಪುರಾಣದ ಬಗ್ಗೆ ಅಲ್ಲಿ ಬರುವ ಪಾತ್ರಗಳ ಬಗ್ಗೆ ಕುತೂಹಲದಿಂದ ಚರ್ಚೆ ಮಾಡ್ತಾರೆ.

* ಹಲವಾರು ಹೊಸ ಹವ್ಯಾಸಗಳನ್ನು ಮೈಗೂಡಿಸಿಕೊಳ್ತಾರೆ. ಸ್ಟ್ಯಾಂಪ್ ಒಟ್ಟುಮಾಡುವುದು, ಪತ್ರ ಬರೆಯುವುದು,

* ಅವರ ಮೆಚ್ಚಿನ ಕೆಲಸಗಳೆಂದರೆ ಗಾಳಿಪಟ, ಮುಖವಾಡ, ಮಣ್ಣಿನಲ್ಲಿ ವಿನ್ಯಾಸ, ಇತ್ಯಾದಿ ಕೆಲಸಗಳಲ್ಲಿ ಆದಷ್ಟು ಮಗ್ನರಾಗಿ ಬಿಡುತ್ತಾರೆ.

* ವೇದಿಕೆಯಲ್ಲಿ ನಿಂತು ನಿರರ್ಗಳವಾಗಿ ಮಾತನಾಡುತ್ತಾರೆ

* ಸಮಯಪ್ರಜ್ಞೆ, ಕಲ್ಪನಾಶಕ್ತಿ ಬೆಳೆಯುತ್ತದೆ

* ಯಾರೇ ಅತಿಥಿಗಳು ದೊಡ್ಡವರು ಬಂದರೆ ಮಾತನಾಡಿಸಿ, ಚರ್ಚಿಸುತ್ತಾರೆ. ಆತಿಥ್ಯ ನೀಡುತ್ತಾರೆ

* ಒಬ್ಬರಿಗೊಬ್ಬರು ಸಹಾಯ ಮಾಡುವ ಮನೋಭಾವ ಬೆಳೆಯುತ್ತದೆ.

ಈ ಮೇಲಿನವುಗಳಲ್ಲಿ ನನಗೆ ಪೋಷಕರಿಂದ ಬಂದ ಪ್ರತಿಕ್ರಿಯೆಗಳು ಮತ್ತು ನನ್ನ ಅನುಭವಕ್ಕೆ ಬಂದವು.

ಆದರೆ ಅದಕ್ಕಿಂತ ಮುಖ್ಯವಾಗಿ ನನಗನ್ನಿಸುವುದು ಮಕ್ಕಳ ಶಿಬಿರಗಳಲ್ಲಿ ಕೇವಲ ನೀತಿಭೋಧನೆಯೊಂದೇ ಹೆಚ್ಚಾಗದೆ ಜೊತೆಯಲ್ಲಿ ತಮಾಷೆ, ಕುಣಿತ, ಮ್ಯಾಜಿಕ್‌ಗಳು ಇರಬೇಕು. ಅದೊಂದು ಆಚರಣೆಯಾಗಬೇಕು. ಈ ಶಿಬಿರಗಳು ಮಕ್ಕಳಿಗೆ ಪ್ರಯೋಜಿತವಾಗುವುದು ಒಂದು ಕಡೆಯಾದರೆ ನನಗಂತೂ ಮಕ್ಕಳ ಮನೋರಂಗದ ಹಲವರು ಸೂಕ್ಷ್ಮಗಳನ್ನು ಪ್ರಶ್ನೆಗಳನ್ನು ಬಹಳಷ್ಟು ಮಟ್ಟಿಗೆ ಅರ್ಥಮಾಡಿಸಿವೆ. ಮಕ್ಕಳೊಂದಿಗೆ ಮಕ್ಕಳಾಗಿರಬೇಕೆಂದು ಅರ್ಥಮಾಡಿಸಿವೆ. ಮಕ್ಕಳ ಜೊತೆ ಕೆಲಸ ಮಾಡಲು ಸಿಕ್ಕಿದ ಅವಕಾಶವೇ ಒಂದು ತೃಷ್ತಿ. ಇದಕ್ಕಾಗಿ ರಮಗಭೂಮಿಗೆ ನಾನು ಚಿರಋಣಿ.

***

# ಮಕ್ಕಳ ನಾಟಕಗಳ ಯಾದಿ

**ಡಾ.ಆರ್.ವಿ.ಭಂಡಾರಿ**

1. ಬೆಳಕಿನ ಕಡೆಗೆ – ರಾಘವೇಂದ್ರಪ್ರಕಾಶನ ಅಂಕೋಲಾ –1996
2. ಬೆಳಕು ಹಂಚಿದ ಬಾಲಕ – ಬಂಡಾಯ ಪ್ರಕಾಶನ ಅರೆಅಂಗಡಿ –2004
3. ಬಣ್ಣದ ಹಕ್ಕಿ – ಬಂಡಾಯ ಪ್ರಕಾಶನ ಅರೆಅಂಗಡಿ –2005
4. ನಾನು ಗಾಂಧಿ ಆಗ್ತೇನೆ – ಬಂಡಾಯ ಪ್ರಕಾಶನ ಅರೆಅಂಗಡಿ –2004
5. ಈದ್ಗಾ ಮತ್ತು ಬೆಳಕಿನ ಕಡೆಗೆ – ರಂಗಾಯಣ ಮೈಸೂರು – 2008
6. ಪ್ರೀತಿಯ ಕಾಳು – ಬಂಡಾಯ ಪ್ರಕಾಶನ ಅರೆಅಂಗಡಿ –2010
7. ಒಂದೇ ಗೂಡಿನ ಹಕ್ಕಿಗಳು – ಬಂಡಾಯ ಪ್ರಕಾಶನ ಅರೆಅಂಗಡಿ –2010

**ನಾ.ಸು. ಭರತನಹಳ್ಳಿ**

1. ಪಂಜರದಲ್ಲಿ ಹುಲಿ – ಚಿಂತನ ಪ್ರಕಾಶನ ಶಿರಸಿ
2. ಆಕಾಶ ಪರಿದು ಬೀಳುತ್ತಿದೆ – ತಾಲೂಕಾ ಕ.ಸಾ.ಪ. ಯಲ್ಲಾಪುರ

**ನಾಗೇಶ ಹೆಗಡೆ**

ಗುಳಿಗೆ ಗುಮ್ಮ – ವಸಂತ ಪ್ರಕಾಶನ ಬೆಂಗಳೂರು – 2007

**ಗ.ಸು. ಭಟ್ಟ**

1. ಚಿಟ್ಟೆಯ ಮೊಟ್ಟೆ – ನಿರ್ಮಲ ಪ್ರಕಾಶನ ತಿಪಟೂರು – 2001
2. ನಲಿಯಿತು ನವಿಲು – ನಿರ್ಮಲ ಪ್ರಕಾಶನ ತಿಪಟೂರು – 2001
3. ಕಳೆದ ಕೊಳಲು – ಸುಮುಖ ಪ್ರಕಾಶನ ಕಿನ್ನಿಗೋಳಿ – 2009

**ನಾಗಪತಿ ಹೆಗಡೆ ಹುಳಗೋಳ**

1. ವೀರ ಪುಲಕೇಶಿ ಮತ್ತಿತರ ನಾಟಕಗಳು – ನಮ್ರತಾ ಪ್ರಕಾಶನ ಹುಳಗೋಳ ಶಿರಸಿ
2. ಗೆಲಿಲಿಯೋ – ನಮ್ರತಾ ಪ್ರಕಾಶನ ಹುಳಗೋಳ ಶಿರಸಿ

**ಎಸ್ ಅರುಂಧತಿ**

ಚಿಂವ್ ಚಿಂವ್ ಚಿಟ್ಟಾಣಿ – ರಾಘವೇಂದ್ರ ಪ್ರಕಾಶನ ಅಂಕೋಲಾ

ವಿಷ್ಣು ನಾಯ್ಕ

1. ಬೋಳು ಗುಡ್ಡ – ರಾಘವೇಂದ್ರ ಪ್ರಕಾಶನ ಅಂಕೋಲಾ
2. ಪ್ರೀತಿಜಗತ್ತಿನ ದೊರೆ – ರಾಘವೇಂದ್ರ ಪ್ರಕಾಶನ ಅಂಕೋಲಾ
3. ಹಿಂಗಾರ – ರಾಘವೇಂದ್ರ ಪ್ರಕಾಶನ ಅಂಕೋಲಾ

ಮೋಹನ ಹಬ್ಬು

ಏಕಲವ್ಯ ಇತರ ನಾಟಕಗಳು – ಪ್ರಜ್ಞಾ ಪ್ರಕಾಶನ ವಂದಿಗೆ, ಅಂಕೋಲಾ

ಬೈಂದೂರು ಆನಂದರಾವ್

ಸಹಕಾರ – ಬಾಲ ಸಾಹಿತ್ಯ ಮಂಡಲ ಮಂಗಳೂರು – 1931

ಎಂ.ಎನ್. ಕಾಮತ್

1. ಅಂಚೆಮನೆ – ಕರ್ನಾಟಕ ಸಂಘ ಪುತ್ತೂರು – 92
2. ಚಂದ್ರಹಾಸಾಭ್ಯುದಯ – ಕರ್ನಾಟಕ ಸಂಘ ಪುತ್ತೂರು – 92
3. ಶುಕಶಿಕ್ಷಣ – ಕರ್ನಾಟಕ ಸಂಘ ಪುತ್ತೂರು – 92
4. ಶಿಕ್ಷಣ ಪರೀಕ್ಷೆ – ಕರ್ನಾಟಕ ಸಂಘ ಪುತ್ತೂರು – 92
5. ಪರೀಕ್ಷೆ – ಕರ್ನಾಟಕ ಸಂಘ ಪುತ್ತೂರು – 92
6. ಕಥೆ ಹೇಳುವಿಕೆ – ಕರ್ನಾಟಕ ಸಂಘ ಪುತ್ತೂರು – 92
7. ಟ್ಯೂಶನ್ ಫೀ – ಕರ್ನಾಟಕ ಸಂಘ ಪುತ್ತೂರು – 92

ಐ.ಕೆ.ಬೋಳುವಾರ

1. ಗ್ರಹಣ – ಅಭಿವ್ಯಕ್ತ ಪ್ರಕಾಶನ ಮಂಗಳೂರು
2. ಮುದುಕ ಶೆಟ್ಟಿ – ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು
3. ಮಾಯಾ ಕುದುರೆ – ರಂಗಾಯಣ ಮೈಸೂರು

ಮೂರ್ತಿ ದೇರಾಜೆ

1. ಕಪ್ಪು ಕಾಗೆಯ ಹಾಡು – ಸಮನ್ವಯ ಪ್ರಕಾಶನ ವಿಟ್ಲ ಮಂಗಳೂರು
2. ಗುಡುಗುಡು ಗುಮ್ಮಟ ದೇವರು – ಸಮನ್ವಯ ಪ್ರಕಾಶನ ವಿಟ್ಲ, ಮಂಗಳೂರು

ಕಾತ್ಯಾಯನಿ ಕುಂಜುಬೆಟ್ಟು

ನಿದ್ರಾ ನಗರಿ ಮತ್ತಿತರ ಮೂರು ನಾಟಕಗಳು – ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು

ಪಾರ್ವತಿ ಐತಾಳ

1. ಗುರು ದಕ್ಷಿಣೆ – ಎನ್.ಆರ್.ಎ.ಎಂ.ಎಚ್.ಪ್ರಕಾಶನ ಕೋಟೇಶ್ವರ
2. ತಂತ್ರಗಾರ್ತಿ – ಜನಪ್ರತಿನಿಧಿ ಪ್ರಕಾಶನ ಕುಂದಾಪುರ

## ಮಕ್ಕಳ ನಾಟಕಗಳು

1. ಒಂದು, ಎರಡು, ಮೂರು, ನಾಲ್ಕು... ಮಕ್ಕಳಿಗಾಗೇ ನಾಟಕ ಅಷ್ಟೂ! (2003) – ಅನಂದ. ವ. ಪಾಟೀಲ.–ವಸಂತ ಪ್ರಕಾಶನ, ಬೆಂಗಳೂರು.

2. ಬೆಳೆದವರು (1986) – ಅಬ್ದುಲ್ ರಹಿಮಾನ್ ಪಾಷ – ಮನು ಪ್ರಕಾಶನ, ಬೆಂಗಳೂರು.

3. ಪುಸ್ತಕದ ಗೋಡೆ (2007) – ಚಂದ್ರಶೇಖರ ದಾಮ್ಲೆ – ಸ್ನೇಹ ಶಿಕ್ಷಣ ಪ್ರಕಾಶನ, ಸುಳ್ಯ, ದ.ಕ.

4. ಮರದ ಮರ್ಮರ (2005) – ನಾರಾಯಣ ಕಂಗಿಲ.

5. ಗೆಳೆಯರ ಬಳಗಕ್ಕೆ ಜೈ (1996) – ನಾ. ಡಿಸೋಜ – ದಿವ್ಯಚಂದ್ರ ಪ್ರಕಾಶನ, ಬೆಂಗಳೂರು.

6. ದೆವ್ವದ ಮನೆ. (1987) – ಎಸ್.ಜಿ. ಶಿವಶಂಕರ್ –ಪಾರಿಜಾತ ಪ್ರಿಂಟರ್ಸ್, ಮೈಸೂರು.

7. ಮಾರ್ಜಾಲ ಮಹಾಶಯ (1985) – ಬಾ.ಕೃ – ಯುಗಪುರುಷ, ಕಿನ್ನಿಗೋಳಿ, ದ.ಕ.

8. ಕಿಟ್ಟಾಯಣ (1983) – ಪಳಕಳ ಸೀತಾರಾಮ ಭಟ್ಟ – ಯುಗಪುರುಷ, ಕಿನ್ನಿಗೋಳಿ, ದ.ಕ.

9. ಕುಳ್ಳ ತಮ್ಮ (1990) – ಪಳಕಳ ಸೀತಾರಾಮ ಭಟ್ಟ – ಯುಗಪುರುಷ, ಕಿನ್ನಿಗೋಳಿ, ದ.ಕ.

10. ಏಕಲವ್ಯ – ಪಳಕಳ ಸೀತಾರಾಮ ಭಟ್ಟ.

11. ಒನಕೆ ಓಬವ್ವ – ಶಿವರಾಮ ಶಿಶಿಲ.

12. ರಾವಣ ಸನ್ಯಾಸಿ. (1986) – ಕೆ.ಎಸ್. ರಂಗಪ್ಪ – ಗೀತಾ ಬುಕ್ ಹೌಸ್, ಮೈಸೂರು.

13. ಕೈಕೋಲು. (1979) – ಎಮ್.ವಿ.ಸೀತಾರಾಮಯ್ಯ – ಕಾವ್ಯಾಲಯ, ಮೈಸೂರು.

14. ರಸವರ್ಷ –(8 ಕಿರು ನಾಟಕಗಳ ಸಂಗ್ರಹ –2004) – ಲೀಲಾಮಣ್ಣಾಲ– ನಿಸರ್ಗಪ್ರಕಾಶನ, ಮೈಸೂರು.

15. ನವರಸಾಭಿನಯ (20 ಚಿಕ್ಕಚಿಕ್ಕನಾಟಕಗಳು–1999) – ಲೀಲಾಮಣ್ಣಾಲ– ನಿಸರ್ಗಪ್ರಕಾಶನ, ಮೈಸೂರು.

16. ಮಕ್ಕಳ ಮೂರು ನಾಟಕಗಳು (1985) – ಕುದ್ಕಾಡಿ ವಿಶ್ವನಾಥ ರೈ. – ಭಾರದ್ವಾಜ ಪ್ರಕಾಶನ, ಮಂಗಳೂರು.

17. ನಾಲ್ಕು ಮಕ್ಕಳ ನಾಟಕಗಳು –(2000) – ರಾಮಚಂದ್ರಕಿತ್ತೂರ ಮತ್ತು ಮಧುಕರ ಯಕ್ಕುಂಡಿ–ರಂಗತೋರಣ,ಧಾರವಾಡ.

18. ನಿಂಗು ಸೊಲಗಿಯ ಮಕ್ಕಳ ನಾಟಕಗಳು. (2001) – ನಿಂಗು ಸೊಲಗಿ – ಚಿಲಿಪಿಲಿ ಪ್ರಕಾಶನ, ಧಾರವಾಡ

19. ಕಣ್ಣು ತೆರೆಯಿತು ಮತ್ತು ಇತರ ನಾಟಕಗಳು.(1993) ಸರಸ್ವತಿ ಅಮ್ಮ, ಮಣಿಪುರ, ಕಾಂಚನ, ಪುತ್ತೂರು, ದ.ಕ. (ಸ್ವಂತಪ್ರಕಾಶನ)

20. ಗುಲ್ಬುಟ್ಟಿ ಮುನ್ಪುಟ್ಟಿ (1980) – ಎಚ್.ಎಸ್. ಗೋಪಾಲರಾಯ – ಕನ್ನಡ ಸಾಹಿತ್ಯ ಪರಿಷತ್ತು.

21. ಬುದ್ಧ ಹೇಳಿದ ಕತೆ (2003) – ಎಸ್. ಮಾಲತಿ, ಸಾಗರ – ನವಕರ್ನಾಟಕ ಪ್ರಕಾಶನ

22. ಭಕ್ತೆ ಮೀರಾದೇವಿ (2000) (ಪುಟಾಣಿ ಮಕ್ಕಳ ನಾಟಕ ಸಂಕಲನ)– ವೆಂಕಟರಾಜ ಪುಣ್ಚಿತ್ತಾಯ. – ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು.

23. ಭದ್ರಗಜ ಮತ್ತು ಇತರ ನಾಟಕಗಳು–ವೆಂಕಟರಾಜ ಪುಣ್ಚಿತ್ತಾಯ.

24. ಸತಿ ಸಾವಿತ್ರಿ (1974) – ಸೀತಾನದಿ ಗಣಪಯ್ಯ ಶೆಟ್ಟಿ, – ಸುಭೋದ ಸಾಹಿತ್ಯ ಭಂಡಾರ, ಹಿರಿಯಡ್ಕ.

25. ರಾಮಧಾನ್ಯ ಚರಿತೆ (2011) – ಅಂಬಾತನಯ ಮುದ್ರಾಡಿ – ಕನಕದಾಸ ಅಧ್ಯಯನ ಪೀಠ, ಉಡುಪಿ.

26. ಹೋರಾಟದ ಹಾದಿಯಲ್ಲಿ (1997), ರಚನೆ : ಎ.ಎಸ್. ಮೂರ್ತಿ.

27. ಯಾರಿಗೂ ಹೇಳಬೇಡಿ (1997), ರಚನೆ : ಡಾ॥ ಎಸ್.ವಿ. ಕಶ್ಯಪ್.

28. ಆ ಮನಿ ಈ ಮನಿ (1998), ರಚನೆ : ಎ.ಎಸ್. ಮೂರ್ತಿ.
29. ಗುಮ್ಮ (1998), ರಚನೆ : ಎ.ಎಸ್.ಮೂರ್ತಿ.
30. ಲೆನಿನನ ತೀರ್ಮಾನ (1998), ರಚನೆ : ಎ.ಎಸ್. ಮೂರ್ತಿ.
31. ಯಾರಿವನು (1999), ರಚನೆ : ಎ.ಎಸ್. ಮೂರ್ತಿ.
32. ಹೀಗೂ ಆಗಬಹುದು(2000, 2009), ರಚನೆ : ಡಾ॥ ಎಸ್.ವಿ. ಕಶ್ಯಪ್.
33. ಮಕ್ಕಳ ರಾಜ್ಯ (2000), ರಚನೆ : ಎ.ಎಸ್.ಮೂರ್ತಿ.
34. ಬಿರುದನ್ನರಸಿ (2001, 2009), ರಚನೆ : ಡಾ॥ ಎಸ್.ವಿ. ಕಶ್ಯಪ್.
35. ಕುಮಾರವ್ಯಾಸ ಡಾಟ್ ಕಾಮ್(2002, 2010), ರಚನೆ : ಡಾ॥ಎಸ್.ವಿ.ಕಶ್ಯಪ್.
36. ವೈ3ಕೆ (2002, 2005), ರಚನೆ : ಡಾ॥ ಎಸ್.ವಿ. ಕಶ್ಯಪ್.
37. ಚಿಟ್ಟಿ (2003), ರಚನೆ : ಡಾ॥ ಎಸ್.ವಿ.ಕಶ್ಯಪ್.
38. ಮಾಯಾಚೀಲ (2003), ರಚನೆ : ಡಾ॥ ಎಸ್.ವಿ. ಕಶ್ಯಪ್.
39. ಕಾಗಾಯಣ (2004), ರಚನೆ: ಡಾ॥ ವಿಜಯಾ ಸುಬ್ಬರಾಜ್.
40. ಒಂದು ನಿಮಿಷದ ಕಥೆ (2004), ರಚನೆ : ಡಾ॥ ಎಸ್.ವಿ. ಕಶ್ಯಪ್.
41. ಗಾಂಧಿ ಪಾರ್ಕ್ (2005), ರಚನೆ : ಡಾ॥ ಎಸ್.ವಿ. ಕಶ್ಯಪ್.
42. ಓ ನನ್ನ ಮರವೆ (2005), ರಚನೆ : ಎ.ಎಸ್. ಮೂರ್ತಿ.
43. ಗೂಡಿನ ಪಾಡು (2005), ರಚನೆ : ಡಾ॥ ಎಸ್.ವಿ. ಕಶ್ಯಪ್.
44. ಕಲಿ (2006), ರಚನೆ : ಡಾ॥ ಎಸ್.ವಿ. ಕಶ್ಯಪ್.
45. ಶುದ್ಧಗೆ, ರಚನೆ : ಡಾ॥ ಎಸ್.ವಿ. ಕಶ್ಯಪ್.
46. ಚಂದ್ರ ಮುಖಿ (2008), ರಚನೆ : ಡಾ॥ ಎಸ್.ವಿ. ಕಶ್ಯಪ್.
47. ಜಿಜ್ಜೀ (2008), ರಚನೆ : ಡಾ॥ ಎಸ್.ವಿ. ಕಶ್ಯಪ್.
48. ಮೊಬೈಲ್ ಕಿರಿಕಿರಿ (2008), ರಚನೆ : ಡಾ॥ ಎಸ್.ವಿ. ಕಶ್ಯಪ್.
49. ಕಾಕೋಲುಕೀಯ (2009), ರಚನೆ : ಡಾ॥ ಎಸ್.ವಿ. ಕಶ್ಯಪ್.
50. ಅಲ್ಲಿ ನೋಡು (2010), ರಚನೆ : ಡಾ॥ ಎಸ್.ವಿ. ಕಶ್ಯಪ್.
51. ಪುಟ್ಟಿ (2010) ಮಕ್ಕಳ ನಾಟಕ, ರಚನೆ : ಸುಷ್ಮಾ ಪ್ರಶಾಂತ್
52. ಮಂತ್ರವಾದಿ (2010), ರಚನೆ ಎ.ಎಸ್. ಮೂರ್ತಿ.
53. ಅರ್ಬುದ ಕಾಡು (2010) – ಮಕ್ಕಳ ನಾಟಕ, ರಚನೆ : ಡಾ॥ ಎಸ್.ವಿ.ಕಶ್ಯಪ್.
54. ಹಂಬಲ್ಪುರ (2011), ರಚನೆ : ಡಾ॥ ಎಸ್.ವಿ. ಕಶ್ಯಪ್.

# ಮಕ್ಕಳ ನಾಟಕಗಳು

| | |
|---|---|
| ಪ್ರೊ. ಟಿ.ಕೆ. ರಾಮಚಂದ್ರ | ಗುಡಿಸಲ ಗುರು |
| | ತುಂಟು ಗಣಪ |
| | ಅಲ್ಲಾಉದ್ದೀನನ ಅದ್ಭುತ ದೀಪ |
| | ಕೋತಿ ಬಂತು ಕೋತಿ |
| | ಪಟ್ಟೆ ಹುಲಿ ಹಾಂ ! |
| | ಬೇಡತಿ ಶಬರಿ |
| | ಕನಸಿನ ಕಾರು |
| | ಎದ್ದಳಾ ರಾಜಕುಮಾರಿ |
| ಪ್ರೊ. ಬಿ. ಚಂದ್ರಶೇಖರ | ಯಾವ ಪುಟಾಣಿ ಹುಡುಗ |
| | ಚಿರಂಜೀವಿ |
| | ಸಂಭವಾಮಿ ಯುಗೇ ಯುಗೇ |
| | ಅವರು ಬಿಟ್ಟು ಇವರು ಬಿಟ್ಟು |
| | ಇವರು ಯಾರು ? |
| | ಅಪಕಾರಿಯ ಕಥೆ |
| ಶ್ರೀ ಎಸ್.ಕೆ. ಮಾಧವರಾವ್ | ಮಾಯಾ ಕುರ್ಚಿ |
| | ಮುಷ್ಟಿಯಷ್ಟು ಪಾಲು |
| | ನೆಟ್ಟಗಿಲ್ಲದವರ ಸೊಟ್ಟ ಕಾರ್ಯ |
| | ಹಂದಿಗೂಡಿನ ಸಲೂನ್ |
| | ಬಂಗಾರು ಪೇಟೆಯ ಬಂಗಾರು ಶೆಟ್ಟಿ |
| | ಕೃಷ್ಣ-ಸುದಾಮ |
| | ಚಂದ್ರಹಾಸ |
| | ಬಾಲ್ಯದ ಭಾಗ್ಯ |
| | ಪರಿವರ್ತನೆ |
| | ಸಿಂಡ್ರೆಲಾ |
| | ಆಲೀವರ್ |

ಹಿರಣ್ಯ ರೋಮ

ಕೃತಘ್ನ

ಶಕ್ತಿ ಮತ್ತು ಯುಕ್ತಿ

ತೆನ್ನಾಲೀ ರಾಮಕೃಷ್ಣ

ಅಹಮದ್ ಮೋಚಿ

ಮಾಯಾದ ಮಾಟಗಾತಿ

ಪರಿಸರ ಪ್ರಜ್ಞೆ

ಅತಿಥಿ ಮತ್ತು ಆತಿಥ್ಯ

ಒಂದೂರಿನಲ್ಲಿ ಒಬ್ಬ ರಾಜ

ಒಂದು ದಂತ ಕಥೆ

ಮೈದಾಸನ ಮೋಹ

ದಕ್ಷಿಣಾ

ರಂಗಣ್ಣನ ಕನಸಿನ ದಿನಗಳು

ಅಲ್ಲಾವುದ್ದೀನನ ಅದ್ಭುತ ದೀಪ

ಒಡ್ರಿಗೊಂದು ಭೋಜನ ಕೂಟ

ಗಣೇಶ ಜನನ

ಶ್ರೀನಿವಾಸ ಕಲ್ಯಾಣ

ಗಿರಿಜಾ ಕಲ್ಯಾಣ

ಕೋಳೂರು ಕೊಡಗೂಸು

ಸಿರಿ ಪುರಂದರ

ಕೃಷ್ಣ ಪಾರಿಜಾತ

ಮಾಯೆಯ ಪರದೆ

ಪರಿಸರ

ಮರದ ಗೊಂಬೆ

ಮಾಯಾ ಶಂಖ

ಎಂಥಾ ಕೆಲಸ ಆಯಿತು

ಮಿಯಾವ್ ಮಾರ್ಜಾಲ ಸಂಘ

| | |
|---|---|
| | ಗೆಲುವಿನಲ್ಲೂ ಸೋಲು |
| | ಶಾರದಾ ದೇವಿ |
| | ಬಾತ್‌ರೂಂ ಬಾಗಿಲು |
| | ಜೋಕರ್ |
| | ಶ್ರೀ ಯತಿರಾಜ-ಗುರುರಾಜ |
| ಶ್ರೀ ವ್ಹಿ.ಎಸ್. ಶಿರಹಟ್ಟಿಮಠ | ಮಗುವಿನ ಕನಸು |
| | ಬಲಿದಾನ |
| | ಸೂರ್ಯ ಇಲ್ದೆ ಹೋದರೆ |
| | ನಗುವ ಹೂ |
| | ಸೂರ್ಯ ಚಂದ್ರರ ಆಟ |
| | ನಾನು ಮತ್ತು ನಕ್ಷತ್ರ |
| | ಮಕ್ಕಳ ಮಮತೆ |
| | ದೇವ ಮಾನವ |
| | ಸತ್ಯಕ್ಕೆ ಸಾವಿಲ್ಲ |
| | ನನ್ನದೇನೂ ತಪ್ಪಿಲ್ಲ |
| | ನಮ್ಮ ಜತೆ ಚಂದ್ರನಿದ್ದಾನೆ |
| | ನಮಗೆ ನ್ಯಾಯ ಬೇಕು |
| | ಏನೇ ಬರಲಿ ಒಗ್ಗಟ್ಟಿರಲಿ |
| | ನಾವು ಜಾಣರು |
| | ಶ್ರೇಷ್ಠ ಸೋಮಾರಿಗಳು |
| | ಮದುವೆಯ ಆಟ |
| ಡಾ. ಬಿ.ವಿ. ರಾಜಾರಾಂ | ಭಕ್ತ ಅಂಬರೀಷ |
| | ಶ್ರೀಕೃಷ್ಣ ಲೀಲಾಮೃತ |
| | ಶ್ರೀಕೃಷ್ಣ ಸಂಧಾನ |
| | ಭಕ್ತ ಪ್ರಹ್ಲಾದ |
| | ಭಕ್ತ ಕನಕದಾಸ |

| | |
|---|---|
| ಶ್ರೀಮತಿ ಲೀಲಾ ಬಸವರಾಜು | ನಾಮ ಬಲವೋ ಬುದ್ಧಿ ಬಲವೋ |
| | ಕವಿ ನಮನ |
| | ನಯನತಾರಾ |
| | ಅರ್ಥಮಾಡಿಕೊಳ್ಳಿ ನಮ್ಮನ್ನು |
| ಶ್ರೀ ಗುರುರಾಜ ಬೆಣಕಲ್ | ಗೆಳೆತನ |
| | ತಾಜಮಹಲು |
| | ಅಶೋಕನ ಶಸ್ತ್ರತ್ಯಾಗ |
| | ವಿಜಯೀ ಬಾಲಕ |
| ಡಾ. ಲಕ್ಷ್ಮೀ ಬಸವರಾಜು | ನ್ಯಾಯ ದೇಗುಲ |
| | ಅಮೃತಧಾರೆ |
| | ಪರೋಪಕಾರಾರ್ಥ ಇದಂ ಶರೀರಮ್ |
| ಶ್ರೀ ದಿನೇಶ್‌ಗೌಡ ಕೆ. | ಕಿಂ. ಕಿಂ. ಕಿಂ. ಕಿಂ. ಕಿಂದರಿಜೋಗಿ |
| | ಬೀರಿಸ ಪಕ್ಕಿ ಹಾರಿ ಬಾ |
| | ಸಿಂಡರೆಲಾ |
| ಶ್ರೀ ಎನ್.ಎಸ್. ವೆಂಕಟರಾಂ | ಬಂಗಾರದ ಗಿಣಿ |
| | ಕಪ್ಪೆಯ ಕಾಶೀಯಾತ್ರೆ |
| | ಚಿನ್ನದ ತಟ್ಟೆ |
| | ಹುಲಿ ಬಂತು ಹುಲಿ ? |
| ಶ್ರೀ ಸಂಪಟೂರು ವಿಶ್ವನಾಥ್ | ಒಂದು ದಿನ |
| | ನಮ್ಮ ನಾಟ್ಕ |
| | ಆಡಾಡ್ತ ನಡೆದೈತೆ ನಾಟ್ಕ |
| ಶ್ರೀ ವಿನಯ್ ಕೆ. ಸುವರ್ಣ | ಧಗೆಯೇರಿದ ಧರಣಿ |
| | ವಿಜ್ಞಾನ ಚಂದ್ರ - ಜಗದೀಶ ಚಂದ್ರ |
| ಶ್ರೀ ಎಂ. ಮಹಾದೇವಪ್ಪ ತಾಳಗುಂದ | ಒಂದು ದಿನ ಒಂದು ಗಂಟೆ |
| | ಬದುಕು ಕೊಡಿ ಬಾಳಲು ಬಿಡಿ |
| | ಮುಕ್ತಿಯ ಬೆಳಕು |

| | |
|---|---|
| ಶ್ರೀ ಎಚ್.ಎಂ. ನಾಗರಾಜರಾವ್ ಕಲ್ಕಟ್ಟೆ | ಬ್ರೇಕಿಂಗ್ ನ್ಯೂಸ್ |
| | ಅಜ್ಜಿ ಕತೆ ಮತ್ತು ಮೊಮ್ಮಗ |
| | ಕಿರುತೆರೆ - ಭವಿಷ್ಯ |
| ಶ್ರೀ ಮಂಡಲಗಿರಿ ಪ್ರಸನ್ನ | ನಾಯಿಗಳು |
| | ಬಕಾಸುರರು |
| | ಕಲ್ಲೆ ಕಲ್ಲೆ ಹಾಯ್ ಹಾಯ್ |
| ಶ್ರೀ ಸತ್ಯ ಉಡುಪಿ | ಕರಿಜಿಂಕೆ |
| | ಕಾಡಿಗೆ ಬೇಲಿ |
| ಶ್ರೀಮತಿ ಇಂದಿರಾ ಹಾಲಂಬಿ | ನಮ್ಮ ದಾರಿ ಬೇರೆ ಬೇರೆ |
| | ಎಲ್ಲಿರಲಿ...? ಹೇಗಿರಲಿ...? |
| | ಕಾಣದ ಕೈ |
| ಶ್ರೀ ಪ್ರಭಾಕರ ಜೋಶಿ | ಸ್ವರ್ಗದ ದಾರಿ |
| | ಅಧಿಕಾರ |
| ಶ್ರೀ ರಮೇಶಚಂದ್ರ | ಲೀಲಾವಿಲಾಸ |
| | ಸೌಗಂಧಿಕಾ ಪರಿಮಳ |
| ಶ್ರೀ ಪ್ರಶಾಂತ್ ಅನಂತಾಡಿ | ವನಮಾಲಿ |
| | ಮಕ್ಕಳ ಜಾತ್ರೆ |
| ಶ್ರೀ ಶಶಿಧರ ನರೇಂದ್ರ | ಉಪಮನ್ಯು |
| ಡಾ. ಗುರುರಾವ್ ಬಾಪಟ್ | ಅಲ್ಲಾಉದ್ದೀನನ ಮಾಯಾದೀಪ |
| ಶ್ರೀಮತಿ ಮಾಲತಿ ಮುದಕವಿ | ಹಸಿರೇ ಉಸಿರು |
| ಶ್ರೀ ಎಂ.ಸಿ. ಅಂಟಿನ | ಜೈ ಜಾಂಬುವಂತ |
| ಶ್ರೀ ಎಂ.ಸಿ. ರಾಮು | ಹೂಹಳ್ಳಿ ಹುಡುಗಿ |
| ಶ್ರೀ ಹೊರೆಯಾಲ ದೊರೆಸ್ವಾಮಿ | ನೀನಾ |
| | ಮಿಡಿಚಂಭಟ್ಟ |
| ಶ್ರೀ ಬಿದರಗೇರಿ ರೇವಣಪ್ಪ | ಒಂದಾಗಿ ಬಾಳೋಣ... |
| ಶ್ರೀ ಸತ್ಯೇಶ್ ಎನ್. ಬೆಳ್ಳೂರ್ | ತಾಯಮ್ಮನ ಬಂಡೆ |
| ಪ್ರೊ. ಮಾಲತಿ ಪಟ್ಟಣಶೆಟ್ಟಿ | ಇಂದಿನ ನಚಿಕೇತ |

| | |
|---|---|
| ಶ್ರೀಮತಿ ಶೈಲಿ ಪ್ರಭಾಕರ್ | ರಾಜ ಮತ್ತು ವೃಕ್ಷದೇವತೆ |
| | ಕರಿಮುಖಿ ಅಮೇರಿಕಕ್ಕೆ ಹೋದದ್ದು |
| ಶ್ರೀಮತಿ ವೀರಮ್ಮ ಮ. ಹಂಪಿಹೊಳಿ | ವಜ್ರದ ಉಂಗುರ |
| ಶ್ರೀ ಜಿ.ಕೆ. ತಳವಾರ | ರಾಸಾಯನಿಕಲೋಕದಲ್ಲೊಂದು ಮದುವೆ |
| ಶ್ರೀ ವಿಜಯ್ ಮಹಾಂತೇಶ್ | ಶಾಲಾ ಮಕ್ಕಳು |
| ಶ್ರೀ ಮಹೇಶ್ ಪರಿಸಣ್ಣವರ | ಛಲವಂತ ಮಕ್ಕಳು |
| ಶ್ರೀ ಬೇಬಿ ಎಂ. ಮಾಣಿಯಾಟ್ | ಬಾಬುರಾಯರ ಮೊಮ್ಮಗ |
| | ಕಾಡಿನ ಮಕ್ಕಳು |
| ಶ್ರೀ ಕೆ.ಎಸ್. ಚಂದ್ರಶೇಖರ್ | ಅಕ್ಷಮಾಲಿ |
| ಶ್ರೀ ಬಿ. ಸದಾನಂದ ಪೈ | ಬ್ರೋಕರ್ ಬೋಜಣ್ಣ |
| ಶ್ರೀ ಶಿವಯೋಗಿ ರೊಳ್ಳಿಯವರ | ಮಳಿ ಬೇಕ್ರಿ ಮಳಿ |
| ಶ್ರೀ ಸಾ.ಮ. ಶಿವಮಲ್ಲಯ್ಯ | ಅರಿವು |
| | ಮೌಢ್ಯದ ದಾರಿ |
| ಶ್ರೀಮತಿ ರಾಧಾ ರಾಮರಾವ್ | ಸಾರ್ಥಕ ಆಚರಣೆ |
| ಶ್ರೀ ಎಚ್.ಆರ್. ಚಂದ್ರವದನರಾವ್ | ಬಂಗಾರದ ತಟ್ಟೆ |
| ಶ್ರೀ ಬಿ.ಎಸ್. ದುಂಡರಡ್ಡಿ | ಮಲೆಯ ಮಹಾಗುರು |
| ಶ್ರೀ ಎಸ್. ಆಂಜನೇಯ | ಗೆಳೆಯ |
| ಶ್ರೀಮತಿ ಕೆ.ಎಂ. ವಿಜಯಲಕ್ಷ್ಮಿ | ಕರಿಶಿಲೆ ಬಿಳಿಯಾಗದು |
| ಶ್ರೀ ಬಸವಣ್ಣೆಪ್ಪ ಪ. ಕಂಬಾರ | ಕಾಸಿಗೊಂದು ಸೇರು |
| ಶ್ರೀ ಸಿ.ಎ. ಈಶ್ವರ್ | ನಾಳೆ ಬಾ |
| ಶ್ರೀಮತಿ ಟಿ.ಪಿ. ಮಂಜುಳಾದೇವಿ | ಶೂನ್ಯ |
| ಶ್ರೀ ಮೌನೇಶ್ ವಿಶ್ವಕರ್ಮ | ಆನೆ ಮತ್ತು ಮಂಗ |
| ಶ್ರೀಮತಿ ಸುಧಾ ಎಂ. | ಚತುರ ಕಳ್ಳರು |
| ಶ್ರೀಮತಿ ವನಜಾ ಕೊಳಗಿ | ಮಾವಿನ ಮರ |
| ಶ್ರೀ ಸಿ.ಟಿ. ಬ್ರಹ್ಮಾಚಾರ್ | ತುಂತಾನಿ |
| | ಪಂಚತಂತ್ರ |
| | ಸನ್ಯಾಸಿ ಬೆಕ್ಕಣ್ಣ |

| | |
|---|---|
| ಡಾ. ಸುಜಾತ ಅಕ್ಕಿ | ಏನಂತೆ ? |
| ಶ್ರೀ ವಿಜಯವಾಮನ | ಗಾಳಿಪಟ |
| ಶ್ರೀ ನೀ.ನ. ಮಧ್ಯಸ್ಥ | ಗೋವರ್ಧನ |
| ಶ್ರೀ ರಾಮಚಂದ್ರ ಪಾಟೀಲ | ಕುವರಿಯಾದೊಡೆ ಕುಂದೇನು ? |
| ಡಾ. ಎ. ಶಿವನಗೌಡ ಕಡಬಗೆರೆ | ಅಂಗನವಾಡಿಗೆ ಬಂದ ಸಂಗಯ್ಯ |
| ಶ್ರೀ ಎಂ.ವಿ. ಶರ್ಮ ತದ್ದಲಸೆ | ನೀನಾರಿಗಾದೆಯೋ ಎಲೆ ಮಾನವ |
| | ಹಲಸಿನ ಮರದ ಆತ್ಮಹತ್ಯೆ |
| ಶ್ರೀಮತಿ ಲಲಿತ ಕೆ. ಹೊಸಪ್ಯಾಟಿ | ಪಟ್ಟಣಕ್ಕೆ ಬಂದ ಪುಟ್ಟ ಗುಬ್ಬಿ |
| ಶ್ರೀಮತಿ ಕಾತ್ಯಾಯಿನಿ ಕುಂಜಿಬೆಟ್ಟು | ನಿದ್ರಾನಗರಿ |
| ಶ್ರೀ ಸತೀಶ್ ಗಟ್ಟಿ ಮಂಡೆಲಾ | ಮಕ್ಕಳ ಕನಸು |
| ಶ್ರೀ ತುಕ್ಕಪ್ಪ | ಅನುಕರಣೆ ಅನಂತ |
| ಶ್ರೀ ಶಂಕರ ಲಮಾಣಿ | ಯಮನ ಆಸ್ಥಾನ |
| | ಜಾ ರಾಣಿಗೆ |
| ಶ್ರೀ ಡಾ. ಎಚ್.ಎಂ. ಕುಮಾರಸ್ವಾಮಿ | ಹೊರೆಕಾಣಿಕೆ |
| ಶ್ರೀ ಎಸ್.ಎಂ. ಗಿರಿಜಾಪತಿ | ಅಪಾಯದ ಗಂಟೆ |
| ಶ್ರೀ ನಾಗಚಂದ್ರ | ಪ್ಲಾಸ್ಟಿಕ್ ರಾಕ್ಷಸ |
| | ಚಂದ್ರಹಾಸ |
| ಡಾ. ಎಸ್.ವಿ. ಕಶ್ಯಪ್ | ಚಂದ್ರಮುಖಿ |
| | ಗೂಡಿನ ಪಾಡು |
| ಶ್ರೀ ಶರಣಗೌಡ ಎರಡೆತ್ತಿನ | ಸಂಘರ್ಷ |
| ಶ್ರೀ ದಿವಾಕರ ಹೆಗಡೆ | ಕಲಿಯೋ ಆಟ |
| ಶ್ರೀ ಜಬಿಕೋಟೆ ಅನಂತ್ | ಎತ್ತಿಗೆ ನ್ಯಾಯ |
| | ಸುದ್ದಿ ಸರಪಳಿ |
| | ಇದ್ದಂತಿರುವುದು ಲೇಸು |
| ಎಚ್. ಶಕುಂತಳಾ ಭಟ್ | ಚಿಣ್ಣರಾಟ |
| ಶ್ರೀ ಅಲಕ ತೀರ್ಥಹಳ್ಳಿ | ದೇವರ ಹಣ್ಣು |
| ಲೀಲಾವತಿ | ಸಾಕ್ಷಾತ್ಕಾರ |

| | |
|---|---|
| ಶ್ರೀ ಸಿ. ಲಕ್ಷ್ಮಣ | ಸಂತೆಮಾಳದ ಹಾದಿಗುಂಟ |
| ಶ್ರೀ ಜೇನಹಳ್ಳಿ ಸಿದ್ಧಲಿಂಗಪ್ಪ | ಪರಿಹಾರ |
| ಶ್ರೀ ಅಲಕ ತೀರ್ಥಹಳ್ಳಿ | ನವಯುಗ ವರ್ಧಮಾನನೆಂಬ ರಾಜನೂ-ಅವನ ಕಾಯಿಲೆಯೂ |
| | ಬುದ್ಧಿ ಬೇಕೆ ಸ್ವಾಮಿ, ಬುದ್ಧಿ? |
| ಶ್ರೀ ರಾ.ಹು. ಚಾನ್ ಪಾಷ | ಭಲೇ ! ಗಿಣಿರಾಮ |
| ಶ್ರೀ ಚಿದಂಬರ | ಮಳೆ ತಂದ ಹುಡುಗ |
| | ಸಂಗೀತಾ |
| ಶ್ರೀ ಎಸ್.ಆರ್. ಗುರುನಾಥ್ | ಉಪಹಾರ |
| ಡಾ. ಜಿ.ಎಸ್. ಭಟ್ಟ | ಹಾಡುವ ಹುಡುಗಿ |
| ಶ್ರೀ ಎ. ಶರಣು ಹುಲ್ಲೂರ | ಕನಸಿನ ಹುಡುಗ |
| ಶ್ರೀ ಹೆಚ್.ಎಂ. ಪ್ರಭಾಕರ್ | ಬೆಸ್ತುಬಿದ್ದ ಕಳ್ಳರು ಅಥವಾ ತೆನಾಲಿ ರಾಮ |
| | ಊರುಳಾದ ಕರುಳು |
| ಶ್ರೀ ಕೆ. ಗೋಪಿನಾಥ ಶರ್ಮ | ಸೊಹ್ರಾಬ್-ರುಸ್ತುಂ |
| ಡಾ. ಎಂ. ಬೈರೇಗೌಡ | ಎಲೆ ನಕ್ಕು.... ಅಡಿಕೆ ಮಾತಾಡಿ... -ಸುಣ್ಣ ಕುಣಿದಾಗ |
| ಎಸ್. ಮಾಲತಿ | ನ್ಯಾಯಕ್ಕೇ ಜಯ |
| ಶ್ರೀ ಮಂಜುನಾಥ ಬೆಳಕೆರೆ | ಕುಹು ಕುಹೂ ಕೋಗಿಲೆ |
| ಪ್ರೊ. ಹೆಚ್.ವಿ. ವೇಣುಗೋಪಾಲ್ | ಚಾಕ್ ಸರ್ಕಲ್ |
| | ಪಕ್ಷಿಲೋಕದಲ್ಲೊಂದು ಪ್ರಸಂಗ |
| ಶ್ರೀ ಹೆಚ್.ವಿ. ಲಕ್ಷ್ಮಿನಾರಾಯಣ | ದೇವದಾರು |
| ಶ್ರೀ ನಾಗೇಶ ಹೆಗಡೆ | ಗುಳಿಗೆ ಗುಮ್ಮ |
| ನಿಂಗು ಸೊಲಗಿ | ವಿದೇಶಕ್ಕೆ ಹಾರಿದ ಹಕ್ಕಿ |
| ಶ್ರೀ ಬಿ. ವಜ್ರಪ್ಪ | ಬೇವಿನ ಮರದಮ್ಮ |

***

## ೧. ಕೆ.ರಾಮಯ್ಯ ಅವರು ರಚಿಸಿರುವ ಮಕ್ಕಳ ನಾಟಕಗಳು

ನಾಯಿತಿಪ್ಪ

ಒಗಟಿನ ರಾಣಿ

ಹಕ್ಕಿಹಾಡು

ಡರ್‌ಬರ್ ಬುಡ್ಡಣ್ಣ

ಸುಮ್‌ಸುಮ್ಕೆ

ಕಾಗೆಕಣ್ಣು ಇರುವೆ ಬಲ

ರತ್ನಪಕ್ಷಿ

ಮಾರ್ಜಿನ ಮತ್ತು ೪೦ ಮಂದಿ ಕಳ್ಳರು

ಭೀಮಾ ದಿ ವೋಲ್ವೊ ಬಸ್

## ೨. ಸಿ.ಲಕ್ಷ್ಮಣ್ ಅವರು ರಚಿಸಿರುವ ಮಕ್ಕಳ ನಾಟಕಗಳು

ಕಾರಣಿಕ ಶಿಶು

ಗುರುಮೂರ್ತಪ್ಪನ ತೋಟ

ಅನುಕರಣೆ

ಸ್ವಾತಂತ್ರ್ಯ ದೀಪಿಕೆ

ಮಕ್ಕಳೇ ಹೂ ಕೀಳಬೇಡಿ

ಸ್ವಾತಂತ್ರ್ಯ ಸಂಗ್ರಾಮ

ನಚಿಕೇತ

ಕೋಳೂರು ಕೊಡಗೂಸು

ಸಂತೆಮಾಳದ ಹಾದಿಗುಂಟ

ಸಸ್ಯತೋಟ

ಮಸಣದ ಮಕ್ಕಳು